# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೨೭

## ಪೌರಾಣಿಕ

## ೧. ಗಜಗೌರೀ ವೃತ

**॥ ಪಲ್ಲ ॥**

ಕುಂತಿಹೊಟ್ಟಿಲೆ ಮಕ್ಕಳ ಹುಟ್ಟಿದಾರ ಧರ್ಮ, ಭೀಮ ಅರ್ಜುನ ವೀರಾ ।
ನಕುಲ ಸಹದೇವ ಇವರು ಮಾದ್ರಿಯವರಾ ।
ಹೀಗೆ ಐದು ಮಂದಿ ಹುಟ್ಯಾರೋ ಪಾಂಡವರಾ ॥
ಗಾಂಧಾರಿ ಹೊಟ್ಟೆಲೆ ನೂರಾ ಒಂದಮಂದಿ ಅವರಿಗೆ ಅಂತಾರೊ ಕೌರವರಾ ।
ಇರುವುದು ಹಸ್ತಿನಾಪೂರಾ ॥

**ಚೌಕ – ೧**

**॥ನುಡಿ॥**

ಭಾದ್ರಪದ ಶುದ್ಧ ಅಷ್ಟಮಿಯ ದಿವಸ ನಾರದಮುನಿ ಬಂದ್ರುರುಸಿಸೂರಾ ।
ನೋಡಿ ಗಾಂಧಾರಿ ಜೋಡಿಸ್ಯಾಳ ತನ್ನ ಎರಡು ಕರಾ ।
ಕೈ ಮುಗದ ಮಾಡಿದಾಳ ನಮಸ್ಕಾರ ॥
ಸಿಂಹಾಸನ ಮೇಲೆ ಸ್ವಾಮಿಗೆ ಕೂಡ್ರಿಸಿ ಪೂಜಾ ಮಾಡ್ಯಾಳ ಎಂಟ ಪ್ರಕಾರ ।
ಎಲ್ಲಾ ಉಪಚಾರ॥೧॥

ನಾರದ ಮುನಿಗೆ ಅಂತಾಳ ಗಾಂಧಾರಿ ಎಲ್ಲಾ ವೃತಾ ನೀವು ಬಲ್ಲವರಾ ।
ಮತ್ತ ಪುಣ್ಯೆ ಆಗುದು ಹೇಳಬೇಕ್ರಿ ಜರಾ ।
ಅದರಿಂದ ಆಗುದು ನನ್ನ ಉದ್ಧಾರಾ ॥
ಗಜಗೌರಿವಾಹನ ವೃತಾ ಕೊಟ್ಟಿದಾನ ಮುಂದ ಕೇಳರಿದರ ಮಜಕೂರಾ ।
ಧ್ಯಾನಗೊಟ್ಟ ಪೂರಾ॥೨॥

ಮಣ್ಣಿನ ಆನಿ ತಯ್ಯಾರ ಮಾಡಿ ವಸ್ತ್ರ ಅಲಂಕಾರ ಶೃಂಗಾರಾ ।
ತಂತೋ - ತಂತುವಾದ್ಯ ಘನಸುಸ್ವರಾ ।
ಮ್ಯಾಲ ಕುಣಸಿ ಗಾಂಧಾರಿನ ವಯ್ಯ ಚದುರಾ ॥
ಕುಂತಿ ಮನಿಗೆ ಬಾಗಿನ ಕುಡಲಾಕ ಹೋಗಬೇಕ ನೀವು ಮಾಡಿತ್ವರಾ ।
ಬ್ಯಾಡ ಅವಸರಾ॥೩॥

**||ಚಾಲ||**

ಇಷ್ಟ ಹೇಳಿ ನಡದ ನಾರದ ಕೈಲಾಸಕ ಹ್ವಾದ ಕಳಬಳಿಸಿ ಎಲ್ಲಾ ಇಟ್ಟಾ |
ಕಳಬಳಿಸಿ ಎಲ್ಲಾ ಇಟ್ಟಾ||೧||

ಗಾಂಧಾರಿ ಮಕ್ಕಳನ ಕರದ ಹೇಳಿದಾಳ ಎಲ್ಲಾ ವಡದ ಕೇಳರಿ ಸುಭಟಾ |
ಕೇಳರಿ ಸುಭಟಾ||೨||

ಗಜಗೌರಿವಾಹನ ಹೆಚ್ಚಿಂದ ನಾರದ ಇಲ್ಲಿ ಬಂದ ಹೋದ ವೃತಾಕೊಟ್ಟಾ ||
ಹೋದ ವೃತಾಕೊಟ್ಟಾ||೩||

**||ಕೂ.ಪ ||**

ತಾಯಿ ಮಾತಕೇಳಿ ಮಣ್ಣ ತರಸಿ ಅವರು ಆನಿ ಮಾಡಿದಾರ ತಯ್ಯಾರ |
ಸಜ್ಜ ಸೃಂಗಾರ ಇಡಿಸಿ ಬಳೇ ಬರ್ಜರಾ |
ವಾದ್ಯ ಬಾರಸತಾರ ಮುಂದ ನಾನಾ ಪ್ರಕಾರ ||
ಕುಂತಿಮನಿಗೆ ಬಾಗಿಣ ಕುಡಲಾಕ ಹ್ವಾದ ಗಾಂಧಾರಿ ಸಂಗಾಟ ಇದ್ರ ಕೌರವರಾ |
ತೊಟ್ಟ ಹಂಕಾರ ||

**ಚೌಕ – ೧**

**||ನುಡಿ||**

ಹೊರಗ ಕರದ ಕುಂತಿನ ಗಾಂಧಾರಿ ಹೇಳತಾಳ ಆಗ ಆಕಿಗಿ ಏನಾ |
ನಾವು ಕಡಲಿಕ್ಕೆ ಬಂದೀವ ಬಾಗೀಣಾ |
ಸವ್ವಾಯಿ ಸಾಲ ಅಲ್ಲ ಇದು ಕೈಗಡ್ಡಾ ||
ನಮ್ಮ ಬಾಗಿಣ ನಮಗ ತಿರಗಿ ಕೊಡಬೇಕರಿ ಇಲ್ಲದಿದ್ರ ಆದೀತ ಅಪಮಾನ |
ಅಂದ ದುರ್ಯೋಧನಾ||೧||

ಇಸ್ಟಮಾತ ಕೇಳಿ ತಿರಿಗಿ ಬಂದಾಳ ಕುಂತಿ ಮಾಡತಾಳ ಚಿಂತಿಯನಾ |
ಶಿವಶಿವಾ ಏನ ಕಳವಿದಿ ನಮಗ ಈ ವಿಘ್ನಾ |
ಅಸ್ಟರೊಳಗ ಬಂದಾನಲ್ಲಿ ಭೀಮಸ್ಯೆನಾ ||
ತಾಯಿ ಮುಂದ ಬಂದನಿಂತ ಕೇಳತಾನ ಯಾಕ ಬಾಡೇದ ತಾಯಿ ನಿನ್ನ ವದನಾ ||

ಅದಕ ಏನ ಕಾರಣಾ||೨||

ಕುಂತಿ ಅಂತಾಳ ಆಗ ನೀವು ಐದಮಂದಿ ಹ್ಯಾಂಗ ತರುವುದು ಎಲ್ಲಿದಮಣ್ಣಾ |
ಮಣ್ಣತಂದ ಮಾಡುದತಿ ಆನಿಯನಾ |

ಮುತ್ತ ಮಾಣಿಕ ಜಡಿಸಿ ಕುಂದನಾ ||
ಬಂಡಿಮೇಲೆ ಆನಿಹೇರಿ ಮೇಲೆ ಕುತಕೊಂಡ ಗಾಂಧಾರಿಗೆ ಕೊಡುದತಿ ಬಾಗಿಣಾ |
ಅದರ ಕೈಗಡ್ಣಾ||೩||

ಇಷ್ಟ ಮಾತಕೇಳಿ ಎದ್ದ ಭೀಮಸೈನ ಗದಾತುಗೊಂಡ ಹೊಂಟಾನ ಜಾಣಾ |
ಸಿಟ್ಟಿಗಿ ಬಂದ ಆಗಿದಾವ ಕೆಂಡದಾಂಗ ಕಣ್ಣಾ |
ಹೊಳಿದಂಡಿ ಕೆಡವಿ ಮಾಡಿದಾನ ಸವನಾ |
ನೀರಕಲಸಿ ಗುಂಡಮಾಡಿ ಒಗಿತಾನ ನೋಡಿ ಹುಚ್ಚ ಆತ ಎಲ್ಲಾ ಜನಾ |
ಅದಕ ಮಾಡುದೇನಾ||೪||

**||ಚಾಲ ||**

ಡಿಗ್ಗ ಬಿತ್ತ ಅಲ್ಲಿ ಮಣ್ಣಿಂದ ಹೋಗಿ ಬರುವುದು ಹಾದಿ ಆತ ಬಂದಾ |
ಹಾದ ಆತ ಬಂದಾ||೧||

ಧರ್ಮ ಅರಸ ಆಗ ಏನ ಅಂದ ಹೋಗ ನೀ ಜಲದ ಭೀಮನ ಬಾಕರದಾ |
ಭೀಮನ ಬಾ ಕರದಾ||೨||

ಮಾತ ಕೇಳಿ ಪಾರ್ಥ ವೀರ ನಡದ ಭೀಮನ ತಾಕರದ ಮನಿಗಿ ಬಾ ಅಂದಾ |
ಮನಿಗೆ ಬಾ ಅಂದಾ||೩||

**||ಕೂ.ಪ||**

ಮಣ್ಣಿನ ಆನಿ ಮಾಡಿ ಆಡತಾವ ಅಡವ್ಯಾಗ ದನ ಕಾಯುವ ಹುಡುಗುರಾ |
ನೀ ಏನ ಹಚ್ಚೇದಿ ಒಣ ಬಡಿವ್ಯಾರಾ |
ನಾ ಹೇಳತಿನಿ ಅದರ ಮಜಕೂರಾ |
ಇಂದ್ರ ಲೋಕದ ಅನಿ ಐರಾವತ ಬಾಗಿಣ ಕುಡುಲಾಕ ತರುವುದು ತ್ವರಾ |
ನೀವು ಬರಿರಿ ಪತ್ರಾ ||

**ಚೌಕ – ೩**

**||ನುಡಿ ||**

ಪತ್ರ ಬರದ ಅರ್ಜುನಾ ಈಗ ನಿಮ್ಮ ಆನಿ ಕೊಡಬೇಕರಿ ನಾಲ್ಕದಿನಾ |
ಆನಿ ಮ್ಯಾಲ ಕುಣಸಿ ನಮ್ಮ ತಾಯಿನಾ |
ಗಾಂಧಾರಿಗಿ ಕುಡುವದತಿ ಬಾಗೀಣಾ |
ಪತ್ರದ ಒಳಗ ಹಿಂಗ ಬರದಾನ ಮಜಕೂರಾ ಇಂದ್ರ ಲೋಕಕ ಬಿಟ್ಟಾನ ಬಾಣಾ |
ಅವ ಅರ್ಜುನಾ||೧||

ಇಂದ್ರ ಸಭಾದಾಗ ಬಾಣ ಹೋಗಿ ಬಿದ್ದಿತ ಕಣ್ಣಿಲೆ ಕಂಡಿದಾರ ಸರ್ವಜನಾ ।
ಬಂದ ನಾರದ ಮುನಿ ಅಲ್ಲಿ ಹೇಳಿದ ಏನಾ ।
ಚಿತ್ತವಿಟ್ಟ ಕೇಳರಿ ನೀವು ಕೊಟ್ಟ ಧ್ಯಾನಾ ॥
ಮರ್ತ್ಯಲೋಕಕ ಆನಿ ಕುಡಬ್ಯಾಡರಿ ಅಲ್ಲಿಂದ ಹೋದಿತ ನಿಮ್ಮ ಅವಸಾನಾ ।
ತಿಳಿಯರಿ ಇನ್ನಾ॥೨॥

ಹುಚ್ಚ ಹತ್ತಿ ಆನಿ ಹುಲ್ಲ ಮೆಯುದುಲ್ಲ ಆಗಿ ನಿಂತತಿ ಒಳೇ ಬೇಬಾಣಾ ।
ನೀವು ಬಂದ ಕೇಳರಿ ಬ್ಯಾಡನ ಮೇಣಾ ।
ಗುರು ಬೃಹಸ್ಪತಿ ಹೇಳಿದಾರ ಖೂನಾ ।
ಪತ್ರ ಒಳಗ ಹಿಂಗ ಉತ್ತರ ಬರೆಯಿರಿ ತಿಳಕೊಂಡಾರ ಪಾಂಡು ನಂದನಾ ।
ಇದರ ಸಂಧಾನಾ॥೩॥

ಬಾಣ ತಿರಗಿ ಬಿಟ್ಟಾರ ಹಸ್ತಿನಾಪುರಕ ಧರ್ಮರಾಜಾ ನೋಡಿದ ಅರ್ಜುನ
ಬಂದ ಒಯ್ಯರಿ ಅನ್ನುದು ಏನ ಕಾರಣಾ ।
ಅಷ್ಟರೊಳಗ ಬಂದಾನಲ್ಲಿಗೆ ಭೀಮ ಸೈನಾ ॥
ಬಾಣ ಪ್ಯಾವಟಗಿಮಾಡಿ ಮ್ಯಾಲ ಏರ್‍ಯಾನೊ ಭೀಮರಾಜಾ ಅವ ಸುಖಜಾಣಾ
ನೋಡಿದ ಟಿಕಾಣಾ॥೪॥

**॥ಚಾಲ॥**

ಸಭಾಮಾಡಿ ಕೂತಿದ್ರ ದೇವಿಂದ್ರ ತೆತ್ತೀಸ ಕೋಟ ದೇವ್ರ ಭೀಮ ಅಲ್ಲಿ ಹ್ವಾದಾ
ಭೀಮ ಅಲ್ಲಿ ಹ್ವಾದಾ॥೧॥

ಕೈ ಮುಗಿದ ಮಾಡಿದ ನಮಸ್ಕಾರ ಅಂತಾನ ದೇವೀಂದ್ರ ಕೂಡ್ರಿ ನೀವು ಅಂದ
ಕೂಡ್ರಿ ನೀವು ಅಂದಾ॥೨॥

ಮಾಹುತ ಬಿಟ್ಟಾನ ಆನಿ ಹೋತ ರವಾನಿ ಭೀಮಗ ಹಿಡಿ ಅಂದಾ ।
ಭೀಮಗ ಹಿಡಿ ಅಂದಾ॥೩॥

**॥ಕೂ.ಪ ॥**

ಹೊತ್ತ ಅರವಿ ಎಲ್ಲಾ ಕಳದ ಭೀಮಸೈನಾ ಆಗಿ ಹೊಂಟಿದಾನ ತಯ್ಯಾರ
ಆನಿ ಸೊಂಡಿ ಹಿಡದ ತಿರವಿದ ಗರರರರಾ ।
ತೆಳಗ ಕೆಡವಿ ಆನಿ ಮಡಿದ ಜೇರಾ ॥
ನಾಲ್ಕು ಕಾಲಕಟ್ಟಿ ತೆಲಿಗಿ ಅಡಗಾಸಿ ಇಂದ್ರ ಲೋಕಕ ಬಂದ ರಣಸೂರ
ನಿಂತ ಘರಭರಾ ॥

**ಚೌಕ – ೪**

**||ನುಡಿ ||**

ಆನಿ ಕಾಲ ಬಿಚ್ಚಿ ಮಾಡಿದಾರ ಶೃಂಗಾರಾ ತುಗೊಂಡ ಬಂದ ಅವ ವೃಕೋದರ
ಹಸ್ತಿನಾಪುರಕೆ ಬಂದಾನ ಮಾಡಿ ಅವಸರಾ ||
ಧರ್ಮ ಅರಸಗ ಮಾಡಿದಾನ ನಮಸ್ಕಾರಾ ||
ಉದ್ದ ಅಡ್ಡಾಗಲ ಏಸ ಯೋಜನಾ ಆನಿ ಇತ್ತ ಎಸ್ಟು ಉಪ್ಪರಾ |
ಕೇಳ ಶಾಹೀರಾ||೧||

ಅರ್ಧಾ ಯೋಜನ ಇತ್ತ ಅಡ್ಡಾಗಲಾ ನೂರ ಪತಿ ಇತ್ತ ಸುಮಾರಾ |
ಮೂವತ್ತ ಯೋಜನ ಆನಿ ಉಪ್ಪರಾ |
ನೂರ ಮಾರಿ ಇದ್ದು ಎಲ್ಲಾ ಏಕಂದರಾ |
ಒಂದೊಂದ ಮಾರಿಗೆ ಎಂಟ ಹಲ್ಲಾ ಹಲ್ಲಿನ ಮೇಲೆ ಕ್ವಾರಿ ಸುಂದರಾ |
ತುಂಬ್ಯಾವ ನೀರಾ||೨||

ನೀರಿನೊಳಗೆ ಕಮಲ ಹೂವ ಇದ್ದಾವೋ ಗುಂಜಿ ಹಾಕತಾವು ಭ್ರಮರಾ |
ಮುಂದ ಕುಣಿಯತಾರ ರಂಭಾ ಪಾತರಾ |
ಕಥಾ ಕಲ್ಪತರು ನೀವು ಓದರಿ ಶಾಸ್ತರಾ ||
ಎಂಟನೇ ತಬಕದಾಗ ಇಪ್ಪತ್ತೊಂದನೇ ಅಧ್ಯಾಯದೊಳಗಿಂದಾ ತಗದಿವ ಸಾರಾ |

ಕೇಳರಿ ಮಜಕೂರಾ||೩||

ಹಿಂಥಾ ಆನಿ ಮ್ಯಾಲ ಏರಿ ಅಂಬಾರಿ ಕುಂತಿನ ಕುಣಸ್ಯಾರ ಮ್ಯಾಲ ಪಾಂಡವರಾ |
ಮುಂದ ನಡದಾರ ಎಲ್ಲಾ ಸರದಾರಾ |
ತಂತೋ ತಂತುವಾದ್ಯ ಘನ ಸುಸ್ವರಾ ||
ಬಾಗಿಣ ಕುಡಲಾಕ ಹ್ವಾದು ಗಾಂಧಾರಿಗೆ ನೋಡಿ ನಡಗತಾರ ಕೌರವರಾ |
ಬಿತ್ತ ಗುಡಾಚಾರಾ||೪||

**||ಚಾಲ||**

ಕುಂತಿ ಗಾಂಧಾರಿನ ಕರೆದ ಹೇಳತಾಳ ಒಡದ ಬಾಗಿಣ ತುಗೋರಿ ನಿಮ್ಮದಾ ||
ತುಗೋರಿ ನಿಮ್ಮದಾ||೧||

ಧೃತರಾಷ್ಟ್ರ ಲಗುಬಗಿ ಬಂದ ನಿಂತ ಅವರ ಮುಂದ ಕೇಳತಾನ ಬಾಯಿ ತೆರದಾ ||
ಕೇಳತಾನ ಬಾಯಿ ತೆರದಾ||೨||

ಧರ್ಮ ಆಗ ಏನ ಅಂದ ಹಿಡಿರಿ ಅವರ ಪಾದ ನಡಿರಿ ಅಂದ ಹಿಂದಾ ॥
ನಡಿರಿ ಅಂದ ಹಿಂದಾ॥೩॥

**॥ಕೂ.ಪ. ॥**

ನಿಮ್ಮ ಬಾಗಿಣ ನಿಮಗ ಕೊಟ್ಟಿದಿವ ನಮ್ಮ ಮೇಲೆ ಇಲ್ಲ ಏನ ಉಪಕಾರಾ ।
ಇಷ್ಟಂದ ತಿರಿಗಿ ಬಂದಾರ ಪಾಂಡವರಾ ।
ದುರ್ಯೋಧನ ದುಶ್ಯಾಸನಗ ಬಿದ್ದಿತ ಘೋರಾ ॥
ಮೊದಲ ಜಗಳ ಹುಟ್ಟಿತ ಕೌರವ - ಪಾಂಡವರಿಗೆ ಬಿತ್ತವೈರಾ ।
ತೊಟ್ಟ ಹಂಕಾರಾ ॥

**ಚೌಕ – ೫**

**॥ನುಡಿ ॥**

ಕೊಟ್ಟ ಬಾಗಿಣ ತಿರಗಿ ಬಂದಾರ ಆನಿ ಕಳಿವ್ಯಾರ ಇಂದ್ರ ಲೋಕಕಾ ।
ಕೌರವರೊಳಗೆ ಪಾಂಡವರದು ಬಿತ್ತ ಬೆಳಕಾ ।
ಶ್ರೀ ಕೃಷ್ಣ ಮಾಡಿದಾನ ಸಾರ್ಥಕಾ ॥
ಇಂದ್ರಲೋಕದ ಆನಿ ತಂದಾರ ನಾಡಾಗ ಹೆಚ್ಚಿಂದ ಕೌತುಕಾ ।
ಅಂತಾರ ಜನ ಲೋಕಾ॥೧॥

ಒಂದ ಅಧ್ಯಾಯ ಮುಗದತಿ ಇಲ್ಲಿಗೇ ಶಾಸ್ತ್ರದೊಳಗಿನ ಕವಿ ಹಾಡ
ಶಾಹಿರ ಕೇಳೊ ಆನಿಯ ಲೆಕ್ಕಾ ।
ನಿಮ್ಮ ಜವಾಬ ತಗೊರಿ ಕುಂತ ಜಾಗಾಕಾ ॥
ಕಲ್ತ ಹಾಡಾವರಿಗೆ ಕವಿ ಮಾಡಾವರಿಗೆ ಭೂಮಿ ಮುಗಲದಷ್ಟು ಐತಿ
ನೀವು ಹಿಡಿರಿ ತರಕಾ॥೨॥

ಮನಿಮನಿಗೆ ಈಗ ಹಾಡಾವರ ಆಗಿದಾರ ಕೇಳುಮಂದಿ ಕೈಲಾಕಾ
ಗಾಳಿ ಮಟ್ಟಿ ಕಟ್ಟಿದರ ಅದರಿಂದ ಅಲ್ಲ ಟೀಕಾ ।
ಚಲು ರುಚಿ ಹತ್ತಬೇಕ ಕೂತಂತಾ ಜನಕಾ ॥
ಬಲ್ಲಂತವರು ಬದ ಕೇಳಿದರ ಹಾಡ ಹತ್ತಬೇಕ ಶಾಸ್ತ್ರಕಾ ।
ಹಿಂಗ ಕಡಿತನಕಾ॥೩॥

ಮೋಕ್ಷದಾಯಕ ವಸ್ತಾದ ಧರಣಪ್ಪ ಕವಿದಾದಾ ಅವರ ಸೇವಕ
ಅವರ ಅಕ್ಷರ ಹಿಡಿಮುತ್ತ ಮಾಣಿಕಾ ।
ಆಗ್ಗಿನ ಗಾಡಿ ಓಡಿದಾಂಗ ಇಲ್ಲ ತೊಡಕಾ ॥

ಡಪ್ಪಿನ ಮೇಲೆ ಮುತ್ತಿನ ತುರಾಯಿ ಬಿರದ ಹಚ್ಯಾರ ಮುಂಗಲಿ
ಅವರದ ಬಿತ್ತ ಬೆಳಕಾ॥೪॥

**॥ಚಾಲ॥**

ಶಿವಾ ಅರ್ಜುನ ಹಾಡಿನೊಳಗ ಸೂರಗರ್ವ ಇಲ್ಲ ಜರಾ ಸದಾ ಆ ಸದಾ ಅತಿ ಡೌಲಾ॥೧॥
ದತ್ತು ಬಾಬು ಜ್ಯೋಡಿ ಶಿಷ್ಯಾರಾ ಮಾಡುದಲ್ಲ ಅವಸರ ಹಾಡಿನ
ಹಾಡಿನೊಳಗೆ ಮೇಲಾ॥೨॥

ಕವಿ ಮಾಡುದಕ ಇಲ್ಲಿ ಬಾಳ ಘೋರ ದರಜ ಇಲ್ಲ ಚೂರ ಹಿಡ
ಹಿಡದ ಸೂರ ತಾಲಾ॥೩॥

**॥ಕೂ.ಪ॥**

ಗಂಡ ಮೆಟ್ಟ ನನ್ನ ಪುಂಡವಸವಾಡ ದಕ್ಷಿಣ ದೇಶದಾಗ ಜಾಹೀರ
ಶೇಕ ಧರ್ಮ ಇದ್ದಾನ ನಮ್ಮ ಪೀರಾ ।
ಅವರ ಆಧಾರ ಅತಿ ನಮಗ ಬರ್‍ರೂರಾ ॥
ಪುಣೆ ಮುಂಬಯಿ ತನಕಾ ಹಾಡ ಹ್ವಾದು ಅವರು ಚಿಬ್ಬಿ ನಾಡ ಮುಂದ
ಈಕಡಿ ಮೈಸೂರಾ॥೪॥

***ರಚನೆ :*** ದತ್ತು ಬಾಬು ಜೋಡಿ
***ಕೃತಿ :*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೨. ಪದ್ಮಾವತಿ

**॥ಪಲ್ಲ॥**

ಮನ್ಮಥನ ಪಿತಾ ಅನಂತ ರೂಪ ಶ್ರೀಪತಿ ।
ನಿನ್ನ ನೋಡಿ ಕಾಮದಿಂದ ಹೊರಳ್ಯಾಳ ಪದ್ಮಾವತಿ ॥

**ಚೌಕ – ೧**
**॥ನುಡಿ॥**

ಗೆಳತ್ಯಾರ ಕೂಡಿ ಹೋಗುವಾಗ ಅರಸಿ ವನದಲ್ಲಿ
ನಾನಾ ತರದ ವಜ್ರ ರತ್ನದ ಹಾರಗಳ ಇಟ್ಟ ಕೊರಳಲ್ಲಿ॥೧॥

ತ್ರಯೋದಶಿ ವೀಳ್ಯೆ ಮಡಮಡಚಿ ಹಿಡದ ಮುಖದಲ್ಲಿ।
ಎಡ ಬಲಕ ಹಸ್ತ ಕೊಟ್ವಾಳ ದೂತ್ಯಾರ ಕೈಯಲ್ಲಿ॥೨॥

ಜಾಜಿ ಸಂಪಿಗಿ ಹಾರಾ ಬಿಗದ ತನ್ನ ಹೆರಳಲ್ಲಿ।
ಸುಗಂಧ ಪುಷ್ಪ ಮಾಡ್ಯಾಳ ಅರಸಿ ನಗಿಯಲ್ಲಿ॥೩॥

**॥ಚಾಲ॥**

ಹೋ ಸಖಿ ಯಾರಿಗೆ ಹೋಗಿ ಅಪ್ಪುತಾ । ವನಜಾಕ್ಷತಾ॥೧॥

ಬಹು ಹರುಷದಿ ಲೋಲಾಡಿ ಮುಡಿಗಳ ತೀಡುತಾ । ಮುಂದಕ್ಕೋಡುತಾ॥೨॥

ಕಾಶೆ ಪ್ರದ್ಯುಮ್ನನಂತೆ ಹುಬ್ಬಗಳೇರಿಸಿ ನೋಡುತಾ । ನಲ್ಲಾಡುತಾ॥೩॥

**॥ಏರ ॥**

ಬಂದಾನ ವನದಲ್ಲಿ ಚಂದ ಅಶ್ವವು ಮುಂದಕ ಚ್ಯಾಚುತಲೆ ಮುಕುಂದನು।
ಆನಂದದಿ ವನದಲ್ಲಿ ಗೋವಿಂದನು।
ನೋಡಿ ಆನಂದ ಮನದಲ್ಲಿ ಮುಕುಂದನು।
ಎಂದು ಕಂಡಿಲ್ಲ - ಎಂದು ಕಂಡಿಲ್ಲ ಇಂಥಾ ಮೇಲಾದ ಸ್ತ್ರೀಯಳ ವೃಂದದಿ
ಸುರರಂತೆ ತ್ರಿಜಗಕಾಂತಿ।
ಮಲ್ಲಿಗೆ - ದುಂಡಮಲ್ಲಿಗೆ ॥

**॥ಕೂ.ಪ.॥**

ಏನ ಮಾಡಿದರಿವಳು ಎನಗ ಆದಾಳ ಪ್ರಾಣ ಸತಿ॥೧॥ ॥ನಿನ್ನ॥

**ಚೌಕ – ೨**

**॥ನುಡಿ ॥**

ಪದ್ಮಾವತಿನ ಕರದ ಹರಿ ಅಂದ ಪದ್ಮ ಲೋಚನೆ।
ನಿನ್ನ ತಾಯಿ ತಂದಿ ಯಾರ್‍ಯಾರ ನಿನ್ನ ಹೆಸರೇನೆ॥೧॥
ತಾಯಿ ಧರಣಿದೇವಿ ತಂದಿ ಆಕಾಶ ರಾಜಾನೆ।
ದೊರಿ ಪ್ರೀತಿ ಮಗನ ನನ್ನ ಕೆಣಕದ್ಹೋಗೊ ಸುಮ್ಮನೆ॥೨॥
ಕೇಳ ಜಾಣಿ ನಿನ್ನ ರೂಪಕ್ಕೆ ಭ್ರಮೆಗೊಂಡೀನೆ।
ಒಪ್ಪುವಂಥಾ ತೊಡಿಗಿ ಅರ್ಧಾಂಗಿ ಆಗಬಾರ್ದೇನೆ॥೩॥

ಸರಿಬಾರ್ದ ಮಾತಾ ಮಾತಾಡಿದರ ಬೇಡೀ ತರಸಿ ಜಡಸೀನೆ ।
ನಮ್ಮ ತಂದಿಗ್ಹೇಳಿ ನಿನ್ನ ಜೀವದಿಂದ ಕೊಂದ ಹಾಕ್ಸೀನೆ॥೪॥

**॥ಚಾಲ॥**

ಹೋ ವೇಣಿ ನಿನ್ನ ಧ್ವನಿ ಕೇಳಿ ಹರುಷಾಗಿ । ಬಾರ ಎದುರಿಗಿ॥೧॥
ನಿನ್ನ ಕಡಿನೋಟ ಬೇಡೀ ಕಡೀದಾಂಗ ಹಾಕಿದಿ ಕಾಲೀಗಿ । ನಡಿ ಮಾಲೀಗಿ॥೨॥
ಕುಡ ವಚನ ಗಡದಿಂದ ತಡಾಮಾಡಿ ಅನಬ್ಯಾಡ ನಾಳೀಗಿ । ಪ್ರಾಣ ತಗಿಬಿಗಿ ॥೩॥

**॥ಏರ॥**

ವೆಂಕಟೇಶನ ಮಾತ ಪಂಕಜಾಕ್ಷಿ ಕೇಳಿ ಕೊಂಕಾಡಿ ಕೋಪವ ಮಾಡುತಲಿ ।
ಬಹುಬಿಂಕದಿ ಸಖಿಯರು ಕೊಡುತಲಿ ।
ಅಲ್ಲಿ ಹಂಕಾರ ಕಲ್ಲೀಲೆ ದೂಡುತಲಿ ।
ಎಲ್ಲಾ ಗೆಳತ್ಯಾರ-ಎಲ್ಲಾ ಗೆಳತ್ಯಾರ ಕೂಡಿ ಕಲ್ಲಿಲಿ ಒಗದಾರ
ಅಲ್ಲಿ ಅವನ ಅಶ್ವ ಬಿದ್ದಿತ ಧರಿಗೆ ।
ಮಲ್ಲಿಗೆ - ದುಂಡ ಮಲ್ಲಿಗೆ ॥

**॥ಕೂ.ಪ.॥**

ಆ ಕುದರಿ ಬಿಟ್ಟ ಉರಗನ ಏರಿದ ಶ್ರೀಪತಿ ॥ ನಿನ್ನ ॥

**ಚೌಕ – ೩**

**॥ನುಡಿ ॥**

ಮಾರ ಪಿತನ ರೂಪಕ್ಕೆ ಹಾತೋರಿ ಧರಣಿ ಕುಮಾರಿ ।
ಎರಡು ಜಂಗ ನಡಗುತ ರೋಮ ನಿಂತಾವ ನಿಗರಿ॥೧॥

ಕುಚ ಉಬ್ಬಿ ಕಂಚುಕಿ ಸಡಲಿ ಆದಾಳ ಗಾಬರಿ ।
ಸರ್ವಾಂಗ ಕಪ್ಪ ಆಗಿ ಧರಿಗಿ ಬಿದ್ದಾಳ ಸುಂದರಿ॥೨॥

ಬಾಯಮುಚ್ಚಿ ಭಾಷಣಿಲ್ದ ಸಖಿಯರೆಲ್ಲಾ ಹೌಹಾರಿ ।
ರಾಣಿ ವಾಸದಲ್ಲಿ ತಂದ ಹಾಕ್ಯಾರಾಕಿನ ಹಾತೋರಿ॥೩॥

ಅನ್ನ ಉದಕ ತ್ಯಾಗ ಮಾಡ್ಯಾಳ ಕಾಮ ತಾಪ ಏರಿ ।
ಎಡ ಬಲಕ ತಾಯಿ ತಂದಿ ಹಲಬತಾರ ಪರಿಪರಿ॥೪॥

**||ಚಾಲ||**

ಹೋ ತೆಕ್ತಿಯೊಳಗ ಬಿಗದಪ್ಯಾರು | ದುಃಖ ಮಾಡ್ಯಾರು||೧||
ಚಿಕ್ಕ ಮಗಳಿಗೆ ಯಾಕಿಂಥಾ ಕಾಲ ಒದಗಿತಂದಾರು | ನೀರ ತಂದಾರು||೨||
ತನ್ನ ದೇಶದೊಳಗೆ ಇರು ಮಂತ್ರಗಾರನ ಕರದ ತಂದಾರು | ಹೇಳ ಅಂದಾರು||೩||

**||ಏರ||**

ಕಂಜನಾಭನು ಮುಂದೆ ಕೊರವಂಜಿ ರೂಪದಲ್ಲಿ ಕಂಜಾಕ್ಷಿ ಬಳಿಯಲ್ಲಿ ಬರತಿದ್ದನು |
ಗುಲಗಂಜಿ ಹಾರ ಕಂಠಕ ಹಾಕಿದನು |
ಬಹಾರಸಿ ಕೋಲು ಕೋಲು ಎಂಬುವನು |
ಸಲ್ಲ ಕೇಳೂತ-ಸಲ್ಲ ಕೇಳೂತ ಅರಸಿ ತಾ ಭರದಿಂದ ಬಂದಾಳ
ಇದು ಏನು ಧ್ವನಿಯೆಂದು ಅರಮನಿಹೊರಗೆ |
ಮಲ್ಲಿಗೆ-ದುಂಡ ಮಲ್ಲಿಗೆ ||

**||ಕೂ.ಪ.||**

ಹರಿಶಬ್ದ ಕೇಳಿ ಕೊರವಿಮ್ಯಾಲ ಆದ್ಯ ಬಹು ಪ್ರೀತಿ||೩|| ||ನಿನ್ನ||

**ಚೌಕ – ೪**
**||ನುಡಿ ||**

ಪದ್ಮಾವತಿಯ ತಾಯಿ ಕೈ ಮುಗದ ಕೊರವಿಗೆ ಅಂತಾಳು |
ನನ್ನ ಮಗಳ ಅಲ್ಲ ನಿನ್ನ ಮಗಳ ನೋಡಿ ಕರೆ ಹೇಳು||೧||

ಅರಸಿ ಮಾತ ಕೇಳಿ ಕೊರವಿ ಮುಂದ ಸರದ ಕೂತಾಳು |
ಬೆತ್ತಾ ಮ್ಯಾಲಕ ಎತ್ತಿ ಒತ್ತಿ ಶಕುನ ನುಡದಾಳು||೨||

ಕೇಳಮ್ಮಾ ಅರಸಿ ವನದಲ್ಲಿ ಹೋದಾಗ ಇವಳು |
ಒಬ್ಬ ಪರಮ ಪುರುಷನ ರೂಪಕಂಡ ಬೆರತಾಳು||೩||

ಕಲ್ಲಕಲ್ಲಿಲೆ ಒಗದ ಅವನ ಕುದರಿ ಕೊಂದಾಳು |
ಆ ಮದನ ಶರಕ ಮಾತಾಡದೆ ಇಲ್ಲೆ ಮಲಗ್ಯಾಳು||೪||

ಅರ್ಪಿಸು ಅಂವಗ ನಿನ್ನ ಪುತ್ರಿ ಸುಖಾಪಟ್ಟಾಳು||೫||

**||ಚಾಲ ||**

ಹೋ ಮಂದಗಮನಿಗೆ ಅಂವ ವಪ್ಪ್ಯಾನು । ಬಿಗಿದಪ್ಪ್ಯಾನು।೧॥

ತನ್ನ ಮಗಳನ್ನು ಕೇಳತಾಳು ಕೊರವಿಯ ಮಾತ ಇದ ಖರೆ ಏನು ।
ಹುಸಿ ಅಲ್ಲೇನು॥೨॥

ಕೇಳಿ ಕೊರವಿಯ ಮಾತಿಗೆ ಅರಸಿ ತಾ ಅಂತಾಳ ಕೊಡುವೆಽನು ।
ಅಂವಗ ಇಡುವೆಽನು ॥॥೩॥

**॥ಏರ ॥**

ಇನ್ಯಾವ ಪತಿಯಿಲ್ಲ ಭುವನದೊಳಗ ತವಕದಿನಲ್ಲಿ ನೀಡವಗೆ ।
ಪ್ರಾಣ ಸಹಿಸಲಾರದೆ ಕೊಡಂವಗೆ ।
ಜಗಜ್ಜೀವನು ಅನಸಿದ ಜಗದೊಳಗೆ ।
ಒಂದು ಭಾವದಿ-ಒಂದು ಭಾವದಿ ಅರ್ಪಿಸಿಯವಳನ್ನು ಅಂವಗ
ದೇವಾದಿ ದಏವ ಅನಸಿದ ಹರಿಗೆ ।
ಮಲ್ಲಿಗೆ - ದುಂಡ ಮಲ್ಲಿಗೆ ॥

**॥ಕೂ. ಪ. ।**

ಬಾಳಗೋಪಾಳ ಅಂತಾನ ಮುಂದ ಲಗ್ನದ ಕತಿ॥೪॥  ॥ನಿನ್ನ॥

***ರಚನೆ :*** ಬಾಳಗೋಪಾಳ
***ಕೃತಿ :*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೩. ರಾಮನಾಮದ ಅವತಾರ

ನಾಗಭೂಷಣಗ ಪಾರ್ವತಿದೇವಿ
ಪ್ರಶ್ನೆ ಮಾಡತಾಳ ಪ್ರೀತಿಂದಾ
ರಾಮ ರಾಮ ಅನ್ನು ಮೂಲ ಅಕ್ಷರಾ
ಹ್ಯಾಂಗ ಹುಟ್ಟಿತ ಹೇಳರಿ ಒಡದಾ॥ಪಲ್ಲ॥

ಹರುಷದಿಂದ ಹರಾ ಅಂತಾನ
ಅರ್ಧಾಂಗಿ ಪ್ರಶ್ನೆ ಮಾಡಿದಿ ತಗದಾ॥ಅ.ಪಲ್ಲ॥

ಚಿದ್ರ ಕೇಳ ಶಾಸ್ತ್ರರ್ಥಜ್ಞಾನಿಗಳು
ಮನಕ ಆಗುವಂಗ ಆನಂದಾ
ಸಪ್ತ ಋಷಿಗಳು ಮೊದಲಿಗೆ ಆಧಾರಾ

ಕಮಲೋದ್ಭವನಿಂದಾ ಅವನಿಂದಾ
ಕಮಲದಲ್ಲಿ ಕಮಲೋದ್ಭವ ಹುಟ್ಯಾನ
ಸೃಷ್ಟಿಯ ಕಾರಕ ಅನಸಿದಾನ
ಸಪ್ತ ಋಷಿಗಳಲ್ಲಿ ಶ್ರೇಷ್ಠ ವ್ಯಾಸ
ಶತಕೋಟಿ ರಾಮಾಯಣ ನಿವಡಿಸಿದಾ
ನ್ಯಾಯ ಬಿತ್ತ ಮೂರು ಲೋಕ ಆವಾಗ
ಕೇಳ ಎನ್ನ ಮುಂದಾ ತನ್ನ ಮುಂದಾ
ಮೂಢ ಶಾಯಿರಾ ಈ ಹಾಡಿನ ಚಿದ್ರಾ
ನೋಡಿ ತಿಳಿ ಮನಸಿಗೆ ತಂದಾ
ವೇದಶಾಸ್ತ್ರ ಪುರಾಣಗಳ ಗಂಧಾ
ಲಾವಣಿಯಲಿ ಹೇಳ ನೀ ಚಂದಾ॥ ೧ನೇ ಚೌಕ ॥

ಕೇಳ ನನಗ ನಿನಗ ಅಂತ ನ್ಯಾಯ ಬಿದ್ದೀತ
ಸ್ವರ್ಗಮೃತ್ಯುಪಾತಾಳದ ಒಳಗ
ಸಾಂಬ ಕುಂತ ಆ ನ್ಯಾಯ ಹರದ ಮೂರುಲೋಕಕ
ಮೂರುಭಾಗಮಾಡಿ ಇಟ್ಟ ಮೂರು ಭಾಗ
ಬಾಕಿ ಒಂದ ಕೋಟಿಗ್ರಂಥ ಉಳಿದೀತ
ಪಾಲಾಮಾಡಿದಾನ ಸವನಾಂಗ ಸವನಾಂಗ
ಒಂದ ಸಹಸ್ರ ಉಳಿದೀತ ಸಾಂಬ
ಮೂರು ಭಾಗಮಾಡಿದ ಕಸರಿಲ್ಲಧಾಂಗ
ನೂರಗ್ರಂಥದಲ್ಲಿ ಮೂರುಪಾಲಾಮಾಡಿ
ಬ್ಯಾರೆ ಬ್ಯಾರೆ ಕೊಟ್ಟಾನ ತಿಳಿ ಹಿಂಗ
ಮೂವತ್ತು ಮೂರು ಮೂರು ಒಂದೊಂದು
ಲೆಕ್ಕಾ ಮಾಡಿಕೊಳ್ಳೊ ಹುಚ್ಚ ಮಂಗ
ಶಿಲ್ಕ ಉಳದೀತ ಗ್ರಂಥ ಒಂದಾ
ಇನ್ನ ಮುಂದ ಕೇಳೋ ಕಿವಿ ತೆರದಾ॥೨ನೆಯ ಚೌಕ ॥

ಒಂದು ಗ್ರಂಥದಲ್ಲಿ ನೂರ ಅಧ್ಯಾಯ ಅಂವ
ಮೂರಲೆ ಭಾಗಿಸಿ ಇಟ್ಟಾನು
ಒಂದು ಅಧ್ಯಾಯಕ ನೂರು ಶ್ಲೋಕದಲ್ಲಿ
ತೆತ್ತೀಸ ತೆತ್ತೀಸ ಕೊಟ್ಟಾನು
ಶಿಲಕ ಒಂದ ಉಳದೀತ ಶ್ಲೋಕ ನಾಕು
ಚರಣಕ ಮೂರು ಪಾಲನ್ನು
ಒಂದು ಚರಣದಲ್ಲಿ ಎಂಟು ಅಕ್ಷರಾ
ಎರಡರಂತೆ ಹಂಚಿ ಕೊಟ್ಟಾನು
ಬಾಕಿ ಎರಡು ರಾಮ ಅನ್ನು ಅಕ್ಷರಾ

ಸಾಂಬ ಹೃದಯದಲ್ಲಿಟಕೊಂಡಾನು
ರಾಮ ರಾಮ ಅನ್ನುವ ಹಾಡಿನ ಅವತಾರ
ಕೇಳಿ ಹೋಗ ನೀನು ಇಲ್ಲಿಂದ
ಕುದರಿ ಮುಂದ ಕತ್ತಿ ಕುಣದಂಗ
ನನ್ನ ಮುಂದ ಎಷ್ಟ ಹೇಳತಿ ಜಿಗಜಿಗದಾ॥ ೩ನೆಯ ಚೌಕ ॥

ಎತ್ತರೆ ಒದರಾಡಿ ಹೊತ್ತ ಗಳಿಯಬ್ಯಾಡ
ಎತ್ತಾರಾ ಕಳಿಸೇನೋ ಬಿರಿಗ್ಯಾರೇ
ಬೀಡ ಹಾಡಾ ಕಲ್ತು ಕ್ವಾಡಗನಂಗ ಓಡಿ ಬಂದು
ನಮ್ಮ ಕೈಯಾಗ ಸಿಕ್ಕಿ ಕೈಯಾಗ ಸಿಕ್ಕಿ
ತೋಡಿಗೆ ತಡಿ ತಡಾ ಇಲ್ಲದ
ಝಾಡಿಸಿ ತಗೋ ನಿನ್ನ ಹಳಿ ಬಾಕಿ
ಬಾಳೆ ಬಲ್ಲವರಂಗ ಮುಂಚೆ ಬಡಿವಾರ ಮಾಡಿ
ಈಗ ಬಾಯಿ ತೆರದ ಕೂತಿ ಉಸರ್ಹಾಕಿ
ಹುಕ್ಕೇರಿ ನಾಡ ಬಿಟ್ಟ ಹುರಿಕೋತ ಕಲಿಗ್ಯಾವರಾ
ತರಕೋತ ಬಂದ ಕೆತ್ತ್ ಕೋತ ರೆಕ್ಕಿ
ಶ್ರೀ ಸಿದ್ದೇಶ್ವರ ಸದ್ಗುರುವಿನ ದಯದಿಂದ
ಯಾರ್ಯಾರದಿಲ್ಲ ನಮಗ ಅಂಜಿಕೆ
ಕವಿ ಗೋಪಾಳ ಕಲಗಿ ಹಾಡವರ
ತೆಲಿಮ್ಯಾಗ ಅಗಳಿ ಜಡದಾ ಜಡದಾ॥ ೪ನೆಯ ಚೌಕ ॥

***ರಚನೆ :*** ಬಾಳಗೋಪಾಳ
***ಕೃತಿ :*** ಬಾಳಗೋಪಾಳನ ಲಾವಣಿಗಳು

## ೪. ಶ್ರೀ ರಾಮಾಶ್ವಮೇಧ

**॥ಪಲ್ಲ॥**

ಅಯೋಧ್ಯಾಪುರದಲ್ಲಿ ಅರಸಕಿ ಮಾಡತಿದ್ದ ದಾಶರಥಿ ರಾಮಚಂದ್ರ ಸ್ವತಾ ।
ಅವರ ಗುರು ವಸಿಷ್ಠ ಅರುಂಧತಿ ಕಾಂತಾ ।
ಸಭಾ ಕೂಡಿತ್ತ ಅಷ್ಟಪ್ರಧಾನ ಮಂಡಳೀ ಸಹಿತಾ ॥
ಮಾತಕೇಳಿ ಅಗಸಂದ ರಾಮಗಾತ ಎದಿಗಿ ಬಾಣ ಬಡದಾಂಗ ನಿ ರತಾ ।
ಮುಂದ ಕೇಳ್ರಿ ಕಥಾ ॥

**ಚೌಕ – ೧**
**॥ನುಡಿ॥**

ಕರದ ಅನುಜನ ಹೇಳಿದ ರಾಮಚಂದ್ರ ಕೇಳತಮ್ಮಾ ಸೌಮಿತ್ರ ನೀನು ।
ನಿನಗೊಂದು ಮಾತ ನಾ ಹೇಳುವೆನು ।
ನಮ್ಮ ವಂಶಕೆ ಬಂದದ ಇಂದ ಕುಂದವನು ॥
ಅಡವಿಗೆ ಒಯ್ದು ಯಾರಿಗೂ ತಿಳಿಯದಂತೆ ಕೊಂದಬಾರೊ ಮುಂಚೆ ಸೀತೆಯನು
ಯಾಕೆ ಚಿಂತೆಯನು ॥೧॥

ಕೇಳಿ ಲಕ್ಷ್ಮಣ ಕಣ್ಣೀರ ಸುರಿಸಿ ಮಾಡತಾನ ಅತಿ ಶೋಕವನು ।
ನೆಲಾ ಬಗಟಿ ಕಚ್ಚತಾನ ಮಣ್ಣವನ ।
ಅಣ್ಣಗ ಅಂತಾನ ಬಡದದೇನೊ ಭೂತವನು ॥
ತಿರುಗಿ ರಾಮಚಂದ್ರ ಹೇಳಿದ ಆತಗ ಸೀತಾನ ಇಂದ ಕೊಲ್ಲದಿದ್ರ ನೀನು
ಪ್ರಾಣ ಕೊಡುತಿಹೇನು ॥೨॥

ನನ್ನ ಹತ್ಯಾದೋಷ ನಿನಗ ತಟ್ಟೀತು ಹೋಗಲಾರದ ಕರ್ಮವನು ।
ಅಘೋರ ನರಕ ನಿನಗ ತಪ್ಪೀತೇನು ।
ಕುಂದ ಬಂದ ಜೀವಿಸಿ ಫಲವೇನು ॥
ಕರುಣ ಇಲ್ಲದ ಮಾತ ಕೇಳಿ ಲಕ್ಷ್ಮಣಾ ಸಿದ್ಧಮಾಡಿ ಆಗ ರಥವನ್ನು ।
ಬಿಟ್ಟ ಬಂದಾನು ॥೩॥

**॥ಚಾಲ॥**

ಸೀತಾ ಇದ್ದಾಳ ಆಗ ಬಸವಂತಿ-ಅಯ್ಯೋದೈವಗತಿ-ಸಂಚಿತ ಕರ್ಮಾ ।
ಏನ ಲಿಖಿತ ಬರೆದ ತಾನೆ ಬ್ರಹ್ಮಾ॥೧॥

ಖರೆ ಇದ್ದಾಳ ಸೀತಾ ರಾಜ ಪಿಂಡ-ಆದಾಳ ಈಗ ಭಂಡ-ಕಾಲಚಕ್ರ ಮಹಿಮಾ
ಹತ್ತಲಾರದ ನೆಲಿ ಬಹಳ ಗುಮ್ಮಾ॥೨॥

ಬಿಟ್ಟಿ ಹೋಗೂ ಲಕ್ಷ್ಮಣನ ನೋಡಿ-ಕರಳ ಅಂದ್ರ ಖೋಡಿ-ಅಂತಾಳ ಯಾತರ ಜಲ್ಮಾ।
ಹೊರಳಿ ಬಿದ್ದಾಳ ಭೂಮಿಗಿ ಬೇಫಾಮಾ॥೩॥

**॥ಚಾಲ॥**

ತಂಪಗಾಳಿಗಿ ಕೂತಾಳ ಎಚ್ಚತ್ತಾ ।
ಪಾಪದ ರಾಶಿ ಹೆಣ್ಣೆಂದು ಜಲ್ಮವ್ಯರ್ಥಾ॥೧॥

ಅನಾಥ ಬಾಲಿದ ದುಃಖ ವಿಪರೀತಾ ।
ಹಾ ರಾಮಾ ಬಿಟ್ಟೆನೊ ನನ್ನ ಮರತಾ॥೨॥

ಪಶುಪಕ್ಷಿ ಕೂಡ್ಯಾವು ಸುತ್ತಮುತ್ತಾ।
ನಿರಾಹಾರ ನಿಂತಾವು ಮರುಗುತಾ॥೩॥

**॥ಕೂ.ಪ॥**

ಅಕಸ್ಮಾತವಾಗಿ ಬಂದ ವಾಲ್ಮೀಕಿ ಕೇಳತಾನ ಸರ್ವವೃತ್ತಾಂತಾ।
ಯತಿ ಧರ್ಮದಂತೆ ಕರುಳ ಕರಗುತಾ।
ಆಶ್ರಮಕ ಒಯ್ದಾನ ಅಂದಿನ ಹೊತ್ತಾ॥ ಮಾತಕೇಳಿ॥೧॥ ॥ಚೌಕ॥

**ಚೌಕ-೨**

**॥ನುಡಿ॥**

ಪರ್ಣಶಾಲೆಯೊಂದು ನಿರ್ಮಿಸಿ ವಾಲ್ಮೀಕಿ ಪರಭಾರೆ ಇರಸಿದ ಅಲ್ಲಿ॥
ಮಗಳಂತ ತಿಳದ ಭಾಗ್ಯ ಮನದಲ್ಲಿ।
ಮತ್ತ ಧೈರ್ಯ ಹೇಳಾಂವ ಮ್ಯಾಲಿಂದ ಮ್ಯಾಲಿ॥
ಅವಳೀ ಮಕ್ಕಳನ್ನ ಹಡೆಯುವೆ ಮಗಳೆ ನನ್ನ ಮಾತ ಆಗದ ಖಾಲಿ।
ಆಶೀರ್ವದಿಸುತಲಿ॥೧॥

ವಾಲ್ಮೀಕಿ ವಚನದಂತೆ ಹಡೆದಾಳ ಸೀತಾ ನವಮಾಸ ಆಗ ಪೂರ್ಣ ತುಂಬುತಲಿ
ಶುಭತಿಥಿವಾರ ಶುಭ ಲಗ್ನದಲ್ಲಿ।
ಋಷಿಜನ ಪತ್ನಿಯರ ಸಮೂಹದಲ್ಲಿ॥
ಸೂರ್ಯ ಚಂದ್ರಕೂಡಿ ಹುಟ್ಟಿ ಬಂದಾರ ಏನೋ ಅನ್ನುವಂತೆ ಭೂಮೀ ಮ್ಯಾಲಿ।
ಏಕಕಾಲದಲಿ॥೨॥

ಶುಭ ಮುಹೂರ್ತ ನೋಡಿ ತೊಟ್ಟಲಾಕಟ್ಟಿ ವಾಲ್ಮೀಕಿ ಜೋಗುಳ ಹಾಡುತಲಿ।
ಕುಶಲವರೆಂಬ ನಾಮಕರಣ ಮಾಡುತಲಿ।
ಋಷಿ ಪತ್ನಿಯರು ಆರತಿ ಬೆಳಗುತಲಿ॥
ಮಗಳ ಮಕ್ಕಳಂತ ಎತ್ತಿ ಮುದ್ದಾಡಿ ಅವರ ಬಾಲಲೀಲಾ ನೋಡುತಲಿ।
ಕಾಲಕಳಿಯುತಲಿ॥೩॥

**॥ಚಾಲ॥**

ಅಕ್ಷರಜ್ಞಾನವನು ಮಾಡಿಸಿ-ಉಪನಯನ ತೀರಿಸಿ-ಇಚ್ಛಾ ಭೋಜನಾ।
ಬ್ರಾಹ್ಮಣರಿಗೆ ಮಸ್ತ ದಕ್ಷಿಣಾ॥೧॥
ರಾಜನೀತಿ ಧರ್ಮವನು ತಿಳಿಸಿ-ತಾಳ ಮೇಳ ಕಲಿಸಿ-ಸಾಮವೇದಗಾನಾ।
ವೀಣಾ ಹಿಡಿದ ಹಾಡುರು ರಾಮಾಯಣಾ॥೨॥
ಧನುರ್ವಿದ್ಯಾ ಕಲಿಸಿದಾನ ಜೋರ-ಒಳಗಿಂದ ಎಲ್ಲಾ ಸಾರ-ಉಳಿಯ

ಲಿಲ್ಲ ಏನೇನಾ |
ಸಕಲ ವಿದ್ಯಾ ಪಾರಂಗತ ಪೂರ್ಣಾ||೩||

**||ಚಾಲ-೨||**

ಕುಶಲವರ ವಾಲ್ಮೀಕನ ದಯದಿಂದಾ |
ಸುಖದಿಂದ ಇದ್ದಾರು ಉಂಡತಿಂದಾ||೧||
ಯಜ್ಞ ಹೂಡಿ ರಾಮಚಂದ್ರ ಅಶ್ವಮೇಧಾ |
ಅಯೋಧ್ಯಾದಿಂದ ಅಶ್ವ ಬಿಟ್ಟಿದ್ದಾ||೨||
ಲವ ತಾನು ದೂರಿಂದ ನೋಡಿದ್ದಾ||೩||

**||ಕೂ.ಪ.||**

ಬಂದ ಅಶ್ವ ಇದು ಯಾರದೇನೊ ಅಂತ ಅಡ್ಡಗಟ್ಟಿ ತರುಬಿ ನಿಂತಾ |
ಪಣಿ ಫಲಕ ಓದಿ ಆದಾನ ತಪ್ತಾ |
ಇಲ್ಲಿ ಬರಲಿ ಅಂದ ಕೌಸಲ್ಯಾಸುತ || ಮಾತ ಕೇಳಿ ||೨|| ||ಚೌಕ||

**ಚೌಕ – ೩**

**||ನುಡಿ||**

ಎಂಥಾ ರಾಮ ಅವನ ನೋಡಬೇಕಂತ ಅಂಬುದು ಮನಸಿದ ಉಮೇದ್ವಾರಿ |
ವೀರ ಬಾಹುತಟ್ಟತಾನ ಬೆಂಕಿಕಾರಿ |
ಪಂಥಮಾಡಿ ಕಟ್ಟತಾನ ಆ ಕುದುರಿ |
ಯಾರ ಬಂದ ನನಗ ಏನ ಮಾಡವರಂತ ಬಾಣಿಂದ ಮಾಡಿದ ಝಣತ್ಕಾರಿ |
ಒಳೆ ಶೋಧ ಏರಿ||೧||

ಇಷ್ಟ ಅಂದ ಅವ ನಿಂದ್ರುದರ ಒಳಗ ವೀರ ಭಟರ ಬಂದಾರ ಸಾರಿ |
ಅವರೊಳು ಶತ್ರುಘ್ನ ಮಹಾಪುಂಡ ಅವರ ದೊರಿ |
ಲವ ಹೋಗಲಿಲ್ಲ ಅವರಿಗೆ ಹೆದರಿ ||
ಬಂದ ದಂಡ ಎಲ್ಲಾ ಹಿಂದಕ ಬಡಸಿದಾನ ಬಾಣಿನಿಂದ ಮಾಡಿದ ಶರಸೂರಿ ||
ಸಿಂಹಿನ ಮರಿ||೨||

ರಥಾರೂಢನಾಗಿ ಬಂದ ಶತ್ರುಘ್ನ ಬಾಣ ಒಗದ ಒಳೆ ಹೂಡಿಗುರಿ |
ಲವ ಬಿದ್ದ ಧರಣಿಗೆ ಖಬರ ಹಾರಿ |
ಮೋಡ ಮುಸುಕಿ ಪ್ರಕಾಶ ಆದಾಂಗ ಆತ ಮಾರಿ |
ಕಟ್ಟಿದ ಕುದುರಿ ಅವರು ಬಿಚಗೊಂಡ ಹೋದಾರು ಲವನ ಸಹಿತ ರಥದಲಿ ಹೇರಿ |
ಇಲ್ಲ ಅದೇನು ಬಿರಿ||೩||

**||ಚಾಲ||**

ಸೀತಾಗ ಮುಟ್ಟಿತ ಈ ಸುದ್ದಿ ಬಂದಾಳ ಆಗ ಜಲ್ದಿ-ಬಾಯಿಬಿಡವೂತಾ |
ಹೊರಳಿ ಮರಳಿ ಧರಣೆಗೆ ಬೀಳೂತಾ||೧||

ಪ್ರೀತಿ ಮಗನ ಗುಣಗಳ ನೆನಸಿ-ಹಲುಬಿ ಹಂಬಲಿಸಿ-ಮಾಡ್ಯಾಳ ಆಕ್ರಾಂತಾ |
ಆಯಿತೇನೊ ಮಗನೆ ನಿನ್ನ ಘಾತಾ||೨||

ಅಷ್ಟರೊಳಗ ಕುಶ ಅಲ್ಲಿಗೆ ಬಂದ-ನಿಂತ ತಾಯಿ ಮುಂದ-ಕೇಳಿದ ವೃತ್ತಾಂತಾ |
ಚಿಂತಿಯಾತಕ ತಾಯಿ ಇದೇನಲ್ಲ ದೊಡ್ಡಮಾತಾ||೩||

**||ಚಾಲ-೨||**

ಸೂರಿ ಮಾಡಿ ಯಮನ ಪಟ್ಟಣಾ |
ತಿರುಗಿ ತರುವೆ ತಾಯಿ ತಮ್ಮನಾ||೧||

ಹರಹರ ಬ್ರಹ್ಮಾದಿ ಲೋಕವನ್ನಾ |
ಸುಟ್ಟ ಬಿಡುವೆ ಅದಕ ಬ್ಯಾಡಕ್ಷಣಾ||೨||

ಉಳದ ಮಂದಿದ ನನಗ ಪಾಡ ಏನಾ |
ಬೇಗ ತಾರವ್ವಾ ಬತ್ತಳಕಿ ಬಿಲ್ಲ ಬಾಣಾ||೩||

**||ಕೂ.ಪ.||**

ಬಿಲ್ಲ-ಬಾಣಗಳ ಸಾಕಷ್ಟ ತಕ್ಕೊಂಡ ಹೊರಟಾನ ತಮ್ಮನ ಹುಡಕೂತಾ |
ಮುಂಗಾರಿ ಸಿಡ್ಲಿನಂಗ ಗುಡಗುತಾ |
ಅವರ ಇದ್ದಲ್ಲಿ ಬಂದಾನ ಆಗ ಜಿಕ್ಕೋತಾ || ಮಾತಕೇಳಿ||೩|| ||ಚೌಕ||

**ಚೌಕ – ೪**

**||ನುಡಿ||**

ತಂದಿ ಮಕ್ಕಳಂಬು ಗುರುತ ಹತ್ತದೆ ಸಿದ್ಧಾಗಿ ನಿಂತಾರ ಸಂಗ್ರಾಮಕ |
ಭರತ ಶತ್ರುಘ್ನ ಹತ್ತಲಿಲ್ಲ ದರಕಾರಕ
ಉರಳಿ ಬಿದ್ದಾನ ಸೌಮಿತ್ರ ರಥದಿಂದ ನೆಲಕ ||
ವೀರಾದಿ ವೀರರೆಲ್ಲಾ ಬಿದ್ದಾರ ಧರಣಿಗ ಘೋಳಸ್ಯಾಡಿತ ಕೈಲಾಸ ಬೀಳುದಕ |
ಅವನ ದರ್ಪಕ||೧||

ಬಂದ ರಾಮಚಂದ್ರ ನೋಡಿ ದುರದಶಾ ಅಯ್ಯೋ ಅಂದ ಮಾಡತಾನ ಶೋಕ।
ಇದೇನ ಆತ ಅಂದ ಮಹಾ ಕೌತೂಕ।
ಹ್ಯಾಗೆ ಮಾರಿ ತೋರಲಿ ನನ್ನ ಪ್ರಜಾಜನಕ ॥
ತಾಯಿ ಸುಮಿತ್ರಾಗ ಏನ ಹೇಳಲಿ ಅಪವಾದ ತಂದ ಇಟ್ಟ ನನ್ನ ಪಾಲಕ।
ತಮ್ಮ ಕಡಿತನಕ॥೨॥

ಕೋಪಾರೂಢನಾಗಿ ನಿಂತ ರಾಮಚಂದ್ರ ಬಾಣ ಬಿಟ್ಟ ಒಂದು ಕೈಲಾಕ।
ಮುರದ ವಗದಾರ ಕುಶ-ಲವ ನಡಬರಕೆ।
ಮೂರ್ಛಾ ಬಂದ ಬಿದ್ದ ರಾಮಚಂದ್ರ ನೆಲಕ ॥
ವಾಲ್ಮೀಕನ ದಯದಿಂದ ಎದ್ದಾರ ಎಲ್ಲಾರು ಶಿರಬಾಗಿ ಅವನ ಪಾದಕ।
ಹೊಂಟಾರ ಅಯೋಧ್ಯಾ ನಗರಕ ॥

**॥ಚಾಲ॥**

ರಾಮ ಸೀತಾ ಮಕ್ಕಳ್ನ ಕೂಡಿಸಿ-ವಾಲ್ಮೀಕಿ ಖುಷಿ-ಮಾಡಿದ ಆಶೀರ್ವಾದ।
ಸುಖದಿಂದ ರಾಜ್ಯ ಆಳಿರೆಂದ॥೧॥

ಜನಮೇಜಯನ ಅಶ್ವಮೇಧ ತರಸಿ-ಓದ ಪುರಮಾನಿಸಿ-ತಿಳಿಯತತಿ ಭೇದಾ।
ನೋಡುನ ಹಾಡ ಮುಂದಿನ ಸಂದ॥೨॥

ಶತಕೋಟಿ ರಾಮಾಯಣಿ ಕೆಲಸ-ಹೇಳಿದಷ್ಟ ಹುಲಸ-ಆಗುವದು ಮುಂದಾ।
ಮುಂದ ಬೇಕಾದ ನೋಡುನು ಅಂದಾ ॥೩॥

**॥ಚಾಲ-೨॥**

ನಮ್ಮದು ಕೇಳ ಇರವುದು ಅಥಣಿ ವಾಸ।
ಸಿದ್ಧೇಶ್ವರ ನೆನದಾನು ಅಲ್ಲಿ ಖಾಸ॥೧॥

ಸುತ್ತಲೆಲ್ಲ ಪೌಳಿ ಅದಾವ ಆರಾಸ।
ನೋಡಿ ಮನಸಿಗೆ ಆಗೂದು ಉಲ್ಲಾಸ ॥೨॥

ಸೌದಾಗರ ಸುರಸಿದೊ ಕರುಣ ರಸ।
ಗುರು ನಾಡಿಗೆ ಒಪ್ಪುವ ರಾಜ ಹಂಸಾ ॥೩॥

**॥ಕೂ.ಪ.॥**

ಬಾಲ ತುಕಾರಾಮ ತಿಳಿಸಿದಂಥ ಕಲಮ ನಿತ್ಯ ಓದವರ ಶ್ರೀರಾಮಕಥಾ ।
ನಮ್ಮ ಮೇಲೆ ಅವರದು ಬಹಳ ಸ್ವತಾ ।
ವಸ್ತಾದ ಮುರಲೀಧರನ ಕವಿ ಪ್ರಕಾಶಿತಾ ॥ ಮಾತಕೇಳಿ ॥॥೪॥ ॥ಚೌಕ॥

***ರಚನೆ:*** ವಸ್ತಾದ ಮುರಲೀಧರ
***ಕೃತಿ:*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೫. ರಾಮ – ರಾವಣ ಕಾಳಗ

**॥ಪಲ್ಲ॥**

ರಾಮ ಲಕ್ಷ್ಮಣ ಇಬ್ಬರು ಬಹಳ ಪರಾಕ್ರಮಿ ಇದ್ದಾರ ಯಾರೂ ಇಲ್ಲ
ಅವರ ಸರಿ ಲೋಕದಾಗ ।
ಬಿರದ ಭಟ್ಟಂಗಿ ಸಾರತತಿ ನಾಡಾಗ ।
ಮೂರು ಲೋಕದಾಗ ಸೂರ್ಯ ಚಂದ್ರಾಮ ಇದ್ದಾಂಗ ॥
ಎದ್ದ ಬಂದ ರಾವಣ ಕದ್ದಲೆ ಓದ ಸೀತಾನ ಗೋಮ ಹತ್ತಿ ಕಡಿತನಕ ಬಿತ್ತಡಾಗ ।
ಮುಂದ ಆಗುಕಾಲ ತಪ್ಪೋಣಿಲ್ಲ ಯಾವ ಯಾವಗ ॥

**ಚೌಕ – ೧**
**॥ನುಡಿ॥**

ಅಗ್ನಿ ದಿಕ್ಕಿನ ಮ್ಯಾಲ ಐಶ್ವರ್ಯಾ ಲೆಂಕಾ ಇತ್ತ ರಾವಣೇಶ್ವರನ ರಾಜಕೀಲಿ ಲಂಕಾದಾಗ ।
ತೆತ್ತೀಸಕೋಟಿ ದೇವರನ ಎಲ್ಲಾ ಇಟ್ಟ ಬಂಧಿಯೊಳಗ ।
ಚಂದ್ರಸೂರ್ಯ ಬ್ರಹ್ಮದೇವರ ಚಾಕರಿ ಮಾಡ್ಯಾರ ಆತಗ ॥
ಅಂಥ ಪಟ್ಟಣ ಆಳೂವಂಥ ಬಂಟ ರಾವಣೇಶ್ವರ ಇದ್ದ ಅಷ್ಟಜೋರ
ಇದ್ದಿದ್ದಿಲ್ಲ ಯಾವ ಯಾವಗ ।
ಹಿಂಥಾ ರಾಜ್ಯ ಯಾವ ಮಾಡಲಿಲ್ಲ ಭೂಮಿ ಮ್ಯಾಗ॥೧॥

ಮುನ್ನೂರದರವತ್ತಾರ ಯೋಜನ ಅಡ್ಡಗಲ-ಉದ್ದ ಲೆಂಕಾ ಇತ್ತ ಹಮಚೌಕ ಒಳಗ ।
ಹೊರಗ ಎಪ್ಪತ್ತೆರಡ ಸಾವಿರ ಅಗಸಿ ಇದ್ದು ಲಂಕಾದಾಗ ।
ಶಾಣೌ ಹಜಾರ ಹೂಡೆಗಳ ಇದ್ದು ಅದರೊಳಗೆ ॥
ಏಳ ಲಕ್ಷ ಬಂಗಾರ ಮನಿ ಹತ್ತ ಲಕ್ಷ ಬೆಳ್ಳಿಮನಿ ಹದಿನೆಂಟ ಲಕ್ಷ
ವಜ್ರಮುನಿ ಮುತ್ತಿನ ಕೋಟ್ಯಾಗ ।
ಮತ್ತ ಮೂರ ಲಕ್ಷ ಹಿತ್ತಾಳಿ ಮನಿ ಮೇಲುಪ್ಪರಗಿ ಮ್ಯಾಗ॥೨॥

ಕಲ್ಲ ಕಟಗಿ ಹುಲ್ಲಮನಿ ಲೆಕ್ಕ ಇಲ್ಲ ಲಂಕಾದಾಗ ರತ್ನದೀಪ ಹದಿನೆಂಟ ಲಕ್ಷ ಒಳಗ ।
ಒಳಗ ಮತ್ತ ಕರ್ಪುರದೀಪ ಕೋಟಿ ಉರಿತಾವ ಮ್ಯಾಗ ।

ಹಿಂಗ ತುಪ್ಪದ ದೀಪ ಎಂಬತ್ತ ಲಕ್ಷ ಇದ್ದು ತೆಳಗ ।
ಎಣ್ಣಿದೀಪ ಲೆಕ್ಕವಿಲ್ಲ ಓಣಿಓಣಿ ಉರಿತಾವ ಚಂದ್ರದ್ಯೋತಿ ಉರಿತಾವ ಮಹಾಲದೊಳ ।
ಮತ್ತ ಹಂತಾ ವರುವ ಕೊಟ್ಟ ಸಂಬ ರಾವಣೇಶ್ವರಗ॥೩॥

**॥ಚಾಲ॥**

ಊದ ಬಾರಸವರ ಗಣಿತಯಿಲ್ಲ ದಿನಾ ಜಾಂಗಟಿ ಝಣಝಣಾ ಪಾತ್ರಗಾಯನಾ ।
ಯಾವ ಮಾತಿಂದ ಕಡಿಮಿ ಇಲ್ಲ ಏನಾ॥೧॥

ರಾವಣೇಶ್ವರ ಏನ ದೈವಾನಾ ಶಿವ ಕೊಟ್ಟಾನಾ ಸರ್ವಸಂಪನ್ನಾ ।
ಒಟ್ಟ ಮುಕ್ತಾರ ಸರ್ವ ದಂಡಿನಾ॥೨॥

**॥ಕೂ.ಪ.॥**

ತುಂಬಿದ ಹೊಳಿ ನಡದಾಂಗ ರಾವಣೇಶ್ವರ ಹೊಂಟಬಂದ ಸಾಂಬ
ಸರ್ವ ನಡಿಸಿಕೊಟ್ಟ ರಾವಣೇಶ್ವರಗ ।
ಅಂವ ಸದಾ ಆನಂದ ಇದ್ದ ಸುಖದಾಗ ।
ಮುಂದ ಶನೀಶ್ವರ ಗಂಟಬಿದ್ದ ರಾವಣೇಶ್ವರಗ ॥ ಎದ್ದಬಂದ॥೧॥

**ಚೌಕ-೨**

**॥ನುಡಿ॥**

ನಾರದ ಮುನಿ ಬಂದ ರಾವಣೇಶ್ವರಗ ಹೇಳತಾನ ಯಾರೂ ಇಲ್ಲ
ನಿನ್ನ ಸರಿ ಲೋಕದಾಗ ।
ಕಟ್ಟ ಪಾರೇಕ ಹಾಕಿದೀರಿ ಶನೀಶ್ವರಗೆ ।
ಅವನ ಅಂಗಾತ ಮಾಡಿ ತುಳಿಬೇಕ ನೀ ಎದಿಮ್ಯಾಗ ॥
ತುಳದ ಆರ ತಿಂಗಳದಾಗ ರಾವಣೇಶ್ವರನ ಮರಣಯಿತ್ತ
ಆಗೂಕಾಲ ತಿಳೀಲಿಲ್ಲ ರಾವಣೇಶ್ವರಗ।
ಅಂವ ಅಂಗಾತಮಾಡಿ ತುಳದಾನ ಶನೀಶ್ವರಗ॥೧॥

ಅರ್ಧ ಜಲ್ಮ ಆಶೆಯಿತ್ತ ಮರಣಕಾಲ ಸನಿಬಂತ ಕದನ ಬಿತ್ತ ನೋಡ್ರಿ
ಮುಂದ ಸೀತಾನ ಕಾಲಾಗ ।
ಅವನ ಮರಣ ಇತ್ತ ರಾಮಚಂದ್ರನ ಕೈಯಾಗ ।
ಹಿಂಗ ಬರದ ಬರಿ ತಪ್ಪೋಣಿಲ್ಲ ಯಾಂವ ಯಾಂವಗ ॥
ಕರ್ಮದಾತಾ ಸೀತಾನದಿಂದ ವರ್ಮ ಸೊಕ್ಕಿರಾವಣ ಗರ್ವದಿಂದ

ಏರಿಹೋದ ರಾಮನ ಮ್ಯಾಗ ।
ಅವ ರಾಮರದಂಡ ಇಡಲಿಲ್ಲ ಖಾತ್ರಿದಾಗ॥೧॥

ಏರಿಹೊಂಟ ರಾವಣೇಶ್ವರ ಸಾರತಾನ ದಂಡಿನ್ಯಾಗ ಕೂಗತಿದ್ದ
ನಿಂತಕೊಂಡ ರಥದಾಗ ।
ರಥ ಹೋಗತಿತ್ತ ಅಗ್ನಿ ಉರಿ ಎದ್ದಾಂಗ ।
ರಥದ ಒಳಗ ರಾವಣ ಸಾಂಬ ಇದ್ದಾಂಗ ॥
ನಿಂತಕೊಂಡ ರಥದಾಗ ಅಂತ್ರದಿಂದ ಹೋಗತಿದ್ದ ತಪ್ತ ಆಗಿ
ರಾವಣೇಶ್ವರ ರಾಮರ ಮ್ಯಾಗ ।
ನಿಂತ ವಜ್ರಬಾಣ ಜಗ್ಗಿ ಹಿಡಿದ ತನ್ನ ಕೈಯಾಗ॥೨॥

ಮಂಡೋದರಿ ರಾವಣೇಶ್ವರಗ ಅರ್ಜಮಾಡಿ ಹೇಳತಾಳ ನೀವು
ಹಟಾ ಮಾಡಬ್ಯಾಡ್ರಿ ಈಗ
ಅವರು ದೇವರ ಮಂದಿ ಹ್ಯಾಂಗ ಕೇಳ್ಯಾರ ನಮಗ ।
ನಾವು ದೈತರ ಮಂದಿ ಸಾಗುದಿಲ್ಲ ಅವರ ಮ್ಯಾಗ ॥
ಹುಲ್ಲ  ರಾಮಗ ದಂಡ ಇಲ್ಲ ಬಿಸಾಟ ನನಗ ಏನ ಒರಸಿ ಹಿಟ್ಟ
ಮಾಡತೀನ ಅವನ ಗಳಿಗ್ಯಾಗ
ಸಂಹಾರ ಮಾಡತೀನ ಅದರ ಚಿಂತಿ ಯಾಕ ನಿನಗ॥೩॥

**॥ಚಾಲ॥**ಭೂಮಿ ತುಂಬ ದಂಡ ಕೈಯಾಗ ಇತ್ತ ರಾವಣಗ ಅಷ್ಟು ದಂಡಿನಾ ।
ಸರ್ವ ಸಾಹಿತ ತಗೊಂಡ ಬಿಲ್ಲ ಬಾಣಾ॥೧॥

ಸಿಟ್ಟಿಗೇರಿ ರಥದ ಒಳಗ ಕೂಗಿ ಬಹಳ ತಪ್ತ ಆಗಿ ನಿಂತ ರಾವಣಾ ।
ರಾಮರ ದಂಡಿನ ಮ್ಯಾಲ ಬಿಟ್ಟ ಬಾಣಾ॥೨॥

**॥ಕೂ.ಪ.॥**

ಕೆಳಗ ಬಿದ್ದ ಲಕ್ಷ್ಮಣ ಕಳವಳ ಆತ ಆ ಕ್ಷಣ ರಾವಣೇಶ್ವರನ ಬಾಣ ಬಡಿತ ಆತಗ
ಅಲ್ಲಿ ಮಾರುತಿ ಹೋಗಿ ದ್ರೋಣಾಗಿರಿ ತಂದಾನ ಆಗ ।
ಔಷಧ ಹಾಕಿ ಎಬ್ಬಿಸಿದಾಗ ಆಗ ಲಕ್ಷ್ಮಣಗ ॥ ಎದ್ದ ಬಂದ॥೨॥

**ಚೌಕ – ೩**

**॥ನುಡಿ ॥**

ರಾಮರದಂಡ ತಯ್ಯಾರ ಆಗಿ ಭೂಮಿತುಂಬ ನಡದೀತ ಲಕ್ಷ್ಮಣ
ಹೋಗುದ ಅಂದ ರಾವಣನ ಮ್ಯಾಗ
ನಳ-ನೀಳ ಅಂಗದ ಇದ್ದಾನೆ ಬೆನ್ನ ಮ್ಯಾಗ ।

ಸುಗ್ರೀವನ ಕುಮಾರ ಅದು ಬ್ಯಾರಿ ಮ್ಯಾಗ।
ರಾಮಚಂದ್ರ ಹಿಡಿದ ಬಾಣ ಆಕಾಶಕ ಮೂಡಿದಾಂಗ ಲಕ್ಕಾಟ
ಕೋಲಮಿಂಚ ಹೊಲದಾಂಗ
ದೇವೀಂದ್ರ ಸ್ವರ್ಗ ಲೋಕದಿಂದ ಇಳದಾನ ಆಗ॥೧॥

ಮಾರುತಿ ಅಲ್ಲಿ ಬಹಳ ಅರಭಾಟ ಮಾಡತಾನ ಗಗನಕ ಹಾರತಾನ
ಸುಳಿತಾನ ದಂಡಿನಾಗ
ಗಿಡಾ ಗುಡ್ಡಾ ಕಿತ್ತ ಒಗಿತಾನ ಮ್ಯಾಗ।
ದ್ರೋಣಗಿರಿ ಪರ್ವತ ಅಗಾಧಯಿಲ್ಲ ಅವಗ॥
ಎಳದ ದೈತರ ನೆಲ್ಲಾ ತುಳದ ಮಾರುತಿ ರಾವಣ ಬಂದ ನಿಂತಿದಾನ ರಥದಾಗ
ಹಿಂಗ ಲಢಾಯಿ ನಡೆದಿತ ರಾಮ-ರಾವಣಗ॥೨॥

ರಾಮಚಂದ್ರ ಹಿಡದ ಬಾಣ ನಿರತದಿಂದ ಬಿಡತಾನ ಸರತದಿಂದ
ಬಡಿತಾವ ರಾವಣಗ।
ಒಂದೊಂದ ತಲಿ ಹಾರತಾವ ಚಂಡಿನಾಂಗ।
ಕೆಳಗ ಮ್ಯಾಲ ಮತ್ತ ಚಿಗಿತಾವ ಹ್ಯಾಂಗ ಇದ್ದಾಂಗ।
ಗುಡ್ಡದಾಂಗ ತಲಿ ಢಿಗಾರ ಬಿದ್ದಾವ ಸ್ಪಷ್ಟ ಮರಣ ಆಗವಲ್ದ ರಾವಣಗ।
ರಾಮಚಂದ್ರ ಮಾಡ್ಲಿ ಅಂತಾನ ಹ್ಯಾಂಗ॥೩॥

ಲಂಕಾದಾಗ ಹುಟ್ಟಿಬಂದ ಬಿಭೀಷಣ ಕೂಲಕೊಟ್ಟ ಕಳಿ ಎಲ್ಲಾ ಹೇಳಿದಾನ ರಾಮಚಂದ್ರಗ।
ರಾವಣನ ಮರಣ ಐತಿ ಎದಿ ಗುಂಡಿಗ್ಯಾಗ।
ರಾಮಕೇಳಿ ಬಾಣ ಒಗದ ಎದಿಯ ಮ್ಯಾಗ॥
ರಾಮಚಂದ್ರ ಒಗದ ಬಾಣಕ ಮರಣ ಆಗಿ ಭೂಮಿ ಮ್ಯಾಲ ರಾವಣ
ಬಿದ್ದ ದೊಡ್ಡ ಗುಡ್ಡದಾಂಗ।
ಬಿಭೀಷಣಗ ಓದ ಕೂಡ್ರಿಸಿದಾರ ಗಾದಿಮ್ಯಾಗ॥೪।

**॥ಚಾಲ॥**

ಸೂರ್ಯಚಂದ್ರ ಮುಳಗಿದಾಂಗ ಆತ ಲಂಕಾದ ಧರಿ, ಸುತ್ತ ಕಾಳಗತ್ತಲಾ।
ಗವದಿತ ಮುಂಜಾನ ಸುತ್ತೆಲ್ಲಾ॥೧॥

ರಾಮರದಂಡ ಮುತ್ತಿಗಿ ಹಾಕಿ ಎಲ್ಲಾ ಮಾಡತಾರ ಕಬುಲಾ ಆತ ಅಮಲಾ।
ಕರಕೊಂಡ್ರ ಸೀತಾನ ಹಿಂಬಾಲಾ॥೨॥

**॥ಕೂ.ಪ.॥**

ತುರಾಯಿದವರ ಹಾಡತಾರ ಜಲಪೂರದಾಗ ಇರತಾರ ಕವಿ ಸಾರತಾರ ನಾಡಾಗ।
ರುದ್ರನ ಹಾಡ ಬಹಳ ಜಡಾ ಆಗತಾವ ಹಿಂಗ।
ಅಂವ ಕವಿ ಮಾಡಿ ಹೇಳತಾನ ಸಭಾದಾಗ ॥ ಎದ್ದಬಂದ॥೩॥

***ರಚನೆ:*** ರುದ್ರಕವಿ
***ಕೃತಿ:*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೬. ರಾವಣ ಸಂಹಾರ

ಕೂತ ಕೇಳಿರಿ ವ್ಯಾಸೋಕ್ತ ಗ್ರಂಥದಲಿ
ಮಾತ ತಗದ ನಾ ಹೇಳುವೆನು - ರಘು -
ನಾಥ ಮಾಡಿದಂತ ಪಂಥವನು - ಮಾ -
ರುತಿ ಸಾರಥಿ ಆದವನು
ಶತಮುಖದ ರಾವಣ ಎಂಬವನಾ ಶಿರ
ಶಕ್ತಿ ಕೈಲಿ ಹೊಡಿಸಿದ ತಾನಾ ಕೇಳಿರಿ ಇದನಾ
ಹತ್ತು ತಲಿ ರಾವಣನ ಮಗಾ ಮಹಾ -
ವೀರ ಪೌಂಡ್ರಕಾ ಎಂಬಾವಾ ವಯ-
ದಲ್ಲಿ ಅಂವ ಸಂಣಾವ ಶತ-
ಮುಖನು ಅವನ ಸೋದರ ಮಾವಾ
ಧನುರ್ವಿದ್ಯಾ ಕಲಸುದುಕ್ಕೋಸ್ಕರ ತನ್ನ
ಬದಿಲೆ ಇಟ್ಟಕೊಂಡವಾ - ವಿದ್ಯಾ ಕಲಸಾಂವಾ
ಲಂಕಾದಲಿ ದಶಮುಖ ಸತ್ತ ಅಂತ ಕೇಳ್ಯಾರ
ವಿಭೀಷಣಗ ಆದೀತಂತ ಪಟ್ಟಾ
ಮನದೊಳಗ ಆದಾ ಅಂವಾ ಸಿಟ್ಟಾ
ವೀರ ಪೌಂಡ್ರಕ ಅಂತಾನ ನಮ್ಮ ತಂದಿ
ಗ್ಯಾಕ ಬಂದೀತ ಸಾವಾ - ವಿಚಿತ್ರವಾ
ಕ್ಷಣದೊಳಗ ಇನ್ನ ವಿಭೀಷಣಾ ಪ್ರಾಣಾ
ಹೊಡೆದ ತಗೋಬೇಕ ನಾವಾ
ಇಲ್ಲದಿದ್ರ ವ್ಯರ್ಥ ಎನ್ನ ಜಲ್ಮವಾ
ಹೀಗಂತ ಮಾಡಿದಾನ ಪಂಥವಾ
ಮಾರ್ಬಲ ಸಹ ಶತಮುಖ ರಾವಣನು
ನೋಡ್ಯಾನ ಲಂಕಾದ ವೈಭವ ಕಂಡಾಗ ಶವಾ

**॥ಚಾಲ॥**

ಶತಮುಖ ರಾವಣ ಬಂದೆಂಬ ಸುದ್ದಿ ಕೇಳಿ
ವಿಭೀಷಣ ಹೊರಬಿದ್ದು
ಕಳವಳಿಸಿ ದುಃಖ ಮಾಡಿಕೋತ ಅಯೋಧ್ಯಾ
ನೋಡುತ ಬ್ಯಾಗ ಅಂವ ಬಂದಾ
ದುಃಖದಿಂದ ಸುರಸಿ ಕಣ್ಣೀರಾ ಅಂತಾನ
ರಘುವೀರ ಗಾದಿಹೋತ ನಿಂದಾ
ನೀವು ಅಚಲ ಪಟ್ಟಗಟ್ಟಿದು ಶತಮುಖ
ಹೊಡದ ತಕ್ಕೊಂಡೆ ಎಂದಾ
ಲೋಕ ಪತಿ ನಿಮ್ಮ ಮಾತ ಇಂದಿಗೆ
ಸುಳ್ಳ ಆದೀತ ವಚನಾ
ಇಷ್ಟ ಅಂದ ಶೋಕಾಬ್ದಿಯಲ್ಲಿ ಉರಳಿ
ಬಿದ್ದಾನ ವಿಭೀಷಣ ತಾನಾ

**||ಏರು||**

ರಾಮ ಭಾಷೆ ಕೊಟ್ಟ ವಚನವನು - ಬೆಳ -
ಗಾಗುದರೊಳಗ ಅವನ ಹೊಡೆಯುವೆನು
ನಿನ್ನ ಗಾದಿ ನಿನಗ ಕೊಡಿಸುವೆನು
ಸುಳ್ಳಾದ್ರ ಅಗ್ನಿಯಲಿ ಬೀಳುವೆನು ಕೇಳಿರಿ ಇದನು
ಕೂತ ಕೇಳಿರಿ ವ್ಯಾಸೋಕ್ತ ಗ್ರಂಥದಲಿ
ಮಾತ ತಗದ ನಾ ಹೇಳುವೆನು||೧ನೇ ಚೌಕ||
ಇಷ್ಟ ಮಾತ ಕೇಳಿ ಮತ್ತೂ ವಿಭೀಷಣ
ಹೊರಳ್ಯಾನ ಹೆಚ್ಚಿನ ದುಃಖದಲಿ
ರಾಮ ಕೇಳತಾನ ಅವನ ಮಾತಿನಲಿ
ಯಾಕ ಶೋಕ ವಚನಾ ಕೊಟ್ಟೆ ಮ್ಯಾಲಿ
ಕೇಳಿ ವಿಭೀಷಣ ಹೇಳಿದ ರಾಮಾ
ವಿಚಿತ್ರ ಬಂತು ಈ ಹೊತ್ತಿನಲಿ
ನಿಮ್ಮ ರೀತಿಯಲಿ ರೀತಿಯಲಿ
ಏಕಾದಶಿ ಉಪವಾಸ ಇಂದ ನಾಳಿ
ಪಾರಣಿ ಮಾಡುವ ಉದಯದಲಿ
ಷಣ್ಮಾಸ ದಾರಿ ಲಂಕಾ ಇಲ್ಲಿಂದ ರಾವಣನ
ಹೊಡಿತೇನಿ ಅಂಬುದು ಖಾಲಿ
ಬೀಳೋದಗ್ನಿಯಲಿ ಅಗ್ನಿಯಲಿ
ಇಷ್ಟ ಕೇಳಿ ರಾಮ ಚಿಂತಾಕ್ರಾಂತನಾಗಿ
ಹನುಮಂತನ ಆಗ ಕರಿಸುತಲಿ
ಬಂದಾನು ಮಾರುತಿ ತೀವ್ರದಲಿ

ಸಾಷ್ಟಾಂಗ ರಾಮನ ಚರಣದಲಿ
ಹಾಕಿ ಕರವ ಮುಗಿದ ಇದರಿಗೆ ನಿಂತಾನ
ಯಾಕ ಕರಿಸಿದರಿ ಅನ್ನುತಲಿ
ತಾ ಹೇಳುತಲಿ ಮತ್ತ ಹೇಳುತಲಿ

**||ಚಾಲ||**

ರಾಮು ಹೇಳ್ಯಾನ ಹನುಮಂತಗ ರಾವಣ
ಶತಮುಖನು ಲಂಕಾ ಹೊಕ್ಕಾನು
ವಿಭೀಷಣನ ಪ್ರಾಣ ಹೊಡದ ಗಾದಿ ತಗೋ-
ಬೇಕಂತಾನು ಅಂತಾನು
ಮಾಡಲೇನು ಬೆಳಗಾಗುದರೊಳಗ
ಹೊಡದೇನು ಅಂತ ವಚನವನು
ನಾ ಕೊಟ್ಟೇನು ಅಂತ ಕೊಟ್ಟೇನು
ನನ್ನ ವಚನ ಹಾನಿ ಆಗುದ ಬಂತಾ
ಈ ಹೊತ್ತು ಕೇಳು ಹನುಮಂತಾ
ಇನ್ನು ಪ್ರಹರದೊಳಗ ನಮ್ಮನೊಯ್ದು ಲಂಕಾ-
ದೊಳಗ ಇಳಿಸಬೇಕು ನೀ ತುರುತಾ
ಕೇಳಿ ಹನುಮ ರುದ್ರ ಅವತಾರ ತಾಳಿ ಭೂಮಿ
ಆಕಾಶಕ ಏಕಾಗಿ ನಿಂತಾ

**||ಏರು||**

ಅಂಗೈಯೊಳಗ ರಾಮ-ಲಕ್ಷ್ಮಣ ಹಿಡಿದೊಂದು
ಹೆಜ್ಜೆ ಕಿತ್ತಿ ಅಲ್ಲಿ ಇಟ್ಟಾನು
ಅಷ್ಟರೊಳಗೆ ಬಂದೀತ ಲಂಕಾವನು
ಹೊಡಿಯಂತ ರಾಮಗ ಹೇಳಿದನು ಕೇಳಿರಿ ಇದನು
ಕೂತ ಕೇಳಿರಿ ವ್ಯಾಸೋಕ್ತಿ ಗ್ರಂಥದಲಿ
ಮಾತ ತಗದ ನಾ ಹೇಳುವೆನು||೨ನೇ ಚೌಕ||

ಸುದ್ದಿ ಕೇಳಿ ರಾವಣನು ಸಿದ್ದ ಆಗಿ ಬಂದ ಯುದ್ಧಕಾ
ಹತ್ತ ಅರ್ಬುದ ಕಾಲ ಮಂದಿ ಅರ್ಭಾಟಕಾ
ಗರ್ಭಗಳಿತ ಆಗಿ ಅಂಜೇತಿ ಕೇಳ ಲೋಕಾ
ನಾಲ್ಕು ಅರ್ಬುದ ಗಜಾ ಎಂಟ ಅರ್ಬುದ ತೇಜಿ
ಹಾರಿದವೋ ಮ್ಯಾಲಕ ಮ್ಯಾಲಕಾ
ಅಂತ್ರ ಮಾರ್ಗದ ಅಂತ್ರ ಮಾರ್ಗಕಾ
ದ್ವಾದಶ ಅರ್ಬುದ ಮಹಾರಥಿಕರು-ಶರಾ

ತೂರತಾರ ಮ್ಯಾಲಕ ಮ್ಯಾಲಕಾ
ಧೂಳ ವಗದೀತ ಆದಿತ್ಯ ಮಂಡಳಕ
ಬೀರ ಗರ್ಜನೆ ಬೊಬ್ಬಿ ನಾದಕ ಅಂಜಿ
ಹಲ್ಲಗಟ್ಟಿ ವೀರ ಅಷ್ಟ ದಿಗ್ಗಜಗಳ
ಥಳಮಳಸಿ ಬಿದ್ದಾವ ನೆಲಕ ನೆಲಕ
ಕೇಳಿರಿ ಕವತೂಕ ಕವತೂಕ
ವೀರ ರಘುವೀರ ತೂರ್‍ಯಾನ ಶರಗಳ
ಶಿರಗಳು ಹಾರತಾವ ಗಗನಕ
ಶತಮುಖನು ಬಂದ ನಿಂತ ಸುಮ್ಮಕ
ಬಾಣಕ ಹೆದೀ ಏರಿಸಿದಾನ ತಾತ್ಕಾಲಕ
ವೀರ ರಾವಣನ ಕಡದ ಬಾಣದಲೆ
ಹೊಡದ ನಡದ ಮುಂದಕ
ರಣ ಮಂಡಳಕ ರಣ ಮಂಡಳಕ

**||ಚಾಲ||**

ಒಂದ ರಕ್ತದ ಹನಿಗೆ ನೂರು ಮಂದಿ ರಾವಣರು
ಹುಟ್ಟಿ ಎದ್ದ ಬರತಾರು ಬರತಾರೂ
ಹಿಂಗ ಕೋಟ್ಯಾವಧಿ ರಾವಣರು ಹುಟ್ಟಿ
ಘೋರ ಯುದ್ಧ ನಡಿಸ್ಯಾರು ನಡಿಸ್ಯಾರು
ಬಾಣ ಬಿಟ್ಟ ರಾಮ ದಣಿದಾನ ದಣಿದಾನ
ಅಷ್ಟರಲ್ಲಿ ನಾರದ ಬಂದು ನಿಂತಾನ ನಿಂತಾನ
ರಾಮಗ್ಹೇಳತಾರ ನಾರದ ಕೇಳೈ
ತ್ರಿಲೋಕ ಪತಿ ಎನ್ನ ಮಾತಾ
ಸರ್ವ ಅಂತರಂಗ ಬಲ್ಲಾಂವಾ ನಿನಗ
ನಾ ಏನು ಹೇಳಲಿ ರಘುನಾಥಾ
ನಿನ್ನ ಕೈಯಾಗ ಈತನ ಮರಣಾ ಇಲ್ಲಾ ಮುಂಚೆ
ಕರಿಯ ಕಳಸ ಇಲ್ಲೆ ಸೀತಾ.

**||ಏರು||**

ಸಾಯುತನಕ ನೀ ಯುದ್ಧ ಮಾಡಿದರ
ಶತಮುಖಗಾಗದ ಮರಣವನು
ಹಿಂಗಂತ ಹೇಳತಾನ ನಾರದನು
ಶಕ್ತಿನ ಕರಸ ಬ್ಯಾಗ ನೀನು ಕೇಳಿರಿ ಇದನು

ಕೂತ ಕೇಳಿರಿ ವ್ಯಾಸೋಕ್ತ ಗ್ರಂಥದಲಿ
ಮಾತ ತಗದ ನಾ ಹೇಳುವೆನು||೩ನೇ ಚೌಕ||

ಕೇಳಿ ನಾರದನ ಮಾತಿಗೆ ರಾಮ ತಾ
ಚಿಂತಿ ಮಾಡಿಕೊಂತ ನಿಂತಾನು
ಹನುಮಂತನ ಮುಖವ ನೋಡ್ಯಾನು
ಸೀತಾನ ತರಬೇಕು ಅಂದಾನು
ಕೇಳಿ ಹನುಮ ಅಲ್ಲಿಂದ ಬಾಗಿ ನಿಂತ ನೋಡ್ಯಾನು
ಅಯೋಧ್ಯಾವನು ಮಹಾವೀರನು
ಮಂಚದ ಮ್ಯಾಲ ಮಲಗಿಕೊಂಡು ಸೀತಾ
ಮಾಡುವಳು ಘೋರ ನಿದ್ರಿಯನು
ಹನುಮಂತ ಮಾಡತಾನ ಯುಕ್ತಿಯನು
ಬಾಲಾ ಹಾಕಿ ಕೋಲು ಎಲ್ಲಾ ಕಿತ್ತಾನು
ತಂದ ರಾಮನ ಮುಂದ ಸೀತಾನ
ಕೋಲು ಮಂಚ ಸುದ್ದಾ ಇಳಿಸ್ಯಾನ
ಎಬಸಂದಾನ-ಶ್ರೀ ರಾಮಗಂದಾನು
ರಾಮ ಸೀತಾಗ ಎಬಸಿ ಹೇಳತಾನು
ರಾವಣ ಬಂದಾನು ಶತಮುಖನು
ಆತಂದ ತಗೋಬೇಕ ಪ್ರಾಣವನು
ಲಗು ಏಳ ಮಾಡಬ್ಯಾಡ  ಸುಸ್ತಿಯನು
ಕೇಳಿ ರಾಮನ ಮಾತಿಗೆ ಸೀತಾನಗುತ
ಹೇಳತಾಳ ಮಾತವನು ಉಪರಾಂತಿಯನು

**||ಚಾಲ||**

ಹತ್ತು ತಲೆ ರಾವಣನ ಕೈಯಾಗ
ಸಿಕ್ಕನಾ ಬಳಲಿ ಬಿದ್ದೆ ಬಹುದಿವಸಾ
ಆತನ ಬಂದ್ಯಾಗ ಪ್ರಾಣಾನಂದು
ಆದೀತ ಭಾಳ ವನವಾಸಾ
ನೀವ ಬಂದ ಅವನ ಹೊಡೆಯುತನಕಾ ನನ್ನ
ಜೀವದಾಗ ಇದ್ದಿದ್ದಿಲ್ಲ ಉಲ್ಲಾಸಾ
ಏನ ಹಾಸ್ಯ ಮಾಡತೀರಿ ನನಗ ಹತ್ತ
ತಲಿ ರಾವಣನ ಹ್ಯಾಂಗ ಹೊಡೆಯವೆನು
ಅಷ್ಟುಶಕ್ತಿ ನನ್ನಲ್ಲಿ ಇದ್ದರ
ಹತ್ತ ತಲಿ ಹೊಡೆದು ಬರತಿದ್ದಿಲ್ಲೇನು
ನಿಮ್ಮ ಹೊರತ ನನ ಆಧಾರ ಇತ್ತ ಇಲ್ಲೊ

ಇಂಥಾ ರಾವಣನ ಹ್ಯಾಂಗ  ಹೊಡೆಯುವೆನು ಎಂದು
ಮಲಗಿಕೊಂಡಾಳ ಜಾನಕಿ ತಾನು
ರಾಮಚಂದ್ರಗ ಹೇಳತಾನ ನಾರದನು
ಎಂದಿಗೆ ಆಗುದುಲ್ಲ ಕಬೂಲವನು ಕೇಳರಿ ಇದನು
ಕೂತ ಕೇಳರಿ ವ್ಯಾಸೋಕ್ತ ಗ್ರಂಥದಲಿ
ಮಾತ ತಗದ ನಾ ಹೇಳುವೆನು||ಳನೇ ಚೌಕ||

ನಾರದ ಅಂತಾನ ಕೇಳೋ ರಘುವೀರಾ
ಹೇಳತೇನ ಶಕ್ತಿಯ ಮಾತಾ ಇಕಿ
ಪೂಜಾ ಮಾಡಬೇಕರಿ ಪೂರ್ತಾ ನೀರ
ಬಿಡೋ ಕೊಡತೇನಂತ ಸೇರ ರಕ್ತಾ
ಅಲ್ಲಿಂದ ಶತಮುಖ ರಾವಣರೆಲ್ಲ ನುಂಗಿ
ಬಿಡತಾಳ ಇಕಿ ಪೂರ್ತಾ ಇದು ಖಚಿತಾ
ಇಷ್ಟ ಕೇಳಿ ರಾಮಚಂದ್ರ ನೀರ ಬಿಟ್ಟಾ
ಸೇರ ರಕ್ತ ನಕ್ಕೀ ಕೊಡತೇನಂತಾ
ಆಗ ಶಕ್ತಿ ಮಾಡ್ಯಾಳ ವಿಪರೀತಾ
ವಿಶಾಲ ರೂಪ ಆಗಿ ಅದ್ಭುತಾ
ಭೂಮಿಗೊಂದ ತುಟಿ ಆಕಾಶಗೊಂದ ತುಟಿ
ಏಕಾಕಿ ನಿಂತಾಳ ಆರ್ಭಟಿಸುತ್ತಾ ಚೀರುತಾ
ಎಲ್ಲಾ ರಾಕ್ಷಸರನ ನುಂಗುತಾ ನಡದಾಳ
ನಮ್ಮ ಮರಣ ಬಂತ್ರಿ ಇಂದಿಗೆ ಅನ್ನುತಾ
ಗರ್ಭ ಗಳಿಸಿ ಅಂಜಿ ಥಳಮಳಿಸುತಾ
ಕೈಯೊಳಗಿನ ಬಾಣಾ ಚಲ್ಲು ಚಲ್ಲುತಾ
ಕಂಗೆಟ್ಟ ಖಬರ ಹಾರುತಾ ನಿಂತಾ
ಹ್ಯಾಂಗ ಮಾಡಲಿ ಅಂತಾ ಮಾಡಲೆಂತಾ

**||ಕಾಲ||**

ಅರ್ಭಾಟ ಶಕ್ತಿ ರಾಕ್ಷಸನ ನುಂಗಿ
ಗಟಾ ಗಟಾ ರಕ್ತ ಸೀಪ್ಯಾಳು
ಕ್ಷಣದೊಳಗೆ ಶತಮುಖನ ಪ್ರಾಣ ತಕ್ಕೊಂಡಾಳು
ತಾ ನುಂಗಿ ನೀರ ಕುಡದಾಳು ಕುಡದಾಳು
ಕೋಟ್ಯಾನು ಕೋಟಿ ಸೈನ್ಯ ಎಲ್ಲಾ ನುಂಗಿದರ
ರಕ್ತ ಅಚ್ಚೇರು ಭರತಿ ಆದೀತು ಆದೀತು
ಇನ್ನು ಅಚ್ಚೇರು ರಕ್ತಕ ತಿರುಗಾಳು
ರಾಮ ಲಕ್ಷ್ಮಣರನು ನುಂಗ ಬೇಕಂತು

ಇಷ್ಟ ನೋಡಿ ನಾರದ ಓಡಿ ಬಂದು ಅಂದಾನು
ರಘುವೀರಾ ಘಾತ ಆದೀತು ಆದೀತು

**||ಏರು||**

ನೀರು ಬಿಡರಿ ತೀವ್ರ ದ್ವಾಪಾರದಾಗ
ಅಚ್ಚೇರ ಕೊಡತೀವಂತ ರಕ್ತವನು
ಇಲ್ಲದಿದ್ದರ ನುಂಗತಾಳ ನಿಮ್ಮನು
ಕೇಳಿದ ತಾ ರಾಮನು ತಾ ರಾಮನು ಕೇಳರಿ ಇದನು
ಕೂತ ಕೇಳರಿ ವ್ಯಾಸೋಕ್ತ ಗ್ರಂಥದಲಿ
ಮಾತ ತಗದ ನಾ ಹೇಳುವೆನು||ಜನೇ ಚೌಕ||

ರಾಮು ನೀರ ಬಿಟ್ಟ ದ್ವಾಪಾರದಾಗ
ಅಚ್ಚೇರ ರಕ್ತ ಕೊಡತೀನಿ ಮುಂದಾ
ಇಷ್ಟ ಶಕ್ತಿ ಕೇಳಿದಾಗ ಕಿವಿಯಿಂದಾ
ಆಗ ಸೂಕ್ಷ್ಮ ಸೀತಾ ಆಗಿ ಚಂದಾ
ಮಲಗ್ಯಾಳ ಜಾನಕಿ ಸ್ವಸ್ತ ತಾನು
ನಿದ್ರಿದಿಂದ ರಾಮು ನೋಡಿದನು
ಪಟ್ಟಗಟ್ಟಿದ ವಿಭೀಷಣ ತಾನು
ಅಭಯ ಹಸ್ತ ಇಟ್ಟ ತಾನು ಆನಂದದಿಂದಾ
ಅವತಾರ ತೀರಿತ ರಾಮಚಂದ್ರಂದಾ
ಕೊಟ್ಟ ವಚನ ಇತ್ತ ಅವಗ ಅಂದಿಂದಾ
ದ್ವಾಪಾರದಾಗ ಮುಂದ ಕೃಷ್ಣನಾಗಿ ತಾನಾ
ಕೌರವ ಪಾಂಡವರಿಗೆ ಯುದ್ಧಾ ಹಚ್ಚಯಾನ ಜಿದ್ದಾ
ಕಾಳ ಶಕ್ತಿ ಅಲ್ಲಿ ರಕ್ತ ಕುಡಿದಾಳು
ಹದಿನೆಂಟು ಅಕ್ಷೋಹಿಣಿ ಸೈನ್ಯಾದ್ದ
ಅಷ್ಟಾದರೂ ಆಗಲಿಲ್ಲಾ ಸುದ್ದಾ
ನವಟಾಕ ಕಡಿಮೆ ಬಿದ್ದಿತ ಮುಂದಾ
ಕೃಷ್ಣ ಹೇಳಿದ ಕಾಳಶಕ್ತಿಗೆ ಕಲಿಯುಗದಾಗ
ಮಾರಾಮಾರಿ ಆಗೂದಾ ರಕ್ತ ಕುಡಿ ಅಂದಾ

**||ಚಾಲ||**

ಕಲಿಯುಗದ ಮದಲಗೊಂಡ ಇಂದಿನತನಕಾ
ರಕ್ತಾ ಆಗವಲ್ಲದ ಭರತಿ
ದುರ್ಗವ್ವ ಅಂಬೋ ಹೆಸರಾ ಶಕ್ತಿಗೆ
ಮೊದಲಿಂದ ಹಿಂಗ ಬಿದ್ದತಿ

ನವಟಾಕ ರಕ್ತದಲ್ಲೆ ಲೋಕದೊಳಗ ಮಾ-
ಡ್ಯಾಳ ಪ್ರಳಯದ ಗತಿ
ಈ ಸೂತ್ರಧಾರ ಅನಂತನಾಟ ಯಾ-
ರ್ಯಾರಿಗೆ ತಿಳಿಯದ ಮುನ್ನ
ಬಾಗೋಡಿ ಜಾಗಾ ರಂಗಲಾಲ ನಾ-
ಡಿಗೆ ಸುರದಂಗ ರನ್ನಾ
ಅಣ್ಣಾರಾವಜಿ ಗುರುವಿನ ಹಾಡ
ನಾಕುಸಲ ಹಚ್ಚಿದ್ಹಾಂಗ ಕಮಲ ಕಸರಿಲ್ಲೇನಾ
ಬಾಳಗೋಪಾಲನ ಹಾಡ ಕೇಳರಿ ಹಸು-
ಗೂಸಿಗಿ ಹಾಕಿದ್ಹಾಂಗ ಕ್ಷೀರವನಾ

**||ಏರು||**

ತಗಿತಾರ ಶಾಸ್ತ್ರದ ಆಧಾರವನು
ಕೇಳಿ ವೈರಿ ನೋಡಿ ಬೆರತಾನ ತಾನು
ಕೇಳರಿ ಇದನು
ಕೂತ ಕೇಳರಿ ವ್ಯಾಸೋಕ್ತ ಗ್ರಂಥದಲಿ
ಮಾತ ತಗದ ನಾ ಹೇಳುವೆನು||೬ನೇ ಚೌಕ||

***ರಚನೆ :*** ಬಾಳಗೋಪಾಳ
***ಕೃತಿ :*** ಜಾನಪದ ಝೇಂಕಾರ

## ೭. ಹಣುಮಂತನ ಲೀಲಾ

ಜೋ ಜೋ ಜೋ ಬಾಲಾ ಹಣಮಂತ ಲೀಲಾ
ಪವನಂಜ ಭೂಪಾಲಾ ಆಂಜನೆಯ ಬಾಲಾ ||

ಶ್ರೀರಾಮನ ಶಿಷ್ಯನಾಗಿ ಸೀತಾದೇವಿ ಸೋದಕ್ಕಾಗಿ
ಲಗುಬಗಿಯಿಂದ ಲಂಕಾಕ್ಕ ಹೋಗಿ ಪತಿವ್ರತಿ ಪಾದಕ್ಕೆರಗಿ ||

ಅಂಜಲಿಲ್ಲ ರಾಕ್ಷಸರಿಗಿ ಲಂಕಾ ಸುಟ್ಟ ಬಂದಿ ತಿರುಗಿ
ಶ್ರೀರಾಮ ಸುಗ್ರೀವರಿಗಿ ಸುದ್ದಿ ಹೇಳಿ ಚರಣಕ್ಕೆರಗಿ ||

ದ್ವಾಪರ ಯುಗದಲ್ಲಿ ಶೀಲಾ ಎಂಬೊ ನದಿ ಮ್ಯಾಲಿ
ಸೋಲಲಿಲ್ಲ ಯುದ್ಧದಲಿ ಅರ್ಜುನನನ ಹಿಂಬಾಲಿ ||

ಬಾಲ ಬ್ರಹ್ಮಚಾರಿ ಪುರುಷಾ ಮಾನವರೆಲ್ಲಾ ಮಾಡ್ವರುದ್ಯಾಸಾ
ತಿಗಡೊಳ್ಳಿಯಲ್ಲಿ ನಿನ್ನವಾಸಾ ಮರಿಕಲ್ಲಗ ಆದಿಯೋ ಲೇಸಾ ||

***ರಚನೆ:*** ಮರಿಕಲ್ಲಕವಿ
***ಕೃತಿ:*** ಮರಿಕಲ್ಲಕವಿಯ ಗೀಗೀ ಪದಗಳು

## ೮. ಅಂಡೋತ್ಪತ್ತಿ

ಒಂದು ದಿವಸ ಕೈಲಾಸದಲ್ಲಿ ಶಿವ
ಶಕ್ತಿ ಕೂತಿದ್ರ ಆನಂದದೊಳಗ
ವಾಮಭಾಗದಲ್ಲೆ ಕೂತ ಪಾರ್ವತಿ
ಪ್ರಶ್ನೆ ಕೇಳೂಳ ಈಶ್ವರಗ ||ಪಲ್ಲ||

ಜಗದ ಭರಿತ ಕೈಲಾಸದೊಡೆಯಾ ನೀ
ಎನ್ನ ಬಿನ್ನಹ ಕೇಳರಿ ಮುನ್ನಾ
ಪಿಂಡ ಬ್ರಹ್ಮಾಂಡ ಪಂಚ ತತ್ವಗಳು
ಮೊದಲ್ಹ್ಯಾಂಗ ಆದು ಹೇಳರಿ ಖೂನಾ
ಕೃಪಾ ಸಾಗರಾ ದಯಾ ಸಮುದ್ರಾ
ಛಿದ್ರ ಮಾಡಿ ಹೇಳರಿ ಇದನಾ
ಪಿಂಡ ಬ್ರಹ್ಮಾಂಡಕ ಪಂಚ ತತ್ವಗಳು
ಹ್ಯಾಂಗ ಆಗಿ ನಿಂತಾವ ಸವನಾ
ಸಾಂಬ ಅಂತಾನ ವಾಹವಾರೆ ಪಾರ್ವತಿ
ಭಲೆ ಮಾಡಬಹುದು ಪ್ರಶ್ನಾ
ಕೇಳಬಹುದು ನೀ ಹೇಳಬಹುದ ನಾ
ಪಿಂಡ ಬ್ರಹ್ಮಾಂಡದೊಳಗಿನ ಕದನಾ
ಪ್ರಥಮ ಇತ್ತ ಓಂಕಾರ ಎಂಬುವಾ
ಪ್ರಣವದೊಳಗ ಹುಟ್ಟ ಮೂರು ಗುಣಾ
ಅಕಾರ, ಉಕಾರಾ, ಮಕಾರಾ ಇವು ಮೂರಾ
ಬೀಜಾಕ್ಷನ ಅಂತ ಮೊದಲ ತಿಳಿ ನೀನಾ
ಅಕಾರ ಎಂಬುದು ನಾದ ಆದಿತು
ಉಕಾರ ಬಿಂದು ಅಕ್ಷರ ಕೇಳ ನೀನಾ
ಮಕಾರದೊಳಗ ಕಳೆ ಹುಟ್ಟಿತು
ಮೂರಕ ಮೂರ ಆಧಾರ ಮುನ್ನಾ
ನಾದ ಬಿಂದು ಕಳೆ ಮೂರಕ ಆಧಾರ
ಪ್ರಕೃತಿ ಮಾಡಿಟ್ಟ ನಿರಂಜನಾ
ಅಂಥಾ ಪ್ರಕೃತಿಗೆ ಪ್ರಾಣ ಆಧಾರ

ಒಂದೊಂದು ಕೇಳ ಇದರ ಸಂಧಾನಾ
ಪ್ರಾಣಕ ಆಧಾರ ಲಿಂಗ ಎನಿಸುವದಾ
ಪಿಂಡ ಬ್ರಹ್ಮಾಂಡದಿಂದ ನಿರ್ಮಾಣಾ
ಅ ಅಂದ್ರ ಅಣು ಅಂತಾ ಉ ಅಂದ್ರಾ ನಾದವು
ಈ ಮಾತ ಸಂಪೂರ್ಣ ತಿಳಿ ನೀನಾ
ಮ ಅಂದ್ರ ಬಿಂದು ಕೂಡಲು ಇವು ಎಲ್ಲಾ
ಶಿವಾ ಶಕ್ತಿ ಆದರು ಬ್ಯಾಗಾ
ಒಂದು ದಿವಸ ಕೈಲಾಸದಲ್ಲಿ
ಶಿವ ಶಕ್ತಿ ಕೂತಿದ್ರ ಆನಂದದೊಳಗ

ಶಿವಾ-ಶಕ್ತಿ ಈ ಪಿಂಡ ಬ್ರಹ್ಮಾಂಡಾ
ಕೂಡಿದಾಗ ಆತ ಆ ಝೇಂಕಾರಾ
ಪಂಚಭೂತ ಉತ್ಪತ್ತಿ ವಿವರಗಳ
ಛಿದ್ರ ಮಾಡಿ ಹೇಳುವೆ ನಾ ಪೂರಾ
ಸದ್ಯೋಜಾತ ಮುಖದಿಂದ ಪೃಥ್ವಿದಾ
ಆಗ ಉತ್ಪನ್ನಾದಿತ ಆಧಾರಾ
ವಾಮದೇವ ಮುಖದಿಂದ ಆದಿತು ಅಪ್
ಅಘೋರದಲ್ಲಿ ಅಗ್ನಿ ಪೂರಾ
ವಾಯು ಉತ್ಪನ್ನ ತತ್ಪುರುಷ ಮುಖದಿಂದ
ಚಿತ್ತಗೊಟ್ಟ ಕೇಳರಿ ನೀವೆಲ್ಲಾ ಪಂಡಿತರಾ
ಈಶಾನ ಮುಖದಿಂದ ಆಕಾಶ ಹುಟ್ಟಿತು
ಪಿಂಡ ಬ್ರಹ್ಮಾಂಡದೊಳಗಿನ ಸಾರ ಪಂಚಭೂತಗಳು
ಪಂಚಭೂತದಿಂದ ಹುಟ್ಟಿದಾವ ಈ ಪರಿ ಪ್ರಕಾರಾ
ಪಂಚಭೂತ ಧರ್ಮಕರ್ಮವರ್ಣಾದಿಗಳು
ಗುಣಾ ಹೇಳುವೆನು ಸಾರಾ ಸಾರಾ
ಪೃಥ್ವಿ ತತ್ವದಲ್ಲೆ ಶಬ್ದ, ಸ್ಪರ್ಶ, ರೂಪಗಳು,
ರಸಾ, ಗಂಧಾ, ಐದ ಇವ ಪೂರಾ ಪೂರಾ
ಅಪ್ ತತ್ವದಲ್ಲೆ ಶಬ್ದ, ಸ್ಪರ್ಶ, ರೂಪಗಳು
ರಸಾ ನಾಲ್ಕು ಗುಣಾ ಆಧಾರಾ ಆಧಾರಾ
ಇದರ ಹಾಂಗ ಇನ್ನ ಪಿಂಡ ಉತ್ಪತ್ತಿ
ಚಿತ್ತಗೊಟ್ಟ ಕೇಳರಿ ಸ್ಥಿರಾ ಸ್ಥಿರಾ
ಶ್ವೇತ ವರ್ಣ ಇರುವುದು ಆದಿಯಲಿ
ದೇವತೆ ವಿಷ್ಣು ನಿಂತಾನ ಧೀರಾ
ಅಗ್ನಿ ತತ್ವದಲ್ಲೇ ಶಬ್ದ-ಸ್ಪರ್ಶ-ರೂಪಗಳು
ಮೂರು ಗುಣಾ ಇರುವದು ಕೇಳ ಕವೀಶ್ವರಾ
ಉಷ್ಣಾ ಧರ್ಮ ಅಗ್ನಿ ತತ್ವದಲ್ಲೇ ಇವು

ಉಂಟ ಪಚನ ಕರ್ಮಾಶಾಸ್ತ್ರದ ಆಧಾರಾ
ಅಗ್ನಿ ಬಣ್ಣ ಅತಿ ಕೆಂಪ ಇರುವುದು
ರುದ್ರ ದೇವತಾ ಕೇಳ ಬ್ಯಾಗ,
ಒಂದು ದಿವಸ ಕೈಲಾಸದಲ್ಲಿ ಶಿವ
ಶಕ್ತಿ ಕೂತಿದ್ರ ಆನಂದದೊಳಗ॥೨॥

ವಾಯು ತತ್ವದಲ್ಲೆ ಶಬ್ದ ಸ್ಪರ್ಶ ಎರಡಗುಣಾ
ಇರುದು ಕೇಳರಿ ಶಾಶ್ವತಾ
ಚರಿಸುವ ಬ್ರಹ್ಮ ವಾಹನಾದಿ ಕರ್ಮಾ
ಬುದ್ಧಿವಂತಗಾದೀತ ಅರ್ಥಾ ಅರ್ಥಾ
ರೀತಿ ವರ್ಣ ಆದಿ ದೇವತೆ ಈಶ್ವರಾ
ವಾಯು ತತ್ವ ಕರಮನ ಖಚಿತಾ
ಆಕಾಶ ತಾತ್ವಿಕ ಶಬ್ದ ಒಂದ ಗುಣಾ
ಬೈಲ ಧರ್ಮ ಇವ ನಿಶ್ಚಿತಾ
ಕೃಷ್ಣವರ್ಣ ಆಕಾಶಕ ಆದಿ ದೇವ
ತಾನೇ ತಾನು ಉಮಾಕಾಂತಾ
ಇನ್ನ ಜಗದ ಉತ್ಪತ್ತಿ ಕೇಳರೀ
ಮೂಲ ಹಿಡದ ಹೇಳುವೆ ಶಿಸ್ತಾ ಶಿಸ್ತಾ
ಆಪಾ, ತೇಜ, ವಾಯು, ಆಕಾಶ, ಪೃಥ್ವಿ,
ಸೂರ್ಯ, ಚಂದ್ರ, ಆತ್ಮದ ಮಾತಾ
ಅಷ್ಟವರ್ಣ ಇವು ಶಿವನ ಅಷ್ಟತನಗಳು
ಮೊದಲು ಹಿಂಗ ತಾ ನಿರ್ಮಿಸುತಾ
ಇದರ ಹಾಂಗ ಇನ್ನ ಪಿಂಡ ಉತ್ಪತ್ತಿ
ಚಿತ್ತಗೊಟ್ಟ ಕೇಳರಿ ಸ್ವಸ್ಥಾ.
ಅಸ್ತಿ, ಮಾಂಸ, ಚರ್ಮಾ, ನರಾ, ರೋಮಾ
ಐದು ಪೃಥ್ವಿ ತತ್ವದಿಂದ ಉತ್ಪನ್ನಾ
ಬ್ಯಾರೆ ಪಂಚ ತತ್ವದ ಉತ್ಪತ್ತಿ
ಕೂತ ಕೇಳರಿ ಸಭೇದಾಗ ಸರ್ವರಾ,
ಒಂದು ದಿವಸ ಕೈಲಾಸದಲ್ಲಿ ಶಿವ
ಶಕ್ತಿ ಕೂತಿದ್ರ ಆನಂದದೊಳಗ

ಶ್ಲೇಷ್ಮಾ, ಮೂತ್ರಾ, ಪಿತ್ತ, ಶುಕ್ಲ, ರಕ್ತಾ
ಐದು ಆಪ್ ತತ್ವದಿಂದ ಉತ್ಪನ್ನಾ
ಹಸಿವು, ನೀರಡಿಕಿ, ನಿದ್ರಿ, ಆಲಸ್ಯ, ಕಾಮಾ,
ಐದು ಅಗ್ನಿಯಿಂದ ರಚನಾ ರಚನಾ
ಪರಿವ, ಪಾರುವ, ಸುಳುವ, ಕೂಡುವ, ಅಗಲುವ

ಐದು ವಾಯುವಿನ ಗುಣಾ ಗುಣಾ
ರಾಗ, ದ್ವೇಷ, ಭಯಾ, ಲಜ್ಜಾ, ಮೋಹ
ಐದು ಆಕಾಶದಿಂದ ನಿರ್ಮಾಣಾ ನಿರ್ಮಾಣಾ
ಪಂಚ ತತ್ವದಿಂದ ಪಂಚವೀಸ ಗುಣಗಳು
ಛಿದ್ರ ಮಾಡಿ ಹೇಳಿದೆ ನಾನಾ ನಾನಾ
ಇದರ ಹಾಂಗ ಇನ್ನ ಪಂಚ ತತ್ವದಾದಿ
ಭೇದ ಗುಣಾ ಕೇಳರಿ ಖೂನಾ ಖೂನಾ
ಪೃಥ್ವಿಗೆ ಇಪ್ಪತ್ತೈದು ಗುಣಗಳು
ಅಪ್‌ರಿಗೆ ಇಪ್ಪತ್ ಕೇಳ ನೀನಾ ನೀನಾ
ಅಗ್ನಿಗೆ ಹದಿನೈದು ವಾಯುಕ ಹತ್ತಾ
ಆಕಾಶಕ ಐದು ಪ್ರಮಾಣಾ
ಒಟ್ಟಿಗೆ ಇಪ್ಪತ್ತೈದ ಗುಣಗಳು
ಪಿಂಡ ಬ್ರಹ್ಮಾಂಡದಿದ ನಿರ್ಮಾಣಾ
ಪಂಚಭೂತದ ಪ್ರಕೃತಿ ಕೇಳ ಪಾರ್ವತಿ
ಮಾಡಬ್ಯಾಡ ನೀನು ಅನುಮಾನಾ
ಪಂಚತತ್ವ ಒಂದಕ್ಕೊಂದ ತೊಡಕ ಬಿದ್ದ
ಮಂದ ಆಗುವ ಪಿಂಡದ ರಚನಾ
ಇದರ ಹಾಂಗ ಇನ್ನ ಪಂಚ ತತ್ವದಲ್ಲೆ
ಪಂಚ ಪ್ರಾಣ ಹೇಳುವೆ ಮುನ್ನಾ
ಪೃಥ್ವಿ ತತ್ವದಲ್ಲೆ ಪ್ರಾಣ ವಾಯು ಅದಾ
ಅಪ್ ತತ್ವದಲ್ಲೆ ಅಪಾನಾ
ಅಗ್ನಿ ತತ್ವದಲ್ಲೆ ವ್ಯಾನ ವಾಯು ಅದಾ
ಪಂಚ ಪ್ರಾಣ ನಿರ್ಮಾಣ ಹಿಂಗಾ
ಒಂದು ದಿವಸ ಕೈಲಾಸದಲ್ಲಿ ಶಿವ
ಶಕ್ತಿ ಕೂತಿದ್ರ ಆನಂದದೊಳಗ||ಳ||

ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯ
ದಶ ಇಂದ್ರಿಯ ಇರುವದು ಒಟ್ಟಾ
ಜ್ಞಾನದ ಇಂದ್ರಿಯಗಳ ಛಿದ್ರ ಹೇಳತೇನ
ಬ್ಯಾರೆ ಬ್ಯಾರೆ ಹಾಸಲ ಫೂಟಾ
ಕಿವಿ, ತ್ವಚಾ, ಕಣ್ಣ, ನಾಲಿಗಿ, ಘ್ರಾಣಾ
ಐದ ಜ್ಞಾನ ಇಂದ್ರಿಯ ಗುಟ್ಟಾ
ಕರ್ಣೇಂದ್ರಿಯಕ್ಕೆ ಭೂತ, ಆಕಾಶ
ಆದಿ ದೇವತಿಯ ಚೆಲ್ಲಾಟಾ
ಶಬ್ದ ವಿಷಯ ಅಕ್ಷರ ಅನಾಕ್ಷರ
ಎರಡ ಭೇದ ಇರುದು ಸ್ಪಷ್ಟಾ

ತ್ವಚೇಂದ್ರಿಯಕ್ಕೆ ವಾಯು ಭೂತಾತ್ಮ
ಚಂದ್ರನಾದಿ ದೈವತದಾಟಾ
ಸ್ಪರ್ಶದ ವಿಷಯ ಶೀತ, ಉಷ್ಣ, ಮೃದು
ಕಠಿಣ ಐದು ಭೇದ ತಿಳೀರಿಷ್ಟಾ
ನೇತ್ರ ವಿಷಯಕ್ಕ ಅಗ್ನಿ ಭೂತಾತ್ಮಾ
ಸೂರ್ಯ ದೈವತದಾಟಾ ಅಟಾ
ರೂಪ ವಿಷಯಕ್ಕೆ ಈ ನೇತ್ರ ಇಂದ್ರಿಯಕೆ
ಕೂತ ಕೇಳರಿ ಚಿತ್ತಿಟ್ಟಾ ಚಿತ್ತಿಟ್ಟಾ
ಜಿಹ್ವಾ ಇಂದ್ರಿಯಕೆ ಅಪ್‌ಭೂತ ಅಲ್ಲಿ
ವರುಣ ದೈತ್ಯನ ಉದ್ಭಾಟಾ ಉದ್ಭಾಟಾ
ರಸದ ವಿಷಯ ಈ ಜಿಂವ ಇಂದ್ರಿಯಕೆ
ಕೂತ ಕೇಳರಿ ಚಿತ್ತಿಟ್ಟಾ ಚಿತ್ತಿಟ್ಟಾ
ಸಾರ ವೇದಾಂತ ಛಿದ್ರ ಹೇಳತೇನ
ಸುಳ್ಳ ಅನ್ನಾವನ ಬಾಯಾಗ ಗೊರಟಾ
ಮಧುರ, ಆಮ್ಲ, ಖಾರ, ವಗುರು, ಕಹಿ
ಲವಣ, ಆರು ಭೇದ ಹುಟ್ಟು ತಾ
ಘ್ರಾಣ ಇಂದ್ರಿಯಗೆ ಪೃಥ್ವಿ ಭೂತ
ಅಶ್ವಿನಿ ದೈವತನ ಉದ್ಭಾಟಾ
ಗಂಧ ವಿಷಯ ಸುಗಂಧ ದುರ್ಗಂಧಾ
ಪಂಚ ಜ್ಞಾನೇಂದ್ರಿಯ ತಿಳಿರಿ ಹಿಂಗ
ಒಂದು ದಿವಸ ಕೈಲಾಸದಲ್ಲಿ ಶಿವ
ಶಕ್ತಿ ಕೂತಿದ್ರ ಆನಂದದೊಳಗ

ಪಂಚ ಕರ್ಮೇಂದ್ರಿಯ ಬಿಚ್ಚಿ ಹೇಳತೇನ
ಮುಚ್ಚಿದ ಮಾತ ಇವ ತಗಿಬಾರದು
ತಗಿಯದಿದ್ದರ ಉಳಿದ ಜನರಿಗೆಲ್ಲಾ
ಒಳಗಿನ ಭೇದ ಹ್ಯಾಂಗ ತಿಳಿಯುವದು
ವಾಕ್, ಪಾಣಿ, ಪಾದ, ಗುದಾ, ಗುಹ್ಯಾ
ಇಂದ್ರಿಯ ಹೊರ್ತೇನ ಇಲ್ಲ ಹೆಚ್ಚಿಂದು
ವಾಕಾ ಇಂದ್ರಿಯಕೆ ನಾಗ ವಾಯು
ಸರಸ್ವತಿ ದೈವತಾ ಇರುವುದು
ಸುವಾಕ್ಯ ದುರ್ವಾಕ್ಯ ಈ ಎರಡು ಪ್ರಕಾರ
ಇರುವುದು ಅದರ ವಿಷಯವದು
ಕೈ ಇಂದ್ರಿಯಕೆ ಕೂರ್ಮ ವಾಯು
ಇಂದ್ರನಾದಿ ದೈವತಾ ಪ್ರಸಿದ್ಧಾ
ಆದಾನ ಪ್ರದಾನ ಎರಡು ವಿಷಯ ಅಲ್ಲೇ

ಪಾದೇಂದ್ರಿಯ ಕೇಳ ಮುಂದಿನದು
ಕ್ರುಸುರ ವಾಯು ವಿಷ್ಣು ದೈವತಾ ಅಲ್ಲೆ
ಗಮನಾಗಮನ ಹೋಗ ಬರವುವದು
ಪಾಯವೀಂದ್ರಯಕೆ ದೇವದತ್ತವಾಯು
ಮೃತ್ಯು ದೈವತಾ ಹೆಚ್ಚಿಂದು
ಸರ್ಜನಾ ವಿಸರ್ಜನಾ ಈ ಎರಡು
ಪ್ರಕಾರ ಇರುವುದು ವಿಷಯದ್ದು
ಗುಹ್ಯೇಂದ್ರಿಯಕೆ ಧನಂಜಯ ವಾಯು
ಬ್ರಹ್ಮನಾದಿ ದೈವತಾ ಕೇಳ ಒಂದೊಂದು
ಆನಂದ ಆನಾನಂದ ಈ ಎರಡು
ಪ್ರಕಾರ ಇರುವುದು ವಿಷಯದು
ದಶವಾಯುಗಳ ಸ್ಥಾನ ಹೇಳತೇನ
ಇನ್ನೊಂದು ಹಾಡಿಗೆ ನಾ ತೆರೆದು
ಕವಿತ್ವದಲ್ಲಿ ಬುದ್ಧಿ ಕೊಟ್ಟ ಅಣ್ಣಾರಾವಜಿ
ಶಿಷ್ಯಾಗ ತಿಳಿಸ್ಯಾನ ಕವಿ ಬಾಳಗೋಪಾಳಗೆ.

***ರಚನೆ :*** ಬಾಳಗೋಪಾಳ
***ಕೃತಿ :*** ಬಾಳಗೋಪಾಳನ ಲಾವಣಿಗಳು

## ೯. ಪಿಂಡೋತ್ಪತ್ತಿ

ಆದಿ ಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ವಿನಂತಿ
ಬಿಂದು ಕೂಡಿ ಪಿಂಡಾಗಿ ದೇಹದಲ್ಲಿ
ಹ್ಯಾಂಗ ಆಗತತಿ ಉತ್ಪತ್ತಿ ?

ಸಪ್ತಪಾತಾಳನೆಲ್ಲಾ ಸೂತ್ರದಿಂದ
ನಡಿಸಿದ ಆಟಾ ನಡಿಸಿದ ಆಟಾ
ಸ್ಥಾವರ ಜಂಗಮ ಕ್ರಿಮಿ ಕೀಟಕಾ
ಸಲವಿದಿರಿ ಆಹಾರವಿಟ್ಟಾ
ಪಾರ್ವತಿ ಮಾತಿಗೆ ಭೋಳ್ಯಾ ಶಂಕರ
ಮೆಚ್ಚಿ ಹೇಳಿದ ಪಿಂಡದ ಗುಟ್ಟಾ
ಸ್ತ್ರೀಯರ ಮುಟ್ಟಾದ ಚವತಾದಿವಸ
ಕಮಲ ಅರಳಿ ಇರುವದು ಘೂಟಾ
ಸತಿಪತಿ ಏಕಾಂತ ಕೂಡಿದರ
ರಾತ್ರಿ ವ್ಯಾಳೆದಲ್ಲಿ ಆ ಮೆಟ್ಟಾ

ಪುರುಷನ ಬಿಂದು ಬ್ರಹ್ಮ ಸ್ಥಾನದಿಂದ
ಕಮಲದೊಳಗೆ ಇಳಿವೋದು ನೇಟಾ
ಮೊದಲ ತಿಂಗಳಿಗೆ ಕಮಲದ ಒಳಗ
ಬಿಂದು ತುಂಬಿ ಇರುವುದು ಅಷ್ಟಾ
ಎರಡನೆ ತಿಂಗಳಿಗೆ ನೀರ ಆಗಿ ಅದ
ರಸಾ ಕೂಡಿ ಆಗುದು ಒಟ್ಟಾ
ಮೂರ ತಿಂಗಳಿಗೆ ಆಗುದು ರಕ್ತಾ
ನಾಲ್ಕನೆಯ ತಿಂಗಳಿಗೆ ಕೈಕಾಲ ಆಕಾರ ಹುಟ್ಟುತಾ
ಐದನೆಯ ತಿಂಗಳಿಗೆ ತೇಜ ಆಗುವದು ಪ್ರಖ್ಯಾತಾ
ಆರನೆಯ ತಿಂಗಳಿಗೆ ಪಂಚ ತತ್ವ ನಿಶ್ಚಿತಾ
ಏಳನೆಯ ತಿಂಗಳಿಗೆ ಸಪ್ತ ಧಾತು ಪ್ರಖ್ಯಾತಾ
ಎಂಟನೆಯ ತಿಂಗಳಿಗೆ ಅಷ್ಟಾಂಗ ವಿಪರಿತಾ

**||ಏರು||**

ಒಂಬತ್ತನೆ ತಿಂಗಳಿಗೆ ಉಗರ ರೋಮಗಳ
ಸರುವ ಶರೀರ ಆದೀತ ಶಿಸ್ತ
ಆದಿಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ವಿನಂತಿ ||೧ನೆಯ ಚೌಕ||

ನವಮಾಸ ನವದಿವಸ ತುಂಬುತಲೆ
ಧರಣಿ ಮ್ಯಾಗ ಬಿದ್ದಿತ ಕೂಸಾ
ತಾಯಿ ಉದರದಲ್ಲೆ ಮೋಹ ಚಕ್ರದಿಂದ
ಮಲಿಗೆ ಹಾಲ ಹೊಂಟೀತ ರಸಾ
ಸವ್ವಾ ಮಳಾ ಅಸ್ತಿ ಮಸ್ತಕ ಸುತ್ತಾ
ಪ್ರಮಾಣಕ ಇರುವುದು ರಾಸಾ
ಪಿಂಡದೊಳಗ ಅಳತಿ ಕೇಳರಿ
ಚಿತ್ತ ಇಟ್ಟ ನೀ ಸಾವಕಾಶಾ
ನಾದ ಬಿಂದು ಅಸ್ತಿ ತಂದೀ ಅಂಶದಿಂದ
ಹುಟ್ಟತಾವ ಕೇಳರಿ ಸರಸಾ
ತಾಯಿಯಿಂದ ಹುಟ್ಟುದು ಕೇಳರಿ
ಅಂಶ ರಕ್ತ ನಾಡಿ ಮಾಂಸಾ
ಕರ್ಣದಲ್ಲಿ ನಾಕ ಅಸ್ತಿ ಮೂಗಿನಲ್ಲಿ
ಮೂರ ಅಸ್ತಿ ಇರತಾವ ಖಾಸಾ
ಬಾಯಿ ಒಳಗಿನ ಅಸ್ತಿ ಕೇಳರಿ
ಶಾಸ್ತ್ರದಿಂದ ಅವ ಬತ್ತೀಸಾ

ಎರಡ ಅಸ್ತಿ ಇರತಾವ ಈ ತುಟಿಯಲ್ಲಿ
ಹದಿನೆಂಟ ಕಂಠಸ್ಥಾನ ಗರ್ಭದಲ್ಲಿ
ನೀವ ಕೇಳರಿ ಇನ್ನ ಮ್ಯಾಲಿ
ನಾಲವತ್ತೆರಡ ಎಲವ ಈ ಕರದಲ್ಲಿ
ಎರಡು ಮಗ್ಗಲಿಗೆ ಹದಿನಾರ ಕೀಲಿ
ಜೋಡಿಸಿ ಇಟ್ಟಂಗ ಬಂದೊ ಬಸ್ತಿ

||ಏರು||

ಇಪ್ಪತ್ತೆಂಟ ಎಲವ ಎದಿಯಲಿ
ಇರತಾವ ಹೇಳತಿನ ಕೇಳರಿ ಗಣತಿ
ಆದಿ ಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ವಿನಂತಿ||೨ನೆಯ ..||

ಪಶ್ಚಿಮ ದ್ವಾರಕ ಛಪ್ಪನ್ನ ಆಸ್ತಿ
ಇರತಾವ ಕೇಳರಿ ಸುಳ್ಳಲ್ಲಾ
ಅಠೆಚಾಳಿಸ ಈ ಚರಣಕ ಇರತಾವ
ಗರ್ಭ ಕಾಂಡದೊಳಗಿನ ಕುಶಲಾ
ಮುಖದ ಒಳಗ ಹದಿನಾರ ಅಸ್ತಿಗಳು
ಹೊಟ್ಟಿ ಒಳಗ ಇಪ್ಪತ್ತ ಕೀಲಾ
ವಿಶುದ್ಧ ಸ್ಥಾನಕ ಹದಿನೆಂಟ ಇರತಾವ
ಲೆಕ್ಕ ಮಾಡಿಕೋರಿ ಇನ್ನ ಮ್ಯಾಲಾ
ದ್ವಿದಳಕ ಹದಿಮೂರು ಅಸ್ತಿಗಳು
ಕೂತ ಕೇಳರಿ ದೈವ ಎಲ್ಲಾ
ಹದಿನಾರ ಸಂದಿ ದೇಹದ ಒಳಗ
ಇದರ ಅರ್ಥ ಪಂಡಿತ ಬಲ್ಲಾ
ಚವದಾ ಚಕ್ರ ಹಿಡದ ಬ್ರಹ್ಮ ಪೂಜಿ
ಅಲ್ಲೆ ನಡೆಯತದ ರಾತ್ರಿ ಹಗಲಾ
ಎಪ್ಪತ್ತೆರಡ ಕೋಟಿ ಜಪಾ ಆಗತಾವ
ಕೇಳಿರಿ ಬ್ರಹ್ಮ ರಂಧ್ರದ ಮ್ಯಾಲಾ

ಕೇಳ ತಮ್ಮಾ ಒಂಭತ್ತು ನವದ್ವಾರಾ
ಹತ್ತನದು ನಾಭಿ ಕಮಲ ತಿಳಿ ಶಾಯಿರಾ
ಶಾಸ್ತ್ರದಿಂದ ನೋಡ ಆಧಾರಾ
ಇನ್ನ ನಾಡೀದ ಕೇಳರಿ ಆಕಾರಾ

ನೆತ್ತಿ ಒಳಗ ಇರತಾವ ಮೂರಾ
ಅದಕ ಪುಟ ಒಡದಾವ ಎಪ್ಪತ್ತೆರಡ ಸಾವಿರಾ

||ಏರು||

ಮುನ್ನೂರಾ ಅರವತ್ತ ಹುರಿಗಳ ಬಿಗದ
ಬ್ರಹ್ಮ ಸ್ಥಾನಕ ಕಟ್ಟೇದ ಅಳತಿ
ಆದಿ ಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ವಿನಂತಿ||೩ನೆಯ ಚೌಕ||

ಅಂದ ಸ್ವಾದ ನೇತ್ರ ಪುರಿ ಅನ್ನುಹಂತಾ
ವಿಶುದ್ಧಿದಳಾ ತುಂಬಿ ಲಕ್ಷಣಕ
ಅವಟ ಪೀಠ ಗೋಲಾಟ ಸರಾಳ
ತ್ರಿಕೂಟಕ ಆ ರುದ್ರ ಘನವಾಟಕ
ಸಹಸ್ರದಳ ಇದರಂತೆ ತುಂಬಿಕ್ಯಾರಿ
ಕಾವಲ ಇಟ್ಟಾವ ನೇಮಕ ನಕ್ಕಿ
ಕರ್‍ರಗ ಕೆಂಪಗ ಕುಂಟ ಕುರುಡಾ
ಹುಟ್ಟುದು ಕೇಳರಿ ಕೌತುಕಾ
ಸತ್ಯ ವಚನ ಸಂಭೋಗ ಕೊಟ್ಟರ
ಕೆಂಪ ಪಿಂಡ ಆಗುದು ಲೆಕ್ಕಾ
ತಮೋಗುಣಹಂಕಾರ ಸಂಭೋಗ
ಕೊಟ್ಟರ ಕರ್‍ರಗ ಹುಟ್ಟುದು ಪಿಂಡಕ
ರಜೋಗುಣದಿಂದ ಕ್ರೀಡಾ ನಾಡಿದರ
ಸಾವಗರದ ಹುಟ್ಟುದು ಠೀಕಾ
ಮನಸ ಚಂಚಳಾ ಭೋಗ ಕೊಟ್ಟರ
ಹುಚ್ಚ ಮಳ್ಳ ಕೂಡಿತ ಅದಕಾ
ಪುರುಷನ ಬಿಂದು ಎರಡ ಪಾಲಾಗಿ
ಸ್ತ್ರೀಯರ ಬಿಂದು ಒಂದ ಪಾಲ ಅದರ
ಅಲ್ಲಿ ಗಂಡ ಹುಟ್ಟೀತ ಫಲಾ
ತಿಳಿ ಶ್ಯಾಯಿರಾ ಸುಳ್ಳಲ್ಲಾ
ಸ್ತ್ರೀಯರ ಬಿಂದು ಎರಡ ಪಾಲಾ
ಪುರುಷನ ಬಿಂದು ಒಂದ ಪಾಲಾ
ಅಲ್ಲಿ ಹೆಣ್ಣ ಹುಟ್ಟೀತ ಧರಿ ಮ್ಯಾಲಾ
ಸತಿಪತಿ ಬಿಂದು ಸಮಾನ ಆದ ಮ್ಯಾಲಾ

ನಪುಂಸಕ ಹುಟ್ಟಿತ ಸುಳ್ಳಲ್ಲಾ
ಗರ್ಭ ಕಾಂಡ ನೋಡಿದವನೇ ಬಲ್ಲಾ

**||ಏರು||**

ಸಂಗ ಆಗಿ ಅಂಗಾತ ಮಲಗಿದರ
ಅವಳಿ ಜವಳಿ ಹುಟ್ಟುದು ನಿಶ್ಚಿತಿ
ಆದಿ ಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ವಿನಂತಿ||ಳನೆಯ ಚೌಕ||

ಕಣ್ಣ ಮುಚ್ಚಿ ಸ್ತ್ರೀಸಂಗ ಮಾಡಿದರ
ಕುರುಡ ಪಿಂಡ ಇರುವುದು ಒಳಗ
ನಿದ್ದಿಗಣ್ಣಿನ್ಯಾಗ ಭೋಗ ಕೊಟ್ಟರ
ಕಿವುಡ ಆಗಿ ಬರುವದು ಬ್ಯಾಗ
ಗರ್ಭ ಕಾಲಕ ಮನಿ ಮನಿ ತಿರಗಿದರ
ಹೆಳವ ಆಗಿ ಬರುವದು ಹಿಂಗ
ಮುಟ್ಟಾದ ಕಾಲಕ ಪಿಂಡ ನಿಂತರ
ಗಿರಣಿ ಹತ್ತೂದು ದೇಹದ ಒಳಗ
ಮೊದಲ ತಾಸಿನ್ಯಾಗ ಪಿಂಡ ನಿಂತರ
ಸವ್ವಾ ನೂರು ವರುಷ ಆಯುಷ್ಯಾ ಅವಗ.
ಎರಡನಯ ತಾಸಿಗೆ ನೂರ ವರುಷಾ
ಮೂರನೆಯ ತಾಸಿಗೆ ತೊಂಬತ್ತಾ
ನಾಲ್ಕನೆಯ ತಾಸಿಗೆ ಎಂಬತ್ತಾ
ಐದನೆಯ ತಾಸಿಗೆ ಎಪ್ಪತ್ತ ತಿಳಿರಿ ಹಿಂಗ
ಆರನೆಯ ತಾಸಿಗೆ ಅರವತ್ತಾ
ಏಳನೆಯ ತಾಸಿಗೆ ಐವತ್ತ ವರುಷಾ
ಎಂಟನೆಯ ತಾಸಿಗೆ ನಾಲ್ವತ್ತು ವರುಷಾ
ಒಂಬತ್ತನೆಯ ತಾಸಿಗೆ ಮೂವತ್ತು ವರುಷಾ
ಹತ್ತನೆಯ ತಾಸಿಗೆ ಇಪ್ಪತ್ತು ವರುಷಾ
ಹನ್ನೊಂದ ತಾಸಿಗೆ ಹತ್ತು ವರುಷಾ
ಹನ್ನೆರಡನೆಯ ತಾಸಿಗೆ ಹುಟ್ಟುತ್ತಲೇ ಸಾವಾ
ಗರ್ಭ ಕಾಂಡದೊಳಗಿಂದ ತಗದ ರಸಾ.

**||ಏರು||**

ಪ್ರತಿಪದಾ ದಿವಸ ಪಿಂಡ ನಿಂತರ
ಪಂಡಿತ ಹುಟ್ಯಾನ ಖಚಿತಿ

ಆದಿ ಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ಏನಂತಿ ||೫ನೆಯ ಚೌಕ||

ದ್ವಿತೀಯಾ ದಿವಸ ಪಿಂಡಾ ನಿಂತರ
ಬುದ್ಧಿಶೀಲ ಹುಟ್ಯಾನ ಪುತ್ರಾ
ತೃತೀಯಾ ದಿವಸ ಗರ್ಭ ನಿಂತರ
ತುಡಗ ಆಗಿ ಹುಟ್ಟಿದ ಪೂರಾ
ಚವತಿ ದಿವಸಕ ನಿಂತ ಪಿಂಡಕ
ಮಂದ ಹುಟ್ಟ ತಾನ ಹಂಕಾರಾ
ಪಂಚಮಿ ದಿವಸ ನಿಂತ ಪಿಂಡ ತಾ
ಮುಂದ ಹುಟ್ಟಿ ಮಾಡ್ಯಾನ ಪರೋಪಕಾರಾ
ಷಷ್ಠಿ ದಿವಸ ಪಿಂಡ ನಿಂತರ
ಸತ್ವದಲಿ ಆದಾನ ಧೀರಾ ಗಂಭೀರಾ
ಸಪ್ತಮಿ ದಿವಸ ನಿಂತ ಪಿಂಡ
ಮುಂದೆ ಬಿಕ್ಕೆ ಬೇಡುದು ಕರಾರಾ
ಅಷ್ಟಮಿಗೆ ದರಿದ್ರ ನವಮಿಗೆ ಭೋಳ್ಯಾ
ಹುಟ್ಯಾನ ತಿಳಿ ಶ್ಯಾಯೀರಾ ಹಿಂಗಾ
ದಶಮಿ ದಿವಸ ಪಿಂಡ ನಿಂತರ
ಭಕ್ತಿವಾನ ಆದಾನ ಚೋರಾ
ಏಕಾದಶಿ ಪಿಂಡ ಆದಾನ ಗುಣವಾನಾ
ದ್ವಾದಸಿ ಚತುರ ಜ್ಞಾನಾ ಸುಜ್ಞಾನಾ
ತ್ರಯೋದಶಿ ಸೂರ ಮರ್ಧನಾ
ಚತುರ್ದಶಿ ಜಗಮೈತ್ರವನಾ
ಹುಣವಿ ಅಮವಾಸಿ ನಿಂತರ ಶೂರತನಾ
ಕವಿ ಲಾಫದಿ ತಿಳಿರಿನ್ನಾ ಪೂರಾ
ವಸ್ತಾದ ರಾವಜಿ ದೊರತಾನ ರತ್ನಾ
ಈ ಹಾಡಿನ ಮ್ಯಾಲಿಂದ ನಿವಾಳಸಿ
ಒಗಿಯಬೇಕ ನೂರ ಹಾಡುಗೊಳನಾ.

**||ಏರು||**

ಬಾಳ ಗೋಪಾಳ ಬಾಗೇವಾಡಿಯಲ್ಲಿ
ಜ್ಞಾನ ತುಂಬಿ ಆಗೇತಿ ಚಡತಿ
ಆದಿ ಶಕ್ತಿ ಪಾರ್ವತಿ ಸಾಂಬಗ
ಮಾಡಿ ಕೇಳತಾಳ ವಿನಂತಿ ||೬ನೆಯ ಚೌಕ||

***ರಚನೆ :*** ಬಾಳಗೋಪಾಳ

***ಕೃತಿ :*** ಬಾಳಗೋಪಾಳನ ಲಾವಣಿಗಳು

# ೧೦. ಶಿಬಿ ಚಕ್ರವರ್ತಿ-೧

ಶಿಬಿ ಚಕ್ರವರ್ತಿ ಮಹಾರಾಜ ಇದ್ದ ಕೇಳರಿ ಇದನು
ಹಿಡದ ಪಂಥ ಬಿಡದೆ ನಡೆಸಿದ ತಾನು ।
ಪುಣ್ಯಶಾಲಿ ತೋರಿಸಿದ ಮಹಿಮವನು ।
ಇಂದ್ರ ಅಗ್ನಿ ಅತಿ ವೇಗದಿ ಬಂದರು
ನೋಡಲಿಕ್ಕೆ ಇವನ ಮನಸನ್ನು ಮಾಡಿ ಮಾಯವನು ॥

ಇಂದ್ರ ಬಂದು ತಾ ಗಿಡಗನಾದನು
ಅಗ್ನಿ ಪಕ್ಷಿ ಆದಾನಣ್ಣ । ಹಿಂಗ ಮಾಡಿಕೊಂಡರಾಗ
ಇಬ್ಬರು ಪಣಾ ।
ಗಿಡಗಾಗಿ ಇಂದ್ರ ಹತ್ತಿದ ಬೆನ್ನಾ
ಅಗ್ನಿ ಹೋಗಿ ಶಿಬಿ ಚಕ್ರವರ್ತಿಗ್ಹೇಳತೈತಿ
ಕಾಯೋ ಇಂದ ಎನ್ನ ಪ್ರಣಾ ಬಂದಿತೋ ಮರಣ ।
ಶಿಬಿ ಚಕ್ರವರ್ತಿ ಪಕ್ಷಿಗ್ಹೇಳತಾನ
ಚಿಂತಿ ಮಾಡಬ್ಯಾಡ ಏನೇನಾ
ಅಂತ ಅಭಯ ತೋರಿಸಿ ಕೊಟ್ಟಾನೋ ವಚನಾ ।
ಪಕ್ಷಿ ಹರುಷವಾಗಿ ಕೂತಿತೋ ಸುಮ್ಮನಾ
ಅಷ್ಟರೊಳಗ ತಾ ಗರುಡ ಬಂದು
ಶಿಬಿ ಚಕ್ರವರ್ತಿಗೆ ಹೇಳಿತೋ ಕಥನಾ ಆದ ವರ್ತಮಾನಾ
ಇಂದಿನ ದಿನದಲ್ಲಿ ನಿರಂಕಾರ ಎಲ್ಲಿ ನನಗೆ ಸಿಕ್ಕಿಲ್ಲೊ ಅನ್ನಾ ।
ಹಿಡದ ತಿನಬೇಕಂತ ಈ ಪಕ್ಷಿಯನಾ
ಬೆನ್ನ ಹತ್ತಿ ಬಂದೆ ಆತೋ ಮಧ್ಯಾನ್ಹಾ
ಬ್ಯಾಗದಿಂದ ಬಿಟ್ಟ ಬಿಡೋ ಪಕ್ಷಿಯನಾ ।
ಬೆನ್ನಿಗೆ ಹಾಕಿಕೊಂಡಿ ಏನ ಕಾರಣಾ । ಎಲ್ಲಿಯ ಖೂನಾ
ಶಿಬಿ ಚಕ್ರವರ್ತಿ ಹೇಳತಾನ ಗರುಡಗ
ನನ್ನ ಮರಿಯ ಬಿದ್ದಂಥಾ
ವೈರಿಗೆ ಕೊಡುವುದಿಲ್ಲ ಹಿಂಗ ನನ್ನ ಪಂಥಾ
ಪ್ರಾಣ ಕಾಯತೇನಂತ ವಚನ ಕೊಟ್ಟೆ ಕಪೋಗತ
ಬಿಟ್ಟರ್ಹಾನಿಯಾಗುವದು ವೃಥಾ ಸುಳ್ಳ
ಮಾಡಿಕೊಳ್ಳಲಾರೆ ಶಪಥ
ಗರುಡ ಹೇಳತೈತಿ ಕೇಳೋ ರಾಜಾ

ಲಾಲಿಸೋ ನಂದ ಇಂದ ಒಂದ ಮಾತ
ಕೂಳಿಲ್ದ ಸಾಯುವೆನು ವ್ಯರ್ಥ।

**||ಏರು||**

ಚಕ್ರವರ್ತಿ ಗರುಡನಿಗೆ ಹೇಳತಾನ
ಮಾಡಬ್ಯಾಡ ನೀ ಚಿಂತಿಯನು
ಈಗ ತರಿಸಿ ಕೊಡುವೆನು ಆಹಾರವನು
ತೃಪ್ತಿ ಬಿಟ್ಟು ಹೋಗೋ ಹೊಂದಿ ಹರುಷವನು||೧||
ಗರುಡ ಹೇಳತೈತಿ ಕೇಳೋ ರಾಜಾ
ನನ್ನ ಆಶೆ ಇಲ್ಲಾ ಯಾತರ ಮ್ಯಾಗಾ
ಬಹಳ ಲಕ್ಷ ಪಕ್ಷಿ ತಿನ್ನೋದ ಎನಗ।
ಎನ್ನ ಕುಕ್ಷಿಗೊಪ್ಪಿಸೋ ಕಪೋತಾಗ
ಜೀರ್ಣ ಮನಸು ಏನ ಕಾರಣ ಮಾಡತಿ
ಕರುಣ ಇಟ್ಟ ಎನ್ನ ಮ್ಯಾಗ
ಕೊಟ್ಟು ಕಳುವೆನ್ನ ಕೈಯಾಗ
ನುಡಿದ ನುಡಿ ಕೇಳಿ ರಾಜ ಹೇಳತಾನ
ವಚನ ಕೊಟ್ಟು ಇಟ್ಟು ಕೊಂಡವಗ
ಏನಂತ ಕೊಡಲೊ ನಿನ್ನ ಕರದೊಳಗ
ಶಪಥ ಹಾನಿ ಮಾಡಿಕೊಳ್ಳಬೇಕ್ಯಾಂಗ
ಬೆನ್ನಿಲೆ ಬಿದ್ದವರನ್ನ ಪ್ರಾಣಾ ಕಾಯತೇನಂತ
ನನ್ನ ವಾಯಿನಿ ಸುತ್ತ ನಾಡಾಗ।
ಕೊಡಲಾರೆ ನಾ ನಿನಗ
ಇಷ್ಟ ಮಾತ ನಿಷ್ಟುರ ಯಾತಕೋ
ಹಿಡದ ತಿನ್ನ ಬೇಕಿತ್ತು ಹಾದ್ಯಾಗ
ಹೀಂಗಂದ ಶಿಬಿ ಚಕ್ರವರ್ತಿ ಗರುಡಗ
ಗರುಡ ಹೇಳತೈತಿ ಆಗ ಅರಸಗ
ನಿನ್ನ ಮರಿ ಬಂದ ಬೀಳತೈತಿ ಅಂತ
ಗೊತ್ತಾಗಲಿಲ್ಲೊ ಪೂರ್ವದಾಗ ಮಾಡಲಿ ಹ್ಯಾಂಗ

**||ಇಳಿವು||**

ಶಿಬಿ ಚಕ್ರವರ್ತಿ ಗರುಡಗ್ಹೇಳತಾನ
ಪಕ್ಷಿ ಶಾಖ ನನಮುಂದ
ತಗಿಬ್ಯಾಡ ಸುದ್ದಿ ಅದರದ
ಮತ್ತೇನ ನಿನಗ ಆಹಾರ ಬೇಕ

ಕೇಳೊ ಕ್ಷಣದ ಒಳಗ ನಾ ತಂದಾ
ಕೊಡುವೆನು ಬಾಯಿಲಾಡಿದಾ
ರಾಜನ ಮಾತಿಗೆ ನಸುನಕ್ಕು ಗರುಡ ಅಂತೈತಿ
ಎಂಥಾದೋ ಜಿದ್ದಾ ಕೊಡಬಾರದಂತ ಮಾಡಿಸಿ ಸಿದ್ಧಾ।

**||ಏರು||**

ಬೇಡಿದ್ದನ್ನ ಕೊಡುವನೆಂಬುತಿದಿ
ಬಿಟ್ಟೆ ಇನ್ನು ಪಕ್ಷಿಯ ಆಸೆಯನು
ನಿನ್ನ ದೇಹದೊಳಗಿನ ಮಾಂಸವನು
ಕೊಡ ಭಾಗ್ಯ ಭಕ್ಷಿಸಿ ಹೋಗುವೆನು॥೧॥
ಬೇಡಿದ್ದನ್ನ ತಂದು ಕೊಡುವೆನೆಂದಿದ್ದಾ
ಚಕ್ರವರ್ತಿಗೆ ಬಂದೀತ ಗೋಳ
ಗರುಡನಿಗೆ ಕೊಡಬೇಕಾದೀತ ಕೂಳ
ಸಂಕಲ್ಪ ಹಿಡಿಯದೇ ಮನದೊಳ
ಕೊಟ್ಟ ವಚನಕ ಮುಟ್ಟಬೇಕೆಂದು
ಕೊಯ್ದು ಹೊಟ್ಟೆ ಹೊಂಟಾದ ಕರಳು
ಇಟ್ಟಾ ತ್ರಾಸಿನೊಳು
ಪಕ್ಷಿ ಬರೋಬರಿ ತೂಕ ಹಚ್ಚಿದಾನ
ತನ್ನ ದೇಹದ ರಕ್ತ ಕರಣಿಗಳು
ಮತ್ತು ಕಡಿಮೆ ಆದದ್ದ ನೋಡಿ ತೂಕದೊಳು
ಮತ್ತು ಕೊಯ್ದು ಕರಣಿ ಇಟ್ಟ ತ್ರಾಸಿನೊಳು
ಇಷ್ಟ ಕರಣಿ ತಗದ ತ್ರಾಸಿಗೆ ಹಚ್ಚಿದರ
ತೂಕ ಕಡಿಮೆ ಆದಿತ ಬಹಳ ತಪ್ಪಿತ ಮೇಳು।
ಶಿಬಿ ಚಕ್ರವರ್ತಿ ಏಕನಿಷ್ಠೆಯಿಂದ ಖಡ್ಗ
ತಕ್ಕೊಂಡು ತನ್ನ ಕರದೊಳು
ಶಿರ ಹೊಡೆದು ಕೊಂಬುವಂಥ ಸಮಯದೊಳು
ಇಂದ್ರ ಅಗ್ನಿ ಅಳೆದ ಮಾಯಾ ರೂಪಗಳು
ಸಿದ್ಧವಾಗಿ ನಿಜರೂಪ ತೊಟ್ಟು ಅಂದ್ರು
ನಿನ್ನ ಸರಿಯಾರು ಇಲ್ಲ ದಯಾಳು।
ಇಲ್ಲೋ ಕ್ಷಿತಿಜದೊಳು।

**||ಇಳವು||**

ಭಾವ ನೋಡಬೇಕೆಂದು ಬಂದಿದ್ದೆವು ನಾವು ಕೂಡಿ
ಅಗ್ನಿ ಇಂದ್ರರಾ।

ಪುಣ್ಯಶಾಲಿ ಪಂಥದಲಿವರಾ ।
ನಿನ್ನ ಸರಿ ಸತ್ವದಲ್ಲಿ ಯಾರನ್ನ ಕಾಣಿವೊ
ನಿನ್ನಂಗಲ್ಲೋ ಹರಿಶ್ಚಂದ್ರರಾ
ಏಕ ವಚಕ ನೀ ನಿರ್ಧಾರಾ
ಇಂದ್ರ ಅಗ್ನಿ ಇಷ್ಟ ಹೇಳಿ
ಶಿಬಿಗೆ ತಾವು ಸೇರ್ಯಾರೊ ಹೋಗಿ ತಮ್ಮ ಪುರಾ
ಇನ್ನು ಬಿಟ್ಟೆ ಮಸ್ತ ಮಜಕೂರಾ ।
ಹುಚ್ಚ ಕಲ್ಲ ಕವಿ ಮಾಡಿ ಹೇಳತಾನ ನಾಡಿನೊಳಗೆ ಇಲ್ಲಾ
ಯಾವ್ಯಾವನು । ಇವರ ಜೋಡಿ ಕಾಣೆ ಶಾಹೀರನ್ನನನು ।
ಕುಂತಲ್ಲೆ ಕವಿ ಮಾಡಿ ಹಾಡುವನು॥೩॥

***ರಚನೆ :*** ಹುಚ್ಚಕಲ್ಲ ಕವಿ
***ಕೃತಿ :*** ಜಾನಪದ ಝೇಂಕಾರ

## ೧೧. ಶಿಬಿ ಚಕ್ರವರ್ತಿ-೨

**॥ಪಲ್ಲ॥**

ಶಿಬಿ ಚಕ್ರವರ್ತಿ ರಾಜನ ಸತ್ಯಕ ಸರಿ ಇಲ್ಲ ವಚನ ಕಸರ ಇಲ್ಲ ಏನೇನು ।
ಕೊಟ್ಟ ವಚನ ಹಿಂದಕ ತಿರಗಸದವನು ।
ಪರಜನರ ವಿಘ್ನ ಪರಿಹಾರಕನು ॥
ಪರರ ದೆಸೆಯಿಂದ ತನ್ನ ಪ್ರಾಣದಾಶೆ ಬಿಟ್ಟ ತನ್ನ ಶರೀರ ಕೊರೆದು ಕೊಟ್ಟಂಥವನು ।
ಸತ್ಯ ಇಟ್ಟವನು ॥

**ಚೌಕ – ೧**

**॥ನುಡಿ॥**

ಶಿಬಿಚಕ್ರವರ್ತಿರಾಜನ ಸ್ಥಿತಿ ಹೇಳತೀನ ಮತಿವಂತರು ಕೇಳರಿ ಇದನಾ ।
ಶೂರಧೀರ ಗಂಭೀರ ಉದಾರತನಾ ।
ಎಲ್ಲೆಲ್ಲಿ ಹ್ಯಾಗ ಇರಬೇಕ ಹಾಗೇಮನಾ ॥
ಸಜ್ಜನರಲ್ಲಿ ಸತ್ಕೀರ್ತಿ ದುರ್ಜನರಲ್ಲಿ ಅತಿ ಕ್ರೂರತನಾ ।
ದಯಾ ಸಂಪೂರ್ಣಾ॥೧॥

ನಮ್ರುತ್ವ ಅಗದಿ ಕಿಂಕರತ್ವ ಸತಿ ನಡೆಸಬೇಕ ಅವರ ವಚನಾ ।
ತಂದಿ ತಾಯಿ ಸೇವಾದಲ್ಲಿ ಅತಿ ನಿಪುಣಾ ।
ಮುಖದಲ್ಲಿ ಯಾವತ್ತು ಹರಿ ಭಜನಾ ॥

ದಯಾ ಮಾಯಾ ತನ್ಮಯ ಅವನಲ್ಲಿ ದಯದಿಂದ ಪಾಲಿಸಬೇಕ ಪ್ರಜಾಜನಾ ।
ಬಡವ ಬಗ್ಗರನಾ॥೨॥

ರಾಜನಲ್ಲಿ ಸನ್ಮಾನ ರಣಕನಿಂತಲ್ಲಿ ಮಾಡಾವ ಪ್ರಾಣ ತ್ರಣ ಸಮಾನಾ ।
ಧೈರ್ಯದಿಂದ ಜಯಿಸಬೇಕ ರಾಜನಾ ।
ಗಾದಿ ಮೇಲೆ ಕೂತಾಗ ಬಹಳ ಉದಾರತನಾ ।
ಜೋಗಿ ಜಂಗಮ ಬಂದ ಅತಿಥಿ ಅಭ್ಯಾಗತ ಕಂಡ ಕೂಡಲೆ ಮಾಡಬೇಕದಾನಾ ।
ಅವರು ಬೇಡಿದ್ದನ್ನಾ॥೩॥

ಒಂದು ದಿವಸ ಬಂದ ನಾರದ ಎಲ್ಲಾ ನೋಡಿ ಹೋದಾನ ಇದನಾ ।
ಶಿಬಿ ಚಕ್ರವರ್ತಿ ರಾಜ ಎಷ್ಟ ಪುಣ್ಯವಾನಾ ।
ಹರಿ ವತನಾ ಬೇಡಾವ ಇಂದ್ರ ಸದನಾ ॥
ಗಂಟ ಕಳದವರಂಗ ಲಗೂಮಾಡಿ ಓಡಿ ಹೋಗಿ ಇಂದ್ರಗ ಹೇಳಿದಾನ ಏನೇನಾ ।
ಕೇಳ್ರಿ ಅದನಾ॥೪॥

**॥ಚಾಲ॥**

ಭೂಲೋಕದಲ್ಲಿ ಶಿಬಿ ಚಕ್ರವರತಿ-ಪುಣ್ಯೇಕ ಇಲ್ಲ ಅಳತಿ ನೋಡಿ ಬಂದೆ ಕಣಮುಟ್ಟಾ ।
ಎಲ್ಲಾ ರಾಜರ ಒಳಗ ಅವನೆ ಶ್ರೇಷ್ಠಾ॥೧॥

ಹರಿನಾಮ ಯಾಹೊತ್ತು ಮುಖದಲ್ಲಿ-ರಾತ್ರಿ ಹಗಲಿ-ಭಜನಿ ಮುಖಪಾಟಾ ।
ಹರಿ ಒಲಿಯುದೇನ ಬಿಕ್ಕಟ್ಟಾ॥೨॥

ಹರಿ ಒಲದ ಮೇಲೆ ಬೇಡಾವ ನಿನ್ನ ಸದನ-ಕೊಟ್ಟ ಮೇಲೆ ನೀ ಏನ-
ಮಾಡಾವ ಕಳದ ಗಂಟಾ ।
ನಿರ್ವಾಣ ಇಲ್ದ ಹೋಗಬೇಕಾದಿತ ಹೊಂಟಾ॥೩॥

**॥ಕೂ.ಪ.॥**

ನಿನ್ನ ಮನಸಿಗಿ ಬಂದಾಂಗ ಮಾಡಿಕೊ ನಿನಗ ಬಹಳ ಹೇಳುವದೇನು ।
ನಿನ್ನ ಯುಕ್ತಿಗೆ ಬಂದಾಂಗ ಮಾಡಿಕೊಳ್ಳ ನೀನು ।
ಅದನೆಲ್ಲ ಹೇಳಾಕ ನಮಗ ಕೊಳ್ಯಾಮಿ ಏನು ॥ ಪರರ ॥

**ಚೌಕ – ೨**

**॥ನುಡಿ॥**

ಇಷ್ಟ ಹೇಳಿ ನಾರದ ಹೊಂಟ ಹೋದಾನು ಇಂದ್ರ ಸಿಟ್ಟ ಆದ ತನ್ನ ಮನದಲ್ಲಿ।
ನಾರದ ಹೇಳಿದ ಮಾತ ಎಂದಿಗಿ ಆಗಲಾರ್ದ ಖಾಲಿ।
ಏಕಾ ಏಕೀ ಬಿತ್ತ ನನಗೆ ಎಂಥಾ ಬಲಿ॥
ಅಗ್ನೀನ ಕರದ ಒಂದು ಅಕಲ ಹೇಳತಾನ ಯುಕ್ತಿ ತಗದ ಒಂದು ಕ್ಷಣದಲಿ।
ಹೋಗುನು ಅಲ್ಲಿ॥೧॥

ಅಗ್ನಿ ಅಂತಾನ ನೀ ಪಾರಿವಾಳ ಆಗ ನಾ ಗಿಡಗ ಆಗಿ ನಿನ್ನ ಹಿಂಬಾಲಿ।
ಕೊಂದ ತಿನ್ನುವುದಕ ಬರತೀನ ಹುಡುಕುತಲಿ।
ನೀ ಹೋಗಿ ಕುಂತೀರ ಅರಸನ ತೊಡಿ ಮ್ಯಾಲಿ॥
ಜೀವದಾನ ಕುಡ ಅಂತ ನೀರ ಬಿಡಿಸಿಕೊ ವಚನ ತಗೊ ಅರಸನ ಕೈಯಲಿ।
ಅವನ ಸಭಾದಲಿ॥೨॥

ಅದಃಕ್ಷಣಕ ಇಂದ್ರ ಆದ ಕಪೋತ ಪಕ್ಷಿ ಖೊಟ್ಟಿತನಕಂತೂ ಇಲ್ಲ ಬೆಲಿ।
ಅರಸ ಸಭಾಮಾಡಿ ಕೂತ ಸಮಯದಲಿ।
ಬಂದ ಕೂತೀತ ಅವನ ಹಿಂಭಾಗದಲಿ॥
ಸತ್ಯ ಸಂದನಾ ದಯಾನಂದನಾ ಬಿಡಸ ಬಂಧನಾ ಹೀಗೆ ಅನ್ನುತಲಿ।
ಬೇಡಿ ಕೊಂಬುತಲಿ॥೩॥

ಈಗಿಂದೀಗ ನನ್ನ ಪ್ರಾಣ ಹೋಗುತೈತಿ ದಾರು ಇಲ್ಲ ನನ್ನ ಬೆನ್ನ ಮ್ಯಾಲಿ।
ನಿನ್ನ ಕೀರ್ತಿ ಕೇಳಿ ಬಂದೀನ ನಾ ಇಲ್ಲಿ।
ಹ್ಯಾಂಗರೆಮಾಡಿ ಉಳಸರಿ ನನ್ನ ತೆಲಿ॥
ತಡಿಯು ಹಾಂಗಿಲ್ಲ ಬಂತ ಏನೋ ಅಂತ ಸುತ್ತಮುತ್ತಲೆ ನೋಡುತಲಿ।
ಶೋಕ ಮಾಡುತಲಿ॥೪॥

**॥ಚಾಲ॥**

ಕೇಳಿ ಅರಸಗ ಬಂದಿತ ಕಕಲಾತಿ-ಉಳಸತೀನ ಬಿಡ ನಿನ್ನ ಚಿಂತಿ-
ಹಿಂಗ ಅಂತ ನೀರ ಬಿಟ್ಟಾ।
ಅಭಯದಿಂದ ತಾ ವಚನ ಕೊಟ್ಟಾ॥೧॥

ಇಷ್ಟ ಆಗೂದರೊಳಗ ಗಿಡಗ ಬಂತ ಹಾರಿ-ಒಳೇ ಹಾತೋರಿ ಆಗಿ ಬಾಳ ಸಿಟ್ಟಾ।
ಅರಸನ ಮುಂದ ಕೂತೀತ ಮಾರಿ ಹಾಕ ಗಂಟಾ॥೨॥

ಅಂಜಿ ಪಾರಿವಾಳ ಅಂತೈತಿ ನೋಡ ಭೂಪಾ-ಗಿಡಗಂದ ಎಷ್ಟ
ಕೋಪಾ-ನನ್ನ ಮೇಲೆ ಆರ್ಭಾಟಾ।
ನಾ ಏನ ತಿಂದೀನ ಇದರ ಗಂಟಾ॥೩॥

**||ಕೂ.ಪ.||**

ಅರಸ ಅಂತಾನ ಅಂಜಬೇಡ ಕಪೋತ ಪಕ್ಷಿ ನಿನ್ನ ಎಂದೀಗಿ ಕುಡುದಿಲ್ಲ ನಾನು |
ನನ್ನ ಕೈಯಾಗಿಂದ ಗಿಡಗ ಒಯ್ಯು ತ್ರಾಣವೇನು |
ಕೇಳಿ ಗಿಡಗಕ್ಕ ಬಂದೀತ ಕೋಪವನು || ಪರರ ||

**ಚೌಕ – ೩**

**||ನುಡಿ||**

ಗಿಡಗ ಅಂತೈತಿ ಕೇಳ ರಾಜಾ ಚೂಡಾಮಣಿ ನಿನ್ನ ಕೀರ್ತಿ ಬಹಳ ಅಯ್ತಿ ನಾಡಾಗ |
ಎಂಟ ದಿವಸ ಆತ ಕೂಳ ಇಲ್ಲ ನನಗ |
ತಿರಗಿ ಬ್ಯಾಸತ್ತೀನ ಈ ಹಕ್ಕೀ ಕಾಲಾಗ ||
ನನ್ನ ಆಹಾರ ನನಗ ಕೊಟ್ಟ ಕೀರ್ತಿ ಪಡಿಬೇಕ ನಿಂದೇನ ಹೋಗತೈತಿ ಇದರಾಗ |
ಕುಡ ನಂದ ನನಗ||೧||

ಈಗಿಂದ ಈಗ ಜಗ್ಗಿ ಜೋಲಿ ಬಡಿಯತೀನ ಆಹಾರ ಬಂದ ಕೂತತಿ
ನಿನ್ನತೊಡಿ ಮ್ಯಾಗ |
ನೀನು ಸತ್ಯನ್ಯಾಯ ಮಾಡಾಂವಾ ಅಷ್ಟು ಅರಸರ ಒಳಗ |
ನಿನ್ನಲ್ಲಿ ಅಧಮ ಹುಟ್ಟಿದ್ದು ಅದು ಹ್ಯಾಂಗ ||
ರಾತ್ರಿ ಕಾಣುವ ನಕ್ಷತ್ರ ಹಗಲ ಕಂಡಾವ ತಿಳದ ನೋಡ ರಾಜಾ ನಿನ್ನ ಮನದಾಗ |
ಹೇಳುವೆನೀಗ||೨||

ಅರಸ ಇದ್ದಾವ ಘಾಬರಿ ಆಗಿ ಅಂತಾನ  ಕೂತಲ್ಲಿ ಬಂತ ಎಂಥಾ ಪ್ರಸಂಗ |
ಈ ಗಿಡಗಿನ ಮಾತ ಸುಳ್ಳ ಅನ್ನುದು ಹ್ಯಾಂಗ |
ಖರೆ ಕುಡಲಿ ಹ್ಯಾಂಗ ಬೆನ್ನಿಗಿ ಬಿದ್ದವಗ ||
ಕೊಟ್ರ ಘಾತ ಆತ ಕುಡದಿದ್ರ ಮಾತ ಹೋತ ಮಾತಹೋದ್ರ ಮನುಷ್ಯ ಇದ್ದೂ ಇಲ್ದಾಂಗ |
ಮಾಡಲಿ ಹ್ಯಾಂಗ||೩||

**||ಚಾಲ||**

ಕೂತ ಪಂಚರ್‍ನ ಕೇಳತಾನ ಭೂಪತಿ-ಹೇಳ್ರಿ ಅದಕ ಯುಕ್ತಿ ಬಂದತಿ ಸಂಕಟಾ |
ಪಂಚರ ಅಂತಾರ ಇದಕ ಯಾಕ ಚಿಂತಿ ಇಷ್ಟಾ||೧||

ಪಾರಿವಾಳ ಬಿದ್ದಿತ ನಿಮ್ಮ ಬೆನ್ನೀಗಿ-ಕುಡತೀರಿ ಹ್ಯಾಂಗ ತಿರಿಗಿ -
ಅದಕ ವಚನ ಕೊಟ್ಟಾ |
ಕುಡುದಿಲ್ಲ ಅನ್ನರಿ ಗಿಡಗ ಹೋಗಲಿ ಈಗ ಹೊಂಟಾ||೨||

ಇಷ್ಟ ಕೇಳಿ ಗಿಡಗ ಅಂತೈತಿ ನಾ ಏನ ನಿಮ್ಮ ಹಂತಿ ಬಂದಿಲ್ಲ ಆಶೆ ಇಟ್ಟಾ ।
ಇಂಥ ನ್ಯಾಯ ಮಾಡವರ ನೀವು ಇದ್ದೀರಿ ಎಷ್ಟಾ॥೩॥

**॥ಕೂ.ಪ.॥**

ಇಂಥಾ ಕಾರಭಾರ ಮಾಡೂ ಮಂದಿಗೆಲ್ಲಾ ದರಬಾರ ಒಪ್ಪಿಸಿ ಹೋದರ ಒಬ್ಬರೂ
ಇರಬಾರ್ದ ಆದೀತ ಇದಕ ಅಂತೀರೇನು ।
ಇಂಥ ನ್ಯಾಯ ಮಾಡಿದರ ಬಂದೀತ ಹ್ಯಾಂಗ ದೊಡ್ಡಿಸ್ತಾನು ।
ದೇವರಕಿಂತ ಪೂಜಾರೀದ ಹಿರಿತಾನು ॥ಪರರ॥

**ಚೌಕ – ೪**

**॥ನುಡಿ॥**

ತಾರಕ್ಕಿ ಅಂಥವರ ಎಲ್ಲಾ ನಿಮ್ಮ ಹ್ವಾರೇಕ ಹೊತ್ತ ಹೋಗೀರಿ
ಹೊಟ್ಟಿ ತುಂಬ ಸುದ್ದಾ ಹಾಕಿ ಇಟ್ಟಕೊಳಿಕ್ಕಿಲ್ಲ ಕೂಳಾ ।
ಇಂಥ ನ್ಯಾಯ ಮಾಡು ಮಂದಿ ಸಭಾದಾಗ ಎಷ್ಟು ಆಯ್ತಿರಿ ಮೇಳಾ ।
ಸತ್ಯವಂತರ ಮೇಲೆ ಬೀಳಬಾರದ ನಿಮ್ಮಂಥವರ ನೆರಳಾ ॥
ಚಂದ್ರರಾಜಾ ಕೂತ ನಿಂದ್ರಂದ್ರ ನಿಂದ್ರತೀನ ಹೋಗಂದ್ರ
ಹೋಗತೀನ ನಿಮದ್ಯಾಕ ಇದರಾಗ ಬೆರಳಾ ।
ನಂದೇನ ಸುಳ್ಳಾ॥೧॥

ಕೂತವರೆಲ್ಲಾ ಅಂತಾರ ಇದ ಎಂಥಾ ಗಿಡಗ ಬಂದಿತ್ರೆಪ್ಪಾ
ಎಂಥೆಂಥವರನಲ್ಲೆ ಮಾಡಿಬಿಟ್ಟಿತ ಮರಳಾ ।
ಅರಸಗ ಅಂತೈತಿ ಪ್ರಜಾಪಾಲನ ಮಾಡುವಂಥಾ ಭೂಪ ಕೇವಳಾ ।
ನಿನ್ನ ಕಿವಿಗಿಸುದ್ದಾ ಬೀಳಬಾರ್ದ ಇಂಥ ಕೆಟ್ಟ ಮಂದಿ ಸಪ್ಪಳಾ ॥
ಕೊಟ್ಟಗಿಟ್ಟಿ ಇವರ ಹೊಟ್ಟಿಗಿಸುದ್ದಾ ಹಾಕಬ್ಯಾಡ ರಾಟ್ಟಿಕಿತ್ತ ಹೊರಗ ಹಾಕ ನಿರ್ಮಳಾ ।
ಸುಳ್ಳಕಳ್ಳ ಬೇಡಾ ಸಂಬಳಾ॥೨॥

ಪಕ್ಷಿ ಒಳಗ ರಾಜಾ ನಾನು ಪ್ರಜರ ಒಳಗ ರಾಜಾ ನೀನು ಪಕ್ಷ
ಹಿಡಿಬಾರ್ದ ಮನಾ ಇರಬೇಕ ಸರಾಳ ।
ಕೂಡ್ರು ಸಿಂಹಾಸನಕ ಕುಂದ ಹಚ್ಚಿದರ ಆಗೂದು ಅಮಂಗಳಾ ।
ರಾಜನೀತಿ ಬಲ್ಲಿದರಿಗೆ ನಾವೇನ ಹೇಳೂದ್ಯೆತಿ ಬಹಳಾ ॥
ಶಿವಪೂಜಿ ಒಳಗ ಕರಡಿ ಬಿಟ್ಟಾಂಗ ಕಂಡ ಮಂದಿ ಕೂತ
ರಾಜವೈಭವ ಎಲ್ಲಾ ಮಾಡತಾರ ಹಾಳಾ ।
ಇವರಿಗೆ ಎಲ್ಲಿ ಅಯ್ತಿ ತಾಳಾ॥೩॥

ಅರಸ ಅಂತಾನ ಆಗ ಇದು ಎಂಥಾ ಬುದ್ಧಿವಳಿತ ಪಕ್ಷಿಮಾತ
ಕೇಳಿದರ ಬಾಯಿಲೆ ಮಧುರ ಮಂಜುಳಾ ।
ನನ್ನಕಿಂತ ಹೆಚ್ಚಿಗೆ ಅಯ್ತಿ ಇದಕ ರಾಜ ಕಳಾ ।
ಇದರಗೂಡ ವಾದ ಹಾಕವರ ಎಲ್ಲೆರೆ ಇದ್ದಾರ ವಿರಳಾ ॥
ಉನ್ಮತ್ತ ತರವಲ್ಲ ಇದಕ ಸನ್ಮಂತ ಹೇಳಿ ಕಳಸಬೇಕ
ಪಕ್ಷಿರಾಜಾ ನಿನಗ ಆದೀನ ಮರುಳಾ ।
ನನ್ನ ಮೇಲೆ ಕರುಳಾ॥೪॥

**॥ಚಾಲ॥**

ಅರಸ ಅಂತಾನ ಪಾರಿವಾಳಕ-ವಚನ ಕೊಟ್ಟಾನ ಅದಕ-
ಏನಂತಿ ಹೇಳ ಲಗೂಬಽಗಿ ।
ಮಾಡ ಬಲ್ಲಾಂಗ ನಿನ್ನ ಮನಸೀಗಿ॥೧॥

ಗಿಡಗ ಅಂತೈತಿ ನಾ ಏನ ಹೇಳಲಿ - ನಂದ ನನಗೆ ಕುಡವಲ್ಲಿ ಮಾತಾಡತಿ ತಿರಗಿ ।
ನೀನಽ ಮಾಡ ಬಲ್ಲಾಂಗ ಮನಸೀಗಿ॥೨॥

ಅರಸ ಅಂತಾನ ಪಾರಿವಾಳ ತೂಕಾತೂಕಾ-ಮಾಂಸ ಪ್ರತ್ಯೇಕ ಕುಡಲಿ ಏನ ಬದಲೀಗಿ ।
ತಿಂದ ಹೋಗಲಿ ಅಂದ ಸಂತೋಷ ಆಗಿ॥೩॥

**॥ಕೂ.ಪ.॥**ಪಕ್ಷಿ ರಾಜಾ ಬದಲ ಉತ್ತರ ಆಡತೈತಿ ಬದಲ ಮಾಂಸ ತಿನ್ನಾವಲ್ಲ ನಾನು ।
ಇದರ ಹೊರತ ನಾ ತಿನ್ನುದಿಲ್ಲ ಏನೇನು ।
ಇದರ ತೂಕಾತೂಕ ನಿನ್ನ ಮಾಂಸ ಕೊಟ್ಟರ ತಿನ್ನುವೆನು ॥ ಪರರ ॥

**ಚೌಕ – ೫**

**॥ನುಡಿ॥**

ಅರಸ ಅಂತಾನ ಕೂತ-ಬಂತ ನನ್ನ ಜೀವದ ಸುತ್ತ-ಕುಡದಿದ್ದರ
ಬಗಿ ಏನ ಹರಿಯುದಿಲ್ಲಾ ।
ಕುಡತೀನ ಅಂತ ಹೇಳಿದ ಅರಸ ಕುಶಿಯಾಲಾ ।
ಆಗ ತರಿಸಿ ಕಟ್ಟಿದ ಒಂದ ಚಿಂತಾಲಾ ।
ಒಂದ ಪರಡಿಯೊಳಗ ಪಾರಿವಾಳ ಕುಡ್ರಸಿದಾನು ಹರಿ ಎಂದು
ತಲವಾರ ಹಿರದಾನಲ್ಲಾ ।
ತಡಮಾಡಲಿಲ್ಲಾ॥೧॥

ಮೊದಲ ತನ್ನ ಬಲದೊಡಿ ಹೆರ್ಚಿ ಹಾಕೀದಾ ತೊಗಲ ಸಹಿತ ಏನೂ ಉಳಿಯಲಿಲ್ಲಾ।
ಪಕ್ಷಿ ಜಡಾ ಆತ ನೆಲಾ ಬಿಟ್ಟ ಏಳಲಿಲ್ಲಾ।
ಕೂತ ನೋಡತಾರ ಸಭಾದವರ ಎಲ್ಲಾ॥
ಅರಸನ ಪತ್ನಿ ಕೇಳಿ ಆಕ್ರೋಶ ನಡಸಿದಾಳ ಬಂದ ಕೂಡಿತ ಊರ ಜನ ಎಲ್ಲಾ।
ಒಬ್ಬರು ಉಳಿಯಲಿಲ್ಲಾ॥೨॥

ಗಂಡನ ಕೊರಳಿಗಿ ತೆಕ್ಕಿಬಿದ್ದ ಅಳತಾಳ ಗಿಡಗ ಬಂದ ಆದೀತಪ್ಪಾ ಮೂಲಾ।
ಅವನ ಪ್ರಜರ ಬಂದ ಹತಿಯಾರ ಹಿರದಾರ ಗಿಡಗಿನ ಮ್ಯಾಲಾ।
ಕಂಡವರ ಗುಂಡ ಮದ್ದ ಹಾಕಿಕೊಂಡ ನಿಂತಾರ ಹಿಡದ ಬಾಣಬಿಲ್ಲಾ॥
ಅರಸ ಅಂತಾನ ಅಧಮ ಆಗತೈತಿ ಅದರ ಹೆಸರ ತಗಿಯ
ಬ್ಯಾಡ್ರಿ ಆಗೂದ ಆಗ್ಲಿ ಎಲ್ಲಾ।
ನಡುವ ನಿಮ್ಮದ ಯಾಕ ಗುಲ್ಲಾ॥೩॥

ಎರಡೂ ತೊಡಿಯೊಳಗ ಏನೂ ಕಸರ ಇಲ್ದೆ ಕೊರದ ಕೊಟ್ಟಿದಾನ-
ಆಗಲಿಲ್ಲ ಪಕ್ಷಿ ಸಮತೋಲಾ।
ತಾನು ಭಕ್ತಿಲೆ ಕೊರದ ಕೊಟ್ಟ ದೇಹ ಏನೂ ಉಳಿಯಲಿಲ್ಲಾ।
ಅದರ ಕಪಟತನ ಅರಸಗ ಏನೂ ತಿಳಿಲಿಲ್ಲಾ।
ಅರಸನ ಹೊಟ್ಟಿ ಎರಡೂ ರಟ್ಟಿ ಕೊರದ ಒಟ್ಟಿ ತೂಗಿದರ
ಆಗಲಿಲ್ಲ ಪಕ್ಷಿ ಸಮತೋಲಾ।
ಮಾಂಸದ ಪರಡಿ ನಿಂತಿತ ಮೇಲಾ॥೪॥

**॥ಚಾಲ॥**

ಅರಸ ಖಬರ ಹಾರಿ ಕಣ್ಣ ಮುಚ್ಚಿದಾನ-ತೂಕ ಬಂತ ಇಲ್ಲ ಅಂತಾನ
ಯಾವತ್ತು ಮ್ಯಾಲ ಮ್ಯಾಲಿ।
ಕೂತವರ ಅಂತಾರ ಬರವಲ್ಲದ ಎಲ್ಲೆಲ್ಲಿ॥೧॥

ಕೋದ ಹಾಕ್ರಿ ನನ್ನ ಕುತಗಿ-ತೂಕ ಸವನಾಗಿ-ಲಗು ಆಗಲಿ।
ಏಕಾಏಕಾ ನನ್ನ ಈ ಪ್ರಾಣ ಹೋಗಲಿ॥೨॥

ಅರಸ ಹಿಂಗ ಅಂತಿದ್ದ-ಪ್ರಜಾಜನರ ಮುಂದ-ಕೇಳ್ರಿ ನೀವು ಇಲ್ಲಿ।
ತಗದ ಹೇಳುವೆ ಮುಂದಿನ ದಾಖಲಿ॥೩॥

**॥ಕೂ.ಪ.॥**

ಇಷ್ಟರೊಳಗ ನಾರದ ಮನುಷ್ಯನ ಕೊಟ್ಟ ಕಳುಹಿದಾಂಗ ಬಂದ ನೋಡ ತಾನು ।
ಇದನೆಲ್ಲಾ ಅರಸ ಪಂಥಕ್ಕಾಗಿ ವ್ಯರ್ಥ ಪ್ರಾಣ ಕಳಕೋತಾನು ।
ಹೋಗಿ ನಿಂತ ಭಗವಂತಗ ತಿಳಿಸಿದಾನು ॥ ಪರರ ॥

**ಚೌಕ – ೬**

**॥ನುಡಿ॥**

ನಿಮ್ಮ ಭಕ್ತಂದು ಘಾತ ಆಗುಪ್ರಸಂಗ ಬಂತ ಗೊತ್ತಾ ಇದ್ದೂ ಇಲ್ದಾಂಗ
ಕೂತಿರಿ ಬೇಸಿ ।
ಇಂದ್ರ ಅಗ್ನಿ ಇಬ್ರು ಬಿಡತಾರ ಕೊರಸಿ ।
ಕೇಳಿ ಕೃಷ್ಣಗ ಬಂದಿತ ಮಾತಿನ ದೋಸಿ ॥
ಅದೇ ಕ್ಷಣಕ ಎದ್ದಹರಿ ಗರುಡನೇರಿ ಹಾತೋರಿ ಬಂದ
ನೋಡಿದರ ಒಳಗ ಅರಸ ಆಗಿದ್ದ ಘಾಸಿ ।
ಬಿಟ್ಟ ಪ್ರಾಣದಾಸಿ॥೧॥

ಅರಸನ ಕಂಠ ಕಡದ ಹಾಕಿದಾರ ಮುಕುಂದ ಬಂದ ಅರಸನ ಮೇಲೆ
ಬಿದ್ದ ಅಡರಾಸಿ ।
ಗರುಡನ ಕಳಿಸಿ ಅಮೃತ ಆಗ ಬೇಗ ತರಿಸಿ ।
ತನ್ನ ಹಸ್ತದಿಂದ ಸ್ವಂತ ಮೈಗೆಲ್ಲಾ ಒರಸಿ ॥
ಇದ್ದ ದೇಹ ಮೊದಲ ಇದ್ದಾಂಗ ಆದೀತು ಅರಸ ಎದ್ದಕೂತ ಆದ ಖುಸಿ ।
ಅವನ ಪಾದಕ ನಮಿಸಿ॥೨॥

ಇಂದ್ರ ಅಗ್ನಿ ಇಬ್ರು ಕೂಡಿ-ಆಗಿಂದಾಗ ಹೋದಾರ ಓಡಿ-ತರಸ
ಲೇನ ಅಂತಾನ ಅವರನ ಹಿಡಿಸಿ ।
ಆ ಇಂದ್ರ ಪದವಿ ಮ್ಯಾಲ ನಿನ್ನ ಓದ ಕೂಡ್ರಿಸಿ ।
ಬಿಡುವೆನು ಅಂತಾನ ಆಗ ಋಷಿಕೇಶಿ ॥
ಅವರು ನಿನ್ನ ಕಾಡಿದಾರ ಅಂದಮ್ಯಾಲ ತಿರಗಿ ಅವರು ನಿನ್ನ
ಕೈಯಾಗ ಇರುಹಾಂಗ ವರಾಕೊಡುವೇನು ಇಟ್ಟಕೊ ದುಡಸಿ ।
ಇದರಂತೆ ಕುಡುವೆನು ನಡಸಿ॥೩॥

ಅರಸ ಅಂತಾನ ಅವರೇ ನನ್ನ ಗುರುಗಳು ಮೊದಲು ಹೋದಾರ
ನಿನ್ನ ಭೆಟ್ಟಿ ಮಾಡಿಸಿ ।
ಅವರ ಇಂದ್ರ ಪದವಿ ಮ್ಯಾಲ ನಂದ ಇಲ್ಲ ಅಶಿ ।
ನಿಮ್ಮ ಪಾದಕ್ಕಿಂತ ಹೆಚ್ಚಿಂದ ಯಾವದ ನನಗ ಕೃಪಾರಾಶಿ ॥
ಉದ್ಧಾರ ಆದೀನ ನಾನು ಬ್ಯಾಡ ನನಗ ಯಾವುದೇನೂ ನಿಮ್ಮ

ಪಾದದಲ್ಲಿ ಇರಬೇಕ ನನ್ನ ಮನಾ ಭ್ರಮಸಿ।
ಇದರಂತೆ ಕುದ್ರ ನಡಸಿ॥೪॥

**॥ಚಾಲ॥**

ಇಷ್ಟ ಕೇಳಿ ಅಂತಾನ ಆಗ ಕೃಷ್ಣಾ-ಯಾವತ್ತು ನಿನ್ನ ಮನಾ ನನ್ನ ಭಜಿಸಲಿ ॥
ನಾನು ಇರತೀನ ನೀನು ಇದ್ದಲ್ಲಿ॥೧॥

ನಿನ್ನ ಸತ್ವಕ್ಕೆ ಬಾರದಂತೆ ಕುಂದ - ಇರದಂತೆ ವರಾ ನಂದ ನಿನಗ ನಡೆಯಲಿ।
ಇಷ್ಟ ಹೇಳಿ ಕೃಷ್ಣ ಮಾಯವಾದ ಅಲ್ಲಿ॥೨॥

ಗೋಕಾವಿ ಊರ ಮೋಜಿಂದ-ಸಂಬಣ್ಣ ಹಿಂಗ ಅಂದಭಕ್ತಿ ನಿಮ್ಮಲ್ಲಿ।
ಇಟ್ಟ ನಡೀರಿ ಮುಕ್ತಿದಾಯಕನಲ್ಲಿ॥೩॥

**॥ಕೂ.ಪ.॥**

ಪತ್ತಾರ ಮಲ್ಲೇಶನ ಪದಗಳ ಚಿತ್ರ ತಗದಾಂಗ ಅದರ ಮಲ
ಸೂತ್ರ ಹಚ್ಚಿ ಮ್ಯಾಲ ಇಟ್ಟಾಂಗ ಕಳಸವನು।
ಅಗದೀ ಮೂಡ ಜನರಿಗೆ ಸುದ್ದಾ ತಿಳಿಸುವನು।
ಸತ್ಯವಂತರ ಚರಿತ್ರ ಹೇಳಿ ಬೆಳಸುವನು ॥ಪರರ॥

***ರಚನೆ :*** ಪತ್ತಾರ ಮಲ್ಲೇಶ
***ಕೃತಿ :*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೧೨. ವಿಷ್ಣು ವ್ಯಾಜ್ಯ ಸ್ತುತಿ

ಎಲ್ಲ ದೇವರಲ್ಲಿ ಎಂದೆಂದಿಗೂ ನೀ
ಕಲ್ಲು ಮನಸಿನವ ಕೇಶವಾ - ನಾ
ಬಲ್ಲೆನೋ ನಿನ್ನ ಮನಸಿನ ಭಾವಾ - ನಂಬಿ-
ದವರ ಘಾತ ಮಾತಿಸುವಾಂವಾ
ಕರುಣ ಹೀನ ನಿನ್ನ ಕಡೆತನ ನಂಬಿದ
ಯಾವ ಮನುಜ ಪಥ ಕಂಡಾವಾ-ಹೇಳಲೋ ದೇವಾ॥ಪಲ್ಲ॥

ಭಕ್ತರೊಳಗ ಬಲಿಚಕ್ರವರ್ತಿ ಆಂವ ಶುಕ್ರ ಶಿಶ್ಯ ಗುಣಸಂಪನ್ನಾ - ಅಲ್ಲ
ಹೋಗಿ ಆದಿ ವಟು ವಾಮನ ಮೂರುತಿ
ಪಾದಾ ಬೇಡಿಕೊಂಡಿ ಭೂಮಿದಾನಾ
ಕೊಟ್ಟ ಉಪಕಾರ ಕ್ಷಣ ತೀರಿಸದೆ

ಪಾತಾಳ ಲೋಕಕ್ಕೆ ತುಳಿದೆವನಾ ಕರುಣಾ ಹೀನಾ ||
ನಿನ್ನ ಹಡದ ಪರಿಪಾಲನೆ ಮಾಡಿದ
ಸಾಕ್ಷಾತ ರೇಣುಕಾ ತಾಯಿನಾ ಕರುಣಾ
ಇಲ್ಲದೆ ಕಡದ ಚೆಲ್ಲಿದಿ ಗೋಣಾ ಎ-
ಷ್ಟಂತ ಹೇಳಲಿ ನಿನ್ನ ಖೊಟ್ಟಿ ಗುಣಾ
ಇಪ್ಪೊತ್ತೊಂದು ಸಾರಿ ಭೂಮಿಯ ಜಯಿಸಿ
ನಿರ್ಮೂಲ ಮಾಡಿದಿ ಕ್ಷತ್ರಿಯರನ್ನಾ
ಸಹಸ್ರಾರ್ಜುನನಾ ||

ಸೀತಾನ ದಸಿಯಿಂದ ಸೇತುಗಟ್ಟಿಸಿ
ಘಾತ ಮಾಡಿದಿ ನೀ ದೈತ್ಯಾರನಾ ಕೋತಿ
ಯಿಂದ ಸುಡಸಿದಿ ಲಂಕಾ ಭುವನಾ ಪ್ರೀತಿ-
ಯಿಂದ ತಂದಿ ಆ ಜಾನಕಿನಾ
ಬಸುರ ತುಂಬಿ ಭಾರಾದ ಕಾಲಕ್ಕೆ
ಬಿಟ್ಟು ತಿರುಗಿಸಿದ ಘೋರವನಾ ಇಲ್ಲೋ ಅಭಿಮಾನಾ
ಸೈರಿಸಲಾರದೆ ಸಣ್ಣ ಬಾಲ ಅಭಿಮನ್ಯು ಕುಮಾರನ ಪ್ರಾಣವನಾ
ಗೊತ್ತಿದ್ದು ಕಾಯಲಿಲ್ಲೊ ದಯಾ ಘನಾ
ಅಣ್ಣ ಅಂತ ನಂಬಿದ್ದ ದ್ರೌಪದಿನ್ನ
ಭರ ಸಭಾದೊಳಗ ಕಳೆಸಿದ ಮಾನಾ ನಾಚೆದಿಯೇನಾ
ಚಕ್ರದಿಂದ ಸೂರ್ಯನ ಮರಿಮಾಡಿ
ನಿಂತು ಕೊಲ್ಲಸಿದಿ ಜಯದ್ರಥನಾ-ಎಂಥಾ
ಕಪಟತನಾ ಮಾಡಿದಿ ನೀನಾ

**||ಚಾಲು||**

ಆ ಬಭ್ರುವಾಹನನ ಕೈಯಲಿ ತಲಿ ಹೊಡಿಸಿದಿ
ಹೊಡಿಸಿದೆಯೋ ತಂದಿಯ ತಲಿ
ಉಪಪಾಂಡವರನ ರಾತ್ರಿಯಲಿ
ಗೊತ್ತಿದ್ದು ಕಾಯಲಿಲ್ಲ ಕೊಲಿ
ಎಷ್ಟು ಹೇಳಲಿ ನಿನ್ನ ಖೊಟ್ಟಿ ಗುಣಾ
ಒಟ್ಟಿಗೆ ನೀ ದಯಾ ಇಲ್ಲದಾಂವಾ
ಪ್ರತ್ಯಕ್ಷ ಕಂಸ ಸೋದರ ಮಾಂವಾ
ಹಕನಾಕ ಹೊಡೆದೆ ಆತನ ಜೀಂವಾ

**||ಏರು||**

ಎಲ್ಲ ದೇವರಲಿ ಎಂದೆಂದಿಗೂ ನೀ
ಕಲ್ಲು ಮನಸಿನವಾ ಕೇಶವಾ ||೧ನೇ ಚೌಕ||

ನಿನ್ನ ಮಗಳ ಮಗಾ ಆದ ಭೀಷ್ಮಗ
ವಾದಿ ಆಗಿ ನಿಂತಿ ಪ್ರತಿವಾದಿ-ಮುಂದ
ಶಿಖಂಡಿನ ಮರಿ ಮಾಡಿ ನಿಲಿಸಿದ-ಹಿಂದ
ಮರಿಯಾಗಿ ಅರ್ಜುನಗ ಹೊಡಿ ಅಂದಿ
ಸತ್ಯ ಧರ್ಮ ನಿಂದ ಅಸತ್ಯ ನುಡಿಸಿ
ದ್ರೋಣನ ಪ್ರಾಣಕ ಮೂಲಾದಿ-ಇದು ನಿನ್ನ ಬುದ್ಧಿ
ಪರಿ ಪರಿಯಿಂದ ನಿನ್ನ ಭಕ್ತ ಕರ್ಣಗ
ಶಕ್ತಿ ಕ್ಷೀಣ ಮಾಡಿ ಬಳಲಿಸಿದಿ - ಶಾಪ-
ಕಾಗಿ ಭೂಮಿತಿ ರಥ ನುಂಗಿಸಿದಿ
ಬಾಂಧವನಂತ ಪಾಂಡವರಿಗೆ ತಿಳಿಗೊಡದೆ ಆತನ ಕೊಲಿಸಿದಿ
ಅಣ್ಣ ರಾಮನಿಂದ ಆಕಳ ಕೊಲ್ಲಿಸಿದಿ
ಪೃಥ್ವಿ ಪ್ರದಕ್ಷಣೆ ಮಾಡಿಸಿದಿ-ಕೈ ಸಾಧಿಸಿದಿ
ಸಾಂಬ ಕೊಟ್ಟ ಸಂಪತ್ತಿಗೆ ಸೈರಿಸದೆ
ಬಾಣಾಸುರನ ಭುಜ ಸವರ್‍ಯಾಡಿಸಿದಿ
ರಾಜ ಮಯೂರಧ್ವಜಗ ವಂಚಿಸಿದಿ
ಅರ್ಧಾಂಗ ದಾನ ಬೇಡಿ ಕಠಿಣ ಮನಸ್ಸಿನಿಂದ
ತಲೆಯ ಚರ್ಚೆ ಸೀಳಿಸಿದಿ
ಬಹಳ ನಿರ್ದಯದಿ
ಕಾಯ್ದ ಎಣ್ಣೆಯೊಳು ಎತ್ತಿ ಸುಧನ್ವರ
ಚಲ್ಲಿಸಿದನು ಆತನ ತಂದಿ
ಅಂತಾದರೊಳಗ ನೀ ಅವನ ರಕ್ಷಿಸಿದಿ
ನಿನ ಭಕ್ತನಂತ ಕೊಂಡಾಡಿಸಿದಿ
ಅದೇ ಸುಧನ್ವನ ಅಘೋರ ರಣದಲ್ಲಿ
ಕಲ್ಲು ಮನಸ್ಸಿನಿಂದ ಕೊಲ್ಲಿಸಿದಿ - ಬಾಳ ನಿರ್ದಯದಿ

**||ಚಾಲ||**

ತ್ರಿಪುರದ ದಾನವಾಂಗನಾ
ಪರಿವೃತಿ ಪರಮ ಪಾವನಾ
ಅಲ್ಲಿ ಪ್ರಗಟ ಮಾಡಿದಿ ನಿನ್ನ ಮನಾ
ವೃತಭಂಗ ಮಾಡಿದಿ ವಿನಾಕಾರಣಾ ||
ಅಶ್ವಾತ್ಥಾಮಗ ಶಾಪ ಕೊಡಿಸಿ ಬ್ರಹ್ಮ
ರಾಕ್ಷಸನ ಮಾಡಿಸಿದಾಂವಾ - ರಕ್ತ

ಪಿತ್ತ ರೋಗ ಹತ್ತಿಸಿದಾಂವ - ನೀ
ಯಾತಕ್ಕೇಳ ಹಿಂಜರಿದಾಂವಾ.

**||ಏರು||**

ಎಲ್ಲ ದೇವರಲಿ ಎಂದೆಂದಿಗೂ ನೀ
ಕಲ್ಲ ಮನಸಿನವಾ ಕೇಶವಾ||೨ನೇ ಚೌಕ||

ನಿನ್ನ ಹಾಸಿಗೆಯಾದ ಅದಿ ಶೇಷಗ
ಗಾಳಿ ಹೊರತ ಇಲ್ಲ ತಿನ್ನುದಕ - ಮ್ಯಾಲ
ಹಚ್ಚಿದಿ ಭೂಮಿ ಹೊರವುದಕ-ಸರಿ-
ಗಾಣೆನು ನಿನ್ನ ನಿರ್ದಯತನಕ
ನಿನ್ನ ವಾಹನ ಅನ್ನಿಸಿದ ಗರುಡಗ
ಮನಿಯಿಲ್ಲ ಪೃಥ್ವಿಯ ತಳಕ-ತುಸು ನಿಲ್ಲುದಕ ||
ನಿನ್ನ ದಾಸ ನಿಜದಾಸನೆಂದು ಹೆಸ
ರಾದ ಹನುಮ ಭುವನತ್ರಯಕ-ಅವನ
ದುಡಿಸಿಕೊಂಡಿ ಕೆಲಸಾಗೋತನಕ-ಮುಂದೆ
ಹಚ್ಚಿದಿ ಗ್ರಾಮದ ಕಾವಲಕ
ಪಂಚಪಾಂಡವರ ದುಃಖ ಹಿಂಗಲಿಲ್ಲ
ಕಡೆತನಕ-ನೀನಿರೋತನಕ ||
ಸೋಳಾ ಸಾವೀರದ ಪಟ್ಟದ ಸ್ತ್ರೀಯರನ
ಎತ್ತಿ ಚೆಲ್ಲಿಸಿದಿ ಸಮುದ್ರಕ-ದ್ವಾ-
ರಕಾ ಮುಳಗಿಸಿದಿ ಹಾಕನಾಕ - ಆಳ-
ಲಿಲ್ಲ ನಿನ್ನ ಘಾತಕತನಕ
ಛಪ್ಪನ್ನ ಕೋಟಿಯಾದವರ ಬಳಗ
ಮಣ್ಣುಗೂಡಿಸಿ ಮಾಡಿದಿ ಪಾಕಾ ಏನಾ ಬೇಬಾಕಾ
ಜಾಂಬುವಂತ ನಿನ್ನ ಭಕ್ತನಲ್ಲವೋ
ಕಸಗೊಂಡು ಬಂದಿ ಮಣಿ ಶಮಂತಕಾ
ಬೀಗ ರುಕ್ಮಾಂಗನ ಬಿಗಿಸಿದಿ ರಥಕಾ - ಅವನ
ಗಡ್ಡಾ ಮೀಸಿ ಬೋಳಿಸಿದಿ ಕೌತುಕಾ
ನಿನ್ನವಗುಣಕ ಸೇರದ ಲಕ್ಷ್ಮೀ
ಬಿಟ್ಟು ಹೋದಳು ಕೋಲ್ಹಾಪುರಕ-ನಿನ್ನ ದುರ್ಗುಣಕಾ

**||ಚಾಲ||**

ಮುರವೈರಿ ವಿಶ್ವ ವ್ಯಾಪಕಾ
ಸುರವಂದ್ಯ ಅಮರ ನಾಯಕಾ

ನೀವಾಡಿಸಿದಂತಾ ಕೃತ್ಯಕಾ

ಅಳತಿಲ್ಲೊ ಕಪಟ ನಾಟಕಾ

,,,,, ಪಾರ್ವತಿನ ಕೊಟ್ಟ ರಾವಣಗಾ

ನೋಡಿ ತಾಳಲಿಲ್ಲ ನಿನ್ನ ಜೀವಾ - ನಡುವ

ದಾರಿಯೊಳು ನೀ ಕಸಕೊಂಡಾಂವಾ - ಅವನ

ಪ್ರಾಣಲಿಂಗ ನೀ ಕೆಡಸಿದಾಂವಾ

ಎಲ್ಲ ದೇವರಲಿ ಎಂದೆಂದಿಗೂ ನೀ

ಕಲ್ಲ ಮನಸಿನವ ಕೇಶವಾ||೩ನೇ ಚೌಕ||

ಏನೇನು ಅನ್ಯಾಯವಿಲ್ಲದಂಥಾ ವಾಲೀನ

ಕಪಟತನದಿ ಕೊಂದಿ ರಣದಾಗ ಅವನ

ಹೆಣತಿನ ಕಸಕೊಟ್ಟಿ ಸುಗ್ರೀವನ ಖರೇ

ನ್ಯಾಯ ಪಾಕ್ಷಪಾತಿ ಅನಬೇಕ ಹ್ಯಾಂಗ

ಶಿಶುಪಾಲ ರುಕ್ಮೀಣಿನ ಲಗ್ನವಾಗುತ್ತಿದ್ದಾಗ - ನೀ

ಘಾತ ಮಾಡಿದಿ ಒಳ್ಳೆಯ ಸಮಯದಾಗ

ಹೊಕ್ಕು ಅದರಾಗ ಹೊಕ್ಕೆ ಅದರಾಗ

ಭಕ್ತರೊಳಗ ಅಗ್ರಗಣ್ಯ ಲಕ್ಷ್ಮಣಾ

ನೋಡಿದರೊಂದು ವಿಚಾರಿಸಿದಾಗ - ಪ್ರ-

ತ್ಯಕ್ಷ ತಮ್ಮನೋ ಅವ ನಿನಗ - ನಿಂತು

ರಕ್ಷಿಸಿದನೋ ಮಹಾವನದಾಗ

ಅವನ ಭಕ್ತಿ ಕಂಡು ಕರುಣ

ಹುಟ್ಟಲಿಲ್ಲ ಕಾಲ ಸಮಯದಾಗ

ಅನ್ಯಾಯಕಾರಿ ನೀ ಅವನ ಅನ್ನನ್ಯಗತಿ ಮಾಡಿ

ಉಪವಾಸ ಇಟ್ಟ ಧೇಟಿಕ ಬಕದಂಗ - ಸುಡ ನಿನ್ನ ಸಂಗದ

ಹರನ ಪ್ರಸನ್ನ ಮಾಡಿ ವರವ ಬೇಡಕೊಂಡ

ಹಿರಣ್ಯಕಶಪು ತಾ ಬಲ್ಲಂಗಾ - ನರ -

ಪಶು-ಮೃಗ-ಶಸ್ತ್ರದಿಂದ ಸಾಯದ್ದಂಗ - ಸಾಂಬ

ಸಂತುಷ್ಟಾಗಿ ವರಕೊಟ್ಟ ಬೇಡಿದ್ದಾಂಗ

ಕೊಟ್ಟ ಸುದ್ದಿ ಕೇಳಿ ನಿನ್ನ ಹೊಟ್ಟಿಯೊಳಗೆ ಬೆಂಕಿ ಬಿದ್ದು

ಸಿಟ್ಟಿನಿಂದ ಅರ್ಧಾ ಸಿಂಹನ್ಹಾಂಗ - ಸೀಳಿ ಹೊಸ್ತಲದಾಗ

**||ಚಾಲ||**

ನೀನಂತೂ ಯಾರಿಗೆ ಕೊಟ್ಟವನಲ್ಲಾ

ಒಬ್ಬರು ಕೊಟ್ಟರು ನಿನಗ ಸೇರಾಕಿಲ್ಲಾ

ನಿನ್ನ ಪೌತ್ರ ಸಾಂಬ ಯಾರಿಗೇನು ಕೊಟ್ಟರ

ಉರಿತಿ ನೀ ನಿನ್ನ ಮನದಾಗ

ಹಿರಣ್ಯಾಕ್ಷ ಭಸ್ಮಾಸೂರ ರಾವಣ ಕುಂಭಕರ್ಣ
ಮಣ್ಣು ಮುಕ್ಕಿದಾರೋ ನಿನ್ನ ಕಾಲಾಗ -
ದುರ್ಗುಣ ಹೀಂಗ -
ನಿನ್ನ ಭಕ್ತ ಹರಿಶ್ಚಂದ್ರನು
ದುರ್ದೈವಿಯಾಗಿ ಹೋದನು
ನಿನ್ನ ಸ್ಮರಣೆಗೈದು ಅಜಮೀಳನು
ಯಮಬಾಧೆಯಲಿ ಬಿದ್ದನು
ಪ್ರೀತಿಗೆ ಪಾತ್ರನೆಂದೆನಿಸಿದ ಏನು ಸುಡು-
ಗಾಡು ಸೇರಿದಾ ಸಾಂಬಶಿವಾ
ಬಡಕೊಂಡ ಬೂದಿ ಅನಿಸಿದ ಬಾವಾ
ಕರುಣಹೀನ ನಿನ್ನ ಕಡೆತನ ನಂಬಿದ
ಯಾವ ಮನುಜ ಪಥ ಕಂಡಾವಾ-
ಹೇಳಲೋ ದೇವಾ

**||ಏರು||**

ಎಲ್ಲ ದೇವರಲಿ ಎಂದೆಂದಿಗೂ ನೀ
ಕಲ್ಲು ಮನಸಿನವಾ ಕೇಶವಾ||ಆನೇ ಚೌಕ||

***ಸಂಗ್ರಹ :*** ಎ.ಜಿ. ನೀಲಗಾರ
***ಕೃತಿ :*** ಜಾನಪದ ಝೇಂಕಾರ

## ೧೩. ಭೃಗು ಋಷಿ

ಭೋಗ ತಾತ್ಪರ್ಯ ಆಗಿ ತೀರುವುದು
ತಂದ ತನಗ ಆಗದು ಗೊತ್ತಾ
ದೇವಲೋಕದೊಳಗ ನಡದಂಥ ಕಥಾ
ನೀವು ಚಿತ್ತಗೊಟ್ಟ ಕೇಳಬೇಕ್ರಿ ಕೂತಾ ||
ಯೋಗಿ ಆದರೇನ ಭೋಗಿ ಇದ್ದರೇನ
ತಪ್ಪೊದಿಲ್ಲ ಬ್ರಹ್ಮನ ಲಿಖಿತಾ
ಇದು ಸಿದ್ಧಾಂತಾ ||

ಬ್ರಹ್ಮ ಪುತ್ರ ಭೃಗು ಋಷಿ ಸಭಾದೊಳು
ತಂದಿನ್ನ ಕೇಳತಾನ ಜಡಿ ಜಡಿತಾ
ನನ್ನ ಹಣಿಯೊಳು ಬರದದ್ದು ಏನಂತಾ
ನೋಡಿ ಹೇಳಂದ ಮುಂದಾಗೊ ಕಥಾ ||

ಚೆನ್ನ ಚೆಲವಾದಿ ಹೆಣ್ಣ ಲಗ್ನ ಆಗಿ ನೀನು
ಐದ ವರ್ಷ ಅಲ್ಲೆ ಇರವೂತಾ
ಮೋಹದೊಳಗ ಎಲ್ಲಾನ್ನು ಮರತಾ ||

ನೀವು ಒಂದಾದ ವರ್ಷದೊಳು ಹೆಣ್ಣ ಹುಟ್ಟುವದು
ಆ ಮಗಳ ಕೂಡ ಭೋಗ ಮಾಡುತಾ
ಆಗ ಗಂಡ ಫಲಾ ಆಗೋದ ಮತ್ತಾ
ಹದಿನಾಲ್ಕು ವರ್ಷದೊಳಗಿನ ಮಾತಾ ||
ಅದೃಷ್ಟದೊಳಗಿಂದ ಆಗಿ ತೀರುವದು
ಎಂಥೆಂಥವರು ಆಗ್ಯಾರ ತುತ್ತಾ
ಇಷ್ಟಹೇಳಿ ಬ್ರಹ್ಮ ಸುಮ್ಮನ ಕುಂತಾ ||

ಕೇಳಿ ಭೃಗು ಋಷಿ ತಾಳಲಾರದೆ
ತಂದಿ ಕೂಡ ಜಿದ್ದಿಗಿ ನಿಂತಾ
ಕುಲಗೋತ್ರ ಅಂಬೋದು ನಿನಗಿಲ್ಲ ಗೊತ್ತಾ
ಹದಿನಾಲ್ಕು ವರ್ಷ ಅಂದರೆಷ್ಟೊತ್ತಾ |
ನಾ ಲಗ್ನ ಆಗದಿದ್ರ ಇದ ಹೆಂಗ ಆಗತೈತಿ
ತಪ್ಪಿಸುವೆನು ನಿನ್ನ ವಿಧಿ ಲಿಖಿತಾ
ತೊಟ್ಟಾನ ಪಂಥಾ ||

**ಒಂದನೇ ಚಾಲ**

ಭೃಗು ಋಷಿ ಆದಾನು ಸಿಟ್ಟ ಮನಿ ಬಿಟ್ಟ ಹೊಂಟ
ನಡದ ಸಂಚಾರಾ
ದಾಟುತ ಗುಡ್ಡಗಂವಾರಾ ||

ನಾ ಅಂದ್ರ ಏನಂತ ತಿಳದ ಅದೃಷ್ಟ ಬರೆದ
ಇದ ಯಾವ ದೊಡ್ಡ ಗೋರಾ
ಗೆದ್ದ ದಾಟುವೆನು ಹಗರಾ ||

ಸುತ್ತಹಾದ ಮುಗಿತ ಎಲ್ಲಾ ನಾಡ ಮನಸಿಗಿಲ್ಲ ದೃಢಾ
ಚಂದ್ರಾವತಿ ಪಟ್ಟಣ ದೊಡ್ಡ ಊರಾ
ನದಿ ಹರೀತಿತ್ತ ಅಗಸಿಯ ಎದುರಾ ||

ಗಿಡಕ ಕುಂತ ದಂಡಿಯಲ್ಲಿ ಹಾಲಕ್ಕಿ ನುಡಿತ ಚಿಲಿಬಿಲಿ
ಇಲ್ಲ ಖಬರಾ
ಜಳಕಾ ಮಾಡೋದಿವನ ಆತುರಾ ||

**ಎರಡನೇ ಚಾಲ**

ಚೆನ್ನ ಹೊಲಿಯ ಮಗಳು ನದೀಗಿ
ಕೊಡ ತಗೊಂಡ ಬಂದಾಳ ನೀರೀಗಿ ||

ಆಕಿನ್ನ ನೋಡಿ ಭೃಗು ಮನಕರಗಿ
ಮೈಮರತ ನಿಂತಾನು ಮರುಳಾಗಿ ||

ಇವನ ಮೇಲೆ ಆಕಿದು ಮನಸಾಗಿ
ಒಳಗಿಂದೊಳಗ ನಡದೀತು ಗುದಮುರಗಿ ||

ಕೊಡಾ ಹೊರಸಂತ ಕರದಾಳು ಸ್ವಾಮೀಗಿ
ನೋಡ್ಯಾನು ಶಿವದಾರಾ ಗುಂಡಗಡಿಗಿ ||

**||ಏರ||**

ಒಬ್ಬರನ್ನೊಬ್ಬರು ನೋಡುತ ನಿಂತಾರ
ಮನ ಮನಸ ಕೂಡ್ಯಾವ ಸರ್ತ
ಇಕಿ ಲಿಂಗವಂತರಾಕಿ ಖಚಿತಾ
ಲಗ್ನ ಆದರೆ ತಪ್ಪುವದು ವಿಧಿ ಲಿಖಿತಾ ||

ಯೋಗಿ ಅದರೇನು ಭೋಗಿ ಇದ್ದರೇನು
ತಪ್ಪೋದಿಲ್ಲ ಬ್ರಹ್ಮನ ಲಿಖಿತಾ
ಇದು ಸಿದ್ಧಾಂತಾ||೧||

ಯಾವೂರವರು ಸ್ವಾಮಿ ನೀವು ಇಲ್ಲಿಗ್ಯಾಕೆ ಬಂದೇರಂತ
ಸಡಕಾಸಿ ಕೇಳ್ಯಾಳ ಭಿಡೆ ಏನಿಲ್ಲಾ |
ಭೃಗು ಋಷಿಗೆ ಆತ ವಳ್ಳೆ ಕುಸಿಯಾಲಾ
ನಮ್ಮ ದೇಶ ದೂರ ರಾಜ್ಯದ ಮ್ಯಾಲಾ ||
ಮದಿವಿ ಆಗೋನು ಮನಿಗೆ ನಡೀರೆಂತ
ಕರಕೊಂಡ ನಡದಾಳ ಹಿಂಬಾಲಾ
ಬಿದ್ದ ದುಂಬಾಲಾ ||

ಕೈ ಹಿಡದ ಕರಕೊಂಡ ಹೋಗವಾಗ
ನೋಡುತ ನಿಂತಾರ ಜನರೆಲ್ಲಾ
ಈ ಸಾದೂಗಂತೂ ಅಭಿಮಾನವಿಲ್ಲಾ
ಏನ ಅನ್ನೊದೈತಿ ಕರ್ಮದ ಕಾಲಾ ||

ಹೆಣ್ಣು ಗಂಡು ಕಂಡಂಗ ಮಾತಾಡತಾರ
ಮೊದಲಿಗೆ ಇಕೀದು ಕಡಿಮಿ ಕುಲಾ
ಅಲ್ಲದ ಚಾಲಾ ||

ಬಾಗಿಲ ಮುಂದ ಬಂದ ಬಾಗಿ ಕೊಡಾ ಇಳವಿ
ಭಕ್ತಿಯಿಂದ ತೊಳದಾಳ ಕಾಲಾ
ಕುಂಡ್ರಿಸ್ಯಾಳ ಒಳಗ ಮಂಚದ ಮ್ಯಾಲಾ
ನೋಡಿದವರಿಗೆ ಬಿದ್ದಿತ ದಿಗಿಲಾ ||
ತಾಯಿ ತಂದಿನ್ನ ಕರದ ಕದ್ದಿಲಿ ಹೇಳತಾಳ
ಇವನ ಮ್ಯಾಲ ನನ್ನ ಹಂಬಲಾ
ನಾನು ಬ್ಯಾರೆ ಲಗ್ನ ಆಗೂದಿಲ್ಲಾ ||

ಇವನ ಕೂಡಾ ನನ್ನ ಮದವಿ ಮಾಡರಿ
ಇಲ್ಲೆ ಇರತೇವ ಕಡಗಿನ ಕಾಲಾ
ನಿಮಗಾಸರಾಗಿ ನಾವು ಅನುಗಾಲಾ
ಹಿಂಗ ಹಟಾ ತೊಟ್ಟ ಹಿಡಿದಾಳ ಕಾಲಾ ||
ಹೊರಗ ಕೊಟ್ಟರ ನನ್ನ ಕರತಂದು ಕಳಿಸವರ್ಯಾರಿಲ್ಲಾ
ಮುಂದ ಹಗಲೆಲ್ಲಾ ||

**ಒಂದನೇ ಚಾಲ**

ಮಂದಿ ಬಳಗ ಎಲ್ಲಾರು ಕೂಡಿ ಸಂಭ್ರಮ ಹೂಡಿ
ಮದಿವಿ ಮಾಡ್ಯಾರು
ಸತಿ ಪತಿ ಒಂದು ಆದಾರು ||

ಮನಿಯೊಳಗ ಮಡಿ ಹುಡಿ ನೇಮ ಧರಿಸುವರು ಭಸ್ಮ
ಶೀಲವಂತರು
ಸದ್ಭಾವ ಶಿವನ ಭಕ್ತರು ||

ನಿತ್ಯಲಿಂಗಪೂಜಿ ನಡಿತೆತ್ತ ಭೃಗುಋಷಿ ನೋಡಿ ಆದಶಾಂತ
ಖರೆ ಲಿಂಗವಂತರು
ಜಂಗಮರ ಸೇವಾ ಮಾಡುವರು ||

ಭೃಗು ಋಷಿಗೆ ಅಗವಲ್ತಗೊತ್ತ ಎಲ್ಲಾನ್ನು ಮರತ
ಯಾರಿಲ್ಲ ನನ್ನಂತವರು
ಬ್ರಹ್ಮ ಲಿಖಿತ ತಪ್ಪಿಸಿಕೊಂಡವರು ||

**ಎರಡನೇ ಚಾಲ**

ಇಲ್ಲಿಗೆ ತುಂಬ್ಯಾವ ನವ ಮಾಸಾ
ಹತ್ತರೊಳಗ ಜನಿಸಿತು ಹೆಣ್ಣ ಕೂಸಾ ||
ಸರ್ವರಿಗೆ ಆದೀತು ಉಲ್ಲಾಸಾ
ನೋಡಿ ಸಂಶೆಗೊಂಡಾನು ಬ್ರಹ್ಮೇಶಾ ||
ಹಿಂಗ ನಡಿಯುತ ಸಾಗಿತ ದಿವಸಾ
ಇಲ್ಲಿಗೆ ಕಳದಾವು ಐದ ವರುಷಾ ||

**||ಏರ||**

ಹ್ಯಾಂಗ ಮಾಡಲಿನು ಹ್ಯಾಂಗ್ಯಾಂಗೋ ಕಾಣತೈತಿ
ಹೇಣತಿನ್ನ ಕೇಳತಾನ ನಗನಗತಾ
ಖರೆ ಹೇಳ ಅಂದ ನಿಮ್ಮದ್ಯಾವ ಮತಾ
ನಾನು ಹ್ಯಾಂಗ ತಿಳಿಯಲಿ ನೀವು ಯಾರಂತಾ ||

ಯೋಗಿ ಆದರೇನು ಭೋಗಿ ಇದ್ದರೇನು
ತಪ್ಪೋದಿಲ್ಲ ಬ್ರಹ್ಮನ ಲಿಖಿತಾ
ಇದು ಸಿದ್ಧಾಂತಾ||೧||

ಮಾನುಳ್ಳವರೊ ನಾವು ನೀತಿವಂತರು
ಚೆನ್ನ ಚಲವಾದಿ ಜಾತಿ ಹೊಲಿಯರದಾ
ಕಪ್ಪಕಡಿ ಬಳಸೋದಿಲ್ಲ ಎಂದೆಂದಾ
ಯಾವ ದೋಷ ಸಿಗಾಣಿಲ್ಲಾ ನಮ್ಮಿಂದಾ ||
ಶಿವನ ಭಕ್ತರು ನಾವು ಜೋಗಿ ಜಂಗಮರು
ಊಟಾ ಮಾಡಿ ಹೋಗತಾರ ಬಂದಬಂದಾ
ಹಿಂಗ ನಡಿಯುತ ಬಂದೈತಿ ಮೊದಲಿಂದಾ ||

ಕೇಳಿ ಭೃಗು ಋಷಿಗೆ ದಿಂಗ ಬಡಿದಿತು
ತಪ್ಪಲಿಲ್ಲ ನನ್ನ ದೈವಾನದಿಂದಾ
ಹಿಂಗ ಇಲ್ಲಿತನಕಾ ಆದಿತ ಒಂದಾ
ಹ್ಯಾಂಗ ತಪ್ಪಿಸಲಿ ಉಳದೈತಿ ಇನ್ನೊಂದಾ ||

ಈ ಮಗಳ ಕೂಡ ಭೋಗ ಮಾಡೊದಲ್ಲ
ಮೊದಲಾ ಹಾಕಬೇಕಂತಾನ ಕೊಂದಾ
ದಾಟುವೆನಂದಾ ||

ಅರಗಿಳಿ ಹಂತಾ ಮಗಳು ನಾಕ ವರ್ಷದ್ದು
ಮಾತಾಡತಿತ್ತ ಚೆಂದ ಚೆಂದಾ
ಸುಳ್ಳ ಹೇಳಿ ಹೊರಗ ಕರಕೊಂಡ ನಡದಾ
ಅಡವಿ ಆರ್ಯಾಣದೊಳಗ ಅಡ್ಡದಾರಿ ಹಿಡದಾ ||
ಬಿಸಲ ಬಡದ ಬಾಳ ಗಾಳಿ ಆಗಿ ಆ ಮುದ್ದಕೂಸ
ತೊಳಲಿ ಬಳಸಿ ಬಾಯಾರಿ ಹಸದಾ
ಕಾಲ ರಕ್ತವಡದ ಕಲ್ಲಮುಳ್ಳ ತುಳದಾ ||

ಹಾಲ ಕುಡಸತಿದ್ಲ ಹಡದವ್ವ ನನಗ
ನೆನಪ ತಗೀತೈತಿ ತಾಯೀದಾ
ದಾರಿ ನೋಡತಾಳ ಮನಿಯಾಗ ನಂದಾ
ಅಪ್ಪಾ ಹೋಗೋಣ ನಡಿ ಇನ್ನ ಇಲ್ಲಿಂದಾ ||
ಕಂಗಾಲಾಗಿ ಕೂಸ ಕಾಲಹಿಡದ ಕೇಳೀತ
ಕರಕೊಂಡ ಹೋಗಬ್ಯಾಡ ಇನ್ನ ಮುಂದಾ
ಅಂವಾ ಇಲ್ಲೆ ಇಕಿನ್ನ ಕೊಲ್ಲಬೇಕಂದಾ ||

**ಒಂದನೇ ಚಾಲ**

ಅಲ್ಲೆ ಇತ್ತ ನೀರಲ ಗಿಡಾ ಜಾಗಾ ಅನಗಾಡಾ
ಹೊತ್ತ ಮುಳಗಿ ಆತ ಕತ್ತಲಾ
ಮಲಕೊಂಡ್ರ ಹಾಸಗಲ್ಲ ಮ್ಯಾಲಾ ||
ಮಗಳಿಗೆ ಹತ್ತಿತು ಜಂಪ ಎದ್ದು ಇವ ಗಪ್ಪ
ಬದಿಯಲಿ ಇತ್ತದೊಡ್ಡ ಕಲ್ಲಾ
ಎತ್ತಿ ಒಗದ ಮಗಳ ತಲಿಮ್ಯಾಲಾ ||
ವದ್ದಾಡಿ ಪ್ರಾಣ ಬಿಟ್ಟೀತ ನೋಡಿದಾನ ನಿಂತ
ಸಂಶೆ ಉಳಿಯಲಿಲ್ಲಾ
ಕಡಿತೆಂದ ಕರ್ಮದ ಕತ್ತಲಾ ||
ಪಕ್ಷಿಗಳು ದುಃಖ ಮಾಡುತ ಕಣ್ಣೀರ ಚೆಲ್ಲುತ
ಸರಿವಲ್ತ ಕಲ್ಲಾ
ಕರಡೆಪ್ಪ ಆದ ಅನುಕೂಲಾ ||

**ಎರಡನೇ ಚಾಲ**

ಬಾಯೊಳಗ ಇಟ್ವಾವ ಅಮೃತಾ
ಉಸಲ ತಿರುಗಿ ಕೂಸ ಎದ್ದ ಕೂತಾ ||

ಬ್ಯಾಟಗಾರ ನೋಡ್ಯಾನು ಬಂದ ನಿಂತಾ
ಕಣ್ಣ ತಗದಾನು ಪುಣ್ಯೇಕ ಭಗವಂತಾ ॥

ಮಾರಾಟಕ ಹಚ್ಚ್ಯಾನು ಪ್ಯಾಟಗಿ ನಿಂತಾ
ಕೂಸಿಗಿ ಬಂದಿತು ಭಾರಿ ಕಿಮ್ಮತ್ತಾ ॥

ಪಾತರದವರ ಮನಿಯೊಳು ಬೆಳೆಯುತಾ
ಕಲತಾಳು ನೃತ್ಯ ಸಂಗೀತಾ ॥

**॥ಏರ॥**

ಹದಿಮೂರು ವರುಷಕ್ಕ ಪ್ರಾಯಕ್ಕ ಬಂದಿದಾಳ
ನಾಟ್ಯ ರಂಗದಲ್ಲಿ ಪ್ರಖ್ಯಾತಾ
ದಿನಾ ಗಳಿಕಿ ಆಗತಿತ್ತ ವಿಪರೀತಾ
ಹಿಂಗ ನಡಿಸಿಕೊಟ್ಟ ಆಕಿಗಿ ಭಗವಂತಾ ॥

ಯೋಗಿ ಆದರೇನು ಭೋಗಿ ಇದ್ದರೇನು
ತಪ್ಪೋದಿಲ್ಲ ಬ್ರಹ್ಮನ ಲಿಖಿತಾ
ಇದು ಸಿದ್ಧಾಂತಾ ॥೩॥

ಒಂದಾನೊಂದ ದಿನಾ ದೊಡ್ಡ ಸಭಾ ಇತ್ತ
ನೋಡಲಾಕ ಕೂಡ್ಯಾರ ಜನಾ
ಒಳ್ಳೆ ಇಂಪಾಗಿ ಹಾಡತಿದ್ಲ ಗಾಯನಾ
ರೂಪ ಒಣಪದಲ್ಲಿ ಕಡಿಮಿ ಇಲ್ಲ ಏನಾ ॥

ಅದೇ ದಾರಿಯಲ್ಲಿ ಭೃಗು ಋಷಿ ಬಂದ
ಇಲ್ಯಾಕ ಕೂಡ್ಯಾರ ಇಷ್ಟ ಜನಾ
ಅಂಥ ಚಮತ್ಕಾರ ನಡದದ್ದು ಏನಾ ॥

ಮಂದಿ ದಾಟಿ ಮುಂದ ಬಂದ ನಿಂತಾನು
ರೂಪ ಒಣಪ ನೋಡಿ ಮೆಚ್ಚುತ ಮನಾ
ತಾನು ಕೆಣಕಬೇಕಾಂತಾನು ಇಕಿನ್ನಾ
ಏನಂತಿ ಹೇಳ ಯಾರಾಕಿ ನೀನಾ ॥
ನಿನ್ನ ಮ್ಯಾಲ ನನ್ನ ಹಂಬಲಾಗೇತಿ
ಬೇಕಷ್ಟ ಕೊಡತೇನ ಕೇಳ ನೀನಾ
ತಡಿವಲ್ತ ಮನಾ ॥

ಪಾತರದವಳೊ ನಾನು ದೈವ ಭಕ್ತಳು
ನಾ ಯಾರನ್ನು ಮುಟ್ಟಿಲ್ಲ ಇಲ್ಲಿತನಾ
ಸರ್ವರಿಂದ ಐತಿ ನನಗ ಸನ್ಮಾನಾ
ತನ್ನ ಮಗಳು ಅಂಬೋದು ಹತ್ತವಲ್ತ ಖುನಾ ||
ಪಾತಾರದವಳು ಅಂದ್ರ ಯಾತರದೇನ ಭಯಾ
ಹ್ಯಾಂಗ ಬಿಟ್ಟಿರಲಿ ಸುಮ ಸುಮನಾ
ಈಕಿನ್ನ ಹೊಂದುವೆನಾ ||

ಒಲ್ಲಿ ನನ್ನದ ಒಪ್ಪಿಕೊಂಡಾಳು ಹಿಂಗ
ಯಾರ್‍ಯಾರು ಕೇಳಿದ್ದಿಲ್ಲ ಇಲ್ಲಿತನಾ
ಬಂದ ನೋಡಿ ಹೋಗತಿದ್ರ ದಿನಾ ದಿನಾ
ನಾನು ಕಂಡಿಲ್ಲ ಅಂದ್ಲ ಇಂಥಾ ಎದಿಗಾರನಾ ||
ಕೈಹಿಡದ ಕರಕೊಂಡ ಹ್ವಾದಳ
ಊಟ ಆತ ಪಂಚಪಕ್ವಾನ್ನ
ಭೃಗು ಋಷಿಗೆ ಅಗವಲ್ತು ಸಮಾಧಾನಾ ||

**ಒಂದನೇ ಚಾಲ**

ಕೂತಾರು ಮಂಚಲ ಮ್ಯಾಗ ವಿಳ್ಯೇದೆಲಿ ಅಡಿಕಿ ಲವಂಗ
ಮಡಿಚಿ ತಿನ್ನೂತಾ
ಮನಸಿಗಿಲ್ಲ ಪುರಸೊತ್ತಾ ||

ಪುನಗ ಜವಾದಿ ಗಂದ ಮಲ್ಲಿಗಿ ಮಕರಂದ
ನಡಿತಾ ಗಮ್ಮತ್ತಾ
ಇಬ್ರು ಕೂಡಿ ಆದ್ರ ಏಕಾಂತಾ ||

ಒಂದ ವರಸ ಅಂವ ಅಲ್ಲೆ ಉಳದಾ ಮಗಾ ಹುಟ್ಟಿತ ಪಸಂದಾ
ಅಕ್ಕರತೀಲಿ ಎತ್ತ ಇಳಸೂತಾ
ಹಿಂದ ಮುಂದಿಂದೆಲ್ಲಾ ಅಲ್ಲೆ ಮರತಾ ||

ಒಂದ ದಿನಾ ಇಬ್ಬರು ಕೂಡಿ ಆಡತಿದ್ರ ಪಗಡಿ
ಚ್ಯಾಷ್ಟಿ ಮಾಡುತಾ
ಒಳ್ಳೆ ನಡದಿತ್ತ ಮಾಯದ ಮಮತಾ ||

**ಎರಡನೇ ಚಾಲ**

ನಿಮದು ಯಾವ ಊರ ಹೇಳರಿ ಖಾಸಾ
ನಗನಗತ ಕೇಳ್ಯಾಳು ಉಲ್ಲಾಸಾ ||

ನಾಡಮ್ಯಾಲ ದೂರೈತಿ ನಮ್ಮದೇಸಾ
ತಿಳಿಯಗೊಡಲಿಲ್ಲ ತನ್ನ ವಿಶ್ವಾಸಾ ||

ಇತ್ತಕಡಿಗಿ ಬಂದದ್ದು ಯಾವ ಕೆಲಸಾ
ಕಾಶಿಯಾತ್ರಿ ಮಾಡುವ ಉದ್ದೇಶಾ

ತಲಿಯ ಮ್ಯಾಲೆ ಹ್ವಾದೀತ ಇವನ ದ್ಯಾಸಾ
ಕಡಕೊಂಡ ಬಿದ್ದಾಂಗಾತು ಆಕಾಶಾ ||

**||ಏರ||**

ಕಲಿ ನೋಡಿ ಅವನ ನೆಲಿ ತಪ್ಪಿಹೋತ
ಕೇಳತಾನು ಇದು ಏನಂತಾ
ದುಂಬಾಲ ಬಿದ್ದ ಲಗೂ ಹೇಳಂತಾ
ನನಗ ಇಲ್ಲಿ ತನಕಾ ಆಗಿಲ್ಲ ಗೊತ್ತಾ ||

ಯೋಗಿ ಆದರೇನು ಭೊಗಿ ಇದ್ದರೇನು
ತಪ್ಪೋದಿಲ್ಲ ಬ್ರಹ್ಮನ ಲಿಖಿತಾ
ಇದು ಸಿದ್ಧಾಂತಾ ||||ಳ||

ಚೆನ್ನಚೆಲವಾದೇನ ಮನಿಯೊಳು ಹುಟ್ಟಿ ನಾನು
ದಿನಕ ದಿನಾ ಅಲ್ಲೆ ಬೆಳೆಯುತಲಿ
ತಂದಿ ಕರಕೊಂಡ ಹ್ವಾದ ಗುಡ್ಡದಲಿ
ಕಲ್ಲ ಒಗದ ಕೊಂದ ನನ್ನ ತಲಿಮ್ಯಾಲಿ ||
ಜೋಡ ಪಕ್ಷಿಗಳು ಪಾಲನಾ ಮಾಡಿದಾವ
ಅಮೃತ ಇಟ್ಟ ನನ್ನ ಬಾಯಲ್ಲಿ
ಅಂವ ಎತ್ತೋ ಹೋದ ರಾಜ್ಯದ ಮ್ಯಾಲಿ ||

ಕರಡಿ ಪಕ್ಷಿಗಳು ಉಪಚಾರ ನಡಸುತ
ಮನುಷರಂತೆ ಪ್ರೀತಿ ಮಾಡುತಲಿ
ಒಬ್ಬ ಬ್ಯಾಟಿಗಾರ ಬಂದ ನಿಂತ ನೋಡುತಲಿ
ಅಂವ ತಂದ ಮಾರಿದಾನ ಪಾತ್ರದವರಲ್ಲಿ ||
ಕೇಳಿ ಭೃಗು ಋಷಿ ಪಾತಾಳಕ ಇಳದಾನ

ತನ್ನ ಮಗಳು ಅಂಬುವ ಖೂನ ಹತ್ತುತದಲಿ
ಕೂಸ ತೊಟ್ಟಿಲದಲಿ ಎದ್ದ ಅಳೂತಲಿ ॥

ನನ್ನ ಮಗನ ಮೊಮ್ಮಗನೆ ಮಗನ ಮಗನೆ
ಬ್ರಹ್ಮನ ಮರಿಮಗನೆ ಅನ್ನುತಲಿ
ಜೋ ಎಂದು ತೊಟ್ಟಿಲ ತೂಗುತಲಿ
ಇಲ್ಲಿ ನಿಲ್ಲಬಾರದಂತಾನ ಇನ್ನ ಮ್ಯಾಲಿ ॥
ಮೃತ್ಯು ಲೋಕ ಬಿಟ್ಟ ನಡದ ಮಾರಾಯ
ದಾರಿ ಕಾಯುತಿದ್ರ ಸಭಾದಲ್ಲಿ
ದೇವ ಲೋಕದಲ್ಲಿ ॥

ಹದಿನಾಲ್ಕು ವರ್ಷಗಳು ಹ್ಯಾಂಗ ಕಳದವು
ತಿಳಿಯಲಿಲ್ಲ ಮಾಯದ ಬಲಿ
ಸತ್ಯ ಲೋಕದ ದಾರಿ ಹಿಡದ ವತ್ತರಲಿ
ಹಿಂದ ಆದದ್ದು ನೆನಸುತ ದುಃಖದಲಿ ॥
ಅಪಮಾನ ಬಾಳಾತ ಉಪಾಯಗಾಣದೆ
ನಿಂತಕೊಂಡ ಬ್ರಹ್ಮನ ಸಭಾದಲಿ
ಕೈ ಮುಗಿಯುತಲಿ ॥

**ಒಂದನೇ ಚಾಲ**

ಕೂಡಿದ್ರ ಯಕ್ಷ ಗಂಧರ್ವರ ದೇವಾನು ದೇವತೇರ
ಕೇಳುವ ಆತುರಾ
ಭೃಗು ಋಷಿಗೆ ಆದ ಮಜಕೂರಾ ॥
ಎದ್ದಬಂದ ಬ್ರಹ್ಮದೇವರ ಅಪ್ಪಿಕೊಂಡಾರ
ಸಮಾಧಾನ ಮಾಡ್ಯಾರು
ಕೇಳ್ಯಾರು ಮಾಡಿ ವಿಚಿಯಾರಾ ॥

ಭೃಗು ಋಷಿ ಹೇಳತಾನ ನಿಂತ ಆಗೋದೆಲ್ಲಾ ಆತ
ತಪ್ಪಲಿಲ್ಲ ನನ್ನ ಹಣೆಬರಾ
ಒಂದು ಬಿಡದೆ ಮುಗದ ಹೋತ ಪೂರಾ ॥
ಹೀಂಗೈತಿ ಅದೃಷ್ಟದ ನೇಮ ಹಿಂದಿನ ಕರ್ಮ
ತೊಳದ ಹೋತ ಪೂರಾ
ಭೃಗು ಋಷಿ ಆದ ಆಗ ಹಗರಾ ॥

**ಎರಡನೇ ಚಾಲ**

ಕಾಡಿನ ಪಕ್ಷಿ ಮಾಡಿದ ಪುಣ್ಯೇಕ
ಹೊಸಾ ಹೆಸರ ಇಟ್ಟಾರ ತತ್‌ಕ್ಷಣಕ ||

ರತ್ನ ಪಕ್ಷಿ ಅನ್ನುತ ಸರ್ವಲೋಕ
ಕೈ ಮುಗೀಲಿ ಮುಂಜಾನೆ ಏಳುದಕ ||
ಕರಡಿ ವಾಸ ಮಾಡಿತ್ತ ನೀರಲ ಗಿಡಕ
ಜಾಂಬುವಂತ ಅನ್ನಲಿ ಕಡಿತನಕ ||

ಬಿಗಿ ಐತಿ ಅದೃಷ್ಟದ ತೊಡಕ
ಯಾರಿಂದ ಆಗದ ಬಿಡಸಾಕ ||

||**ಏರ||**

ಪ್ರಾಸ ಪಲ್ಲವಿ ಸೋಸಿನೋಡಿ ತ್ರಾಸ ಹಿಡದ ತೂಕಾಮಾಡಿ
ಪ್ರಾಸ ಇದ್ದರ ಅನಬೇಕ ಹೌದಹೌದಂತಾ
ತಿಗಡೊಳ್ಯಾಗ ಹುಟ್ಟತಾವ ಹೊಸ ಹೊಸ ಕವಿತಾ
ಮರಿಕಲ್ಲ ಬರೀತಾನ ಆಕಳಗಳ ಕಾಯ್ಕೊಂತಾ ||

ಯೋಗಿ ಆದರೇನು ಭೋಗಿ ಇದ್ದರೇನು
ತಪ್ಪೋದಿಲ್ಲ ಬ್ರಹ್ಮನ ಲಿಖಿತಾ
ಇದು ಸಿದ್ಧಾಂತಾ ||||೫||

***ಸಂಗ್ರಹ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೧೪. ಚಂದ್ರ ಚೂಡಾಮಣಿ

**||**ಪಲ್ಲ||

ಜಯಮೆ ಜಯನ ಮುಂದ ಜಯಮುನಿ ಅಂತಾನ ಶಾಮಕರಣ ಬಿಟ್ಟಾರ ಪಂಚಪಾಂಡವರಾ |
ಚಂದ್ರಚೂಡಾಮಣಿ ಅಂಬಾವ ರಣಶೂರಾ |
ಚಪ್ಪನ್ನ ದೇಶದೊಳಗ್ಯಾರ್‍ಯಾರಿಲ್ಲ ಅವನಿದಿರಾ ||
ಕಪಟದಿಂದ ಅವನ ಹೊಡದ ಕೃಷ್ಣ ತಾ ಹೇಳುವೆನು ಸಾರಂವಸಾರಾ |
ಚಿತ್ತಗೊಟ್ಟ ಕೇಳರಿ ಸಣ್ಣದೊಡ್ಡವರಾ ||

**ಚೌಕ -೧**

||ನುಡಿ||

ದುಂದುಮಿರಾಜನ ನಗರದಾಟಿ ಸಾಗಿ ನಡದಾರ ವೃಷಕೇತು ಬಭ್ರುವಾಹನ
ಮುಂದಮುಂದಾ ।
ಮನ್ಮಥ ಅನಿರುದ್ಧ ರಥ ನಡಸಿದ್ದಾ ।
ಕೃಷ್ಣ ಸಾರಥಿ ಮಾರುತಿ ಧ್ವಜಸ್ಥಲದಲ್ಲಿದ್ದಾ ॥
ತಾಮ್ರಧ್ವಜಾ ಮಯೂರಧ್ವಜಾ ಹಂಸಧ್ವಜಾ ಇರುವರು ಮನುಹೊಂಟಾ ನಗತಿದ್ದಾ ।
ಗಿರಿರಾಜನ ಗೆದ್ದೀವಂತ ಹರುಷದಿಂದಾ||೧||

ಜಾಲಂದ್ರಪುರಕ ಹೋತ ಕುದರಿ ಹಿಡದಾರ ಚಂದ್ರಚೂಡಾಮಣಿ ಹಂತೀಕ
ದೂತರ ಬಂದಾ ।
ವೃಷಕೇತು ಬಭ್ರುವಾಹನ ಇದ್ರ ಕುದರಿ ಹಿಂದ ।
ಅವರಿವರಿಗಿ ಹತ್ತಿತ ಜಗಳದ ಸಂದಾ ॥
ದೂತರೆಲ್ಲಾರು ಕೂಡಿ ವೃಷಕೇತು ಬಭ್ರುವಾಹನರನ್ನ ಹಾಕಿದಾರ ಬಡಬಡದಾ ।
ಅವರಿಬ್ರು ಬಿದ್ದಾರ ನೆಲ ಹಿಡದಾ||೨||

ದ್ವಾರಪಾಲಕರು ತಗೊಂಡ ಹೋಗಿ ಆ ಕುದರಿ ನಿಲ್ಲಸ್ಯಾರ ಅರಸನ ಮುಂದಾ ।
ಪಾಂಡವರ ಅರ್ಜುನ ಅಲ್ಲಿಗಿ ಬಂದ ।
ಕೇಳಿ ಚಂದ್ರಚೂಡಾಮಣಿ ಏನಂದಾ ।
ಮೈಮ್ಯಾಲಿನ ರೋಮನಿಗರಿ ನಿಂತಾವ ತನ್ನ ದಂಡಿಗಿ ಹೇಳತಾವ ಜಲದಿದಿಂದಾ ।
ತಯಾರಾಗಲಿ ಕರ್ಬಲ ಸರ್ವಸಾಹಿತ್ಯದಿಂದಾ||೩||

ರಣವಾದ್ಯ ಹೊಡಿಸಿದ ಕರ್ಣಿಕಾಳಿಗಳ ಹಿಡಿಸಿದ ಡಂಕೆ ನುಡಿಸಿದ ಅರಭಾಟದಿಂದ ।
ಮೂರುಲೋಕಕ್ಕ ಸಾರಿತ ಸ್ತುತಿ ರಾಜಂದಾ ।
ಇದ್ನ ಕೇಳಿ ದೇವಿಂದ್ರ ಕುಂತ ದಿಂಗವರದಾ ॥
ಎದ್ದನಿಂತ್ರ ಚಂದ್ರಚೂಡಾಮಣಿ ಸೂರ್ಯ ಹೊಂಕಳಕ ಬರುವನೊ ನಿತ್ಯ ಪೃಥ್ವಿದಿಂದಾ ।
ಆವಗಿವಗ ಆಗೂದ ಯುದ್ಧ ಗರ್ದಿದಿಂದಾ||೪||

**||ಚಾಲ||**

ಸರ್ವಸೈನ್ಯ ತಗೊಂಡ ರಥ ಏರಿ ಕುಂತ ಅರಬಟಸಿ ನಡದಾರ ಆ ಕ್ಷಣಾ ।
ನೋಡುವೆನು ಹೆಂತಾಂವ ಅರ್ಜುನಾ||೧||

ಮಹಾರಥಿಕರೆಲ್ಲಾರು ಕೂಡಿ ಏಕಾಗಿ ನಡದಾರ ಮುಂದಸಾಗಿ ಹಿಡದಾರ
ಗುರುಬಾಣಾ ।
ಏರಿ ಹೊಡದಿ ಕಡದಿ ಕೆಡವಿದಾರ ಹೆಣಾ||೨||

ಕಾಲ ಬಲಕ್ಕ ಹತ್ತ ಸೆರಿಸೂರಿ ಬಿದ್ದ ಕಬರ್ದಾರಿಬಿಡತಾವೊ ಪ್ರಾಣಾ ।
ಮಹಾರಥಿಕರದೆಲ್ಲಾ ಆದಿತ ಮರುಣಾ॥೩॥

ದುಯರಿ॥ಎಷ್ಟದಂಡ ಸತ್ತಿತ ಗಣಿತಾ ।
ಭೂಮಿ ತುಂಬಿ ಹರಿತ ರಗತಾ॥೧॥

ಚಂದ್ರಚೂಡಾಮಣಿ ರಥ ಧುಮಕುತಾ ।
ಬಂತ ಇದರಿಗಿ ಸನೀಕ ಸಾರಿಕೊಂತಾ॥೨॥

ಅರ್ಜುನಗಂತಾನ ಎಂದ ಮಾಡಿದ್ದ್ಯೊ ಶರತಾ ।
ನನ್ನ ಕೈಯಾಗ ಸಾಯಾಕ ಬಂದಿ ವ್ಯರ್ಥಾ॥೩॥

**॥ಕೂ.ಪ. ॥**

ಕೃಷ್ಣನ ಬಡಿವ್ಯಾರದಿಂದ ಬಂದದಿ ಇಲ್ಲಿಗಿ ಖರೆ ಕೊಂದ ಹಾಕುವಷ್ಟ ನನ್ನಲ್ಲಿ ಧೀರಾ ।
ಆ ತುಡಗ ಕೃಷ್ಣ ಯಾವ ದೊಡ್ಡ ರಣಶೂರಾ ।
ಜರಾಸಂಧಗಂಜಿ ನಡಗುವ ಥರಥರಾ । ಕಪಟದಿಂದ ॥

**ಚೌಕ – ೨**

**॥ನುಡಿ॥**

ದುಂದುಮಿರಾಜನ ಕಪಟತನದಿದ ಹೊಡದ ಕೃಷ್ಣ ಕೀರ್ತಿ ಬೆಳಸಿ ಬಂದಿ ರಣಶೂರಂತಾ ।

ನಿನ್ನ ಲಥಾಯಿ ಗೋಪ್ಯಾರ ಒಳಗ ಬಾಳಸಿಸ್ತಾ ।
ದನ ಕಾಯಕೊಂತ ಇರಾಂವ ಮರಡಿ ತಿರಗುತಾ ॥
ಇಸವಾಸಗಾತಕದಿಂದ ಕಪಟ ಮಾಡೇದಿ ನೀ ಕಡಿಮ್ಯಾಂವ ಅದಿಯ ಹೆಂಗಸರಕಿಂತಾ ।
ಸುಳ್ಳಲ್ಲ ಮಾತ ಇದ ಖಚಿತಾ॥೧॥

ಸಿಟ್ಟಿಗಿ ಏರಿದ ಆ ಮನ್ಮಥ ಅಂತಾನ ಹೆಂತಾಮಾತನಾಡೇದಿಯೊ ನಮ್ಮ
ತಂದಿಗಿ ನಿಂತಾ ।
ನಿನ್ನ ಪ್ರಾಣತಗೊಳ್ಳುವಷ್ಟು ಸಮರ್ಥಾ ।
ಏನ ಆಡಾಣಾ ಆಡೇದಿ ಕಡಿಮ್ಯಾಂವ ಅಂತಾ ॥
ಇಷ್ಟಕೇಳಿ ಚೂಡಾಮಣಿ ಅಂತಾನ ಎಲ್ಲಾರೊಳಗ ಬಾಳಹೇಡಿ ಅದಿ ನೀನು ಮನ್ಮಥಾ ।
ಬಾಳ ಬಡೇಜವ ಇಳಸ್ತಿ ಏನಂತಾ॥೨॥

ಹೆಂಗಸರ ಒಳಗ ನಿನ್ನ ಚಲ್ಲಾಟ ಕಾಮನಾಟ ಮಲ್ಲಿಗೂವಿನ ಹಾಸಿಗ್ಯಾಗ ಮಲಗೂತಾ ।
ನೀನು ವಿಲಾಸದಿಂದ ಇರಬೇಕ ಸ್ವಸ್ತಾ ।

ನನ್ನ ಕೈಯಾಗ ಸಾಯಾಕ ಬಂದಿ ಅನರ್ಥ ॥
ದುಂದುಮಿರಾಜನ ಗೂಡ ಯುದ್ಧ ಮಾಡಿ ಓಡತಿದ್ದ ಅಂವ ಅಲ್ಲ ಮ್ಯಾಲಿನ
ಹಣಮಂತಾ ।
ಇಲ್ಲಿ ಲಂಕಾಯಿಲ್ಲ ಬಂದಿ ಹಾರಿ ಜಿಗದಿನಂತ॥೨॥

ಎದ್ದಾನ ಅನಿರುದ್ಧ ಅಜ್ಜ ಕೃಷ್ಣಗ ಅಂತಾನ ಅಪ್ಪಣಿ ಕೊಟ್ಟರೆ ನೋಡಾಕೊ
ಒಂದ ಗಳಿಗೊತ್ತಾ ।
ಬಾಳ ದಿಕ್ಕರಿಸಿ ಮಾತಾಡತಾನ ಬೇಕಂತಾ ।
ಇಂವ ಯಾವ ದೊಡ್ಡ ರಣಶೂರಂತಾ ॥
ಖರೆ ಮನ್ಮಥನ ಇರಸೇದಂವ ಇದ್ರ ಕಡದ ಹಾಕೀನ ಬಿಡಲಾಕಿಲ್ಲ ಈಗ ತುರತಾ ।
ಎಲೊ ಕೇಳೊ ಅಸುರ ನೀ ನನ್ನ ಮಾತಾ॥೪॥

**॥ಚಾಲ॥**

ಬಂದ ಮಯೂರ ಧ್ವಜಾ ಅಂತಾನ ಸ್ವಾಮಿ ಕೃಷ್ಣ ಅಪಣಿಕೊಡ್ರಿ ಇನ್ನ್ಯಾಕ ।
ಹೊಡ್ಡ ಕಡ್ಡ ಕೆಡೂತೀನ ನೆಲಕ॥೧॥

ಹೊಡಿ ಹೊಡಿ ಅಂತಾನ ತಡಾಮಾಡಬ್ಯಾಡ ಜಲ್ದಿ ತಡಾಮಾಡೂದ ಇನ್ನ ಯಾತಕ ।
ಕಿಂವಿ ನಿಗರ್‍ಯಾವ ಅರ್ಜುನನುವ ಆ ಕ್ಷಣಕ॥೨॥

ಹಿಡದ ಪಾರ್ಥ ಕೋದಂಡ ಹೆದಿಗೇರಿಸಿ ಕಿಂವಿಯ ಝೇಂಕರಿಸಿ ಬಿಟ್ಟಾರ
ಮೂರು ಲೋಕ ।
ತಳಮಳಿಸಿತ ಅಷ್ಟ ಅರಭಟಕ॥೩॥

**॥ದುಯರಿ॥**

ಬಾಣ ಹೊಡದ ಪಾರ್ಥ ಜಲದಾ ।
ಚಂದ್ರ ಚೂಡಾಮಣಿ ಕಡದ ಕೆಡವಿದಾ॥೧॥

ಮನ್ಮಥ ಮಯೂರ ಧ್ವಜ ಅನಿರುದ್ಧ ಅವಸರದಿಂದಾ ।
ಶರಹೂಡಿ ಹೊಡದಾರ ಕೋಪದಿಂದಾ॥೨॥

ಬಾಣ ಹೊಡದಾರ ಭೂಮಿ ತುಂಬಿ ನಡದಿತ ಹಿಡಸದಾ ।
ಹೇಳಲಾರೆ ನಿಂತ ಕಾಳಗದಾ॥೩॥

**॥ಕೂ.ಪ. ॥**

ಕತ್ತಲ ಬಿದ್ದಾಂಗಾತ ರಣಗಾಳಿ ಬಾಣಗಳಿಂದ ಕೂಡಿ ಮುತ್ತಿಗಿ ಹಾಕಿದಾರ ಯಲ್ಲಾರಾ ||
ಪೃಥ್ವಿ ಆಕಾಶಕ ಆದಿತ ಬಾಣ ಒಂದ ಬಾರಾ |
ಇಷ್ಟಾದ್ರ ಮಾಡಲಿಲ್ಲ ದರಕಾರಾ || ಕಪಟದಿದ ||

**ಚೌಕ – ೩**

**||ನುಡಿ||**

ಬರೂ ಬಾಣಾ ನೋಡಿ ಚಂದ್ರ ಚೂಡಾಮಣಿ ಗರ್ಜನಿಹೊಡದ
ಅರ್ಭಾಟದಿಂದ ಶೌರ್ಯದಿ ನಿಂತಾ |
ನೆಲಕ ಆಕಾಶಕ ಬಾಯ ತೆರಕೊಂತಾ |
ಉರಿಕಾರಿಕೊಂತಾನ ಏನಮಾಡಲೆಂತಾ ||
ಬಂದ ಬಂದ ಬಾಣಗಳನೆಲ್ಲಾನುಂಗಿ ನುಂಗಿಬಿಡತಾನ ಎಷ್ಟ ಬಾಣ
ಹೊಡಿತೀರಿ ನೀವು ಹೊಡಿರೆಂತಾ |
ಹಿಂದಿಗಡೆ ನನ್ನ ಕೈಯ ನೀವು ನೋಡೀರೆಂತ||೧||

ಇಷ್ಟ ಆಗೂದ್ರೊಳಗೆ ಹೋಗಿ ನಾರದ ಹೇಳಿದ ಎಲೊ ಸೂರ್ಯ ನೀ
ಒಬ್ಬ ಹೋಗ ಹೊಂಟ ತುರತಾ |
ಸೂರ್ಯ ಅಂದ್ರ ಎಲ್ಲಾರೊಳಗ ಶಮರಂತಾ |
ನಿಂದ್ರ ಬೇಕಂತ ನಿಂತೀನೊ ಮೋಜ ನೋಡಿಕೊಂತಾ ||
ಮಮ್ಮಗ ಆಗಬೇಕ ನಿನಗ ವೃಷಕೇತು ಬಬ್ರುವಾಹನ ಲಢಾಯಿ ಮಾಡಿ
ರಣದಾಗ ಸತ್ತಾ |
ಇದರ ಇರ್ಸೆ ಇಲ್ಲೇನಂತ ಕೇಳುತಾ||೨||

ಎಲ್ಲಾರೂ ಕೂಡಿ ಹೋಗಿ ಚಂದ್ರಚೂಡನ್ನ ಹೊಡೀರಿ ಸೂರ್ಯ ಓಡಿ
ಬಂದ ಕೇಳಿ ನಾರದನ ಮಾತಾ |
ಅಂವ ಬರೂದ ಕಂಡ ಚಂದ್ರ ಚೂಡಾಮಣಿ ನಿಂತಾ |
ಹಿಡ್ದ ಬಾಣ ಹೊಡ್ದ ಬಂತ ಘೋರ್ಗರೆಯುತಾ ||
ಮಯೂರಧ್ವಜಾ ಮನ್ಮಥ ಅನಿರುದ್ಧ ಕೃಷ್ಣಪಾರ್ಥ ವೀರ  ಹಣಮಂತಾ |
ಇವರು ಆರೂ ಮಂದಿ ಎಲ್ಲಾ ಬಿದ್ದಾರ ರಹಿತಾ||೩||

ಹಿಂದಕ ತಿರತಿರಗಿ ನೋಡಿ ಮುಂದಕ ಓಡತಾನ ಸೂರ್ಯ ನಾನೂ ಒಬ್ಬ
ಹಕನಕ ಸತ್ತೀನಂತಾ |
ಹೋದ ಚಂದ್ರಚೂಡಾಮಣಿ ಜೈವಾದ್ಯ ಹೊಡಕೊಂತಾ |
ಇಲ್ಲಿ ಕೃಷ್ಣ ಎಲ್ಲಾರ್ನ ಎಬ್ಬಿಸ್ಯಾನ ಸಹಿತಾ ||
ಪಾರ್ಥ ಅಂತಾನ ನನ್ನ ಕಡಿಂದ ಮರ್‍ರ್ಯೋ ಇಂವನ ಸರಿ ಲಢಾಯಿ ಮಾಡದಾಗದಂತಾ |
ಬ್ಯಾಡ ಬ್ಯಾಡ ತಿರಿಗಿ ಹೋಗೂನು ನಡಿರೆಂತಾ||೪||

**||ಚಾಲ||**

ಅರ್ಜುನಗ ಕೃಷ್ಣ ಅಂತಾನು ಕಪಟದಿಂದ ಬರುವೇನು ಅವನ ಹೊಡದಾ।
ಅಲ್ಲಿ ಬ್ರಾಹ್ಮಣನಾಗಿ ಹೋಗಿದ್ದಾ||೧||

ನೀ ಕೇಳೋ ರಾಜಾ ನಾ ದಾನಾ ಬೇಡತೀನ ಬಡತನ ಆಶೆಯಿಂದ।
ದಾನಾ ಮಾಡೊ ನೀನು ಭಕ್ತಿದಿಂದಾ||೨||

ದಾನಾ ನೀಡಲಾಕ ಚೂಡಾಮಣಿ ಬಂದ ಅವಸರದಿಂದ ಕೃಷ್ಣ ಏನಂದಾ।
ಸ್ನಾನ ಮಾಡಿ ನೀಡ ಮಡಿದಿಂದಾ||೩||

**||ದುಯರಿ||**

ನೀರ ಕಾಯಲಾಕ ಇಟ್ಟ ಆ ಕ್ಷಣಾ।
ಅಲ್ಲಿ ಕಪಟಮಾಡಿ ಆ ಬ್ರಾಹ್ಮಣಾ||೧||

ನೀರಿನಾಗ ಬಿಟ್ಟ ಸುದರ್ಶನಾ।
ಕುಂತ ಜಳಕಕೆ ಒದಗಿ ಬಂತ ಮರಣಾ||೨||

ನೀರ ಹಣಸಿಕೊಂಡ ಕತ್ತಿರಿಸಿ ಬಿತ್ತ ರುಂಡ ಬಿಟ್ಟ ಪ್ರಾಣ।
ವಿಜಯಾದ ಪಾಂಡವರ ಅರ್ಜುನಾ||೩||

**||ಕೂ.ಪ.||**

ಕುದರಿ ಬಿಟ್ಟಾರ ಸೂರ್ಯಮಂಡಲಕ ಹೋದೀತ ನಮ್ಮ ವಸ್ತಾದ
ಚೆನ್ನಪ್ಪ ಜ್ಞಾನದ ಬುದ್ಧಿ ಸಮುದ್ದರಾ।
ಕಲ್ತ ಹಾಡೂದಿಲ್ಲ ಸ್ಥಲಾ ಗೋಕಾಂವಿ ಶಹರಾ।
ಮಾಧು ಹೂವಣ್ಣ ಮಾಡಿದ ಸಣ್ಣ ಪಾರಾ || ಕಪಟದಿಂದ ||

***ರಚನೆ :*** ಮಾಧು ಹೂವಣ್ಣ
***ಕೃತಿ :*** ಚಾಪ ಹಾಕತೀವಿ ದಪ್ಪಿನ ಮ್ಯಾಲ

# ೧೫. ಶ್ರೀ ಕೃಷ್ಣಾವತಾರ

**||ಪಲ್ಲ||**

ಮೊದಲ ದ್ವಾಪಾರಕ-ಕೃಷ್ಣ ಹುಟ್ಟತಾನಾ-ಎಂಟನೆ ಅವತಾರಕ |
ಬಂದಿನ್ಯಾಗ ವಸುದೇವ ದೇವಕಿ ಮಾಡತಿದ್ದಾರ ದುಃಖ ||

**ಚೌಕ -೧**

**||ನುಡಿ||**

ಕಂಸಾಸುರ ಗೋಕುಲದ ಒಳಗ ಮಹಾ ಪುಂಡ ಪಳಿಂಕಾರಾ |
ದಂಡ ದಣಿ ದೌಲತ್ತ ಆತಗ ಯಾರ್‍ಯಾರ ಇಲ್ಲ ಇದರಾ||೧||

ತಂಗಿ ಹೊಟ್ಟಿಲೆ ವೈರಿ ಹುಟ್ಟಿ ವಧಾ ಮಾಡತಾನ ತಾರಾ |
ಹಿಂತಾ ಭವಿಷ್ಯಗಳ ಮುಂದ ಕಂಸಗ ಹೊಯ್ಕು ತಿಳಿತ ಪೂರಾ||೨||

ಮೂರ ತಿಂಗಳ ಗರ್ಭ ಹೊಟ್ಯಾಗ ಕೃಷ್ಣ ಮೂಡತಿದ್ದ ಜಾರಾ |
ಕರುವತಾನ ತಂಗಿ ಹೊಟ್ಟಿ ಸೀಳಲಾಕ ನಿಂತ ಕಂಸಾಸುರಾ||೩||

**||ಚಾಲ||**

ಬಳಲತಾಳ ದೇವಕಿ ಆವಾಗ-ಅಯ್ಯಯ್ಯೋ ಭೋಗ ||
ದಿಕ್ಕ ಇಲ್ಲ ಎನಗ ಕೊಲ್ಲಬ್ಯಾಡೊ ಈಗ||೧||

ಗುರುಗಳು ಹೇಳ್ಯಾರ ಕಂಸಗ-ಹೆಣ್ಣ ಮಗಳ ನಿನಗ |
ಕೊಂದ ಪಾಪ ನಿನ್ನ ಪದರಾಗ ಕಟ್ಟಿತೊ ಈಗ||೨||

ನವಮಾಸ ತುಂಬಲಿ ಹೊಟ್ಯಾಗ-ಮುಂದ ಹಡದ ಮ್ಯಾಗ |
ಕೂಸ ತಂದ ಕೊಡತಾರ ಕೈಯಾಗ ಕೊಲ್ಲ ಬೇಕಾದಾಗ||೩||

**||ದುಯೇರಿ||**

ಬಾಳ ಬಂದಿನ್ಯಾಗ ಇಟ್ಟಾರ ನೆಲಮನ್ಯಾಗ |
ಹಕ್ಕಿ ಸಿಕ್ಕಾಂಗ ಆಯ್ತು ಬಲಿಯಾಗ ||

**||ಕೂ.ಪ.||**

ಹಗಲಿ ಇರುಳ ಹಿಂಗ ಹಲಬತಾಳ ಬಿಡಸವರ ಇಲ್ಲರಿ ದಿಕ್ಕಾ ॥ ಬಂದಿನ್ಯಾಗ ॥

**ಚೌಕ – ೨**

**ನುಡಿ||**

ದಿನಕ ಒಂದ ತರ ಆಗತಾಗತ ಗರ್ಭದಲ್ಲಿ ಬೆಳದಾ ।
ನವಮಾಸ ಎಂಬುದು ತುಂಬುತ ಬಂತು ಕಠಿಣ ಹೊತ್ತಗಳದಾ||೧||

ಕಪಟದಿಂದ ಕೊರವ್ಯಾದ ಕೃಷ್ಣ ತಾ ಬಂದಿ ಮನಿಗೆ ಹೋದಾ ।
ತೆಲಿ ಕಟ್ಟಿ ಅಡ್ಡ ಸೆರಗ ಬುಟ್ಟಿ ಕಯ್ಯಾಗ ಬಾರಿಗಿ ಹಿಡದಾ||೨||

ವಾಸುದೇವ ಕೇಳತಾನ ಕೊರವಿ ನೀ ಬಂದದಿ ಎಲ್ಲಿಂದಾ ।
ಹೇಳತಾಳ ಅವರಿಗೆ ಬಂದಿದೀನಿ ನಾ ಸತ್ಯ ಲೋಕದಿಂದಾ||೩||

ನೋಟ ಹೇಳತಾನ ಕೃಷ್ಣ ತಾಯಿ ನಡುವಿನ ಬೆರಳ ಹಿಡದಾ ।
ಕೇಳತಾಳ ದೇವಕಿ ದುಃಖ ಕಣ್ಣಿಗೆ ನೀರ ತಂದಾ||೪||

||ಚಾಲ||ಹಿಂಡ ದೈತ್ಯರ ಗಂಡ ವಜ್ರರಾ - ಹುಟ್ಟತಾನ ಧೀರಾ ।
ನಿನ್ನ ಪುತ್ತರಾ ನಿನಗ ಯಾಕೆ ಘೋರಾ||೧||

ಚತುರ್ಭುಜಾ ವಿಷ್ಣುನ ಅವತಾರ-ಶಂಖ ಪದ್ಮ ಚಕ್ರಾ ।
ಬೋದವಾದ ಕುದರಿ ಸಂಹಾರಾ ಕಲಂಕಿ ದೂರಾ||೨||

ಮಾಂವ ಕಂಸನ ಹೊಡುದು ಕರಾರಾ - ತಿಳಿಯ ಮನಕ ಪೂರಾ ।
ರಾಮರಾಮ ರಾಮನವತಾರಾ ಪುರುಷನವತಾರಾ||೩||

**||ದುಯೇರಿ||**

ಹಿಂಗ ಕೇಳುತ ಕುಂತಾಳ ಹರುಷದಿಂದ ।
ಹಿಂಗ ಹೇಳುತ ಮನಿಯೊಳಗ ಮಾಯನಾದ ॥

**||ಕೂ.ಪ.||**

ಕನಸ ಬಿದ್ದ ಕಣ್ಮುಚ್ಚಿ ತೆರುದರಾಗ ತೋರಿಸಿಹೋದ ಹೊಯ್ಕ ॥ ಬಂದಿನ್ಯಾಗ ।

**ಚೌಕ – ೩**

**||ನುಡಿ||**

ಬಂದಿಕಾನಿ ಮನಿಸುತ್ತ ಕಾವಲಾ - ಸುರಳಿ ಹಾಕಿತ ಸರ್ಪಾ ।
ನೆಲದ ಮ್ಯಾಲ ಹರದಾಡಿ ಬಂದರ-ನುಂಗಿ ಬಿಡುದು ಸಾಪಾ॥೧॥

ಹಿರದ ಕತ್ತಿಗಳು ನೆವರಿ ನಿಂತಾವು-ಸುತ್ತ ಏಳು ತರ್ಪಾ ।
ಬಾರಾ ತುಬಾಕಿ ಕಂದಕ ದೂರದಾಗ-ತುಂಬಿ ಇಟ್ಟಾವ ತೋಪ॥೨॥

ಏಳು ದರ್ವಾಜಾ ಹೋಗೂವಂಗ ಇಲ್ಲ-ಬಂದ ಕೋಲಿ ಕುಲುಪಾ ।
ಇದರ ಒಳಗ ಇನ್ನ ಹ್ಯಾಂಗ ಹೋಗಬೇಕೆ-ಸ್ವಾಮಿ ನಿಮ್ಮ ಕಲ್ಪಾ॥೩॥

**॥ಚಾಲ॥**

ಶ್ರಾವಣದ ಬಂದಿತ ತಿಂಗಳ-ಅಷ್ಟಮಿಯ ಕಾಳ ।
ಆರತಾಸ ರಾತ್ರಿ ಹುಟ್ಟಿದಾನ ನಿವಳಾ॥೧॥

ಮನಿಯೊಳಗ ಬಿದ್ದಾಂಗ ಬೆಳಕ-ರತ್ನದ ಹರಳ ।
ಮೂಗ ಮಾರಿ ಕಪ್ಪಗೊರಳ ತಾರಿಪ ಬಹಳ॥೨॥

ವಾಸುದೇವ ದೇವಕಿ ಜೀವಾಳ-ನೋಡಿ ಕೃಷ್ಣ ಬರಳ ।
ದೇವಕಿ ಅಳತಾಳ ಗಳಗಳಾ ಹ್ಯಾಂಗ ಕೊಡವುನ ಬಾಳಾ॥೩॥

ದುಯೇರಿ ॥ತನ್ನ ಎದಿಗೆ ಅಮಚಿಕೊಂಡ ವಾಸುದೇವ ।
ಬಂದಿಕೀಲಿ ತೆರದಾವ ಕಾದಶಿವಾ ॥

**॥ಕೂ.ಪ.॥**

ಇಂತಾ ಪಾರೇದಾಗ-ಹೊರಗ ಬರುದರಾಗ-ಉಳದತಿ ಕಣ್ಣನಸಕಾ ॥ ಬಂದಿನ್ಯಾಗ

**ಚೌಕ – ೪**

**॥ನುಡಿ॥**

ಯಮುನಾ ನದಿಯಾಗ-ನಡದ ವಾಸುದೇವ-ಹೆಂತಾದ ವನದೇಸಾ ।
ಹೊಳಿಯ ತುಂಬಿ ಉಕ್ಕೇರಿತ ಮ್ಯಾಲಕ-ನೆಗುವಿ ಹಿಡಿದ ಕೂಸಾ ॥
ಕೃಷ್ಣನ ಉಂಗಟ-ಮುಟ್ಟಿ ಭಾಗೀರಥಿ-ದರ್ಶನ ಉಪದೇಶಾ ।
ಜರ್ರನ ಜರದಾಳು-ಜಾರಿ ಬಿದ್ದ ಮುಂದ-ಹಾದಿ ಆತ ಕಾಸಾ॥೨॥

ಮಧುರಾಪೂರದಾಗ-ಯಶೋದಾ ಹಡದಾಳ-ಹೆಣ್ಣ ಅದs ದಿವಸಾ ।
ಬದಲ ಮಾಡಬೇಕಂತ-ತುಗೊಂಡರ ಎಲ್ಲಾರದೊಂದs ಮನಸಾ॥೩॥

ವಾಸುದೇವ ಹೆಣ್ಣ ಕೂಸ-ತಗೊಂಡ ಬಂದ ಕೀಲಿ ಅದಾವ ಸರಸಾ।
ಟ್ಯಾ ಅಂದಾಗ ಬಯಲವಾಣ್ಯಾಗ-ಒದರಿತ ಕೈಲಾಸಾ॥೪॥

**॥ಚಾಲ॥**

ಕಂಸಾಸುರ ಹಿಡದಾನ ಬಾಗಲ-ತರ್ಪಗಟ್ಟಿ ಸಾಲ।
ಕೂಸ ತಂದ ಕೊಡತಾರ ಕೈಯಾಗ ನೆಗವಿದಾನ ಮ್ಯಾಗ॥೧॥

ಕಯ್ಯಾಂದ ಸಿಡದಿತೊ ಸಿಡಲ-ಮಿಂಚಿತೊ ಮ್ಯಾಲ।
ನಿನ್ನ ವೈರಿ ಹುಟ್ಯಾನೊ ಗೋಪಾಲಾ ನಮಗ ಯಾಕ ಮೂಲಾ॥೨॥

ಹಿಂಗ ಹೇಳಿ ಹೋದಿತ ಸೌಚಾಲ-ಕಂಸಗ ಮೂಲ।
ಎಷ್ಟ ಚೌಕಿ ಪಾರಾ ಕಾವಲಾ ವ್ಯರ್ಥ ಆತ ಎಲ್ಲಾ॥೩॥

**ದುಯೇರಿ॥**

ಜಾಗ ಮದರಖಂಡಿ ಮಾರುತಿ ಬಲಭೀಮ।
ಹುಸೇನಸಾಬ ವಸ್ತಾದ ಗುರುನಾಮ।

**॥ಕೂ.ಪ.॥**

ಹುಸೇನಸಾಬ ವಸ್ತಾದ ಅಣ್ಣಾರಾಮ ಕವಿಯಲ್ಲ ಪಕ್ಕಾ ॥

***ರಚನೆ :*** ಅಣ್ಣಾರಾಮ
***ಕೃತಿ :*** ಚಾಪ ಹಾಕತೀವಿ ದಪ್ಪಿನ ಮ್ಯಾಲ

## ೧೬. ಕೃಷ್ಣ-ಗಯ

**॥ಪಲ್ಲ॥**

ಕೃಷ್ಣ ಗಯ ಮಾತ ಕೇಳರಿ ಸಾಕ್ಷಾತ ಸರ್ಪ ಒಂದ ಚಮತ್ಕಾರಾ।
ಮುಂದ ಲಢಾಯಿ ಆರಂಭ ಕೇವಳಾ ಸಂಬ ಮಾಡಿದಾನ ದಿಗಂಬರ

**ಚೌಕ -೧**

**॥ನುಡಿ॥**

ಸೋಳಾ ಸಾವಿರ ಗೋಪ್ಯಾರ ಕೃಷ್ಣಗ ದಯಾಳ ಗುಣಾ ಅವರೆಲ್ಲಾರ
ಯಜ್ಞ ಮಾಡಿರಿ ಮಹಾರಾಜ ಹೋಗೂನೂ ಸ್ನಾನಕ ಯಮುನಾ ತೀರದಲ್ಲಿ ॥
ಮಾತಕೇಳಿ ಮಹಾರಾಜ ನಡದಾನೊ ಚಕ್ರತಗೊಂಡ ತಮ್ಮ ಹಸ್ತದ
ಭೂಮಿಮ್ಯಾಲ ಒಮ್ಮಿ ಹೊಡದ ನೋಡಿದ ಒಡದಂಗಾತ ಮಹಾಶೇಷನ ತೇಲಿ ॥
ನದಿಯೊಳಗ ಜಲಕ್ರೀಡಾ ಆಡತಿದ್ದ ಸಂತೋಷವಾಗಿ ತಮ್ಮ ಮನಸಿನ
ಸೂರ್ಯ ಅಸ್ತಮಾನ ಸನಿಯ ಬಂದಿತು ಜಪಸಾಧ್ನ ಜಪಸಿದರಲ್ಲಿ

**॥ಚಾಲ॥**

ಕುಬೇರನ ಪುತ್ರ ಗಯ ಅಂವ ಬಂದ ।
ಅಂತ್ರ ಮಾರ್ಗದಿಂದ ಕುದರಿಯ ತಂದ॥೧॥

ಹಾಸಿದ ಅಬ್ಬರಲಿ ಬಾಯಾನ ನೊರಲಿ ।
ಬಿದ್ದಿತ ಮ್ಯಾಲಿ ಕೃಷ್ಣನ ಕೈಯಲ್ಲಿ॥೨॥

**॥ಏರ॥**

ಹಲ್ಲ ತಿಂತಾನ ಕರಕರಾ । ಕುದರಿ ಹೊಂಟಿತ ಭರ ಭರರರಾ ।
ಕಣ್ಣ ತಿರವಿದಾನ ಗರರರಾ ॥
ಅವನ್ನ । ಜೀವನ್ನ । ನಾ ಇನ್ನ ॥
ಹೊಡದ ಊಟಾ ಮಾಡಾಂವ ದ್ವಾದಶಿಗೆ । ಹಿಂಗ ಆಣಿ ಹಾಕೊ ತನ್ನ ಮನಸಿ
ಆ ಮಾತ ಹತ್ತಿತ ತನ್ನ ಕಾಶಿಗೆ ॥

**॥ಕೂ.ಪ.॥**

ಸಿಗದಿದ್ದರ ನಾ ಜಿಗಿಯುದ ಅಗ್ನಿಕುಂಡದೊಳ ಕರಾರಾ ॥ ಮುಂದ

**ಚೌಕ – ೨**

**॥**ನುಡಿ॥ ಗಯಾ ಅಂಬಾಂವಾ ಗಾಬರ್ಯಾಗಿ ಗಡಬಡಿಸಿ ಹೋದ ಮಾದೇವನ
ಮಾದೇವ ಅಂದ ನಮ್ಮಿಂದ ಆಗದ ಕೃಷ್ಣನ ಕ್ರೋಧ ಬೆಂಕಿಕಿಡಿ ।
ದುಃಖ ಬಂದ ಅಡರಾಸಿ ಅಳುವಾಗ ಪಾರ್ವತಿ ಅಂತಾಳ ದಮ್ಮಹಿ
ಹಿಮಾಚಲದಲ್ಲಿ ಹೋಗ್ಯಾನ ನಾರದಾ ಹವಾ ತಿನ್ನಲಾಕ ಹಣಕುಡಿ
ಹೋಗಿ ಅವಗ ಗಂಟ ಬೀಳ ನಿನ್ನ ದೋಷ ದೂರ ಮಾಡ್ಯಾರ
ಕೈಕಾಲ ಕಟಿಕೊಂಡ ಬೀಳಹೋಗ ಅಡ್ಡ ಬಂದಂಥಾ ನುಡಿ ॥೩॥

**॥ಚಾಲ॥**

ಹೋಗಿ ಗಂಟ ಬಿದ್ದ ನಾರದಗ ।
ಹಾಕಿ ಸಾಷ್ಟಾಂಗ ತಾನು ಅವಗ॥೧॥

ಕೊಡರಿ ಜೀವದಾನಾ ಒಂದು ವಚನಾ ।
ನೀಂವ ಇನ್ನಾ ಮಾಧವನಾ॥೨॥

**॥ಏರ॥**

ಆಂತ್ರ ಮಾರ್ಗದಿಂದ ಸಳಳಳಾ । ಕುದರಿ ಹೊಂಟಿತೊ ಜಳಳಳಾ ।
ಕುದರಿ ಜೊಲ್ಲ ಬಳಳಳಾ ॥
ಅಟ್ಟಕ್ಕ । ತಟ್ಟಕ್ಕ । ಸಿಟ್ಟಕ್ಕ ॥
ಕೃಷ್ಣ ಕುಂತಿದ್ದ ಸಂಧ್ಯಾನಕ್ಕ । ಆ ಉಗಳ ಬಿದ್ದಿತ ಅವನ ಹಂತೀಕ ।
ಕೃಷ್ಣ ನೋಡ್ಯಾನ ಬೇಶಕ್ಕ ॥
**॥**ಕೂ.ಪ.॥ಬಿಸಿ ಹತ್ತಿ ದ್ವಾದಶಿ ದಿವಸ ನನ್ನ ಹೊಡಿತಾನ ಕರಾರಾ ॥ ಮುಂದ ॥

**ಚೌಕ – ೩**

**॥ನುಡಿ॥**

ನಗಿ ಮುಖದ ನಾರದ ಕುಸಿ ಹೇಳತಾನ ನಮ್ಮ ಕೈಲಿ ಬಗಿ ಹರುದಿಲ್ಲಾ ।
ಕಾಮಿಕ ವನದಲ್ಲಿ ಅದಾನ ಧರ್ಮರಾಜಾ ದಾನಸೂರ ದಂಡ ಸಹಿತ
ಮಹಾಬಲಾ ॥೧॥

ಅವರ ಸೇವಾ ಮಾಡುದಕ್ಕ ಅರ್ಜುನ ಪುಷ್ಪತರಾಕ ಹೋಗ್ಯಾನಕಮಲಾ ।
ಗಂಟ ಬಿದ್ದ ಜೀವದಾನ ಬೇಡ ಅವನ ಹಸ್ತ ಇಡಿಸಿಕೊ ತೆಲಿಮ್ಯಾಲಾ ॥
ಹುಡುಕಿದಾನ ಬಾಳ ಯತ್ನ ಮಾಡಿ ಪರಬ್ರಹ್ಮನ ಸರಿಮಾಡಿ ಹಿಡಿದ ಅವರ ಕಾಲಾ ।
ಕೊಡ್ರಿ ನನಗ ಜೀವ ದಾನಾ ಹೇಳತೀನ ಬಾಳಮಾತ ಏನ ಜರೂರಿಲ್ಲಾ॥೩॥

**॥ಚಾಲ॥**

ಅರ್ಜುನ ಇಟ್ಟಾನ ಅಭಯ ಹಸ್ತಾ ।
ಇರನೀ ಸ್ವಸ್ತ ಯಾವ ಗ್ರಹಸ್ಥಾ॥೧॥

ಅವರ ಹೆಸರ ಹೇಳ ಈ ಕ್ಷಣಕ ।
ಮೆಟ್ಟಿ ತುಳಿಯತೀನ ಪಾತಾಳಕ॥೨॥

**॥ಏರ॥**

ಹದ್ದ ಹರಿದಾಂಗ ತಿರಿರಿ ರಿರೀ । ಬಿರಕಾಸಿ ಒಗದಿನ ಬಿರಿರಿ ರಿರಿ ।
ಸೀಳಿ ಒಗಿಯತೀನ ಚಿರಿರಿರಿ ॥
ಅಲಕ್ಕ । ಮಲಕ್ಕ । ತಲಕ್ಕ ॥
ಇದ ಹೋಗಿ ಬಿದ್ದಾವ ಸಮುದರಕ್ಕ । ಗೊತ್ತಿಕ್ಲೇನ ಇಲ್ಲಿ ಬರಲಾಕ ।
ಹೊಡಿಯವರ ಹ್ಯಾಂತಾವರ ಹೇಳಾಕೊ ॥

**||ಕೂ.ಪ.||**

ಕೃಷ್ಣ ಅಂತ ಅರ್ಜುನಗ ಹೇಳಿದಾನ ಇಳಿತ ಅವನ ಹಂಕಾರಾ ॥ ಮುಂದ ॥

**ಚೌಕ – ೪**

**||ನುಡಿ||**

ಬಂದ ದ್ವಾದಶಿ ಗಡುವ ಕೃಷ್ಣ ಗಯನ ಹುಡುಕಿದಾನ ದೇಶಾವರಿ ।
ಸ್ವರ್ಗ ಮೃತ್ಯು, ಪಾತಾಳ ಹುಡಕಿದರ ಎಲ್ಲಿ ಹತ್ತವಲ್ದ ಗಯಾನ ಝುರಿ॥೧॥

ಚಿಂತಿ ಪ್ರಾಪ್ತಿ ಆಗಿ ಕುಂತಾರೊ ಖಿನ್ನ ಆದಿತೊ ಮುಖಾ ಬಾಡಿಕ್ಯಾರಿ ।
ನಾರದ ಬಂದಾನ ಕೃಷ್ಣನ ಮಂದಿರಕ್ಕ ಭೆಟ್ಟಿ ಆಗೂದಕ್ಕ ಸಹಜವಾರಿ॥೨॥

ಗೋಪಾಲಕೃಷ್ಣ ಏನ ಕಾರಣ ಕಡಿಮಿ ಆಗೇತಿ ನಿಮ್ಮ ಉಮೇದವಾರಿ ।
ಮುನಿ ಮಹಾರಾಯನ ಮುಂದ ಹೇಳತಾನ ವ್ಯಾಳೆ ಫಡಾಸಿತ ಕೆಟ್ಟಕ್ಯಾರಿ॥೩॥

**||ಚಾಲ||**

ಗಯ ಮಾಡಿದ ಘಾತ ।
ಕಾರಣದಿಂದ ಶಪಥ ದ್ವಾದಶಿ ಬಂತ॥೧॥

ಎಲ್ಲಿ ಸಿಗವಲ್ಲ ಅವನು ।
ಕೂನ ಹೇಳಬೇಕ ನೀನು॥೨॥

**||ಏರ||**

ನಾರದ ನಗತಾನ ಅಲಲಲಾ । ಚುಂಗಾಣಿ ದಂಡ ಮಹಾ ಬಲಲಲಾ ।
ಪಾಂಡವರ ನೆವರಿ ಬಂದ್ರ ಅಲಲಲಾ ॥
ಒದರಿ । ಕೆದರಿ । ಚದರಿ ॥
ಹಿಂಗ ತಾವು ಮಾಡಿಕ್ಯಾರ ಪರಿಪೂರ್ಣ । ಅಭಯ ಹಸ್ತ ಇಟ್ಟ ಅರ್ಜುನ

ಆ ಮಾತ ನನ್ನಿಂದ ಆಗದ ಕೇಳೋಣ ||
**||ಕೂ.ಪ. ||**ಬ್ಯಾಡ ಬ್ಯಾಡ ಕೊಡಾಕಿಲ್ಲ ಕೂತಲ್ಲೆ ಲಢಾಯಿ ಮಾಡಿ ಪಾಂಡವರಾ || ಮುಂದ

**ಚೌಕ – ೫**

**||ನುಡಿ||**

ಕೃಷ್ಣನ ತಂಗಿ ಸುಭದ್ರಾನ ಪುತ್ರ ಅಭಿಮನ್ಯು ಹುಡುಗ ಸಣ್ಣ ಬಾಲವಯಾ
ಗಂಡ ಅರ್ಜುನಗ ಸ್ಪಷ್ಟ ಹೇಳತಾಳ ಬಿಟ್ಟ ಬಿಡರಿ ಹೊಂಟೋಗಲಿಗಯಾ
ಪಂಚ ಪಾಂಡವರ ತಿಳದ್ರ ಮನಸಿಗೆ ಕೃಷ್ಣಗ ನಮಗ ಬಾಳ ಮಾಯಾ |
ಅನ್ನುಶಬ್ದ ಅಭಿಮನ್ಯು ಕೇಳಿ ಇವ ಮಾನಗೇಡಿ ಮಾತಾಡಿದ್ರ ಭಯಾ||೨||

ಭೀಮಸೇನ ಹಲ್ಲ ತಿಂದ ಅರ್ಜುನ ಬಂದ ನಿಂತಿದ್ದ ತಲವಾರ ಕಯ್ಯಾ |
ಓಡಿ ಹೋಗಿ ಸುಭದ್ರಾ ಅಣ್ಣ ಸೋಮಿತ್ರಗ್ಹೇಳತಾಳ ಆದನ್ಯಾಯ||೩||

**||ಚಾಲ||**

ಕೃಷ್ಣಂದ ತಡಾ ಇನ್ನಯಾಕ |
ದಂಡ ಕೈಲಾಕ ಕಾಮಿಕ ವನಕ||೧||

ಕೂಡಸ್ಯಾರ ಸುತ್ತ ಅವಚಿತ |
ಆ ಹೊತ್ತ ಕೂಡಿತ ಮತ್ತ||೨||

**||ಏರ||**

ಭೀಮ ಬಂದ ಗಡಗಡಡಡ | ಗದಾ ತಗೊಂಡ ಕಡ್‌ಕಡಡಡ |
ಬಡದ ಚಲ್ಲಿದ ಪಡಪಡಡಡ ||
ಇರದ | ಹಿರದ | ಒರದ ||
ತಂದ ಚಲ್ಲಿದ ಬಲಮಂದಿ ಆದಿತ ಜಕಮ | ಕೈಕಾಲ ಮುರದ ಆದುವ | ಆಕಲಮ |
ಕೃಷ್ಣಕೊಟ್ಟ ಬಳರಾಮಗ ಹುಕಮ ||

**||ಕೂ.ಪ.||**

ಬಳಿರಾಮ ಜಗ್ಯಾನ ನೇಗಿಲ ಹಾಕಿ ಭೀಮ ಬಾದ್ದೂರಾ || ಮುಂದ ||

**ಚೌಕ – ೬**

**||ನುಡಿ||**

ಅರ್ಜುನ ಹೊಡದದ ಕೃಷ್ಣಗ ಬಾಣ ಪರ್ವತ ಗುಡ್ಡ ಒಂದ ಝುಂಕಾರಾ ।
ಕೃಷ್ಣ ಹೊಡದದ ಪಶುಪತಿ ಬಾಣ ಅರ್ಜುನ ಹೋಗಿ ಬಿದ್ದ ಸಮುದರಾ॥೧॥

ಅರ್ಜುನ ಹೊಡದದ ಪಶುಪತಿ ಬಾಣ ಅರ್ಜುನ ದುಃಖ ಮಾಡಿಕ್ಯಾರಾ ।
ಈ ವರ್ತಮಾನ ತಂಗಿ ಕೇಳಿದರ ಏನ ಹೇಳಬೇಕ ಸುಭದ್ರಾ॥೨॥

ಹುಶಾರಾಗಿ ಅರ್ಜುನ ಎದ್ದ ಬಂದ ಬಾಣ ಬಿಡತಾನ ಇಲ್ಲ ಸ್ಥಿರಾ ।
ಕೃಷ್ಣ ಕಪಟಲಿ ಸುದರ್ಶನ ಚಕ್ರ ಹಾರಸ್ಯಾನ ಗಯನ ಶಿರಾ॥೩॥

**॥ಚಾಲ॥**

ಬಂದ ಕೆಲಸಾತ ಕೈವರ್ತ ।
ಕೃಷ್ಣ ಸಮರ್ಥ ತಿರಿಗಿ ಆ ಮಾತ॥೧॥

ಹೇಳಿದ ಅರ್ಜುನಗ ನಮನಿಮಗ ।
ಇದರಾಗ ಬ್ಯಾಡಿನ್ನ ಹೋಗ॥೨॥

**॥ಏರ॥**

ಕೈಲಾಸ ಬಾಗಿಲ ಕಣ ಕಣಣಣ । ಝೇಂಕಾರ ಆದಾವ ಝುಣಝುಣಣಾ ।
ಇಳದ ಮಾದೇವ ಆ ಕ್ಷಣ ಣಣಣ ॥
ಇಳದ । ತಿಳದ । ಹೇಳಿದ ॥
ಅವರಿಗಿ ಏನ ಕಾರಣ ಕಡದಾಡೂದ । ಆ ಗಯನ ಶಿರಾ ಬಿಟ್ರ ಪಡದಾ ।
ಅವರು ಹೊದ್ರ ಮುಕ್ತಿ ಮಾರ್ಗವ ಹಿಡದಾ ॥

**॥ಕೂ.ಪ.॥**

ತುಕಾರಾಮ ರಘುನಾಥಂದ ಯಂಕ ಮಾಡಿದ ಹೊಸತರಾ ॥ ಮುಂದ ॥

***ರಚನೆ :*** ತುಕರಾಮ ರಘುನಾಥ
***ಕೃತಿ :*** ಚಾಪ ಹಾಕತೀವಿ ದಪ್ಪಿನ ಮ್ಯಾಲ

# ೧೭. ಗೋಕುಲಾಷ್ಟಮಿ

**ಒಂದನೇ ಚೌಕ –**

ಶ್ರೀಗೋಪಿಕಾ ಸ್ತ್ರೀಯರು । ಅಷ್ಟನಾಯಕಿಣೆರು ।
ಬಾಲಗರುಡರು ಹುಡುಕತಾರ ಕೃಷ್ಣನ ।
ಸಾವಿತ್ರಿ ಸತ್ಯಭಾಮೆ ಕೂಡಿ ಹುಡಕತಾರ
ಗೋಕುಲಷ್ಟಮಿ ದಿನಾ ॥

ಆದಿನಾರಾಯಣ ನರಹರಿ ಅನಿಸಿದ ಬ್ರಹ್ಮಚಾರಿ ।
ಮುಕುಂದ ಮುರಹರಿ । ಗೋವಿಂದ ಗಿರಿಧಾರಿ
ವಾಮನ ಲಂಬೋದರಿ ವಸುದೇವ ದೇವಕಿನಂದನ ।

ಯಶೋದಾ ಕೇಳತಾಳ ಕಂಡಿರೇನ । ಗೋಪಾಲ ಬಾಲಪಾಲನ ॥
ಮಾಯಾರೂಪದವ ತ್ರಿಲೋಕ ಸಂಚಾರಿ । ಪೀತಾಂಬರಧಾರಿ ।

ಸಿಗವೊಲ್ಲ ಶ್ರೀಹರಿ । ಎಲ್ಲಿ ಕುಂತ ಮರ ಏರಿ ।
ಮಾಡತಾನ ಮಸ್ಕರಿ । ನೀಲ ವರ್ಣ ನಿರ್ಗುಣ ॥
ಗೋಗ್ರಾಣದೊಳಗ ಇರುವಂಥ ಗೋವಿಂದ ಅನಿಸಿದ ಗೋವರ್ಧನ ॥

**॥ಇಳುವು॥**

ಮತ್ಸ್ಯಕೂರ್ಮ ವರಹ ವಾಮನ ಬಳಿಗೆ ಪಾತಾಳ ಮೆಟ್ಟಿದ ಕೇಶವಾ ।
ನರಸಿಂಹ ಪರಶುರಾಮ ರಾಮನಾಮ ಹೆಚ್ಚಿಂದು ನಿಂದು ಮಾಧವಾ ।
ಪಾಂಡವರ ಪ್ರತಿಯ ಪಾಲ ಮಾಡಿದಂಥ ಶ್ರೀಕೃಷ್ಣ ದೇವ ಭಾರ್ಗವಾ ।
ಛಪ್ಪನ್ನ ಕೋಟಿ ಯಾದವರ ಮನಿಯ ಕುಲದೀಪ ಸ್ವಾಮಿ ಆದಂವ ॥

**॥ಏರು॥**

ಸ್ವಾಮೀ ಗುಣ ವರ್ಣಿಸುತ ಹೊಂಟಾಳ ರಾಧಾರಾಣಿ ।
ಅವಡಿ ಅಂಬಿ ಪದ್ಮಿಣಿ । ಭೀಮಿರಾಮಿ ನಾಗಿಣಿ ।
ಚೋಳಿ ಮಾಳಿ ಚಿಂಚಿಣಿ । ಭೈರಾವಳಿ ಶಂಕಿಣಿ ।
ಮಧುರ ಮೈನಿ ಹಸ್ತಿನೀ ।
ನಾಗಕನ್ಯೆ ದೇವಕನ್ಯೆ ನೋಡೂನ ನೀರಾಟ ।
ಸ್ತ್ರೀಯರ ಚೆಲ್ಲಾಟ । ಕೃಷ್ಣ ತಂದ ಸಂಕಟ ।
ಕಂಡೀರೇನ ಅವನ ಮುಕುಟ । ಕಿರೀಟ ಕುಂಡಲ ಕುಂದನ ॥
ಯಮುನಾದ ಹೊಳಿಯ ದಂಡೀಲಿ ಬಂದು, ನೆರದಾರ ಅಷ್ಟಮಿ ದಿನ ॥

**೨ನೆಯ ಚೌಕ –**

ನಾರ್‍ಯಾರ ಹೆಜ್ಜಿ ಗತ್ತ ಕೈಕೈ ಹಿಡಿವುದು ।
ಪುಗಡಿ ಹಾಕಿ ಆಡುದು । ಗಾಯನ ಮಾಡುದು । ರಾಗ ಭೆತ್ತಿಸಿ ರಾಗಿಣೀ ।
ಬಾವನ್ನ ತಾಳ ಮ್ಯಾಲ ರಾಗ ಮಾಡತಾಳ । ಬನದ ಕೋಗಿಲ್ಹಾಂಗ ಧನಿ ॥
ಸ್ತ್ರೀಯರ ಚೆಲುವಿಕಿ ಒಬ್ಬರಿಗಿಂತ ಒಬ್ಬರು ಸೇಲ ।
ನಾಮೇಲ ನೀಮೇಲ । ಬೇತಾಲ ಗುಲ್ಲಾಲ ।
ಓಕಳಿ ಮೈ ಯೆಲ್ಲ । ಹಚ್ಚಿದಂಗ ಹಿಲ್ಲಾಲ । ಮೂಡಲ ತರಂಗಿಣೀ ॥
ಭಂಗಾರ ಬಳಿ ಚಂದ್ರದ ಹಾರ ಕೊರಳಾಗ ರತ್ನದ ಮಣಿ ॥

**||ಇಳುವು||**

ತಬಲ ತಂಬೂರಿ ವೀಣಾ ತಗೊಂಡು ನಾಚ ಮಾಡತಾಳ ನಾಯ್ಕಿಣೀ ।
ತಾಳ ಮದಲಿ ಗತ್ತಿನ ಒಳಗ ರಾಧಕಿ ಕುಣಿಯತಾಳ ಶಿರೋಮಣೀ ।
ನಾರದ ನೋಡಿಕೇರಿ ನಾಚಿಮಾರಿ ತಿರುವ್ಯಾನ ಕುಟಿಲ ಗುಣಮಣೀ ।
ಇಂದ್ರಸಭಾತಂದು ಇಳಿವ್ಯಾರ ಕನ್ನೆರು ನೋಡತಾಳ ರುಕ್ಮಿಣೀ ॥

**||ಏರು||**

ಪುಗಡಿ ಆಟ ಏನು ಹೇಳಲಿ । ತಾಳ ಗತ್ತ ಮಾಡಿದಂಗ ।
ನಗಾರಿ ನುಡಿದಾಂಗ । ದುಮ ದುಮಿ ಹೊಡಿದಂಗ ।
ನೌಬತ್ತ ಬಡಿದಾಂಗ । ಚಿಟ್ಟ ಔಡ್ಲ ಸಿಡಿದಂಗ ।
ಕೊಂಬ ಕಾಳಿ ಹಿಡಿದಾಂಗ । ಸಿಡ್ಲ ಮಿಂಚ ಕಡಿದಂಗ ।
ಮಗ್ಗಿ ಪಾಟ್ಲಿ ಹೆಣಿದಂಗ । ತಿಪ್ಪರಲಾಗ ಒಗೆದಾಂಗ
ಸುದ್ಧ ನವಿಲು ಕುಣಿದಾಂಗ । ತಂಡ ತಂಡ ನೆರೆದಿತೊ ಜನ ।
ಕುಣಿಕುಣಿದು ದಣಿದು ಬ್ಯಾಸತ್ತು ನಿಂತಿದಾರ ಗೋಕುಲಷ್ಟಮೀ ದಿನ ॥

**೩ನೆಯ ಚೌಕ**

ನೀರಾಟ ಜಕಣ್ಯಾರು ನಿಂತಾರ ನಿಸ್ಸಂಗ ।
ಪೀತಾಂಬರ ಇಲ್ಲದಂಗ ಕೃಷ್ಣ ಹೋದ ಕಳ್ಳನಂಗ ।
ಮರದ ಮ್ಯಾಲ ಹಾಸಿದ ॥
ಹಾಸಗೊಂಡು ಮ್ಯಾಗ ಹೊಚಗೊಂಡು ಮಾರಿ ಮುಚಗೊಂಡು ಕೃಷ್ಣ ಮಲಗಿದ ॥
ರಂಬಿ ನಿಂಬಿ ಸೀತಿ ಗೀತಿ । ಹಾಲ ಮೊಸರ ಮಡಿಕೀ ಎತ್ತಿ ।
ಹೋಗತಾರ ಮಥುರಾ ಸಂತಿ । ಅಡ್ಡ ಬಂದು ತರುಬಿದ ।
ಅವನ ಮುಂದ ಹೇಳತಾರ ಸುದ್ದಿ ನಿನಗ ಬಲು ಹುಡುಕತಾಳ ಯಶೋದಾ ॥

**||ಇಳುವು||**

ಈ ಸುದ್ದಿ ಬಲ್ಲನಾ ಪದ್ದಿ | ತಗೊಂಡು ಬೆಣ್ಣಿ ಮುದ್ದಿ | ಮಸರ ಚೆಲ್ಲಿದಾ |
ಉಟ್ಟ ಶಾಲಿ ಪೀತಾಂಬರ ಸೆಳೆದ | ಮರದ ಮ್ಯಾಗ ಎಳೆದ ಮೈಯ ಮುಟ್ಟಿದಾ |
ಗೌಳಗಿತ್ತಿ ಶಂಖ ಹೊಡೆದಾಳ | ಶೋಕ ಮಾಡ್ಯಾಳ | ಜಿಗಿದು ಹಾರಿದಾ ||
ವನದಾಗ ಬಿಂದ್ರ ಬನದಾಗ ಹೋಗಿ ಶ್ರೀಕೃಷ್ಣಸ್ವಾಮಿ ಅಡಗಿದಾ ||

**||ಏರು||**

ನಾರದ ನೋಡಿಕೇರಿ ಹೇಳ್ಯಾನ ಕಿಡಿಗೇಡಿ |
ಬಾಲ್ಯಾರ ಗಡಿಬಿಡಿ | ನಾ ಹಿಡಿ ನೀ ಹಿಡಿ |
ಏರತಾರ ಗ್ವಾಡಿ ಹೂಡಿ | ನಾಕು ಕಡಿ ಒದ್ದಾಡಿ
ಇಂದ್ರವನ ಶೋಧ ಮಾಡಿ | ಶೋಧ ಮಾಡಿ ಶೋಕ ಮಾಡಿ |
ಒಬ್ಬರಿಗೊಬ್ರು ಮಾತನಾಡಿ | ಬಟ್ಟ ಮುರಿದು ಸಿಟ್ಟು ಮಾಡಿ |
ಒಂದಿನಾರೆ ಸಿಕ್ಕಾನ್ನಡಿ | ನೆಲನುಂಗಿತೇನ ಕೃಷ್ಣನ |
ಕುಣಿಕುಣಿದು ದಣಿದು ಬ್ಯಾಸತ್ತು ನಿಂತಿದಾರ ಗೋಕುಲಷ್ಟಮೀ ದಿನ
ಗುರು ಹರದಾಸರ ಕವಿ ಸಂಗಣ್ಣನ ಲಾವಣಿ ಕೇಳರಿ ಜನ |
ಕುಣಿಕುಣಿದು ದಣಿದು ಬ್ಯಾಸತ್ತು ನಿಂತಿದಾರ ಗೋಕುಲಾಷ್ಟಮಿ ದಿನಾ

***ರಚನೆ :*** ಕವಿ ಸಂಗಣ್ಣ
***ಕೃತಿ :*** ಜೀವನ ಸಂಗೀತ

## ೧೮. ಕೌರವ-ಪಾಂಡವರ ಉತ್ಪತ್ತಿ

**||ಪಲ್ಲ||**

ಬಾಯಿ ಮಾಡಬ್ಯಾಡ ಬಡತಿ ಹೇಳಬ್ಯಾಡ ಓದಿ ನೋಡ ಭಾರತ ಕಥಿ |
ಶೋಧ ಮಾಡಿ ನೀವು ಭೇದ ತಿಳಕೋರಿ ಹೇಳತೀನ ಕೌರವರ ಉತ್ಪತ್ತಿ |

**ಚೌಕ – ೧**

**||ದುಡಿ||**

ಬಾಡ್ಡಿ ಹಿಡಿದ ನಾ ಹಾಡ್ಡಿ ಹೇಳತೀನ ಯಾವ ಊರ ಯಾವ ಶಾರ ಪಟ್ಟಣಾ
ದಡ್ಡರಂಗ ಸುಳ್ಳ ಗುಡ್ಡ ಕೆದರಬ್ಯಾಡ ದೊಡ್ಡ ಪಂಡಿತಕಾಣ ಸ್ತ್ರೀ ನೀನಾ||೧||

ಬ್ರಹ್ಮಶಾಪದಿಂದ ಬಂದಾಳ ಗಂಗಿ ನರಲೋಕಕ ಇಳದ ತಾನಾ ।
ನದಿ ದಂಡೀಲೆ ನಡುಗಡ್ಯಾಗ ಕುಂತ ತಪಾ ಮಾಡತಿದ್ದಳ ನಿತ್ಯ ದಿನಾ॥೧॥

ಹರುಷನಾಗಿ ಹಸ್ತಿನಾಪೂರದ ಅರಸಾ ಶಂತನು ಚಕ್ರವರ್ತಿ ತಾನಾ ।
ಶೋಧ ಮಾಡಿ ಆಕಿ ಭೇದ ತಿಳಕೊಂಡ ಮನಿಗೆ ತಂದ ಅದಾನ ಲಗ್ನಾ॥೨॥

॥ಚಾಲ॥ಮುಂದ ಗರ್ಭನಿಂತ ಆಕಿಗೆ ತುಂಬ್ಯಾವ ನವಮಾಸಾ ।
ಆಕಿ ಹಡದಾಳ ಗಂಡಕೂಸಾ । ಹಿಂಗ ಏಳಕೂಸ ಆದಾವ ಬಹುಕಾಸಾ ॥
ಅಷ್ಟೂಕೂಸಿನ ಕೊಂದ ಮಾಡಿದಾಳ ಮೋಸಾ ।
ಎಂಟನೆ ಕೂಸ ಕೊಲ್ಲುವಾಗ ಮಾತಾಡಿದಾನ ಅರಸಾ ।
ಬಾಲ ಹತ್ಯಾ ನಿನಗ ಹತ್ತುದು ದೋಷಾ॥೧॥

**॥ಶ್ಲೋಕ ॥**

ಕೇಳರಿ ಕೇಳ ಶಾವೀರಾ ।
ಇಷ್ಟ ಶಬ್ದಕೇಳಿ ಗಂಗಾದೇವಿ ಹರದ ಹೋದಾಳ ಆಗಿ ನೀರಾ ।
ಇತ್ತ ಶಂತನುರಾಜ ಆ ಕೂಸಿನ ಮಾಡಿ ವಿಚಾರಾ ।
ಭೀಷ್ಮಾಚಾರಿ ಎಂದು ಹೆಸರಿಟ್ಟ ಧನುವಿದ್ಯಾ ಶಾಸ್ತ್ರಗಳನ್ನು ಕಲಿಸಿ ಬಿಟ್ಟ ಭರಪೂರ

**॥ಕೂ.ಪ. ॥**

ತಂದಿ ಮಕ್ಕಳ ಮನ ಒಂದೇ ಆದೀತ ಚಂದದಿಂದ ಕೇಳರಿ ಮುಂದಿನ ॥ ಶ್ಲೋಕ ॥

**ಚೌಕ – ೧**

**॥ನುಡಿ॥**

ಸಹಜ ಹೊಂಟ ಆ ಶಂತನು ಅರಸ ಅಡವಿಯಲ್ಲಿ ಬ್ಯಾಟಿ ಆಡುದಕಾ ।
ಅಡವಿ ಆರ್‍ಯಾಣಾ ಗಿಡ ಮಂಜಾಣಾ ವಾಸ ಬರತಿತ್ತ ಬಹುಸುವಾಸಿಕಾ
ವಾಸ ಹಿಡದ ಆ ಅರಸಾ ದಿಲಗೀರನಾಗಿ ಯಾವದಿದ್ದೀತ ಇದ ಹೆಂತಾಮಿ
ಶೋಧ ಮಾಡುತ ಅವ ಹೋದ ಹುಡುಕುತ ಸಮೀಪ ಇದ್ದ ಒಂದ ಪಟ್ಟಣಕಾ ॥
ಇಲ್ಲಿ ಇದ್ದ ಬ್ರಾಹ್ಮಣರು ಬಲ್ಲಿರಿ ಎಲ್ಲಾರು ಯಾತರವಾಸ ಹೇಳರಿ ಸೊ
ಸುಳ್ಳ ಅಲ್ಲ ಇದು ಸುಗಂಧಿ ವಾಸಂತ ಎಲ್ಲಾ ಬ್ರಾಹ್ಮಣರು ಹೇಳ್ಯಾರ ಆಕ್ಷಣಕಾ॥೩॥

ಸನ್ನಿಧಿಯಲ್ಲಿ ಸುಗಂಧಿನ ಕರಸಿ ಲಗ್ನ ಆಗ ಅಂದ ತನಗ ಬೇಶಕ್ಕಾ ।
ಪಟ್ಟದ ಅರಸಿನ ನಿನಗ ಮಾಡತೀನ ಸುಖದಿಂದ ಇರ ನನ್ನ ಹಂತೇಕ॥೪।

**॥ಚಾಲ॥**

ಸುಗಂಧಿ ಹೇಳ್ಯಾಳ ಅರಸಗ । ಮುಂದ ಮಕ್ಕಳ ಆದರ ಹ್ಯಾಂಗ ॥
ಪಟ್ಟಗಟ್ಟಬೇಕ ನನ್ನ ಮಗನೀಗ । ಹಿಂಗ ವಚನ ಕೊಡಬೇಕರಿ ನನಗ ।
ಚಿಂತ್ಯಾದ ಅರಸ ಮನದಾಗ । ಅವ ಎದ್ದಹೋದ ಸುಮ್ಮ ಆಗ ॥

**॥ಶ್ಲೋಕ॥**

ಕೇಳರಿ ಕೇಳ ಶಾವೀರಾ ।
ಆ ಅರಸ ಚಿಂತ್ಯಾಗಿ ಕುಂತಿದ್ದಾ । ಇದನ್ನ ನೋಡಿ ಭೀಷ್ಮಾಚಾರಿ
ತಂದಿಯ ವೃತ್ತಾಂತವನ್ನು ಕೇಳಿದಾ । ಆವಾಗ ಆ ಅರಸ
ತನ್ನ ಚಿಂತಿ ಬಗಿ ಕೇಳಿದಾ । ಸುಗಂಧಿನಿ ಗುಡ ಆ ದಂತ
ಅರಸನ ವಾದಾ । ಇದನ್ನ ಕೇಳಿ ಭೀಷ್ಮಾಚಾರಿ ಸುಗಂಧಿನಿ
ಹತ್ತರ ಹೋದಾ । ಆಕಿ ಬೇಡಿದಂಥ ವಚನವನ್ನು ಕೊಟ್ಟ
ತನ್ನ ತಂದೆಯ ಲಗ್ನ ಮಾಡಿದಾ ॥

**॥ಕೂ.ಪ.॥**

ಪರಮೇಶ್ವರನ ಕರುಣ ಛಾಯಾದಿಂದ ಆಕಿಗೆ ಆದಾವ ಎರಡ ಸಂತತಿ ॥ ಶೋಧ ॥

**ಚೌಕ – ೩**

**॥ನುಡಿ॥**

ಚಿತ್ರ ವೀರ್ಯ ವಿಚಿತ್ರ ವೀರ್ಯ ಅಂತ ಎರಡು ಕೂಸಿಗೆ ಇಟ್ಟ ನಾಮಕರಣಾ ।
ಅವರ ಒಳಗ ಒಬ್ಬ ಮಗಾ ಬಿದ್ದ ಹೋದ ಯುದ್ಧದಲ್ಲಿ ಹೊಂದಿದ ಮರಣಾ॥೧॥

ಆಯುಷ್ಯ ಸರಿತಂತ ತಿಳದಿತ ಶಂತನು ಹೇಳಿದ ಭೀಷ್ಮಾಚಾರಿನ ।
ಹಿಂದ ನಡದಂಗ ಮುಂದ ನಡಸರೆಂತ ವಚನ ತಗೊಂಡ ಬಿಟ್ಟಾನಪ್ರಾಣಾ ॥
ಜನ ಅಯ್ತಿ ಅಂದ ತನ್ನ ತಮ್ಮಗ ಪಟ್ಟಗಟ್ಟಿಕೊಟ್ಟ ಸಿಂಹಾಸನಾ ।
ತಾಯಿ ಮುಂದ ಕುಂತ ಆನಂದದಲ್ಲಿ ಶಾಸ್ತ್ರ ಪುರಾಣ ಹೇಳಾಂವ ನಿತ್ಯದಿನಾ ॥
ಬಂದಿತ ಕಾಳಾ ಎಲ್ಲಾ ಮಾಡಿತ ಹಾಳಾ ವಿಚಿತ್ರನಲ್ಲಿ ದುರ್ಗುಣಾ ।
ಅಪವಾದ ಇಟ್ಟ ಹೋದನೊ ಹೊಂಟ ಬೇಕಂತ ಹೊಂದಿದ ದುರಮರಣಾ॥೪॥

**॥ಚಾಲ॥**

ಸುಗಂಧಿ ಮಾಡತಾಳ ದುಃಖಾ । ಈ ಗಾದಿಗಿಲ್ಲರಿ ಯಾರು ದಿಕ್ಕಾ ॥
ಭೀಷ್ಮ ವಚನದಲ್ಲಿ ಸಿಕ್ಕಾ । ಇನ್ನಾರ ಈ ಗಾದಿಗೆ ಮಾಲಕಾ ॥
ಮತ್ತ ಮನಕ ಹಾಕಿದಾಳ ತರ್ಕಾ । ಗುರು ಸ್ತೋತ್ರ ಮಾಡ್ಯಾಳ ಆ ಕ್ಷಣಕಾ ॥

**||ಶ್ಲೋಕ ||**

ಕೇಳರಿ ಕೇಳ ಶಾವಿರಾ ।
ಸುಗಂಧಿಣಿ ಸೋತ್ರಕ ವೇದ ವ್ಯಾಸ ಬಂದರು । ಎಲ್ಲಾ ವೃತ್ತಾಂತವನ್ನ
ಕೇಳಿದರು । ಚಿತ್ರವೀರ್ಯ, ವಿಚಿತ್ರವೀರ್ಯರ ಹೆಂಡರನ್ನ ಕರಸಿದರು ।
ಅವರಿಗೆ ಗುರು ಉಪದೇಶ ಮಾಡಿದರು । ಆವಾಗ ಒಬ್ಬಾಕಿ ಹೊಟ್ಟಿಲೆ
ಧೃತರಾಷ್ಟ್ರ ಎರಡನೆಯಾಕಿಗೆ ಪಂಡುರಾಜ ಹೀಗೆ ಇಬ್ಬರಿಗೆ ಮಕ್ಕಳಾ
ದರು । ಇವರಿಂದ ಕೌರವರು ಪಾಂಡವರು ಉತ್ಪತ್ತಿ ಬೆಳಿಸ್ಯಾರು ॥

**||ಕೂ.ಪ.||**

ನರಸಿಂಗ ಬಾಪು ಹಿಂಗಹೇಳತಾರ ಭೇದಕೇಳರಿ ಬಾಡ್ದಿಯ ಕತಿ ||ಶೋಧ||

***ರಚನೆ :*** ನರಸಿಂಗ ಬಾಪು
***ಕೃತಿ :*** ಚಾಪ ಹಾಕತೀನಿ ದಪ್ಪಿನ ಮ್ಯಾಲ

## ೧೯. ಪಾರ್ಥ-ವೃಷಕೇತು

**||**ಪಲ್ಲ||

ಅರಸಾ ಕೇಳ ನಿಮ್ಮ ಪೂರ್ವಜರೊಳು ಅದಂಥಾ ಕಪಟ ಕಾಳಗಾ ಕೃಷ್ಣ ಬೆಳಸಿದಾನು ।
ಮಹಾಶ್ರೇಷ್ಠ ನರನ ಗರ್ವ ಇಳಸಿದಾನು ।
ಜನಮೇಜಯಾ ಕೇಳ ಸೇಮಟೇದ ಯುದ್ಧವನು ॥
ಮೂರು ಲೋಕದ ಗಂಡ ಅರ್ಜುನ ಭಂಡ ಆದ ಕಥಾ ಸಾರವನು ।
ಪುಂಡ ವೃಷಕೇತುವಿನ ಪುರುಷಾರ್ಥವನು ॥

**ಚೌಕ – ೧**

**||ನುಡಿ||**

ದಿಟ್ಟ ಬಬ್ರುವಾಹನ ಮಹಾಶ್ರೇಷ್ಠ ವೃಷಕೇತು ಉತ್ಕೃಷ್ಟ ಧನಂಜಯ ಇವರು ಮೂವರಾ।
ಬಹಳ ಸಿಟ್ಟಿನವ ಹಂಸಧ್ವಜ ವೀರ ಭಟರಾ ।
ಈ ಪೊಡವಿಯೊಳು ಪ್ರಕಟ ಅವನ ಅಶ್ವಜಾಹೀರಾ ॥
ವೀರ ನೀಲಧ್ವಜಾ ಶರಸೂರಿ ಮಾಡಿ ಪ್ರದ್ಯುಮ್ನ ಕಾಲಕೆದರಿ ನಿಂತ ಅನುಶಾಲ್ವರಾ ।
ಯ್ಯಾರ್ಯಾರಿಲ್ಲ ನಿಂತರಲ್ಲಿ ಯುದ್ಧ ಮಾಡವರಾ||೧||

ನೋಡ ನೋಡ ದಂಡಿನೊಳಗ ಕೂಡಿ ಕೂಡಿ ಮಾತಾಡತಾರೆ ಅಂಜಿ
ಓಡಾವಲ್ಲ ವೃಷಕೇತು ಎಂಥಾಧೀರಾ।
ಹಡದ ತಂದಿ ಮಡದ ಹೋದ ಅವನ ನೋಡಬೇಕ ಯಾರಾ।
ಹೇಳತೀನ ಕೇಳರಿ ಇನ್ನ ಮುಂದ ಒಂದ ಮಜಕೂರಾ॥
ಭಪ್ಪರೆ ಕರ್ಣನ ಮಗಾ ಒಪ್ಪಾರೆ ಶಪತಶರಿ ಒಪ್ಪಿಟ್ಟ ಅಪ್ಪಿಕೊಂಡಾರ ಅವಗ ಎಲ್ಲಾರಾ।
ಈ ಪೃಥ್ವಿಯೊಳು ಕಾಣುದಿಲ್ಲ ನೋಡ ಯಾರ್‍ಯಾರಾ॥೨॥

ಇಷ್ಟ ಮಾತ ಕೇಳಿ ಪಾರ್ಥ ಸಿಟ್ಟಿಗೇರಿ ಥಟ್ಟನೆ ಎದ್ದ ಎಷ್ಟ ಬೆಳಸಿದಿರಿ
ಇವ ಯಾವ ಶೂರಾ।
ನನ್ನ ಬಿಟ್ಟ ಲಢಾಯಿ ಎಂದ ಮಾಡಿದ್ದ ಪೋರಾ।
ಈ ಪೊಡವಿಯೊಳು ಪ್ರಕಟ ಅಯ್ತಿ ನನ್ನ ಹೆಸರಾ॥
ಪಾಶುಪತಾಸ್ತ್ರ  ಈಶ್ವರ ನನಗ ಕೊಟ್ಟಿದಾನ ದ್ರೋಣಾಚಾರಿನ
ಭೀಷ್ಮಾಚಾರಿನ ಹೊಡದಿನ ಠಾರಾ।
ಆಯಾಸ ಇಲ್ದ ಕಡದಿನ ಜಯದ್ರಥನ ಶಿರಾ॥೩॥

**॥ಚಾ-೧॥**

ಗಾಂಢೀವ ಧನುಷ್ಯದಿಂದ ಕಾಂಡವನಾ ದಹನ ಮಾಡಿ ಪುಂಡರನೆಲ್ಲಾ
ಹೊಡದಿನ ಧರಿಯ ಮ್ಯಾಗ।
ಪುಂಡರೀಕಾಕ್ಷ ನನ್ನ ಕೈಯಾಗ॥೧॥

ಭೂಪಕರ್ಣನ ರೂಪ ತೀರಿ ಚಾಪ ನಾಟಿ ಸಾಯುವಾಗ ನಿಮ್ಮ ಅಪ್ಪ-
ಕೊಟ್ಟ ನನ್ನ ಕೈಯಾಗ।
ಜ್ವಾಕಿ ಮಾಡೀದೀನ ಅಭಿಮನ್ಯುನಂಗ॥೨॥

**॥ಚಾ-೨॥**

ಇಂಥಾ ಲಢಾಯಿ ಮಾಡವರೆಲ್ಲಾ।
ಮಸ್ತ ಮಂದಿನ ಹಾಕಿನ ಬಕ್ಕ ಬರಲಾ॥೧॥
ಛಪ್ಪನ್ನ ದೇಶದ ರಾಜರೆಲ್ಲಾ।
ಮಸ್ತಕಟ್ಟಿ ಒಗಿಯತಿದ್ರ ಬಿಲ್ಲಾ॥೨॥

**॥ಕೂ.ಪ.॥**

ಹಿಂಡ ರಾಜರನೆಲ್ಲಾ ಭಂಡಮಾಡಿ ಪುಂಡ ಅನಿಸಿಕೊಂಡ ನಾನು ಕಂಡ
ಎಣ್ಣಿಯೊಳಗ ಮೀನ ಹೊಡದೀನು।

ಮೂರು ಲೋಕದೊಳಗ ಗಂಡ ಬಿರದ ಸಾರೀನು ।
ಭೂಮಂಡಲ ತುಂಬ ಗದಗಲಸೀನು ॥

**ಚೌಕ-೨**

**॥ನುಡಿ॥**

ತಂದಿನ ಕೊಂದ ಪಾಪ ಹಿಂದ ಕಂದ ವೃಷಕೇತು ಅಂದ ಎಂದ ಲಢಾಯಿ
ಮಾಡಿದ್ದಿರಿ ನೀವು ಪಾಂಡವರು ।
ಮುಕುಂದ ಬಂದಾಗ ಅವನ ಮುಂದ ನೀವು ಹೇಳವರು ।
ಅಯ್ದು ಮಂದಿ ಕೂಡಿ ಗೊಳೊ ಅಂತ ಅಳುವವರು ॥
ಇಳದ ರಥಾ ಕೇಳೂವಾಗ ಕೇಳಲಿಲ್ಲ ಬಾಣ ಹೊಡದಿ ಇಳೆಯೊಳು ಖೂಳ
ನಿನಗ ಅಂಬುವರು ।
ಕಪಟ ಕಾಳಗ ಮಾಡಿ ಬೆಳದೀದೀರಿ ನೀವು ಅಯ್ವರು॥೧॥

ಹರಿ ಕುವಕ ಇಲ್ದ ಯಾರನ್ನ ಗೆದ್ದಿ ಖರೆ ಹೇಳ ಮೂರು ಲೋಕದಾಗ
ನಿನಗ ಗಂಡ ಯಾರ ಅನ್ನುವರು ।
ನಿನ್ನ ಶೂರತನ ಇಲ್ಲಿ ನೋಡಬೇಕ ಯಾರು ।
ಸ್ತ್ರೀ ರಾಜ್ಯದೊಳಗ ಸೋಲಿಸ್ಯಾರು ನಿನಗ ಹೆಂಗಸರು ॥
ಕಾಕಾ ಅಂತ ಕಾಯತೀನ ನನ್ನ ಜೋಪಾನ ಮಾಡಿದನೆಂದು ಬೇಕಂತಲೆ
ಕಾಯತೀನ ನಿನ್ನ ಅಬರು ।
ಈ ಲೋಕದೊಳು ನಿನ್ನಂಥ ಪುಕ್ಕನ್ಯಾರು॥೨॥

ಉತ್ರ ಕುಡಬ್ಯಾಡ ಪಾರ್ಥ ಮಾತ್ರ ವೃತದಿಂದ ಕೇಳಿ ಬಾರೊ ನೀವು ಕ್ಷತ್ರಿಯರು ।
ಚಂದ್ರವಂಶದ ಖರೆ ಮಂದಿ ನಂಬಲಾರರು ।
ಅಲ್ಲಿ ಪುತ್ರ ನೆಂಟ್ರ ಸೇರೂದಿಲ್ಲ ನಿಮ್ನ ಯಾರ್ಯಾರು ॥
ಶೃಂಗಾರ ಆಗಿ ಹೆಂಗಸರ್ಹಾಂಗ ಮುಂಗಯ್ಯಾಗ ಬಳಿ ಇಟ್ಟ  ಹ್ಯಾಂಗ
ಹೋಗಿ ಸೇರಿದ್ರಿ ವಿರಾಟನಗರು ।
ಅಲ್ಲಿ ತಂಗಿ ತಂಗಿ ಅಂತ ನಿಮ್ಮನ್ನ ಕರಿಯತಿದ್ದಾರು॥೩॥

**॥ಚಾ-೧॥**

ನೆನಪ ಮಾಡಿಕೊಟ್ಟ ನಮ್ಮ ಅಪ್ಪನ ಕೊಂದದ್ದ ಸಂತಾಪ ಆಗಿ ಹೊಡಿಯ ಬಾಣಾ ।
ಚಾಪ ಹೂಡಿ ಕೊಯ್ಯತೀನ ಗೋಣಾ॥೧॥

ಸತಿಪತಿಗಳೈವರು ಮಿತಿ ತಪ್ಪಿ ಅತಿ ದುಃಖಬಂದ ಕ್ಷಿತಿಯೊಳು ತಿರಗೀರಿ ವನವನಾ ।
ನಿಮ್ಮ ಸತ್ಕೀರ್ತಿ ಸುಡುಸುಡು ಫಾಲ್ಗುಣಾ॥೨॥

**||ಚಾ-೨||**

ಕೃಷ್ಣ ಇದ್ದಿದ್ದಿಲ್ಲ ಮಣಿಪೂರದಾಗ ।
ನಿನ್ನ ಗೋಣ ಕೋದ ಬಬ್ರುವಾಹನ ಆಗ॥೧॥
ನೀನು ಎರಕೊಳ್ಳವರ ಬುಡಕ ಡೊಗ್ಗಿದಾಂಗ ।
ನಾಯೇನ ಆಶ್ರಯ ಬೇಡಾವಲ್ಲ ನಿನ್ನಂಗ॥೨॥

**||ಕೂ.ಪ.|**

।ದುರುಳ ಪಾರ್ಥ ನಿನ್ನ ಕೊರಳ ಕೋದ ಹೊಟ್ಟಿಯೊಳಗಿನ ಕರಳ
ತಗದ ಉರಳಿಸಿ ಬಿಟ್ಟೇನು ।
ಥೀ ಮರುಳಾ ಕಾಯಾಂವಲ್ಲ ನಿನ್ನ ಸಲಿಗೇನು ।
ನಿನ್ನ ಹೊಡಿಯದಿದ್ರ ರವಿತರಳ ಹುಟ್ಟಿ ಫಲವೇನು ॥

**ಚೌಕ – ೩**

**||ನುಡಿ||**

ಕೆಟ್ಟ ವೃಷಕೇತು ನಿನ್ನ ನೋಡಾವಲ್ಲ ದಿಟ್ಟತನ ಸಿಟ್ಟಬಂದ ಬಿಟ್ಟೇನ
ನಿನ್ನ ಹೊಟ್ಟಿಽಕೋದಾ ।
ಥೀ ಭ್ರಷ್ಟಾ ಹೇಳಬ್ಯಾಡ ಒಬ್ಬರ ಅನ್ನಾ ತಿಂದಾ ।
ನಿನ್ನ ಬಿಟ್ಟಹೋದ ಕರ್ಣ ಅವ ಯಾತರಾಗ ಸುದ್ದಾ ॥
ಹೇಳಿದ್ರ ಕೆಡತಽತಿ ನಿಮ್ಮಪ್ಪ ಕೂಳಿಗಿ ಬಿದ್ದಾಂವ ಒಬ್ಬರ ಆಳಾಗಿ
ಅನಗಾಲ ಹೇಳಿದಾಂಗ ಕೇಳಿದಾ ।
ಜಗಳಾ ಮಾಡಿ ದುರ್ಯೋಧನ ರಾಜ್ಯ ಕಳದಾ॥೧॥

ಸಣ್ಣಾವೆಂದು ಬಣ್ಣಿಸಿ ಪಾಲ ಬೆಣ್ಣಿ ಉಣ್ಣಿಸಿ ಜೋಕಿ ಮಾಡಿದ್ದಕ್ಕ ನನ್ನ
ಅಬರು ಕಳದಿ ಖಬರ ಇಲ್ಲದಾ ।
ನಿನ್ನ ರಕ್ಷಣ ಮಾಡಿದ ಕುಂತಿದೇವಿ ಮರಗ್ಯಾಳ ಅಂದಾ ।
ನಿನ್ನ ಪ್ರಾಣ ಬಿಡತೀನ ನಾನು ಅದರಿಂದಾ ॥
ನುಚ್ಚಿಗಿ ಬಿದ್ದಾವ ನಿನಗ ಹೆಚ್ಚಿನಮಾತ ಯಾಕ ಹಲ್ಲ ಉಚ್ಚಿ ಒಗದಿನ ನಿನ್ನ   ಜೀವದಿಂದಾ ।
ತೆಲಿ ಕಚಕಚ ಕಡದೀನ ನೀಚ ಮತಿ ಮಂದಾ॥೨॥

ಪುಂಡ ಬಬ್ರುವಾಹನ ನಿನ್ನ ಚಂಡ ತುಂಡ ಮಾಡಿ ಭೂಮಂಡಲಕ
ಒಕ್ಕೂಟ್ಟಿದ್ದ ನನ್ನ ಕಂದಾ ।
ಭಂಡ ವೃಷಕೇತು ರುಂಡವಿಲ್ಲದ ಬಿದ್ದಾ ।
ಕಣ್ಣ ಕೆಂಡದಂತೆ ಮಾಡಿ ಅರ್ಜುನ ನುಡದಾ ॥

ಕೊಂದೀsವ ಆಗ ದುಷ್ಟರನೆಲ್ಲಾ ತುದಿಮಗಾ ಒಂದಗೂಡಿ ಒಂದ ಲಢಾಯಿ
ಮಾಡಲಿಲ್ಲ ನೀವೆಂದಾ ।
ಮಂದಿ ಬೈದಾರಂತ ಬಿಡತಿsನ ನಿನ್ನ ಕೈಕಾದಾ॥೩॥

**॥ಚಾ-೧೧॥**

ಘಾತಕ ವೃಷಕೇತು ಯಾತಕ ಕೇಳೂದು ಮಹಾಪಾತಕ ನಿಮ್ಮ ಅಪ್ಪ ಹೋದ ಸತ್ತಾ ।
ನಿನ್ನ ಕೊಲ್ಲೂದಿಲ್ಲ ಸೂತಕ ಬಂದೀತಂತಾ॥೧॥

ಒತ್ತರದಿಂದ ಬಂಪ ನಿನ್ನ ನೆತ್ತರ ಸೀಟೂದ ಅಗಾಧ ಅಲ್ಲ ಉತ್ರ ಕುಡ
ಬ್ಯಾಡ ನನ್ನ ಎದುರಿಗಿ ನಿಂತಾ ।
ಮಹಾ ಪಾತಕ ನಿಮ್ಮಪ್ಪ ಹೋದ ಸತ್ತಾ॥೨॥

**॥ಚಾ-೨ ॥**

ನೀ ಸಣ್ಣವ ಅಂದ ಕಾಯತೀನ ಬಿಡೆ ।
ನನ್ನ ಕಣ್ಣಾಗ ನೀರ ಬಂದಾವು ಹಿಂದಿಗಡೆ॥೧॥

ಧರ್ಮ ಭೀಮ ನಕುಲ ಸಹದೇವ ಕೂಡಿ ।
ವರ್ಮ ಸಾಧಿಸಿರೆಂತ ಬೈದಾರವರು ನೋಡಿ॥೨॥

**॥ಕೂ.ಪ.॥**

ಅಂಬಿಗ್ಯಾರ ತೊತ್ತಿನ ಮಗನ ನಂಬಿಗಿಲ್ಲ ವೃಷಕೇತು ಅಂಬು ಹೊಡದ
ತಗೋತೀನ ಪ್ರಾಣವನು ।
ಕೇಳ ಜಂಬತನ ಬಿಡ ಸತ್ತ ಹೋದೀ ನೀನು ।
ಹಂಬಲಿಟ್ಟ ಕುಂತೀದೇವಿ ನಿನಗ ಮರಿಗ್ಯಾಳಂತೀನು ॥ ಮೂರು ॥

**ಚೌಕ – ೪**

**॥ನುಡಿ॥**

ಬಣ್ಣದ ಮಾತ ಆಡಬ್ಯಾಡ ಕೇಳ ಫಲ್ಗುಣಾ ನಿಮ್ಮ ಅಣ್ಣ ಧರ್ಮರಾಜಾ
ಸುಳ್ಳ ನುಡದಾನು ।
ಮಣ್ಣ ಕೂಡಿಸಿ ಬಿಟ್ಟೀರಿ ಸತ್ಯ ವಚನವನು ।
ದ್ರೋಣಾಚಾರ್ಯನ ಕೊಲ್ಲುದಕ್ಕ ಹುಸಿ ನುಡದಾನು ॥
ಅಶ್ವತ್ಥಾಮೋ ಹತಃ ನರೋವಾ ಕುಂಜರೋವಾ ಎಂದು ಧರ್ಮರಾಜಾ

ಲಢಾಯಿಯೊಳಗ ನಿಂತ ಒದರ್ಯಾನು ।
ಮಗಾ ಸತ್ತಂತ ದ್ರೋಣಾಚಾರಿ ಅಲ್ಲಿ ಮಡಿದಾನು॥೧॥

ಎಷ್ಟ ಮಾತಾಡಿದರ ಪಾರ್ಥ ನಿನಗ ಸಿಟ್ಟ ಇಲ್ಲ ಎಂಥಾ ಕೆಟ್ಟ ಪಾಂಡವರ
ಹೊಟ್ಟೀಲೆ ಹುಟ್ಟೇದಿ ನೀನು ।
ಕುದರಿ ಕಟ್ಟಿಹಾಕತೀನ ನೀ ಮಾಡೂದೇನು ।
ಗಟ್ಟಿ ಮುಟ್ಟಿ ದರ್ಭಿಲೆ ಅಶ್ವಬಿಗದಾನು ॥
ಪಾರ್ಥ ನಿನಗ ನಾಚಿಕಿಲ್ಲ ಛೀ ನೀನು ಆಚೀಕ ನಿಲ್ಲ ಹಚ್ಯಾ ಹುಚ್ಯಾ
ಮುಂಡೆಗಂಡ ನಿಮ್ಮಣ್ಣ ಧರ್ಮರಾಜಾ ವಚನ ಭ್ರಷ್ಟನು ।
ಅಚ್ಚುತನ ಬಲದಿಂದ ಧರ್ಮ ಅನಸಿದಾನು॥೨॥

ಕಡಕಡದ ಹಲ್ಲುಗಳ ಪಾರ್ಥ ಸಿಡಸಿಡದ ಮಾಡತಾನ ಶಪಥ ಫಡಫಡಲೆ
ನೂರಾರು ಶರಗಳ ಹರದಾನು ।
ನಡುವ ಕಡಕಡದ ವೃಷಕೇತು ಕೆಡವಿದಾನು ।
ರಥ ಒಡ ಒಡದ ಹೋಗತಾವು ನಡಿತ ಯುದ್ಧವನು ।
ಜಿಗಜಿಗದ ಮಾಡತಾನ ಜಗಳಾ ತಗತಗದ ಒಗಿಯತಾರ ಸರಳಾ ಬಿಗಬಿಗದ
ಬಿಡತಾರ ಆಗ ಶಸ್ತ್ರವನು ।
ಕೈಮುಗಯಬ್ಯಾಡ ಅಂತಿದ್ದ ಪ್ರದ್ಯುಮ್ನನ॥೩॥

**॥ಚಾ-೧॥**

ಬಹಳ ಸಿಟ್ಟಿಂದ ಬಿಟ್ಟಿದ್ದ ಬಾಣ ಅಷ್ಟ ಪರ್ವತ ನಡಗ್ಯಾವ ದಿಟ್ಟ ಮಾಡಿ ವೃಷಕೇತು ।
ಸ್ಪಷ್ಟ ಪಾರ್ಥನ ಖಬರ ಹಾರೀತು॥೧॥

ಬಿದ್ದಾನ ಅರ್ಜುನ ಆಗ ಎದ್ದಾನ ಶ್ರೀಹರಿ ಬೇಗ ಅವರಿಗೆ ಸಾರಥಿ ಯಾವತ್ತು ।
ತಂದಿ ಮಗನ ಮಾಡಿದ ಅಪಸಾತು॥೨॥

**॥ಚಾ-೨॥**

ನಿಮ್ಮ ನಿಮ್ಮ ಒಳಗ ಬ್ಯಾಡ ಕದನಾ ।
ನಿನ್ನ ಪುತ್ರನ ಕರಕೊಂಡ ಹೋಗ ಅರ್ಜುನಾ ॥
ಜಗಳಾ ಹಚ್ಚಿ ಮೋಜ ನೋಡಿದಾನ ತಾನ ।
ನಿನ್ನ ಗರ್ವ ಇಳಿಸಿ ಬಿಟ್ಟಾನೊ ಅರ್ಜುನಾ ॥

**॥ಕೂ.ಪ. ॥**

ಬೀಗನ ಸಂಗಾಟ ಆಗ ನಗತಾನ ಶ್ರೀ ಹರಿ ಬೆಗ ನಾಗನಾಥ ಮಾಡಿದಂ ಕಪಟವನ
ಜಾಗ ಇಂಚಲದಲ್ಲಿ ನೆನದ ಸ್ವಾಮಿ ಬಂಕನಾಥನು ।
ಸಕ್ಕರ ನಾಯಿಕ ಕವಿ ಮಾಡಿ ಹಿಂಗ ಹೇಳಾನು ॥ ಮೂರು ॥

***ರಚನೆ :*** ಸಕ್ಕರ ನಾಯಿಕ
***ಕೃತಿ :*** ಚಾಪ ಹಾಕತೀವ ಡಪ್ಪಿನ ಮ್ಯಾಲ

## ೧೦. ವೃಷಕೇತು ಅರ್ಜುನರ ಯುದ್ಧ

ಪೂರ್ವ ಮಾತ ನಿಮ್ಮ ಪೂರ್ವಜರೊಳಗಾದ
ಚರಿತ್ರ ಕೇಳೋ ಕ್ಷಿತಿಪತಿ ಅರಸಾ
ಗರ್ವ ಬಂದಾಕ್ಷಣಕ ಆಗತಾರ ನಾಸಾ
ಸರ್ವ ಮಾತಿಗಿ ಕಪಟ ಕೃಷ್ಣನ ಕೆಲಸಾ
ಮೂರು ಲೋಕದ ಗಂಡ ಅನ್ನುವ ಅರ್ಜುನಾ
ಭಂಡ ಆದಾನೋ ಬಲು ಸರಸಾ
ಜನಮೇಜಯ ಇಟ್ಟ ಕೇಳ ತುಸು ಮನಸಾ॥ಪಲ್ಲ॥

ಬ್ರಹ್ಮ ಹತ್ಯಾ ಹೋಗುದುಕ ಧರ್ಮರಾಜ
ಶ್ಯಾಮಕರ್ಣ ಬಿಟ್ಟ ದೇಶೆಲ್ಲಾ
ತನ್ನ ತಮ್ಮ ಅರ್ಜುನನಿಟ್ಟ ಹಿಂಬಾಲಾ
ಮಹಾ ಪುಂಡ ಭೀಮ ಅವನ ಬೆನ್ನ ಮ್ಯಾಲಾ
ಧೀರ ಪ್ರದ್ಯುಮ್ನ ಬಲುಧೀರ ಬಬ್ರುವಾನ
ಶೂರ ವೃಷಕೇತು ಬಹು ಕುಶಲಾ
ತಾಮ್ರ ಧ್ವಜನ ಪರಾಕ್ರಮಕ ಅಳತಿಲ್ಲಾ
ಹಂಸಧ್ವಜ ನೀಲಧ್ವಜ ಮಯೂರಧ್ವಜ ಮೂವರ
ಚತುರಂಗ ಸೈನ್ಯ ಗಣಿತಿಲ್ಲಾ
ರಣರಂಗ ಮಾಡುವಂಥ ಸುಭಟರ ಪ್ರಬಲಾ
ಶ್ರೀ ರಂಗನ ಕುಮಕ ಅಷ್ಟೂರಿಗೆಲ್ಲಾ
ಸುದರ್ಶನ ಬಿಟ್ಟ ಆಗುದು ದುಂದುಭಿ
ಹಾರಿಸಿ ಬಿಟ್ಟ ಕೃಷ್ಣ ತಾನಾ ಶಿರಸನೆಲ್ಲಾ
ಆತನ ಪುರುಷಾರ್ಥ ಶೇಷಗ
ಗಣಿತ ಹತ್ತಲಿಲ್ಲಾ
ಹೊಡದಾರೋ ದುಂದುಭಿ ನಾದಾ
ನಡದಾರೋ ತಾವು ಮುಂದ ಮುಂದಾ
ತಡದಾರೋ ಹಾದಿ ಒಳಗ ವೀರರೆಲ್ಲಾ
ಮಾತು ಮಾತಿಗೆ ಹರಿ ನುಡದಾನೋ ಅಬಲಾ

ವೇಷಕೇತುನಂಗ ಪ್ರೌಢರ್ಯಾರಿಲ್ಲಾ
ಮೂರು ಲೋಕದೊಳಗ ಇವನ ಸರಿ
ಯಾರ್ಯಾರನು ಕಾಣೆ ಗರ್ವ ಬಂದಾಕ್ಷಣಕ
ಮುರಿಯಾಂವಾ ಹಲ್ಲಾ
ಹಂಗೂ ಹರಿಯಾಕ ಧನರ್ವಿದ್ಯೆ ಎಲ್ಲಾನು ಬಲ್ಲಾ
ಇಷ್ಟ ಮಾತ ಕೇಳಿ ಬಹಳ ಪೆಟ್ಟ ಹತ್ತಿ ಅರ್ಜುನ
ಸಿಟ್ಟನಿಂದ ಮಾಡಿ ಕಣ್ಣ ಕೆಂಪಲಾಲಾ
ಭಿಡೆಬಿಟ್ಟ ಕೃಷ್ಣಗಂದ ಇದು ಎಲ್ಲಾ
ಎಷ್ಟ ಬಂಟತನಾ ಹೇಳತೀರಿ ಇವಂದೆಲ್ಲಾ
ಕಂದ ಬಭ್ರುವಾನನ ತೂರಿ ಹೊಡದೋ ರಥಾ
ಏರಗಟ್ಟಿ ನಿಂತ ಎಂಟ ದಿವಸೆಲ್ಲಾ
ಅಂತರ ಮಾರ್ಗದಲಿ ತೂಗತಿತ್ತ ರಾತ್ರಿ ಹಗಲಾ

**||ಚಾಲ||**

ಅಂದ ಮಾತ ಕೇಳಿ ವೃಷಕೇತು
ಮುಂದಕ ಸರದ ಬಂದ ಕೂತ
ಸಂದೇಹವಿಲ್ಲದ ನುಡದಾನ
ಕುಂದ ಹತ್ತೀತ ಮಾತಿನ ಕ್ರೋಧವನು
ಹಿಂದ ಯುದ್ಧ ಮಾಡಿ ನೀವು ಎಲ್ಲಿ ಎಂದ
ಜಯಸಿದರಿ ಅಂತ ಪಾರ್ಥಗ ಕೇಳ್ಯಾನು
ಕಂದ ಬಭ್ರು ಕೊಂದಿದ್ದ ನಿನ್ನನು
ಮದಲ ಶ್ಯಾಮಕರ್ಣ ತರುವಾಗ್ಗೆ
ಭೀಮ ಹೋಗಿ ಪರಾಕ್ರಮ ಮಾಡಿ
ಸುಮಕ ಅಳತ ಬಂದಾನು
ಬಲು ಧಿಮಾಕ ಹೇಳಿ ಫಲವೇನು

**||ಸಣ್ಣಚಾಲ||**

ಮಯೂರ ಧ್ವಜನ ಪಟ್ಟಣದೊಳಗ ಹೋಗಿ
ದಾನಾ ಬೇಡ್ರಿ ಬ್ರಾಹ್ಮಣ ರೂಪಾಗಿ
ಮೂರು ಲೋಕ ಗಂಡ ಅನ್ನು ಬಿರುದಿಗಿ
ಕೊರತಿ ಬಂದೀತೋ ಅರ್ಜುನಾ ಅಲ್ಲ ಗತಿ

**||ಏರು||**

ಮಿಕ್ಕಿದ ಮಾತಿಗೆ ನಾನು ಕಕ್ಕನಂತೆ ತಾಳಿದೆನೋ
ಲೆಕ್ಕಿಲ್ಲ ಅರ್ಜುನಾ ಆಡಬ್ಯಾಡ ಬಿರಸಾ
ಸೊಕ್ಕ ಮಾಡಿದರ ಒಂದಿನಾ ಆಗತಾರ ನಾಸಾ
ಲಂಕಾಪತಿ ರಾವಣಂದ ಹಾಳಾಯಿತ ವಂಶಾ
ಪೂರ್ವ ಮಾತ ನಿಮ್ಮ ಪೂರ್ವಜರೊಳಗಾದ
ಚರಿತ್ರ ಕೇಳೋ ಕ್ಷಿತಿಪತಿ ಅರಸಾ॥೧ನೇ ಚೌಕ॥

ಕೋಪದಿಂದ ಪಾರ್ಥ ಸಂತಾಪ ಆಗಿ ಅಂದಾ ನಿಮ್ಮ
ಅಪ್ಪ ಹಿಂದ ಬಂಟತನ ಮಾಡಿಸತ್ತಾ
ನಿನ್ನ ಸ್ವರೂಪ ತಿಳದ ಹೋಯಿತೋ ಪುರುಷಾರ್ಥಾ
ನಿನಗ ಮಾಫ ಮಾಡತೇನೋ ಆಡಿದ ಮಾತಾ
ನುಚ್ಚಿಗಿ ಬಿದ್ದಂತವಗ ಹೆಚ್ಚಿನ ಮಾತ್ಯಾಕೋ
ನಾಚಿಕೆ ಇಲ್ಲದ ಒದರೂದು ವ್ಯರ್ಥಾ
ಹಿಂದ ಮುಚ್ಚಿದ ಕತಿಯ ತಗಿಬ್ಯಾಡ ಮತ್ತಾ
ನಿಮ್ಮ ತಂದಿ ಕರ್ಣ ದುರ್ಯೋಧನನಲಿ ತಿಂದ ಅನ್ನಾ
ಮಂದಿ ಮನಿಕೂಳ ನಿಮಗ ಹಿತಾರ್ಥಾ
ಭಾಳ ನಿಂದೆ ಮಾತ ಆಡತಿಯೋ ಏನಂತಾ
ನಿನ್ನ ಕೊಂದ ಹಾಕುವಷ್ಟು ನನ್ನ ಸಾಮರ್ಥ್ಯ
ತಾಯಿ ಕುಂತಿ ಭಾಳ ನಿನ್ನ ಮಾಯಾದಿಂದ ಸಲುವ್ಯಾಳಂತ
ಕಾಯತೇನೋ ಅದರಿಂದ ನಿನ್ನ ಮಮತಾ
ವ್ಯರ್ಥ ಸಾಯಬ್ಯಾಡ ನನ್ನ ಕೂಡ ಮಾಡಿ ಶರ್ತಾ
ಸಿಟ್ಟ ಹತ್ತಿ ವೃಷಕೇತು ತಟ್ಟನಂತಾನ ಅರ್ಜುನಗ
ಬಂಟತನಾ ಮಾಡಿದಿಯೋ ನೀ ಮಸ್ತಾ
ವಿರಾಟ ರಾಜನಲ್ಲೆ ಸೀರಿ ಉಟ್ಟ ಬಲ ಖಸ್ತಾ
ನಾಟ್ಯ ಮಾಡಿದಂಗ ಅಲ್ಲ ಮಾಡೇನ ಘಸ್ತಾ
ಐದ ಮಂದಿ ಅಣ್ಣಾ ತಮ್ಮರ ದೇಹಿ ಅಂತಾ
ಅನ್ನಾ ಬೇಡುದು ನ್ಯಾಯವೇನೋ ಕ್ಷತ್ರಿಗೆ
ಕ್ಷತ್ರಿ ಧರ್ಮಕ ಹುಟ್ಟಿ ಪೂರ್ತಾ
ಪಾಂಡುರಾಜನ ಹೊಟ್ಟೇಲಿ ಹುಟ್ಟಿ ಬಂದಾಂಗ ಜಂತಾ
ಅರ್ಧಾಂಗಿ ದ್ರೌಪತಿನ ಮಾನಭಂಗ ಮಾಡುವಾಗ
ಮಂಗನಾಂಗ ಕೂತಿದ್ದಿ ನೀನು ಹಲ್ಲ ಕಿಸ್ತಾ
ಹನ್ನೆರಡು ವರುಷ ವನವಾಸ ಭೋಗಿಸುತ್ತಾ
ಹಿಂಗ ಬಡ್ದಿ ಕಥಿಯಲ್ಲಾ ನಿಮ್ಮ ವೃತ್ತಾಂತಾ
ಮಧ್ಯ ರಾತ್ರಿಯೊಳು ಭಾಳ ಜಿದ್ದಾಗಿ ದುರ್ವಾಸ ಬಂದಾ
ಗೆದ್ದ ಕೊಟ್ಟ ಕೃಷ್ಣ ನಿಮ್ಮದೆಲ್ಲಾ ಪಂಥಾ
ಇಲ್ಲದಿದ್ರ ಪಾಂಡವರು ನೀವ ಯಃಕಶ್ಚಿತಾ

**||ಚಾಲ||**

ಒಳ್ಳೇ ಉಮೇದಾಗಿ ಪ್ರಮೀಳಾನ ಮೇಲೆ ಹೋಗಿ
ನೀವು ಪರಾಕ್ರಮ ಮಾಡಿದಿರಿ
ಸಿಂಬಿಲಿ ಬಗಸಿಕೊಂಡ ಬಂದ್ರಿ
ನಿನಗ ಧನುರ್ಧಾರಿ ಅಂತ ಸುಳ್ಳ ಕರಿಯುವರು ಎಲ್ಲಾ
ಕಂಡೀತ ನಿನ್ನ ಐಶ್ವರಿ
ನಡೀಷಂಡಾ ತೋರಿಸಬ್ಯಾಡ ಮಾರಿ
ಇಂತಾ ಕೇಡಿನ ಮಾತ ಅರ್ಜುನಗ ಖಚಿತ
ಬರ್ಚಿ ಬಡದಾಂಗ ಆಯಿತ
ಬಿದ್ದೀತ ಅಲ್ಲಿ ಹುರಿ ಹುರಿ
ಪ್ರಳಯಾಗ್ನಿಂದ ನಿಶ್ಚಿತ ಎದ್ದಿತ ಉರಿ

**||ಸಣ್ಣಚಾಲ||**

ಅರ್ಜುನ ಅಂತಾನ ಏನಂತಿಯೋ ಪೋರಾ
ಜ್ವಾಕಿ ಮಾಡಿದ್ದ ಕಳದಿಯೋ ಉಪಕಾರಾ
ಇನ್ನ ಮಾಡೋ ಎನ್ನ ಕೂಡಾ ಸಮರಾ
ಹೊಡದ ಹಾರಿಸಿ ಬಿಡತೇನ ನಿನ್ನ ಶಿರಾ
ನನಗ ಇದರ ಆಗಿಲ್ಲೋ ಶಂಕರಾ
ಇದರೇನೋ ನಿನ್ನಂತ ಪಾಮರಾ

**||ಏರು ||**

ವೃಷಕೇತು ಎದ್ದ ನಿಂತ ಕೇಳೋ ಪಾರ್ಥ
ಕರ್ಣ ಸುತ ಖರೇ ಅದರ ನಾನಾ
ಹಾರಸತೇನೋ ನಿನ್ನ ಶಿರಸಾ
ನಿನ್ನ ಧನುರ್ವಿದ್ಯೆ ತೋರಿಸೋ
ತೀರಲಿ ಹೌಸಾ
ಹೇಳಿ ಭುಜಾ ಹೊಡದ
ಮಾಡಿ ನಿಂತಾನ ರವಸಾ
ಕವಿ ಬಾಳಗೋಪಾಳ ಸರಸಾ
ಹೇಳ್ಯಾನ ಯುದ್ಧ ಲಾವಣಿ ಹರುಷಾ
ಪೂರ್ವಮಾತ ನಿಮ್ಮ ಪೂರ್ವಜರೊಳಗಾದ
ಚರಿತ್ರ ಕೇಳೋ ಕ್ಷಿತಿಪತಿ ಅರಸಾ||೨ನೇ ಚೌಕ||

***ರಚನೆ :*** ಬಾಳಗೋಪಾಳ

***ಕೃತಿ :*** ಬಾಳಗೋಪಾಳನ ಲಾವಣಿಗಳು

# ೨೧. ಭೀಷ್ಮ ಪರ್ವ

**೧ನೇ ಚೌಕ –**

ಜನಮೇಜಯನ ಮುಂದ ವೈಶಂಪಾಯ್ನನ ಕತಿ
ಅರಸ ಕೇಳಿ ತೂಗಿದದ ತಲಿ ।
ಯುದ್ಧಾಗಿ ಹೋಯ್ತು ದ್ವಾಪತದಲಿ ।
ಆ ಭೀಷ್ಮ ಲಡಾಯಿ ಮಾಡಿದ್ದ ಕೊಲಿ ।
ಪಾಂಡು ಪ್ರತಾಪದೊಳಗಾದ ಕೌತುಕಾ -
ಎಷ್ಟೆಂತ ನಾ ವರ್ಣಿಸಲಿ । ಒಂದು ಬಾಯೀಲಿ ॥
ಧರ್ಮ ದುರ್ಯೋಧನಗ ವರ್ಮ ಸೊಕ್ಕಿ
ಒಳಿತಾಗಿ ಹಿರಸ ಬಿದ್ದಿತ್ತು ಕಿಡಿ
ಪರಮಾತ್ಮ ಆದ ಪಾಂಡವರ ಕಡಿ ।
ಪೃಥಿವಿ ಭೂಭಾರ ಇಳಸೂನು ನಡಿ ।
ನರನಾರಾಯಣ ಅವತಾರ ತೊಟ್ಟು
ಅರ್ಜುನ ಕೃಷ್ಣ ಇಬ್ಬರು ಕೂಡಿ । ಮಸಲತ ಮಾಡಿ ॥
ಯುದ್ಧ ಮಾಡೂದನು ಸಧ್ಯ ನೇಮಿಸಿ ತಾ ।
ಉದ್ದ ತಂದು ರಣಗಂಬ ಹೂಡಿ ।
ಆ ಭೀಷ್ಮ ಇದ್ದ ಬೆಂಕೀಯ ಕಿಡಿ ।
ದಂಡ ತಯಾರಾಗಿ ಬಂತು ಎರಡು ಕಡಿ ।
ರಣಗಂಬದ ಪೂಜೆ ಮಾಡಿ ಹಾಕಾರಿ-
ಹೊಡೆದು ಹೇಳತಾನ ಖಡಾ ಮುಡಿ । ಹಿಡಿಲಿಲ್ಲ ಭಿಡಿ ॥

**||ಇಳುವು||**

ತಮ್ಮ ದಂಡಿನ ಕಡೀ ಮಾರ್‍ಯಾಗಿ ಹೊಡಿದ ಹಾಕಾರಿ । ಹೇಳತಾನ ಒದರಿ
ಪಾಂಡವರ ಸಾರಥಿ ಅನುಕೂಲ ಆದಾ ಕೈವಾರಿ । ತಾನೆ ಗಿರಿಧಾರಿ ॥
ಜಯ ಪ್ರಾಪ್ತಿ ಆದ ಪಾಂಡವರಿಗಿಂತ ಬ್ರಹ್ಮಚಾರಿ । ಹೇಳಿದಾ ಸಾರಿ ॥
ಇಂದ ಬೇಕಾದ ಹೋಗಿರಿ ಭಡಡಡ-
ಪಾಂಡವರ ಕಡಿ ಹೊಂಟ । ಹೊಂಟ ನೀವು ಹೊಂಟ ॥
ರಥ ಏರಿ ಹೊಡೆದ ಘಡಡಡ
ದಂಡಿನೊಳಗ ಭಂಟ । ಭಂಟ ತಾನು ಭಂಟ ॥

ಮೀಸಿ ಹುರಿಯ ಹಾಕಿ ಖಡಡಡ
ಬಾಣ ಜಗ್ಗಿ ಬಿಟ್ಟ । ಬಿಟ್ಟ ತಾನು ಬಿಟ್ಟ ॥

**॥ಏರು॥**

ಪೈಲಿ ಪ್ರಥಮದಾಗ ಭೀಷ್ಮ ಲಡಾಯಿಗಿ
ಸೈನ್ಯದೊಳಗ ಇದ್ದಂಗ ಹುಲಿ ।
ಬಾಣದ ಮಂಟಪ ಹಾಕಿದ್ದ ಬಲಿ ।
ಸೂರ್ಯ ಮುಣಗಿದಂಗ ಬಿತ್ತು ಕತ್ತಲಿ ।
ಪಾಂಡು ಪ್ರತಾಪದಾಗ ಆದ ಕೌತುಕಾ -
ಎಷ್ಟೆಂತ ನಾ ವರ್ಣಿಸಲಿ । ಒಂದು ಬಾಯೀಲಿ ॥

**೨ನೆಯ ಚೌಕ –**

ಮುತ್ಯಾನ ಪಾದಕ ಬಾಣ ತಗದು
ಅರ್ಜುನ ಬಿಟ್ಟಾನ ನೋಡಿ ನಿರತ ।
ಅಂವ ನಮಸ್ಕಾರ ಮಾಡಿದ ಪಾರ್ಥ ।
ಭೀಷ್ಮ ಆಶೀರ್ವಾದ ಕೊಟ್ಟಾನ ಪೂರ್ತಾ ।
ವೀರ ಖರೇ ರಣಶೂರ ಫಾಲ್ಗುಣ -
ಹತ್ತು ಹೆಸರಿನವ ಸಮರ್ಥ । ಇಲ್ಲ ನಿನ್ನ ಹೊರತ ।
ಪಾರ್ಥ ಅರ್ಜುನಗ ಸಾರ್ಥಿ ಕೃಷ್ಣ ಆಗಿ
ಮುಂದ ಕೂತು ನಡಿಸ್ಯಾನ ರಥ ।
ಮ್ಯಾಲ ಧ್ವಜಸ್ತಂಭದಲಿ ಹನುಮಂತ
ಕೂತು ಹುಂಕಾರ ಮಾಡಿದಾ ವಾಯುಸುತ ।
ವಿಷ್ಣು ಸಾಂಬನಾಂಗ ಸರಿಯ ಸಮಾನಿಕಾ -
ಭೀಷ್ಮ ಇದ್ದ ರಣ ಪಂಡೀತ । ಪಂಡುರಾಯನ ಪಿತ ॥

**॥ಇಳುವು॥**

ತ್ವಾಳಾಗಿ ಹೊಕ್ಕ ಅರ್ಜುನ ಮಾಡಿ ಕುರಿ ಹಿಂಡ । ಕೌರವರ ದಂಡು
ಗರ್ಜನೆ ಮಾಡಿ ಬಾಣ ಬಿಟ್ಟು ಹಾರಿಸಿದ ರುಂಡ । ಆಡಿದಂಗ ಚಂಡ
ಆ ಭೀಮ ಹೊಡೆದ ಹಾಕಾರಿ ಗದಾ ಎತಗೊಂಡ । ಹೊಕ್ಕನಂವ ಪುಂಡ
ಆನಿ ಸೊಂಡಿ ಹಿಡಿದು ಗರರರ ತಿರುವಿಕೇರಿ ಒಗೆದ । ಒಗೆದ ತಾ ಒಗೆದ
ಕಾಲ ಮಂದಿನ ಹಿಡಿದು ದರರರ ಎಳದು ಭೀಟಿ ಜಿಗಿದ । ಜಿಗಿದಾ ತಾ ಜಿಗಿದ ॥
ಸಿಟ್ಟಿಗೇರಿ ಭೀಷ್ಮ ಕರರರ ಹಲ್ಲ ತಿಂದು ತೆಗೆದ । ತೆಗೆದ ಬಾಣ ತೆಗೆದ ॥

**॥ ಏರು ॥**

ಹೊಡೆದು ಶವಾ ಮಾಡಿ ಕೆಡವಿದ್ದ ರಣದಾಗ
ಹೆಣಕ ತಟ್ಟಿದವು ರಥದ ಗಾಲಿ ।
ನೆತ್ತರದು ಹರಿದಿತರಿ ಕಾವಲಿ ।
ತಗಿಲಾಕ ಹೊಂಟಿತರಿ ನದಿಯ ನೆಲಿ ।
ಪಾಂಡು ಪ್ರತಾಪದಾಗ ಆದ ಕೌತುಕಾ ಎಷ್ಟೆಂತ ನಾ ವರ್ಣಿಸಲಿ । ಒಂದು ಬಾಯೀಲಿ ॥

**೩ನೇ ಚೌಕ –**

ದೇವರ ಗೂಡ ನೇಮ ಮಾಡಿ ಆ
ಭೀಷ್ಮ ಖಡತರ್ಲಾಕಿದ್ದ ಪಣ ।
ಚಕ್ಕರ ಹಿಡಿಸೇನ ಸುದರ್ಶನ ।
ಹಿಡಿಲಾಕ ಇಲ್ಲಂದ ಮೇಘವರ್ಣ ।
ನನ್ನ ಇದರಿಗಿನ್ನೇನು ಟಿಕಾಸ್ಯಾ -
ಸಣ್ಣಕೂಸ ಭಾಳ ಅರ್ಜುನ । ಅಂದು ಬಿಟ್ಟ ಬಾಣಾ ॥
ಗಂಗಾ ಕಂದ ಹೀಗಂದು ಹೊಡೆದು
ಕೆಡವಿದ್ದ ಏಟಿಗೊಂದೊಂದು ಹೆಣ ।
ಮೂರ್ಛೆ ಬಂದು ಪಾರ್ಥ ಮುಚ್ಚ್ಯಾನ ಕಣ್ಣ ।
ಆಗ ಹೊರಳಿ ನೋಡಿದಾ ನಾರಾಯಣ ।
ಘಾತಾಯಿತಂತ ತಗೊಂಡು ಚಕ್ಕರಾ -
ಭೀಷ್ಮ ಹಿಡಿದ ದೇವರ ಚರಣ । ಇನ್ನ ತಗೋ ಪ್ರಾಣ ॥
ಪಾಂಡವರ ಸೈನ್ಯದಲಿ ಶ್ರೇಷ್ಠನಾದ ಕೃಷ್ಣ
ವರ್ಣನ ಮಾಡಿದಾ ಭೀಷ್ಮನ ಗುಣ ।
ಪಂಚ ಪಾಂಡವರ ಮ್ಯಾಲ ಇಟ್ಟು ದಯ ಕರುಣ ।
ನೀ ಮಾಡೊ ಇನ್ನ ಅವರ ಸಂರಕ್ಷಣ ।
ಪರಶುರಾಮಗ ಸರಿಸಿಬಿಟ್ಟೇದಿ -
ನಿನ್ನ ಗುರುವಿನ ಕಾಣಾಕಾಣಾ । ಆಗಿ ನಿಪುಣ ॥

**॥ಇಳುವು॥**

ಸಾವಧಾನ ಆಗಿ ಅರ್ಜುನಗ ಬಂದಿತೊ ತಾಪ । ತಗೊಂಡಾನ ಚಾಪ ॥
ದೇವರ ಅಂದ ಭೀಷ್ಮಾಚಾರಿ ಹೊಡೆದ ಒಂದು ಧುರಪ । ದಂಡ ಬಿತ್ತು ತೆಪ್ಪ ।
ರಣದೊಳಗ ಯಶ ಇಲ್ಲೇನೋ ತಟ್ಟಿತೋ ಪಾಪ । ಮಂದಿ ಆಯ್ತು ಖಪ್ಪ ॥
ಕಿರೀಟಿ ತುಟಿಯ ಕಚ್ಚಿ ಧನನನ
ಧನುಷ ಎತ್ತಿ ಹಿಡಿದ । ಹಿಡಿದ ತಾ ಹಿಡಿದ ॥
ಅಗಳಾಡಿಸಿಕೇರಿ ಫಣಣಣ
ಚಾಪಿನ ಗಂಟೆ ಬಡಿದ । ಬಡಿದ ತಾ ಬಡಿದ ॥

ಅಂದ ಎರಡು ಕೈಲೆ ಸಣಣಣ
ಬಾಣ ಜಗ್ಗಿ ಹೊಡಿದ । ಹೊಡಿದ ತಾ ಹೊಡಿದ ॥

**॥ಏರು॥**

ಶರ್ತ ಲಡಾಯಿ ಮಾಡಿ ಬೆವತ ಮುಕುಟ -
ಹನಿ ನೀರ ಬಂತು ಕಣ್ಣೀನ ಬಳಿ ।
ತೆಗೆದೊಗೆದ್ರೊಳಗ ಕೆಲಸಾಯಿತಲ್ಲಿ ।
ಭೀಷ್ಮ ಹತ್ತು ಸಾವಿರ ಹಾರಿಸಿದ್ದ ತಲಿ ।
ಪಾಂಡುಪ್ರ ತಾಪದಾಗ ಆದ ಕೌತುಕಾ -
ಎಷ್ಟಂತ ನಾ ವರ್ಣಿಸಲಿ ಒಂದು ಬಾಯೀಲಿ ॥

**ಆನೆಯ ಚೌಕ –**

ಚಿಂತಿಯೊಳಗ ಗೋತಾಸಿ ಕುಂತ
ಅರ್ಜುನಗ ಹೇಳತಾನ ಅಣ್ಣ ಧರ್ಮ ।
ಹಂಕಾರ ಬಿಡ್ರಿ ಮನದಾನ ಹಮ್ಮ ।
ಮುತ್ಯಾಗ ಶರಣು ಹೋಗುನು ಸುಮ್ಮ ।
ಮಾತ ಮನಸಿಗೀ ತಂದು ತಲಿಯದೂಗಿ
ಹೇಳತಾನ ಆ ಪರಮಾತ್ಮ । ನಡಿರೆಂದ ಭೀಮ ॥
ರಾತ್ರಿ ಕಾಲಕ ಆರು ಮಂದಿ ಕೂಡಿ
ಹೊಂಟು ಹೋದರವರು ಆಗಿ ಜಮ್ಮಾ ।
ಕೂತಿದ್ದ ಢೇರೆದಾಗ ಭೀಷಮಾ ।
ನಾಮಸ್ಮರಣಿ ಮಾಡತಿದ್ದ ರಾಮ ರಾಮ ।
ನಮಸ್ಕಾರ ಮಾಡಿ ಪಾಂಡವರು ಅಂತಾರ
ಉದ್ಧಾರಾಯಿತರಿ ನಮ್ಮ ಜನ್ಮ । ಸರಿದಿತು ಕರ್ಮ ॥
ಬಿದ್ದು ಪಾದಕ ಎದ್ದು ಹೇಳತಾರ
ನೀವು ಲಡಾಯಿ ಮಾಡಿದಿರಿ ಶಮ ।
ಗಟ್ಯಾಗಿ ಹಿಡಿದಿರಿ ಒಂದೇ ನೇಮ ।
ನಮ್ಮ ದಂಡ ಖಪ್ಪ ಆಗಿ ಹೋಯ್ತರಿ ನಿಯಮಾ ।
ಯಶ ಅರ್ಪಣಿ ಮಾಡಿರಿ ನಮಗ -
ಕೇಳಬೇಕ್ರಿ ಲಡಾಯಿ ವರಮ । ಒಳಗಿನ ಹೊಲಮ ॥

**॥ಇಳುವು॥**

ಆಡಿವರ್ಗ ಆಗಿ ಆ ಭೀಷ್ಮ, ದೇವರಿಗಿ ಅಂದಾ । ಬಾಲ ಮುಕುಂದಾ ॥
ನನ್ನ ಬಾಳ್ಯಾಗಳನ ರಕ್ಷಣ ಮಾಡು ಗೋವಿಂದ । ದೇವಕೀಕಂದ ॥

ಯಶ ಕುಡತ ಶಿಕಂಡಿ ಮಾಡಿ ಬಿಡತ ಅರ್ಜುನನ ಮುಂದ । ಹೊಡಿರಿ ನಮಗಂದ ॥
ಇಷ್ಟ ಮಾತ ಕೇಳಿ ಹಿರಿರಿರಿ
ಹಿಗ್ಗಿ ಧರಮೆದ್ದ । ಎದ್ದ ತಾ ಎದ್ದ ॥
ಅರ್ಜುನ ಬಂದ ಭಿರಿರಿರಿ
ಹಿಗ್ಗಿ ಧರಮೆದ್ದ । ಎದ್ದ ತಾ ಎದ್ದ ॥
ಅರ್ಜುನ ಬಂದ ಭಿರಿರಿರಿ
ಶಿಕಂಡಿ ಮುಂದ ಇದ್ದ । ಇದ್ದ ಮುಂದಿದ್ದ
ಧನಂಜಯ ಹೊಡೆದ ಗಿರಿರಿರಿ
ಗಿರಕಿ ಬಂದು ಬಿದ್ದ । ಬಿದ್ದ ಭೀಷ್ಮ ಬಿದ್ದ ॥

**||ಏರು||**

ಹತ್ತು ದಿನ ಹೀಂಗ ಮಾಡಿ ಲಡಾಯಿ
ದೇಹ ಬಿಟ್ಟಾ ತನ್ನ ಇಚ್ಛಾದಲಿ ।
ಶರಪಂಜರ ಮ್ಯಾಲ ಬಿದ್ದಾ ಅಂತರಲಿ ।
ತೂಗಾಡಿ ಝೋಲಿ ತಿಂದಿತೋ ತಲಿ ।
ಪಾಂಡುಪ್ರತಾಪದಾಗ ಆದ ಕೌತುಕಾ
ಎಷ್ಟೆಂತ ನಾ ವರ್ಣಿಸಲಿ । ಒಂದು ಬಾಯೀಲಿ ॥

**೫ನೆಯ ಚೌಕ –**

ಎರಡೂ ದಂಡಿನಾಂಗ ಅಕ್ರಾಂತಾಯಿತೋ
ಯಾರೂ ಇಲ್ಲ ಇವನ ಸರಿ ।
ಇಂದ ನೆಲಕ ಬಿದ್ದ ದಂಡೀನ ಧೊರಿ ।
ಭೀಷ್ಮ ಪರ್ವದೊಳಗ ಆಗಿಹೋತ್ರಿ ಸೂರಿ ।
ಶಂತ್ನುರಾಯನ ಸುತ ಅಂದ ದೇವರಿಗೆ
ಲಗು ಮಾಡಿ ದುರ್ಯೋಧನಗ ಕರಿ । ತಲಿದಿಂಬ ತರ್‍ರಿ ॥
ಕೇಳಿ ದುರ್ಯೋಧನ ಅರಳಿ ಲೋಡ ತಂದಾ
ನೀರು ತುಂಬಿ ಬಂಗಾರ ಝಾರಿ ।
ಹಾಸೀಗಿ ತಕ್ಕ ಲೋಡಲ್ಲ ಸರಿ ।
ಕಣ್ತೆರೆದು ನೋಡಿದ ಅರ್ಜುನನ ಮಾರಿ ।
ಬಾಣದ ತಿಗಟಿ ಕಟ್ಟಿ ಕೊಟ್ಟಾನ -
ಆವಾಗ ಮಾತಾ ಸರಾಸರಿ । ಕೂಡಿತರಿ ॥
ಶ್ವೇತವಾನ ಹೊಡದಾನ ಬಾಣ
ಪಾತಾಳದಂದು ತಗದಾನ ಝರಿ ।
ಪುಟಿದೀತೋ ಮ್ಯಾಲ ಕಾರಂಜಿ ಪರಿ ।

ಬಾಯಾಗ ಬಿತ್ತು ನೀರಿನ ಧಾರಿ ।
ದುರ್ಯೋಧನ ಜಂಬುಕನ ಸಮಾನ
ನೀನೆ ಒಬ್ಬ ಸಿಂಹದ ಮರಿ । ಅಂದಾ ಭೀಷ್ಮಾಚಾರಿ ॥

**॥ಇಳುವು॥**

ಯಾರೂ ಸುಟ್ಟಿರಬಾರದು ಅಲ್ಲಿ ಸುಡು ಅಂತ ಹೇಳಿ ವಚನ । ಕೇಳಿದ ಕೃಷ್ಣನ ॥
ಎಂಟು ದಿನ ಲಡಾಯಿ ಆಗೂತಾನ ನೋಡಿ ಸಂಪೂರ್ಣ । ಅಲ್ಲಿಂದ ಬಿಟ್ಟ ಪ್ರಾಣ ॥
ಭೀಷ್ಮನ ತಗೊಂಡು ಮೂರು ಲೋಕ ತಿರುಗಿ ಜಾಗ ವೈನ । ಇಲ್ಲಂದ ಭಗವಾನ ॥
ಕೈಯೊಳಗ ಕಿಚ್ಚ ಕೊಟ್ಟ ದೇವರ ನೋಡಿಕೇರಿ ಭಕ್ತಿ । ಭಕ್ತಿ ಅವನ ಭಕ್ತಿ ॥
ಭೀಷ್ಮ ಪರ್ವ ಮುಗಿಸಿ ದೇಹ ಇಟ್ಟು । ಆಗಿ ಹೋದ ಮುಕ್ತಿ । ಮುಕ್ತಿ ಆಗಿ ಮುಕ್ತಿ ।
ನಾಗನಾಥಗ ಒಬ್ಬ ದೊಡ್ಡಾಕಿ
ಹಾಳ ನಮ್ಮ ಶಕ್ತಿ । ಶಕ್ತಿ ನಮ್ಮ ಶಕ್ತಿ ॥
ಸೋಮಾರ ದಿನ ಪದ ಮುಗಿತು ಹಲಸಂಗ್ಯಾಗ
ಹಾಡತಾರ ಒಳೇ ಮೋಜೀಲಿ ।
ಗುಡು-ಬಾಳು ಹೇಳಿದಾರ ಇದರ ಕೀಲಿ ।
ಸಿದ್ದು ಶಿವಲಿಂಗ ಹಾಡ್ಯಾರ ನೌಕೀಲಿ ।
ಪಾಂಡುಪ್ರತಾಪದಾಗ ಆದ ಕೌತುಕಾ -
ಎಷ್ಟೆಂತ ನಾ ವರ್ಣಿಸಲಿ । ಒಂದು ಬಾಯೀಲಿ ॥

***ರಚನೆ :*** ಸಿದ್ದು-ಶಿವಲಿಂಗು
***ಕೃತಿ :*** ಜೀವನ ಸಂಗೀತ

## ೧೧. ಭೀಷ್ಮ ಪ್ರತಿಜ್ಞೆ

ಕುರು ಪಾಂಡವರೊಳು ಘೋರ ಲಥಾಯಿ
ಕೇಳೋ ಕ್ಷಿತಿಪತಿ ಅರಸಾ
ವರ್ಣಿಸಿ ಹೇಳುವೆನು ನಾ ಸಾರಾ ಸಾರಾ ಪಟ್ಟಾ-
ಗಟ್ಟ್ಯಾರೋ ಭೀಷ್ಮಗ ಸೇನಾಪತಿ ಕೆಲಸಾ ।
ಹತ್ತು ಸಾವಿರ ಅತಿರಥಿ ಮಹಾರಥಿ
ನಿತ್ಯ ಕೊಲ್ಲುದು ನಿಯಮಾ
ಇಂಥಾ ಪಂಥಾ ಹಾಕಿದನೋ ಭೀಷ್ಮಾ
ಅದ್ಭುತ ಯುದ್ಧ ಒಂಭತ್ತು ದಿವಸ ತನಕಾ
ನಡದೀತ ಸಂಗ್ರಾಮಾ
ಮುಂದ ಒಂದ ದಿವಸ ಉಳಿದೀತ ಯುದ್ಧ
ಆಗುದು ಕಾಯಿಮಾ

ಡೇರೆದಲಿ ಕೂತಾನ ಆರಾಮಾ
ದುರ್ಯೋಧನ ಬಂದ ದುಃಖ ಮಾಡತಾನ
ಹಿಡದ ಪಾದಪದ್ಮಾ ಪಾದಪದ್ಮಾ
ಎಷ್ಟ ನೀವು ಕಷ್ಟ ಪಟ್ಟರೂ
ನಷ್ಟ ಆಗವಲ್ಲ ಧರ್ಮ ಸುಟ್ಟ
ಬಿಡವಲ್ಲರಿ ವೈರಿ ಭೀಮಾ
ಸೃಷ್ಟಿಯೊಳಗೆ ಶ್ರೇಷ್ಠನಾದ ಅರ್ಜುನಾ
ಕೆಟ್ಟ ನಮ್ಮ ಜಲಮಾ
ನಾಳಿ ನೀವು ಲಢಾಯಿ ಮಾಡೋದು
ಉಳಿತ ನಾಲ್ಕು ಯಾಮಾ
ನಮ್ಮ ಮ್ಯಾಲ ಇಲ್ಲ ನಿಮ್ಮ ಪ್ರೇಮಾ
ಪಕ್ಷ ಹಿಡಿದು ಲಕ್ಷ ಇಟ್ಟಿರಿ ಪಾಂಡವ-
ರೊಳಗ ಉಳಿತ ನನಗ ವರ್ಮಾ
ನನ್ನ ಕರ್ಣ ಬಾಣ ಹಿಡಿವಲ್ಲ ನಿಮ್ಮ
ಸಮರಾಂಗನಾ ಆಗೋತನಕಾ
ಇದ್ದು ಇಲ್ಲದಂಗ ಆಗ್ಯಾನ ಸುಮ್ಮಕ
ಧೀರ ಕರ್ಣ ಬಾಣ ಹಿಡಿತಿದ್ದಂದರ
ಹುರುದು ಪಾಂಡವರು ಕಾಟಕಾ
ಉಳಿ ಬಲ್ಲರೇನೋ ಇಷ್ಟೊತ್ತನಕಾ.

**||ಚಾಲ||**

ಸುಟ್ಟ ಹೋಯಿತು ನಿಮ್ಮ ಭಂಡತನವೆಲ್ಲ
ನಮಗ ಆದೀತೋ ತ್ರಾಸಾ
ನೀವು ಹೋಗೋತನಕಾ ಬಾರದು ಲೇಸಾ
ಪುಟ್ಟಪೂರಾ ರಥಿ ಭೀಷ್ಮಾಚಾರಿ
ಅರ್ಧ ರತಿ ಆದಿರಿ ಕರ್ಣಗ
ಖರೆ ನಾವು ಅನ್ನೋಣ ಯಾತರಮ್ಯಾಗ
ಯುದ್ಧ ಮಾಡಿ ಗೆದ್ದಿರೆಂಬೋದು
ಕಂಡೇವ ರಣದಾಗ

**||ಏರು||**

ಹೀಂಗ ಕಪಟ ಪ್ರಸಂಗ
ಮಾಡೀರಂತ ತಿಳಿದಿದ್ರ ನಮಗ
ಮೊದಲ ಪಟ್ಟ ಗಟ್ಟತಿದ್ದಿಲ್ಲ ನಿಮಗ

ಯುದ್ಧ ಸೂರಿ ಮಾಡತಿದ್ದ ಪಟ್ಟಿ ಗಟ್ಟಿ
ತಿದ್ದೇವೆಂದ್ರ ಸೂರ್ಯನ ಸುತಗ
ಕುರು ಪಾಂಡೋರ್ರೊಳು ಘೋರ ಲಢಾಯಿ॥೧॥

ಪಾಂಡವರ ಕೊಂದ ಜಯ ತರತೀರೆಂದು
ಧೈರ್ಯ ನಮಗೆ ಮನದೊಳಗ
ಭರವಸೆ ಭಾಳ ಇತ್ತ ಹಿಂಗ
ನಮ್ಮನೆಲ್ಲ ಕೊಂದ ಪಾಂಡವರೊಳಗ
ಇರೋದು ನಿಮ್ಮ ನ್ಯಾಯ ಹ್ಯಾಂಗ
ದುರ್ಯೋಧನನ ದುರ್ವಾಕ್ಯ
ಭೀಷ್ಮಾಚಾರಿ ಕೇಳಿದ ಕ್ಷಣದಾಗ
ಕೋಪಾದ ಪ್ರಳಯ ರುದ್ರನಾಂಗ
ಭುಜ ನೆಲಕ ಅಪ್ಪಳಿಸಿ ಜ್ವಾಲಿ
ಉಕ್ಕಿ ನೇತ್ರದೊಳಗೆ
ಕಾಲ ನೆಲಕ ಬಡದ ಹೊಡದ ವೀರ ನೋಟ
ಕಿತ್ತೀತ ಕವಚ ಉಬ್ಬಿ
ಕೇಳೋ ದುರ್ಯೋಧನನ ನಾಳೆ ಸಮರದಲ್ಲಿ
ಕಾಳ ಬಂದರ ಕೇಳತೇನೋ ತರಬಿ
ವ್ಯರ್ಥ ಸಾಯಬ್ಯಾಡೊ ಹಲಬಿ
ಪಂಚ ಪಾಂಡವರನ ಹಿಡಕೊಂಡ
ಹತ್ತು ಸಾವಿರ ಬಂದ ಉಬ್ಬಿ
ನೋಡೋ ಲಢಾಯಿ ಕಣ್ಣ ತುಂಬಿ
ಕೇಳೋ ದುರ್ಯೋಧನಾ ಭೀಷ್ಮ ಪ್ರತಿಜ್ಞಾ
ಪಾಂಡವರನು ಕೊಲ್ಲುದು ಖಾಸಾ
ಅಥವಾ ನಾ ಬೀಳುವೆನು ನಾಳಿನ ದಿವಸಾ
ಭೀಷ್ಮ ಪ್ರತಿಜ್ಞಾ ಕೇಳಿದಾನ
ದುರ್ಯೋಧನ ಬಹಳ ಹರುಷಾದಾ
ಮುಗುಳು ನಗೆ ನಕ್ಕು ತಿರುಗಿ ನಡದಾ
ಆದ ಸುದ್ದಿ ಪಾಂಡವರಿಗೆ ಹತ್ತೀತ
ಭೀಷ್ಮ ಪ್ರತಿಜ್ಞಾ ಆದದ್ದಾ

**॥ಚಾಲ॥**

ಇಂಥಾ ಪಂಥ ಕೇಳಿ ಪಂಚ ಪಾಂಡವರಾ
ಆಗಿ ಕೂತಾರ ಸ್ತಬ್ಧಾ ನಿಶ್ಯಬ್ಧಾ
ದುಃಖ ಮಾಡತಾರ ಭೂಮಿಗೆ ಬಿದ್ದಾ

ಭೀಷ್ಮ ಪ್ರತಿಜ್ಞದೊಳಗ ನಾಳೆ ದಿನಾ
ನಾವು ಹ್ಯಾಂಗ ಪಾರ ಆಗೋದಾ
ಐದು ಮಂದಿ ಕೂಡಿ ಸರಿ ರಾತ್ರ್ಯಾಗ
ಬಂದಾರ ಹೊರಬಿದ್ದಾ
ಹಿಡದಾರೋ ಶ್ರೀಕೃಷ್ಣನ ಪಾದಾ
ಪಂಥ ಮಾಡ್ಯಾನೋ ಮುತ್ಯಾ।
ಭೀಷ್ಮಾಚಾರಿ ನಾಳಿಗೆ ಕೊಲ್ಲುದಾ
ಹ್ಯಾಂಗ ಕಾಯತಿ ಕಾಯೋ ಮುಕುಂದಾ
ನಿನ್ನ ಭಕ್ತರ ಬಿರುದಾ ಬಿರುದಾ
ಧರ್ಮರಾಯ ಹರಿ ಕೊರಳಿಗೆ ಬಿದ್ದಾ
ಸೂತ್ರಧಾರಿ ಸರ್ವಾತ್ಮ ಮುಕುಂದಾ
ನಿನಗ ಯಾತರ ಅರದಾ ಅರದಾ
ಇಂಥಾ ಪಂಥ ಕೇಳಿ ಹರಿ ಆದ ದುಃಖಾ.

**||ಏರು||**

ವ್ಯಾಳ್ಯಾ ಬಂತ ಇಂತಾದ್ಯಾಕಾ
ಹರಿಹರ ಬ್ರಹ್ಮರು ಕಾಯಲರಿಯರಾ
ಭೀಷ್ಮ ಪ್ರತಿಜ್ಞೆಕ ಪ್ರತಿಜ್ಞೆಕ
ಯಾರು ನಿಂತಾರು ಸಮುಖಾ
ಕುರು ಪಾಂಡವರೊಳು ಘೋರಾ ಲಢಾಯಿ॥೧॥

ನಮ್ಮನೆಲ್ಲ ಯುದ್ಧದಲಿ ಕೊಲ್ಲಿಸಿ
ತಿರುಗಿ ಹೋಗಲ್ಹೆಂಗ ದ್ವಾರಕಕ
ನಕ್ಕೀತು ಮೂರು ಲೋಕಾ
ರಿಣಾ ಕಡದೀತು ನಮ್ಮ ನಿಮ್ಮದಾ
ಮರಣ ಬಂದೀತೋ ರಾಸಾ
ಮಾಡಿರಿ ಮುಂಚೆ ಉಳಕೊಳ್ಳು ಸಾಹಸಾ
ಐದು ಮಂದಿ ಕೂಡಿ ದುಃಖ ಮಾಡತಾರ
ಹರಿಯೇ ಹಿಂಗ ಬಂತೇನೋ ಮನಸಿಗೆ
ಅಗ್ನಿ ಜಿಗಿದು ಸಾಯೋದು ಛೊಲೋ
ಸಿಗಬಾರದು ಅವರ ಕೈಯಿಗಿ
ಒಂದು ಮಾತನಾಡಲಿಲ್ಲ ಐದು ಮಂದಿ
ಸುಮ್ಮನ ಬಂದಾರ ತಿರುಗಿ
ದುಃಖದಿಂದ ಧರ್ಮ ಭೀಮ ಅರ್ಜುನರಾ
ಕರದಾರ ದ್ರೌಪತಿಗಿ

ಸಾವ ಬಂತ ನಾಳಿಗಿ ಮುತ್ತೈದಿತನಾ
ಬೇಡಿಕೊಳ್ಳೇ ಮುಕುಂದನ ಹಂತೇಲಿ ಹೋಗಿ
ಪ್ರಾಣ ಹೋಗುದಕ ಬಂತು ಅಂದ
ಆ ಕ್ಷಣಕ ದ್ರೌಪದಿ ಧರಣಿಗಿ
ಮೂರ್ಛಿ ಬಂದು ಬಿದ್ದಾಳೋ ಧರಿಗಿ
ಮೇಘಶಾಮನ ಡೇರೇಕ
ಮೃಗಾಕ್ಷಿ ನಡೆದಾಳ ಲಗುಬಿಗಿ

**||ಚಾಲ||**

ತನ್ನ ಮನಸಿನೊಳಗ ಹರಿಧ್ಯಾನಾ
ಹಿಡಿದ ಅವನ ಪಾದಕ ಬಿದ್ದಾಳು
ಅನಾಥ ನಾಥ ಲಕ್ಷ್ಮೀಕಾಂತ
ದೀನ ಭಕ್ತರ ದಯಾಳು
ಭಕ್ತಿಪೂರ್ವಕ ದ್ರೌಪತಿ ಮಾತ ಕೇಳಿ
ಅಂತಾನ ತಂಗಿ ಏನಬೇಕ ಹೇಳು
ಹಸ್ತ ಇಟ್ಟ ಮ್ಯಾಗ ಏಳು

**||ಏರು||**

ನಿಂತಾಳ ದ್ರೌಪತಿ ಅಂತಾಳ ಶ್ರೀಪತಿ
ಮೊದಲ ಕೊಟ್ಟ ಕುಬಸಾ
ರಾಜಸೂಯ ಯಜ್ಞದೊಳಗ ಲೇಸಾ
ಕುರು ಪಾಂಡವರೊಳು ಘೋರ ಲಢಾಯಿ||೩||

ಮಾನ ಭಂಗ ಆಗುವಾಗ
ಶ್ರೀರಂಗ ಉಡಿಸಿದ ಶಾಲಿ
ನಿಂತ ಕೌರವರ ಸಭಾದಲಿ
ಬಾಕಿ ನಿಮ್ಮ ಕಡಿ ಬಳಿ ಇಡಿಸೋದು
ಉಳಿದೀತ ವನಮಾಲಿ
ನನ್ನ ಐವರ ಪ್ರಾಣಾ ಉಳಿಸೋ ಸಮರದಲಿ
ಕೃಪಾ ಇಟ್ಟ ನೀವ ತಂಗಿ ಮ್ಯಾಲೆ ।
ಖರೇ ಅವರ ಮನಿ ಆದೀತ
ಕೀರ್ತಿ ಭವನದಲಿ ಭವನದಲಿ
ಭಕ್ತಿ ಪೂರ್ವಕ ದ್ರೌಪತಿ ಮಾತ ಕೇಳಿ
ಎದ್ದಾನ ತೀವ್ರದಲಿ ತೀವ್ರದಲಿ
ತಂಗೀನ ಹಿಡದಾನ ಕೈಯಲಿ

ಯಾಕ ಚಿಂತಿ ನಾವು ನೀವು ಕೂಡಿ
ಹೋಗೋಣ ಭೀಷ್ಮನ ಹಂತೀಲಿ

**||ಚಾಲ||**

ಹೀಗಂದ ಹರಿಯು ಮುಂದಾದ
ದ್ರೌಪದಿಗೆ ಆಗಿ ಮೋತಾದಾರಾ
ಭಕ್ತರ ಆಧೀನ ಮುರಲೀಧರಾ
ಬಂದಾರ ಭೀಷ್ಮನ ಡೇರೇದ ಹೊರಗ
ಅಡಗ್ಯಾರ ಸರ್ವೇಶ್ವರಾ
ಒಳಗ ಹೋದಾಳು ಸುಂದರಾ
ಧ್ಯಾನಸ್ಥ ಭೀಷ್ಮ ಇದ್ದಾಗ
ದ್ರೌಪತಿ ಮಾಡ್ಯಾಳ ನಮಸ್ಕಾರಾ
ಸ್ತುತಿ ನಡಿಸ್ಯಾಳ ಅನಿವಾರಾ

**||ಏರು||**

ಇಟ್ಟ ಪಾದಾ ಗಟ್ಟಿ ಹಿಡದಾಳ ದೈನಾಸಾ
ನೋಡಿ ಭೀಷ್ಮ ಆದಾನ ಸಂತೋಷಾ
ಕುರು ಪಾಂಡವರೊಳು ಘೋರ ಲಢಾಯಿ||ಳ||

ಖೂನಾ ತಿಳಿಯದ ಆಕಿ ಸ್ತುತಿಗೆ
ಪ್ರೇಮಳ ಆಗಿ ಆಶೀರ್ವಾದ ಕೊಟ್ಟ
ಅಖಂಡ ನಿನಗಿರಲಿ ಕುಂಕುಮಬಟ್ಟ
ಅಷ್ಟಪುತ್ರ ಸೌಭಾಗ್ಯವತಿ
ಆಗಂತ ಹಸ್ತಾ ಇಟ್ಟಾ ಇಟ್ಟಾ
ಕೇಳಿ ಆಶೀರ್ವಾದ ಮನಸಿನಲಿ
ಭಾಳ ಆದಾಳು ಸಂತುಷ್ಟಾ
ಹೇಳತಾಳ ಕೇಳರಿ ಚಿತ್ತವಿಟ್ಟಾ
ಆಡಿದಂಗ ಖರೇ ಮಾಡಬೇಕರಿ
ನಾಳಿಗೆ ಘಟ್ಟಿ ಮುಟ್ಟಾ
ಪಂಚ ಪಾಂಡವರಲಿ ಕೃಪಾ ಇಡಿರಿ
ನೀವು ಮಾಡಬ್ಯಾಡಿರಿ ನಷ್ಟಾ
ವಚನದಲಿ ಆಗಬಾರದು ಭ್ರಷ್ಟಾ
ಏಕವಚನ ಅಂತ ಬಿರುದು ಸಾರತದ
ಭೀಷ್ಮಾಚಾರಿ ಶ್ರೇಷ್ಠಾ
ಫಾಶಿಯೊಳಗ ಬಿದ್ದ ಮೋಸ ಆದ

ಭೀಷ್ಮಗ ಹತ್ತೀತ ಮಾತಿನ ಪೆಟ್ಟಾ
ಮನಸಿನಲಿ ತಿಳದ ನೋಡ್ಯಾನ ಸ್ಪಷ್ಟಾ
ಕೃಷ್ಣನ ಹೊರತ ಈ ಕೆಲಸ ಆಗಿಲ್ಲ
ಅವ ಮಾಡಿದ ಕಪಟ.

**||ಚಾಲ||**

ಕೃಷ್ಣ ಬಂದ ಅಂತ ತಿಳದ
ಭೀಷ್ಮ ಸಿಂಹಾಸನ ಇಳದು ಬಂದ
ಚಂದ್ರಜ್ಯೋತಿ ಹಚ್ಚ್ಯಾನ ಜಲದಾ
ಭೀಷ್ಮ ಗೊತ್ತ ಹಿಡದಾನಂತ
ಕೃಷ್ಣ ಹೋಗಿ ಚೆಪ್ಪಾಡ್ಯಾಗ ಅಡಗಿದ
ಗಂಗಾತನಯ ಅಲ್ಲಿಗೆ ಹೋದಾ
ಏಳೋ ಕೃಷ್ಣಾ ಅಂತ ಕೈಯ ಹಿಡದಾ
ಚರಣದಲಿ ಬಿದ್ದಾ ಬಿದ್ದಾ
ಸ್ತುತಿ ಮಾಡಿದಾ ಮಾಡಿದಾ
ಪಾಂಡವರನ ಕಾಯಬೇಕಂತ
ದ್ರೌಪತಿಗೆ ಆದೀತ ತ್ರಾಸಾ
ಅದಕ ನಾ ಆಗತೇನಿ ಕೈವಾಸಾ
ಕುರು ಪಾಂಡವರೊಳು ಘೋರ ಲಢಾಯಿ||ಞ||

**||ಏರು||**

ಭಕ್ತವತ್ಸಲಾ ನಿನ್ನ ಕೃಪಾ
ಪಾಂಡವರಲ್ಲಿ ಇರು ತನಕಾ
ಅವರಿಗೆ ಯಾವ ಮಾತಿಂದ ಇಲ್ಲ ದುಃಖ
ದುಷ್ಟ ಗುಣಾ ದುರ್ಯೋಧನಗ
ಆಗೂದ ಅವರ ಬುದ್ಧಿ ತನಕಾ
ಹ್ಯಾಂಗ ಮನಾ ಹ್ಯಾಂಗ ಘನ
ಭಗವಾನ ನಿನ್ನ ಬಿಟ್ಟ ಪ್ರತ್ಯೇಕ
ಯಾವುದಿಲ್ಲ ಬ್ರಹ್ಮಾಂಡ ನಾಯಕ
ಅಣುರೇಣು ತೃಣಕಾಷ್ಟ ಮಾಯಾ
ಆಗಿ ಹೆಚ್ಚ ನಿನ್ನ ಬೆಳಕಾ
ನರ ನಾರಾಯಣ ಇಬ್ಬರಾ
ನೀವು ಭೂಭಾರ ಇಳಿಸುದಕಾ
ಧರಿಸೀರಿ ಅವತಾರಾ ಪ್ರಭುವನಕಾ

ತಿಳಿಯಲಾರದೇ ವಿರೋಧ ಮಾಡಿ
ದುರ್ಯೋಧನನಾದಾ ಕೆಡಕಾ
ನಾಳಿನ ಸಮರದಲ್ಲಿ ತಂದಾ
ಶಿಖಂಡಿ ನಿಲ್ಲಿಸೋ ಮುಂದಕಾ
ಬೆನ್ನ ಹಿಂದ ಅರ್ಜುನನಿರಲಿ ಕುಮಕಾ
ನಪುಂಸಕನ ಮ್ಯಾಲ ಬಾಣ ಹೊಡ್ಯುದಿಲ್ಲ
ಶಸ್ತ್ರ ಇಡತೇನಿ ನೆಲಕ

**||ಚಾಲ||**

ಇಷ್ಟ ವಚನ ತಕ್ಕೊಂಡ ಬಂದಾನ
ಹರಿ ದ್ರೌಪತಿನ್ನ ಕರಕೊಂಡ
ಆಗ ಆದ ಸುದ್ದಿ ಎಲ್ಲ ಬಿಡದ ಹೇಳತಾನ
ಹೋಯಿತ ಜೀವನ ಹೋಡಾ
ಯುದ್ಧ ಮಾಡಲಿ ಫಡಮಡಾ

**||ಏರು||**

ಅಣ್ಣಾ ರಾವಜಿ ಹಿಂಗ ಅಂದಾ
ಮುಂದಿನ ಸಂದಾ ಭಾಳ ಸರಸಾ।
ಬಾಳ ಗೋಪಾಳಾ ಕವಿ ಕಳಸಾ
ಬಾಗೋಡ್ಯಾಗಿರತೇನಿ ಕರಿ ಕಳಸಾ
ಕುರು ಪಾಂಡವರೊಳು ಘೋರ ಲಢಾಯಿ||೮||

***ರಚನೆ :*** ಬಾಳಗೋಪಾಳ
***ಕೃತಿ :*** ಜಾನಪದ ಝೇಂಕಾರ

## ೧೩. ಸತ್ಯ ಹರಿಶ್ಚಂದ್ರ

ಪೂರ್ವ ಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ
ಎಲ್ಲಿ ಹೋದರೂ ಸಾಡೇಸಾತಿ ಹಿಂಬಾಲಾ
ಭೋಗ ತೀರದ ಹೊರತು ಅದು ತಪ್ಪಿಲ್ಲಾ
ಕೇಳೋ ಧರ್ಮಜಾ ನಿನಕಿಂತ ಹರಿ-
ಶ್ಚಂದ್ರನ ವನವಾಸಕಳತಿಲ್ಲಾ ಹೇಳುವೆನೆಲ್ಲಾ||ಪಲ್ಲ||

ಸೂರ್ಯ ವಂಶದಲ್ಲಿ ಶೌರ್ಯ ಭಾಳಾ
ಔದಾರ್ಯ ಧೀರ ಅವ ಗಂಭೀರಾ
ಮೂರ ಲೋಕ ಹೊಡೆಯತ್ತಿತ್ತ ಡಂಗುರಾ
ಧರ್ಮಶೀಲ ಪರಾಕ್ರಮಿ ಖರೇ ಧೀರಾ
ಬಂತ ಕಾಲ ಮುಂದ ಇಂದ್ರಲೋಕದಲಿ
ಕೂಡ್ಯಾರ ಒಂದಿನಾ ದೇವತರಾ ಮತ್ತು ಋಷಿ ಜನರಾ
ಅಮರನಾಥ ಸುರಪತಿ ಗುರು ಬ್ರಹಸ್ಪತಿ
ವಸಿಷ್ಠ ವಿಶ್ವಾಮಿತ್ರ ಉಳಿದ ಯೋಗೀಶ್ವರರಾ
ರಂಭಾ ಊರ್ವಶಿ ನಾಚರಂಗ ಮನೋಹರಾ
ಘಳಿಗಟ್ಟಿ ನಿಂತಾರ ಎಲ್ಲ  ಗಾಯಕರಾ
ಬಂದ ನಾರದ ಅವಚೇತಾ ಅಲ್ಲಿ ಎದ್ದ
ಕೈಯ ಮುಗದ ಋಷಿ ಮುನೀಶ್ವರರಾ ಯೋಗಿಶ್ವರರಾ
ನಾರದ ಅಂತಾನ ಮೃತ್ಯು ಲೋಕದಲಿ
ಸಂಪತ್ತಿಗೆ ಶ್ರೇಷ್ಠ ಅಯೋಧ್ಯಾ ನಗರಾ
ಅದಕ್ಕ ಸರಿಯಲ್ಲ ನಿನ್ನ ಅಮರಪುರಾ
ಬ್ರಹ್ಮ ಲೋಕದಾಗಪ್ಪಾ ಆದರಕ್ಕೋಸ್ಕರಾ
ಅಲ್ಲ ತಗಿ ವೈಕುಂಠ ಕೈಲಾಸಾ
ತ್ರಿ ಜಗದೊಳು ಅಂತಾ ನಗರಾ ಇಲ್ಲಾ ನಿರ್ಧಾರಾ
ಸತ್ವ ಶೀಲ ಹರಿಶ್ಚಂದ್ರ ರಾಜಾ ತಾರಾ
ಮತಿ ಸತಿ ರೋಹಿದಾಸ ಕುಮಾರಾ
ಸತ್ಯ ವಚನಿ ಸತ್ಯ ಶ್ರೇಷ್ಠ ಮಹಾವೀರಾ
ಕೊಟ್ಟ ವಚನ ತಪ್ಪುದಿಲ್ಲ ಭಲೇ ಧೀರಾ
ಕೇಳಿ ವಸಿಷ್ಠ ತಲಿದೂಗಿ ಖರೇ ಅಂದಾ
ಅವರಂಗ ಇಲ್ಲ ಮತ್ತ ಯಾರ್‍ಯಾರಾ ಇದ ಕರಾರಾ
ಆಡಿದ ಮಾತಿಗೆ ನುಡದಾನ ವಿಶ್ವಾಮಿತ್ರಾ
ಹರಿಶ್ಚಂದ್ರ ಯಾವ ದೊಡ್ಡ ರಣಶೂರಾ
ಅವನ ಸತ್ವ ಕೆಡಿಸೋದು ಯಾತರ ಘೋರಾ
ಹತ್ತುದಿಲ್ಲ ಘಳಿಗಿ ಕ್ಷಣ ಭಂಗುರಾ
ಪುನಃ ಸೃಷ್ಟಿ ಮಾಡಿದ ವಿಶ್ವಮಿತ್ರ
ನನ್ನಲ್ಲಿ ಅದಾವ ವರಾ ಎಂಥವರಾ ಬಲಿ ಹರಿಹರರಾ
ವಸಿಷ್ಠ ಅಂತಾನ ಹಂಗಾಗದು ಎಂದೆಂದಿಗೂ
ಭಾನುವಂಶಿ ಇದ್ದಾನ ಶೂರ ಕುವರಾ
ಉದಯ ಆದಾನ ಪಶ್ಚಿಮಕ ಭಾಸ್ಕರಾ
ಮೇರು ಪರ್ವತ ಇರವಿ ನುಂಗಿತ ಪೂರಾ
ಆಗದ ಮಾತ ಆದಾವ ಖರೆ ಹರಿಶ್ಚಂದ್ರಾ
ಕೊಟ್ಟ ವಚನಾ ಫೇರಾ ಆಗದು ದೂರಾ

||ಚಾಲ||

ವಿಶ್ವಾಮಿತ್ರಗ ಬಂದಿತೋ ಕೋಪಾ ಭಾಳ ಸಂತಾಪ
ಬೆಂಕಿ ಮ್ಯಾಗ ತುಪ್ಪ ಸುರವಿದಾಂಗ ಆಗಿ
ಅಂತಾನ ವಸಿಷ್ಠ ಋಷಿಗಿ ಸಿಟ್ಟಾಗಿ
ಅರವತ್ತ ಸಾವಿರ ವರುಷ ತಪ ನಂದ
ಮೂರು ಲೋಕ ಗೆದ್ದ ಸೃಷ್ಟಿ ಕರ್ತನೆಂದ
ನಾನು ಅದರಿಂದ ಪುನಃ ಸೃಷ್ಟಿಗಿ
ಮಾಡಿಬಿಟ್ಟ ತಾ ಲಗುಬಗಿ ಲಗುಬಗಿ
ಹರಿಶ್ಚಂದ್ರನ ಸತ್ವ ಕಳದೇನ ಪುಣ್ಯ ಅಳದೇನ
ಅವನ ಎಳದೇನ ನಾನ ಇಂದಿಗಿ
ಅಂದ್ರ ಋಷಿ ಅಂತ ಕರಿ ನನಗಾಗಿ

||ಚಾಲ||

ಹಿಂಗ ವಾದ ಹಾಕ್ಯಾರ ಇಬ್ಬರು
ಇಂದ್ರ ಸಭಾದಲ್ಲಿ ಗಡಬಡಿಸ್ಯಾರು
ಆಗ ಕಚೇರಿ ಮುರದ ಎದ್ದಾರು
ತಮ್ಮ ತಮ್ಮ ಸ್ಥಾನಕ ಹೋದಾರು
ವಿಶ್ವಾಮಿತ್ರ ವಸಿಷ್ಠ ಇಳದಾರೋ
ಮೃತ್ಯು ಲೋಕದಲ್ಲೆ ಬಂದಾರೋ

||ಏರು||

ಬಂದ ವಸಿಷ್ಠ ಹರಿಶ್ಚಂದ್ರಗ ಅಂತಾನ
ರಾಜಾ ಬಂತೋ ನಿನ್ನ ಜೀವದ ಮ್ಯಾಲಾ
ನಿನ್ನ ವಂಶದೊಳಗ ಸತ್ವ ಯಾರೂ ಬಿಟ್ಟಿಲ್ಲಾ
ಜ್ವಾಕಿ ಮಾಡಿಕೊಳ್ಳೋ ಪ್ರಾಣ ಹೋದರು ಚಿಂತಿಲ್ಲಾ
ಪೂರ್ವ ಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ.....||೧ನೆಯ ಚೌಕ||

ಈ ಕಡೆಗೆ ವಿಶ್ವಾಮಿತ್ರ ಆಶ್ರಮದಲಿ ಬಂದ
ಮಾಯಾ ಮಾಡ್ಯಾನ ಒಳ್ಳೆ ಅದ್ಭುತಾ
ಯಜ್ಞ ಹೋಮ ನಡಸಿಬೇಕಂತಾ
ತನ್ನ ದೇಹ ಕಡಿದು ಅಗ್ನಿಯಲಿ ಒಗೆಯುತಾ
ಪ್ರಸನ್ನವಾಗಿ ನಿಂತಾಳ ಭವಾನಿ ಆಗಾ
ಏನ ಬೇಕ ಬೇಡ ಕೊಡುವೆನು ಪೂರ್ತಾ

ಹೋಮ ಬಿಡು ಅಂತಾ ಕಡದ ದೇಹ ದಿವ್ಯ ಆಗಿ
ಹೋಮದೊಳಗಿಂದ ಹುಲಿಗಳೆದ್ದಾವ ವಿಪರೀತಾ
ನಾಡ ತುಂಬ ಓಡಾಡತಾವ ಗುಡುಗುಡಿಸುತಾ
ಹರಿಶ್ಚಂದ್ರನ ನಗರ ಸುತ್ತ ತಿರುಗುತ್ತಾ
ನೋಡಿ ಪ್ರಜೆಗಳೆಲ್ಲಾ ರಾಜಾಗ ಹೇಳತಾರ
ಸ್ವಾಮಿ ಬಂದಿತೋ ಪ್ರಾಣದ ಸುತ್ತಾ
ಹುಲಿಗಳ ಆ ಕಾಂತಾ ದೃಷ್ಟಾಂತಾ
ಕೇಳಿ ರಾಜಾ ಬೇಟಿ ಆಡೋದಕ ನಡದಾ
ಚತುರಂಗ ಸೈನ್ಯ ಸಹಿತಾ ಆಗಿಂದಾಗಾ
ಹೊಂಟ ಅರಣ್ಯದಲ್ಲಿ ಹುಲಿ ಹೊಡಕೊಂತಾ
ಸನೆ ಆದೀತ ಅವಗ ಕಾಡು ಹೊತ್ತಾ
ಹೊತ್ತ ಮುಳಗಿ ಅಲ್ಲಿ ವಸ್ತಿ ಮಾಡಿದಾನ
ರಾತ್ರಿ ಸ್ವಪ್ನ ಬಿದ್ದೀತ ಪೂರ್ತಾ
ಆದೀತ ಅಘಟೀತಾ ಅಘಟೀತಾ
ನವಖಂಡ ಪೃಥ್ವಿದಾನ ನಿಂತ
ನೀಡ್ಯಾನ ಬ್ರಾಹ್ಮಣಗ ನಗನಗತಾ
ಎಚ್ಚರಾಗಿ ಘಾಬರ್‍ಯಾದ ಅವಚೀತಾ
ವಿಶ್ವಾಮಿತ್ರ ಬ್ರಾಹ್ಮಣನಾಗಿ ಬಂದ ಹರೇಹೊತ್ತಾ
ಕೊಡೋ ರಾಜಾ ಸುವರ್ಣದಾನ ನಿನ್ನ ತೂಕಾ
ತೂಕಾ ಈಗ ಪೂರ್ತಾ ಅಂತ ಅನ್ನು ತಾ
ರಾಜಾ ಹೇಳತಾನ ನೀವ ನಡಿರಿ ಸ್ವಾಮಿ
ನಮ್ಮೂರ ಒಳಗ ಕೊಡುವೆನು ಖಚಿತಾ
ತಾರಾಮತಿ ಹೆಣತಿ ಎದ್ದಾರ ಸಂಗಾತಾ
ಆದರೂ ಹೇಳ್ಯಾಳ ಕೊಡತೇವ ಅಂತಾ
ನಡೆದು ವಿಶ್ವಾಮಿತ್ರ ಕಾಡೊದಕ ಹತ್ಯಾನ
ತಪ್ಪದು ಹಿಂದಿನ ಸುಕೃತಾ
ಬ್ರಹ್ಮ ಲಿಖಿತಾ
ತಾರಾಮತಿ ಸಿಂಹಾಸನದ ಮ್ಯಾಲ ಕೂಡ್ರುದು ನೋಡಿ
ವಿಶ್ವಾಮಿತ್ರ ಆದ ಬಹಳ ಕ್ರೋಧಿಪ್ತಾ
ಮನಿಮಾರಾ ರಾಜ್ಯ ದ್ರವ್ಯ ನಮ್ಮದನ್ನು ಭ್ರಾಂತಾ
ಬಿಟ್ಟುಕೊಡ ತಾರಾಮತಿ ನೀ ಮರತಾ
ಹೋಗಿ ಹೇಳೋಗ ನವಖಂಡ ಪೃಥ್ವಿಯಲಿ
ನಿಂದೇನ ಇಲ್ಲ ಬ್ರಾಹ್ಮಣನದಂತಾ ಇದ ಖಚಿತಾ
ತಾರಾಮತಿ ಆಗಿ ಘಾಬರಿ ಬಂದಾಳ ಹಾತ್ವಾತಿ ಅಂತಾಳ
ಏ ದೊರಿ ಏನ ಹೇಳು ಹಿಂಗ ಬಂದೀತ ಋಷಿಯ ಬಾಯಲಿ
ಹರಿಶ್ಚಂದ್ರ ಆವಾಗ ಓಡಿ ಬಂದ ಹಿಡಿದ ಮುನಿಯ ಪಾದಾ

ವಿಶ್ವಾಮಿತ್ರ ಅಂದ ಅಂವಗ ಕೋಪದಲಿ ಕೋಪದಲಿ
ಕೊಡೋ ದಾನಾ ಇನ್ನ ತೀವ್ರದಲಿ ಇನ್ನ ತೀವ್ರದಲಿ
ಹರಿಶ್ಚಂದ್ರ ಪ್ರಧಾನಿನ ಕರದ ಅವಗ ಹೇಳಿದ ಬಂಗಾರ
ಒಳಗಿಂದ ತೂಕ ಕ್ಷಣದಲಿ ತೂಕ ಕ್ಷಣದಲಿ
ಹಾಕಿ ಕಳಿಸ ಋಷಿಯ ಪದರಲಿ ಪದರಲಿ

**||ಚಾಲ||**

ವಿಶ್ವಾಮಿತ್ರ ನೋಡಿದ ನಕ್ಕಾನು
ಯಾರ ದ್ರವ್ಯ ಕೊಡತಿ ಅಂದಾನು
ಸ್ವಪ್ನದೊಳಗ ಭೂಮಿದಾನ ನೀನು
ರಾಜಾ ನೀ ನನಗ ಕೊಡಲಿಲ್ಲ ಏನು
ಇಲ್ಲಂತ ಹೇಳ ಹೋಗತೇನು
ಹೌದ ಅಂದ ಮ್ಯಾಲ ಕೊಡು ಹೇಮವನು

**||...||**

ನವಖಂಡ ಪೃಥ್ವಿಯಲ್ಲಾ ಕೊಟ್ಟಿದಿ ನನಗ
ಇದರ ಒಳಗ ನಿಂದ ಏನೇನ ಇಲ್ಲಾ
ಇಲ್ಲಿ ಇರುವ ದ್ರವ್ಯ ನಿನಗ ಹಿಡಿಗೊಡುವದಿಲ್ಲಾ
ಕೊಡು ತೂಕ ಬಂಗಾರಾ ನೀ ಇನ್ನ ಮ್ಯಾಗಾ
ಪೂರ್ವ ಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ||೨ನೆಯ ಚೌಕ||
ವಿಶ್ವಾಮಿತ್ರ ಹರಿಶ್ಚಂದ್ರ ರಾಜಾ ತಾರಾಮತಿ ಸತಿ
ರೋಹಿದಾಸ ಅವರ ಕುವರನನ್ನು ಕರೆದಾ
ಮುನಿ ಒಳಗಿಂದ ಅಂಗಳದಾಗ ನಿಂದ್ರಿಸಿದಾ
ವಸ್ತ್ರಾಲಂಕಾರ ಅರವಿ ತಗೊಂಡಾನ ಕಸದಾ
ಕೊಡೋ ರಾಜಾ ನಿನ್ನ ತೂಕ ಬಂಗಾರಾ
ಹಿಡಿಗೊಡುವದಿಲ್ಲ ನಿನ್ನ ರಾಜದೊಳಗಿಂದಾ
ಲಗು ಕೊಡು ಜಲದಾ ಮತ್ತು ಜಲದಾ
ರಾಜ್ಯ ದಾನ ಕೊಟ್ಟಿಲ್ಲ ಅಂದ್ರ ನೀನಾ
ತಗೋತೀನ ನಿನ್ನ ಸತ್ವ ಕಳದಾ
ಹರಿಶ್ಚಂದ್ರ ಹಿಡದ ಆತನ ಪಾದಾ
ಅವಸರ ಮಾಡಬ್ಯಾಡರಿ ಅಂತಾನ ಕೈ ಮುಗಿದಾ
ದಾನ ಕೊಟ್ಟಿದ್ದ ಖರೆ ಅಂವ ದಕ್ಷಿಣಿದ್ದಾ
ಪುರಸತ್ತ ಕೊಡಬೇಕ ಇಂದಿಂದ ಹಿಡದ ವರ್ಷದ್ದಾ

ಮುನಿ ರೋಹಿದಾಸನ ಬಡಬಡದ ಕೇಳತಾನ
ಖರೇ ಸುಳ್ಳ ಹೇಳ ದಾನ ಕೊಟ್ಟಿದ್ದಾ
ಇಲ್ಲಂತ ಹೇಳಿ ಕಳಿಸ್ಯಾನ ಕೂಸಿನುಬೈದಾ
ರೋಹಿದಾಸ ತಿರುಗಿ ಆತಗ ಅಂದಾ
ಸುಳ್ಳ ಮಾತ ಭೂಮಂಡಲ ತಿರುಗಿ ಬಿದ್ದರ
ಸೂರ್ಯ ವಂಶಕ ಕುಂದಾ ಆಗುದು ಎಂದಾ
ಹೊತ್ತ ಅರಿವಿ ಎಲ್ಲಾ ಚೆಲ್ಲಿ ಬರಿ ಮೈಲೆ
ಮೂವರು ನಡದಾರು ಹೊರಬಿದ್ದಾ
ಪುರಜನಾ ಬೆನ್ನಹತ್ತಿದಾರು ದುಃಖದಿಂದಾ
ಹ್ಯಾಂಗ ಹೊಂಟ ಅರಸಾ ನೀ ನಮ್ಮನೊಗದಾ
ಜ್ವಾಕಿ ಮಾಡು ತಾಯಿ ತಂದಿ ಆಗಲ್ಯಾರಂತಾ
ಪುರ ಉಳ್ಳ್ಯಾಡತಾರ ಧರಣಿಗೆ ಬಿದ್ದಾ ಖಬರಿಲ್ಲದಾ
ಹಕ್ಕಿ ಪಕ್ಷಿ ಪಶು ಮೊದಲು ಮಾಡಿಕೊಂಡು
ಕಣ್ಣೀರು ಚೆಲ್ಲುತಾ ಬಾಯಿ ತೆರದಾ
ಹರಿಶ್ಚಂದ್ರ ಅರಣ್ಯದ ಹಾದಿ ಹಿಡದಾ
ತಾರಾಮತಿ ರೋಹಿದಾಸ ಬೆನ್ನ ಹಿಂದಾ
ನಡಸಿದ ವಿಶ್ವಾಮಿತ್ರ ಕೆಡಸುದಕಾ
ಅವನ ಸತ್ವ ಬಂದಾನ ಬ್ರಾಹ್ಮಣ ವೇಷದಿಂದಾ
ಅಲ್ಲೆ ತರುಬಿದಾ ಕಾಲಾಗಿರೋ ಪಾದರಕ್ಷೆ
ನಿಂತ ಭಿಕ್ಷೆ ಬೇಡುತಾ ತಕ್ಕೊಂಡಾಗ ಮೂವರದಾ
ಒಳ್ಳೆ ಬ್ಯಾಸಿಗಿ ಬಿಸಿಲು ಚೈತ್ರ ಮಾಸದ್ದಾ
ಮಾಯಾದಿಂದ ಹಾದ್ಯಾಗ ಮಳಲು ಹಾಕಿಸಿದಾ
ಸೂರ್ಯನ ಧ್ಯಾನ ಮಾಡಿ ಹನ್ನೆರಡರ ಕಳೆದಿಂದಾ
ಮೂವರ ಮ್ಯಾಗ ಕಣ್ಣ ತೆರಿ ಅಂದಾ ಕಾಪಟ್ಯದಿಂದಾ

**||ಚಾಲ||**

ನಿಂತ ವರುಣಗ್ಹೇಳ್ಯಾನ ಆ ಕ್ಷಣಕ
ಇವರಿಗೆ ಕುಡಿಲಾಕ ನೀರ ಒಂದ ಗುಟಕ
ಇರಬಾರದ್ಹಾದ್ಯಾಗ ಇರಬಾರದ್ಹಾದ್ಯಾಗ
ಎಲ್ಲಾ ಅಟ್ಟಿಸಿ ಬಗಿಚಿ ಭೂಮ್ಯಾಗ
ವರುಣ ಭೂಮಿ ಒಳಗ ನೀರ ಜಗ್ಗಿವಗದ
ಸೂರ್ಯ ತನ್ನ ಕಣ್ಣ ತೆರದ ಆಗಿಂದಾಗ
ಭೂಮಿ ಬಿಲ್ಲಾ ಆದೀತ ಕಾಯ್ದ ಕೆಂಡದ್ಹಂಗ
ಸಣ್ಣ ಮಳಲು ಹಾಕ್ಯಾನ ಅದರಾಗ
ಇಂಥಾ ಬಿಸಿಲು ಬಿದ್ದಾಗ ಭೂಮಿಗಿ

ಕಲ್ಲ ಹೋದಾವ್ರಿ ಕರಗಿ ಕರಗಿ
ಬ್ರಹ್ಮಾಂಡದ ಗುಳಿಗಿ ಆದೀತ ಆವಾಗ
ಶೇಷ ತೆಲಿ ಝಾಡಿಸಿದ ಕೆಳಗ ಕೆಳಗ

**||ಚಾಲ||**

ಭೂಮಿ ನೆಗವಿ ಹಿಡದ ಕೂರ್ಮನು
ತನ್ನ ಬಾಲ ಸರಿಸ್ಯಾಡತಾನು
ಹಿಂತದರಾಗ ಹರಿಶ್ಚಂದ್ರನು
ಮಗಾ-ಹೆಣತಿ ಸಹಿತ ನಡದಾನು
ರೋಹಿದಾಸ ಬೆನ್ನ ಹತ್ಯಾನು
ಕಾಲ ಸುಟ್ಟ ಕಾದೀತ ದೇಹವನು

**||ಏರು||**

ಬಾಯಿ ಒಣಗಿ ನೀರಡಿಸಿ ಮೂವರಿಗೆ
ನಿಂತೇನಂದ್ರ ನೆರಳಿಲ್ಲಾ ಇಲ್ಲಾ
ಚೂರ ಅರವಿ ಇಲ್ಲಾ ಅವರ ಮಯ್ಯಾಗಾ
ಕಳವಳಿಸಿ ತಾಳವಲ್ಲದು ಬಿಸಿಲಾ
ಪೂರ್ವಕರ್ಮ ಹರಿಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ||೩ನೆಯ ಚಾಲ||

ತಲ್ಲಣಿಸುವ ಉರಿ ಕಿಚ್ಚಿನಲಿ ನಡದಾರ
ಕಾಲ ಸುಟ್ಟ ಹಾಕತದ ಚರ್ಮವನು
ತಾರಾಮತಿ ಮಾಡತಾಳ ದುಃಖವನು
ಐದ ವರುಷ ಕೂಸ ರೋಹಿದಾಸ ಮಗನು
ಬಾಯಿ ಒಣಗಿ ಬಾಡಿ ಕಳೆಗುಂದಿದನು
ಹಾಕತದ ಪ್ರಾಣವನು ವ್ಯಾಕುಳನು
ಜಾಗಾ ಜಾಗಾ ನೀರಿನ ಅರವಟಿಗೆ ಹಾಕಿಸಿದನು
ವಿಶ್ವಾಮಿತ್ರನು ತಾರಾಮತಿಗೆ ಅಂತಾನು
ನೀರ ಕುಡಿತಿ ಏನ ನೀನು
ಹರಿಶ್ಚಂದ್ರ ಕುಡದ ಮುಂದ ಹೋದನು
ತಾರಾಮತಿ ಅಂತಾಳ ಆಗದೆಂದಿಗೂ
ಅರವಟಿಗೆಯೊಳಗಿನ ಜಲವ ನೋಡುವದಿಲ್ಲವನು
ಅಂತ ನಡದಾಳ ಹೇಮಕಾಂತಿ ಮುಂದಕ
ಬಾಡಿದ ವದನವನು ಬಾಡಿದ ವದನವನು
ಹಿಂದ ದೂರ ಉಳಿದ ರೋಹಿದಾಸ ಮಗನು

ವಿಶ್ವಾಮಿತ್ರ ಬಗಲಾಗ ಅವನಪ್ಪಿದನು
ನಡಿಯೋ ಕಂದ ಅನ್ನ ಉಂಡ ನೀರ ಕುಡದು
ಮನೆಯಲಿ ಇರನಡಿ ಸ್ವಸ್ಥವನು ನಿನಗ ಚಿಂತೇನು
ರೋಹಿದಾಸ ಅಂತಾನ ವಿಶ್ವಾಮಿತ್ರನ
ಸಾಲ ಕೊಡಬೇಕ ತೂಕ ಬಂಗಾರವನು
ಅನ್ನ ಛತ್ರದೊಳಗಿನ ಅನ್ನವನು ಮುಟ್ಟುದುಲ್ಲ
ಮಾಡಬ್ಯಾಡ್ರಿ ನನಗ ನೀವ ಜುಲಮಿಯನು
ಮಹಾಪ್ರಳಯವಾಗಿ ಪೃಥ್ವಿ ಮುಳಗಿದರು
ಸೂರ್ಯವಂಶಕ ಕುಂದವನು ಹಚ್ಚಲಾರೆನು
ಇಷ್ಟ ಮಾತ ಕೇಳಿ ವಿಶ್ವಾಮಿತ್ರ ಕೋಪದಿಂದ
ಬಗಲಾಗಿಂದ ಒಗದಾನು ರೋಹಿದಾಸನನು
ತಾಯಿ ಬೆನ್ನ ಹತ್ಯಾನು ಹತ್ಯಾನು
ವಿಶ್ವಾಮಿತ್ರ ಕಪಟ ಅಲ್ಲಿ ಮಾಡಿದನು
ಮೂವರ ಸುತ್ತಗಟ್ಟಿ ಬೆಂಕಿ ಹಚ್ಚಿದನು
ಸುಟ್ಟ ಹೋಗಲಿ ಇವರೆಂದಾನು ಅಂದಾನು
ಅಗ್ನಿ ಕ್ರೋಧವನು ಅಗ್ನಿ ಪ್ರಳಯವನು
ಮೀನ ಮರಿಯು ಬಿಸಿಲೊಳಗ ಮರಗಿದ್ದಂಗ
ಮರುಗತಾರ ಇನ್ನೂ ಬರೀಲೇನು ಬರೀಲೇನು
ಒಡಲೊಳಗ ಸುಡತದೆ ಕಿಚ್ಚವನು
ಹೊಗಿ ಮಂಜಿನೊಳಗ ಕಾಣಿಸ ಒಲ್ಲದು ದಾರಿಯನು
ಹನ್ನೆರಡರ ಕಳೆಯಿಂದ ಬಡಿಯುವ ಬಿಸಿಲು
ಅದರೊಳಗ ಸುತ್ತಗಟ್ಟಿ ಬೆಂಕಿಯನು
ದುಃಖ ಹೇಳಲಿ ಏನು ಮತ್ತೇನು

**||ಚಾಲ||**

ವಿಶ್ವಾಮಿತ್ರ ತಾರಾಮತಿಗಿ ಅಂದ
ರೋಹಿದಾಸ ಮಗಾ ಸತ್ತ ಇಂದ
ಹರಿಶ್ಚಂದ್ರ ಮುಂದ ಬೆಂಕಿ ಒಳಗ ಹೋಗಿ
ಸುಟ್ಟ ಸುತ್ತ ನೋಡ ಪ್ರೇತಾಗಿ
ಇಷ್ಟ ಮಾತ ಕೇಳಿ ಕಡಿದ್ಹಂಗ ಎಳಿಬಾಳಿ
ತಾರಾಮತಿ ಬಿದ್ದಾಳೋ ಧರಣಿಗಿ
ನೆಲಾ ಬಗಟಿ ಎಸದಳೋ ಬಾಯಿಗಿ
ವಿಶ್ವಾಮಿತ್ರನ ಸಾಲ ಉಳದೀತ ಹ್ಯಾಂಗ್ಹೋದಿ
ಆ ಕಾಂತಾ ಕಠಿಣ ಬಂತ ಹೊತ್ತ ಇಂದೀಗಿ
ಎಂದ ನೋಡೇನ ನನ್ನ ಕೂಸಿಗಿ

**||ಏರ ಚಾಲ||**

ತಾರಾಮತಿ ಬಾಯಿ ತೆರದಾಳು
ಖಬರಿಲ್ಲದಾ ಮುಂದಕ ನಡದಾಳು
ಹರಿಶ್ಚಂದ್ರ ಹೋಗೋದು ಕಂಡಾಳು
ಓಡಿ ಹೋಗಿ ಪಾದಕ ಎರಗ್ಯಾಳು
ಹಿಂತಿರುಗಿ ಮಗನ ನೋಡ್ಯಾಳು
ಬಿಗಿದಪ್ಪಿ ಮುದ್ದ ಕೊಟ್ಟಾಳು

**||ಏರು||**

ನವಖಂಡ ಪೃಥ್ವಿ ಎಲ್ಲಾ ದಾಟಿ ದಶ-
ಖಂಡ ಕಾಶಿ ಹೊಕ್ಕರೆಲ್ಲಾ
ಇದರೊಳಗೆ ವಿಶ್ವಾಮಿತ್ರಂದ ಏನಿಲ್ಲಾ
ಅಂತ ತಿಳಿದ ಆಗಿದರ ಖುಷಿಯಾಲಾ
ಪೂರ್ವ ಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ||ಳನೆಯ ||

ಕಾಶಿಯೊಳಗ ಬಂದಾಕ್ಷಣಕ ವಿಶ್ವಾಮಿತ್ರ
ನಿಂತಾನ ಅವರ ಬೆನ್ನ ಹಿಂದಾ
ವಾಯದೆ ಸನೆ ಬಂತೋ ರಾಜಾ ಇಂದಾ
ನಮ್ಮ ನಿಮ್ಮದಾ ಮಾತಿಂದಾ
ಕೊಡು ತೂಕ ಬಂಗಾರಾ ನಾಳಿಗಿ ಜಲದಾ
ರಾಜಾ ಹೇಳತಾನ ಮೂವರನ ಪ್ಯಾಟಿ ಒಳಗಾ
ಮಾರಿಕೊಂಡ ಮುಟ್ಟಿಸಿಕೊಳ್ಳರಿ ದೇಣೆದ್ದಾ
ರಿಣದೊಳಗಿಂದ ನಿಮ್ಮ ರಿಣದೊಳಗಿಂದಾ
ಯಾಕ ಆಗ ಒಲ್ಲದು ಎಂದಾ ಹಿಗ್ಗಿನಿಂದಾ
ವಿಶ್ವಾಮಿತ್ರ ಮೂವರನ ತಗೊಂಡ ಓಣಿಲಿ ನಡದಾ
ಯಾರ ಬೇಕಾದರ ತಗೋಬೇಕೆಂದಾ ಕೂಗಿದಾ
ಪುರಜನ ಕೂಡಿದಾರ ಏನೆಂಬುವದಾ
ಕರುಣಾ ಇಲ್ಲದ ಇವರ ಧಾರಣಿ ಹೇಳತಾನ
ತೂಕಾ ತೂಕಾ ಇವರ ಬಂಗಾರ ಕೊಡುವುದಾ
ಇವರನ ಒಯ್ಯುವುದಾ ದುಡಿಸುವುದಾ
ತಾರಾಮತಿ ರೂಪ ನೋಡಿ ಪಾತ್ರದವರಾ
ಬೇಡತಾರ ಬಂದ ಬಂದಾ ಆಗಿಂದಾಗಾ
ಕೊಡರಿ ಇಕಿನ್ನ ನಮಗ ಒಯ್ಯತೇವ ಇಂದಾ

ತಾರಾಮತಿ ಅಂತಾಳ ಕೈಯ ಮುಗದಾ
ಪಾತ್ರದವರಿಗೆ ಕೊಡಬ್ಯಾಡೋ ಸ್ವಾಮಿ
ಪತಿವ್ರತಾ ಧರ್ಮಕ ಬರುವುದು ಕುಂದಾ
ನಡಿರೆಂದ ನಡಸಿದಾನ ಮುಂದ ಮುಂದಾ
ಕೊಂಡ ತಗೊಂಡ ಕೌಂಡಣ್ಯ ಋಷಿ
ತಾರಾಮತಿ ರೋಹಿದಾಸನ ಅಂದಾ
ಹಿಂದ ಹರಿಶ್ಚಂದ್ರ ರಾಜಾ ಒಬ್ಬ ಉಳದಾ
ವಿಶ್ವಾಮಿತ್ರ ಕರ್ ಕೊಂಡ ಓಣಿಲೆ ನಡದಾ
ಹೋಗಿ ಹೊಲಗೇರ್ಯಾಗ ಡೊಂಬರನ ಕರದಾನ
ಕೊಂಡ ತಗೋಳೋ ಇವನೆಂದಾ ಅವಗ ಹೇಳಿದಾ
ಡೊಂಬ ಅಂತಾನ ನೀವು ಕ್ಷತ್ರಿಯರು
ನಾವ ಅಂತ್ಯಜರು ಹ್ಯಾಂಗ ತಗೋಳೂದಾ
ಋಷಿ ಅಂತಾನ ಕಾರಣ ನಮಗ ಬಂಗಾರದಾ
ಹರಿಶ್ಚಂದ್ರ ಯಾಕ ಆಗ ಒಲ್ಲದು ಅಂದಾ
ಆಗುವ ಭವಿಷ್ಯವೆಲ್ಲಾ ಆಗಿ ಹೋಗಲಿ
ಹಿಂತಾದಕ್ಯಾಕ ಇನ್ನಂಜುದಾ ನಮ್ಮ ಪ್ರಾರಬ್ಧಾ
ನಿಂತಾನ ಹೊಲಿಯಾನ ಮನಿಯಾಗ ಹರಿಶ್ಚಂದ್ರಾ
ಸಾಲ ಮುಟ್ಟಿತ ವಿಶ್ವಾಮಿತ್ರಂದಾ
ಮತ್ತಲ್ಲಿ ಹತ್ತಿದಾನ ಆತಗ ಕಾಡುವುದಾ
ಏನ ರೇಖಾ ಬ್ರಹ್ಮ ಹಣಿಯಲಿ ಬರದಿದ್ದಾ
ಪೃಥ್ವೀ ಪಾಲನ ಮಾಡುವಂತಾ ರಾಜಾ ಹೊಲಗೇರ್ಯಾಗ
ದುಡಿಯಾಕ ಹತ್ತಿದಾ ಕೇಳರಿ ಮುಂದಾ

**||ಚಾಲ||**

ಹೊಲಿಯಾ ಅಂತಾನ ಹರಿಶ್ಚಂದ್ರಗ ಮನಿಯಾಗ
ನೀರ ತಂದ ಮ್ಯಾಗ ಮ್ಯಾಗ - ಸುರುವ ಹರಿವಾಣಕ
ಈ ಚಾಕರಿ ಒಪ್ಪಿತ ನಿನಗ - ಈಗ
ಹರಿಶ್ಚಂದ್ರ ಕೊಡಾ ಹೊತ್ತಾನ ನೀರ ತರತಾನ
ಹರವೀಗಿ ಹಾಕತಾನ ತಾನು ಲಗು ಬ್ಯಾಗಾ
ಜಲಧಾರಿ ಹೊಂಟಾವ ಕಣ್ಣಾಗ ಕಣ್ಣಾಗಾ
ವಿಶ್ವಾಮಿತ್ರ ಮಾಡಿದ ಬೇತಾ ಬೇತಾ
ಹರವಿ ಬುಡಕ ತೂತಾ ತೂತಾ
ತಗದ ಬೇಕಂತಾ ನೀರ ಇಲ್ಲದ್ಹಾಂಗ
ತೆರುವ ಮಾಡುವನು ಅವ ಬರುವದರೊಳಗ

||ಏರಚಾಲ||

ಮನಿಯ ಚಾಕರಿ ಆಗುವದಿಲ್ಲಾ
ಸುಡಗಾಡದಲ್ಲಿ ಮಾಡೋ ಕಾವಲಾ
ದರ ಹೆಣಕ ಒಂದ ರೂಪಾಯಿ ಹಾಸಲಾ
ಹೊಲ್ಯಾನ ಹೆಣತಿ ಒದ್ದಾಳ ಬೆನ್ನಮ್ಯಾಲಾ

||ಏರು||

ಹೊಲಿಯಾನ ಮಾತ ಕೇಳಿ ಕಾಲಕ್ಷೇಪಾ
ಮಾಡುತ ಸುಡಗಾಡದಲಿ ಹರಿಶ್ಚಂದ್ರ ನಿಂತಾ
ದರ ದರ ಹೆಣದ ಹಾಸಲ ಇಸಕೊಳ್ಳುತಾ
ಅಷ್ಟರಲಿ ಈ ಕಡೆ ಆದೀತ ಒಂದ ವಿಪರೀತಾ
ರೋಹಿದಾಸ ಅರಣ್ಯದಲಿ ಸತ್ತಾಗ ತಾರಾಮತಿಗೆ
ಆದೀತ ಆ ಕಾಂತಾ ಭೂಮಿಗೆ ಹೊರ್ಳೂತಾ
ಪೂರ್ವಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ||ಜನೆಯ||

ಅಯ್ಯೊ ಮಗನೆ ವನವಾಸಾ ದುಃಖ ಎಲ್ಲಾ
ಮರತಿದ್ದೆ ನಾ ಹಿಡದ ನಿನ್ನ ಅಂತಾ ಹಲುಬುತಾ
ಗಂಡ ಅಗಲಿ ಹೋದ ಪೃಥ್ವಿನಾಥಾ
ರಾಜಾ ಆದಾವ ದುಡಿಯತಾನ ನೀರ ಹೊತ್ತಾ
ಮಾಡಿದಿ ಘಾತಾ ಮಾಡಿದಿ ಘಾತಾ
ತುಟಿ ಒಣಗಿ ನೆಲಾ ಬಗಟಿ ಕೂಸಿನ ಎದಿಗಪ್ಪಿ
ಹೌಹಾರಿ ಬಿದ್ದಾಳ ಮೂರ್ಛಿತಾ ಧರಣಿಗಿ
ಅಯ್ಯೋ ಕಂದಾ ಹ್ಯಾಂಗ ಇರಲಿ ನಿನ್ನ ಮರತಾ
ಸೂರ್ಯವಂಶ ಇಂದ ಆದೀತ ಸಮಾಪ್ತಾ
ನಡದಾಳ ಕೂಸಿನ ಹೊತ್ತಾ ಕಂದನ ಹೊತ್ತಾ
ಹಿಡದಾಳ ಸುಡಗಾಡದ ಹಾದಿ ಬಿಡಲಾರದ ಕರ್ಮಾ
ಬ್ರಹ್ಮ ಲಿಖಿತಾ ಆದೀತ ವ್ಯರ್ಥಾ ಆದೀತ ವ್ಯರ್ಥಾ
ಕಿಚ್ಚಿನೊಳಗ ಮುಂಚೆ ತಂದ ಹುಚ್ಚಿ ಹಾಂಗ
ಬಾಯಿ ತಗದ ಹಾಕ್ಯಾಳ ಅತಗೋತಾ
ಹರಿಶ್ಚಂದ್ರ ಅಲ್ಲಿ ಕೂತಿದ್ದ ಕಾಯುತಾ
ಓಡಿ ಬಂದ ಹೆಣಾ ಜಗ್ಗಿ ಒಗದಾತಾ
ಹಾಸಲ ಕೊಡಿರಿ ಮುಂಚೆ ಎಲ್ಲಿಂದ ಬಂದಿದಿರಿ
ಯಾರ ಕೇಳಿ ಸುಡತೀರಿ ಪ್ರೇತಾ

ತಗೊಂಡ ಹೋಗಿರಿ ಅತ್ತಾ ಈ ಪ್ರೇತಾ
ತಾರಾಮತಿ ಅಂತಾಳ ಖೂನಾ ಹಿಡಿರಿ ಸ್ವಾಮಿ
ನಿಮ್ಮ ಸತಿ ನಾನ ನನ್ನ ಬಿಟ್ಟಿರಿ ಮರತಾ
ಇವ ಮಗ ರೋಹಿದಾಸ ನಿಮ್ಮ ಸುತಾ
ಇನ್ನಾರಾ ಅಪ್ಪಣಿ ಕೊಡಬೇಕರಿ ಪೂರ್ತಾ
ಹರಿಶ್ಚಂದ್ರ ಅಂತಾನ ಅದೆಲ್ಲಾ ಖರೆ
ನಮ್ಮ ಧನಿಯಾಗ ಏನ ಹೇಳಲಿ ಅಂತಾ
ಆಡಿರಿ ಮಾತಾ ಆಡಿರಿ ಮಾತಾ
ಹಾಸಿಲ ಕೊಡದ ಹೊರತ ಬಿಡುವದಿಲ್ಲಂತಾ
ಮುಂದ ಹೋಗಿ ತರಬ್ಯಾನ ಬೇಕಂತಾ
ಕೇಳಿ ತಾರಾಮತಿ ಆದಾಳ ಭ್ರಾಂತಾ
ಕಣ್ಣೀರ ಹೊಳಿ ಆಗಿ ಹರಿಯುತಾ
ಮಗಾ ಸತ್ತಗಿಂತ ಗಂಡ ಆಡಿದ ಮಾತಾ
ಗುಂಡ ಬಡದ್ಹಂಗ ಆಯಿತ ಖಚಿತಾ
ಮತ್ತ ಭೂಮಿಗಿ ಹೊರಳುತಾ ಹೊರಳುತಾ

**||ಚಾಲ||**

ಅಯ್ಯೋ ಮಗನೆ ನಿನ್ನ ಹಡದಾಂವ
ನಿನ್ನ ಮರತಾನ ಮರತಾನ
ಹೊರಗೆಳೆದನ ಕರುಣ ಇಲ್ಲದಾ
ಇನ್ನ ಕೊಡಲಿ ಹಾಸಲ ಎಲ್ಲಿಂದಾ
ಹಡದಾಂವ ಮಗನ ನೋಡಲಿಲ್ಲಾ
ಖೂನಾ ಹಿಡಿಯಲಿಲ್ಲಾ ಹಿಡಿಯಲಿಲ್ಲಾ
ಎನ್ನ ಕೈಯಾಗಿಲ್ಲ ಹಾಸಲ ಕೊಡುವುದಾ
ಏನ ಬ್ರಹ್ಮ ಬರಿಯ ಬರದಾ ಬರದಾ

**||ಏರಚಾಲ||**

ಹಡದ ತಾಯಿ ಅಲ್ಲೇನೋ ಮಗನೆ
ನನ್ನ ಬಿಟ್ಟ ಹೋಗುವದೇನು ಖುಸಿಯಲಾ
ಒಂದಿವಸ ಸುಖಾ ನಿನಗ ಕೊಡಲಿಲ್ಲಾ
ಕೈಯ ತಾರೋ ಮಗನೇ ಬಾ ತೊಡಿಮ್ಯಾಲಾ
ರಾಜ ಸಂಪತ್ತಿ ಇಷ್ಟೆಲ್ಲಾ ಹೋಗಿ ಕಟ್ಟ ಕಡೆಗೆ
ಹಿಂಗ ಆಗುವದಿತ್ತೇನೋ ಇತ್ತೇನೋ

**||ಏರು||**

ಅನ್ನಂಬುದು ಅಪರೂಪ ಆಯಿತೇನೋ
ಒಂದ ತುತ್ತಿಗೆ ಪಿರಿಯ ಆಗಿ ಕುಂತೇನೋ
ಸತ್ವಶೀಲ ಕುಲದೀಪ ಮಗನೆ ಇನ್ನೆಂದೋ
ಬಿಗಿದಪ್ಪಿ ಮುದ್ದ ಕೊಟ್ವಾಳೋ ಅತ್ತಾಳೋ
ಪೂರ್ವ ಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ....॥ಇನೆಯ ॥

ಕರುಣಾ ಇಲ್ಲೋ ನಿನ್ನ ಹಡದಂವಗ
ಅಯ್ಯೋ ಮಗು ಬಾಯಿ ತೆರಯಿತೇನೋ
ಮೀನ ಮರಿಯಂಗ ನಾ ಮರಗತೇನೋ
ಹಲುಬಿ ಆ ಕಾರಕ ಬಾಯಿ ತೆರೆದರೂ
ನಿನ್ನ ಪಿತಗ ಕರುಣೆ ಇಲ್ಲೇನೋ
ಯಾಕ ಹಡದಿಹನೋ ನಿನ್ನನೋ
ಹಲುಬಿ ಹಲುಬಿ ಮಗನ ಬಳಲಿಕೆಯೊಳಗ
ತಾರಾಮತಿ ಕಣ್ಣ ಮುಚ್ಯಾಳೋ ತಾನೋ
ವಿಶ್ವಾಮಿತ್ರ ಅಲ್ಲಿ ಕಪಟ ಮಾಡಿದಾನೋ
ರೋಹಿದಾಸನ ಕರುಳ ಹಿರದ ತಗದಾನೋ
ನಿದ್ದಿ ಗಣ್ಣಿಲೆ ಮಲಗಿದ ತಾರಾಮತಿ ಕೊರಳಿಗಿ
ಕರುಳ ಸುತ್ಯಾನೋ ಬಾಯಾಗ ಹಾಕ್ಯಾನೋ
ಮರುದಿವಸ ಮುಂಜಾನೆ ಪುರಜನರ ನೋಡಿ
ಆಶ್ಚರ್ಯದಿಂದ ಅಂತಾರ ಇದ ಏನು
ವಿಶ್ವಾಮಿತ್ರ ರಾಜಾಗ ಹೋಗಿ ಹೇಳಿದನು
ನಿನ್ನ ಪುರದಲಿ ಬಂದೈತಿ ಒಂದ ಭೂತನು
ಒಳಗ ಸತ್ತಂತ ಪ್ರೇತ ಎಲ್ಲಾ ಅಂತಾಳು
ಹಿಡದ ಬಾಲಕರು ಆಕಿ ಆಹಾರವನು
ರಾಜ ಅಪ್ಪಣಿ ಕೊಟ್ಟನಾಗ ಕೊಟ್ಟನಾಗ
ಜನರು ತಾರಾಮತಿಗೆ ಕೊಟ್ಟಾರು ತಾಡಣವನು
ಎರಡು ರಟ್ಟಿಗೆ ಹಚ್ಯಾರ ಹಗ್ಗವನು
ಬೆನ್ನ ಮ್ಯಾಗ ಹಾಕತಾರ ಭಾರವನು
ಹೊಡದ ಬಡದ ಆಕಿನ ಹಿಡದ ಶೂಲಕ
ಹಾಕುವದಕ ಮಾಡಿದಾರ ಸಿದ್ಧವನು
ರಾಜಾ ಹೇಳತೇನು ಆಗುವ ದುಃಖವನು

**॥ಚಾಲ॥**

ಹರಿಶ್ಚಂದ್ರನ ಕರದಾರ ಆ ಕ್ಷಣಕ
ಇಕಿನ್ನ ಕಡಿಯಲಾಕ ಕಡಿಯಲಾಕ
ರಾಜಾನಂತ ಜಲದ ಹುಕುಮಾ ಕೊಟ್ಟಿದಾ
ಹರಿಶ್ಚಂದ್ರ ಕತ್ತಿ ನೆಗವಿದಾ
ಇಷ್ಟೆಲ್ಲ ನಾರದ ನೋಡಿ ಆದಾನ ಗಡಬಿಡಿ
ವೈಕುಂಠಕ ಓಡಿಹೋಗಿ ಹೇಳಿದಾ
ನೋಡೋ ಹರಿ ಕಣ್ಣ ತೆರದಾ
ಎಷ್ಟ ಕಷ್ಟ ಬಿಡತಾರ ಭಕ್ತರಾ
ಸತ್ವ ಬಿಡಬಲ್ಲರು ನಿನ್ನ ಸ್ಮರಿಸುವರಾ
ಏಕ ಭಾವದಿಂದಾ ಏಕ ಭಾವದಿಂದಾ
ಹಾಳಾಯಿತೇನೋ ನಿನ್ನ ಬಿರದಾ

**||ಏರಚಾಲ||**

ಆಗ ಹರಿಯು ಎಚ್ಚರಾದಾನೂ
ಮೂವರಿಗೆ ಅಭಯ ಅಂದಾನೂ
ವಿಶ್ವಾಮಿತ್ರ ಕಾಡಿ ದಣದಾನೂ
ಏನ ಬೇಡತಿ ಬೇಡ ಅಂದಾನೂ
ಹರಿಶ್ಚಂದ್ರ ವರವ ಬೇಡ್ಯಾನೂ
ಆಗ ಹಿಡಿದ ಮುನಿಯ ಪಾದವನೂ

**||ಏರು||**

ತಾರಾಮತಿಯಂತ ಸತಿಯನೂ
ರೋಹಿದಾಸನಂತ ಮಗನನೂ
ವಶಿಷ್ಠ ಗುರು ಕಾಯುವ ಪ್ರಬಲಾ
ಕಾಡಾಂವ ಇರಬೇಕ ಕಡಗಿನ ಕಾಲಾ
ದಯಾ ಇರಲಿ ಬಾಳಗೋಪಾಳನ ಮ್ಯಾಲಾ
ಪೂರ್ವ ಕರ್ಮ ಹರಿ ಬ್ರಹ್ಮಾದಿಕರಿಗೆ
ಬಿಟ್ಟಿಲ್ಲ ಹತ್ತೀತ ದುಂಬಾಲಾ…….

***ರಚನೆ :*** ಬಾಳಗೋಪಾಳ
***ಕೃತಿ :*** ಬಾಳಗೋಪಾಳನ ಲಾವಣಿಗಳು

# ೨೪. ಏಕಲವ್ಯ

**||ಪಲ್ಲ||**

ಚಿತ್ತವಿಟ್ಟ ಕೇಳರೆಣ್ಣಾ ಒತ್ತಿ ಒತ್ತಿ ಹೇಳತೀನ ನಿತ್ಯನಾದ ಏಕಲವ್ಯನ ಕಥೆಯನ್ನಾ |
ವ್ಯಾಸ ಭಾರತದೊಳಗ ಬಂದಿರುವಂಥ ಘಟನೆಯನಾ |
ಎಲ್ಲಾರೊಪ್ಪುವಾಂಗ ಆಧಾರಿಟ್ಟ ಹೇಳುವೆನಾ ||
ವರ್ಣದ್ವೇಷದಿಂದ ದ್ರೋಣ ಶಿಷ್ಯನಾಗಿ ತಗೋಳಿಲ್ಲ ಸ್ವಾರ್ಥಕಾಗಿ ಕೃಷ್ಣ
ಕೊಂದ ಅವನನ್ನಾ |
ವ್ಯಾಧರಾಜನಾದ ಬಿಲ್ಲಗಾರ ಗುರುಭಕ್ತನ್ನಾ ||

**ಚೌಕ – ೧**

**||ನುಡಿ||**

ಅಸ್ತ್ರವಿದ್ಯಾ ಶಸ್ತ್ರವಿದ್ಯಾ ಶಾಸ್ತ್ರ ವಿಷಯ ಮೊದಲ ಮಾಡಿ ತ್ರಿಷಷ್ಠ ವಿದ್ಯಾದೊಳಗ
ನಿಪುಣ ದ್ರೋಣಾಚಾರಿ |
ಇದನ ತಿಳದಕೊಂಡ ಕರದ ತಂದ ಭೀಷ್ಮಾಚಾರಿ |
ಶಿಷ್ಯರಾಗಿ ಮೊಮ್ಮಕ್ಕಳನ್ನ ಇಟ್ಟ ಬರೋಬರಿ ||
ಪ್ರೀತನಾಗಿ ಭೀಷ್ಮಾಚಾರಿ ಭರದ್ವಾಜ ದ್ರೋಣನಿಗೆ ಮುತ್ತುರತ್ನ ದವಸಧಾನ್ಯ ಜರತಾರಿ |
ಕೊಟ್ಟ ಭವ್ಯವಾದ ಭವನವನ್ನ ಮನಸಾರಿ||೧||

ಒಂದು ದಿನಾ ದ್ರೋಣಾಚಾರಿ ಚಂದದಿಂದ ಶಿಷ್ಯರನೆಲ್ಲಾ ಒಂದ ಮಾಡಿ ಕರೆದ
ತಂದ ಪರಭಾರಿ |
ಅವರ ಮನಸಿನೊಳಗ ಆಶೆ ತುಂಬಿದ ಪರಿಪರಿ |
ಆಗ ಶಿಷ್ಯರೆಲ್ಲ ಹರುಷ ಆದ್ರ ಮಿತಿಮೀರಿ ||
ಗುಟ್ಟಿನಿಂದ ಒಂದ ಮಾತ ಅಷ್ಟೂರಿಗಿ ಕೇಳತಾನ ನಿಷ್ಠಾದಿಂದ ನನ್ನ ಆಶಾ
ತೀರಿಸುವಿರಿ |
ನಿಮ್ಮ ವಿಚಾರವನ್ನ ನೀವು ಏನ ಹೇಳುವಿರಿ||೨||

ಕೇಳಿಮಾತ ಕೌರವರೆಲ್ಲ ಹೇಳಲಿಲ್ಲ ಸುಮ್ಮನಾದ್ರ ತಾಳಹೊಡದಾಂಗ ಎದ್ದ
ನಿಂತ ಧನುರ್ಧಾರಿ ||
ಗುರು ದ್ರೋಣರಿಗೆ ಭಕ್ತಿಲಿಂದ ಮಾಡಿ ಮುಜುರಿ |
ತಾನು ಮಾಡುದಾಗಿ ವಚನಕೊಟ್ಟ ಪಾರ್ಥಸಾರಿ ||
ಹರುಷಗೊಂಡ ದ್ರೋಣಾಚಾರಿ ಪುರುಷವರಗ ಹೃದಯ ತುಂಬಿ ಹರಕಿ
ಕೊಟ್ಟ ಹೇಳತಾನ ನಿನ್ನ ಪರಿ |
ಯಾರು ಲೋಕದಲ್ಲಿ ಆಗದಂಗ ನಿನ್ನ ಸರಿ||೩||

**||ಚಾಲ||**

ಗುರು ಅರ್ಜುನನ ಮೆಚ್ಚಿಕೊಂಡ - ಮಾಡಲಾಕ ಅವನಪುಂಡ-ಆತನಿಗೆ
ವಚನ ಕೊಟ್ಟಾನು-ವಚನ ಕೊಟ್ಟಾನು ||೧||

ಅಶ್ವತ್ಥಾಮನ ತೋಡಿಗೆ ತೋಡಿ-ವಿದ್ಯಾ ಕಲಿಸಿದಾನ ಜೋಡಿ-
ಉಳಿಲಿಲ್ಲ ಕಸರ ಏನೇನು- ಕಸರ ಏನೇನು ||೨||

ಧನುರ್ವಿದ್ಯಾದಲ್ಲಿ ಪಾರ್ಥಬಲವಂತ-ಆದ ಅವಶಮರಂತ-
ಖಾಸ ದ್ರೋಣ ಶಿಷ್ಯ ಹೌದ ಅವನು-ಶಿಷ್ಯ ಹೌದ ಅವನು ||೩||

**||ಕೂ.ಪ.||**

ಕತ್ತಲದಾಗ ಒಮ್ಮೆ ಪಾರ್ಥ ತುತ್ತ ಹೋತ ಬಾಯ್ಗೆ ನಿರತ ಗತ್ತಿನಿಂದ
ತಿಳದಕೊಂಡ ಅರ್ಜುನಾ |
ತನ್ನ ಕಣ್ಣ ಕಾಣದ ದೂರವಿರುವ ವಸ್ತುವನಾ |
ಬೇಕಾದಾಂಗ ಹೊಡಿಯ ಬಹುದ ಬಾಣ ಅಂಬುದನಾ ||ವರ್ಣ||

**ಚೌಕ – ೨**

**||ನುಡಿ||**

ಕುರು ಪಾಂಡು ಪುತ್ರರೆಲ್ಲ ಗುರು ಕರುಣಾ ಹೊಂದು ಹಾಂಗ ಬ್ಯಾರೆ-
ರಾಜಕುಮಾರರು ಬಂದಾರಲ್ಲಿ |
ಸೂತಪುತ್ರ ಕರ್ಣ ಕೂಡಿಕೊಂಡ ಅವರಲ್ಲಿ ||
ಕುರುಪುತ್ರ ದುರ್ಯೋಧನ ಅವಗ ಬೆಂಬಲಿ ||
ಹಿಂಗ ಆತ ಅವರ ಜೋಡಿ ಅಂಗರಾಜ ಕೌರವಕೂಡಿ ವ್ಯಂಗ್ಯವಾಗಿ
ಪಾರ್ಥನ್ನ ಕಂಡಾರಲ್ಲಿ ||
ಮುಂದ ಬೆಳದ ಬಂತ ವೈರತನ ಅವರಲ್ಲಿ||೧||

ಧನುರ್ವಿದ್ಯಾ ಪ್ರಾಪ್ತಿಗಾಗಿ ವನದರಾಜ ಹಿರಣ್ಯಧನು ತನುಜನಾದ
ಏಕಲವ್ಯ ಬಂದಾನಲ್ಲಿ |
ಒಳೆ ಹರುಷದಿಂದ ವಿದ್ಯೆಗಾಗಿ ದ್ರೋಣನಲ್ಲಿ |
ಪಾದಾಮುಟ್ಟಿ ಮಾಡಿ ನಮಸ್ಕಾರ ಕೇಳ್ಯಾನಲ್ಲಿ ||
ದ್ರೋಣಾಚಾರಿ ಅವನ ನೋಡಿ ಬಾಣವಿದ್ಯಾದೊಳಗ ಇವಗ ಕಾಣುದಿಲ್ಲ
ಸರಿಸಮ ಸರ್ವರಲ್ಲಿ |
ಎಂದು ಪ್ರೀತನಾದ ಗುರುವರ್ಯ ಮನಸಿನಲ್ಲಿ||೨||

ಯೋಧನಾದ ಏಕಲವ್ಯ ವ್ಯಾಧರಾಜನೆಂದು ಕೇಳಿ ಭೇದಬುದ್ಧಿ ಬಂದಿತಾಗ
ದ್ರೋಣನಲ್ಲಿ ।
ಅವನ ಶಿಷ್ಯನಾಗಿ ತಗೋಳಿಲ್ಲ ಅವ ತನ್ನಲ್ಲಿ ।
ಇಟ್ಟ ಗುರುಭಕ್ತಿ ಏಕಲವ್ಯ ಆತನಲ್ಲಿ ॥
ವನಕ ಹೋಗಿ ನಿಷಾದಪುತ್ರ ಮನಕ ಒಪ್ಪು ದ್ರೋಣ ಮೂರ್ತಿ
ಮಾಡಿಯಿಟ್ಟ ಒಂದು ಗಿಡದ ಬುಡದಲ್ಲಿ ।
ಒಳೆ ನಿರತನಾದ ಅವ ತನ್ನ ವಿದ್ಯಾದಲ್ಲಿ॥೩॥

**॥ಚಾಲ॥**

ಗುರುಶೃದ್ಧಾ ಇತ್ತ ಅವಗ ಅಚಲ-ಇಲ್ಲ ಮನದಾಗ ಚಂಚಲ-
ಹೂಡಿಹೊಡಿಯತಿದ್ದ ಬಿಲ್ಲ ಬಾಣ-ಬಿಲ್ಲಬಾಣ ॥೧॥

ಇಚ್ಛಾಶಕ್ತಿಗಿಲ್ಲ ಏನ ಇದರಾ-ಅದರಾಗ ಅವಂದ ನದರಾ-
ಸತತ ಅಭ್ಯಾಸ ಮಾಡಿದ ಜಾಣ-ಮಾಡಿದ ಜಾಣ ॥೨॥

ಅರಿವೆಂಬುದು ಗುರುವಿದು ಸಿದ್ಧಾ-ಅರಿತವನವನೆ ಸಿದ್ಧಾ-
ಏಕಲವ್ಯಗ ಒಲದಿತ ಬಾಣ-ಒಲದಿತ ಬಾಣ ॥೩॥

**॥ಕೂ.ಪ.॥**

ಗುರಿಹೂಡಿ ಬಾಣಬಿಡುವ ಮತ್ತ ಅದನ ತಿರುಗಿ ಪಡೆವ ಶರದ ಚಾಕಚಕ್ಯ
ಹತ್ತಿತವನ ಬೆನ್ನಾ ।
ಹೀಂಗ ಅಸ್ತ್ರ-ಶಸ್ತ್ರ ವಿದ್ಯಾದಲಿ ಆದ ಸಂಪನ್ನಾ ।
ಗುರು ದ್ರೋಣರನ್ನ ಮೀರಿನಿಂತ ವಿದ್ಯಾವನಾ ॥ವರ್ಣ॥

**ಚೌಕ – ೩**

**॥ನುಡಿ॥**

ಹಗಲ-ಇರುಳ ಬಿಟ್ಟು ಬಿಡದೆ ಬೇಗು ಬೆಳಗ ಎನ್ನದಲೆ ಜಾಗ್ರದಿಂದ
ಮಾಡತಿದ್ದ ನಿತ್ಯ ಸಾಧನಾ ।
ಅಂಥಾ ಹೊತ್ತಿನ್ಯಾಗ ಒಂದದಿನ ಹೊಕ್ಕವನಾ ।
ಬ್ಯಾಟಿ ನಾಯಿಗಳನ ಕೂಡಿಕೊಂಡ ಬಂದ ಅರ್ಜುನಾ ॥
ಬ್ಯಾಟಿನಾಯಿ ಬೊಗಳಿಕೊಂತ ಕೆಟ್ಟಗುಲ್ಲ ಮಾಡಿಕೊಂತ-ನಟ್ಟ
ಅಡವಿಯಲ್ಲಿ ಬಂದು ಏಕಲವ್ಯನ ।
ಚಿತ್ತ ಕಲಕಿ ಮಾಡಿದಾವ ಅವನ ಬಹಿರ್ಮುಖನ॥೧॥

ದಯಾಮಯಿ ಏಕಲವ್ಯ ಮಾಯಾದಿಂದ ಶಬ್ದಭೇದಿ ಆಯವಾದ
ಬಾಣಬಿಟ್ಟ ನಾಯಿಮ್ಯಾಗ।
ಆಗ ಏಳೂಬಾಣ ಬಂದನಟ್ಟು ಬಾಯ ಒಳಗ।
ನಾಯಿ ಓಡಿಕೊಂತ ಹೋತಬಾಯಿಮಾಡಿ ಮ್ಯಾಗ॥
ಧನುರ್ಧಾರಿ ಅರ್ಜುನಗ ನೆನದರೇನು ತಿಳಿಯಲಿಲ್ಲ ಏನು ಗಾಯವಿಲ್ಲ
ಬಾಣಬಿಟ್ಟ ಹ್ಯಾಂಗ।
ಇದನ ತಿಳಿಯಬೇಕ ಯಾವ ಅಂವ ಅಂಬುದೀಗ॥೨॥

ಮೆತ್ತಗಾಗಿ ನಾಯಿಬೆನ್ನ ಹತ್ತಿಕೊಂಡ ಅರ್ಜುನಾದಿ ಇತ್ತಬಂದ
ನೋಡತಾರ ಏಕಲವ್ಯನ।
ಕಪ್ಪುಬಣ್ಣವಿತ್ತ ಹೊಲಸ ಮೆಯ್ಯಮ್ಯಾಲ ಅವನ।
ಬಿಲ್ಲಬಾಣ ಕಯ್ಯೊಳಗ ಸುತ್ತಿ ಕೃಷ್ಣಾಜಿನ॥
ಕೇಳತಾನ ಯಾವ ಗುರು ಹೇಳ ನಮಗ ಕಲಿಸಿದಾರ ತಿಳಿಯಲಿಲ್ಲ ಇಲ್ಲಿಯತನ  ಇದರ ಕೂನ।
ಹೇಳಿದ ಏಕಲವ್ಯ ದ್ರೋಣಾಚಾರಿ ಹೆಸರವನ॥೩॥

॥ಚಾಲ॥ಕೇಳಿ ಪಾರ್ಥ ದ್ರೋಣ ಹೆಸರನ್ನ-ಮನದೊಳಗ ಆದ ಅವ ಖಿನ್ನ -
ನನಗರಿಯದ ಕಲಿಸಿದಾನ ಹ್ಯಾಂಗ-ಕಲಿಸಿದಾನ ಹ್ಯಾಂಗ ॥೧॥

ಬಂದ ಹೇಳ್ಯಾನ ಗುರುವಿಗಿ ವೃತ್ತಾಂತ-ದ್ರೋಣಾಚಾರಿ ಆದಾನ ಭ್ರಾಂತ
ತಿಳಿಯದ ಹಿಡದ ಕುಂತಾನ ಗುಂಗ-ಕುಂತಾನ ಗುಂಗ ॥೨॥

ಅವನ ಬೆಟ್ಟಿಗಿ ಮಾಡ್ಯಾನ ಆತೂರ-ಪಾರ್ಥನ ಕೂಡಿ ಗುರುವರಾ-
ಬಂದ್ರ ಅಡವಿ ಆರ್‍ಯಾಣ ಹಿಂಗ-ಆರ್‍ಯಾಣ ಹಿಂಗ ॥೩॥

॥ಕೂ.ಪ.॥ಗುಡ್ಡ ಗುಡ್ಡ ಹಣ್ಣಿನ ಬನ ಅಡ್ಡ ಅಗಲ ಭ್ರಮರ ಸ್ವನ ಅಡ್ಯಾಡತಾವ
ಚೆಂಕಿ ಭಯ ಇಲ್ಲ ಏನೇನಾ ॥೪॥

ಎಲ್ಲಿ ನೋಡಿದಲ್ಲಿ ಕಂಡಿತವರಿಗೆ ತಪಸಿನ ವನಾ।
ಅಂದಾರ ಮನಸಿನ್ಯಾಗ ಏಕಲವ್ಯ ಹ್ಯಾಂತಾ ದೈವಾನಾ ॥ವರ್ಣ॥

**ಚೌಕ – ೪**

**॥ನುಡಿ॥**

ಗುರುವಿನ ಕಂಡ ಏಕಲವ್ಯ ಎರಗಿದಾನ ಪಾದಮ್ಯಾಲ ಗುರುವು ನಾನು
ನಿನಗ ಹ್ಯಾಂಗ ಹೇಳ ಇದನ।
ದ್ರೋಣ ಕೇಳಿದಾಗ ವ್ಯಾಧ ಮೂರ್ತಿ ತೋರಿದಾನ।

ಹಿಂದ ನಡದ ಘಟನಾ ಎಲ್ಲಾ ಅವಗ ತಿಳಿಸಿದಾನ ।
ಮೂರ್ತಿಕಂಡ ಹರುಷಗೊಂಡ ಪಣಾ ನೆನದ ಕರುಬಗೊಂಡ ಅರ್ಜುನಿವನ
ಮೀರುವ ಬಗೆಯ ಮನದಿ ನೆನದಾನು ।
ಬಲಗೈ ಹಿರಿಯ ಬೆರಳ ದಕ್ಷಿಣವಾಗಿ ಬೇಕ ಅಂದಾನು॥೧॥

ಅಂದ ಮಾತ ಬಾಯಿಯಿಂದ ಬಂದಿದ್ದಿಲ್ಲ ಇನ್ನು ಹೊರಗ ಒಂದಿನಿತು
ಮರುಗಲಿಲ್ಲ ತನ್ನ ಮನದಾಗ ।
ಬೆರಳ ಕೊಯ್ದು ಇಟ್ಟ ದ್ರೋಣಾಚಾರಿ ಪಾದಮ್ಯಾಗ ।
ಅವನ ಕೀರ್ತಿಹೊತ ಗುರುಭಕ್ತಂತ ನಾಡಿನೊಳಗ ॥
ಹಿರಿಯ ಬೆರಳ ಪಡೆದ ದ್ರೋಣ ಕಿರಿಯನಾದ ಭೂಮಿಮ್ಯಾಗ
ಬಿರುದು ನಿಷ್ಕಾಮಕರ್ಮಿಯೆಂಬುದಿವನಿಗಿನ್ಯಾಂಗ
ಹಿಂಗ ಹಾಡsಹಗಲ ಮಾಡತೈತಿ ನೋಡ ಹಂಗ॥೨॥

ಏಕಲವ್ಯ ಪಾರ್ಥನಂತೆ ಲೊಕತಿಳಿಯೆ ರಾಯಗುವರ ವರ್ಗಕಲಹವೆಂಬುದಿ ಇಲ್ಲೆ ಇಲ್ಲಾ
ವ್ಯಾಧಾ ಜಾತಿಯಿಂದ ಕಡಿಮೆಯೆಂಬುದೊಂದೆ ಸೊಲ್ಲಾ ।
ಅದೇ ವರ್ಣದ್ವೇಷವೆಂಬುದಾಗಿ ಬಂದಿತಲ್ಲಾ ॥
ಹಿರಿಯ ಬೇರಳು ಹೋದರೇನು ತೋರ ಮಧ್ಯದಿಂದ ವ್ಯಾಧ ಸರಳ
ಹೂಡಿಹೊಡಿಯತಿದ್ದ ಹಿಡದ ಬಿಲ್ಲಾ
ಎಡಗೈ ಸಾಧನ ಮಾಡು ಪ್ರಸಂಗವಗ ಬಂದೆ ಇಲ್ಲಾ॥೩॥

**॥ಚಾಲ॥**

ಏಕಲವ್ಯ ವ್ಯಾಧರಾಜನಾಗಿದ್ದಾ-ಕೈ ಕಾಲಿಗಿ ಸೇವಾಂಕ ಇರಸಿದ್ದಾ
ಕಂಗಾಲಾಗುದಕ ಇಲ್ಲ ಕಾರಣೇನೇನಾ-ಇಲ್ಲ ಕಾರಣೇನೇನಾ ॥೧॥

ಹಣ್ಣ ಹಂಪಲ ಧ್ಯಾನ ಸರಕಾ-ಹಾಲ ಜೇನಿನ ಕೊಡಗಳು ನಿರಕಾ-
ಪರಕಿಂಜಲಕಾಶೆ ಮಾಡುದಿನ್ನೇನಾ-ಮಾಡುದಿನ್ನೇನಾ ॥೨॥

ತಾಯಿ ಸೇವಾದಲ್ಲಿ ಅವ ನಿರತಾ-ಬೆರಳ ದುಃಖ ಅವ ಮರತಾ -
ಹಿಂಗಂತ ತನ್ನ ಹೆಸರ ಉಳಸಿದಾನ-ಹೆಸರ ಉಳಸಿದಾನ ॥೩॥

**॥ಕೂ.ಪ.॥**

ಅರ್ಜುನನ ಹಿತಕ್ಕಾಗಿ ಹಿರಿಯ ಬೆರಳು ಪಡೆದು ದ್ರೋಣ ಅಜೇಯನಾಗಿ
ಮಾಡಿಬಿಟ್ಟ ಕ್ಷತ್ರಿಯನ್ನಾ
ಇದು ಏಕಲವ್ಯ ಕಥೆಯಲ್ಲಿ ಮೊದಲಿನದಿನ್ನಾ ।
ಕೃಷ್ಣ ಮಾಡಿದಂಥ ಕಪಟವನು ಹೇಳುವೆನಾ ॥ವರ್ಣ॥

**ಚೌಕ – ೫**

**||ನುಡಿ||**

ಪೂಜ್ಯನಾಗಿ ಏಕಲವ್ಯ ರಾಜ್ಯಭಾರ ಮಾಡತಿದ್ದ ಸಾಜವಾಗಿ ಕಳೆದಹೋದ ದಿನಮಾನಾ
ಮುಂದ ಕೇತುಮಂತ ಹುಟ್ಟಿಬಂದ ಬಲವಾನಾ ||
ಅವಗ ಕಲಿಂಗರಾಜ ಶ್ರುತಾಯುಧನ ಗೆಳೆತಾನಾ ||
ಮಹಾಭಾರತ ಯುದ್ಧದಲಿ ಮಹಾಯೋಧ ಕೇತುಮಂತ ವಾಹಿನಿಯ ನಾಯಕನಾಗಿ ಸೆಣಸಿದಾನಾ
ಭೀಮ ಗದಾದಿಂದ ಯುದ್ಧದಲ್ಲಿ ಮರಣಹೊಂದ್ಯಾನಾ||೧||

ಬಿಟ್ಟು ಬಿಡದೆ ರಾತ್ರಿ ಹಗಲ ಪಟ್ಟ ಹಿಡದ ಬಿಲ್ಲವಿದ್ಯಾ ನಿಷ್ಠಾದಿಂದ
ಮಾಡುದನ್ನ ಕೃಷ್ಣ ಕಂಡಾನಾ
ಪಾರ್ಥ ಏಕಲವ್ಯನ ಜಯಸುದಕ್ಕ ಆಗದಂದಾನಾ |
ಅಂತೆ ಭಾರತಯುದ್ಧ ಪೂರ್ವದಲ್ಲಿ ಕೊಂದ ಹಾಕ್ಯಾನಾ||
ಜರಾಸಂದ ಚೇದಿರಾಜ ಪರಾಶಕ್ತಿಯಿಂದ ಕೊಂದ ಮೂರಜನಕ ತನ್ನ
ನಂಟನ್ನುಳಸಿದನಾ |
ಇದೇ ರಾಜನೀತಿ ಎಂಬುದನ್ನ ಸಾರಿದನಾ||೨||

ಸತ್ತರೇನು ಏಕಲವ್ಯ ನಿತ್ಯಕೀರ್ತಿ ಉಳಿಸಿಕೊಂಡ ಮತ್ತ ಹುಟ್ಟಿ ಬರೂದಕ್ಕ ಕಾರಣೇನಾ |
ಕೋಪಿ ಆಶ್ವತ್ಥಾಮನ ಸೇಡಿಗಾಗಿ ಜನ್ಮವೇನಾ |
ಹಿಂಗ ಕಲ್ಪನಾಮಾಡು ಪ್ರಜ್ಞಾವಂತರಿಗ್ಹೇಳುದೇನಾ ||
ವ್ಯಾಸ ಬರದ ಭಾರತದಾಗ ಮೀಸಲಾದ ಏಕಲವ್ಯ ದಾಸನಾಗಿ ಹುಟ್ಟಿಸುದು ಚಂದವೇನಾ |
ನಾಲಿಗಿ ಕುಲಾತಿಳಸು ಮಾತಯಿದು ಸುಳ್ಳಯೇನಾ||೩||

**||ಚಾಲ||**

ಏಕಲವ್ಯನ ಕಥೆಯನು ಮನಮುಟ್ಟಿ-ತಿಳಿದಂಗ ಹೇಳೇನಕಟ್ಟಿ
ಮತಿವಂತರು ಕೇಳ್ರಿ ಚಿತ್ತವಿಟ್ಟ-ಕೇಳ್ರಿ ಚಿತ್ತವಿಟ್ಟ ||೧||

ನಾ ಬಲ್ಲಿನಿ ಅನ್ನುದು ಬರಿಗುಲ್ಲಾ-ತಿಳಿದವರಿಗೆ ಹೇಳುವದಲ್ಲಾ-
ತುಂಬಿದ ಕೊಡ ತುಳುಕುದಿಲ್ಲಗಟ್ಟಿ-ತುಳುಕುದಿಲ್ಲಗಟ್ಟಿ ||೨||

ಮಹಾಭಾರತದೊಳಗಿನ ಕಥಿಸಾರಾ-ಭಾರತ ಜನರಿದ ಬಲ್ಲವರಾ -
ವ್ಯಾಸ ಪ್ರಮಾಣ ಅಯ್ತಿ ಇಲ್ಲಿ ಗಟ್ಟಿ-ಅಯ್ತಿ ಇಲ್ಲಿ ಗಟ್ಟಿ ||೩||

**||ಕೂ.ಪ.||**

ಅಂದಚಂದ ತುಂಗಳಗ್ರಾಮ ಕುಂದಲದೇವಿ ನಮಗ ಪ್ರಾಣ ವಂದ್ಯ
ಶಿವನಗೌಡ ವಸ್ತಾದನಸಿದನಾ ।
ಕಂದ ಸಂಗಮೇಶ ಕವಿಯಾಗಿ ಜನಿಸಿದನಾ ।
ಲೋಕ ವಂದ್ಯರಿಗೆ ಶಿರಬಾಗಿ ನಮಿಸಿದನಾ ॥ ವರ್ಣ ॥

***ರಚನೆ :*** ಸಂಗಮೇಶ
***ಕೃತಿ :*** ಚಾಪ ಹಾಕತೀನಿ ಡಪ್ಪಿನ ಮ್ಯಾಲ

## ೨೫. ಶ್ರವಣಕುಮಾರ

**॥ಪಲ್ಲ॥**

ಈ ಶಾಸ್ತ್ರ ಕೇಳರಿ ಹೇಳತೀನ ಕೈ ಮುಗದಾ ।
ಮಾಯಾ ಬಹಳ ಮಕ್ಕಳ ಮೇಲೆ ಧರಣಿ ಕೇಶವರಾಯಂದಾ ॥

**ಚೌಕ – ೧**

**॥ನುಡಿ ॥**

ಮಾಡಿದ ಬದಕ ಮನಿಯಾಗ ಏನ ಫಲ ಇದ್ದಾ ।
ಮಾರಿ ನೋಡಿದರಂತ ಜನರ ಹಿಂಗ ಅನ್ನೂದಾ॥೧॥

ಧರಣಿ ಅಂತಾಳ ಸ್ವಾಮಿ ಈಗ ಕೇಳರಿ ನಂದಾ ।
ಇನ್ನ ಹ್ಯಾಂಗ ಮಾಡಬೇಕ ಕಾಸಿಗೆ ಹೋಗುದು ಮುಂದಾ॥೨॥

ಮಕ್ಕಳಿಲ್ಲದ ಭೋಗಾ ಏನ ಉಪಾಯಕ ಆಗೂದಾ॥೩॥

**॥ಚಾಲ-೧॥**

ದಾನ ಮಾಡರಿ ಬೆಳ್ಳಿ ಬಂಗಾರ-ಮುತ್ತ ಮನಿಮಾರ-ಎಲ್ಲಾ ಲೂಟಿ ।
ಮಡದಿ ಹೇಳತಾಳ ಕೇಶವರಾಯಗ ಗಟ್ಟಿ॥೧॥

ಮನ ಒಂದs ಆದರ - ಏಕ ಜೀವಾ ಇದ್ದರ - ಬ್ಯಾಡ ಖೊಟ್ಟಿ ।
ಮಾಡಿದ ಬದಕ ಆಗಲಿ ಲೂಟಿ॥೨॥

**॥ಚಾಲ-೨॥**

ದಾನಾ ಮಾಡುದು ಬೆಳ್ಳಿ ಬಂಗಾರ ತಾವು ನಿಂತ ನಿರಧಾರ | ಸಂಬ ಹರಹರಾ |
ಅವ್ರು ದಾರಿ ಹಿಡದಾರು ಕಾಶಿ ರಾಮೇಶ್ವರ ಮಕ್ಕಳ ಬೇಡುತಾರಾ | ಸಂಬ ಹರಹರಾ |

**||ಕೂ.ಪ.||**

ವನವಾಸದ ಮಾತಾ ಇನ್ನ ಕೇಳರಿ ಮುಂದಾ || ಮಾಯಾ ||

**ಚೌಕ – ೨**

**||ನುಡಿ||**

ಬಾಣ ಬಿಲ್ಲ ತಗೊಂಡ ಕೇಶವರಾಯ ಕೈಯಾಗ |
ಒಂದ ಸರ್ಪ ಬಂದ ನಿಂತಿತ ಹಾದಿಯ ಮ್ಯಾಗ||೧||

ಧರಣಿ ಅಂತಾಳ ನಮಗ ಶಕುನ ಯಾಕ ಆತ ಹಿಂಗ |
ಹೊಡಿ ಬಾಣ ಹೆಡಿ ಮ್ಯಾಗ ಕಡದ ಬೀಳಲಿ ತೆಳಗ||೨||

ಹೆದಿ ಏರಿಸಿ ಬಾಣಾ ಬಿಟ್ಟ ಸರ್ಪಿನ ಮ್ಯಾಗ |
ಸಾವ ಇತ್ತ ಶೇಷಂದ ಕೇಶವರಾಯನ ಕೈಯಾಗ||೩||

**||**ಚಾಲ-೧||ಲಗು ಮಾಡಿ ಕಿತ್ತಾರೊ ಬಾಣಾ |
ಬಾಳ ಹತಿ ಆದಿತೊ ನನ್ನ ಪ್ರಾಣ||೧||

ನೀವು ಬಂದ ಮಾಡಿದಿರಿ ಮರಣಾ |
ಶಾಪ ತಗೋರಿ ಹಿಡಿ ಮಣ್ಣಾ||೨||

**||ಚಾಲ-೨||**

ಶಾಪ ಕೊಟ್ಟಾನ ಆವಾಗ-ಅವರ ಉಡಿಯಾಗ-ಕೇಶವರಾಯಾಗ |
ಸಂಬಹರಹರಾ |
ಶೇಷಬಿದ್ದ ಕೇಳ್ರಿ ಆವಾಗ-ಭೂಮಿಯ ಮ್ಯಾಗ-ದೋಷ ಅವರಿಗೆ |
ಸಂಬಹರಹರಾ ||

**||ಕೂ.ಪ.||**

ಕೆಡಗಾಲ ಹ್ವಾರೆ ಕಾಡುದ ಬಂದಿತ ಮುಂದಾ || ಮಾಯಾ ||

**ಚೌಕ – ೩**

**||ನುಡಿ||**ಮಕ್ಕಳಿಲ್ಲದ ಜಲ್ಮ ಯಾತಕ ಬೇಕರಿ ಜೋಡಾ ।
ಮನಾ ಬಿಚ್ಚಿ ಮಾತಾಡತಾಳ ಧರಣಿ ಕೇಶವ ರಾಯನ ಗೂಡಾ||೧||

ಅವರ ಮಾತಿಗಿ ಚಿಗರಿ ಬಂದ ಹಾದಿತ ಅಡ್ಡಾ ।
ಸಿಟ್ಟ ಆದಾಳ ಧರಣಿ ತನ್ನ ಕಣ್ಣಿಲೆ ಕಂಡಾ||೨||

ಜೀವ ಬಾಣ ಹೊಡೀರಿ ಗೋಣ ಹಾರಲಿ ರುಂಡಾ ।
ಭರಭರಾ ಬಾಣಬಿಟ್ಟ ಮಾಡಿದ ಎರಡ ತುಂಡಾ||೩||

**||ಚಾಲ-೧||**

ಬಳಲಿಸಿ ಬಿದ್ದಿತೊ ಮರಿಗಿ ।
ಸರಾಪ ಕೊಟ್ಟಿತ ಅವರೀಗಿ||೧||

ಮುಂದ ಶ್ರಾವಣ ಹುಟ್ಟುವ ಧರಣಿಗಿ ।
ನನ್ನಂಗ ಬಾಣ ಬಡಿಲಿ ಅವನ ಎದಿಗಿ||೨||

**||ಚಾಲ-೨||**

ಇದ ಒಂದು ಶಾಪ ನಿನಗ-ಚಿಗರಿಯ ಶಾಪಕಟ್ಟ ಪದರಾಗ-ಸಂಬ ಹರಹರಾ ||
ಬಾಯಿ ಕಚ್ಚಿತ ಕಪಕಪಾ-ಪ್ರಾಣ ಹೋತ ಗಪ್ಪಾ-ಅವರ ಕೈಯಾಗ । ಸಂಬ ಹರಹರಾ ||

**||ಕೂ.ಪ.||**

ದೋಷಕ ಗುರಿ ಆದಾರು ಎರಡು ಜೀವಗಳ ಹೊಡದಾ || ಮಾಯಾ ||

**ಚೌಕ** – ೪

**||ನುಡಿ||**

ಮತಾಡುತ ಹೋದಾರು ಗಿಡದ ನೆರಳವ ನೋಡಿ ।
ಮಂಗ್ಯಾ ಮಗನ ಆಡಸ್ತಿತ್ತ ಟೊಂಗಿ ಮ್ಯಾಗ ಜಿಗದಾಡಿ||೧||

ಮನಕ ಹರುಷ ಆದಾಳು ಧರಣಿ ಆವಾಗ ನೋಡಿ ।
ಆ ಮಂಗ್ಯಾನ ಕಡಿಂದ ಕೂಸಿನ ತಗೋರಿ ಈ ಕಡೆ||೨||

ಸರ್ಪಬಾಣ ಬಿಟ್ಟಾನು ಕೂಸಿನ ತಾಯಿಯ ಕಡೆ ।
ಕೂಸಿನ ಅಡ್ಡ ಹಿಡದಿತೋ ಅವನ ಕಡೆ ಮಾಡಿ||೩||

**||ಚಾಲ-೧||**

ನನ್ನ ಮಲಿ ಉಣ್ಣ ತಿದ್ದ ಸಣ್ಣ ಬಾಲಾ ।
ಬಂದ ಬಾಣ ಬಡಿತಾವ ಬೆನ್ನ ಮ್ಯಾಲಾ॥೧॥

ತಣ್ಣಗಾದು ಕೂಸಿನ ಕೈ ಕಾಲಾ ।
ತಾಯಿ ಬಿದ್ದ ಅಳತಾಳ ಬೆನ್ನಮ್ಯಾಲಾ॥೨॥

**||ಚಾಲ-೨||**

ನನ್ನ ಮಗನದ ಹೋತ ಪ್ರಾಣಾ-ಬಿದ್ದಿತ ಹೆಣಾ-ಅಳತಾಳ ಗಳಗಳಾ ।
ಸಂಬ ಹರಹರಾ ॥

ನಾ ಶಾಪ ಕೊಡತೀನ ಕೇಳ ಅಣ್ಣಾ-ಹೋಗಲಿ ನಿಮ್ಮ ಕಣ್ಣಾ-ಆಗಲಿ
ಕಂಗಳಾ । ಸಂಬ ಹರಹರಾ ॥

**||ಕೂ.ಪ.||**

ಊರ ದೂರ ಮಹಾದೇವನ ಗುಡಿಗೆ ಹೋದಾರು ಮುಂದಾ ॥ ಮಾಯಾ ॥

**ಚೌಕ – ೫**

**||ನುಡಿ||**

ಮುಕ್ಕಾಮ ಮಾಡಿದಾರ ಮಹಾದೇವನ ಗುಡಿಗೆ ಹೋಗಿ ।
ಕೈ ಕಾಲ ಹೋದಾವ ಕಣ್ಣಗೊಂಬಿ ಮತ್ತ ತಿರಗಿ॥೧॥

ಬಾಳ ದುಃಖ ಮಾಡತಾಳ ನಸೀಬ ಕಮ್ಮ ಇಲ್ಲೀಗಿ ।
ಮಹಾರಾಜನ ಪೂಜಿಗಿ ಗೊರವ ಬಂದಾನ ಅಲ್ಲೀಗಿ॥೨॥

ತಮ್ಮ ಹಾಸಿಗಿ ಒಳಗ ಹೇಸಿಕಿ ಹೊರಕಡಿಗಿ ।
ಗೊರವ ಸಿಟ್ಟ ಮಾಡತಾನ ಎಲ್ಲಿಂದ ಬಂದಾವ ಗುಡಿಗಿ॥೩॥

**||ಚಾಲ-೧||**

ಧರಣಿ ಹೇಳತಾಳ ಕೇಶವರಾಯಗ ।
ಕಾಲ ಇದ್ರ ಹೋಗತಿದ್ದೀವ ಹೊರಗ॥೧॥

ಕಳಕಳಿ ಬಂದಿತ ಆ ಗೊರವಗ ।
ಯಾರವ್ವ ತಾಯಿ ನೀ ಹೇಳ ನಮಗ॥೨॥

**||ಚಾಲ-೨||**

ಧರಣಿ ಹೇಳ್ಯಾಳ ಗೊರವನ ಮುಂದ-ಆಗ ಬಾಯಿ ತೆರದ । ಸಂಬ ಹರಹರಾ ।
ಆಗ ಹಾಸಿಗಿ ತಗದ ತೊಳದ-ಬಳದ ಮುನಿಗಿ ಹೋದ । ಸಂಬ ಹರಹರಾ ॥

**||ಕೂ.ಪ. ||**

ಅಡಗಿ ದಿಡಗ ಮಾಡಿ ನೈವೇದ್ಯ ತಗೊಂಡ ಬಂದಾ ॥ ಮಾಯಾ ॥

**ಚೌಕ – ೬**

**||ನುಡಿ||**

ಬಸವಂತಿ ಅದಾಳು ಧರಣಿ ಕಣ್ಣ ಹೋದಿಂದ ।
ಒಂಬತ್ತು ತಿಂಗಳ ತುಂಬಿ ಹಡದಾಳು ಅಂದ॥೧॥

ಕೈಯಾಡಿಸಿ ನೋಡಿ ಕೇಶವರಾಯಾ ಕಣ್ಣಿಗಿ ನೀರ ತಂದಾ ।
ಮಗ ಎಂಥಾವ ಹುಟ್ಯಾನ ಮಾರಿ ನೋಡಲಿಲ್ಲ ಅವಂದಾ॥೨॥

ಬೆಳಗಿನ ತಾಸ ರಾತ್ರಿ ಗೊರವ ಎದ್ದ ಬಂದಾ ।
ಇದ ಏನ ಸೋಜಿಗ ಅಂತ ಕೈ ಮುಗದಾ॥೩॥

**||ಚಾಲ-೧||**

ನೀರ ಇಟ್ಟ ಎರದಾನ ಮಗನಾ ।
ಗುಡಿ ಸಾರಿಸಿ ಸಾಹಿತ ಮಾಡಿ ತಾನಾ॥೧॥

ಕೇಶವರಾಯ ಕರದಾನ ಗೊರವನಾ ।
ಜೋಕಿ ಮಾಡಂದ ತನ್ನ ಮಗನಾ॥೨॥

**||ಚಾಲ-೨||**

ಅಂತ್ರ ಫಲಾ ದೇವ್ರ ಕೊಟ್ಟಾನ-ಗೊರವ ಓದಾನ-ತನ್ನ ಮನೀಗಿ । ಸಂಬ ಹರಹರಾ ॥
ಗೊರವಗ ಇದ್ರ ಇಬ್ರ ಹೆಂಡರ-ಮಕ್ಕಳಿಲ್ಲದವರ ನಿಂತ್ರ ಬಾಗಿಲಿಗಿ । ಸಂಬ ಹರಹರಾ ॥

**||ಕೂ.ಪ.||**

ಬಾಳ ಪ್ರೀತಿಲಿಂದ ತಗೊಂಡ್ರ ಅವನ ಕೈಯಂದಾ ॥ ಮಾಯಾ ॥

**ಚೌಕ – ೭**

**॥ನುಡಿ॥**

ಹೊತ್ತಿ ತಗಿಸಿ ನೋಡಿ ಹೆಸರ ಇಟ್ಟಾರ ಶ್ರವಣಾ ।
ಹೋಲಿಕಿ ನೋಡಿದರ ಚಲುವಿಕಿ ಸೂರ್ಯನ ಕಿರಣಾ॥೧॥

ಒಂಬತ್ತ ವರ್ಷ ತುಂಬಿ ಹರಿ ಬಂದಿತೊ ಬಣ್ಣಾ ।
ಹಡದ ತಾಯಿ ತಂದಿದ ಗೊತ್ತ ಇಲ್ಲ ಶ್ರವಣಾ॥೨॥

ಗೊರವ ಹೇಳತಾನ ಹೆಂಡತಿಗಿ ತಗದ ಒಂದ ಕಲ್ಪನಾ ।
ಗುಡಿಗಿ ಹಚಿಗುಡಬ್ಯಾಡ ಗುಲಾಮ ಬಾಳ ಶ್ರವಣಾ॥೩॥

**॥ಚಾಲ-೧॥**

ಇಷ್ಟ ಹೇಳಿ ಹ್ವಾದ ಊರೀಗಿ ।
ಹೆಂಡತಿ ಹೂ ತಂದಾಳ ದೇವ್ರೀಗಿ॥೧॥

ಶ್ರವಣ ಬಂದಾನ ಇದರೀಗಿ ।
ತಾರವ್ವ ಹೋಗತೀನ ಗುಡಿಗಿ॥೨॥

**॥ಚಾಲ-೨॥**

ತಾನಾಗಿ ದೇವರಿಗಿ ಹೋದ-ಗುಡ್ಯಾಗ ನೀವ್ಯಾರಂದ-ನೋಡಿ ಸಿಟ್ಟಾದ ।
ಸಂಬ ಹರಹರಾ ॥
ಕಾಲ ಹಿಡದ ಎಳದ ಒಗದ-ಪೂಜಿ ಮಾಡಿಽದ-ತಿರಗಿ ತಾ ಬಂದ ।
ಸಂಬ ಹರಹರಾ ॥

**॥ಕೂ.ಪ.॥**

ಗೊರವ ಬಂದ ಕೇಳತಾನ ಪೂಜಿಗಿ ಯಾರ ಹೋಗಿದ್ರಿ ಇಂದಾ ॥ ಮಾಯಾ ॥

**ಚೌಕ – ೮**

**॥**ನುಡಿ॥ಇಷ್ಟ ಕೇಳಿ ಗೊರವ ತಿರಗಿ ಬಂದಾನ ಹೊರಳಿ ।
ಬ್ಯಾಸಗಿ ಬಿಸಿಲ ಆರತಾಸ ಮಧ್ಯಾನ ವ್ಯಾಳಿ॥೧॥

ತ್ಯಾಕ್ಕಿಲೆ ಹಾದ ಓದಾನು ಕೈಯೆಲ್ಲಾ ಎದ್ದಾವ ಗುರಳಿ।
ನೀರ ಕುಡಿಸಿ ಇಬ್ಬರಿಗಿ ಬೀಸತಾನ ಆಗ ಗಾಳಿ॥೨॥

ಅವನ ಬಿಟ್ಟ ಬಂದ ಮನ್ಯಾಗ ಮಡದ್ಯಾರಿಗಿ ಹೇಳಿ।
ಹಡದವರನ ನೋಡಲಿಲ್ಲ ನಮ್ಮನೇನ ನೋಡತಾನ ನಾಳಿ॥೩॥

**||ಚಾಲ-೧||**

ಶ್ರವಣ ತಂದಾನ ಕಣ್ಣಿಗಿ ನೀರಾ।
ಯಾರವ್ವ ನನ್ನ ಹಡದವರಾ॥೧॥

ನಾವು ಅಲ್ಲ ನಿನ್ನ ಹಡದವರಾ।
ನಿನ್ನ ತಾಯಿ-ತಂದಿ ನೋಡ ಅವರಾ॥೨॥

**||ಚಾಲ-೨||**

ಆವಾಗ ಕಾವಡಿ ಮಾಡಿ-ತಾಯಿ ತಂದಿನ ಕೂಡಿ-ಹೆಗಲಿಗೆ ಹಾಕಿದ್ದಾ।
ಸಂಬ ಹರಹರಾ ॥
ತಾಯಿ ತಂದಿಗಿ ಅದು ನೀರಡಿಕಿ-ಕಾವಡಿ ಗಿಡಿಕ ಹಾಕಿ ನಿರೀಗೆ ಹೋದಾ।
ಸಂಬ ಹರಹರಾ ॥

**||ಕೂ.ಪ.||**

ಹುಡಿಕಿ ಗಂಟಹಾಕಿ ಯಲ್ಲಾ ಕೂನ ಮಾಡಿದ್ದಾ ॥ ಮಾಯಾ ॥

**ಚೌಕ – ೬**

**||ನುಡಿ||**

ನೀರ ತುಂಬತಿದ್ದ ಬಾಣ ಒಗದ ದಶರಥ ನೋಡಿ।
ರಾಮ ಅಂಬು ಶಬ್ದ ಕೇಳಿ ಮತ್ತ ಬಂದಾನ ಓಡಿ॥೧॥

ಮರಣ ಹೊಂದೀನ ಮಾವಾ ಮಾತ ಕೇಳ ಒಂದ ನುಡಿ।
ನಮ್ಮ ತಾಯಿ-ತಂದಿಗಿ ನೀರ ಒಯ್ಯ ಲಗುಮಾಡಿ॥೨॥

ಮಾತಾಡದ ನೀರ ಓದ ಬಾಯಿಗಿ ಹಚ್ಯಾನ ಗಿಂಡಿ।
ನೀರ ಕುಡಸತಿಯಲ್ಲಪ್ಪ ಯಾಕ ಬ್ಯಾಸರಕಿ ಮಾಡಿ॥೩॥

**||ಚಾಲ-೧||**

ನಾ ಮಗಾ ಅಲ್ಲವ್ವಾ ದಶರಥಾ ।
ಶ್ರವಣಗ ಬಾಣ ಬಡದಿತ್ತಾ||೧||

ಕಾವಡಿ ಕಟ್ಟಿ ಹೆಗಲ ಮ್ಯಾಗ ಹೊತ್ತಾ ।
ಶ್ರವಣನ ಹಂತೇಲಿ ಇಳಸಿದ ಮತ್ತಾ||೨||

**||ಚಾಲ-೨||**

ಶ್ರವಣ ಕೇಳಿದ ಆವಾಗ-ಸುಡಗಾಡ ಇಲ್ಲದ ಜಾಗ-ಕಿಚ್ಚಕುಡ ಅಂದಾ ಸಂಬ ಹರಹರಾ
ಬಾಣಕಿತ್ತ ಇಟ್ಟ ತೆಳಗ-ಸುಡಗಾಡ ಇಲ್ಲದ ಜಾಗ-ದಶರಥ ತಿರಗಿ
ತಾ ಬಂದ । ಸಂಬ ಹರಹರಾ

**||ಕೂ.ಪ.||**

ತನ್ನ ಅಂಗೈ ಒಳಗ ಶರಗ ಒಡ್ಡ್ಯಾನು ತಂದಾ || ಮಾಯಾ ||

**ಚೌಕ – ೧೦**

**||ನುಡಿ||**

ಭಸ್ಮ ಮಾಡಿದ ದಶರಥ ತನ್ನ ಅಂಗೈಯಂದಾ ।
ಪಿಂಡ ಉತ್ಪತ್ತಿ ರಾಮಾಯಣ ಆಗೂದು ಮುಂದಾ||೧||

ಬಲ್ಲವರ ಕೇಳರಿ ನೀವು ತೇರದಾಳಕ ಬಂದಾ ।
ಪ್ರಭು ಸ್ವಾಮಿ ಜಾತರಿ ಕಡಿ ಸೋಮವಾರ ಆಗೂದಾ||೨||

ವಸ್ತಾದ ಅಣ್ಣಾರಾಮು ಹಸ್ತ ಇಟ್ಟಾನು ಚಂದಾ ।
ಬಸಲಿಂಗ ಹೇಳ್ಯಾನು ಶಾಸ್ತ್ರ ಶ್ರವಣನ ಸಂದಾ||೩||

**||ಚಾಲ-೧||**

ಕೇಶವ ದಶರಥಗ ಅಂದ ಒಂದ ನುಡಿ ।
ಮಗಾ ಅಂದ ಸತ್ತಿಯೊ ನೆನಪ ಮಾಡಿ||೧||

ತಿರತಿರಗಿ ಹುಡುಗುರದ ನೋಡಿ ।
ನಾಗರಹಾವ ಬಂದಾಂಗ ಭೋರ್ಯಾಡಿ||೨||

**||ಚಾಲ-೨||**

ಶಿವಲಿಂಗ ಚನ್ನನ ಅಕ್ಷರಾ - ಅವರ ವಿಸ್ತಾರ-ಸೋಸಿದ ಸಾರಾ । ಸಂಬ ಹರಹರಾ ।
ಪ್ರಭು ಮಾಡಿದ ಕೇಳ್ರಿ ಹೊಸತರಾ-ಹಾಡ ತರತರಾ-ಚೊಕ್ಕ ಬಂಗಾರಾ-
ಸಂಬ ಹರಹರಾ ॥

**||ಕೂ.ಪ.||**

ಹರತ ಅಣ್ಣಾರಾಮ ಹಾಡೂದ ಕೇಳ್ರಿ ಒಳೆ ಚಂದಾ ॥ ಮಾಯಾ ॥

***ರಚನೆ :*** ಹರಿತ ಅಣ್ಣಾರಾಮ
***ಕೃತಿ :*** ಚಾಪ ಹಾಕತೀವಿ ದಪ್ಪಿನ ಮ್ಯಾಲ

## ೨೬. ಸೀತಾಪಹರಣ

**||ಪಲ್ಲ||**

ರಾಮಚಂದ್ರ ಲಕ್ಷ್ಮಣ ಸೀತಾ ಮೂರು ಮಂದಿ ಕೂಡಿ ಬಿಟ್ಟಹೋದ್ರ
ಅಯೋಧ್ಯಾಪೂರ ಕಾಡ ಸೇರಿ ।
ಅವರಿಗೆ ಹದಿನಾಕ ಪಟ್ಟಾ ವನವಾಸ ಇತ್ತ ಮುಂಚೆ ಪೂರ್ವಿ ।
ಹೆಂತಾ ಕಾಡೂಕಾಲ ಬತ್ತ ಅವರ ದೈವ ಕಡಿಮಿ ॥
ದ್ರೋಣ ಕಾಂಡವನದ ಒಳಗ ದುಃಖದಲ್ಲಿ ಇದ್ದಾರವರು -
ಎದ್ದ ಹೋದರ ಹದ್ದ ಬಡದಂಗ ಭೂಮಿ ।
ಬಾಳಾತ ಜುಲಮಿ ॥

**ಚೌಕ – ೧**

**||ನುಡಿ||**

ಕಲ್ಲನಾರ ಮದಿಯನುಟ್ಟ ಹುಲ್ಲ ಹಾಂವ ಚೇಳಿನಾಗ ಜಲ್ಲ ಹತ್ತಿ ತಿರಗತಾರ ಬರಿಗಾಲ ।
ಮದಿ ಹುರಿ ತಲಿಗೆ ಸುತ್ತಿದಾರ ಹಾಕಿ ಹೆಣೋಲ ।
ಮದಿ ಚರಿ ಉಡದಾರ ಕಟ್ಟಿದಾರ ಖುಷಿ ಡವಲಾ ॥
ಮದಿ ಚರಿ ಹೊಸದ ಮೆಯ್ಯಾಗ ಅಂಗಿ ಮಾಡಿ ತೊಟ್ಟಾರವರು ಮಂದಿ
ಹೊರತಾರ ಅಂಗಿ ಅರಿಬಿಲ್ಲಾ ।
ಹಿಡದಾರ ಬಾಣ ಬಿಲ್ಲಾ||೧||

ಮದಿ ಸೀರಿ ಉಟ್ಟಾಳ ಸೀತಾ ಮದಿ ಕುಸಬಾ ತೊಟ್ಟಾಳಾಕಿ ಮದಿಚರಿ
ಕಯ್ಯಾಗ ಕಟ್ಯಾಳ ಬಳಿಯ ಇಲ್ಲಾ ।
ಕಟಗಿ ಗುಳದಾಳಿ ಕಟ್ಟಿದಾಳ ತನ್ನ ಎದಿಯ ಮ್ಯಾಲ ।
ಕಿಂವ್ಯಾಗ ವಾಲಿಜೋಡ ಇಟ್ಟಾಳಾಕಿ ಹೊಸದ ಹುಲ್ಲಾ ॥
ಮನಿ ಇಲ್ಲ ಮಾರ ಇಲ್ಲ ತೋಸಿಗೊಂಡ ಒಣಗಸತಾರ ಆರತಿಂಗಳದಿನಾ
ತಂಡಿ ಮಳಗಾಲಾ ।
ಬ್ಯಾಸಿಗಿ ಬಿಸಲಾ॥೨॥

ಗಡ್ಡ ಗೆಣಸ ತಿಂದ  ಅವರು ಗಿರಿಗುಡ್ಡವನದ ಒಳಗ ಗಿಡದ ಗಿಣ್ಣ
ತಿಂಬುತಾರ ಹಸಿಯ ತಪ್ಪಲಾ ।
ಕಾರಿಬಾರಿಕಾಯಿ ಕವಳಿಕಾಯಿ ಹಣ್ಣ ಹಂಪಲಾ ।
ಹುಲ್ಲ ಹುಣಚಿನಬೀಜ ತಿಂಬುತಾರ ಹೆಂತಾ ಕಾಲಾ ॥
ಅನ್ನ ಅನ್ನು ಅಂತ ಕೂನ ಪುನಃ ಅವರು ಕಾಣಲಿಲ್ಲ ದಿನಾಹಾಕತಾರ
ಹೊತ್ತ ಮಾಡಿ ಮಜಲಾ ।
ಹಿಂಗ ಅನುಗಾಲಾ॥೩॥

**ಚೌಕ – ೨**

**॥ನುಡಿ॥**

ರಾಮಚಂದ್ರ ಹೊಂಟನಿಂತ ರಾಣಿ ಬಿಟ್ಟ ಹೋಗತೀನ ನಾರಿ ನನ್ನ
ಮುಖ ನೋಡ ಹೊರಳಿ ತಿರಗಿ ।
ನಾ ಬೆಟ್ಟಿ ಆಗುಹಂತಾ ಕಾಲ ಬಿತ್ತ ಬಿರಿಗಿ ।
ನಾ ಹೋದ ಬಳಿಕ ಹುಚ್ಚ ಹತ್ತಿ ಬಾಳ ಮರಗಿ ॥
ಲಕ್ಷ್ಮಣನ ಕಾವಲಿಟ್ಟ ನಿಷ್ಠುರ ಮಾತ ಹೇಳಿ ಹೋದ ಜೋಕಿ
ಮಾಡಕೊಂಡ ಇರೊ ಜಾನಕಿಗಿ ।
ಬಾಳ ಇಟ್ಟ ನಂಬಿಗಿ॥೧॥

ಹಕ್ಕಿ ಬೆನ್ನ ಹತ್ತಿ ಹೋದ ಸಿಕ್ಕಿತಂತ ವನದ ಒಳಗ ಕೂಗತಾನ
ಬಾಗತಾನ ಹಾಕಿ ಗುದಮುರಗಿ ।
ಅದು ಮಲುಮಾಡಿ ಎಳದ ಒಯ್ತು ದೂರ ಮರಿಗಿ ।
ನಿತ್ತ ಬಾಣ ಹೊಡೆದ ಬಾಯಮಾಡಿ ಬಂದ ಸಿಟ್ಟಿಗಿ ॥
ಕಪಟ ರೂಪದಿಂದ ಅದು ಕರಗಿ ಹೋತ ಲಂಕಾದಾಗ ರಾಮರಾಮ
ಅಂತ ಬಿದ್ದ ಬಾಳ ಮರುಗಿ ।
ಗೊತ್ತ ಇಲ್ಲ ಯಾರಿಗಿ॥೨॥

**॥ಚಾಲ॥**

ಶಬ್ದಾತ ರಾಮನದನಿ-ಇಲ್ಲ ಅಂವ ಸನಿ-ಕೇಳಿದಾಳ ಸೀತಾ।
ಬಡಕೊಂಡ ಎದಿಗಿ ತಿಳವುsತಾ॥೧॥

ರಾಮನ್ನಹಕ್ಕಿ ಹೊಡದೀತ-ನನಗ ತಿಳದೀತ-ಸ್ಮರಣಿ ಮಾಡುsತ।
ಬಿಡತಾನ ಪ್ರಾಣ ನನ್ನ ಕಾಂತ॥೨॥

**॥ದುಯೇರಿ॥**

ಲಕ್ಷ್ಮಣ ಲಗು ಹೋಗಿನ್ನ। ಅವನ ಬೆನ್ನ॥
ಹ್ಯಾಂಗ ಬಿಟ್ಟ ನಿಂತ್ಯೊ ಆತನ್ನ। ನಿನ್ನ ಮನಾ॥
ಅವನಿನಗ ಮಾಡಿದಾನ ಏನ। ಹೇಳಕೂನಾ॥

**॥ಕೂ.ಪ.॥**

ಕಾಂತ ಮಡದ ಹೋದ ಬಳಿಕ ಸಂತೋಷ ಏನೊ ನಿನ್ನ ಮನಕ -
ನನ್ನ ಗುಡ ಇರಬೇಕಂತಿ ಜಲ್ಮಾ ಜಲ್ಮಿ।
ಹಿಂಗ ಏಸದಿನಾ ಭಾವಿಸತಿದ್ಯೊ ಬಾಳಧರ್ಮಿ।
ನಾ ಕೈವಶ ಆದೀನೇನೊ ನಿನಗ ಬಾಳ ಬಲಿಮಿ॥ ದ್ರೋಣಕಾಂಡ॥೨॥

**ಚೌಕ – ೩**

**॥ನುಡಿ॥**

ಸೀತಾನ ಮಾತ ಕೇಳಿದಾಗ ಸೋತ-ಬಾಣ ಬಡದಾಂಗಾತ
ಅಳತ ಬಿದ್ದ ಲಕ್ಷ್ಮಣ ಧರಣಿ ಮ್ಯಾಗ।
ಹೆಂತಾ ಕೆಟ್ಟ ಶಬ್ದ ಮಾತನಾಡಿದೆವ್ವ ನನಗ।
ನಾ ಸಿರಾ ಕೊಯ್ಕೋಳ್ಳೇನ ನಿನ್ನ ಮುಂದ ಈಗ॥
ಬಿಟ್ಟ ಹೋಗತೀನ ಇರ ಪೃಷ್ಟ ಮಾರಿ ನೋಡೂದಿಲ್ಲ ಪೆಟ್ಟ
ಹಚ್ಚಿದೆವ್ವ ನನ್ನ ದೇಹದಾಗ।
ತಿಳಿಲಿಲ್ಲ ನಿನಗ॥೧॥

ಏಳು ಮಂಡಲ ಬರದ ಇಟ್ಟ-ಹೇಳಿಕೇಳಿ ಜಾನಕಿಗೆ-ಗಾಳಿಪರಿ
ಆಗಿಹೋದ ವನದ ಒಳಗ।
ರಾಮ ರಾಮ ಎಂಬು ಶಬ್ದ ಹಿಡಿದ ಬಾಯಿ ಒಳಗ।
ಲಕ್ಷ ಯೋಜನಕ ಹೋಗಿ ಕೂಡಿದಾನ ರಾಮಚಂದ್ರಗ।
ಹತ್ತ ತೆಲಿ ಭುಜಗಳು ಗುಪ್ತ ಮಾಡಿ ರಾವಣೇಶ್ವರ ಬಡವ ಆಗಿ ಬಳಲತಾನ ನಿತ್ತ ಹೊರಗ।
ದಯಾ ಮಾಡ ನನಗ॥೨॥

ಕಪಟ ರೂಪ ತಿಳೀದ ಸೀತಾ ಅಗಟಿನಿಂತ-ಕೇಳತಾಳ
ಬಗಟಿ ಏಳು ಮಂಡಲದಾಟಿ ಬರಲಿ ಇನ್ಯಾಂಗ ।
ನಾ ನೀಡಬಾರದಂಬು ಬುದ್ಧಿ ಇಲ್ಲೊ ನಿನಗ ॥
ನನ್ನ ಜೋಡಿನ ಪುರುಷರ ಹೋಗ್ಯಾರ ಇಲ್ಲೊ ಸನಿದಾಗ ॥
ಹೇಳತಾನ ರಾವಣೇಶ್ವರ ಏಳು ಮಂಡಲದಾಟಿ ನೀಡಿದ ಕೋಟಿ ಅಯ್ತಿ ರಾಮ-ಲಕ್ಷ್ಮ
ಮಾಯಾ ಸೀತಾ ನಿನಗ॥೩॥

**॥ಚಾಲ॥**

ಇಷ್ಟ ಮಾತ ಕೇಳಿ ಖುಷಿಯಾಲ-ಏಳು ಮಂಡಲ-ದಾಟಿ ಬಂದ
ರಾವಣನ ಕೈಯಾಗ ಸಿಕ್ಕಾಳು॥೧॥

ಹತ್ತ ತೆಲಿಯ ತಗದ ಅರಭಾಟ-ನೋಡ್ಯಾಳ ಕಣ್ಮುಟ್ಟ-ಬೊಬ್ಬೆಹೊಡದ
ನೆಲ ಬಗಟಿ ಭೂಮ್ಯಾಗ ಹೊಗತಾಳು॥೨॥

**॥ದುಯೇರಿ॥**

ಅಯ್ಯೋ ಕಾಂತ ಹ್ವಾದ್ಯೋ ಯಾವಕಡಿ । ಘಾತ ಮಾಡಿ ॥
ಬಡಕೊಂಡ ಎದಿಗೆ ಭೋರ್ಯಾಡಿ । ಹೊರಳ್ಯಾಡಿ ॥

**॥ಕೂ.ಪ.॥**

ಅಬ್ಬರದಿಂದ ರಾವಣೇಶ್ವರ ಜಬರಮಾಡಿ ಜಾನಕಿನ ತೀವ್ರದಿಂದ
ರಥದಾಗ ಹಾಕ್ಯಾನ ಹೆಂತಾ ....
ಹೆಂತಾ ಮೂಗಾವುದ ರಥಾ ಹೋತ ಅವನ ಮಾತಾಮಿ ।
ಅಲ್ಲಿ ಜಟಾ ಪಕ್ಷಿ ಗಂಟಬಿತ್ತ ನೋಡ ಬಾತಾಮಿ ॥

**ಚೌಕ – ೪**

**॥ನುಡಿ॥**

ಪಕ್ಷಿ ಮಾತ ಪರಾಕ್ರಮಿ ಸಾಕ್ಷಿ ಮರಣ ಕೇಳಿ ಅಂವ ರಾಕ್ಷಿ ದೈವ
ರೆಕ್ಕಿಕಿತ್ತ ಮುರದ
ಅಲ್ಲಿ ಜಟಾಪಕ್ಷಿ ನೆಲಕ್ಕ ಬಿದ್ದ ಆದ ಹೈರಾಣಾ ॥
ಕೇಶವಮಾರ್ಗದಿಂದ ರಥಾ ಹೊಡದ ನೋಡ ರಾವಣ ॥
ಕಣ್ಣ ಮುಚ್ಚಿ ಬಿದ್ದ ಸೀತಾ ಹೆಣ್ಣ ಬಳಲತಾಳ ತನ್ನ ವಸ್ತ ಎಲ್ಲಾ ಒಗದ ಓದ
ಮುಂದ ಆತ ಕಠಿಣ॥೧॥

ಒಂದ ಸಮುದ್ರ ದಾಟಿ ಯುಗತ್ಕಾಂಡ ಲಂಕಾದಾಗ ಅಶೋಕ...
ಬನದ ಒಳಗ ಇಟ್ಟ...
ಕಾವಲ ಬಂದು ಬಸ್ತ ಹಿರದ ಕತ್ತಿ ಬಿಲ್ಲ ಬಾಣಾ ।
ರಾಜಹಂಸ ಬಂದಿ ಹಾಕಿದಾಂಗ ಬಿತ್ತ ಕಠಿಣ ॥
ರಾಮಚಂದ್ರ ಲಕ್ಷ್ಮಣ ತಿರಗಿ ಬಂದ ನೋಡತಾರ ಸೀತಾ ಇಲ್ಲ ಹಾರಿತ....
ಗುಡ್ಡ ಅಡವಿ ಆರ್ಯಾಣ॥೨॥

ಘಾತ ಆತ ಲಕ್ಷ್ಮಣ ಸೀತಾ ಇಲ್ಲ ಕುಟಿರ ಒಳಗ ರಾಮಚಂದ್ರ
ನೆಲಕಬಿದ್ದ ಆದೊ ಹೈರಾಣಾ ।
ಅಯ್ಯೊ ಸೀತಾ ಸೀತಾ ಆಗಲೆಂದೊ ನನಗ ಮರಣ ।
ಜೀವ ಹುಲ್ಲಸರಿ ಕಲ್ಲಪಡಿಗೆ ಹಾದ ನಾರಾಯಣ ॥
ಲಕ್ಷ್ಮಣ ತೆಕ್ಕಿ ಹಾದ ಎದಿಗೆ ಅಮಚಿಕೊಂಡ ದುಃಖ ಧೈರ್ಯ ಹೇಳತಾನ
ಮಾತ ಕೇಳೊ ಅಣ್ಣಾ ॥
ಆತ ನಿರ್ವಾಣಾ॥೨॥

**||ಚಾಲ||**

ವಾಲ್ಮೀಕಿ ಬರೆದ ರಾಮಾಯಣ-ಪೂರ್ವ ನಮ್ಮ ಪುಣ್ಯ-ಹಿಂಗ ಆಗೂದ ।
ಇದು ನಮಗ ಎಂದಿಗೂ ತೆಪ್ಪದ॥೧॥

ದುಃಖನುಂಗ ಹೊಟ್ಟ್ಯಾಗಿನ ಉರಿ-ಸೀತಾನ ಮರಿ-ಮುಂದ ಅಡ್ಡ ಬಿಽದ್ದ ।
ಹಣಿಹಚ್ಚಿ ಚರಣ ಹಿಡದಾ॥೨॥

ಕಣ್ಣೀರ ಒರಿಸಿ ಹಿಂಗ ಹೇಳಿ-ಮಾರಿ ಇನ್ನ ತೊಳಿ-ಧೈರ್ಯ ಹೇಳಿಽದ ।
ನಿನ್ನ ಸೇವಾ ಮಾಡತೀನ ಸದಾ॥೩॥

**||ದುಯೇರಿ||**

ಕವಿಯಲ್ಲ ಮದರಖಂಡಿ ಊರ । ಜಾಗೀರ ॥
ಬಲಭೀಮಸೈನ ದೇವರ । ವಜ್ಜರ ॥
ಹುಸೇನಸಾಬ ವಸ್ತಾದ ಶಾಹೀರ । ಗಂಭೀರ ॥

**||ಕೂ.ಪ.||**

ಕವಿಯಲ್ಲ ಅಣ್ಣಾರಾಮ ಕಲಿದ ಒಳಗ ಬೇಡಿ ಬಂದ ಕವಿತಕ್ಕ ಸದ್ಗುರು ಆದವಲ್ಕಿ ।
ಬರದ ಭಾಗವತ ಹರಿಲಿಲ್ಲ ಎಲ್ಲಾ ಬಲಿಮಿ ।
ಈ ಪದ ಕೇಳಿದವರಿಗೆ ಅಽತಿ ಬಾಳ ಪೋಲಿಮಿ । ದ್ರೋಣಕಾಂಡ॥೪॥

***ರಚನೆ :*** ಹುಸೇನ ಸಾಬ ವಸ್ತಾದ

***ಕೃತಿ :*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೨೭. ಕೊರವಂಜಿ

**||ಪಲ್ಲ||**

ಮಾರನಾಟಕೆ ತಾನು ಬಾರದೆ ನಿಂತಾನು ಸತ್ಯಭಾಮಾ ಮಾಡೂಳು ಮಾಶೋಕವು |
ಎಂದಮ್ಮಾ ಬಂದಾನು ವಾಸುದೇವಕಂದನು ಚಂದಮ್ಮ ತೊರದು ನರಲೋಕವು |
ಇಡಲಾರೆ ಅಳಂಕಾರ ನೋಡಲಾರೆ ಶೃಂಗಾರ ಬಿಡಲಾರೆ ಕಾಣದೆ ಸ್ವಾಮಿ ಮುಖವು |
ಮನಸಿಗೆ ನಿದ್ರಿಲ್ಲ ನೆನಸು ಸಮಯದೊಳು ಕನಸಿನ ಪರಿಯಂತೆ ಈ ದುಃಖವು |
ಸ್ತ್ರೀಯರ ಜಲ್ಮಕ ಇಲ್ಲ ಸುಖವು ||

**ಚೌಕ – ೧**

**||ನುಡಿ||**

ಅಷ್ಟ ಐಶ್ವರ್ಯ ಇಷ್ಟಿದ್ದ ಏನ ಫಲಾ ಕಷ್ಟವ ಪಡಬೇಕ ಎಷ್ಟಮ್ಮಾ
ಗೊಲ್ಲರ ಹುಡಿಗಿಂವ ಅಲ್ಲದ ಮಾಡಾಂವ ಹಾಲಮಸರ ಕುಡದಂವ ನಷ್ಟಮ್ಮಾ |
ಮ್ಯಾಲ ತುಡಗರ ಒಳಗ ಕೋಲಾಟ ಆಡಾಂವ ಅಲಲ ಬಿಡಾಂವಲ್ಲ ಸ್ಪಷ್ಟಮ್ಮಾ |
ಇಂದು ಗೋವಿಂದಗ ತಂದು ಮುಕುಂದಗ ಚಂದವಾಗಿ ತೋರಿದರ ಸ್ಪಷ್ಟಮ್ಮಾ
ಈತಗ ಕುಲಯಿಲ್ಲ ಭ್ರಷ್ಟಮ್ಮಾ||೧||

ಪಾಂಡವರನ್ನ ಕಡಿಹುಟ್ಟು ದೊಡ್ಡವರನ್ನ ಮಾಡಿಟ್ಟ ಕಾಡಿದವರ್ನ
ಕಾಯಲಿಲ್ಲ ಕ್ಯಾಟಮ್ಮಾ |
ಶ್ರೀಪಾಲ ವಕ್ಕರದಂತೆ ಅನ್ಯಾಯ ಮಾಡದಂತೆ ಆಶೀರ್ವಾದ ದೈತ್ಯಗ ಕೊಟ್ಟಮ್ಮಾ |
ಮೈಸಾಬ ಇದ್ದಲ್ಲಿ ಶಿಶುಪಾಲ ಬಂದಲ್ಲಿ ಸುದರ್ಶನ ಅವನ ಮ್ಯಾಲ ಬಿಟ್ಟಮ್ಮಾ |
ಕಲ್ಲ ಮನಸಿನಾಂವ ನಿಲ್ಲಲಾರದೆ ಜೀಂವ ಒಲ್ಲೆಂದು ಹೋಗದೆ ಸೃಟ್ಟಮ್ಮ
ಬರವಲ್ಲ ಇಂವ ಬಲ ವಟ್ಟಮ್ಮಾ||೨||

ಹಿಂಡ ಗೋಪ್ಯಾರ ಒಳಗ ಪುಂಡ ಅದಾನ ಇವನ ಕಂಡ್ರ ಬರತತಿ ಸಿಟ್ಟಮ್ಮಾ
ಆದಿ ಅನಾದಿ ಬಾಡಿರಿ  ಬುನಾದಿ ದೇವ-ದೇವರಿಗೆಲ್ಲಾ ಇವ ದಿಟ್ಟಮ್ಮಾ
ಮಾನ ಅಪಮಾನ ಆತಗ ಸವನಾ ಅಭಿಮಾನ ಅವತಾರ ತೊಟ್ಟಮ್ಮಾ |
ವರಗುರು ತಾ ಖರೆ ಮರುಗುತ ಕೂತಿದ್ದ ಭೃಗುಮುನಿ ಲಾತ್ತಿ ಪೆಟ್ಟಮ್ಮಾ |
ಇಷ್ಟೆಲ್ಲಾ ತಾಳಿಕೊಂಡ ಬಂಟಮ್ಮಾ||೩||

**||ಚಾಲ||**

ಕೆಟ್ಟ ಸಂವತಿಮನಿ ಸಿಟ್ಟಿಲಿ ಸೇರಿದ ಬಿಟ್ಟಕೊಟ್ಟ ಬೆರಗಾಗಿ ಹೋದಮ್ಮಾ।
ಕಪಟ ನಾಟಕನ ಆಟವ ತಿಳಿಯದು ಲಂಪಟ ಅವಳಿಗೆ ಆದಮ್ಮಾ।
ಸರಸದಿಂದಲೆ ಕಮಲ ನೇತ್ರಗೆ ಪತ್ರವ ಬರಿಬೇಕವೇಳ ಚಂದಮ್ಮಾ॥

**॥ಕೂ.ಪ.॥**

ಅರಗಿಳಿ ಕೈಯಲ್ಲಿ ಪತ್ರವ ಕಳವೂನು ಉತ್ರವ ತಿಳವೂನು ಮಾಟಕವು॥ ಎಂದಮ್ಮಾ॥

**ಚೌಕ – ೨**

**॥ನುಡಿ॥**

ಶ್ರೀ ಲೋಕದಲ್ಲಿ ನಾಥ ಇರುವಂಥ ಪಾರಿಜಾತ ವರಪುತ್ರ ಆತಗ ಮುಟ್ಟಿಸಿದನೆ।
ನಾಕ ಲೋಕದ ಪುಷ್ಪ ನಾರದಮುನಿ ತಂದು ವಾಸುದೇವ ಕಂದಗ ಮುಟ್ಟಿಸಿದನೆ।
ನರಹರಿ ಪ್ರೇಮದಿ ನಾರಿ ರುಕ್ಮಿಣಿಯ ತುರಬಿನಲಿ ಪುಷ್ಪ ಇಡಸಿದನೆ।
ಅರಮನಿಯೊಳು ಬಂದು ವರಮುನಿ ಹೇಳಿ ಹೋದ ವರ್ಮಕ ಧರ್ಮವ ಮಾಡ್ಸಿದನೆ।
ಅಂದಿಗಿ ಎನ್ನ ಮನ ಒಡಸಿದನೆ॥೧॥

ಹತ್ತ ಅವತಾರ ತಗೊಂಡ ಸರ್ವೆಲ್ಲಾ ಸಾಲ ದೈತ್ಯರನ ಓಡಸಿದನೆ।
ಮಚ್ಛಕೂರ್ಮವರಾಹ ನರಸಿಂಹ ಅವತಾರ ವಾಮನ 'ಬಳಿಗಿ' ಮಣ್ಣ ಕುಡಸಿದನೆ।
ಸೃಷ್ಟಿಗಿ ಪರಶುರಾಮ ನಿಷ್ಕಪಟ ರಘುರಾಮ ಎಂಟನೆಯವ
ಗೋಪಾಲ ಗೋಕುಲ ಕೆಡಸಿದನೆ।
ಬೌದ್ಧ ಕಲಂಕಿ ತಿಳಿವಲ್ದೇನಂತಿ ಕಲಿಯೊಳು ರಣಭೇರಿ ಹೊಡಸಿದನೆ।
ಸಾಧೂರ ಬಿರದವ ನಡಸಿದನೆ॥೨॥

ಕಂಸರಾಜ ಬಲವಂತ ಸತ್ತಹೋದ ಸಾಕ್ಷರತ ಜರಾಸಂಧರಾಜಾ ಭಂಡಸಿದನೆ।
ಕೆಟ್ಟಕಾಲಕ ಅಂವಗ ಕಪಟದಿಂದ ಹತ್ತೂರೊಳಗ ಮುಕ್ಕುಂದಕೋಪಿಲಿ ಸುಡಸಿದನೆ।
ಬಾಣಾಸುರನ ಸಾವಿರ ಭುಜಗಳ ಕಡಸಿದ ರಾಜೇಕ ಹುಲಿಗಾಳಿ ಹಿಡಸಿದನೆ।
ಸದ್ಯಾಗಿ ಪುರಂಧರ ಕಾಯಲಿಲ್ಲ ಭೂಭಾರ ಮಾಯದ ರಾಕ್ಷಸ ಹೊಡಸಿದನೆ।
ಕಾನನ ವನದೊಳು ನಡಸಿದನೆ॥೩॥

**॥ಚಾಲ॥**

ಆತಂದ ಪ್ರಬಲ ಬಲ್ಲವನೆ ಬಲ್ಲ ಬರತಾನೇನ ನೋಡಬೇಕ।
ಪುರುಷ ಇಲ್ಲದ ಒಂದು ವರುಷವ ಆದೀತ ಅರಸಕಿ ತಗೊಂಡೇನ ಸುಡಬೇಕ।
ಸುವಾಸ ಸಂಪಿಗಿ ಪುಷ್ಪದ ಹಾಸಿಗಿ ಅರಸ ಇಲ್ಲದೆ ಏನ ಮಾಡಬೇಕ॥

**॥ಕೂ.ಪ.॥**

ಬಿದ್ದ ಧರಣಿಗೆ ಸಾಯತೀನ ಸೊರಗಿ ಯಾರಿಗೆ ಬೇಕ ಈ ನರಕವು || ಎಂದಮ್ಮಾ ||

**ಚೌಕ – ೩**

**||ನುಡಿ||**

ಸತ್ರಾಜಿತನ ಪುತ್ರ ಮಿತ್ರುಂದು ಗುಣ ನೆನಸಿ ಅಂತ್ರಕೂನ ಜಾಣೋಸಿ ಅಳತಿದ್ದಳು |
ಹಿರಿಭಾವ ಐರಾವಣ ನನ್ನ ದೊರಿ ಮೈರಾವಣ ಪರಿಪರಿಯಿಂದ ಹೇಳಿ ಬಳಲಿದಳು |
ಕಪಟ ಹೇಳಿ ಕೊಂದಾಂಗ ಕೆಟ್ಟಬಾಸಿ ಎನಗ ಮುಟ್ಟಲಿಲ್ಲ ವಚನಕ್ಕ ಹೇಳಿದಳು |
ಹಿಂದಿನ ಮಾತ ಇವ ಇಂದಾಡಿ ಫಲವೇನ ಮಂದ್ಯಾಗ ಹೇಳವಳ್ಳ ಮಲಗಿದಳು |
ಪಂಚಾರತಿ ಮನದೊಳು ಬೆಳಗಿದಳು||೧||

ಹಿಂದಿನ ಕಥಿಸುಡ ಮುಂದ ಆಡೂದಬ್ಯಾಡ ಮಂದಗಮನಿ ಬಾಳ ಸೊರಗಿದಳು |
ಸತ್ಯಭಾಮೆ ಮಾಡು ದುಃಖ ಶೇಷಗ ಆ ಲೆಕ್ಕ ಸಂಖೆಯಾಗದಷ್ಟು ಬಳಲಿದಳು |
ಜಲ ಇಲ್ಲ ಜಲಚರ ವನ ಇಲ್ಲ ವನಚರ ತಳಮಳಸಿದಂಗ ನಾರಿ ಕರಗಿದಳು
ಅನ್ನ ಇಲ್ದ ನಿರಾಧಾರ ನೀರ ಇಲ್ದ ಮರಮರ ನಿದ್ರಿ ಇಲ್ದ ಕಣ್ಣಿಗಿ ಹೊರಳಿದಳು
ಬಂದಲ್ಲಿ ಧರಣಿಗಿ ಎರಗಿದಳು||೨||

ಕೃಷ್ಣ ಆದ ಕೊರವಂಜಿ ಉತ್ಕೃಷ್ಟ ಭಾವ ತೇಜಿ ದೃಷ್ಟಿ ಶೋಕಮಾರಿ ತೋರಿದಳು |
ನಾಲ್ಕಮಾರಿ ಬ್ರಹ್ಮಗ ಬಾಲಕನ ಮಾಡಿ ಬಗಲಾಗ ಲೋಕದಲ್ಲಿ ಡಂಗೂರ ಸಾರಿದಳು
ಜಡಿಕೂಸ ಎತ್ತಿಕೊಂಡ ನಡುವಿನ ಮ್ಯಾಲ ನಿಲ್ಲಿಸಿಕೊಂಡ ನಾಡನಾಡ
ಶೋಕ ಮಾಡಿದಳು
ಮೇಲಾದ ಕೊರವಂಜಿ ಕೋಲನಾಡುತ ಸಹಜ ಸತ್ಯಭಾಂಮಿ
ಮಾಲದೊಳು ಸೇರಿದಳು
ಮೇಲುಪ್ಪರಗಿ ಮಾಲದೊಳು ಏರಿದಳು||೩||

**||ಚಾಲ||**

ಭಾವಕ್ಕಿ ಎದ್ದಾಳ ಧಾವಿಸಿ ಬಂದಾಳ ಶಕುನವ ನಿನಗೊಂದು ಹೇಳತೀನ ||
ಕನಸೀನ ಮಾತಬಲ್ಲೆ ಮನಸೀನ ಮಾತಬಲ್ಲೆ ಧ್ಯಾನಸ್ತವಾಗಿನ್ಯಾಳ್ಳತೀನ ||
ಕೊರವಂಜಿ ನಾನೆ ಸತ್ಯಭಾವಿ ನೀನೆ ಅಂತರಸಾಕ್ಷಿ ಮಾತೊಂದ ಹೇಳತೀನ ||

**||ಕೂ.ಪ.||**

ಪುರುಷರನ ಒಲಸುದ ಬಲ್ಲೆ ಸ್ತ್ರೀಯರನ ಒಲಸುದ ಬಲ್ಲೆ ಆಗಸುದ ಬಲ್ಲೆ
ಆದಿ ಮುಖವು || ಎಂದಮ್ಮಾ ||

**ಚೌಕ – ೪**

**||ನುಡಿ||**

ಸ್ಯಾರಿಮುಕ್ಕ ಕಾಳದಕ್ಕ ಮರತುಂಬ ಜೋಳದಕ್ಕಿ ಹಂತವಳಲ್ಲ ನಾ ಸುಳ್ಳ ಬುರಕಿ ।
ಮಂತ್ರವ ನಾಬಲ್ಲೆ ಯಂತ್ರವ ನಾಬಲ್ಲೆ ತಂತ್ರವ ನಾಬಲ್ಲೆ ಗಿಡ ಮೂಲಕಿ ।
ಹುಚ್ಚ ಮದ್ದ ನಾಬಲ್ಲೆ ಮೆಚ್ಚ ಮದ್ದ ನಾಬಲ್ಲೆ ನೀಚ ವಿಚಾರ ನಾಬಲ್ಲೆ ಬ್ಯಾಸರಕಿ ।
ಹತ್ತು ಅವತಾರ ಬಲ್ಲೆ ಸಪ್ತಸಾಗರ ಬಲ್ಲೆ ನಕ್ಷತ್ರ ಬಲ್ಲೆ ನಾ ಕಡಮುರಿಕಿ ।
ದುಷ್ಟರನ ಕಟ್ಟಸಾಕ್ಕಿ ಹೆಡಮುರಕಿ||೧||

ಶ್ರೀಲೋಕ ನಾಬಲ್ಲೆ ನರಲೋಕ ನಾಬಲ್ಲೆ ವರಲೋಕ ತಪಲೋಕ ಬಲ್ಲಾಕಿ ।
ಮೂಲೋಕ ನಾಬಲ್ಲೆ ಯಮಲೋಕ ನಾಬಲ್ಲೆ ವೈಕುಂಠ ಕೇಳನಾ ನಿಲ್ಲುವಾಕಿ ।
ಸತ್ಯಲೋಕ ನಾಬಲ್ಲೆ ಶಿವಲೋಕ ನಾಬಲ್ಲೆ ಸಪ್ತಲೋಕ ಭೂಮಿ ಸವಲಕ್ಕಿ ।
ಅತಳ ವಿತಳ ಸುತಳ ರಸಾತಳ ತಳಾತಳ ಮಹಾತಳ ಸುತ್ತಕ್ಕಿ ।
ಏಳು ಪಾತಾಳ ಸಲಹುವಂಥಾಕಿ||೨||

ಅಂಡಾಂಡ ನಾಬಲ್ಲೆ ಪಿಂಡಾಂಡ ನಾಬಲ್ಲೆ ಬ್ರಹ್ಮಾಂಡ ನಾಬಲ್ಲೆ ಹೆಚ್ಚಿನಾಕಿ ।
ಕೃತ ತ್ರೈತಾಯುಗ ದ್ವಾಪರ ಕಲಿಯುಗ ನಾಲ್ಕುಯುಗ ದಾಟಿ ಮುಂಚಿನಾಕಿ ।
ಮುಚ್ಚಿದ ಮಾತಗಳ ಬಿಚ್ಚಿ ಆಡಕ್ಕ್ಯಾಲ ಹಚ್ಚಾಕಿ ಸಾರಸಾಕಿ ಮೋಜಿನಾಕಿ ।
ನಿಂದೇನಾಡು ಮಂದಿಗೆ ಎಂದಿಗಿ ಬಿಡವಳಲ್ಲ ಗುದ್ದ್ಯಾಡು ಮಂದಿಗಿ ಬಿಗಸಕ್ಕಿ ।
ಬಂದಿಕಾನೆಯೊಳಗ ಸಿಗಸಕ್ಕಿ||೩||

**||ಚಾಲ||**

ಏಳಮ್ಮಾ ಕೊರವಂಜಿ ಬಾಳಾತ ನನ್ನ ಮರಜಿ ಉಣ್ಣಾಕ ಬಾ ಅಂತ ಕರಿತೀನು ।
ಎರಡೂ ಕರವ ಜೋಡಿಸಿ ಉಪಚಾರ ಮಾಡಿಸಿ ಸಮಾಚಾರ ಹೇಳ ಬಾಯ ತೆರಿತೀನು ।
ಕೊರವಂಜಿ ಉಂಡಾಳ ಬಾಳನ್ನ ತಗೊಂಡಾಳ ಬಿಸಿನೀರ ಕೂಸಿಗಿ ಎರಿತೀನು

**||ಕೂ.ಪ.||**

ಕೂಸಿನ ಎರೆದಾಳ ದೃಷ್ಟಿಯ ಮುರಿದಾಳ ಸಂತೋಷ ಕೊರವಂಜಿ ನಗಿ
ಮುಖವು || ಎಂದಮ್ಮಾ ||

**ಚೌಕ – ೫**

**||ನುಡಿ||**

ಸತ್ಯಭಾಮಿ ಕೇಳಮ್ಮಾ ನಿನ್ನ ಪುರುಷ ಮೇಘಶ್ಯಾಮದೇವ ಕೊರವಂಜಿ ನಾ ಸುಳ್ಳಲ್ಲಾ ।
ಕೃಷ್ಣಂದ ಉತ್ಪತ್ತಿ ವಂಶಾವಳಿ ಕಥಿ ತಿಳಿಸುವೆ ಬೇಚಾಳೀಸ ಬೆಡಗೆಲ್ಲಾ ।
ಹೇಳತೀನ ಸಾಧಾರಣ ಆದಿಯಲ್ಲಿ ನಾರಾಯಣ ಅವನ ಪುತ್ರ ಬ್ರಹ್ಮ ಹೌದಲ್ಲಾ ।

ಬ್ರಹ್ಮನಸುತ ಸೋಮವಂಶಗಾತ್ರ ನಾಲ್ಕನೆಯ ಬ್ರಹ್ಮನಾದ ಸಣ್ಣಬಾಲಾ ।
ಬ್ಯಾರೆ ಬ್ಯಾರೆ ಹೇಳತೀನ ತಪಶೀಲಾ॥೧॥

ಸುಗಂಧ ಪ್ರೇಮನು ಸುವೈಚರಿತ್ರನು ಮತ್ತೊಬ್ಬ ಏಳನೆಯವ ದೈತ್ಯಪಾಲ ।
ಸುಂದರ ಕಾಯನು ಮೂಲಚಂದರಾಯನು ಹತ್ತನೆಯವ ಭೃಗು ಜಗಪಾಲಾ ।
ಪಾತಕಂದ ಬೆಡಗ ಹನ್ನೊಂದನೆಯ ಯುಗ ಭಾವಾರ್ಥ ನೀನು ತಿಳಿಮೂಲಾ ।
ಹನ್ನೆರಡನೇದವಗ ಸಿತಾಳ ಬಂಧುಗ ಮೃದು ಭಾಗ ಪುತ್ರ ಆದಮ್ಯಾಲಾ ।
ಹದಿಮೂರ ಬೆಡಗಾದುವ ಒಂದು ಪಾಲಾ॥೨॥

ಸಾನು ಸೂಚರ ಮಗ ಅವನಿಂದ ಸುವೇಗ ಸುದರ್ಶನ ಮೊಮ್ಮಗ ಭೂಪಾಲಾ ।
ಬಳಿರಾಮ ಮರಿಮಗ ವಾಸುದೇವ ಜಿರಿಮಗ ಕಡಿಯದಲ್ಲಿ ಹುಟ್ಟಿದ ಗೋಪಾಲಾ ।
ಯಾದವರ ಗೋತ್ರ ಬೇಚಾಳೀಸ ಪುತ್ರ ಪವಿತ್ರ ಮಾಡಾಂವ ಜಗಪಾಲಾ ।
ಸತ್ಯಭಾಂವಿ ತಿಳದಾಳ ತನ್ಮಯ ಆದಾಳ ಕೊರವಂಜಿ ರೂಪಬಿಟ್ಟ ಯದುಕುಲಾ ।
ಇಬ್ಬರದು ಆದೀತ ಅನುಕೂಲಾ॥೩॥

**॥ಚಾಲ॥**

ಸ್ವರ್ಗದಿಂದ ಕೃಷ್ಣನಾಥ ಕಿತ್ತತಂದ ಪಾರಿಜಾತ ಸತ್ಯಭಾಂವಿ
ಬಾಗಿಲದೊಳಗ ನಿಲಸಿದನೆ ।
ಸತ್ಯಭಾಂವಿ ರುಕ್ಮಿಣಿ ಇಬ್ಬರದ ಚಕ್ರಪಾಣಿ ಮನಕ ಮನ ಕೂಡಿಸಿ ಒಲಸಿದನೆ ।
ಕೊರವಂಜಿ ವಿಸ್ತಾರ ಹೇಳುದಕ ಮುಕ್ತಾರ ಅಪರಾಳ ತಮ್ಮಣ್ಣ ಬಲ್ಲಿದನೆ ॥

**॥ಕೂ.ಪ.॥**

ಕಲ್ಲ ಅಂಕಲಿಗೆವರು ತುಸುತುಸು ಬಲ್ಲವರು ಮಾಲಿಂಗ ಇಮಾಮಭಾಯಿ
ಕವತೂಕವು ॥ಎಂದಮ್ಮಾ॥

***ರಚನೆ :*** ಮಾಲಿಂಗ ಇಮಾಮಭಾಯಿ
***ಕೃತಿ :*** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೨೮. ಸತ್ಯಭಾಮಾ ವಿರಹ

ಸತ್ರಾಜಿತನ ಪುತ್ರಿ ಸತ್ಯಭಾಮಾ
ಹೊರಳಿ ಬಿದ್ದಾಳ ದುಃಖದಲಿ ।
ಒಂದು ದಿವಸ ಮುಕ್ಕುಂದನ ಕಾಣದೆ
ಮತ್ತ ಹ್ಯಾಂಗ ತಾಳಿರಲಿ॥ಪಲ್ಲವಿ॥

ಸರಿ ಸವತಿ ಮನಿಗೆ ಹೋಗಿ ಸೇರಿದನವ್ವಾ
ಬಿಟ್ಟು ನನ್ನ ಮಮತಿ
ನಿಮಿಷ ಹೋದರ ಒಂದು ವರ್ಷ ಹೋದ್ಹಾಂಗ
ಆದಿತ ನನ್ನ ಗತಿ
ಪೂರ್ವದಲ್ಲಿ ಮಾಡಿದ್ದ ಕರ್ಮಕ
ಯಾಹ ಏನ ಮಾಡುದೈತಿ
ಬ್ರಹ್ಮ ಬರೆದ ಫಣಿಯಲ್ಲಿ - ನನ್ನ ದೇಹ
ಸುಣ್ಣದ್ಹಾಂಗ ಸುಡತೈತಿ ‖
ಎನ್ನ ಪಾಪ ಏಳೇಳು ಜನಮಕೂ
ತಟ್ಟದ ಬಿಡಬ್ಯಾಡ ಶ್ರೀಪತಿ
ಹೆಣ್ಣು ಹೆಣ್ಣು ಅಂತ ಹಲುಬುತ ನೀ ನೀ -
ರಾಗ ಮಚ್ಛನಾಗೋ ದುರ್ಮತಿ ‖

**||ಚಾಲ||**

ಶ್ರೇಷ್ಠ ದೊರೆಯು ನೀನು ಆಗಲಿ - ನಿನ್ನ
ಅಷ್ಟು ಐಶ್ವರ್ಯ ನಷ್ಟವಾಗಿ ಹೋಗಲಿ
ಎಷ್ಟು ನಾನು ಕಷ್ಟ ತಾಳಲಿ-ಕಪಟ ನಾಟಕನ
ಕೆಟ್ಟ ಬುದ್ಧಿ ಎಷ್ಟು ಪೇಳಲಿ
ಪಟ್ಟ ಮಂಚವ ನೋಡಿದರೆನಗೆ
ಕಷ್ಟ ಸೈರಿಸಲಾರೆನಿಂದು
ಬಿಟ್ಟು ನಾಥನ್ಹ್ಯಾಂಗ ಉಳಿಯಲಿ
ಇಂದು ಎನ್ನ ಪ್ರಾಣ ಹೋಗಲಿ ‖

**||ಧಾಟಿ||**

ಅಮ್ಮಯ್ಯದೂತೆ ಈ ಪರಿ ಸ್ತ್ರೀಯ ದೋಷ

**||ಬದಲು||**

ಅವನಿಗೆ ತಡವದೆ ಬಿಡುವದೇ
ಮಡದಲಿ ಬಿದ್ದು ಕೂರ್ಮನಾಗು
ಇನ್ನಷ್ಟು ಕರಗಿ ಮರಗಿ ಸೊರಗು
ನೀನು ಮಡದಿ ಕಾಣದ ವರಾಹನಾಗು
ಮಲ್ಲಿಗಿ ದುಂಡ ಮಲ್ಲಿಗಿ
ತರಳಾಕ್ಷಿಮಣಿ ತಾನು ತಳಿರು ಹಾಸಿಗೆ ಮೇಲೆ
ಹೊರಳುತಲಿ ಕಣ್ಣು ಮುಚ್ಚುತಲಿ ಹಾಕಿ-

ದರಳು ಮಲ್ಲಿಗಿ ಹಾರು ಚುಚ್ಚುತಲಿ-ಪದ್ಮ
ಸರಳ ಸಂತಾಪವು ಹೆಚ್ಚುತಲಿ-ಕಂಡು
ದುರುಳ ಕೃಷ್ಣನ ಬುದ್ಧಿ ತರಳಾಕ್ಷಿತಾ ಕಂಡ
ಹೊರಳಿ ಬಿದ್ದಾಳಾಗ ಮಂಚದ ಕೆಳಗೆ
ಮಲ್ಲಿಗೆ ದುಂಡ ಮಲ್ಲಿಗೆ

**||ಏರು ||**

ನರಸಿಂಹನಾಗಿ ಕ್ರೂರ ಬುದ್ಧಿಯಿಂದ
ತಿರಗ್ಹೋಗೊ ಅರಣ್ಯದಲಿ
ಒಂದು ದಿವಸ ಮುಕ್ಕುಂದನ ಕಾಣದೇ
ದೂತೆ ಹ್ಯಾಂಗ ತಾಳಲಿ….
ನಾಲ್ವರೊಳಗೆ ನೀ ನನ್ನ
ನಗ್ಗೇಡ ಮಾಡಿದಿ ಈ ಪರಿ||೧ನೆಯ ಚೌಕ||

ಮನಸಿನೊಳಗೆ ಮರುಗಿ ಮರುಗಿ
ಸಾವತೇನೋ ಶ್ರೀಹರಿ
ವಿಧಿಯ ತನಯ ವಿಧಿಯಾಗಿ ಬಂದೆನಗೆ
ಸುದ್ದಿ ಹೇಳಿದ ಇದು ಸರಿ
ಇಂದ್ರಲೋಕದ ಪಾರಿಜಾತ ಕೊಟ್ಟು
ಸವತಿಯ ಕೈ ಸೇರಿ
ಹಿಂತಾ ತಾಪದಿಂದ ಕಾಂತೆ ಬಳಲುವಳು
ತೀರಿಸೊ ನೀನು ಮುರಹರಿ
ಪ್ರಾಯ ಬಂದ ಉಕ್ಕೇರಿ ಹೋಗತತಿ
ಗೋವಿಂದ ಕೇಳೊ ಎನ್ನ ಮೊರಿ

**||ಚಾಲ||**

ನನ್ನ ಶಾಪ ತಟ್ಟಿ ನೀನು ಕಾನನದೊಳಗ
ದನಗಳ ಕಾಯೋ ತಿರುಗಿ
ಇನ್ನು ನಿನಗೆ ಕರುಣೆ ಬಾರದೇ ಮಾತೃಹತ್ಯ
ಘಟಿನಲಿ ಪಂತವಾಗಿ
ಹುಡುಗ ನೀನು ಕಡವ ಹತ್ತಿ ಪೊಡವಿ
ಲೋಪ ಮಾಡು ನೀನು ಈಗ ನೀಗಿ
ತಡವು ಯಾಕೆ ಪ್ರಾಣ ಕೊಡುವೆನು ಹೀಗೆಂದು
ಹೊರಳಿ ಬಿದ್ದಾಳು ಬಿಟ್ಟ ಮಂಚವನು
ಅವ್ವಯ್ಯ ದೂತೆ ಬ್ರಹ್ಮ ಎನ್ನ

ಸ್ತ್ರೀ ಜನ್ಮಕ್ಕೆ ಹಾಕುದಕ್ಕಿಂತ
ಅಡವಿಯಲಿ ಜಡವೃಕ್ಷ ಮಾಡಬಾರದೆ
ಮಲ್ಲಿಗೆ ದುಂಡ ಮಲ್ಲಿಗೆ
ಹ್ಯಾಂಗ ಮಾಡಲಿ ಅಮ್ಮ ಅಂಗಜಪಿತ ಎನ್ನ
ಭಂಗ ಮಾಡಿದ ಕ್ಷಣ ತಾಳಲಾರೆ - ಅವನ
ಸಂಗವಿಲ್ಲದೆ ನಾನು ಬಾಳಲಾರೆ - ರತ್ನ
ರಂಗನ ಬುದ್ಧಿಯ ನೋಡಲಾರೆ
ತಿಂಗಳಾಯಿತು ಅಂಗಸಂಗವು ಇಲ್ಲದೆ
ಹ್ಯಾಂಗ ಸೇರಿದ ನನ್ನ ಸವತಿಯ ಮನಿಗೆ
ಮಲ್ಲಿಗೆ ದುಂಡು ಮಲ್ಲಿಗೆ

**||ಏರು||**

ಕರುಣವಿಲ್ಲದೆ ಕಲ್ಮನ ಮಾಡಿದ
ಬಿಟ್ಟರ ಸಾವತೇನ ಬಳಲಿ
ಒಂದು ದಿವಸ ಮುಕ್ಕುಂದನ ಕಾಣದೆ
ದೂತೆ ಹ್ಯಾಂಗ ತಾಳಲಿ....||೨ನೆಯ ಚೌಕ||

ಕಠಿಣ ಮನಸು ಎಷ್ಟಂತ ಮಾಡಿದಿಯೊ
ತಾಳಲಾರೆ ಸರಿ ನಾನು
ದಾರಿ ನೋಡಿ ಶ್ರೀಹರಿಯನು ಅಂಗದೊಳು
ಕರಗಿ ಮರುಗಿ ಸೊರಗಿದೆನು
ಕ್ಷಣ ಮಾತ್ರ ನಿನ್ನ ಮುಖವ ಕಾಣದೆ
ನೆನೆದು ಪ್ರಾಣ ಕೊಡುವೆನು
ಮೂರು ತಾಪವನು ತಾಳಲಾರದೆ
ಹೊರಳಿ ಹಿಡದಾಳೋ ಕ್ಷಿತಿಯನ್ನು
ಅನ್ನ ನೋಡಿದರ ವೈರಿ ಕಂಡಾಂಗಾ
ಊಟ ಮಾಡಲಾರೆನೋ ನಾನು
ನೀನು ಬಂದು ಚಂದದಿಂದ
ಎನ್ನ ಕೂಡ ಗೋವಿಂದ ಮಾತನಾಡು
ಮಡದಿ ಎಂದು ಕಾಡಿನಲ್ಲಿ ಹುಡುಕುತ ತಿರಗು
ನಿನಗೆ ಬಿಡದೆ ತಟ್ಟಲಿ ಶಾಪ ತಟ್ಟಲಿ
ಶ್ರೀಹರಿಯೆ ನಿನಗ ಕರುಣವಿಲ್ಲೇನೋ
ಉದರದಲಿ ನಿನ್ನ ಉದರದಲಿ

**||ಚಾಲ||**

ಸತ್ರಾಜಿತನ ಪುತ್ರಿ ಸತ್ಯಭಾಂಮಾ
ಅಂತರಂಗದಲಿ ಹೊರಳುದು ಕಂಡು
ಹರಿಯು ತಾನು ಘೋರ ತಾಪ ತಿಳಿದು
ಘೋರ ತಾಪ ಪರಿಹರಿಸಿದನಾಗ
ಮಲ್ಲಿಗೆ ದುಂಡ ಮಲ್ಲಿಗೆ
ಪ್ರಾಂತದೊಳಗ ಬಹು ಶಾಂತ
ಬಾಗೋಡಿಯ ಕಾಂತ
ವಿಶ್ರಮಿಸುವ ಸಿದ್ಧಪತಿ-ನಾ
ನಿತ್ಯ ಮಾಡುವೆ ನಿಮ್ಮ ಸ್ತುತಿ-ಮುತ್ತು
ಮಾಣಿಕ ಸರಗೋಳು ಕವಿಯ ಮತಿ
ಬಹು ವಿಖ್ಯಾತಿ ಗುರುರಾವಜಿ ದಯದಿ
ನಿಧಿತನಾದವನು ನಿಧಿತನಾದವನು
ಹಸ್ತವನಿಟ್ಟರು ಮಸ್ತಕದ ಮ್ಯಾಗೆ
ಮಲ್ಲಿಗೆ ದುಂಡು ಮಲ್ಲಿಗೆ

**||ಏರು||**

ಬಾಳಗೋಪಾಳ ಕೂತ ಹೇಳತಾರ
ಹತ್ತ ಅವತಾರದಲಿ
ಒಂದು ದಿವಸ ಮುಕ್ಕುಂದನ ಕಾಣದೆ
ದೂತೆ ಹ್ಯಾಂಗ ತಾಳಲಿ….||೩ನೆಯ ಚೌಕ||

***ರಚನೆ :*** ಬಾಳಗೋಪಾಳ
***ಕೃತಿ :*** ಬಾಳಗೋಪಾಳನ ಲಾವಣಿಗಳು

## ೧೯. ದ್ರೌಪದಿ ವಸ್ತ್ರಾಪಹರಣ

ಪಾಂಡವರಿಗೆ ಬಂದಿತ ಹೊತ್ತಾ ಬ್ರಹ್ಮ
ಲಿಖಿತ ಯಾರಿಗೆ ತಪ್ಪಿಲ್ಲಾ ಶನಿ
ಹತ್ತಿತಪ್ಪಾ ಕಾಡುವ ಕಾಲಾ ಅವರು
ಲೆತ್ತ ಆಡ್ಯಾರ ಜಗಳದ ಮೂಲಾ
ರಾಜ ಸಂಪತ್ತಿ ದ್ರೌಪತಿ ಸತಿಯನ್ನ
ಕಳದಾರೋ ಎಲ್ಲಾ ಕಳದಾರೋ ಎಲ್ಲಾ||ಪಲ್ಲ||

ವಿದುರ ಹೇಳಿದ ಲೆತ್ತ ಆಡಬ್ಯಾಡಂತ ಕೇಳ
ಲಿಲ್ಲ ಧರ್ಮ ಮಹಾಪಾಶಕ ಬಿದ್ದಾನು

ಧನ ದ್ರವ್ಯ ಪೃಥಿವಿ ಕಳದಾನು ದ್ರೌ-
ಪತಿನ ಮೊದಲ ಮಾಡಿ ಸೋತಾನು
ಹರ್ಷಾದಾನು ದುರ್ಯೋಧನನು ದುರ್ಯೋಧನನು
ಧರ್ಮ ಭೀಮ ಅರ್ಜುನ ಕುಂತ ಸಭಾ
ದೊಳಗ ಕೆಳಗ ಮಾಡ್ಯಾರ ಮುಖವಾ
ದೀನರಾಗಿ ಕುಂತಾರ ನಕುಲ ಸಹದೇವಾ
ಕೈ ಸಾಗದಂಗ ಆಗಿ ಏನೇನು ವೇಳೆ
ತಂದೀತು ದ್ರೌಪತಿಗೆ ಮಾನ ಭಂಗವನು

ಕರ್ಣ ಶಕುನಿ ದುರ್ಯೋಧನನು
ದುಶ್ಯಾಸನ ಕರದ ಹೇಳ್ಯಾರ ಹುಕುಮವನು
ಎಳಕೊಂಡ ಬಾರೋ ಪಾಂಚಾಲಿಯನು
ದುಶ್ಯಾಸನ ಇಷ್ಟ ಕೇಳಿದನು
ತಡಿಲಿಲ್ಲ ಕ್ರೋಧದಿ ನಡದಾನು

ಹಿರದ ಕತ್ತಿ ತೆರದ ಕಣ್ಣ ಕರದ ದ್ರೌಪತಿ
ಹೊರಗ ಬಾರೆ ಅಂದಾನು ಧರ್ಮರಾಜ ನಿನ್ನ ಸೊ
ನೀನಾದೆ ಈಗ ನಮ್ಮೆಲ್ಲರ ಸೊತ್ತವನು
ತಡಮಾಡಬ್ಯಾಡ ನಡೀ ಇನ್ನ
ಸಭಾದೊಳಗ ನೀನು ಸಭಾದೊಳಗ ನೀನು

ದ್ರೌಪತಿ ಅಂತಾಳ ಭಾವಯ್ಯ ಕೈಯ
ಮುಗಿತೇನ ಒಯ್ಯ ಬ್ಯಾಡರೀ
ನಾ ನಿಮ್ಮ ಗಾಂಧಾರಿಗೆ ಸರಿ ಬಿಡರಿ ಕೈಸೇರಿ
ಮಾತ ಕೇಳರಿ ಕೇಳರಿ
ಸಿಟ್ಟಾಗಿ ದುಶ್ಯಾಸನ ಎಳದಾಕಿನ ಬಿರಿಬಿರೀ

**||ಕೂಡಪಲ್ಲ||**

ಎಳಿ ಬ್ಯಾಡೋ ದುರುಳಾ ನನ್ನ
ಬ್ಯಾಟಿಗಾರಗ ಹರಣಿ ಸಿಕ್ಕಂಗ
ಮೀನ ಬಿಸಲ ಒಳಗ ಬಿದ್ದಂಗ
ದ್ರೌಪತಿ ಮಾಡ್ಯಾಳ ದುಃಖಾ
ಭೂಮಿಗಿ ಹೊರಳೂತ ಬಿದ್ದಾಳ ಖಬರಿಲ್ಲಾ
ದುಶ್ಯಾಸನ ಹಿಡದ ಕೂದಲಾ
ಎತ್ತತ್ತ ಹೋದರ ಬಿಡವಲ್ಲಾ ಮರಾಮರಾ
ಮರಗತಾಳ ಪದ್ಮಿನಿಗಂಧಿ ನೆಲಾ ಬಗಟ

ನೆಲಾಬಗಟ ಭೂಮಿ ತಾ ಕೆದರಿ
ಬಾಯಿ ಬಿಡತಾಳ ಗುಬ್ಬಿ ಪರಿ
ಹುಲ ಬಾಯಾಗ ಸಿಕ್ಕಾಂಗ ಚಿಗರಿ
ಬ್ಯಾಟಿಗಾರನ ಬಲ್ಯಾಗ ಸಿಕ್ಕಾಂಗ ಮಲಾ
ರಾಜ ಸಂಪತ್ತಿ ದ್ರೌಪತಿ ಸತಿ ||೧ನೆಯ ಚೌಕ||

ಹಿಡದಾನ ತುರಬಾ ಬಿಡವಲ್ಲಾ ತಕ್ಕೊಂಡ
ನಡದಾನ ಆಕಿನ ಬಿರಿಬಿರಿ
ಹೊಡದಾನ ಕಾಲಿಲೆ ಹತವಾರಿ
ಸಭಾದಾಗ ಹಿಡದ ನಿಂತ ಒದರಿ
ಕರ್ಣ, ಶಕುನಿ, ದುರ್ಯೋಧನರದು
ಹಿಡಸವಲ್ಲದುಮೇದ್ವಾರಿ ಉಮೇದ್ವಾರಿ

ಭೀಷ್ಮ ದ್ರೋಣರಿಗೆಲ್ಲಾ ಕೈಮುಗಿದಂತಾಳ
ಬಾಯಿ ತೆರದ ದ್ರುಪದಿ ಕುಮಾರಿ
ಶ್ರೇಷ್ಠ ಸಭಾದೊಳಗ ಕುಂತೀರಿ
ನೀವ ಬುದ್ಧಿ ಹೇಳೊಲ್ಲಿರಿ ಹೇಳೊಲ್ಲಿರಿ
ಮಾತ ಕೇಳ ಒಲ್ಲ ಧೃತರಾಷ್ಟ್ರ ಹಾಕಿದ
ಕೆಳಗ ಮಾರಿ ನಾಚಿ ಕೆಳಗ ಮಾರಿ
ಐದು ಸಿಂಹ ಸಿಕ್ಕಾಂಗ ಬಲಿ ಒಳಗ
ಪಾಂಡವರೊಳಗ ಧರ್ಮ ಹೊಡದ ಉಸ್ಕರಿ
ಗದ ತಕ್ಕೊಂಡ ಭೀಮ ನಿಂತ ಒದರಿ
ಹುಲಿ ಎದ್ದ ನೋಡಿದ್ಹಂಗ ಚಿಗರಿ
ಧರ್ಮರಾಜ ಅಂತಾನ ಭೀಮನ ಸ-
ತ್ವಕ ಹತ್ತಿತ ಇಂದ ಉರಿ ಹತ್ತಿತ ಇಂದ ಉರಿ
ನಿನಗ ಸಿಟ್ಟ ಬಂದರ ನಿನ ಗದಾ ಹಾಕೋ
ನನ್ನ ತಲಿಯ ಮ್ಯಾಲಿ ಪ್ರೀತಿಯಲಿ
ಭೀಮ ಧರ್ಮರಾಜನ ಮಾತ ಕೇಳಿ ಕುಂತಾ
ಸಿಟ್ಟ ನುಂಗಿ ಗದಾ ಕೆಳಗ ಚೆಲ್ಲಿ
ಅಶ್ವತ್ಥಾಮ ಕೃಪಾಚಾರ್ಯ ಭೀಷ್ಮ ದ್ರೋಣ
ಗುರು ಸಹಿತ ಕುಂತಾರ ಮೌನ ಏರಿ

**||ಕೂಡಪಲ್ಲ||**

ದ್ರೌಪತಿಗೆ ಕರ್ಣ ಅಂದನು-ಗೆದ್ದ
ತಗೊಂಡ ಬಂದೇವ ನಿನ್ನನು-ಆಶೆ

ಬಿಡು ಪಾಂಡವರದು ನೀನು
ದುರ್ಯೋಧನಗ ಆಗ ನೀ ಸತಿ
ಪಟ್ಟ ದೈವತಿ ನೀನೇ ಸುಳ್ಳಲ್ಲಾ
ಅಷ್ಟು ರಾಜ್ಯ ಐಶ್ವರ್ಯವೆಲ್ಲಾ
ನಿನ್ನ ಹೊರತ ಯಾರಿಲ್ಲ
ರಾಜ ಸಂಪತ್ತಿ ದ್ರೌಪತಿ ಸತಿ ॥೨ನೆಯ ॥

ಹೇಮ ನಗರವಾಸಿ ಕೋಮಲಾಂಗ ಹರಿ
ಶ್ಯಾಮ ಸುಂದರ ಭಕ್ತ ಕೈವಾರಿ
ನಿಮ್ಮ ತಂಗೀದ ಆಗೇಲೆ ಸೂರಿ
ಓಡಿ ಬಾರೋ ಮುಕುಂದ ಮುರಾರಿ
ಅಲ್ಲಿ ಆದರದಿಂದ ಪ್ರಹ್ಲಾದನ ಕಾಯ್ದಿ
ಕಾಯ್ದಿ ಭಕ್ತರರ ಪರಿಪರಿ

ಸಭಾದೊಳಗ ನನ್ನ ಅಭಿಮಾನ ಹೋದಿತೋ
ಎಷ್ಟು ಕರಿಲಿ ನಾ ಒದರಿ ಒದರಿ
ಬಾಯಿ ಬಿಡತೇನ ಗುಬ್ಬಿಯ ಪರಿ
ಕೈಯ ಮುಗಿಯತೇನ ಹತ್ತವಾರಿ
ಕುಂದ ಬರತದ ನಿನ್ನ ಬಿರುದಿಗೀಗ
ದೀನ ಉದ್ಧಾರಿ ದೀನ ಉದ್ಧಾರಿ
ಏನ ಕೊಟ್ಟ ವಿಭೀಷಣ ನಿಟ್ಟ
ಅಭಯ ಪಟ್ಟಗಟ್ಟಿ ಸಿದಿರಿ
ದೈತ್ಯರ ನಳದಿರಿ ದಶ ಅವತಾರಿ
ತ್ರಿಭುವನ ಸೂತ್ರಧಾರಿ
ನಿನ್ನ ಹೊರತ ನನ್ನ ಮಾನ ಕಾಯಾವರಿಲ್ಲ
ಬಾರೋ ಕಂಸಾರಿ ಬಾರೋ ಕಂಸಾರಿ

ಕಂಡ ಬಂತ ನಿನ್ನ ಪುಂಡಪಾಂಡವರ
ಐದು ಮಂದಿ ಗಂಡರದು ಕೇಳ ಐಶ್ವರಿ
ಆಗಿ ಕುಂತಾರ ಹೆಂಡರ ಪರಿ
ಭಂಡ ಮಾಡತಾರ ಕಳದುಟ್ಟ ಸೀರಿ
ಕ್ಷಣ ತಡಿಬ್ಯಾಡೋ ಬಾರೋ ನೀ ಏರಿ
ಪ್ರಾಣಕ ಬಂದಿತೋ ಚೂರಿ ಬಂದೀತೋ ಚೂರಿ

ಬಾಯಿ ಬಿಡತಾಳ ಗುಬ್ಬಿಯ ಹಂಗ ನಿಂತ
ಸಭಾದಾಗ ಕಣ್ಣ ಮುಚ್ಚಾಳೋ

ಕೈಯಲಿ ಮಾರಿ ಮುಚ್ಚಾಳೋ ಮಾಡಿ ದ್ವಾರಕದ ಕಡಿ
ಕೃಷ್ಣನ ರೂಪ ನೋಡಿ ಧ್ಯಾನ ಹಚ್ಚಾಳೋ
ತನ್ನ ಭಕ್ತಿ ಎಂಬ ಬಾಣ ಮಾಡಿ
ಗುರಿ ಹೂಡಿ ಹೊಡದ ಚುಚ್ಚಾಳೋ ಚುಚ್ಚಾಳೋ

**||ಕೂಡಪಲ್ಲ||**

ದ್ರೌಪತಿ ಶಬ್ದ ಬಾಣಕ ಗಾಬರಿ ಆಗಿ
ಕ್ಷಣಕ ಗರುಡನ ಹಾಕಿದ ಹಿಂದಕ
ತನ್ನ ಮನಸಿನಕ್ಕಿಂತ ಮುಂದಾಗಿ ಸಭಾದಾಗ
ಬಂದ ನಿಂತ ತಂಗಿ ಬೆನ್ನಮ್ಯಾಲಾ
ಲೀಲಾ ಮಾಡಿದ ಭಕ್ತ ಪ್ರತಿಷ್ಠಾ
ದ್ವಾರಕಾವಾಸಾ ನೀನು ಗೋಪಾಲಾ
ನಿನ್ನ ಹೊರತ ಯಾರಿಲ್ಲಾ
ರಾಜ ಸಂಪತ್ತಿ ದ್ರೌಪತಿ ಸತಿ||೩ನೆಯ ಚೌಕ||

ದ್ರೌಪತಿಯ ಸಂಕಟಕ ಕೃಷ್ಣ ಬಂದದ್ದು ಭೀಷ್ಮಾ
ದ್ರೋಣರಿಗಿ ತಿಳದೀತ ಪೂರಾ
ಕೈ ಬಡದ ತೋರಸ್ತಾನ ವಿದುರಾ
ನೋಡರೆ ಇದರ ಚಮತ್ಕಾರಾ
ಮುಕುಂದನ ನೋಡಿ ಆನಂದಾದ್ರು ಪಾಂಡವರಾ

ದುಶ್ಯಾಸನ ಮಾಡತಾನ ಜರಬಾ
ಹಿಡದ ಸೀರಿಯ ಪದರ ತುರಬಾ
ನಿಂತ ಕಳಿಯತಾರ ಸೀರಿಯ ಬರಾಬರಾ
ಸೀರಿ ಹೊಂಟೀತ ಒಳಗ ಹೊಸತರಾ
ಒಂದರ ಹಿಂದ ಒಂದ ಉಡಾಣಾ
ಆತ ಆಚರಾ ಆತ ಆಚರಾ

ಹಿಂಗ ಕಳಿಯತಾನ ಜಗ್ಗಿ ಸೇರಿ
ಎಷ್ಟ ಉಡಸೋಣ ಆದ ಅಚ್ಚರಾ
ಕಳದಿಟ್ಟ ಸೀರಿ ಸಭಾದಾಗ
ಬಿದ್ದಿತ ದಿಗ್ಗ ಬಿದ್ದಾಂಗ ಪರ್ವತ ತೋರಾ
ದುಶ್ಯಾಸನಗ ಅಂತಾನ ವಿದುರಾ
ಕೇಳೋ ಪಾಮರಾ ಕೇಳೋ ಪಾಮರಾ

**||ಕೂಡಪಲ್ಲ||**

ಬಂತೋ ವಿಪರೀತಾ ವಿಪರೀತಾ
ಪಾಂಡವರ ಪಂಚಪ್ರಾಣಾ ಕಾಯಾಂವ ಕೃಷ್ಣಾ
ಇದ್ದಾನಾ ಸಾಕ್ಷಾತ್ಕಾರ ಸಾಕ್ಷಾತ್ಕಾರ
ದ್ರೌಪತಿನ ಕೆಣಕಿ ಸಭಾದಾಗ
ಸಾಯ ಬ್ಯಾಡರಿ ಬಿದ್ದ ಬೆಂಕ್ಯಾಗ
ನಿಮ್ಮ ಮರಣ ಬಂತ ಸನಿದಾಗ
ಇಷ್ಟ ಕೇಳಿ ದುಶ್ಯಾಸನ ನೆಲಾ ಬಡದಾ ಮುಂಗೈ
ಜಗ್ಗಿ ಕೊಟ್ವಾನ ಜಿಗ್ಗಾಲಾ
ತಿಂತಾನ ಕರಾ ಕರಾ ಹಲ್ಲಾ
ಎತ್ತ ಹೋದರ ಬಿಡ ಒಲ್ಲಾ
ರಾಜ ಸಂಪತ್ತಿ ದ್ರೌಪತಿ ಸತಿ ||ಆನೆಯ ಚೌಕ||

ಎಷ್ಟು ಕಳದರಾಕಿ ಅಂಗುಷ್ಟ ತೋರಲಿಲ್ಲ
ಮುಸುಕ ಹಾಕಿದ ಮುಕುಂದಾ
ದುರ್ಯೋಧನನು ಸಭಾದಲಿ ಬಂದಾ
ದುಶ್ಯಾಸನನ ಕರದ ಹೇಳಿದಾ
ಹೊಂಟ ಸೀರಿ ಎಲ್ಲಾ ದಿಂಡ ಕಟ್ಟಿ ಮನಿಗಿ
ಕಳಿಸಿಕೊಡೋ ಈಗ ಮುಂದಾ
ಕಳಿಸಿ ಕೊಡೋ ಈಗ ಮುಂದಾ
ಇಷ್ಟ ಆಗುದರೊಳಗ ಸೀರೆಲ್ಲಾ
ಗುಪ್ತ ಆಗಿ ಹೋತು ಸ್ಥಳಕಾ
ಕಾಣಸ ಒಲ್ಲದು ಒಂದ ಒಂದಾ
ಯುಕ್ತಿ ತಗದ ಗೋವಿಂದಾ
ದ್ರೌಪತಿನ ಕೈಯಿಂದ ಹಿಡದಾ ತನ್ನ
ಮೈಮ್ಯಾಲಿನ ಪೀತಾಂಬರ ಹೊಚ್ಚಿದಾ

ಆಕಿ ಸುತ್ತ ಸುದರ್ಶನ ಚಕ್ರ ಕಾವಲಾ
ಇಟ್ವಾನ ಹರಿ ಪ್ರೀತಿಲಿಂದಾ
ವಿದರ ಹೇಳತಾನ ಸಭಾದಲಿ ಬಂದಾ
ಜೋಕಿ ಮಾಡಿಕೊಳ್ಳೋ ನಿನ್ನ ಪ್ರಾಣಾ ಇಕಿನ
ಹಿಡಿದರ ಹ್ವಾದಿಯೋ ಜೀವದಿಂದಾ ಜೀವದರಸಿಂದಾ

ಸುದರ್ಶನಕ ಕಣ್ಣಮುಚ್ಚಿ ಮೂರ್ಚೆ ಬಂದಾ
ಕಬರ ಹಾರಿ ಕರ್ಣ ಶಕುನಿದಾ
ಧೈರ್ಯ ಆಗ ಒಲ್ಲದು ಯಾವಂದಾ

ಕಣ್ಣ ತೆರದು ನೋಡುವಷ್ಟಾ
ತ್ರಾಣ ಇಲ್ಲೋ ಯಾವಂದಾ ಯಾವಂದಾ

ಧೃತರಾಷ್ಟ್ರ  ದ್ರೌಪತಿನ ಕರದ
ಗದ್ದಾ ತುಟಿ ಹಿಡದ ರಮ್ಮಿಸಿ ಅಂತಾನ
ಮನಿಗ್ಹೋಗ ತಾಯಿ ಇನ್ನ ಮ್ಯಾಗ ನಿನ್ನ
ಕಾಯಾಂವಾ ದೇವರು ಇದ್ದಾನ
ನಿನಗ ಚೇಷ್ಟಾ ಆಡಿದ ದುಷ್ಟರಾ
ಫಲಾ ಉಂಡಾರ ಇದರ ಸುಖವನ್ನಾ

**||ಕೂಡಪಲ್ಲ||**

ಧೃತರಾಷ್ಟ್ರ ಕಳಿಸಿದ ರಮ್ಮಿಸಿ ಭಕ್ತ ಪಾಲಾ
ಹರಿ ಜಗದೀಶಾ ಬಾಳಗೋಪಾಳಾ
ಜಗನ್ನಾಥ ನಿನ್ನ ಹೊರತ ಕಾಯುವರ‍್ಯಾರಿಲ್ಲಾ
ಲೀಲಾ ಮಾಡಿದ ಭಕ್ತಾ ಪೃಥ್ವಿ ಪಾಲಾ
ದ್ವಾರಕಾಧೀಶಾ ನೀನು ಗೋಪಾಲಾ
ರಾಜ ಸಂಪತ್ತಿ ದ್ರೌಪತಿ ಸತಿ||ಜನೆಯ ಚೌಕ||

***ರಚನೆ :*** ಬಾಳಗೋಪಾಳ
***ಕೃತಿ :*** ಬಾಳಗೋಪಾಳನ ಲಾವಣಿಗಳು

## ೨೦. ಉಷಾಹರಣ

ಮಾರಜನಕನಾಟವು ದಾರಿಗೂ ನಿಲಕದ್ದು
ಸರಿ ಅನಬೇಕಂವ ಮಾಡಿದ್ದು
ತ್ರೈಜಗದ ಕರ್ತಾ ಎಂದೆನಿಸುವುದು
ಹರಿ ಬ್ರಹ್ಮಗ ಅಸಾಧ್ಯವಾದದ್ದು
ಕೇಳೋ ಧರಣಿ ಪತಿ ರಾಜಾ ಜನಮೇಜಯಾ
ಬಾಣಾಸುರನ ಭುಜಭಾರ ಇಳಿದದ್ದು
ಹೇಳುವೆ ಅನಿರುದ್ಧ ಉಷಾಕೂಡಿದ್ದು||ಪಲ್ಲ||

ವರದ ಪುತ್ರ ಈಶ್ವರಗ ಬಾಣಾಸೂರ ಭಾಳಧೀರ
ಸಹಸ್ರ ತೋಳಿಂದ ಶೋಭಿಸುವಾಗ
ಅವಗ ಇದರ ಗೊಡವೆ ವೀರಲಿಲ್ಲ ಧರಿಯೊಳಗ

ಬಹಳ ಗರ್ವ ಬಂದೀತ ಆತನ ಮನಸಿನೊಳಗ
ಮೂರು ಲೋಕದೊಳಗ ನನ್ನ ಸರಿಗಟ್ಟಿ ನಿಲ್ಲುವಂಥ
ವೀರರಿಲ್ಲ ನಿರ್ವೀರರಾದರೀಗ
ಯುದ್ಧ ಮಾಡದೆ ಭುಜ ಭಾರಗೊಂಡಾವ ಎನಗ
ಮದ ಮಸ್ತ ಆಗಿ ಬಂದ ಪಾರ್ವತಿ ಸಹಿತ
ಕೈಲಾಸ ಪತಿ ಇದ್ರ ಆನಂದದೊಳಗ
ಹಸ್ತ ಮುಗಿದ ನಿಂತ ಕೇಳತಾನ ಈಶ್ವರಗ
ಎನ್ನ ದಣಿಸುವಂಥ ವೈರಿ ಕೊಡು ಕಣದೊಳಗ
ಕೇಳಿ ಬಾಣಾಸೂರನ ಮಾತೆ ಹೇಳಿದ ಉಮಾಕಾಂತ
ಕಾಳ ವೇಳಿ ಕೂಡಿ ಎಂತ ನಿಂದ ಬೇಗ
ವೈರಿ ಆದ ತಿಳಿ ಧ್ವಜ ಕಳಿಸ ಬಿದ್ದಾಂಗ
ಬಂದಾನ ಅಸುರ ಮಂತ್ರಿಗೆ ಅಂದಾನ ನನ್ನ ಶತ್ರು
ಹುಟ್ಯಾನ ಇಂದಿಗಿ ಪೃಥ್ವಿಯ ಒಳಗ
ಧ್ವಜ-ಸ್ತಂಭ-ಕಳಸ ಕಾಯಿರಿ ಇನ್ನ ಒಳಿತಂಗ
ಭಾಳ ಬಂದೂಬಸ್ತ ನದರ ಇರಲಿ ಅದರ ಮ್ಯಾಗ
ಹೇಳಿ ತನ್ನ ಗರ್ವಿನಲಿ ದಂಡದಳ ತಯಾರಲಿಂದ
ಹುಷಾರಗೊಂಡ ಇದ್ದ ತನ್ನ ಪುರದೊಳಗ
ಮುಂದ ತಪ್ಪಲಿಲ್ಲ ಜಗದೀಶ ಭವಿಷ್ಯ ಹೇಳಿದಂಗ
ಬಾಣಾಸೂರನ ಮಗಳ ಉಷಾ ಜಾಣ ಪ್ರಾಯದಿಂದ ಉಮಾ-
ಮಹೇಶ್ವರ ಇದ್ದಲ್ಲಿ ಹೋದಾಳ ಆಗ
ಮನ ಭ್ರಮಿಸಿ ಬಿಟ್ಟಾಳ ನಾಮ ಸ್ತುತಿ ಒಳಗ
ಉಮಾಧೀಶ ಪ್ರೇಮದಿಂದ ಹಿಡದ ಆಕಿನ್ನ ಕೈಯಾಗ
ಏನ ಬೇಡತಿ ಬೇಡು ಮಗಳ ಕೊಡವೇನ ಇಂದಿಗಿ
ಸುಖ ಇಡುವೆನ ನೋಡುವೆನ ಐಶ್ವರ್ಯ ಹ್ಯಾಂಗ
ಪೂರ್ಣ ಮಾಡುವೆನ ಮನಸಿನೊಳಗ ಇದ್ದಾಂಗ

**||ಚಾಲ||**

ಉಷಾ ಅಂತಾಳ ಸಾಂಭವಿ ಪ್ರಾಣಕಾಂತನ ಹೊರ್ತ
ಮನ್ಮಥನ ಯತಿಯು ನಿಂತ ಹೇಳತಾರೆ
ಏಕಾಂತ ಇಲ್ಲದ ತಾಳಲಾರೆ
ಚಂದ್ರನ ಹೊರತ ಚಕೋರ
ಜಲದ ಹೊರತ ಜಲಚರ
ಸೊರಗಿದಂತೆ ಕರಗಿ-ಮರಗಿರಲಾರೆ
ಧರಗೆರಗಿ ಬಿದ್ದ ಏಳಲಾರೆ
ಪ್ರಾಣದೊಲ್ಲಭ ಇಲ್ಲದೆ ಎನ್ನ ಲಾವಣ್ಯ ಸುಟ್ಟ

ಸುಣ್ಣದ್ಹರಳಿನಂತೆ ಸುಡಲಾರೆ
ಕಾಯಾ ಕಣ್ಣಿನಿಂದ ಕ್ಷಣ ನೋಡಲಾರೆ

**||ಸಣ್ಣ ಚಾಲ||**

ಮೂರು ಲೋಕದೊಳಗ ಎಲ್ಲಾ ಮಹೇಶ್ವರಿ
ಸುರತಕಿರಲಾಕಿಲ್ಲ ಆತನ ಸರಿ
ಎನ್ನ ಚಲ್ವಿಕಿಗಿ ಒಪ್ಪುವಂಥ ದೊರಿ
ಎಂದ ಕಂಡೆನವ್ವಾ ಅಂತಾ ಐಶ್ವರಿ
ಕೇಳಿ ಸಂತೋಷದಿಂದಲೇ ಗೌರಿ
ಚಿಂತಿ ಮಾಡಬೇಡ ಅಂತಾಳ ಸುಕುಮಾರಿ
ವೈಶಾಖ ಶುದ್ಧ ದ್ವಾದಶಿ ದಿವಸ ನಿನ್ನ
ಸ್ವಪ್ನದೊಳು ಪುರುಷ ಬಂದು
ನಿನ್ನಲ್ಲಿ ರತಿ ಕ್ರೀಡಾ ಆಡುವುದು
ಭಾಳ ಸರಸ ಸಂಗ ಸವಿ ಸುಖ ನೀಡುವುದು
ನೀನು ಖಾಸ ತಿಳಿ ಆತನ ನಿನ್ನ ಪತಿ ಎಂದು
ಕೇಳೋ ಧರಣಿ ಪತಿ ರಾಜಾ ಜನಮೇಜಯ
ಬಾಣಾಸುರನ ಭುಜ ಭಾರಾ ಇಳಿದದ್ದು
ಹೇಳುವೆ ಅನಿರುದ್ಧ ಉಷಾ ಕೂಡಿದ್ದು ||೧ನೇ ಚೌಕ||

ಕೇಳಿ ಉಷಾನ್ಹರುಷ ಮೂರು ಲೋಕದೊಳು ಮೀರಿ ಹಿಂದಿನ
ಮಾರನೇಟ ದುಃಖವೆಲ್ಲಾ ಮರತಾಳು
ಕೈ ಬೆರಳಲ್ಲಿ ದಿನಗಳ ಎಣಿಸಿ ನೋಡತಾಳು
ನಾಳಿ ಗಿರಜೆ ಕೊಟ್ಟ ವರದ ತಿಥಿ ಅಂದಾಳು
ಎದ್ದು ಉಷಃಕಾಲದಲ್ಲಿ ಕರೆದು ಚಿತ್ರರೇಖಾ ಪ್ರಾಣ
ನಾಥ ಬರುವನಿಂದು ನಿದ್ರಿ ಸ್ವಪ್ನದೊಳು
ಭಾಳ ನಲ್ಲೆ ತಾನೆಲ್ಲೂ ಸಿಂಗರಿಸಿದಳು
ಉನ್ನತ ನಿಲುಗನ್ನಡಿ ನಿಲ್ಲಿಸಿ ಪನ್ನೀರಲಿ ಮುಖ ತೊಳಿದಳು
ಅರಿಷಿಣ ಬೆವರ ಎರಡೂ ಗಲ್ಲಕೇರಿಸಿದಳು
ಚಿನ್ನದ್ಹಣಿಗಿಲ್ಹಿಕ್ಕಿ ಸರಳ ಬೈತಿಲೆ ತಗದಳು
ಹರಳ ಹವಣಾದಿಂದೊಡಮುರಿದ ಜಡಿ ಹೆಣೆಯುವಳು
ಒದ್ದೆ ಪಾವಡದಿಂದ ಬೆನ್ನು ಹೆಡಕು ಹೆಗಲ ಕೊರಳಿನೊಳು
ಬಂದಂತ ಬೆವರ ಮುಂಚೆ ವರಿಸಿಹಳು
ಭಾಳ ಸಿಸ್ತದಿಂದ ಒಂದೊಂದ ವಸ್ತ ತೊಡುವಳು
ರನ್ನದಿ ಕೆತ್ತಿಸಿದಂಥಾ ರಾಗುಟಿ ಚವಲಿ ಹೆರಳಿನಲ್ಲಿ
ನಲವುಗೊಂಡೆ ಮ್ಯಾಲೆ ಮುತ್ತಿನ ಕುಂಚೆಗಳು

ಹೊಸ ಚಿನ್ನದ ಅರಗಿಳಿ ಇಟ್ಟು ನಲಿಯುವಳು
ಹಸರ ಜರದ ಬಣ್ಣದ ಕುಬಸ ಬಿಗಿದು ತೊಡುವಳು
ಸುಲದ ಹಲ್ಲಗಿ ನಾರಿ ಜಾಚಿಲಿ ವರಿಸಿಹಳು
ಬಿಸಿ ಜಲದಿ ನೀರ ಮುಕ್ಕಳಿಸಿ ಉಗುಳುವಳ
ಚಿನ್ನಗಿಳಿ ದುಂಬಿ ಮುಖಾ ನೋಡಿ ನಗುವಳು
ಸಣ್ಣ ಚಂದ್ರಗಾಮಿ ಪಂಚವರ್ಣ ಪೈಠಾಣಿ ಸೀರಿ
ಜರತಾರ ಉಟ್ಟ ನಿರಿಗೆ ತೀಡುವಳು
ಕನ್ನೆ ಶಿರೋಮಣಿ ತಾಟ ಮಾಟ ಮಾಡುವಳು
ತನ್ನ ಕಣ್ಣಿಗೊಪ್ಪುವಂಥಾ ಆಭರಣಗಳು
ಜಾತ ಮುತ್ತಿನ ಎಳಿ ಜಾಣಿ ಬೈತಲಿ ತಳಪೀಗಿ
ಆತು ಇಮ್ಮಡಿಸಿ ಎರಡು ಕಡೆ ಬಿಗಿದಿಹಳು
ಮುಡಿಯ ಮುಂದೆಲೆಯಲಿ ಸೂರ್ಯ ಚಂದ್ರರ ಇಟ್ಟಿಹಳು

**||ಚಾಲ||**

ನಾಗರ ಕ್ಯಾದಗಿ ಚಂದ್ರಕೋರು ಚೆಂದದಿಂದ ಮುಂದ ಅರಳೆಲಿ
ಒಪ್ಪುವ ಹೆರಳಲಿ ತಿಲಕ ಕಸ್ತೂರಿ ಪತ್ರ ಬಟ್ಟ ಅದರಲಿ
ಕೂಡಿದ ಕುಡಿ ಹುಬ್ಬು ಪ್ರದ್ಯುಮ್ನನ ಬಿಲ್ಲು ಮೂಡಿದಂತೆ ಕಡೀಲಿ
ನಸಲ ಕೊರೆದಾಳು ಮಧ್ಯದಲ್ಲೊಪ್ಪುವ ಕಾಡಿಗಿ ಹಚ್ಚಿ ವಿರಳಿ ನೋಟದಲಿ
ಫುಲ್ಲಲೋಚನೆ ಕಿವಿಯಲ್ಲಿ ಹೊಳೆಯುವಂಥಾ ಚಳ ತುಂಬಟ್ಟ
ಮೀನ ಬಾವಲಿ ದ್ರಾಕ್ಷಿಬಳ್ಳಿ ಸಿಗಸಿ ಸುರಳ ಗುರಳಲಿ

**||ಸಣ್ಣ ಚಾಲ||**

ಮುತ್ತಿನ ಬುಗಡಿ ಮೂಗುತಿ ಮೂಗಿನಲಿ
ಅಂಥಾ ರತ್ನ ಯಾರ ಮಾಡ್ಯಾರ ಬೆಲಿ
ಸರಗಿ ಚಿಂತಾಕ ಸರಮುತ್ತ ಕೊರಳಲ್ಲಿ
ಮೆರೆವ ಏಕಾವಳಿ ಮ್ಯಾಲೆ ಜೋಮಾಲಿ
ಸರ ಸರದಾಳಿ ಮೋಹನ ಮಾಲಿ
ಸರ್ವ ಉರದಲೊಪ್ಪುವ ಪದಕ ಅದರಲ್ಲಿ
ತರತರದ ತಾವರೆ ಅಂತೆ ಪರಿಪರಿ ಆಭರಣ
ಹರಿಣಾಕ್ಷಿ ಕೊರಳಲ್ಲಿಟ್ಟ ನಲಿದಾಡುವುದು
ಮೀರಿದ ಲಾವಣ್ಯ ಮತ್ತಿಷ್ಟು ಎದ್ದು ತೋರುವುದು
ಮುಂಚಿನಕ್ಕಿಂತ ನೂರಪಾಲ ಹೆಚ್ಚು ಗಣಿಸುವುದು
ಕೇಳೋ ಧರಣಿಪತಿ ರಾಜಾ ಜನಮೇಜಯ ||೨ನೇ ಚೌಕ||

ವಜ್ರಟಕ್ಕೆ ಗೆಜ್ಜಿಟಕ್ಕೆ ಚಂದ್ರಹಾರ ಮಧ್ಯದೊಳು
ನೀಲವರ್ಣ ಹರಳ ಕೆತ್ತಿಸಿದಂಥಾ ಪದಕಾ
ಕಲಶ ಕುಚದಲಿ ಕುಂಕುಮ ಕೇಸರಿ ರೇಖಾ
ವರಿಸಿ ಚೆನ್ನದ ಅರಗಜ ಜ್ಯೋತಿಯ ಅದಕಾ
ಕರದಲ್ಲಿ ಕಂಕಣ ದ್ವಾರಿ ಮೀರಿದ ಹಸ್ತ ಕಡಗನಿಟ್ಟು
ಹರಡಿ ಕೈಕಟ್ಟಿ ರತ್ನದ ತುಣಕಾ
ಹವಳ ಪಾಟ್ಲಿ ಕುಂದಣ ತೋಡೆ
ಸರಸಿ ಇಡುವೋಳು ಹಿಂದಕಾ
ಹೊಳೆಯುವ ವಜ್ರ ಕೆಚ್ಚಿದುಂಗುರ ಹತ್ತು ಬೆರಳಿನಲ್ಲಿಟ್ಟು
ತೋಳ ಬಂದಿ ಹಾಕಿ ನಾರಿ ಒನಪಕ್ಕಾ
ಭಾಳ ಮೀರಿದ ಒಂಕಿ ಬಾಪುರೆ ಬಾಜುಬಂದಕಾ
ಕೆಳಗ ಇಳಿಯ ಬಿಟ್ಟಾಳ ಮುತ್ತಿನ ಗೊಂಡೆ ತಿಳಿಪಕ್ಕಾ
ಥಳಿಥಳಿಸುವ ಸೂರ್ಯಶಶಿ ಉಸರ ಹಾಕಿ ನೋಡುವರು
ಕಳೆಗುಂದಿ ಕಮ್ಮಿ ಆದೀತಾ ಬೆಳಕಾ
ಇನ್ನು ಇಳಿಯೊಳಗಿಲ್ಲಾ ಇಕಿ ಸ್ವರೂಪಕ್ಕಾ
ಮೇಲಾಗಿ ಒಡ್ಯಾಣ ಕೀಲಿ ಸೂತ್ರಿ ಬಿರಕಿ ಬಿಗಿದು
ಹಲಿವಿರುಳಿ ಕಾಲಿನಲಿ ಇಟ್ಟ ಜೋಕಾ
ಕಾಲಕಡಗ ಮುರಡಿ ಸರಪಳಿ ಭಾರಕಾ
ಕೆಳಗೆ ಪೈಜಣಿಟ್ಟ ಹೆಜ್ಜೆ ಚೆಲ್ಲುವಳು ಮೆಲ್ಲಕಾ
ಕಾಲುಂಗರ ಕಿರಿಪಿಲ್ಲೆ ಮೀನ ಮೆಂಟಕಿ
ಭರದಿಂದ ಅಣಿಮೆಂಟ ಇಟ್ಟಾಳ ಒಂದ ಸವತೂಕಾ
ಪಾದಾ ಸರಸಿ ಇಟ್ಟ  ನೋಡತಾಳ ಹಾದ ಮುಂದಕಾ
ಸುರಹೊನ್ನಿ ಜಾಜಿ ಮಲ್ಲಿಗಿ ಹಾರ ತುರಬಿಗಿ ಹಾಕಿ
ತುರಬ ಕೇತಕಿಯಿಂದ ಶೋಭಿಸುವ ಮಸ್ತಕಾ
ನಾರಿ ಸಿರಿಗಂಧ ಹಚ್ಚಿ ಕಡಕಾ
ಅಭಿರ ಅಷ್ಟಗಂಧ ಹಚ್ಚಿ ತನ್ನ ಕಂಠಕಾ
ಹಸಿರ ಜರದ ಶಾಲ ಜಾಣಿ ವಿಚಾರದಿಂದ ಮುಸಕ ಹಾಕಿ
ಕಿರಿಯ ನಗುವ ನಗುವುತ ಹೊರಗಿನಂಗಳಕಾ
ದೂತೆ ಕರದಲ್ಲಿ ಕರ ಇಟ್ಟ ಬಂದಳಾಕ್ಷಣಕಾ

**||ಚಾಲ||**

ಸಾಲ ಸಾಲ ದಾಸೇರ ಮೇಲೆ ಮೇಲೆ ನಿಂತ ತಾಂ-
ಬೂಲವನ್ನು ಮಡಚಿ ಕೊಡುವ ತಾರೀಪಾ
ಮುದ್ದ ಸುರಸುವಂಥಾ ಶಬ್ದ ಅಪರೂಪಾ
ಹರದ ಹೊಂಟೇತ ಸುತ್ತ ಹರದಾರಿ

ನಾರಿ ಸರಸಿಜಾಕ್ಷಿ ಮೈ ಸುಗಂಧ ಧೂಪಾ
ದರದರ ಹೆಜ್ಜಿಗೊಂದಂದಾ ವನಪಾ
ಚಲ್ವ ಪಾದ ಕಂಡ ಕೂರ್ಮ ಮಡಾ ಧೃತಿ-
ಗೆಟ್ಟು ಕಾಲಗತಿ ನೋಡಿ ಸಂತಾಪಾ
ಕೊಳಾ ಸೇರೀತ ತುಡಗಲಿ ಹೋಗಿ ಗಪ್ಪಾ

**||ಸಣ್ಣಚಾಲ||**

ಹೊಳೆವ ಚದುರಿ ಮಣಕಾಲ ಮಣತೀಗಿ
ಬಿಲ್ಲ ಅಡಗೀತ ಮನ್ಮಥನ ಬೆನ್ನೀಗಿ
ಕೋಮಲವಾದ ದುಂಡ ತೋಳ ತೊಡಗಿ
ಬಾಳಿ ಹೊಡಿ ಚೆಲ್ಲಿ ನಿಂತೀತ ತಲಿಬಾಗಿ
ಬಾಗಿ ಬಳಕುವಂತೆ ಚಿಕ್ಕ ನಡುವಿಗಿ
ಸಿಂಹ ನಾಚಿ ಗವಿ ಸೇರಿತ ಹೋಗಿ

**||ಕೂಡಪಲ್ಲ||**

ರಂಭಿ ಎದಿಮ್ಯಾಲ ತುಂಬಿ ಬಂದಂಥ ಕುಚಗಳ ಕಂಡು
ಕುಂಬ ಸ್ಥಳಕ ಗಜ ಮಣ್ಣ ಜಗೆಯುವುದು
ಹೊಳೆಯುವಂಥಾ ಕರಗಳ ಸರ್ಪಾ ನಿಂತ ನೋಡುವುದು
ನಾಚಿಕಿಂದ ನಲುಗಿ ಭೂಮಿ ಸೇರಿತ ಬಗಿದು
ಕೇಳೋ ಧರಣಿಪತಿ ರಾಜ ಜನಮೇಜಯ||೩ನೆ ಚೌಕ||

ಕೆಂಬಲ್ಲಿ ಹೋಲ್ವಿಕೆ ನೋಡಿ ದಾಳಿಂಬರಿ ಬಳಲಿ ಬಳಲಿ
ಭಾಳ ನಾಚಿ ತನ್ನ ಬಾಯ ತೆರದೀತು
ನಿಂಬಿ ರಂಬೆ ಮೈ ಬಣ್ಣಕ ಹುಳಿ ಆದೀತು
ಹೊಳೆಯುವಂಥಹ ಕಣ್ಣುಗಳಿಗೆ ಎರಳಿ ಬೆದರೀತು
ಸುರಳಿಗುರಳ ಭೃಂಗ ಕಂಡ ಕಟ್ಟಿಗೆ ಸರದೀತು
ಒಳೇ ಸರಳ ಮೂಗ ನೋಡಿ ಸಂಪಿಗೆ ಬೆಚ್ಚೀತು
ಮುಖ ಕಮಲ ಚಂದ್ರಾಮ ನಡುವೆ ಕಪ್ಪಾಯಿತು.
ಜಾಣಿ ಶಿರೋಮಣಿ ವಾಣಿ ಸರಸ್ವತಿ ತಾನೇ ಕೇಳಿ
ಪಂಚ ಬಾಣನಿಂದ ಸಿಲ್ಕಿಯು ಹೊತ್ತು
ರತಿದೇವಿ ಸ್ತ್ರೀಯರಿಗೆಲ್ಲಾ ಭ್ರಾಂತಿ ಬಡಕೊಂಡಿತ್ತು
ಇಕಿ ಊಳಿಗ ಮಾಡೀವಂದ್ರ ದೂರಿದ್ದಾಂಗಾಯಿತು
ಮೀರಿದ ಲಾವಣ್ಯ ಮತ್ತೆಷ್ಟು ವರ್ಣಿಸ್ಲೇಳಲಿ
ಕವಿ ನಾಲಿಗೆ ದಣಿದ ಬ್ಯಾಸತ್ತ ನಿಂತು
ಈ ವರ್ಣನೆಗಿಂತ ಇಕಿ ಸ್ವರೂಪ ಹೆಚ್ಚಾಯಿತು

ಚಪ್ಪರ ಪಲಂಗ್ಹಾಸಿಗೆ ಮೇಲೆ ಗಿರವಿಲೇಪ ತಡಿ ಇಟ್ಟು
ಮಲ್ಲಿಗ್ಹೂವ ತೆಲ್ಯಾಡ್ಯಾಳ ಸುತ್ತಮುತ್ತ
ನಾಲ್ಕು ಮೂಲಿಗೆ ಕರ್ಪುರ ದೀವಿಗೆ ಹೊತ್ತು
ಮಲಗಿಕೊಂಡಾಳ ಮೇಲ ಕಾಲ ಜೋಡಿ ಹೊತ್ತು
ತಲಿ ಬುಡಕ ತೋಳ ಕೊಟ್ಟ ವಲ್ಲಭನ ದಾರಿ ನೋಡ್ತ
ಸ್ವಲ್ಪ ನಿದ್ರಿ ಕಣ್ಣಿಗೆ ಜೊಂಪ ಹೊಡದೀತು
ಆಗ ಪಾರ್ವತಿ ವರ ಅಲ್ಲೆ ಖರೇ ಆದೀತು
ಬಂದಾನ ಅನಿರುದ್ಧ ಮಧ್ಯರಾತ್ರಿ ಉಷಾನ ಸ್ವಪ್ನದೊಳು
ಆಕಿ ನೀಡಿದ ತೆಕ್ಕಿ ಅಪ್ಪಿದಂತಾಯ್ತು - ಮುದ್ದಿಸಿ ಮುಖ
ನೋಡಿದಳಂತಾನ ತೊಡಿಯ ಮ್ಯಾಲ ಕುಂತು
ಒಳ್ಳೆ ಸುರತು ಸ್ವಾಶ ಸವಿ ಸುರದಂಗಾಯ್ತು
ಅಧರದೊಳು ಅಧರಿಟ್ಟು ಹೃದಯಕ್ಕೆ ಹೃದಯವಿತ್ತು
ಸುಖ ಸ್ವಾದ ಸವಿ ಸುರದಂಗ್ಹಾಯ್ತು
ಆತ ಕ್ರೀಡಾ ಮಾಡಿ ಕೂಡ್ಯಾರ ಆ ಹೊತ್ತು.

**||ಚಾಲ||**

ಮಲಗಿ ಸ್ವಪ್ನದೊಳು ಲೋಲ್ಯಾಡುತಂತಾಳ
ಪ್ರಾಣವಲ್ಲಭ ಮಾತ ಕೇಳರಿ
ಎನ್ನ ಅಗಲಿ ಎತ್ತ ಹೋಗಬೇಡಿರಿ
ಕಾಮನಾಟದ ಘೋರಕ ಶ್ರಮಗೊಂಡಿರಿ
ಇಂದಿಗ ಭಾಳ ಇನ್ನೊಮ್ಮೆ ಮುಖವ ನೋಡಿರಿ
ಮಧುರ ರಸ ಸರಸ ಸುರಿಸರಿ
ಬಾಯಿ ತೆರದೇನ ಪತಿರಾಯಾ
ಮಾಯಾ ಇಟ್ಟ ನನ್ನ ದೇಹದ ಕಡಿಗಿ ನೋಡಿರಿ
ನಾ ತೊತ್ತ ಇಲ್ಲ ನಿಮ್ಮ ಮೀರಿ

**||ಸಣ್ಣ ಚಾಲ||**

ಇಷ್ಟ ಆನಂದ ಆಗಿ ಕನಸಿನಲ್ಲಿ ಉಷಾ
ಮಲಗಿ ಮಾತನಾಡ್ಯಾಳು ಕೌತುಕಾ
ಹೊರಗ ಬೆಳಕಾಗಿ ಬಿದ್ದಿತ ಬೆಳಕಾ
ಎಚ್ಚರಾಗ್ಯಾಳ ಕೋಕಿಲ ಶಬ್ದಕಾ
ನಾರಿ ಅಡರಾಸಿ ನೋಡತಾಳ ಟಕಮಕಾ
ಎದ್ದ ಹಾದಾಳ ಗ್ವಾಡಿ ಕಂಬಕಾ

**||ಕೂಡಪಲ್ಲಾ||**

ಬಂದಂತ ಪುರುಷ ಎತ್ತ ಬಿಟ್ಟ ಹೋದನೆಂದು
ಸುತ್ತಮುತ್ತ ದಿಕ್ಕ ತಪ್ಪಿದಂಗ ನೋಡ್ಯಾಳ ಎದ್ದಾ
ಏ ಪ್ರಾಣನಾಥಾ ಎತ್ತ ಹ್ವಾದಿ ಒಗದ ನನ್ನ ಎನ್ನುತಾ
ಕಡದ ಬಾಳೀ ಉಳಿಸಿದಂತೆ ಉರಳ್ಯಾಳ ಬಿದ್ದಾ
ಕೇಳೋ ಧರಣಿ ಪತಿ ರಾಜಾ ಜನಮೇಜಯ||ಳನೇ ಚೌಕ||
ಎಚ್ಚರಾಗಿ ಉಷಾ ಹುಚ್ಚಿಯಂತೆ ಚಂಚಲಾಗಿ
ನಿಶ್ಚಿಂತ ಧರಿಗಿ ಬಿದ್ದಾಳ ಹಾರಿ ಪಾಮಾ
ಬಾಯಿ ಬಿಚ್ಚಿ ಮಾತನಾಡದಂತೆ ಸುಮ್ಮಾ
ಮಂಚದಿಂದ ಉರುಳಿ ಅಂತಾಳ ಎತ್ತ ಹ್ವಾದೋ ಶಾಮಾ
ಪ್ರಾಣಕಾಂತ ಬಂದ ಕ್ಷಣಕ ಹೊತ್ತೆ ನಗೆಮುಖಾ ಈಗ
ಗುರಿ ಮಾಡಿ ಎತ್ತ ಬಿಟ್ಟ ಪೋದನಮ್ಮಾ
ಶಾಂತ ಮಾಡಲಿಲ್ಲ ಎನ್ನ ಮನಸಿನ ಪ್ರೇಮಾ
ಚಿತ್ರರೇಖಾ ಉಷಾಗಂತಾಳ ಯಾಕಮ್ಮಾ ದೊರಿಶಾನಿ
ನಿನಗೇನಂತಾ ದುಃಖವಾಗೇದ್ಹೇಳಮ್ಮಾ
ಮೂರ ಲೋಕದೊಳಗ ಮಿಕ್ಕಿದ ಕಾರ್ಯ ಮಾಡೇನಮ್ಮಾ
ನೀನು ಸಾಕಿದಂಥಾ ತೊತ್ತು ನಾನು ನೋಡಮ್ಮಾ
ಕೇಳಿ ಉಷಾ ಅಂತಾಳಾಗ ಪ್ರಾದಿ ಸಖಿ ನಿನಗ
ಹೇಳೆನಂದರ ಎನಗ ಹೇಳಾಣಾಗದಮ್ಮಾ
ಎನ್ನ ಹರಣ ಹಾರಿ ಪ್ರಾಣ ಸ್ಯೆರಿಸದಮ್ಮಾ
ರಾತ್ರಿ ಸ್ವಪ್ನದೊಳು ರತಿಕ್ರೀಡೆ ಆಡಿದಂತೆ ಪತಿ
ಎತ್ತ ತಪ್ಪಿಸಿ ಹೋದ ನೋಡಮ್ಮಾ
ಎದಿಗೆ ಎದಿ ಹೋಲುವಂಥಾ ಗದ್ದಾ ಹಿಡಿದನಮ್ಮಾ
ಅಂತವನ್ಹೊರತ ಜಡದೇಹ ನಂದು ಸುಡಲಮ್ಮಾ
ಈರೇಳು ಲೋಕದೊಳಗಿಲ್ಲ ಚಲ್ವಿಕಿಗೆ ಹೋಲುವುದಿಲ್ಲ
ಏನು ಸುಡತಿ ತಗಿ ಕಪ್ಪ ಚಂದ್ರಾಮಾ
ಅವನ ಮೇಲಿಂದ ನಿವಾಳಿ ಮಾಡಿ ಒಗಿ ಕಾಮಾ
ವಿರಹ ತಾಪದಿಂದ ಅರ್ಧ ಕ್ಷಣ ಆದರೂ ತಾಳಲಾರೆ
ದಾರ ಮುಂದ ದುಃಖ ಹೇಳಲಮ್ಮ
ಅಂತಾದೇನು ಮಾಡಿ ಬಂದೀದೇನು ನಾ ಕರ್ಮಾ
ಗಂಡ ಇಲ್ಲದ ಭಂಡ ಆದೀತವ್ವಾ ನನ್ನ ಜಲ್ಮಾ
ಚಿತ್ರರೇಖಾ ಅಂತಾಳ ತಾಯಿ ಮತ್ತ ಬಿಡು ದುಃಖಾ ಎನಗ
ನಾರದ ಕೊಟ್ಟ ವರದ ಒಂದು ಅಡೀ ಅಮ್ಮಾ
ಆ ಜೋಲಿನಿಂದ ನಿನ್ನ ಪತಿಯ ತರುವೆನಮ್ಮಾ

**||ಚಾಲ||**

ಮೂರು ಲೋಕದೊಳಗೆ ಇದ್ದ ಪುರುಷನ
ತರಿಸಿ ವೀರರನ್ನೆಲ್ಲಾ ಬರೀತೇನೆ
ದಾರಿ ನೋಡವ್ವ ಇದರಾಗ ನಿನ್ನ ಪತಿ
ಚಿತ್ರ ಬರೆದ ತೋರಿಸ್ಯಾಳ ಆಗ ಗೆಳತಿ
ಇದು ಸ್ವರ್ಗ ವಿಸ್ತಾರಾ ಭಾಳ ನದರಿರಲಿ
ವರುಣ, ಯಮ, ಇಂದ್ರ, ತಾರಾಪತಿ,
ಅಗ್ನಿ, ಕುಬೇರ, ಮಾರುತಿ, ಬೃಹಸ್ಮತಿ
ಉಷಾ ಅಂತಾಳ ಲೋಕದಾಗ ಪ್ರಾಣಪತಿ
ಇಲ್ಲ ತಗಿ ಸುಳ್ಳ ಯಾಕ ತೋರಸತಿ
ಆಗ ತೋರಸ್ಯಾಳ ಪಾತಾಳದ ಅಳತಿ

**||ಸಣ್ಣ ಚಾಲ||**

ಉಷಾ ಅಂತಾಳ ಇಲ್ಲಮ್ಮ ಇದರಾಗ
ಮೃತ್ಯುಲೋಕ ತೋರಿಸ್ಯಾಳ ಆವಾಗ
ದ್ವಾರಕಾ ಪಟ್ಟಣದ ಸಮುದ್ರದೊಳಗ
ಅಲ್ಲಿ ತಸ್ವೀರ ಬರದಾಳ ತಾನು ಬೇಗ
ಉಷಾ ನಾಚಿ ಶರಗ ಹಾಕ್ಯಾಳ ತಲಿಮ್ಯಾಗ
ಪತಿ ನೋಡವ್ವ ಮಲಿಗ್ಯಾನ ಮಂಚದ ಮ್ಯಾಗ

**||ಕೂಡ ಪಲ್ಲ||**

ಮಧ್ಯರಾತ್ರಿಯೊಳಗ ಅನಿರುದ್ಧನ ತಂದರ ಸಖಿ
ಕೊಡುವೆ ನಿನಗ ಏನ ಬೇಕಿದ್ದು
ಅಂದ ಮಾತಿನಿಂದ ಪ್ರಾಣ ಹೋಯಿತ ಸೈರಿಸದು
ಚಿತ್ರರೇಖಾ ಅಂತಾಳ ಚಿಂತಿ ಬಿಡ ತರುವುದು
ಕೇಳೋ ಧರಣಿಪತಿ ರಾಜಾ ಜನಮೇಜಯ||ಜನೇ ಚೌಕ||

ಚಿತ್ರರೇಖಾ ಬಿದ್ದಾಳ ನಾರದ ಋಷಿ ಪಾದಮ್ಯಾಗ
ಹೇಳ್ಯಾಳೆಲ್ಲಾ ಬಿಡದೊಂದು ವರ್ತಮಾನಾ
ಅನಿರುದ್ಧನ ತರುದಕ್ಕ ಹೋಗುವಾಕಿ ನಾನಾ
ದ್ವಾರಕಾದ ಕಾವಲ ತಿರುಗುವದು ಸುದರ್ಶನಾ
ಅಂದಾನ ನಾರದ ಋಷಿ ಚಿತ್ರರೇಖಾ ಚಿಂತಿ ಬಿಡ
ನನ್ನಾಣಿ ಹಾಕಿದರ ನಿಂದ್ರೂದ ತಾನಾ
ಮಂತ್ರ ಹೇಳುವೆ ಅನಿರುದ್ಧ ಏಳದ್ಹಂಗ ಪುನಾಃ
ಬಂದಾಳ ದ್ವಾರಕಾಕ್ಕೆ ತಿರುಗಿ ಸುದರ್ಶನಕ
ಚಿತ್ರರೇಖಾ ನಾರದನ ಆಣಿ ಹಾಕ್ಯಾಳ ತಾನಾ

ಲಗು ಒಳಗ ಹೋಗಿ ನೋಡ್ಯಾಳ ಮಲಗಿದ್ದ ಅನಿರುದ್ಧ
ಮೋಹನಾಸ್ತ್ರ ಹಾಕಿ ಮಂಚ ನೆಗಿವ್ಯಾಳಾಕ್ಷಣಾ
ಅಂತ್ರ ಮಾರ್ಗದಿಂದ ಬಹಳ ತೀವ್ರದಲಿ ಬಂದ
ಉಷಾನ ಮಂದಿರದಲ್ಲಿ ಇಳಿಸ್ಯಾಳ ಆತನಾ
ನೋಡಿ ಉಷಾನ ಹರುಷಾ ಹಿಡಿಸವಲ್ದ ತ್ರಿಭುವನಾ
ಚಿತ್ರರೇಖಾ ಅನಿರುದ್ಧರ ಎಚ್ಚರ ಮಾಡಿ ಆಗಿನ ಕ್ಷಣ
ಸುತ್ತಮುತ್ತ ನೋಡ್ತಾನ ಖಬರಿಲ್ಲ ಏನಾ
ನೋಡ್ಯಾನೆಡಕ ಬಲಕ ನಿಂತಿರುವ ಸ್ತ್ರೀಯರನಾ
ಯಾವಾರ ಹೇಳಿರಿ ಇದು ಯಾವ ಮಾರಿ ರಾಜಾ ಇಲ್ಲೆ
ನೀವು ಯಾಕ ತಂದಿದೀರಿ ನನ್ನ ಸುಮ್ಮನಾ
ಖರೇ ಮಾತ ಹೇಳಿರಿ ಮೂಲ ಕಾರಣನಾ
ಚಿತ್ರರೇಖಾ ಅಂತಾಳ ಉಷಾ ಪ್ರಾಣಪ್ರಿಯದರಿಸಿ ಇಕೀ
ಜೀವದ ಗೆಳತಿ ಆಗಬೇಕ ನಾನಾ
ಗಿರಿಜೆ ವರವಿನಿಂದ ಬಿತ್ತ ಇವಳಿಗೆ ಸ್ವಪನಾ
ನೀವು ಭೋಗ ಕೊಟ್ಟ ಹೋದಿರಿ ಮೂಲ ಕಾರಣಾ
ಹೆದರಬ್ಯಾಡೋ ಪ್ರಾಣನಾಥಾ ನದರ ಇಡತಿ ದಾಸಿ ಮ್ಯಾಗ
ಇದರಾಗ್ಯಾವ ಮಾತ ಹೆಚ್ಚಿಂದಿಲ್ಲ ಇನ್ನಾ
ಇದರ ದಶಿಯಿಂದ ತಂದಿದ್ದೀವ ನಿಮ್ಮನ್ನಾ

**||ಚಾಲ||**

ಬಾಣಾಸುರನ ನಗರ ಇದು ಶೋಣಿತಪುರವು
ಪ್ರಾಣಪ್ರಿಯದರಸಿ ನಿಮಗ ಇಕಿ ಉಷಾ
ಚಿತ್ತ ಇಟ್ಟಾಳ ನಿಮ್ಮ ಪಾದಕಾ
ಕೇಳಿ ಅನಿರುದ್ಧ ಅಂತಾನ ಇಂಥಾ ವ್ಯಭಿಚಾರ
ಮಾಡೋದಕಿಂತ ಬಾಣಾಸುರಗ ಹೇಳಿ ಲಗ್ನಕಾ
ಏನ ಅಂಜಿಕಿತ್ತ ಹೇಳಿ ಕರಿಕಳಿಸುವದಕಾ
ನಿಮ್ಮ ತಂದಿ ಜರ ನಿಮ್ಮ ಮಾತ ಕೇಳದಿದ್ರ
ಒಂದ ಪತ್ರ ಕಳಿಸಬೇಕ ದ್ವಾರಕಾಕ್ಕಾ
ತಯಾರಾಗಿ ಬರತಿದ್ದೀವ ಯುದ್ಧಕಾ

**||ಸಣ್ಣ ಚಾಲ||**

ಜಾರ ಕರ್ಮ ಮಾಡುದಿಲ್ಲ ಸರಿ
ನಮ್ಮ ಸ್ಥಳಕ ನಮ್ಮನ್ನ ಕಳಿಸಿರಿ
ಉಷಾ ಹಾತೊರೆದು ಅಂದಾಳು

ಚಂದ್ರಬಿಂಬದ ಮುಖವ ನೋಡಿರಿ
ಚಕೋರ ಪಕ್ಷಿಯಂಥಾ ಕುಚ ಹಿಡಿಯಿರಿ
ಒಳ್ಳೆ ಅಕ್ಕರತೆಯಿಂದ ಸುಖ ಸುರಿಸಿರಿ
ಧಿಕ್ಕಾರ ಮಾಡಿ ಎನ್ನ ಹಾರಿಸಿ ಒಕ್ಕೊಟ್ಟ ನಡೆದರೆ
ನಿಮ್ಮ ಪಾದಕ್ಕ ನಿಶ್ಚಿಂತ ಪ್ರಾಣ ಕೊಡುವುದು
ಅಂತ ತೆಕ್ಕಿಲೆ ಹಿಡದಾಳ ಕೊರಳಿಗೆ ಬಿದ್ದು
ನಿಮ್ಮ ಲೆಕ್ಕಿಲ್ಲ ನನ್ನ ಬಯಕೆ ತೀರಿಸುವುದು
ಕೇಳೋ ಧರಣಿಪತಿ ರಾಜಾ ಜನಮೇಜಯ॥೬ನೇ ಚೌಕ॥

ಬೇಕಾಗಿ ಅನಿರುದ್ಧ ಯಾಕ ಆಗ ಒಲ್ಲದು ಸಖಿ
ಕೋಕಿಲದಂಥಾ ಶಬ್ದ ಕೇಳಿ ಮನಸೋತಾ
ರಂಗಮಂಟಪಕ ಹೋಗಿ ನಡಿಶ್ಯಾರವರು ಏಕಾಂತಾ
ಭಾಳ ಖುಷಿಯಿಂದ ಮನದಂಗಾಗಿ ಸಮ್ಮತಾ
ಅದೇ ವೇಳೆಯಲ್ಲಿ ಧ್ವಜಕಂಬ ಖಡ ಕಡಡಡ
ಧಡಧಡಿಸಿ ಬಿದ್ದೀತ ಅಡ್ಡ ಅವಚಿತ್ತಾ
ನೋಡಿ ಕಾವಲದವರೆದ್ದಾರಾ ಅಡಬಡಿಸುತಾ.
ದೂತರೋಡಿ ಬಂದ ರಾಜ ಕೂತಿದ್ದ ಸಭಾದಲಿ
ನಿಂತ ಅಂತಾರ ಕೇಳೋ ಪೃಥ್ವಿಯನಾಥಾ
ಧ್ವಜಕಂಬ ಕಳಸ ಬಿದ್ದೀತ ರಾಜಾ ಈ ಹೊತ್ತಾ
ಕೇಳಿ ಬಾಣಾಸೂರ ಆದ ಚಿಂತಾಕ್ರಾಂತಾ
ಅಂದಾನ ಇಂದೀಗಿ ವೈರಿ ಬಿದ್ದಾನ ನನಗೆ ಮುಂಚೆ
ಮಹಾದೇವ ಕೊಟ್ಟಂತಾ ವರವು ಖಚಿತಾ
ಈಗ ಬಂದೀತ ಪ್ರತಿತಿ ನನಗ ಆ ಮಾತಾ
ಅಷ್ಟ ಹೊತ್ತಿನೊಳಗ ದಾಸಿ ಬಂದಿದ್ದಾಳೆ ಅರಸಾ ನಿಮ್ಮ
ಮಗಳ ಕೃತ್ಯ ಏನ ಹೇಳಲಿ ವಿಪರೀತಾ
ಆರ ತಿಂಗಳಾಯಿತ ಪರಪುರುಷನ ಸಂಗಾತಾ
ನಿತ್ಯ ಕ್ರೀಡಾದಲ್ಲಿ ಇರತಾಳಾಕಿ ಭ್ರಮೀಸುತಾ
ನೋಡಿಕೋರಿ ನೀವು ಬೇಕಾದ ಮಾಡಿಕೋರಿ ನಾಳಿಗೆ
ಆಡಿಕೊಂಡಿರಂತೆ ಹೇಳುವೆ ಅಂಜುತಾ
ಧರಣಿ ಕೂತಾಳ ಮನಿಯಲ್ಲಿ ತರೂತಾ
ಕೇಳಿ ಬಾಣಾಸೂರ ಕಣ್ಣ ಕರ್ತದಂತೆ ಮಾಡಿ ತನ್ನ
ಸೈನ್ಯಕ ಹೇಳ್ಯಾವ ಲಗು ತಯಾರಾಗಲೆಂತಾ
ಗಗನ ಬಿಚ್ಚುವಂಥಾ ಗಡಣವಾದ್ಯ ಹೊಡೆಯುತಾ
ಉಷಾನ ಮಂದಿರಕೆ ಹಾಕ್ಯಾರ ಮುತ್ತಿಗಿ ಸುತ್ತ ಮುತ್ತಾ
ಸರ್ವರು ದೈತ್ಯರು ಎದ್ದು ಚೀರುವರು ಜಿಗ್ಗಾಸ ಕೊಟ್ಟಾ

ಹಾರುವು ತೋರುವರು ತಮ್ಮ ಪುರುಷಾರ್ಥಾ
ನಿಂತ ಕುರಿಯುವರು ವೈರಿಯನ್ನು ಬಾ ಅಂತಾ

**||ಚಾಲ||**

ಉಷಾ ಅನಿರುದ್ಧನ ವಿನೋದದಲ್ಲಿ ಇದ್ದ ವೇಳೆ
ಭಾರಿ ಘೋರ ಶಬ್ಧ ಬಿದ್ದಿತಾಕಿ ಕಿವಿಗಿ
ಎದ್ದ ಕೂತ ಕೇಳ್ಯಾನ ಭ್ರಾಂತ್ಯಾಗಿ
ರಾಜಹಂಸ ಪಕ್ಷಿ ಹಿಡದ ಪಂಜರದೊಳಗ
ಹಾಕಿದಂಗ ಆದೀತ ಇಂದೀಗಿ
ಮುಕ್ತಾ ಫಳ ಒಗದ್ಹಂಗ ಬೆಂಕೀಗಿ
ಅಮೃತದ ಕುಪ್ಪೆ ಕೆಸರೊಳಗ ಸುರವಿದಾಂಗ
ನೀವ ಬಂದ ಸಿಕ್ರಿ ನಮಗಾಗಿ
ನಮ್ಮ ಕಾಳ ಒದಗೀತ ಇಂದೀಗಿ

**||ಸಣ್ಣ ಚಾಲ||**

ಅನಿರುದ್ಧ ಆದಾನಿ ಸುಮ್ಮನಾ
ಮಾತನಾಡದಾ ಕೂತಾನ ಏನೇನಾ
ಖಡ್ಗದಿಂದ ಕೊಯ್ಯಿರಿ ಎನ್ನ ಗೋಣಾ
ತಪಾ ಮಾಡದೆ ಹೋಗಲಿ ಮುಂದೆ ಪ್ರಾಣಾ
ಅಂವಾ ಅಂತಾನ ಸಖಿ ಇದೇನಾ
ಯಾಕ ಪ್ರಾಣ ಹೋಗಲೆಂತಿ ಸುಮ್ಮನಾ

**||ಕೂಡ ಪಲ್ಲ||**

ಅನಿರುದ್ಧ ಅಂತಾನ ಸಖಿ ಇದ್ಯಾಕಿಷ್ಟ ದುಃಖ ಬಂದ
ಕ್ಷಣದಲ್ಲಿ ಚೆಲ್ಲುವೆ ಸಾಲಸಾಲ ಕೊರೆದು
ಕುಲದೀಪ ಇದ್ದೇನೆ ನಾ ಯಾವಂದು
ಹಲ್ಲ ಮುರಿದು ಬಿಸುಡುವೆ ಆತನ ಸಿರಹರಿದು
ಕೇಳೋ ಧರಣಿ ಪತಿ ರಾಜಾ ಜನಮೇಜಯಾ||೭ನೇ ಚೌಕ||

ವೀರ ಉಡಗಿ ಉಟ್ಟ ಬಾಗಿಲ ಸರಳ ಕೈಯಾಗಕಿತ್ತು
ಹಾರಿದ ಒಮ್ಮೆಗಿಲೆ ನಡವ ದಂಡಿನ ಒಳಗ
ಕರಿ ವೀರರನ್ನೆಲ್ಲಾ ಸವರ್ಯಾನ ಹರಿಮರಿಹಂಗ
ತಿರವಿ ಬಿಸರಾಡಿ ಹೊಡದಾನ ತನ್ನ ಬಲ್ಲಾಂಗ
ಸೋಲಾದಾವ ಎಲ್ಲಾ ಹೊಟ್ಟೆ ಮೇಲು ಮಾಡಿಕೊಂಡು ಬಿದ್ದು

ಕೋಲಾಹಲ ಹಿಡಿಸಿದ ಒಂದ ಗಳಿಗ್ಯಾಗ
ಹೆಣಾ ಸಾಲ ಮೇಲ ಬಾಳಿದಂಡ ಕೊರದ್ಹಂಗ
ಪುಂಡ ದೈತ್ಯರನೆಲ್ಲಾ ತುಂಡ ತುಂಡ ಮಾಡಿದಾತಿರುಗಿ
ಹಿಂಡೆ ಗ್ಹಾಂಡ ಹಂಗ ಓಡತಾರ ಕುರಿ ಮರಿ ಹಂಗ
ಕಂಡ ಬಂಡಾಗಿ ಬಿದ್ದಾವ ಮಣ್ಣ ಬಾಯಾಗ
ಕಂಡಗ ಮಾಂಸದಿಂದ ಕೆಕ್ಕರ ಹಣ್ಣು ಬಚ್ಚಿದ್ಹಾಂಗ
ತಂಡ ತಂಡ ವೀರರನೆಲ್ಲಾ ತುಂಡ ತುಂಡ ಮಾಡಿದ ಕೈ
ಮಂಡ ಮಂಡ ಮಾಡಿಕೊಂಡು ಬಿದ್ದು ರಣದೊಳಗ
ಭಾಳ ಅಮಿತದಿಂದ ಹೊಡತದ ಒಳಗ
ಕೆಲವರ ಓಡ್ಯಾರ ಮತ್ತೆ ಕೆಲವರ ಬಿದ್ದಾರ ಸತ್ತ
ಕೆಲವರ ತೇಲ್ಯಾಡತಾರ ರಕ್ತದ ಒಳಗ
ಕೆಲವು ಹೆಣಗೋಳ ಉಳ್ಯಾಡತಾವ ಗಾಯದೊಳಗ
ದಂಡ ಚೆಲ್ಲಾಪಿಲ್ಲಿ ನೆಲ್ಲಿಕಾಯಿ ಮಟ್ಟಿ ಒಲದಂಗ
ಕಾಲಾ ಬಾಲಾ ಎಲ್ಲಾ ಹೊಟ್ಟೆ ಮೇಲ ಮಾಡಿಕೊಂಡ ಬಿದ್ದು
ಸುಳ್ಳ ಉಂಡುಂಡು ತಿರಗವರ ಎಲ್ಲಾ ರಣದೊಳಗ
ಅಲ್ಲಾ ಖಂಡಗ ಮಾಲಿದಿ ಉಂಡಿ ನುಂಗಿದ್ಹಂಗ
ಗಾಯದಿಂದ ಉಳಿದ ಸೈನ್ಯ ಏಳತ ಬೀಳತ ಬಾಣಾಸುರಗ
ಅಳುತ ನೆಳ್ಳುತ ಹೇಳತಾರಾವಾಗ
ಉಳದ ಬಂದಾಂಗಾತರಿ ಅರಸಾ ಕಾಳನ ಬಾಯಾಗ
ನಾಳೆ ಗುಳೇ ಕಟ್ಟು ವ್ಯಾಳೆ ಬಂತು ನಮಗ ನಿಮಗ
ಕೇಳಿ ಬಾಣಾಸೂರ ಕೋಲಾಹಲ ಮಾಡಿದ ನಿಂತ
ಭುಜಗಳ ಚಪ್ಪಡಿಸಿ ಹಿಡಿದು ಕೈಯಾಗ
ಓಡಿ ಹ್ವಾದಾನ ಒಮ್ಮಿಗೀಲೆ ಅನಿರುದ್ಧನ ಮ್ಯಾಗ

**||ಚಾಲ||**

ಬತ್ತಿ ಹಿಡಿದ ಅನಿರುದ್ಧನ ಮೇಲೆ
ಎತ್ತಿ ಕತ್ತಿ ನೆಗವಿದ ಅವನ ಕುತ್ತಿಗಿ ಕೊಯ್ಯಲಾಕ
ನೆಗವಿದ ಕೈಯ ಹಿಡಿದ ಮಂತ್ರಿ ಮೇಲಕ
ಇವನ ಕೊರಳ ಕೊಯ್ದರ ನಿಮ್ಮ ಮಗಳಿಗಿ
ರಂಡಿತನಾ ಬಂದೀತ್ರ ಆಕಿ ಪಾಲಕ
ತಿಳದ ಕೊಯ್ಯಿರಿ ಇದ ಅಲ್ಲ ನಿಮ್ಮ ಲೆಕ್ಕ
ಅಂದ ಮಂತ್ರಿಯ ಮಾತ ಕೇಳಿ
ಅವನ ಬಂದಿಯಲ್ಲಿ ಇಟ್ಟಿದ್ದು ನೋಡಿ
ನಾರದ ಹ್ವಾದಾನು ದ್ವಾರಕಾಕ
ನೀವ ಕೂತರಿ ಯಾಕ ಸುಮ್ಮಕ

||ಸಣ್ಣಚಾಲ||

ನಿಮ್ಮ ಮೊಮ್ಮಗನಿಟ್ಟಾರ ಬಂದಿಯಲಿ
ನೀವು ಕೂತಿರೇನು ಚಿಂತಿ ಇಲ್ಲದಲಿ
ಕೇಳಿ ಕೃಷ್ಣನಾಗ ಕೋಪದಲಿ
ಛಪ್ಪನ್ನ ಕೋಟಿ ಯಾದವರ ಸಹಿತದಲಿ
ಬಂದ ಮುತಗಿ ಹಾಕ್ಯಾರ ಬಾಣಾಸೂರನ ಮ್ಯಾಲಿ
ಘೋರ ಯುದ್ಧ ನಡದೀತ ಕಣದಲಿ

||ಕೂಡಪಲ್ಲ|

|ಕಲಹ ಹಚ್ಚಿಸುವದಕೆ ನಾರದ ಕೈಲಾಸಕ್ಹೋಗಿ
ಬೇಗ ತ್ರಿಶೂಲಧರಗ ನಿಂತ ಹೇಳುವದು
ಏನ ಹೇಳತಿ ನಿಮ್ಮ ಮಗ ಬಾಣಾಸುರಂದು
ಹೆಸರ ಮುಳಗಿಹೋತ್ರಿ ನಿಮ್ಮ ಪುತ್ರೆಂಬುದು
ಕೇಳೋ ಧರಣಿಪತಿ ರಾಜಾ ಜನಮೇಜಯಾ||ಲನೇ ಚೌಕ||

ಪಿಶಾಚಿ ಗಣ ಸಹಿತ ಮಹೇಶ ಬಂದಾನ ರಣ
ಆಕ್ರೋಶ ನಡೆಸೀದ ಢಡಣದ ನಾದಾ
ಪುರಮಾಸಿ ತ್ರಿಶೂಲ ಹಿಡಕೊಂಡ ಬಂದಾ
ನಿಂತ ಅಸೂರಗಂತಾನ ಅಂಜಬ್ಯಾಡ ನನ್ನ ಕಂದಾ
ಹೊಡಿವೀನಿ ಇಂದಿಗಿ ಕೃಷ್ಣನ ಕೆಡವೀನಿ ನೆಲಕ ಬಂದ
ಇಂದ ನನ್ನ ಕೈಯಾಗ ಸಿಕ್ಕಿದಾ
ನಂದಿ ಹೊಡದಾನ ಕೃಷ್ಣನ ಮೇಲಿ ಭರದಿಂದಾ
ಈಶ್ವರ ಅಂತಾನ ಹರಿ ನೀ ಈಗ ಪ್ರಳಯ ನಾನು
ಸಂಹಾರ ಮಾಡುವೆ ಲೋಕಪಾಲನೆ ನಿಂದಾ
ದಾರ ಆಟ ಸಾಗೋಣಿಲ್ಲ ಕೃಷ್ಣ ನನ್ನ ಮುಂದಾ
ಹರಿ ನಕ್ಕೋತ ಮಹಾದೇವಗಂದಾ
ಕೊಲ್ಲಾವೆಲ್ಲ ನೀ ಖರೆ ಕಾಯಾಂವೆಲ್ಲಾ ನಾನಲ್ಲ
ಕಾಯಾಂವ ಮುಂದ ಕೊಲ್ಲಾವೇನ ಮಾಡುವದಾ
ಅಂದ ಮೋಹನಾಸ್ತ್ರ ಹಾಕಿ ಹರನ ಕೆಡವಿದಾ
ಇತ್ತ ಕಾರ್ತಿಕಸ್ವಾಮಿ ಮನ್ಮಥ ಇಬ್ಬರದ
ಒಳ್ಳೆ ಅದ್ಭೂತ ನಡೀತ ಘೋರ ಯುದ್ಧ
ಷಣ್ಮುಖ ಅಂತಾನ ಮದನಗ ಏನ ಎಲ್ಲೋ ಇದರಂದಾ
ನೀನು ಕೆಡಗಿನ ಕಡೆಗೆ ಸ್ತ್ರೀಯರ ಬಳಗ ಇರುವುವದಾ
ಮದನ ಅಂತಾನ ಷಣ್ಮುಖಗ ನಿನಗೇನ ಗೊತ್ತಪ್ಪಾ

ಗುಡ್ಡ ಗಹ್ವರದಲ್ಲಿ ನಿಂತ ತಪಾ ಮಾಡುವದಾ
ಇಲ್ಲಿ ಸಾಗಾದಪ್ಪಾ ರಣದ ಕೆಲಸ ನಿನ್ನಿಂದಾ
ಸ್ತ್ರೀಯಾಸೆ ಬಿಟ್ಟ ಕ್ಷಣಕ ಕೋಟ್ಯಾನಕೋಟಿ ಹೆಂಗಸರಾ
ಎಲ್ಲಾ ಷಣ್ಮುಖನ ರಥದ ಸುತ್ತ ಮುತ್ತಗಿ ಕವಿದರಾ
ಗಡಿಬಿಡಿಸಿ ಷಣ್ಮುಖ ಅಂಜಿ ಅತ್ತ ಓಡಿ ಹೋದಾ
ಹಂಗ ಹೆಂಗಸೆರೆಲ್ಲಾ ಹತ್ಯಾರ ಅವನ ಬೆನ್ನ ಹಿಂದಾ
ತಿರುಗಿ ನಿಂತ ಅವರಿಗೆಲ್ಲಾ ನೀಡಾನ ಶಾಪ ಕೊಟ್ಟಾ
ನನ್ನ ಮಾರಿ ನೋಡಿದ್ದಕ್ಕ ಇನ್ನ ಮುಂದಾ
ಏಳು ಜನ್ಮ ತನಕಾ ರಂಡಿತನಾಭೋಗಿಸಂದಾ

**||ಚಾಲ||**

ಕೃಷ್ಣ ಸುದರ್ಶನ ಬಿಟ್ಟ ಬಾಣಾಸುರನ
ನಾಶ ಆದಾನವ್ವ ಹಸ್ತ ಕತ್ತರಸಿ ಒಗದಾ
ಎರಡು ಹಸ್ತ ಶಿಲ್ಕಿ ಅವಗ ಕಾಯದಾ
ಮೂರ್ಛಿ ಸಾವರಿಸಿ ಎದ್ದ ಸಾಂಬ ಬಾಣಾಸುರನ
ಹಿಡದ ಕೃಷ್ಣನ ಕೈಯಾಗ ನೀಡಿದಾ
ಜ್ವಾಕಿ ಮಾಡಂತ ಭಕ್ತನ ಬಿರದಾ
ಪುನಃ ಲಗ್ನ ಮಾಡಿಕೋದಕ್ಕ ಹಿಡದಾ

**||ಸಣ್ಣಚಾಲ||**

ಉಷಾ ಅನಿರುದ್ಧ ಇಬ್ಬರಿಗಿ ಆಜ್ಞೆ ಮಾಡಿ
ತಿರಗಿ ಬಂದಾರ ದ್ವಾರಕಾಕ್ಕ ತಾವು ಕೂಡಿ
ಹರುಷ ಆದಾರ ಸರುವ ಸೈನ್ಯ ನೋಡಿ
ಜಯಾ ತಕ್ಕೊಂಡ ಯುದ್ಧ ಮಾಡಿ
ಪ್ರಾಂತದೊಳಗ ಕರ್ನಾಟಕ ಬಾಗೇವಾಡಿ
ಗುರು ಅಣ್ಣಾರಾವಜಿ ಹೇಳಿದಂತ ನುಡಿ

**||ಕೂಡಪಲ್ಲ||**

ಬಾಳಗೋಪಾಲನ ಕವಿತೆ ತೋಡಿ ಮುತ್ತಿನಂತೆ ಇದು
ತಿಳಿದವರಿಗೆ ಅಮೃತದಂತೆ ಹತ್ತುವದು
ತಿಳಿಯದವರ ಮುಂದೆ ಸುಳ್ಳ ಒದರಿ ಸಾಯುವದು
ಸವಿ ತಗೊಂಡಾನು ಸವಿಗಾರ ಅವರದ್ದು
ಕೇಳೋ ಧರಣಿಪತಿ ರಾಜಾ ಜನಮೇಜಯಾ||೯ನೇ ಚೌಕ||

*ರಚನೆ :* ಬಾಳಗೋಪಾಳ

*ಕೃತಿ :* ಜಾನಪದ ಝೇಂಕಾರ

## ೩೧. ವತ್ಸಲಾಹರಣ

**೧ನೇ ಚೌಕ –**

ಪಾಂಡವರಿಗೆ ಕೊಟ್ಟೇಣ್ಣ ಬಳರಾಮ ನಿಶ್ಚಯ ಮಾಡಿದಾನ ಕೌರವಗ ।
ತಾ ಕೊಟ್ಟ ದುರ್ಯೋಧನನ ಮಗಗ ।
ಭಾಳ ಪ್ರೀತಿ ಕೃಷ್ಣ ಪಾಂಡವರ ಮ್ಯಾಗ ।
ಆಡಿದ ಮಾತಿಗೆ ತಿರುಗಿ ಹೂಡಿದರ -
ಸಿಟ್ಟು ಬಂತು ಆ ಗಿರಿಧರಗ ।
ಮುಂದೆ ವತ್ಸಲಾಹರಣ ಹೇಳುವೆನೀಗ ।
ಪ್ರಥಮದಲ್ಲಿ ಸುಭದ್ರ ತವರಮನಿಗ್ಹೋದಾಗ ಬಳರಾಮನ್ಹೇಣತಿ ।
ಬಸರಿದ್ದಳಾಗ ಆ ರೇವತಿ ।
ಸುಃಭದ್ರ ಕೇಳ್ಯಾಳ ಅಣ್ಣನ ಹಂತಿ ।
ಹೆಣ್ಣು ಹುಟ್ಟಿದರಭಿಮಾನ್ಯಾಗ ಕುಡುವುದು-
ನಿಶ್ಚಯ ಮಾಡಿ ಬಿಟ್ಟಾಳ ಪೂರ್ತಿ ।
ಮುಂದ ಹೆಣ್ಣು ಹುಟ್ಟಿತು ಆಕಿಯಂತೈತಿ ।
ನಿಶ್ಚಯ ಮಾಡ್ಯಾರ ಬಳಭದ್ರನ ಮಗಳನ್ನ ಅಭಿಮಾನ್ಯಗ ಕೊಟ್ರು ವಚನ್ಹೋಗೈತಿ ।
ಭಾಳ ಹರುಷವಾದ ಕೃಷ್ಣ ಮೂರುತಿ ।
ಮುಂದ ಪಾಂಡವರು ವನವಾಸಕ್ಹೋಗೂದೈತಿ ।
ವಿದುರನ ಮನೆಯಲೆ ಇಟ್ಟು ಸುಭದ್ರಾನ-
ಹೊಂಟು ಹೋದರು ಬಿಟ್ಟು ಹಸ್ತಿನಾವತೀ ।
ಭೂಮಿಸೀಮಿ ಕಳಕೊಂಡು ಆಗಿ ಫಜೀತಿ ॥
ಇತ್ತ ಕೌರವನ ಮಗಗ ಹೆಣ್ಣ ಬೇಕಾಗಿ ಶಕುನಿ ತೆಗೆದಾನ ಯುಕ್ತಿ ।
ಬಳರಾಮನ ಕೇಳಿದಾ ಬಂದು ಮಾಡಿ ಮಮತಿ ।
ನಿನ್ನ ಮಗಳನು ಕುಡು ಆಗಲೆಕ್ಕರತಿ ।
ಬೇಕಾದ್ದು ಉಂಡಾಳು ಉಟ್ಟಾಳು ತೊಟ್ಟಾಳು-
ಚೂರ ಮಾಡಬೇಡ ನೀ ಚಿಂತಿ ।
ಕುಡು ವಚನ ಇದಕ ಹೇಳು ಏನಂತಿ ॥

**॥ಇಳುವು॥**

ಇಷ್ಟು ಮಾತ ಕೇಳಿ ಕೃಷ್ಣಂತಾನ ಶಕುನಿಗಿ -
ಬಳರಾಮನ ಮಗಳನ್ನ । ಅಭಿಮನ್ಯುಗೆ ಕೊಟ್ಟೈತಿ ವಚನಾ ॥

ಕೊಟ್ಟಂಥ ಹೆಣ್ಣ ಮತ್ತ ತಿರುಗಿ ನಿಮಗೆ ನಾನು
ಕೊಡಬೇಕು ಹ್ಯಾಂಗ ಹೇಳಿನ್ನ । ಜನದೊಳಗ ಹೋದಿತೊ ನಮ್ಮ ಮಾನ
ಇದರ ಮ್ಯಾಲ ಬಳರಾಮನ ಖುಷಿ ಬಂದಾಂಗ ಮಾಡಲಿ
ಇಲ್ಲ ಸ್ವಾಧೀನ । ಇದರೊಳಗೆ ಹೋಗುವದಿಲ್ಲ ನಾನು ॥
ಕೃಷ್ಣನ ಮಾತಿಗಿ ಬಳರಾಮ । ಸಿಟ್ಟಿಗೆದ್ದು ಅಂತಾನ ಕೇಳೊ ಶ್ಯಾಮ ॥
ನಾ ವಚನ ಕೊಟ್ಟೆಲ್ಲೊ ಸತ್ಯ ಧರ್ಮ । ನಕ್ಲಿ ಆಡಿದ ಮಾತೇನೊ ಕಾಯಿಮ ॥
ತಂಗಿ ಭಿಡೆಕ ಮಾಡಿನಿ ಸುಳ್ಳೆ ಪ್ರೇಮ । ನನ್ನ ಮನಸು ಇದ್ದಿಲ್ಲ ಕುಡುನೇಮ ॥

**||ಏರು||**

ಕೃಷ್ಣನ ಮಾತ ಮೀರಿ ಕೊಟ್ಟ ಬಳರಾಮ ಕೌರವೇಂದ್ರನ ಮಗ ಲಕ್ಷಣಗ ।
ಭಾಳ ಪ್ರೀತಿ ಬಂದು ತನ್ನ ಮನದಾಗ ।
ಮದುವಿ ಮಾಡಿಕೋ ಅಂದ ಶಕುನೀ ಮಾಮಾಗ ।
ಆಡಿದ ಮಾತಿಗೆ ತಿರುಗಿ ಹೂಡಿದರ-
ಸಿಟ್ಟುಬಂತು ಆ ಗಿರಿಧರಗ । ಮುಂದ ವತ್ಸಲ ಹರಣ ಹೇಳುವೆನೀಗ ॥

**೨ನೆಯ ಚೌಕ –**

ಕೇಳಿ ಬಳರಾಮನ ಮಾತಿಗಿ ಶಕುನಿ ಬಂದು ಹೇಳಿ ದುರ್ಯೋಧನಗ ।
ಬಳರಾಮ ಹೆಣ್ಣ ಕೊಟ್ಟಾನೊ ನಿಮಗ ।
ನಿಶ್ಚ ಮಾಡಿ ಬಂದೆ ನಾ ಲಕ್ಷಣಗ ।
ನಾಳೆ ಉದಯಕ ಹೊಂಡರಿ ಲಗ್ನಕ-
ತಡಾ ಮಾಡಬೇಡರಿ ಬೇಗ । ತೀರಿ ಹೋಗಲಿ ಕಾರ್ಯ ತೀವ್ರವಾಗಿ ॥
ಕೇಳಿ ದುರ್ಯೋಧನ ತಯಾರ್ನಡಿಸಿದಾ ಚತುರಂಗ ಬಲವೆಲ್ಲ ಸಹಿತಾಗಿ ।
ಆನಿ ಕುದರಿ ದಂಡ ಮಾರ್ಬಲ ಸಾಗಿ ।
ದಾರಿ ಹಿಡದಾರ ಅರ್ತಿಲಿ ದ್ವಾರಕಿಗಿ ।
ಅಗಣಿತ ಬ್ರಹ್ಮರು ಬ್ರಹ್ಮ ಋಷಿಗಳು-
ಮಹಾರಥಿಕರು ಭೂಷಣವಾಗಿ । ಹೀಂಗ ನಡೆದರ್ವಾದ್ಯ ಗಡದಣ ಒಳಗೆ ॥
ಇತ್ತ ದ್ವಾರಕಿಯಲ್ಲಿ ಬಳರಾಮ ಲಗ್ನಪತ್ರ ಬರೆದ ಬೀಗ ಬಾಂಧವರೀಗಿ ।
ಮತ್ತ ದೂತನ ಕಳಿಸಿದ ಹಸ್ತಿನಾವತಿಗಿ ।
ಸುಭದ್ರ ಇದ್ದಳು ವಿದುರನ ಬಳಿಗಿ ।
ಬರುವ ದೂತನ ದಾರಿಯೊಳಗ ಸುಭದ್ರ-
ಅರಳಿ ಮರದ ಪ್ರದಕ್ಷಿಣಿಗಿ । ತಾ ಬಂದಾಗ  ಕಂಡಳಾ ದೂತನಿಗೆ ॥

**||ಇಳುವು||**

ನಿಂತು ಸುಭದ್ರ ಅಂತಾಳ ಯಾಕೋ ದೂತಾ-
ಏನು ಕಾರಣ ಬಂದಿ ಇಲ್ಲಗಿ | ಏನು ಸುದ್ದಿ ತವರಮನಿ ಕಡಿಗೀ ||
ಆ ದೂತ ಹೇಳ್ಯಾನ ಬಳರಾಮನ ಮಗಳನ್ನ-
ದುರ್ಯೋಧನನ ಮಗನಿಗಿ | ನಿನ್ನೆ ಕೊಟ್ರು ಲಗ್ನ ನಾಳಿಗಿ ||
ವತ್ಸಲಾನ ಮದುವಿಗಿ ವಿದುರಗ ಬಾಯೆಂದು
ಹೇಳಿ ಹೋಗತಿನಿ ತಿರುಗಿ | ನಾ ಬಂದಿನಿ ಇದರ ಸಲುವಾಗಿ ||
ಕೇಳಿ ಸುಭದ್ರ ಬಿದ್ದಾಳ ಧರಣಿಗಿ | ನೀರು ತಂದ ಅಳತಾಳ ಕಣ್ಣಿಗಿ ||
ತವರ ಮನಿ ಇಲ್ಲಧಾಂಗ ಇಂದಿಗಿ | ಆಗಿ ಹೋಯ್ತು ನನ್ನ ಪಾಲಿಗಿ ||
ನನ್ನ ಮಗಗ ಇಟ್ಟ ಹೆಣ್ಣ ಬೇಕಾಗಿ | ಬಳರಾಮ ಕೊಟ್ಟ ಅವರಿಗಿ ||

**||ಏರು||**

ಕೃಷ್ಣ ಬುದ್ಧಿ ಹೇಳಲಿಲ್ಲೇನಣ್ಣಗ ಕರುಣವಿಲ್ಲದೆ ಕೊಟ್ಟಾರ ಅವಗ |
ನನಗಾತು ಮುಗಿಲು ಹರಿದು ಬಿದ್ದಾಂಗ |
ಕಿಚ್ಚ ಸುರುವಿತು ಸುಭದ್ರಾನ ಹೊಟ್ಯಾಗ |
ಆಡಿದ ಮಾತಿಗೆ ತಿರುಗಿ ಹೂಡಿದರ-
ಸಿಟ್ಟು ಬಂತು ಆ ಗಿರಿಧರಗ | ಮುಂದ ವತ್ಸಲಹರಣ ಹೇಳುವೆನೀಗ ||

**೩ನೆಯ ಚೌಕ-**

ತರವಮನಿಯ ಆಶೆಯಿಂದ ನನ್ನ ಪತಿ ಅರ್ಜುನನ ನಾ ಮರೆತೇನೋ |
ನಮ್ಮಣ್ಣಗಳದಿಂದ ಧೈರ್ಯ ಹಿಡಿದೇನೋ |
ನನ್ನ ನೋಡ್ತಾರ ಅಂತ ಭಾಳ ನಂಬಿದೆನೋ |

ಅಯ್ಯಯ್ಯೋ ದೇವಾ ಮುನಿದ್ಯಾ ಇಂದಿಗೆ -
ಅಂಥಾದ್ದೇನು ಅವರಿಗಿ ಮಾಡಿದೆನೊ | ಇಂದೀಗಿ ಕೊಯ್ದಾರ ನನ್ನ ಕೊರಳವನು ||
ಆಸರಿಲ್ಲದೆನಾ ಇರಲಾರೆನು ಅಯ್ಯಯ್ಯೊ ಉರಲ ಹಾಕಿಕೊಳ್ಳಲೇನೊ
ನಮ್ಮಣ್ಣಗಳ ಮುಂದ ಪ್ರಾಣಬಿಡಲೇನೋ |
ಮಾರಿತೋರದೆ ಭೂಮಿಯ ಬಗದ್ಹೊಗಲೇನೊ |
ಎದ್ದೆದ್ದು ಬೀಳತಾಳ ಪದ್ಮ ಗಂಧಿ ಹದ್ದ-
ಹಾವ ಕಚ್ಚಿದಾಂಗ ಅಭಿಮಾನ್ಯನ್ನು
ತೆಕ್ಕಾಯ್ದು ಮಾಡತಾಳ ದುಃಖವನು ||
ಮಗನೆ ನಿನ್ನ ದೈವ ಏನಾತಂತ ಮರಮರಗಿ ಬಡಕೊತಾಳ ಎದೆಯನ್ನು |

ಈಗ ಹೋಗ್ಯಾರ ಪಾಂಡವರು ವನವಾಸವನು |
ಅವರಿದ್ದರ ಬಿಡತಿದ್ದಿಲ್ಲ ಹೆಣ್ಣನ್ನು |
ಯಾರಿಗ್ಹೇಳಲಿ ಏನು ಮಾಡಲಿ ಅಯ್ಯೊ-

ಇಲ್ಲದ್ದಾಂಗ ಆಗ್ಯೈತಿ ನನಗ ದಿಕ್ಕವನು ।
ಕತ್ತಿದ್ದಾಂಗ ಹಾರಾಡೂ ಹಕ್ಕಿ ಪಕ್ಕವನು ॥

**||ಇಳುವು||**

ನೆರಕುರುಳ್ಯಾಡತಾಳ ಬಲು ಹೊರಳ್ಯಾಡತಾಳ
ತಳಮಳಿಸಿ ತಾಳದ ಸಂಕಟ ।
ಖಬರಿಲ್ಲ ಆಕಿಗೀ ಎಳ್ಳಷ್ಟ ॥
ಮಾಡಸ್ತಾನ ಗಾಳಿ ಬೀಸ್ತಾನ ಕೈಹಿಡಿ
ದೆಬ್ಬಸ್ತಾನ ಮಾಡಿ ಕೂಗ್ಯಾಟ ।
ಅಭಿಮನ್ಯು ನೋಡಿದ ಕಣ್ಮುಟ್ಟ
ತಾಯಿ ಖಬರ್ಹಾರಿ ಹೋದಂಗಾಯ್ತೊ ಜೀವ । ಅಭಿಮನ್ಯು ಅಳ್ತಾನ ಸಣ್ಣವ ॥
ನಡುಹೊಳ್ಯಾಗ ಮುಳಗಿದ್ದಾಂಗ ನಾವು । ನಮಗಾತು ಮುನಿದಾ ಇಂದ ಶಿವ ॥

**||ಏರು||**

ಮತ್ತೆ ಭೌಳಿ ತಿಳಿದೆದ್ದು ಸುಭದ್ರಾ ಎದಿಗುದ್ದಿಕೊಂಡಾಳ ಕಲ್ಲ ಕಯ್ಯಾಗ ।
ಆಗ ಧೈರ್ಯ ಬಂತು ಅಭಿಮಾನ್ಯಗ ।
ತಾಯಿ ಕೈಯ ಹಿಡಿದ ಆ ಕ್ಷಣದಾಗ ।
ಆಡಿದ ಮಾತಿಗಿ ತಿರುಗಿ ಹೂಡಿದರ
ಸಿಟ್ಟು ಬಂತು ಆ ಗಿರಿಧರಗ ಮುಂದ ವತ್ಸಲಹರಣ ಹೇಳುವೆನೀಗ ।

**ಆನೆಯ ಚೌಕ –**

ಸುಭದ್ರಾ ಅಳುವುದು ಕೇಳಿ ಅಭಿಮನ್ಯು ಅಳಬೇಡ ತಾಯಿ ಧೈರ್ಯ ಹಿಡಿಯಿನ್ನ ।
ನಿಮ್ಮಣ್ಣಗಳ ಆಶಾ ಇನ್ನ ಬಿಡು ನೀನಾ ।
ನನಗ ಕೊಟ್ಟಂಥ ಹೆಣ್ಣ ಆ ವತ್ಸಲನ ।
ತರದಿದ್ದರ ನಮ್ಮ ತಂದಿ ಅರ್ಜುನನ-
ವೀರ್ಯದಿಂದ ಹುಟ್ಟಿ ಫಲವೇನ ।
ಮೂರು ಲೋಕದೊಳಗಾಗುವೆ ಅವಮಾನ ॥
ಕೇಳೆ ತಾಯೆ ನಿನ್ನ ದಯಾ ಇದ್ದರ ಪೂರ್ವಾದ್ರಿ ಪಶ್ಚಿಮ ಕಿಡುದರಿದೇನ ।
ಪಶ್ಚಿಮಾದ್ರಿ ಪೂರ್ವಕ ತರುವೆನು ನಾನ ।
ಒಂದೆ ಬಾಣದಿಂದ ಆರಿಸುವೆ ಸಮುದ್ರವನ ।
ವಾಸುಕಿಫಣಿ ಮೆಟ್ಟಿ ಕುಣಿದಾಡಿ ಪಾತಾಳ-
ದಿಂದೆಳತರುವೆನಾ ಶೇಷನ್ನಾ ।
ಬುಡಮೇಲ ಮಾಡುವೆ ಬ್ರಹ್ಮಾಂಡವನಾ ॥
ಇಂಥಾ ಮಗನು ನಾನಿನ್ಹಂತಿರಲಿಕ್ಕೆ ನೆನಸುದ್ಯಾಕ ನಿಮ್ಮಣ್ಣಗಳನ ।

ನೆಪ್ಪತಗಿಬ್ಯಾಡ ದನದ್ದಿಂಡ ಕಾಯುವನ ।
ನೆಗಿಲ್ಹೊಡೆವ ಒಕ್ಕಲಿಗನ ಬಳರಾಮನ್ನ
ಮಾನಭಂಗ ಮಾಡಿ ಆ ಹೆಣ್ಣ ತಂದರ-
ಆಗನ್ನ ಪಾಂಡವರ ಕುಲ ರನ್ನಾ ।
ಯಾವ ಒಯ್ತಾನ ನಡಿ ಆ ಹೆಣ್ಣನ್ನ ॥

**॥ಇಳುವು॥**

ಹೀಗಂದು ಅಭಿಮನ್ಯು ನುಡಿದಾ ಒತ್ತರಲಿ
ರಥಾ ಹೂಡಿದ ಸಿಟ್ಟಲಿ । ಬಿಲ್ಲ ಬಾಣ ತಗೊಂಡ ಕೈಯಲಿ ॥
ತನ್ನ ಬಾಯಿ ಸುಭದ್ರನ ಸಾರಥಿ ಮಾಡಿ ಕುದರಿ-
ಹೊಡ್ಯಾಕ ಹಚ್ಚಿದ ಅವಸರಲಿ । ಆಕಿ ರಥಾ ಹೊಡೆದಳಬ್ಬರಲಿ ॥
ದಾರಿ ಹಿಡದಾರ ಸುತ್ತ ಅಂತ ಶರ್ತ ದ್ವಾರಕಿಗಿ
ಸನಿಯಾಗುವಾಂಗ ಹಂಚಕಿಲಿ । ಕುದುರಿ ಜಿಗಿಸ್ಯಾಳ ಅಂತಂತರಲಿ ॥
ಮುಂದ ಬಂತು ಅರಣ್ಯದ-ವನಾ । ರಥ ನಡಿಯದು ಗಿಡಮಂಜನ ।
ಅಭಿಮನ್ಯು ಏರಿಸಿ ಬಾಣವನಾ । ಹೊಡೆದು ಗಿಡಾಸವರಿದೆಲ್ಲಾನಾ ॥
ತನ್ನ ರಥಕ ಮಾಡಿದ ದಾರಿನ । ದರಜಿಲ್ಲ ಅವನಿಗೇನ ॥

**॥ಏರು॥**

ಲಕ್ಷಾವಧಿ ಗಿಡಗಳೆಲ್ಲ ಲಕ್ಷ್ಯವಿಲ್ಲ ಕಡಿದ ವನದ ರಾಕ್ಷಸರು ಅಭಿಮಾನ್ಯಾಗ ।
ತಿನ್ನುವಪೇಕ್ಷೆಯಿಂದ ಮುತ್ತಿಕೊಂಡರವಗ ।
ನೋಡಿ ತಾಯಿ ಸುಭದ್ರ ಅಂಜ್ಯಾಳ ಆಗ ।
ಆಡಿದ ಮಾತಿಗಿ ತಿರುಗಿ ಹೂಡಿದರ
ಸಿಟ್ಟು ಬಂತು ಆ ಗಿರಿಧರಗ । ಮುಂದ ವತ್ಸಲಹರಣ ಹೇಳುವೆನೀಗ ॥

**೫ನೆಯ ಚೌಕ –**

ಆರ್ಭಾಟದಿದ ಅಭಿಮನ್ಯು ಸುಭದ್ರಾಗಂತಾನ ತಾಯಿ
ಅಂಜಬೇಡ ಧೈರ್ಯ ಹಿಡಿದು ನೋಡು ಕುಂತ ।
ಹೀಂಗಂದು ಬಾಣ ಹೊಡೆದ ಎಲ್ಲ ಪುರಸತ್ತ ।
ಬಂದ ರಾಕ್ಷಸರನೆಲ್ಲ ತರಿದೊಟ್ಟುತ ॥

ತೂರಿದ ಬಾಣಗಳಿಂದ ಮೀರಿದ ದೈತ್ಯರ ರುಂಡ-
ಕಾರಿದ ರಕ್ತದೊಳು ಕೆಡಹುತ ।
ಚಂಡವಿಲ್ಲದೆ ಬಿದ್ದಾವೊ ದಂಡ ಕುಣಕೋತ ॥
ಕೇಳಿ ಸುದ್ದಿ ಘಟೋದ್ಗಜಾ ಹೋಳೀ ಆಡೂನಂದು ಬಂದು ॥

ಗೋಳಿಡಿಸಿ ಹೋದ ಚೀರಾಡುತ ।
ಅಳತಿಲ್ಲಿದಷ್ಟು ಬಾಣ ಬಂದು ನಡುಃತ ।
ತಾಳಲಾರದೆ ಅಭಿಮನ್ಯು ಬಿದ್ದ ಸತ್ತ ।
ಹೇಳಲಾರೆನಾ ವೇಳೆಯೊಳಗ ಸು-
ಭದ್ರಾ ಕಾಳಗದೊಳು ಮಗನವಚೂತ ।
ತೆಕ್ಕಿಹಾಯ್ದು ದುಃಖ ಮಾಡ್ತಾಳ ಬಡಕೋತ ॥

ಮಗನೇ, ನಿನ್ನ ಪ್ರಾಣ ಇಲ್ಲೇ ಹೋಗೂದಿತ್ತೇನೋ
ಎಲ್ಲಿ ಅದಾನಂತ ಹುಡುಕಲೆತ್ತ ।
ಸೊಲ್ಲು ಸುಲ್ಲಿಗೆ ಕರೆವೆ ಅಭಿಮನ್ಯು ಅಂತ ।
ನೀ ನಿಲ್ಲದೆ ಬರುತಿದ್ದ್ಯೊ ಕುಣಕೋತ ।

ನಿನ್ನಂಥ ಮಗನ ಬಿಟ್ಟು ಇನ್ನೇನಿರಲಯ್ಯೋ-
ನನ್ನಂಥ ಖೋಡೀ ಪ್ರಾಣ ಹೋಗಲೆಂತ ।
ಪ್ರಾಣ ಕೊಡಾಕ ನಿಂತಾಳ ಹರಿ ನೆನೆಯುತ ॥

**॥ಇಳುವು॥**

ಕೇಳಿ ಕೃಷ್ಣ ಮೂರುತಿ ವನದೇವತಿ ಆಗಿ ಬಂದು
ಅಂತಾನ ಸುಭದ್ರಾ ಪ್ರಾಣ ಕೊಡಬೇಡ ।
ನಿನ್ನ ಮಗನ್ನೆಬ್ಬಿಸ್ತೀನು ಧೈರ್ಯ ಬಿಡಬೇಡ ॥
ನಿನ್ನ ಎರಡೂ ಹಸ್ತದಲಿ ನಾ ಸಂಜೀವ ಅಭಯ ಕೊಟ್ಟೆ
ನಿನ್ನ ಮಗನ ಮ್ಯಾಲ ನೀ ಎಳೀ ಗಡ ।
ಅಂವ ಏಳತಾನ ಹೋಗು ಮಾಡುದಿಲ್ಲ ತಡ ॥
ಇಷ್ಟು ಕೇಳಿ ಸುಭದ್ರಾ ತನ್ನ ಬಲಗೈ-
ಹಸ್ತ ಎಳದಾಳ ಮಾಡಿ ದೌಡು ।
ಅಭಿಮನ್ಯು ಎದ್ದು ನಿಂತಾ ಬಾಣ ಹಿಡಿದು ಪ್ರೌಢ ॥
ಘಟೋದ್ಗಜನ ನೋಡಿ ಬೊಬ್ಬಿರಿದ । ತಡಮಾಡ್ಲಿಲ್ಲ ಬಾಣದಿಂದ ಹೊಡೆದ ॥
ಘಟೋದ್ಗಜ ಭೂಮಿಗುರುಳಿದ । ಅಭಿಮನ್ಯುನ ಬಾಣದಿಂದ ಮಡಿದ ॥
ಅವನ ತಾಯಿ ಹೇಡಂಬಿ ತಿಳಿದ । ಬಂದು ಅಳತಾಳ ಮಗನ್ಮ್ಯಾಲ ಬಿದ್ದ ॥

**॥ಏರು॥**

ನಿನ್ನ ಕೊಂದಂಥವ ಯಾವ ಹೇಳೊ ನನ್ನ ಮಗನೆ ಬಿಡೂದಿಲ್ಲ ನಾ ಅವಗ ।
ನಿಮ್ಮ ತಂದಿಗ್ಹೇಳಿ ಭೀಮಸೇನನಿಗ ।
ಅವನಿಂದ ಕೊಲ್ಲಸ್ತೀನಿ ನಿನ್ನ ಕೊಂದವಗ

ಆಡಿದ ಮಾತಿಗಿ ತಿರುಗಿ ಹೊಡಿದರ-
ಸಿಟ್ಟುಬಂತು ಆ ಗಿರಿಧರಗ । ಮುಂದ ವತ್ಸಲಹರಣ ಹೇಳುವೆನೀಗ ॥

**॥೬ನೆಯ ಚೌಕ॥**

ಹೇಡಂಬಿ ಅಳುವುದು ಕೇಳಿ ಸುಭದ್ರಾ ಅಂತಾಳ ನಿನ್ನ ಪತಿ ಯಾರಮ್ಮಾ ।
ಹೇಡಂಬಿ ಹೇಳ್ಯಾಳ ಪಾಂಡವರ ಭೀಮ ।
ವನವಾಸಕ ಬಂದಾಗ ನನಗಾದಮ್ಮ

ಅವನ ವೀರ್ಯದಿಂದ ಹುಟ್ಟಿದಂಥ ಈ-
ಘಟೋದ್ಗಜಾ ನನ್ನ ಮಗನಮ್ಮ
ನಕುಲ ಸಹದೇವ ಅರ್ಜುನ ಮೈದುನ ಭಾವ ಧರ್ಮ ॥

ಕೇಳಿ ಸುಭದ್ರಾ ತೆಕ್ಕಾದಾಳ ಹೇಡಂಬಿ ನಾನು ನೀನು ಒಂದೆ ನೆಗಿಯಾಣೆಮ್ಮ
ನಾ ಅರ್ಜುನನ ಸತಿ ಕೇಳಮ್ಮ ।
ನಿನ್ನ ಮಗನ್ನೆಬ್ಬಿಸ್ತೀನು ಧೈರ್ಯ ತಾಳಮ್ಮ
ಹೇಳಿ ಸುಭದ್ರಾ ತನ್ನ ಎಡಗೈ ಹಸ್ತ ಘಟೋ-
ದ್ಗಜನ ಮ್ಯಾಲ ಎಳದಾಳ ಆಗಿ ಪ್ರೇಮಾ ।
ಘಟೋದ್ಗಜಾ ಎದ್ದು ನಿಂತಾ ಆಗಿ ಜೀವಾತ್ಮಾ ॥

ಎದ್ದಾಕ್ಷಣವೆ ಬಾಣ ಹಿಡಿದು ಹೊಡೆಯುತ್ತಿದ್ದ-
ಹೇಡಂಬಿ ಅಂತಾಳ ಮಾಡಬೇಡ ಹಮ್ಮ ।
ಇವರ್‍ಯಾರು ಅಭಿಮನ್ಯು ನಿನ್ನ ತಮ್ಮ ।
ನಿನ್ನ ತಾಯಿ ಸುಭದ್ರಾಗ ಮಾಡೊ ನಮೋನಮ ।

ತಾಯೀ ಮಾತಿಗಿ ನಮಸ್ಕಾರ ಮಾಡಿ
ಕರಕೊಂಡು ಹೊಂಟಾನ ತನ್ನ ಗ್ರಾಮ ।
ಬಂದ ಕಾರ್ಯ ಕೇಳ್ಯಾನ ಕುಂತು ಅವನ ಸಮ ॥

**॥ಇಳುವು॥**

ಅಭಿಮಾನ್ಯಾಗ ಕೊಟ್ಟೆಣ್ಣ ಬಳರಾಮ ಕೌರವನ
ಮಗಗ ಲಗ್ನ ಮಾಡಿ ಕುಡತಾನೋ ।
ಅದಕಾಗಿ ಹೊರಟ ಬಂದಿನೋ ॥

ಇಷ್ಟು ಮಾತು ಕೇಳಿ ಘಟೋದ್ಗಜಾ ಅಂತಾನ
ಆ ಹೆಣ್ಣ ಹೋಗಿ ತರತಿನೋ ।

ನಿಮಗ ಲಗ್ನ ಮಾಡಿ ಕುಡತಿನೋ ||
ಹೀಂಗ ಹೇಳಿ ಘಟೋದ್ಗಜಾ ಜಾ ಜಾಂಗಿ ಮಾಮಾನ
ಕರೆದುಕೊಂಡು ಹೊಂಟಾನೊ |
ಮಾಯಾಪುರ ಹಾದ್ಯಾಗ ಕಟ್ಯಾನೋ |
ಗೋಪಕಂಟಿ ಬೆಳ್ಳಿಬಂಗಾರ ದೀನಸಾ | ವಸ್ತ ಒಡವಿ ಆಗ್ಯಾವ ರಾಕ್ಷಸ
ಬೇಕಾದಂಥ ವಸ್ತ್ರ ಸೆಲ್ಲೆ ಮುಂಡಾಸ | ಆಗಿ ಅಂಗಡಿ ಹಚ್ಯಾರ …….
ದುರ್ಯೋಧನನ ನಿಬ್ಬ ನೋಡಿ ಖಾಸ | ತಗೋಳ್ಳಾಕ ಹೋದರಾಗಿ ಉಲ್ಲಾಸ

**||ಏರು||**

ಹಳಿದು ಕೊಟ್ಟು ಹೊಸದೊಯ್ಯಿರೆಂತ ಹೇಳಿದರ ಕೇಳಿದಂಡ ಮನ…….
ಹಳಿದೊಯ್ದು ಒಗೆದಾರವರಂಗಡ್ಯಾಗ |
ಆಡಿದ ಮಾತಿಗೆ ತಿರುಗಿ ಹೂಡಿದರ
ಸಿಟ್ಟು ಬಂತು ಆ ಗಿರಿಧರಗ | ಮುಂದ ವತ್ಸಲಹರಣ ಹೇಳುವೆನೀಗ

**೭ನೆಯ ಚೌಕ –**

ದುರ್ಯೋಧನನ ದಂಡ ಸುಲಿಸಿಕೊಂಡು ಜಾಂಗೀ ಮಾಮಾ-
ಘಟೋದ್ಗಜಾ ಹೆಂಗಸರಾದರು |
ಬಳರಾಮನರಮನೆಯೊಳಗ್ಹೋದರು |
ರೇವತಿಯ ಮುಂದ ತೋಡ ಹೇಳಿದರು |
ವತ್ಸಲದೇವಿಗಿ ವಸ್ತ ಇಡಿಸಿ ನೋಡೂನಂತ-
ದುರ್ಯೋಧನ ನಮ್ಮನು ಕಳಿಸಿದರು |
ಲಗು ಕರಕೊಂಡು ಬಾ ಅಂತ ಹೇಳಿದರು ||
ಕೇಳಿ ರೇವತಿ ತನ್ನ ಮಗಳನು ಒಪ್ಪಿಸ್ಯಾಳ ತಗೊಂಡ ತಮ್ಮೊನಕ ಜಿಗಿದರು |
ಸುಭದ್ರನ ಮುಂದ ಒಯ್ದು ಇಳಿಸಿದರು |
ನಿನ್ನ ಸೊಸಿನ ತಗೋ ತಾಯಿ ಅಂತಾರು |
ಹೇಳಿ ಘಟೋದ್ಗಜಾ ವತ್ಸಲಾನ ರೂಪಾಗಿ
ಮತ್ತ ಒಯ್ದು ರೇವತಿಗೊಪ್ಪಿಸಿದರು |
ಅಲ್ಲೆ ಮದುವಿ ಆರಂಭ ಅರಿಸಿಣ ಹಚ್ಚಿದರು ||
ದುರ್ಯೋಧನನ ಮಗ ಲಕ್ಷಣ ಕುಮಾರತ ಹಾಸಕ್ಕಿ ಮ್ಯಾಲ
ವಾಸ ಮಾಡಿದಿರು |
ಮಾಯಾ ವತ್ಸಲಾನ ಬಳಿಯಲಿ ನಿಲಿಸಿದರು |
ವೇದ ಘೋಷ ಬ್ರಾಹ್ಮರು ನುಡಿಸಿದರು |
ಅಂತರ್ಪಟ ಹಿಡಿದು ಕೇರಿ ಮಂಗಳಾಷ್ಟಕನ್ನುವಾಗ
ಕಾಲು ತುಳಿದು ಮದುಮಗನ್ನ ಮಾಡಿದ ಜೇರು |

ಅಂಜಿ ಹೊಯ್ಕೊಂಡಾ ಎಲ್ಲಾ ಗಾಬಾದರು ||
ಹೆಂಗಸಲ್ಲ ಇದು ರಾಕ್ಷಸೈತಿ ನನ್ನ
ತಿಂತೈತೆಂತ ಹಾಕಿದ ಕಣ್ಣೀರು |
ಹೀಂಗಂದಾಕ್ಷಣವೆ ಎಲ್ಲರಂಜಿದರು |
ವಸ್ತ ಒಡವಿ ಸೆಲ್ಲೆ ಮುಂಡಾಸದ ರಾಕ್ಷಸರು |
ಹೊಡೆದು ದುರ್ಯೋಧನನ ನಿಬ್ಬಣ ಮಾನಭಂಗ
ಮಾಡಿ ಬತ್ತಲೆ ಓಡಿಸಿದರು |
ಘಟೋದ್ಗಜಾ ಜಾಂಗಿಮಾಮಾ ತಿರುಗಿಬಂದರು ||

**||ಇಳುವು||**

ಅಭಿಮಾನ್ಯುನ ಮದುವಿಗಿ ಮಾಯಾರೂಪದಿಂದ
ಬ್ರಾಹ್ಮರ ತಂದಾರ ಓಡಾಡಿ |
ಪ್ರತಿಲಗ್ನ ಮಾಡ್ಯಾರ ಗಡಿಬಿಡಿ ||
ಅಭಿಮಾನ್ಯಗ ವತ್ಸಲಾಗ ಲಗ್ನ ಆಯಿತಂತ ಕೃಷ್ಣ
ಚಪ್ಪಳಿಕ್ಕಿ ಹೊಡೆದಾ ಲೋಲಾಡಿ |
ಬಳರಾಮುಗ ಸುಮಾರಾಯ್ತು ನೋಡಿ ||
ಹೀಂಗ ಆಗಬಾರದೆಂದು ತಾ ತಿಳಿದಾ | ತನ್ನ ತಮ್ಮ ಕೃಷ್ಣಗ ಹೇಳಿದ |
ಕೃಷ್ಣ ಅಭಿಮನ್ಯುನ ಕರೆತಂದ | ಪ್ರತಿಲಗ್ನ ಮಾಡಿದ ಗರ್ದಿಯಿಂದ ||
ಕೌರವನ ಮಾನ ಹೋಯ್ತು ಬಂದ | ಹರಿ ತನ್ನ ವಚನ ನಡಿಸಿದ |

**||ಏರು||**

ಕೊಟ್ಟಂಥ ಭಾಷೆಗೆ ಬಿಟ್ಟು ನಡೆದರ
ಪೆಟ್ಟು ಹತ್ತುವದು ಮನಸ್ಯಾಗ |
ರಾಣು-ಕುಬ್ಬಣ್ಣ ಹೇಳಿದಾನ ಇದರ್ಹಾಂಗ |
ಅಂವ ಇರೂದು ಮಾಲಿಂಗಪುರದಾಗ |
ಆಡಿದ ಮಾತಿಗಿ ತಿರುಗಿ ಹೂಡಿದರ-
ಸಿಟ್ಟುಬಂತು ಆ ಗಿರಿಧರಗ | ಮುಂದ ವತ್ಸಲಹರಣ ಹೇಳುವೆನೀಗ ||

***ರಚನೆ :*** ರಾಣು-ಕುಬ್ಬಣ್ಣ, ಮಹಾಲಿಂಗಪುರ
***ಕೃತಿ :*** ಜೀವನ ಸಂಗೀತ

## ೩೧. ಸುಲೋಚನಾ ಸಹಗಮನ

ಇಂದ್ರಜಿತ ಮಡದ ಸುದ್ದಿ
ಸತಿ ಸುಲೋಚನಾ ಕೇಳಿ
ದುಃಖದಿಂದ ಬಿದ್ದಾಳ ಭೂಮಿಗೆ ತಾ ಹೊರಳಿ
ಅಯ್ಯೋ ಕಾಂತ ರಣಕ ಹೋದ ಮ್ಯಾಲಿ
ಮುಖಾ ನೋಡಲಿಲ್ಲ ಮರಳಿ||ಪಲ್ಲ||

ಪತಿ ಭುಜಗಳು ಬಿದ್ದುವಲ್ಲೆ
ಅಂಗಳದಲ್ಲೆ ಅಂತ್ರದಿಂದ ಹಾರಿ
ಸುಲೋಚನಾ ನೋಡ್ಯಾಳ ಹಾತ್ವಾರಿ
ಖೂನಾ ಹಿಡಿದ ತನ್ನ ಗಂಡನ ಭುಜಗಳು
ಭೂಮಿಗೆ ಬಿದ್ದಾಳು ಕಮರಿ
ದುಃಖ ಮಾಡ್ಯಾಳೊ ಆಕ್ರೋಶದಿಂದ
ತನ್ನತಾ ದೇಹಕಿಲ್ಲ ಖಬರಿ
ದೊರೆಯಲಿಲ್ಲ ನನ್ನ ಕಾಂತನ ಮೋರಿ
ಎರಡು ಭುಜಾ ಎದಿಗಪ್ಪಿಕೊಂಡಾಳಾಕಿ
ಪತಿಯ ಮುದ್ರಿಕಾ ನೋಡ್ಯಾಳ ನಾರಿ
ಸತ್ಯವಾಗಿ ನಾನು ಪ್ರತಿವೃತಾ ಇದ್ದರ
ನನಗ ತೋರಲಿ ರಣರಂಗದ ಸೂರಿ
ಆದ ಸುದ್ದಿ ಕಾಗದ ಮ್ಯಾಗ ಬರಿರಿ
ತಂದ ಇಟ್ಟಾಳ ತಾಡವಾಲಿ
ಲೇಖಣಿ ಮಸಿ ರತ್ನ ಝಾರಿ

**||ಚಾಲ||**

ಭುಜಾ ಬರಿತ ರಣದಲ್ಲೆ ಪ್ರಾಣಸಖಿ
ಕೇಳ ಲಕ್ಷುಮಣ ಹೊಡೆದಾ
ಶಿರಾ ಒಯ್ದರ ನಂದ ಕಡದಾ
ಎರಡು ಭುಜಾ ನಿನ್ನ ದರ್ಶನ ಆಗುದಕ
ಹಾರಿ ಬಂದಾವ ಸಿಡಿದಾ
ಸುದ್ದಿ ಕೇಳುವ ದಸಿಯಿಂದಾ
ನಿನ್ನ ಹಾದಿ ನೋಡಕೋತಾ
ಅಂತ್ರದಲ್ಲೆ ನಾ ಕುಂತಿದೇನ ತಡದಾ
ಪ್ರಾಣ ಸತಿಯೆ ಬಾರೆ ನಡದಾ

**||ಏರು||**

ಬರದ ಲಿಖಿತ ತನ್ನ ಧ್ಯಾನಕ ತಂದು
ಭೂಮಿಯ ಮ್ಯಾಗ ಉರಳಿ ಉರಳಿ
ದುಃಖದಿಂದ ಮಾಡಿದಾಳ ಹೋಳಿ
ಇಂದ್ರಜೀತ ಮಾಡಿದ ಸುದ್ದಿ
ದುಃಖದಿಂದ ಬಿದ್ದಾಳ ಭೂಮಿಗೆ ತಾ ಹೊರಳಿ ||೧ನೇ ಚೌಕ||

ಎರಡು ಭುಜಗಳಾ ಹಿಡಿದ ಹಸ್ತದಲ್ಲೆ
ಬಾಳ ದುಃಖ ಮಾಡತಾಳು
ರಾವಣನ ಸಭಾಕ ಬಂದಾಳು
ಪ್ರಾಣನಾಥ ಬರದಂಥಾ ಪತ್ರ
ದಶಕಂಠಗ ತೋರಿಸ್ಯಾಳು
ರಾವಣನ ಇದರಿಗೆ ಹಣಿ ಬಡದು ಬಹು
ಆಕ್ರೋಶ ಮಾಡತಾಳು
ಎದಿ ಬದಿ ಬಡಕೊಂಡಳವಳು
ನಿನ್ನ ಕರ್ಮದಿಂದ ನನ್ನ ಗಂಡನು
ಮಡಿದ ಹೋದಂತ ಬಿದ್ದಾನು
ಜಾನಕಿನ ನೀ ತರದಿದ್ರ ಇಷ್ಟೆಲ್ಲಿತ್ತ ಗೋಳು
ಕುಲಕ್ಷಯ ಮಾಡಿಕೊಂಡು ಹಾಳು
ಕೀರ್ತಿ ಮಾಡಿದಿ ಮೂರು ಜಗದೊಳು
ನನಗಂಡಗಾದಿ ವಿನಾಶ ಕಾಳು

**||ಚಾಲ||**

ನನ್ನ ಗಂಡ ಸತ್ತ ರಂಡಿ ಆಗದು
ನಿನ್ನ ಮನಸ್ಸಿನೊಳಗ ಇತ್ತು
ಆ ಹರಕೀ ಕೈಗೂಡಿತು
ನಾ ಸತಿ ಆಗುವ ನನ್ನ ಪತಿ ಸಂಗಡಾ
ಕೇಳಿರಿ ನನ್ನ ಮಾತು
ಬಿಡಲಾರೆ ಪ್ರಾಣನಾಥನಾ
ಮಹಾವೀರ ನನ್ನ ಮನೋಹರನಾ ಶಿರಾ
ರಘುವೀರನ ಹಂತೇಲಿ ಹೋಯಿತು
ಅದನ ಕೊಡಸರಿ ಈ ಹೊತ್ತು.

**||ಏರು||**

ಸೊಸಿ ಮಾತ ಲಾಲಿಸಿ ರಾವಣ
ಕೂಗಿ ಹೊಡ ಹೊರಳಿ ರಣಧೂಳಿ

ರಾಮನಿಂದ ಮಾಡುವೆ ಹೋಳಿ
ಇಂದ್ರಜಿತ ಮಡಿದ ಸುದ್ದಿ
ಸತಿ ಸುಲೋಚನಾ ಕೇಳಿ
ದುಃಖದಿಂದ ಬಿದ್ದಾ ಭೂಮಿಗೆ ತಾ ಹೊರಳಿ॥೧ನೇ ಚೌಕ॥

ಮಂಡೋದರಿ ಬಂದ ಬುದ್ಧಿಯ ಹೇಳತಾಳ
ಕೇಳ ಸುಲೋಚನಾ ನನ್ನ ಮಾತನ್ನಾ
ಚಿತ್ತ ಇಟ್ಟ ನೋಡೆ ನನ್ನ ವಚನಾ
ದಯಾಸಿಂಧು ಚಿನ್ಮಯ ರಾಮಾ ಅಂವಾ
ಭಕ್ತರಿಗೆಲ್ಲಾ ಸವನಾ
ಸ್ತುತಿಯ ಮಾಡಿ ನಿನ್ನ ಪತಿ ಶಿರಾ ಬೇಡಿ
ನೋಡ ಅವರ ಕರುಣಾ
ಮಾಡೋದಿಲ್ಲ ಎಂದಿಗೂ ಅಪಮಾನಾ
ಕಾಲಗತಿ ಇದ್ದಂಗ ಆದೀತ ಆಗಬ್ಯಾಡ ಖಿನ್ನಾ
ಇರಲಿ ಬಿಂದು ಮಹಾಮೇರು ನುಂಗಿತಂತ
ವ್ಯಾಸ ಮಡಿದ ಗಣನಾ
ಅದರಿಂದ ಆಯಿತು ಲಂಕಾದಹನಾ
ಬೇರ ಸಹಿತ ರಾಕ್ಷಸರ ಬೊರಲಬಿದ್ದಾ
ಹೋದ್ರ ಉಳಿತ ಏನಾ

**॥ಚಾಲ॥**

ಅತ್ತಿ ಮಾವನ ಚರಣಕ ನಮಿಸಿ
ಸುಲೋಚನಾ ಹೊಂಟಾಳ ಹಾದಿ ಹಿಡದಾ
ರಾಮನ ಹಂತೇಲಿ ಬಂದಾಳ ನಡದಾ
ನಿಂತ ಸ್ತುತಿ ಮಾಡ್ಯಾಳ ಆಗ ಲಕ್ಷ್ಮೀ-
ಕಾಂತಗ ಗುಪ್ತ ನೀ ಮುಕುಂದಾ
ಉತ್ಪತ್ತಿ ಸ್ಥಿತಿ ನಿನ್ನಿಂದಾ
ಅಷ್ಟು ದುಷ್ಟ ದೈತ್ಯರನ ನಷ್ಟ ಮಾಡುದಕ
ಹುಟ್ಟಿದಿ ಗೋವಿಂದಾ
ಅಷ್ಟು ಪಾಪ ಪುಣ್ಯ ತಿಳಿದಾ

**॥ಏರು॥**

ಶೇಷಶಯನ ನೀ ರಾಮನಾಗಿ
ಮಹಾಶಕ್ತಿ ಜನಕ ಬಾಳಿ
ಏಳನೆಯ ಅವತಾರವ ತಾಳಿ

ಇಂದ್ರಜಿತ ಮಡದ ಸುದ್ದಿ

ಸತಿ ಸುಲೋಚನಾ ಕೇಳಿ

ದುಃಖದಿಂದ ಬಿದ್ದಾಳ ಭೂಮಿಗೆ ತಾ ಹೊರಳಿ॥೩ನೇ ಚೌಕ॥

ಭಕ್ತಿಯಿಂದ ಸುಲೋಚನೆಯ ಸ್ತುತಿಗೆ ರಘು-

ಪತಿಯ ಮುಂದ ಕರದಾ

ಕಾಲಮ್ಯಾಲ ಬಿದ್ದಂತಾಕಿನ್ನ ಹಿಡದಾ

ಏಳೆ ಮಗಳೇ ಸಾಕ ಮಾಡ ಸ್ತುತಿಯ ಭಾಳ

ಆಯಿತ ಪ್ರೇಮಾನಂದಾ

ಶಿರಾ ಇಲ್ಲಿಗೆ ನಾವ ತಂದ ಸುದ್ದಿ ನಿನಗ

ಹ್ಯಾಂಗ ತಿಳೀತ ಇಂದಾ

ಭಿಡೆ ಬಿಟ್ಟ ಹೇಳ ಎಲ್ಲಾ ಒಡದಾ

ಆದ ಮಾತಿಗೆ ಆ ಪತ್ರ ತಗದ ಸುಲೋ-

ಚನಾ ಇಟ್ಟಾಳ ಮುಂದಾ

ಭುಜಾ ಬರದ ಲಿಪಿ ನೋಡಿ ಸರ್ವರು

ಅಂತಾರ ಹೆಚ್ಚಿಂದಾ

ನಾವು ಎಲ್ಲಿ ಕಂಡಿಲ್ಲ ಇಂಥಾದಾ

ಖರೆ ಪತಿವೃತಾ ಇದ್ದರ ಶಿರಾ

ನಗಸಿ ಒಯ್ಯಲ ಇಕಿಯಿಂದಾ

**॥ಚಾಲ॥**

ಚಮತ್ಕಾರ ನೋಡುದಕ ವಾನರರ

ದಂಡ ಕೂತಾರ ಸಂವಚಿತ್ತಾ

ಘಳಿಗಟ್ಟಿ ಕೂತಾರ ಸುತ್ತಾ

ಆಶ್ಚರ್ಯ ಅಂತಾರ ಹನುಮಂತ ಅಂಗದಾ

ನಳಾ ನೀಳಾ ಜಾಂಬುವಂತಾ

ನೋಡೇನ ಅಂತಾರ ಅದ್ಭುತಾ

ಮಧ್ಯ ಭಾಗದಲ್ಲಿ ಪದ್ಮಲೋಚನಾ

ಸರಿಯಾಗಿ ಶಿರಾ ಹಿಡದ ಮಸ್ತಾ

ಹಲುಬತಾಳ ಪತಿವೃತಾ.

**॥ಏರು॥**

ಮಾಡಿದಂತ ತನ್ನ ಕ್ರೀಡಾ ವಿನೋದಾ

ಶಿರದ ಮುಂದ ಹೇಳಿ

ನೆಲಕ ಬಿದ್ದಾಳ ಬಂದ ಬವಳಿ

ಇಂದ್ರಜಿತ ಮಡದ ಸುದ್ದಿ
ಸತಿ ಸುಲೋಚನಾ ಕೇಳಿ
ದುಃಖದಿಂದ ಬಿದ್ದಾಳ ಭೂಮಿಗೆ ತಾ ಹೊರಳಿ||ಆನೇ ಚೌಕ||

ಎಷ್ಟ ನಾರಿ ತಾ ಕಷ್ಟ ಪಟ್ಟರೂ
ಪತಿ ಶಿರಾ ನಗವಲ್ಲದೂ
ಕಮಲ ಮುಖಾ ಬಾಡಿತಾಕೀದು
ದೋಷ ಇಲ್ಲದ ನಾ ಹಾಸ್ಯವಾಗುವ್ಯಾಳೆ
ಈಗ ಬಂದೀತು ಎಂಥಾದು
ಅಂತಾಳಾಗ ಎಂಥಾ ವಿಪರೀತ ಆದೀತಂತ
ತಿಳಿಯಲಿಲ್ಲ ಮುಂದಿಂದು
ನನ್ನ ಪ್ರಾಣನಾಥ ಹಿಂಗ ಬೀಳುವದು
ನಮ್ಮ ತಂದಿನ ನನಗಂಡ ಕುಮಕಿಗೆ
ಈಗಿಂದೀಗ ನಿಲಸತೀನಿ ತಂದು
ಪದ್ಮಗಂಧೀ ಮಾತ ಕೇಳಿ ಶಿರಾ ಆಗ ಖದಾ
ಖದಾ ನಗುವುದು ನಗುವುದು
ನೋಡ್ಯಾರ ಎಲ್ಲಾರು ಭ್ರಾಂತಿ ಬಡದು
ಲಕ್ಷ್ಮಣನು ವಿಚಕ್ಷಣೆ ಮಾಡತಾನು
ರಾಮಗ ಕೈ ಮುಗಿದು

**||ಚಾಲ||**

ಶಿರಾ ಯಾತರ ದಸಿಯಿಂದ ನಕ್ಕೀತು
ರಘುಪತಿ ಹೇಳಿರಿ ಪ್ರೀತಿಯಿಂದ
ಸರ್ವಾತ್ಮ ನಿನ್ನಿಂದಾ
ಶಿರಾ ನಕ್ಕ ಮೂಲ ಎಲ್ಲರಿಗ್ಹೇಳಿದಾ
ರಾಮು ಕೇಳಿರಿ ಮುಂದ ಸರದಾ
ಮಾಂವ ಕುಂತ ಅಳಿಯಾನ ಹೊಡದ ಶೇ-
ಷಾವತಾರದ ಇವನ ಮಗಳ ಖುದ್ದಾ
ಕುಮಕ ಹೇಳ್ಯಾಳ ತಂದೀದಾ

**||ಚಾರು||**

ನಿಮ್ಮ ತಂದಿ ನನ ಕೊಂದಾ
ಹೋದಾನಂತ ನಕ್ಕಿತ ಶಿರಾ ಕೇಳಿ
ನೀನೆ ಶೇಷಾವತಾರಿ ಬಂತಾಳಿ
ಇಂದ್ರಜಿತ ಮಡದ ಸುದ್ದಿ

ಸತಿ ಸುಲೋಚನಾ ಕೇಳಿ
ದುಃಖದಿಂದಾ ಬಿದ್ದಾಳ ಭೂಮಿಗೆ ತಾ ಹೊರಳಿ||ಜನೇ ಚೌಕ||

ಕೇಳಿ ರಾಮನ ಮಾತ ಲಕ್ಷ್ಮಣಾ ಬಿದ್ದಾನ
ತಳಮಳಿಸಿ ತಳಮಳಿಸಿ
ಅಂವ ಮನಸಿನಲ್ಲಿ ಹೊಂದಿದಾನ ಕಸವಿಸಿ
ಅಣ್ಣಗ ಹೇಳತಾನ ಅಳಿಯಾನ ಪ್ರಾಣದಾನ
ಕೊಡಿರಿ ಈಗ ಎಬ್ಬಿಸಿ
ಕೇಳಿ ರಘುವೀರಾ ದೈತ್ಯನ ಎಬಿಸುವದು
ಪುರಮಾಸಿ ಪುರಮಾಸಿ
ನೋಡಿ ವಾನರರು ನಿಂತಾರ ಡಳಸಿ
ಸರ್ವರೂ ತಲೆಗೂಡಿಸಿ
ಅವಮಾನದ ಹನುಮಂತ ಹೇಳತಾನ
ರಾಮಗ ಕೈ ಜೋಡಿಸಿ ಜೋಡಿಸಿ
ಕಲ್ಪನಾ ತಗಿಯಬ್ಯಾಡಿರಿ ಎಣಿಸಿ
ಇನ್ನ ಮ್ಯಾಲ ಇಂದ್ರಜಿತ ಅಂವಾ ಎದ್ದರ
ಸರ್ವರು ಆದೀರಿ ಘಾಸಿ

**||ಚಾಲ||**

ಸುಲೋಚನಾ ಕರದ ಇಂದ್ರಜಿತನ ಶಿರಾ
ಕೊಟ್ಟ ಹನುಮ ಕಳಿಸಿದ ರಮಿಸಿ
ತಾಯಿ ಹಿಡಬ್ಯಾಡ ಆಶೀ
ಆಗ ಪತಿವೃತಾ ಪತಿ ಶಿರಾ ಸಹಿತ
ಹೋಗಿ ಅಗ್ನಿಕುಂಡ ರಚಿಸಿ
ಆದಾಳ ಸ್ವರ್ಗವಾಸಿ
ಮಗಾ ಸೊಸಿ ಹೋದರಂತ ರಾವಣಾ
ಬಿದ್ದ ದುಃಖ ವ್ಯಾಪಿಸಿ
ಮುಂದ ಆದೀತು ಅಸುರ ನಾಸಿ

**||ಏರು||**

ಬಾಳಗೋಪಾಳ ಅಂತಾರ ಕತಿ ಮುಂದ
ಬೆಳಸಿದರ ಆದೀತ ರಗಳಿ
ಶಾಹೀರ ಮ್ಯಾಗ ಬಂದೀತ ಹೊಸಾ ಅಗಳಿ
ಅಯ್ಯೋ ಕಾಂತ ರಣಕ ಹೋದ ಮ್ಯಾಲಿ
ಮುಖಾ ನೋಡಲಿಲ್ಲ ಮರಳಿ

ಇಂದ್ರಜಿತ ಮಡದ ಸುದ್ದಿ
ಸತಿ ಸುಲೋಚನಾ ಕೇಳಿ
ದುಃಖದಿಂದ ಬಿದ್ದಾಳ ಭೂಮಿಗೆ ತಾ ಹೊರಳಿ॥೬ನೇ ಚೌಕ॥

***ರಚನೆ :*** ಬಾಳಗೋಪಾಳ
***ಕೃತಿ :*** ಜಾನಪದ ಝೇಂಕಾರ

## ೩೩. ಅನಸೂಯಾ

ಸತಿಯರೊಳಗ ಅತಿ ಪತಿವ್ರತಾ ಅನಿಸಿಕೊಂಡ
ಖ್ಯಾತಿ ಹೊಂದಿದಾಳ ಅನಸೂಯ ಸತಿ
ಅತ್ರಿಮಹರ್ಷಿ ಅಂಬೊವವ ಪತಿ
ಮೂರು ಲೋಕದೊಳು ಸಾರತೈತಿ ಅವರ ಕೀರ್ತಿ ॥
ಅನಸೂಯಾನ ಶೀಲ ವ್ರತ ನಷ್ಟಮಾಡಲಿಕ್ಕೆ ಬಂದ
ಕಷ್ಟಕ್ಕ ಈಡಾದ್ರ ದೇವತಾ ತ್ರಿಮೂರ್ತಿ
ಆಕಿ ಉದರದೊಳು ಜನಿಸಿ ಬಂದ್ರ ಜನ್ಮವೆತ್ತಿ ॥

ಜ್ಞಾನವಂತಿ ಅನಸೂಯಾ ಧಾನ್ಯ ಕುಟ್ಟತಿದ್ಲ
ಅತ್ರಿ ಪತಿ ಕರದ ಹೊರಗಿಂದಾ
ಕೈಯ್ಯ ಬಿಟ್ಟ ಬಂದ್ಲ ಮ್ಯಾಲಕ್ಕೆತ್ತಿದ್ದಾ
ಆ ವಣಿಕಿ ನಿಂತಿತ್ತ ಅಂತರಲಿಂದಾ ॥
ನಾರದ ನೋಡಿ ಹೋಗಿ ಸರಸ್ವತಿ ಲಕ್ಷ್ಮಿಗೆ
ಹೇಳಿದಾನ ಪಾರ್ವತಿ ಮುಂದಾ
ಹಿಂತಾ ಕೆಲಸ ಆಗದ್ದರೆವ್ವಾ ನಿಮ್ಮಿಂದಾ ॥

ಕಲ್ಪನಾವಿಲ್ಲದೆ ತಾವು ಕೈಬಿಟ್ಟ ನೋಡಿದಾರ
ನಿಲ್ಲಲಿಲ್ಲ ವಣಿಕಿ ಯಾರಿಂದಾ
ಬ್ರಹ್ಮ ಪುತ್ರ ಗುರತಾ ಹಿಡದ ನಾರದಾ
ನಿಮಗ ಸ್ವಲ್ಪ ತಿಳವಳಿಕಿ ಇಲ್ಲಂದಾ ॥
ಗರತೇರ ಅಲ್ಲದವರು ಗದ್ಲಾಸೋಸಿದರ
ಅವರ ಮೇಲೆ ವಣಿಕಿ ಬೀಳುವುದಾ
ಧಕ್ಕಿ ಕೊಡವುವದಾ ॥

ಋಷಿ ಪತ್ನಿ ಶೋಧಮಾಡಿ ವ್ರತಭಂಗ ಮಾಡದಿದ್ದರ
ನಮಗ ಬಂದೀತಂತಾರ ಕುಂದಾ
ತಿಳಸೂನಂದ್ರ ತಮ್ಮ ಪತಿಗಳ ಮುಂದಾ

ಗಟ್ಟಿಹಾಕಿ ಮಲಿಗ್ಯಾರ ಬಾಗಿಲ ಕದಾ ॥
ಸೃಷ್ಟಿ ಉತ್ಪತ್ತಿ ಲಯ ಕರ್ತರು ಮೂವರು
ದಿಟ್ಟಸಿ ನೋಡತಾರ ಬಂದ ಬಂದಾ
ಹಸದ ಹಾಂವಾಗಿ ಹಲಬತಾರ ಹಾಂತವರಿದಾ ॥

ಬಂದ ಚಿಂತಿ ಬಯಲ ಮಾಡದಿದ್ರ ಬದಕಲಾರೆವು ನಾವು ಜೀವದಿಂದಾ
ವಚನಾ ತಗೊಂಡಾರ ನಿಂತ ಒಳಗಿಂದಾ
ಊಟಾ ಮಾಡ್ಸಿ ಹೇಳ್ಯಾರ ತಮ್ಮ ಮನದಂದಾ ॥
ಬ್ರಹ್ಮ ವಿಷ್ಣು ಮಹೇಶ್ವರ ಮೂವರು ಕೂಡಿಕೊಂಡ
ಭೂಲೋಕದೊಳಗ ಬಂದಾರ ಇಳದಾ
ಭಸ್ಮ ರುದ್ರಾಕ್ಷಿ ವೇಷ ಹಾಕಿ ಸಾದೂರದಾ ॥

**ಒಂದನೇ ಚಾಲ**

ಅತ್ರಿ ಆಶ್ರಮದ ಮುಂದ ನಿಂತಾರು ಬಂದ
ಭವತಿ ಭಿಕ್ಷಾಂದೇಹಿ ಕ್ಷಣ ಕ್ಷಣಕ
ಅನಸೂಯಾ ಬಂದ್ಲ ನೀಡೊದಕ ॥
ಕಳದಿಟ್ಟ ನೀನು ಅಂಬರ ಆಗಿ ದಿಗಂಬರ
ನೀಡ ಊಟಃಕ್ಕ ।
ಅತ್ಯಾನಂದ ನಮ್ಮ ಆತ್ಮಕ್ಕ ॥

**ಎರಡನೇ ಚಾಲ**

ತಂದ ಉಗ್ಗಿದಳು ಪತಿ ಪಾದೋದಕ
ಕೂಸ ಆಗಿ ಬಿದ್ದಾರ ನೆಲಃಕ ॥
ದೇವತಾ ಸ್ತ್ರೀಯರದು ತಪ್ಪಿತ ಆಗ ದಿಕ್ಕ
ಹೊಂಟಾರು ಪತಿದಾನಾ ಕೇಳುದಕ

**||ಏರ||**

ಪರ್ಣ ಕುಟೀರಕ್ಕ ಬಂದ ಪತಿಗಳನ್ನು ಪಡಕೊಂಡ್ರ
ಅನಸೂಯಾಗ ಮಾಡಿಕೊಂಡ್ರ ವಿನಂತಿ
ಮುಂದ ಜನಿಸಿ ಬಂದ ದತ್ತಾತ್ರೇಯ ಮೂರ್ತಿ
ತಿಗಡೊಳ್ಳಿ ಮರಿಕಲ್ಲ ಮಾಡಿದ ಬಲಭೀಮನ ಸ್ತುತಿ ॥
ಅನಸೂಯಾನ ಶೀಲವ್ರತಾ ನಷ್ಟಮಾಡಲಿಕ್ಕೆ ಬಂದ
ಕಷ್ಟಕ್ಕೀಡಾದ್ರ ದೇವತಾ ತ್ರಿಮೂರ್ತಿ
ಆಕಿ ಉದರದೊಳು ಜನಿಸಿ ಬಂದ್ರ ಜನ್ಮವೆತ್ತಿ ॥

***ರಚನೆ :*** ಮರಿಕಲ್ಲಕವಿ

***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

# ೩೪. ಅನಸೂಯಾ ಚರಿತ್ರೆ

ಅತ್ರಿಮ ಮುನಿಸತಿ ಅನಸೂಯಾ ಪತಿವ್ರತ ಪೃಥ್ವಿ ಮೇಲೆ ಆಕಿ ಪ್ರಖ್ಯಾತಿ
ನೀತಿಯಿಂದ ಬ್ರಹ್ಮ ವಿಷ್ಣು ಮಹೇಶ್ವರರ ಹೆಂಡರನ್ನ ಮಾಡ್ಯಾಳ ಫಜೀತಿ||ಪ||

ಧಾನ್ಯ ಕುಟ್ಟುವಾಗ ತನ್ನ ಗಂಡ ಕರದ ಮೇಲಕ್ಕೆತ್ತಿದ್ಲಬಿಟ್ಟಾಳ ಒನಕಿ ।
ಪುನಃ ಬಂದು ಆಕಿ ತಾನೆ ತಗೊಳ್ಳುತನ ಏನೇನು ಆಗಿದ್ದಿಲ್ಲ ಅದಕ ಧಕ್ಕಿ ।

ನಾರದ ನೋಡಿ ಹೋಗಿ ಶಾರದಿ ಲಕ್ಷ್ಮಿ ಪಾರ್ವತಿ ಮುಂದ ಹೇಳಿದ ಬೆರಕಿ ।
ಘೋರ ಬಿಡಲಿಕ್ಕೆ ಹೋಗಿ ಮಾರಿ ಮೂಗು ಒಡಕೊಂಡ
ಮೂರು ಮಂದಿ ಅತ್ತಾರ ಬಿಕ್ಕಿ ಬಿಕ್ಕಿ ॥

ಅರಿತ ಬ್ರಹ್ಮಪುತ್ರ ಗುರುತ ಹಿಡದ ಅಂದ ನಿಮಗ ಇಲ್ಲರೆವ್ವ ತಿಳಿವಳಿಕೆ ।
ಗರತಿ ಇದ್ದರ ತುರ್ತ ನಿಂದ್ರುವದು ಇಲ್ಲದಿದ್ರ ಬೀಳುದು ನಕ್ಕಿ ॥
ಅಪಮಾನ ಆತ ಇದಕ ಉಪಾಯ ಏನಂತ ಹಪಾಪಿ ಹತ್ತೀತ ಬಡಬಡಕಿ ।
ತಪಾಸ ಮಾಡಿ ವ್ರತಭಂಗ ಮಾಡುವ ಯುಕ್ತಿ ತಗದಾರ ಮೂವರು ಹುಡಿಕಿ ॥

ನಿಷ್ಠೂರ ಮಾಡಿ ತಲಿ ಕಟ್ಟಿ ಮಲಗಿದಾರ ಬಿಟ್ಟು ಬಿಡದೆ ಘಟ್ಟಿ ಕದ ಹಾಕಿ ।
ಸೃಷ್ಟಿ ಸ್ಥಿತಿ ಲಯ ಕರ್ತರು ಬಂದು ದಿಟ್ಟಿಸಿ ನೋಡತಾರ ಹಣಿ ಹಣಿಕಿ ॥

ಹಸದ ಹಾವಾಗಿ ಹಲ್ಲ ಕಿಸದ ಚೀರತಾರ ಮುಸಕ ತಗಿಯವಲ್ಲರು ಮಿಸಕಿ ।
ಗುಸಮಿಸಿ ಏನ್ನೆತಿ ಹಸನಾಗಿ ಹೇಳಿರೆಂತ ತ್ರಿಮೂರ್ತಿಗಳು ಕೇಳತಾರ ಮಿಡಕಿ ॥

ನಾವು ಹೇಳಿದಾಂಗ ನೀವು ಕೇಳಬೇಕ ವಚನ ಕೊಡ್ರಿ ಕೈ ಮೇಲೆ ಕೈ ಹಾಕಿ ।
ಅವಾಗ ಎದ್ದು ನಿಮ್ಮ ಸೇವೆ ಮಾಡತೇವ ಜೀವದಿಂದ ಇರತೇವ ಬದುಕಿ ॥

**||ಚಾಲ||**

ಕ್ರಿಯಾ ಕೊಟ್ಟಾರ ಮಾಡಲಿಲ್ಲ ಸುಸ್ತಾ ।
ಮಾಯ ಕಾರ್ತಿಗಳಿಗಾದೀತೊಳೆ ಸಿಸ್ತಾ ॥
ಜಯವಾಯಿತು ಮನಸಿನಂತಾ ।
ಭಯ ಬಿಟ್ಟ ಅಡಿಗಿ ಮಾಡುತಾ ॥
ಎಲ್ಲಾರು ಉಂಡಾರ ನಕ್ಕೊಂತಾ ।
ಅಲ್ಲಿಂದ ತಗದಾರ ಆ ಮಾತಾ ॥

**||ಏರು||**

ಮೃತ್ಯುದೊಳಗೆ ಋಷಿ ಪತ್ನಿ ಅನಸೂಯನ್ನ ವ್ರತಭಂಗ ಮಾಡುವ ಕುಶಕ್ತಿ||೧||

ಮೂವರು ದೇವರು ಬಾವಾಗಳ ರೂಪಾಗಿ ತಾವಾಗಿ ಬಂದಾರ ಭೂಲೋಕಕ
ಕಾವಿಯು ಮೈಯಾಗ ಆವಿಗಿ ಕಾಲಾಗ ಭವತಿ ಭಿಕ್ಷಾಂದೇಹಿ ಕ್ಷಣ ಕ್ಷಣಕ |
ಪತಿವ್ರತಾ ಶಿರೋಮಣಿ ವ್ರತಭಂಗ ಮಾಡುವ ಕುತೂಹಲವಾಗಿ ಪರ್ಣ ಕುಠೀರಕ |

ಮತಿವಂತಿ ಅನಸೂಯಾ ಸ್ವತಃ ಬಂದಾಳ ಬೇಗ ಅತಿಥಿ ಸತ್ಕಾರ ಮಾಡುದಕ |
ಸುತ್ತರಿದು ಮೂವರು ನಿಂತ ಮಾತಾಡತಾರ ಅತ್ರಿಮ ಆಶ್ರಮ ಬಾಗಿಲಕ |
ಬತ್ತಲೆಯಾಗಿ ಬಂದು ಭಿಕ್ಷಾ ನೀಡಿದರ ಆತ್ಮಾನಂದ ನಮ್ಮ ಆತ್ಮಕ ||
ತಥಾಸ್ತು ಅಂಥ ಹೇಳಿ ನಮಸ್ಕಾರ ಮಾಡಿ ಸತಿ ಅನಸೂಯಾ ಹೋದ್ಲ ಒಳಿಯಾಕ
ಸ್ತುತಿ ಸುತ ಓಂಕಾರ ಯತಿಗಳಿಗೋಸ್ಕರ ತೊಳಕೊಂಡ ತಂದ್ಲ ಪತಿ ಪಾದೋದಕ
ಪಾದ ತೀರ್ಥ ಸಾಧುಗಳಿಗೆ ಉಗ್ಗಿದಳು ಕೂಸ ಆಗಿ ಬಿದ್ದಾವ ನೆಲಕ |
ಮೋದದಿ ಮೊಲೆ ಉಣಿಸಿ ಒಯ್ದು ತೊಟ್ಟಿಲಕ್ಹಾಕಿ ಜೋಗುಳ ಹಾಡುತಾಳ ನಕ್ಕ ನಕ್ಕ

**ಜೋಗಳ ಪದ್ಯ –**

ಶಂಭೋ ಶಂಕರಾ ಬ್ರಹ್ಮ ವಿಷ್ಣು | ಜೋ ಜೋ |
ಕುಂಬಿನಿಗಿ ಕೂಸ ಅದ್ರಿ | ಜೋ ಜೋ |
ಶೀಲ ಪರೀಕ್ಷೆ ಮಾಡುವ ದಶಿಯಿಂದ
ಮೇಲಿನಿಂದ ಇಳದ | ಭೂಲೋಕಕ್ಕೆ ಬಂದ |
ದರ್ಶನ ಕೊಟ್ಟಿ ಜೋ ಜೋ |
ಆಶ್ರಮ ಪಾವನವಾಯ್ತು ಜೋ ಜೋ |
ಇಲ್ಲಿಗೆ ಬಂದ ಈ ಸ್ಥಿತಿಯಾಯ್ತು ಜೋ ಜೋ |
ಕೆಲಸ ಯಾರಿಗೆ ಒಪ್ಪಿಸಿ ಬಂದ್ರಿ ಜೋ ಜೋ |
ಮೂವರೂ ದೇವತಾ ಸ್ತ್ರೀಯರು ಭಾವನೆ ತಪ್ಪಿದರು |
ತಾವೆ ಬರುವರು ಮಲಗಿ ಕೊಳ್ಳಿರಿ | ಜೋ ಜೋ |
ಆವಾಗ ನೋಡುನು ಮಜಾ ಜೋ ಜೋ |
ವೀಣಾ ಶಾರದ ಜಾಣ ನಾರದ ಟಣ್ ಟಣ್ ಜಿಗದಾನ ಮೇಲಕ |
ಪ್ರಾಣ ಪತಿಗಳ ಪ್ರಾಣ ಸಂಕಟವನ್ನು ಮೂರು ಮಂದಿ ಅವ್ವಗಳಿಗೆ ಹೇಳುದಕ ||
ಆರ್ವಮಜಕರು ಸಾರಿದವರ ಮುಂದ ಲಕ್ಷ್ಮವ್ವಂದು ತಪ್ಪಿತ ದಿಕ್ಕ |
ಗರ್ವ ಮುರಿದು ಪಾರ್ವತೆವ್ವ ಅಂತಾಳ ಸರ್ವೇಸಿಲ್ಲದ ಹ್ಯಾಂಗ ಇರಬೇಕ ||
ಸರಸ್ವತೆವ್ವನವರು ಮರಾ ಮರ ಮರಗ್ಯಾರ ಬರಮಪ್ಪನವರು ಇಲ್ಲದಕ ||
ನಾರದ ಗುರುಗಳನ್ನು ಕರಕೊಂಡ ಹೋದಾರ ಪತಿದಾನ ಕೊಡ ಅಂತ ಕೇಳುದಕ ||

**||ಚಾಲ||**

ಹೋಗಿ ಹಿಡಿದಾರ ಮುನಿ ಮಡದಿ ಪಾದ ।
ತಗೊಳ್ರೆಂದಾಳ ಗುರ್ತ ಹಿಡಹಿಡದ ॥
ಗುರ್ತಾ ತಪ್ಪಿಬ್ಬರನ ಒಬ್ರ ಹಿಡದ ।
ದತ್ತಾತ್ರೇಯ ಮೂರ್ತಿ ಜನಿಸಿದ ॥
ನಾರಿ ಪಾದೋದಕ ॥ ಸಿಡಿಶ್ಯಾಳ ತಂದ ।
ಹರಬ್ರಹ್ಮ ಎದ್ರ ಗೋವಿಂದ ॥
ಹುಲಕುಂದ ಭೀಮನ ಕವಿಚಂದ ।
ಹಲವು ರಿಕಾರ್ಡದಾಗ ಅಂವ ಅಂದ ॥

**॥ಏರು॥**

ಖಾತ್ರಿ ಜನಪದದ ಮಿತ್ರ ಬೆಟಗೇರಿಯವರು ಧಾತ್ರಿಯೊಳಗ ಹೇಳಿದ ಕಥಿ॥೧॥

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೫. ಶ್ರೀ ಅಹಲ್ಯಾ ಚರಿತ್ರ

ಮಾನವ ಜನ್ಮಕ ವಿಚಾರ ಬಹಳ ಬೇಕ ಪ್ರಪಂಚ ಮಾಡುವಾಗ॥ಪ॥

ಮೈಮರತ ಇರಬಾರ್ದ ಜಗದೊಳಗ
ಮಹಾಪತಿವ್ರತ ಮೋಸ ಹೋದ ಕಥಿ ಸೋಸಿ ಕೇಳರೀಗ॥ಸೋ॥

ಹೇಳುವೆನು ನಿಂತ ಸಭಾದಾಗ ॥
ಗೌತುಮ ಮುನಿ ಸತಿ ಅಹಲ್ಯಾ ಪತಿವ್ರತ ಇದ್ರ ಆನಂದದೊಳಗ॥ಇ॥

ಆಶ್ರಮ ಕಟಗೊಂಡ ಅಡಿವ್ಯಾಗ ॥
ಕಣ್ಣ ಕಮಲ ಮೈ ಬಣ್ಣ ಲಿಂಬಿಹಣ್ಣ ಗಲ್ಲ ಕನ್ನಡಿ ಹಂಗ॥ಕು॥

ಸಂಪಿಗೆ ತೆನೆಯಂತೆ ಅಕಿ ಮೂಗ ॥
ತೋಳ ತೊಡಿಗಳು ಬಾಳಿದಿಂಡಿನಂತೆ ಕುಚ ಬೊಗರಿ ಹಂಗ॥ಕು॥

ನಡಿಗಿ ನಡುತಿದ್ಲ ನವಿಲಿನ್ಹಂಗ ॥
ಸುಂದರ ರೂಪಕ ಇಂದ್ರ ಮೆಚ್ಚಿ ಬಂದ ಮಧ್ಯ ರಾತ್ರಿಯೊಳಗ॥ಮ॥

ಮಸಲತ ಮಾಡಿದ್ದ ಮನದೊಳಗ ॥
ಕೀಳತನ ನೋಡ್ರಿ ಕೋಳಿಯಾಗಿ ಹೋಗಿ ಕೂಗ್ಯಾನ ಆವಾಗ॥ಕೊ॥

ಗೌತುಮ ಮುನಿ ಎಚ್ಚರಾದ ಬೇಗ ॥
ಅನುಷ್ಟಾನಕ ವ್ಯಾಳೆ ಆತ ಅಂತ ನದಿಗೆ ಹೋಗ್ಯಾನ ಅವಾಗ॥ನ॥

ಸಾಧಿಸಿತು ಇಂದ್ರ ಹೋದ ವಳಗ ।
ಇದ್ದಿದ್ದಿಲ್ಲ ಖಬರ ನಿದ್ರಿ ಅಹಲ್ಯಾಗ ಕದ್ದಿಲಿ ಮಗ್ಗಲದಾಗ॥ಕ॥

ಮಲಗಿಕೊಂಡ ನಡಿಶಾನ ಸಂಭೋಗ ।

**॥ಚಾಲ॥**

ಹೊಳಿಗೆ ಹೋದಂಥಾ ಗೌತುಮ ಮುನಿನಾಥ ।
ಬೆಳಗ ಆಗಿಲ್ಲ ಅಂಬುದು ಹಿಡಿದಾನ ಗುರುತಾ ।
ಹೊರಳಿ ಆಶ್ರಮಕ ಬಂದಾನ ಆಗ ತುರತಾ ।
ಹೇಣತಿ ಹತ್ತರ ಮಲಗಿದ ಮಾಡಿ ಮಮತಾ ।
ಇಷ್ಟೊತನಕ ಭೋಗಿಸಿದೀ ನನ್ನ ಕಾಂತಾ ।
ಇನ್ನೂ ಆಗಿಲ್ಲ ಏನ ಅಂತಾಳ ತೃಪ್ತಾ ।
ಜ್ಞಾನ ದೃಷ್ಟಿಲಿ ತಿಳಕೊಂಡ ಇಂಗಿತಾ ।
ನೀತಿ ತಪ್ಪಿ ಆತ ಅಂದ ಘಾತಾ ॥

**॥ಏರು॥**

ಅಲ್ಲದ್ದ ಮಾಡಿದಿ ಕಲ್ಲಾಗಿ ಬೀಳಂತ ಶಾಪಕೊಟ್ಟ ಆಗ॥ಶಾ॥
ಮೈಮರತ ಇರಬಾರ್ದ ಜಗದೊಳಗ॥೧॥
ಅಪರಾಧಿ ನಾನಲ್ಲ ಕೃಪಾ ಮಾಡಿರೆಂದು ಬಿದ್ದಾಳ ಪಾದಕ್ಕ॥ಬಿ॥
ಬಿಕ್ಕಿ ಬಿಕ್ಕಿ ಅಳತಾಳ ಮಾಡಿ ದುಃಖ ॥
ಮೋಸ ಆಯ್ತು ಶ್ಯಾಪಕೊಡಿರಿ ಇನ್ನ ಕ್ಷಮಾ ಮಾಡಬೇಕ॥ಕ್ಷ॥
ನಾಶ ಆದ್ನಿ ಎಚ್ಚರಿಲ್ಲದಕ ॥
ಹಲವು ಪರಿಯಿಂದ ಹಂಬಲಿಸುದ ಕಂಡ ಬಂತ ಕಡೀಕ॥ಕ॥
ಮರಳಿ ದಯದೋರಿದ ಆಕ್ಷಣಕ ॥
ಸ್ವಾಮಿ ಭಗವಂತನು ರಾಮವತಾರ ತಾಳಿ ಬರುವ ಭೂಮಂಡಲಕ॥ಭೂ॥
ಅವನಿಂದ ನಿನಗಾಗುದು ಮೋಕ್ಷ ॥

ಹಿಂಗ ಹೇಣತಿಗ್ಹೇಳಿ ಇಂದ್ರಗಂತಾನು ಎಷ್ಟೈತವನ ಸೊಕ್ಕ||ಎ||
ವೀರ್ಯಕೋಶ ನಾಶ ಆಗಲಿ ಚೊಕ್ಕ ||
ದಶರಥನ್ಹೊಟ್ಟಲೆ ಹುಟ್ಟಿಬಂದ ಶ್ರೀ ರಾಮಚಂದ್ರ ಅಯೋಧ್ಯಕ||ರಾ||
ಭಕ್ತರನ್ನ ರಕ್ಷಣ ಮಾಡುದಕ ||
ವಿಶ್ವಾಮಿತ್ರ ಋಷಿ ಕರಕೊಂಡ ಹೊರಟನು ಯಜ್ಞದ ಕಾವಲಕ||ಯ||
ಧನುರ್ವಿದ್ಯೆ ಕಲಿಸುವ ಗೋಸ್ಕುರಕ ||
ಜನಕ ರಾಜನ ಮಗಳ ಜಾನಕಿ ಸ್ವಯಂವರ ಮಂಟಪಕ||ಸ್ವ||
ವಿದ್ಯೆ ಕಲಿತ ಹೊರಟರು ಆ ಕಾಲಕ್ಕ ||
ಎಲ್ಲಾರು ಹೋಗುವಾಗ ಕಲ್ಲಾಗಿ ಬಿದ್ದಿದ್ಲ ಅಹಲ್ಯಾ ಅಲ್ಲಿ ತನಕ||ಅ||
ಉದ್ಧಾರಾಗುವ ಕಾಲ ಬಂತ ಸನೀಕ ||

**||ಚಾಲ||**

ಶ್ರೀರಾಮಂದು ಬಿದ್ದಿತು ಅಲ್ಲಿ ಚರಣಾ |
ಚರಣ ಸ್ಪರ್ಶದಿಂದ ಶಾಪ ವಿಮೋಚನಾ ||
ಪತಿವ್ರತಿ ಆದಾಳೋ ಉದ್ಧರಣಾ |
ಕಲ್ಲಹೋಗಿ ಅಹಲ್ಯಾ ಉತ್ಪನ್ನಾ ||
ರಾಮಸ್ವಾಮೀದ ಹಿಡಿದಳು ಆಗ ಚರಣಾ |
ನಿನ್ನಿಂದ ಈ ಜನ್ಮ ಪಾವನಾ ||
ಹುಲಕುಂದ ದೊಡ್ಡ ಪಟ್ಟಣಾ |
ಕವಿ ಮಾಡಿ ಹೇಳ್ಯಾನ ಭೀಮಣ್ಣಾ ||

**||ಏರು||**
ನರ ಜಲ್ಮಕ ಬಂದ ಅರವಿಲಿ ನಡದರ ದೊರೆಯದು ಸುಖಭೋಗ||ದೊ||
ಮೈ ಮರತ ಇರಬಾರ್ದ ಜಗದೊಳಗ||೨||

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೮. ಸತಿ ಸಾವಿತ್ರಿ

ಪತಿವ್ರತೆಯಲ್ಲಿ ಸತಿ ಸಾವಿತ್ರಿಯ ಕಥಿ ಕೇಳಿರಿ ಕೂತ ಮತಿವಂತರಾ |
ಸತ್ತಗಂಡ ಸತ್ಯವಾನನ ಪ್ರಾಣ ಮತ್ತೆ ಉಳಿಸಿ ಪಡಕೊಂಡ್ಲ ಹೆಸರಾ||ಪ||

ಪೂರ್ವ ಕಾಲದಲ್ಲಿ ಮದ್ರ ದೇಶದ ದೊರಿ ಅಶ್ವಪತಿ ಎಂಬ ಮಹರಾಜರಾ |
ಸರ್ವ ಪ್ರಾಣಿಗಳಲ್ಲಿ ದಯಾವಂತನಾಗಿ ಧರ್ಮದಿ ನಡಿಸಿದ್ದ ಕಾರಭಾರಾ ||

ಮಾಳವಿ ದೇವಿ ಎಂಬ ಬಾಳ್ವೆವಂತ ಸತಿ ಹೇಳಲಾರದಷ್ಟು ಶಡಗರಾ ।
ವ್ಯಾಳೆ ವ್ಯಾಳೆಕ ವ್ರತಗಳ ಮಾಡುವ ಬೋಳೆ ಸ್ವಭಾವದ ಸಂಸಾರಾ ॥

ಪವಿತ್ರವಾದ ಸಾವಿತ್ರಿ ವ್ರತದ ಸೇವೆಯ ಕೈಕೊಂಡು ನಿರಂತರಾ ।
ಆವಾಗ ದೇವಿಯು ಭಾವಕ ಮೆಚ್ಚಿ ಪ್ರಸನ್ನಾಗಿ ಕೊಟ್ಟೋದ್ಲವರಾ ॥

ಅಶ್ವಪತಿ ಅರಸ ಮಾಳವಿ ರಾಣಿಯ ಉದರದಿ ತೊಟ್ಟಳು ಅವತಾರಾ ।
ವಿಶ್ವದೊಳಗೆ ಅಷ್ಟೈಶ್ವರ್ಯದಿಂದ ಸಾವಿತ್ರಿ ಅಂತ ಇಟ್ಟಾರ ಹೆಸರಾ ॥

ಸದ್ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿ ಬುದ್ಧಿವಂತ ಆದಳು ಪೂರಾ ।
ಸದ್ಗತಿ ಹೊಂದುವ ಅಧ್ಯಾತ್ಮ ಶಾಸ್ತ್ರ ಓದಿಕೊಂಡ ವೇದಾಂತ ಸಾರಾ ॥

**||ಚಾಲ||**

ಮದವಿಗೆ ತಕ್ಕ ಕಾಲವನ್ನು ಎದುರು ನೋಡುತ್ತಾ ।
ಉದಯದ ಪೌರ್ಣಿಮಿ ಚಂದ್ರನಂತೆ ಹೊಳೆಯುತ್ತಾ ।
ಹೃದಯ ವಿಶಾಲವಾಗಿ ಸೌಮ್ಯ ಸ್ವಭಾವ ಬೀರುತ್ತಾ ।
ಮುದದಿಂದ ಯೌವ್ವನದ ಭಾರದಿಂದ ಬಳಕುತ್ತಾ ॥

**||ಚಲ್ತಿ ಚಾಲ||**

ವರ ಬಂದ ಮರಳಿ ಹೋಗುತ್ತಾ ।
ಅರಸರು ಧೈರ್ಯ ಗುಂದುತ್ತಾ ॥
ಭಾರಿ ಐತಿ ಇಕಿಯ ಕಿಮ್ಮತ್ತಾ ।
ಸರಿ ಜೋಡಿ ನಾವು ಅಲ್ಲಂತಾ ॥

**ಶ್ಲೋಕ**

ರಥ ಹತ್ತಿ ಸ್ವತಾ ಹೋದಳು ಪತಿ ಶೋಧ ಮಾಡುತಾ ।
ಅತಿ ಮಹತ್ವದ ಆಶ್ರಮಾಶ್ರಮ ಅರಣ್ಯದೊಳು ಸಂಚರಿಸುತಾ ॥

**||ಏರು||**

ಮಾತಾ ಪಿತ್ರರ ಪ್ರೀತಿ ಪಾತ್ರನಾದ ನೀತಿವಂತ ಸಿಕ್ಕ ಋಷಿ ಕುವರಾ||೧||
ಸಾಲ್ವದೇಶ ಆಳುವ ದ್ಯುಮಸ್ತೇನರಾಯ ವೃಧ್ಯಾಪ್ಯದೊಳು ಕಣ್ ಕಾಣದಕ ।
ಬಲ ಹೀನನಾಗಿ ರಾಜ್ಯ ಕಳಕೊಂಡು ಮೇಧಾರಣ್ಯದೊಳು ಇದ್ದ ಆಶ್ರಮಕ ॥
ಆತನ ಹೊಟ್ಟೆಲೆ ಸತ್ಯವಾನನೆಂಬ ಸಾತ್ವಿಕ ಮಗ ಇದ್ದ ರಕ್ಷಣಕ ।
ಜಾತಿ ಗೋತ್ರ ಸೂತ್ರ ಖಾತ್ರಿ ಮಾಡಿಕೊಂಡ್ಲ ಸತಿ ಸಾವಿತ್ರಿ ಹೋಗಿ ಅಲ್ಲಿ ತನಕ ॥

ಆರಾಯುಷ್ಯದ ಗಂಡ ಕುರುಡ ಮಾವಯ್ಯನು ಅರಣ್ಯದೋಳು ಕಾಲ ಕಳೆಯುದಕ ।
ದೊರಿ ಸಿರಿತನ ಬಿಟ್ಟು ನಾರಿನ ಸೀರಿಯ ಉಟ್ಟ ಇರಲಿಕ್ಕೆ ತಯಾರಾದ್ಲ ಆಕ್ಷಣಕ ।
ಹುಟ್ಟಿದ ಮನಿಯೋಳು ಮೃಷ್ಟಾನ ಉಣ್ಣುವ ಬಿಟ್ಟ ಘಟ್ಟಿಯಾದ್ಲ ಕಷ್ಟ ಸೋಸುದಕ ।
ದಿಟ್ಟತನದಿಂದ ಕಟ್ಟಡವಿಯೋಳು ಹುಟ್ಟಿದ ಗಡ್ಡೆ ಗೆಣಸು ತಿನ್ನುದಕ ॥
ಅತ್ತಿ ಮಾವರ ಸೇವೆ ಅಚ್ಚು ಮೆಚ್ಚಾಗಿ ಮಾಡಿ ಹೆಚ್ಚಿನ ಪದವಿಗ ಏರುದಕ ॥
ಅತಿಥಿ ಸತ್ಕಾರ ಭಕ್ತಿ ಭಾವದ ಉತ್ತಮ ಕೀರ್ತಿ ಗಳಿಸುದಕ ॥
ಒಂದಾನೊಂದು ದಿನ ಉಂಡ ಅಡವಿಗ್ಹೋದ ಗಂಡ ಸೌದೆಯನ್ನು ತರವುದಕ ।
ಕಂಡ ಆಗ ಹಿಂಬಾಲ ಹೋದಳು ಆಯುಷ್ಯ ಮುಗಿದಿತ್ತ ವಂದಕಾಲಕ್ಕೆ ॥

**||ಚಾಲ||**

ಯಮದೇವ ನೇಮದಿಂದ ಫಾಸಿ ಕೊರಳಿಗ್ಹಾಕುತ್ತಾ ।
ಕ್ರಮದಂತೆ ಸತ್ಯವಾನನ ಪ್ರಾಣವನ್ನು ಒಯ್ಯುತ್ತಾ ॥
ಸಮಕ್ಷಮ ಸಾವಿತ್ರಿದೇವಿ ಸ್ವತಾ ಮುಂದೆ ನಿಂದ್ರುತ್ತಾ ।
ನನ್ನ ಪತಿವ್ರತಾ ಧರ್ಮ ಉಳಿಸಬೇಕ್ರಿ ನೀವು ತುರ್ತಾ ॥

**||ಚಲ್ತಿಚಾಲ||**

ಇಬ್ಬರಿಗಿ ನಡದ ಧರ್ಮವಾದಾ ।
ಮಬ್ಬಿಗಿ ಯಮರಾಯ ಬಿದ್ದಾ ॥
ಉಬ್ಬಿ ಏನ ಬೇಡತಿ ಬೇಡಂದಾ ।
ಅಬ್ಬಬ್ಬಾ ಶ್ಯಾಣ್ಯಾಳಕಿ ಅಂದಾ ॥

**ಶ್ಲೋಕ**

ಕುರುಡ ಮಾವಗ ಕಣ್ಣು ಬರಲಿ ।
ಮರಳಿ ರಾಜ್ಯ ಅವಗ ದೊರೆಯಲಿ ॥
ನೂರು ಮಂದಿ ನನಗೆ ಮಕ್ಕಳಾಗಲಿ ।
ನಾಲ್ಕನೂರ ವರುಷ ಪತಿ ಬಾಳಲಿ ॥

**||ಏರು||**

ನೀತಿಲೆ ವರ ಪಡೆದ ಮುಕ್ತಿ ಹೊಂದಿದಳೆಂದು ಖ್ಯಾತಿವಂತ ಹುಲಕುಂದ  ಭೀಮೇಶ್ವರಾ  ॥೨॥

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೭. ವೀರಭದ್ರ ದೇವರ ಫನ್ನ

ವೀರಭದ್ರವೀರ ರಣಶೂರ ಧೀರ ಶಂಕರನ ಪುತ್ರ ಕರ್ತ
ನಿಮ್ಮ ಸ್ತುತೀ ಮತೀ ಸದ್ಗತೀ ರತಿ ನನಗೊರವಾಗಿರಿ ತುರ್ತ ||
ದಕ್ಷಬ್ರಹ್ಮ ಹಮ್ಮ ಇಟ್ಟ ಹೋಮ ನೇಮ ಸಾಂಬಾಗ ಸುಟ್ಟೆನಂದ
ಶಂಕರಾಹರ ಬಂತು ಬೆವರ ಧುಮರದಾಗ ಹುಟ್ಟಿ ಬಂದಿ ಕಂದ ||

ಕಡಕಡಿಯ ಬತ್ತಿಸ ಹತಿಯಾರ ಜೋರ ಹಂಕಾರದ ಹೆಚ್ಚಿಂದ
ತಂದಿ ಹುಕುಮಗಿಕಮ ಕೊಟ್ಟ ರಕಮ ಹಕಮ ಇಂದ, ದೈತ್ಯರಿಗ್ಹೊಡಿಯಂದ ||
ಹೊಡಹೊಡದ ಕಡದ ಹೋದು ಮಡದ ನಡದ ಹೋಗಿ ದಕ್ಷನ ತಲಿ ಕೊಯ್ದ
ಪಾರ್ವತಿ ರತಿ ಶಿವನ ಸತೀ ಗತಿ ಹಾರಿ ಬೆಂಕ್ಯಾಗ ಆಕಿ ಬಿದ್ದ ||

ಶಿವಧ್ಯಾನ ಮಾನಾ ಕಾಯೊ ನೀನ ನನ್ನ ಹೀಂಗಂದಾಳ ಪಾರ್ವತಾ
ನಿಮ್ಮ ಸ್ತುತೀ ಮತೀ ಸದ್ಗತೀ ರತೀ ನನಗೊರವಾಗಿರಿ ತುರ್ತ ||೧ನೇ ಚೌಕ||

ಶಿವಶಬ್ದ ಟುಬ್ದ ಕೇಳಿದ್ದ ಎದ್ದ ಹೋಗಿ ಬೇಕೆಂದು ವೀರ್ಯ ತೆಗೆದ
ಶಕ್ತಿ ಸ್ವರೂಪ ಗಿರೂಪ ಏನ ತಾರೀಪ ಬೇರೂಪ ಆಯ್ತು ಕಾಳಮ್ಮ ಆಗೆಂದ ||
ದೈತ್ಯರಿಗಿ ಎರಗಿ ಹೊಡೆದ ತಿರಗಿ ಕರಗಿ ಮರಮರಗಿ ಸತ್ತು ಮಡಿದ
ವೀರಪುಂಡ ದಕ್ಷನ ದಂಡ ರುಂಡ ಕುರಿ ಚಂದ ತಾನಿಟ್ಟ ಜೀವ ಪಡೆದ ||

ನಿಮ್ಮ ಸೊಲ್ಲ ಗುಲ್ಲ ಕೇಳಿ ಝುಲ್ಲ ಎಲ್ಲ ಕಲ್ಲೊಡೆದು ಆಯ್ತು ತುಣುಕ
ಖಡಖಡಲ ಧಡಲ ಅಂಜಿ ಒಡಲ ಗಿಡಲ ಕೋಟಿ ಸಿಡಲ ಬಿದ್ದಂಗ ನೆಲಕ ||
ನಿಮ್ಮ ಜರ್ಬ ಅರ್ಬ ಬಿತ್ತ ದಾಬ ಗಾಬ ಇಂದ್ರ ಸಭಾ ಆಯ್ತು ಮೂಕ
ಗಂಧರ್ವ ಗಾಯಕರ ಮುನಿಯ ಶೂರ ಸರುವರಿಗಿ ಬಿತ್ತ ಧಾಕ ||

ಆ ಬ್ರಹ್ಮ ವಿಷ್ಣು ಇಲ್ಲ ಕಮ್ಮ ದಮ್ಮ ಬೀಳಲಿಲ್ಲ ಅವರ ಜೀವಕ
ಬಿಟ್ಟ ಸ್ವರ್ಗ ಗಿರ್ಗ ಆಗಿ ಬೆರ್ಗಹೊರಗ ಅಂಜಿ ಹತ್ಯಾರ ಓಡುದಕ ||
ಕೈಕಾಲ ಗೋಲ ಬಾಳಿ ಪೀಲ ಡೌಲ ನಿಮ್ಮ ಚಂದ್ರನ್ಹಂಗ ಸುರತ |
ನಿಮ್ಮ ಸ್ತುತೀ ಮತೀ ಸದ್ಗತೀ ರತೀ ನನಗೊರವಾಗಿರಿ ತುರ್ತ||೨ನೇ ಚೌಕ||

ಪೋಶ್ಯಾಕ ಲಾಕ ಏನ ಜೋಕ ಠೀಕ ನೀವು ಕಾಶಿ ಉಡುದು ಅರಿದ
ಅಂಗಿ ಚೀಟ ಗೀಟ ಮ್ಯಾಲ ಕೋಟ ಘಾಟಿ ಮೈಯಾಗ ನೀವು ತೊಡುದ ||
ನೀವು ವರಿಷ್ಠ ದೃಷ್ಟ ಭಾಳ ಶ್ರೇಷ್ಠ ಕಿರೀಟ ನಿಮ್ಮ ತಲಿಯ ಮ್ಯಾಲ ಮೆರುದ
ನಾಗಪುರದ ಜರದ ಧೋತರದ ಹೊರುದ ನಿಮ್ಮ ಪೋಷಾಕ ತರತರದ ||
ನಿಮ್ಮ ರಟ್ಟಿ ಹೊಟ್ಟಿ ಮಾಡಿ ಕುಟ್ಟಿ ಗಟ್ಟಿ ನೀವು ರಣದ ಒಳಗ ಮರದ
ಮೈ ಕಟ್ಟಿ ಗಿಟ್ಟ ಭಾಳ ದಿಟ್ಟ ಸಿಟ್ಟ ನಿಮ್ಮ ಉಗ್ರ ಎಷ್ಟ ಉರುದ ||
ನಿಮ್ಮ ಹಸ್ತ ಶಿಸ್ತ ಇಟ್ಟ ವಸ್ತ ಮಸ್ತ ರುಳಿ ಕೈಯಾಗ ಬಂಗಾರದ

ಕಪ್ಪಗೊರಳ ಸರಳ ಕೈಬೆರಳ ಹರಳ ಮ್ಯಾಲ ಹೊಳೆವುದ ಕುಂದಲದ ||
ಉರಿಗಣ್ಣ ಕಣ್ಣ ಮೈ ಬಣ್ಣ ಸಣ್ಣ ತುಟಿ ಕ್ವಾರಿ ಮೀಸಿ ಕೊರದ
ಮೂಗ ತಿಳಿಪ ಹೊಳಪ ನಿಮ್ಮ ರೂಪ ದೀಪ ಮುಂದ ಚಂದ್ರ ಜ್ಯೋತಿ ಉರುದ ||

ಕೈಕಾಲ ಸೋಲ ಬಾಳಿ ಪೀಲ ಡೌಲ ನಿಮ್ಮ ಚಂದ್ರನಂತ ಸುರತ
ನಿಮ್ಮ ಸ್ತುತಿ ಮತೀ ಸದ್ಗತಿ ರತೀ ನನಗೊರವಾಗಿರಿ ತುರ್ತ||೩ನೇ ಚೌಕ||

ವರಸೀಗಿ ಒಮ್ಮ ಇಲ್ಲ ಕಮ್ಮ ನೇಮ ನಿಮ್ಮ ಬಾದಮ್ಯಾಗ ಆರತಿ
ಹಲಗೀಯ ಮೆರುಣಗಿ ಮೆರೆಸಿ ಬಾರಿಸಿ ಮುಂದ ವಾದ್ಯಕಿಲ್ಲ ಅಳತಿ ||
ಪರವಂತಗಿಂತ ಆಡಿ ನಿಂತ ಎಂಥ ನಿಮ್ಮ ಸತ್ಯದಲ್ಲಿ ಸರತಿ
ನಿಮ್ಮ ಕಡಗ ಗಿಡಗ ನೋಡಿ ನಡಗ ದಿಡಗ ನಾಲಗ್ಯಾಗ ಶಸ್ತ್ರವೊತ್ತಿ ||
ನಿಮ್ಮ ಅಗ್ಗಿ ಲಗ್ಗಿ ಹೂ ಮಗ್ಗಿ ಜಗ್ಗಿ ಒಳಗ ಒಗೆದು ಮಾಡಿರಿ ಶಾಂತಿ
ಉರಿಗಿಚ್ಚ ಕಿಚ್ಚ ನೀವು ಹೆಚ್ಚ ಮುಚ್ಚ ತುಳ ತುಳದು ನೋಡುದು ಅಳತಿ ||
ಅಕ್ಕರತಿ ಸರತಿಗಿಲ್ಲ ಕೊರತಿ ಅರತಿಲಿಂದ ಮಾಡುವೆ ಮಂಗಳಾರತಿ
ಹರದಾಸ ವೇಸ ನಿಮ್ಮ ಕೂಸ ಧ್ಯಾಸ ನನ್ನ ಮ್ಯಾಲ ಇರಲಿ ಭಕ್ತಿ ||
ಸಂಗಪ್ಪ ಸರಸಿ ಹೊಡೆದ ಬರ್ಚಿ ತರ್ಚಿ ವೈರೀಗಿ ಬೆಂಕಿ ಹತ್ತಿ
ಶಿಶ್ಯಾ ಖಾಜ ರಾಜ ಕವಿ ಸಾಜ ಮೋಜ ಹಾಡುಣಕಿ ಸಭಾಕ ಭರ್ತಿ ||
ಹಲಸಂಗಿ ಊರ ಗುಲಜ್ಯಾರಶ್ಯಾರ ಬಾಜಾರ ಪ್ಯಾಟ ಶಿಸ್ತ
ನಿಮ್ಮ ಸ್ತುತೀ ಮತೀ ಸದ್ಗತೀ ರತೀ ನನಗೊರವಾಗಿರಿ ತುರ್ತ||೫ನೇ ಚೌಕ||

***ರಚನೆ :*** ಖಾಜಾಭಾಯಿ
***ಕೃತಿ :*** ಜೀವನ ಸಂಗೀತ

## ೩೮. ಬಾರ ಬಾರ ಎಲ್ಲಮ್ಮಾ

ಬಾರ ಬಾರ ಎಲ್ಲಮ್ಮಾ ||ನೀ|| ಪರಶುರಾಮನ ತಾಯಮ್ಮಾ||ಪ||
ರೇಣುಕ ರಾಜನ ಮಗಳಮ್ಮಾ ||ನೀ|| ರೇಣುಕಿ ಅನಿಸಿಕೊಂಡೆಮ್ಮಾ||೧||
ಏಳಕೊಳದಾಗಿಳದೆಮ್ಮಾ ||ನೀ|| ಇಳೆಯೊಳಗೆಲ್ಲಾ ಬೆಳೆದೆಮ್ಮಾ |
ಕರಿಯ ಮಾರಿಯ ಎಲ್ಲಮ್ಮಾ ||ನಿನ್ನ|| ಸರಿಯ ಯಾರು ಇಲ್ಲಮ್ಮಾ||೨||
ಜಯ ಜಯ ಜಯ ಜಯ ಜಗದಮ್ಮಾ ||ನಿನ್ನ|| ಕೈಯಾಗ ಭುವರ್ಲೋಕಮ್ಮಾ
ಮಾಯ ಕಾರ್ತಿ ಹೌದಮ್ಮಾ ||ನಿನ್ನ|| ಮಹಿಮೆಯ ಬಲ್ಲವರಾರಮ್ಮಾ||೩||

**ಪದ್ಯ**

ಪುರುಷರ ತರಿಸಿದಿ | ಸೀರಿ ಉಡಸದಿ |
ಕುಬಸಾ ತೊಡಿಸಿದಿ | ಕೊಡಾ ಹೊರಿಸಿದ |
ಕವಡಿ ಹಾಕಿಸಿದಿ | ಚವಡಿಕಿ ತೊಡಿಸಿದಿ |

ಹಡ್ಡಲಗಿ ಹಿಡಸಿದಿ । ಬಂಡಾರ ಬಡಿಸಿದಿ ।
ಕಂಡಾಂಗ ಕುಣಿಸಿದಿ ॥ ಬಾರ ಬಾರ ಎಲ್ಲಮ್ಮಾ॥೪॥
ಹಿರೀ ಗುಡ್ಡದ ಎಲ್ಲಮ್ಮಾ ನಿನ್ನ ಅರಿಯದವರು ಕಡಿಮೆಮ್ಮಾ ।
ಗಂಡ ಹೆಂಡರ ಬಿಡಿಸಿದೆಮ್ಮಾ ಬಂಡಾರ ಚೀಲ ಕೊಡಿಸಿದೆಮ್ಮಾ॥೫॥
ಬಾಗಿಲ ಭರಮನು ಉತ್ತಮಾ ॥ಮತ್ತ॥ ಜೋಗುಳ ಬಾಂವಿಯ ಸತ್ಯಮಾ
ಯಣಿ ಗೊಂಡದ ನೀರ ಜಳಕಮ್ಮಾ ನೀ ಎರಕೊಂಡ ತೀರ್ಥ ಹೌದಮ್ಮಾ॥೬॥

**ಪದ್ಯ**

ಹುಡಿಗೇರನ ತರಿಸಿದಿ । ಉಡಿಗಿ ಉಡಿಸಿದಿ ।
ಜಡಿ ಬಿಡಿಸಿದಿ । ಗೆಜ್ಜಿ ಕಟ್ಟಿಸಿದಿ ।
ಹೆಜ್ಜ ಚೆಲ್ಲಿಸಿದಿ । ಸೂಳೇರನ ಕರಿಸಿದಿ ।
ಬಳೆ ಒಡಸಿದಿ । ಹೊರಳಿ ಇಡಸಿದಿ ।
ಭಿಕ್ಷಾ ಬೇಡಿಸಿದಿ । ಮೋಜ ನೋಡಿದಿ ॥ ಬಾರ ಬಾರ ಎಲ್ಲಮ್ಮಾ॥೭॥
ಯೋಗಿಗಳಿಂದ ನಿನ್ನ ಜಲ್ಮಮ್ಮಾ ॥ನೀ॥ ಯೋಗಿನಿಯಾಗಿ ಮೆರೆದೆಮ್ಮಾ
ಯಕ್ಕಯ್ಯ ಜೋಗಯ್ಯ ಅಂದೆಮ್ಮಾ ಅವರ ಚೊಕ್ಕ ನಾಮ ಉಳಿಸಿದೆಮ್ಮಾ॥೮॥
ಯುಗ ಯುಗದೊಳು ಅಮರಾದೆಮ್ಮಾ ॥ಕಲಿ॥ ಯುಗದೋಳು ಕೀರ್ತಿ ಬಂತಮ್ಮಾ ।
ಅಗಣಿತ ಐಶ್ವರ್ಯದ ಅಮ್ಮಮ್ಮಾ ॥ನಿನ್ನ॥ ಪೊಗಳಾಂವ ಹುಲಕುಂದ ಭೀಮಾ॥೯॥

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೯. ರೇಣುಕಾ ಚರಿತ್ರೆ

ಏಳುಕೊಳ್ಳದ ಎಲ್ಲಮ್ಮಾ ಮಾಯ ಕಾರ್ತಿ ಜಗದಂಬಾ ॥ ಉಧೋ ಉಧೋ ॥ ಪ ॥

ಕೃತ ಯುಗದಿ ಅವತಾರ ತಾಳಿದಿ ।
ಕಾಶ್ಮೀರ ಅರಸನ ಮಗಳಾದಿ ।
ಜಮದಗ್ನಿ ಮುನಿ ಗಂಡನ್ನಾಗಿ ಪರಶುರಾಮನ್ನಡದಿ ॥ ಉಧೋ ಉಧೋ॥೧॥

ಕಾರ್ತಿವಿರ್ಯಾರ್ಜುನನ ಗರ್ವ ಮುರದಿ ।
ಕೈರಟ್ಟೆಗೆ ಹಗ್ಗ ಹಚ್ಚಿಸಿದಿ ।
ಸಿಡಿ ಮುಳ್ಳ ನಡು ಬೆನ್ನಾಗ ಚುಚ್ಚಿ ಸಿಡಿ ಹೊಡದಿ ॥ ಉಧೋ ಉಧೋ॥೨॥

ಪಂಜ್ಜಿಡಿಸಿ ಮಾರಿ ಸುಡಸಿದಿ ।
ಅಂಜಿ ಪಾದದ ಮೇಲೆ ಬಿತ್ತೂ ಮಂದಿ ।
ಹಿಂಜರಿಯದೆ ಕಾಮಧೇನು ರಾಮನಿಂದ ತರಿಸಿದಿ ॥ ಉಧೋ ಉಧೋ॥೩॥

ಸೊಕ್ಕಿನವರ ದಿಕ್ಕ ತಪ್ಪಿಸಿದಿ।
ಯಕ್ಕಯ್ಯ ಜೋಗಯ್ಯನ್ವತ್ತರ ಹಿಡಿತಂದಿ।
ಕವಡಿ ಸರಾ ಹಾಕಿಸಿ ಬಂಡಾರ ಕೊಡಿಸಿ ತಿಂಡಿ ಕಳದಿ॥ ಉಧೋ ಉಧೋ॥೪॥

ಬೇವಿನ ಉಡಿಗಿ ಉಡಿಸಿ ಆಕ್ಷಣದಿ।
ಹಡ್ಡಲಗಿ ಕೈಯಾಗ ಕೊಡಿಸಿದಿ।
ಕನ್ನಡದೇವಿ ರೇಣುಕಾತಾಯಿ ಆದಿಶಕ್ತಿ ಉಧೋ ಉಧೋ ॥೫॥

ಹುಣ್ಣಿವಿ ಮಂಗಳವಾರ ಜಾತ್ರಿಗರದಿ।
ಕಣವಿ ಜೋಗಳ ಬಾವಿ ಜನ ಸಂದಿಗೊಂದಿ।
ಹಣ್ಣು ಕಾಯಿ ತರವೂರಂತ ಹುಲಕುಂದ ಭೀಮೇಶ ಅಂದ॥
ಉಧೋ ಉಧೋ ॥೬॥

***ರಚನೆ:*** ಹುಲಕುಂದ ಭೀಮಕವಿ
***ಕೃತಿ:*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ಚಾರಿತ್ರಿಕ

### ೧. ಬ್ರಿಟೀಷ್-ಜರ್ಮನ್ ಯುದ್ಧದ ಲಾವಣಿ

ಆದಿಯಲ್ಲಿ ಶಾಂತಿಮಂತ್ರ ಮೋದದಿಂದ ಪಠಿಸಿ ವೇದ। ಕಾದಿದೇವ ನಿನ್ನ ಸ್ತುತಿ ಮಾಡುವೆನು।
ಮೇದಿನಿಯೊಳ್ ನಡೆದ ಮಹಾಯುದ್ಧ ರಂಗದ ವಾರ್ತೆಯನು। ನಾದದಲ್ಲಿ ನಾದಬೆರಸಿ ಹಾಡುವೆನು॥೧॥

ಶಾಂತ ಚಿತ್ತದಿಂದ ಬುದ್ಧಿವಂತ ಹಿಂದೂ-ಬಂಧುಭಗಿನಿ ಕುಂತು ಕೇಳ್ರಿ ಯುದ್ಧ ರಂಗದ ವಾರ್ತೆಯನು
ಎಂತು ಏನು ಎಂಬ ಪ್ರಶ್ನೆಕುತ್ತರ ವೀಯುವೇನೀಗ। ನಿಂತ ನಡು ಸಭಾಮಧ್ಯದಾಗ ನಾನು॥೨॥

ವೀರ ಧೀರ ಶೂರ ಪುಣ್ಯಪೂರಾಂಗ್ಲ ಸಾಮ್ರಾಜ್ಯಕ್ಕ। ಯಾರು ಜೋಡಿದ್ದಿಲ್ಲ ಈ ಭೂಮಿಮ್ಯಾಗ।
ಘೋರ ಸ್ವಾರ್ಥದಿಂದ ಯುದ್ಧ ಸಾರಿದಂಥ ಹೇರ ಹಿಟ್ಲರಗಾರು ಗೆಟ್ವಾನೀತ ದ್ವಿತೀಯರಂಗದಾಗ॥೩॥

ರಸಿಯಾದ ರಣರಂಗದಾಗ ಕಸುವುಗೆಟ್ಟ ಹಿಟ್ಲರನ। ಕೆಸರಲಿಂಗ ರೋಮದಯುದ್ಧ ಭೂಮಿಯಾಗ।
ಕಸುವುಕೆಟ್ಟು ಓಡಿಹೋದ ದಿಕ್ಕ ತಿಳಿಯದಾಂಗ। ಆದ ಆಂಗ್ಲವೀರ ಅಲೇಗ್ಝಾಂಡ್ರನ ಹೊಡತದಾಗ॥೪॥

ಇತಿಹಾಸ ಪ್ರಸಿದ್ಧವಾದ ಇಟಲಿಯ ರಾಜಧಾನಿ। ಕೆಥೋಲಿಕ್ ಪವಿತ್ರ ಕ್ಷೇತ್ರ ರೋಮ ನಗರ।
ಪತನ ತಾನಾದಮ್ಯಾಲೆ ಕ್ಷಿತಿಯೊಳದ್ಭುತವಾದ ದ್ವಿತೀಯ ರಂಗದಾರಂಭವಾಯ್ತು ಘೋರ॥೫॥

ದಿವ್ಯ ದ್ವಿತೀಯ ರಂಗ ಸುದ್ದಿ | ಕಾವ್ಯಾವಾಣಿಯಿಂದ ನವನವ್ಯವಾಗಿ ವರ್ಣಿಸಿ ಹಾಡುವೆನು |
ಶತೃಮಿತ್ರ ಸೇನೆ ಸಿದ್ಧವಾಗಿಬಂದು ನಿಂತ ನಾರಮಂಡಿ ದಂಡೆಯ ಚಿತ್ರವನು॥೬॥

ಆರು ಸಾವಿರ ಹಡಗದ ಸಂಖ್ಯೆ | ನೀರದಾರಿಯಿಂದ ಬಂದು | ನಾರಮಂಡಿ ದಂಡಿಯಲಿ ನಿಂತಾಕ್ಷಣ |
ಶೂರಧೀರ ವೈಮಾನಿಕದಂಡು ಮೇರೆದಪ್ಪಿ ಗಗನದಿಂದ | ಹಾರಿಬಂದು ತುಂಬಿದಾಗ ರಣಾಂಗಣ॥೭॥

ಹಿಟ್ಲರ ಕಟ್ಟಿಸಿದಕೋಟೆ | ಹದಿನೆಂಟನೂರ ಮೈಲೂದ್ದ ಹರವು ಮೂವತ್ಮೂತು ಮೈಲು ವಿಸ್ತಾರಪೂರ
ಮೀರಿದಂಥ ಮಾರ್ಬಲ | ಅದ್ಭುತ ವಿಮಾನದಳ | ಅಗಣಿತ ಕ್ರೂಝುರ-ಟ್ಯಾಂಕು ಮಹಬಲ॥೮॥

ಹಿಂದಿನ ಪುರಾಣದಾಗಿಲ್ಲ | ಅಂದಿನ ಭಾರತದಾಗಿಲ್ಲ ಮುಂದ ಎಂದೂ ಆಗುದಿಲ್ಲ ಇಂಥ ರಣ |
ಹಿಂದೇ ಕಟ್ಟಿದ ದ್ರೋಣಾಚಾರಿ ಚಕ್ರವ್ಯೂಹ ಜರ್ಮನ್ ರಣಕ ಆನಿಮುಂದ ಆಡಿನ ರಣಾ ಪುಣಾ॥೯॥

ಆರನೇ ತಾರೀಖು ಮಂಗಳವಾರ ಜೂನ ಹತ್ತೊಂಬತ್ತು | ನೂರ ನಲ್ವತ್ ನಾಲ್ಕನೇ ಇಸ್ವಿದಿನಾ |
ಘೋರ ಯುದ್ಧ ಆರಂಭವಾಯ್ತು ನಾರಮುಂಡಿ ದಂಡಿಯೊಳ್ ಅಮೇರಿಕನ್ ಜರ್ಮನ್ ಇಂಗ್ಲೀಷ್ ಯದ್ಧಾಂಗಣ॥೧೦॥

ಅಮೇರಿಕನ್ ಸೇನಾಧಿಕಾರಿ | ಐಷನ್ ಹಾವರ ನಾಮಧಾರಿ | ಸೇನ ಸೂತ್ರಧಾರಿ ಆರಂಗದೊಳು |
ಜರ್ಮನ್ ಸೇನಾ ಸೂತ್ರ ಕರ್ಮದಾರಿ ಹೇರಹಿಟ್ಲರ ಬಂದುನಿಂತ ರಣರಂಗ ಮಧ್ಯದೊಳು॥೧೧॥

**(ಇಳವು)**

ಚಕ್ರವರ್ತಿ ಕೊಟ್ಟ ಸಂದೇಶ | ಆಂಗ್ಲಸಾರ್ವಭೌಮ ಭೂಮೀಶ ಸಾಮ್ರಾಜ್ಯಶಾಂತಿ ಜಯದಾಶಾ
ದೇವರನು ಪ್ರಾರ್ಥಿಸಲಿದೇಶ ಜಗದೀಸ್ವರನೇ | ಜನಪಾಲಕನೆ | ಜವನೀಡು ಜಗತ್ಪತಿ
ಜಯವನ್ನು॥೧೨॥

**(ಏರು)**

ಶೂರತನದಿ ಫ್ರಾನ್ಸದುತ್ತರ ಸೀಮೆಯನ್ನಾಕ್ರಮಿಸುತಾಗ | ಏರಿಬಂದ ಜರ್ಮನ್ನರ ಬೆನ್ನಟ್ಟಿ
ದೂರ ಸರಿದು ನಿಂತರಾಗ ಅಮೇರಿಕನ್ ಕೆನೇಡಿಯನ್ನಿಂಗ್ಲೀಷ ವೀರರೆಲ್ಲರೆದೆ ತಟ್ಟಿ ತಟಿಟ್ಟ ॥೩॥

ಹಡಗದ ಮ್ಯಾಲೆ ಹಡಗ ಬಂದವು | ಹಿಡಿಯದಾಂಗ ಸಮುದ್ರವೆಲ್ಲ | ಕೊಡೆಯ
ವಿಮಾನ ಬಂದವೂ ಪೂರಾ ಪೂರಾ | ದುಡುಕಿಬಂತ ಜರ್ಮನ್ನರಿಗೀಗ | ಪ್ರಳಯಕಾಲವೆಂದನಾಗ | ಮಿಡುಕಿದನು ಹಿಟ್ಲರ ಹಿಟ್ಲರ॥೧೪॥

ಶತೃ-ಮಿತ್ರ ಸೈನ್ಯದವರು | ಬಾಂಬು ತೋಪು ಮಸೀನಗನ್ನು | ಒತ್ತರದಿಂದ ಮದ್ದು ಗುಂಡು
ಸುರಿಸಿದರು | ಒದರಿತಾಗಾಶ ಚಿಕ್ಕಿ | ಉದರಿ ಬಿದ್ದವಾಕ್ಷಣ | ಚದುರಿದರು ಹಿಟ್ಲರನ ಸೈನಿಕರು ॥೧೫॥

ರೊಚ್ಚಿಗೆದ್ದು ಹಿಟ್ಟರನಾಗ | ಎಚ್ಚರದಪ್ಪಿ ಎದುರಿಗೆ ಬಂದು | ಕಿಚ್ಚ ಸುರಿದು ಪ್ರಳಯಮೇಘ
ಮಳಿಗರದಾಂಗ | ಸ್ವಿಚ್‌ಕೊಟ್ಟ ಐಷನ್‌ಹಾವರ | ಬಾಂಬ-ತೋಫ ಮಸೀನಗನ್ನಿಗೆ | ನೆಚ್ಚಿದೆಮ್ಮಿಕೋಣನ್ನಿ ದಾಂಗಾತೊ ಆಗ॥೧೬॥

(ಇಳುವು)

ಕಳವಳಗೊಂಡ ಹಿಟ್ಲರ ಮುಂದಾವುದಿದಕ ಪರಿಹಾರ | ಬಂದದ್ದು ಬರಲಿ ಅನಿವಾರ |
ಸಾಗಿಸವೆ ಯುದ್ಧ ನಿರ್ಧಾರ | ಹುರಿಮಾಡಿದನು | ಗುರಿಹೂಡಿದನು | ಪಲ್ಗಚ್ಚಿದನು | ಕಂಣ್ಮುಚ್ಚಿದನು|

(ಏರು)

ಭೌತಿಕ ಸೃಷ್ಟಿಯ ನಾಡು | ಭೂಮಿಯೊಳಿಲ್ಲ ಜೋಡು | ರಾಸಾಯನಿಕ ರಾಜ ಸಿದ್ಧಿಯ
ನಾಡು | ಜಗದೊಳ್ ಮಿಗಿಲಾದ ನಾಡು | ಸೊಗದೊಳ್ ಸ್ವರ್ಗದ ನಾಡು | ಮುಗಿಲೊಳ್ ತಿರುಗುವ ಉಗಿ ಹೊಗೆಯನಾಡು||೧೭||

ವಿದ್ಯಾ ಸಂಪನ್ನ ನಾಡು | ಶುದ್ಧಿ ಸಂಸ್ಕೃತಿ ನಾಡು | ತಿದ್ದಿ ತೀಡಿದ ಜರ್ಮನಿಯ ನಾಡು | ಬುದ್ಧಿ ಬೆಳಕಿನ ನಾಡು | ವೃದ್ಧಿ ಉತ್ಪತ್ತಿನಾಡು |
ಯುದ್ಧದಲಿ ಸೋಲದಂತ ನಮ್ಮ ನಾಡು||೧೮||

ಕಲಿಯ ಕಂಗಳ ನಾಡು | ಮಳೆಯ ಹೊನ್ನಿನನಾಡು | ಬಲದಿಸಿಂಹ ಬಲಶೂರನಾಡು | ಛಲಿ ಪ್ರಾಣಗಳ | ಬಲಿಯ ಕೊಡುವನಾಡು |
ನೆಲದೊಳಿಲ್ಲ ನಮ್ಮನಾಡ ಜೋಡು||೧೯||

(ಏರು)

ಎಂದಾಡಿ ಡುಬ್ಬ ಚಪ್ಪರಿಸಿ | ಹಿಟ್ಲರ ಸೇನೆಗೆಚ್ಚರಿಸಿ | ಬಂದು ನಿಂತ ಜರ್ಮನಿ ಶೂರ |
ರಣದಲ್ಲಿ ಗೆಲೆವ ನಿರ್ಧಾರ ಮುಂದಾಗುವದು | ರಣರಂಗವಿದೂ | ಬಹುಭೀಕರ ಪ್ರಳಯ ಪ್ರಂಗವಿದು||೨೦||

ಇತ್ತ ಕೇಳಿರಿ ಜಪಾನದವರು | ಒತ್ತಿ ಓಡಿ ಬಂದು ಬೇಗ | ಗತ್ತಿನಿಂದ ಬ್ರಹ್ಮದೇಶ
ತಕ್ಕೊಂಡರು | ತಾತ್ಕಾಲಿಕ ವಿಜಯದಿಂದ | ಮತ್ತರಾಗಿ ಭರತಖಂಡ ಕೆತ್ತಿ ಬಂದು | ಮೃತ್ಯುವಿನಾಲಿಂಗಿಸಿದರು||೨೧||

ಮತ್ತೆ ಮತ್ತೆ ಸುತ್ತಿ ಸುತ್ತಿ ಮುತ್ತಿ ಮತ್ತಿ ಬೇಸತ್ತು | ಗೊತ್ತುಗಾಣದಾದ್ರು ರಣರಂಗದಾಗ |
ಹುತ್ತಿನಿಂದ ಹೊರಗೆಬಂದು ಹಾವುಹಣಿಕಿ ನೋಡಿದಂತೆ | ಕುತ್ತನೋಡಿ ಹಿಂದಕ
ಸರಿಯುವರು||೨೨||

ಮಣಿಪೂರ ಪಟ್ಟಣಕಬಂದು ಹಣಿಸಿಗೊಂಡು ಓಡಿಹೋದ್ರು | ಎಣಿಕೆಯಿಲ್ಲದಷ್ಟು ಹಾನಿ ಹೊಂದಿದರು ಆ ಸಮಪ್ರಾಂತಕ್ಕೆ ಬಂದು |
ವಾಸಮಾಡಿ ಗುಡ್ಡದಾಗ | ಅಡಗಿಕೊಂಡು ಕಳ್ಳ ಯುದ್ಧ ಮಾಡಿದರು||೨೩||

ಇಂಫಾಲಕ್ಕ ಗುಂಪಾಗಿಬಂದು | ತಂಪಾಗಿ ಹಿಂದಕ ಸರದರು | ಕಂಪಹುಟ್ಟಿ ಕಾಣದದ್ರು ಜಾಪಾನರು | ಸತ್ತು ಹುಟ್ಟಿದಾಂಗ ಅವರು |
ಅತ್ತಿತ್ತ ಓಡಿಹೋದ್ರು | ಸುತ್ತಮುತ್ತ ಕಾಣದಾದ್ರು ಕಂಣಿಗವರು||೨೪||

(ಇಳುವು)ಸಾಮಾನ್ಯರೇನು ಸೈನಿಕರು | ಭಾರತೀಯ ರಕ್ತ ರಂಜಿತರು | ಶಾರ್ದೂಲ ಸಿಂಹ ಸಮ ಬಲರು | ಬಲಶಾಲಿ ಶೀಖ-
ಗೂರ್ಖರು | ಬಂಗಾಲ ತೆನಗು ನಾಡುವರು | ರಣದಲ್ಲಿ
ರಕ್ತ ಸುರಿಸಿದರು| ಬ್ರಹ್ಮದೇಶದಲಿ | ಮುನ್ನಡೆಯುತಲೀ ಜಾಪಾನರ ಗರ್ವವ
ನಿಳಿಸಿದರು ||೨೫||

ಅತ್ತ ಜರ್ಮನ್ ರಂಗದಾಗ | ಸತ್ತು ಹೋದ ಹಿಟ್ಲರ | ಶಕ್ತಿ ಪಾತವಾಗಿ ಬಿದ್ದ ಭೂಮಿಮ್ಯಾಗ |
ಇತ್ತ ಜಪಾನ ರಣರಂಗದಾಗ | ಆಟಂಬಾಂಬು ಹಾಕಿದರಾಗ | ಸುತ್ತು ಮುತ್ತು ವೈರಿ
ಕಾಟವಿಲ್ಲದಾಂಗ||೧೭||

ಬತ್ತಿ ಉರಿಯದಾಂಗ ಆಯ್ತು | ಎಂಣಿಯತಿಲ್ಲದಾಗಿ ಆಗ | ಶತೃಸೇನೆ ನಷ್ಟವಾಯ್ತು ಭೂಮಿ ಮ್ಯಾಗ | ಕುತ್ತು ಕಡಿದು ಹೋದ ಮ್ಯಾಗ |
ಮಿತ್ರ ರಾಷ್ಟ್ರದವರು ಕೂಡಿ | ಎತ್ತಿದರು ವಿಜಯದಾರತಿಯನ್ನು ಬೇಗ ||೧೭||

ಶ್ರೀಕಂಠ ಕಾವ್ಯ ಸುರವಾಣಿ | ಏಕಾಂತಕೈದ ನಿಜರಮಣಿ | ಲೋಕಾಂತ ಬೆಳಗಲಿದ್ಯು
ಮಣಿ | ಪ್ರಾಕಾಶಿತ ಪದ್ಯದ ಲಾವಣಿ | ಜಯಶೋಭಿಸಲಿ | ಜಯಘೋಷಿಸಲಿ | ನಿಜಬಂಧು ಭಾರತರು ಮೋದಿಸಲಿ ||೧೮||

***ರಚನೆ :*** ನಲವಡಿ ಶ್ರೀಕಂಠಶಾಸ್ತ್ರಿ
***ಕೃತಿ :*** ರಾಷ್ಟ್ರಗೀತಾವಳಿ

## ೧. ಕಿತ್ತೂರ ಮೇಲಿನ ಪದ

ಕಿತ್ತೂರ ಚನ್ನವ್ವನ ಸೊಸಿ
ಹೊಂಗಲ ಬಿಟ್ಟು ಹೋಗುವಾಗ
ಮಾಡತಿದ್ದಳು ಮಹಾ ದುಃಖವಾ |
ಮಲ್ಲಾ ಸರ್ಜಾ ಮಾಡಿದ ಬದಕು
ಮಾಜದ ನಾ ಪೇಳುವೆನು
ಸೋಜಿಗದ ಬದಕ ಎಲ್ಲ ಸೂರೀ |
ಆರು ಆನಿ ಹದಿನಾರು ಒಂಟಿ
ಹನ್ನೆರಡು ಸಾವಿರ ಕಾಲಬಲ
ಮಹಾರಾಯ ಟೋಪುಗಳು ಹೋದವು ಹೇರಿ |
ಹತ್ತು ಅನೀ ಮುತ್ತಿನ ಪಲ್ಲಕ್ಕಿ
ಸುತ್ತಲ್ಹಿಡುವ ಹತ್ತು ಎಂಟು
ಬೆಳ್ಳಿ ಕಾವಿನ ಅಪ್ತಾಗಿರಿ |
ಚಂದವಾದ ಚಕ್ಕಡಿಗಳು
ಒಂದು ಉಳಿಯದ ಹೋದವು
ತುರಂಗ ರಥದ ಚವ್ವರಿ |
ಶಿಟ್ಟಿನ ಶಿಪಾಯಿಗಳು ದುಷ್ಟತನದಲ್ಲಿ
ಹತ್ತುವಂತ ಕುದರಿ ಇದ್ದವು ಜರ್ದಾಮರಿ |
ಕಲ್ಲೂರ ಕಲ್ಲಬಸಪ್ಪ ಕನ್ನೂರ ಮಲ್ಲಪ್ಪ
ಅವರಾದಿ ವೀರಪ್ಪ ಕಾರಶೂರಿ

ಎಂತೆಂತ ಸರದಾರಗಳು ||ಏರು||

ಕಾಂತಾರ ಬಿದ್ದು ಹೋಗುವಾಗ

ನಮುಗ ಬಂದಿತಲ್ಲೊ ಯುಥಾ ಮಾರಿ |

ಅಷ್ಟು ಹೋಗಿ ಇಷ್ಟು ಉಳಿತು

ಕುತುಹರನು ಬಂದು ನಿಂತಾ

ಕುತುಹರನ ನೆನದಾಳಲ್ಲ ಸಾರಿ||ಇಳವು||

ಪಾಂಡವರಿಗೊನದೇಶ ಬಂದ್ಹಾಂಗ ಆದೀತೆಂದು |

ಪಾಪಿ ದುಶ್ಯಾಸ ದ್ರೌಪತಿ |

ಶಾಲಿ ಸೆಳದೊಯ್ಯುವಾಗ |

ಭೂಪರಿದ್ದೇನು ಮಾಡಿದರು |

ಶಿಕೇದ ಮಗನೊಬ್ಬ ಸಿಗದ ಹೋದನೆ ತಾಯಿ |

ಬಗೆದ ತರುವೇನೆನ್ನುವಳು |

ಪಾಪಿಕೇಳೊ ನಮ್ಮಂತೇ ಪಾಪಿಗಳ್ಯಾರಿಲ್ಲ |

ಪನ್ನಂಗಧಾರನಾ ಸ್ತುತಿಸುತಲೀರವ್ವ |

ಪಾರ್ವತೀ ಅರಸನ ನೆನದಾಳು ||ಏರು||

ಪೂರ್ವಜನ್ಮದಲ್ಲಿ ಪುಟ್ಟಿ

ಮುನ್ನೆ ನಮುಗ ತಪ್ಪಾದಿಂದು |

ಬ್ರಹ್ಮ ಯಾಕ ಇಂತಾ ಪರೀ||೧||

ಹೆಂಣು ಮಕ್ಕಳಿಡುವ ವಸ್ತ

ಬಂಣಿಸಿ ನಾ ಪೇಳ್ವೆನು

ಸಣ್ಣ ನಡುವಿನ ಡಾಬ ಭಂಗರ |

ಬುಗಡಿ ಬಾವ್ಲಿ ಜುಮಕಿನ ವಾಲಿ

ಚಂದವಾದ ಚಳತುಂಬುಗಳು

ರಾಗೂಟಿ ಚವರಿ ಹೆಳಲು ಭಂಗರ |

ಸಾವಿರ ಹೊನ್ನಿನ ಸರದಾಳಿಗಳು

ಮೋಹರಾದ ಮುತ್ತಿನ ಮೂಗುತಿ

ಮೇಲ್ಕೆಚ್ಚೆಸಿ ದಂತವಜ್ಜರ |

ಕಂಟಕ ಧರಿಸು ಕರಡಿಗಿ ಸರ್ಪಣಿ

ಪಟ್ಟಿ ಮುತ್ತು ಹೆಳಲ ಭಂಗರ |

ಹರಡಿ ಹವಳದ ಸರ

ಹಿರಿ ಪಿಲ್ಲಿಗಳು ಕಿರಿ ಪಿಲ್ಲಿಗಳು |

ಕಾಲಸರ್ಪಳಿ ಕಾಲುಂಗರ |

ಮಾರಹರನ ಕರುಣ ತಪ್ಪಿ
ಒಂದು ಉಳಿಯದ ಹೋದವು
ಮುಂದ ಇಲ್ಲೊ ನಮಗೆ ಆಸರ ||ಇಳವು||

ಇಷ್ಟು ಹೋಗೀ ನಮ್ಮ ಕಷ್ಟ ಬಿಡಿಸುವರಿಲ್ಲ |
ಪಟ್ಟನಾ ಹಣಿ ನೆಲಕ ಬಡವೂತಲೀರವ್ವ |
ಕಷ್ಟಿ ಹಾಯತಿ ಅಲಗೆನುತ |
ತೊತ್ತೂಗಳೆಲ್ಲಾರೂ ಸುತ್ತಲೇ ಮುತ್ತಿದರು |
ಮುಕ್ಕಣ್ಣ ಹರನ | ದಯದಿಂದ ಯಿರವ್ವ
ಮಕ್ಕಳೈದಾರ ತಾಯಿ ನಿನಗ |

ಉಮ್ಮಾಯ ದಿನದಲ್ಲೆ ಎಲ್ಲಾರು ಹೇಳಿದರ |
ಸುಮ್ಮನೀರದಳುವಳು||ಏರು||

ಹನ್ನೆರಡು ಸಾವಿರ ದಂಡು
ಹರದ ಬಿಟ್ಟು ಹೋಗುವಾಗ
ಒಡದ್ಡಂಗದೀತಲ್ಲೋ ತುಂಬಿದ ಕೆರಿ||೧||

ಹೋದ ಹೋದ ಹೊದಕಿಗಳು
ಭೇದಿಸಿ ನಾ ಪೇಳ್ವೆನು
ಸುಲಗಿಯಾದವಲ್ಲ ರಾಜ್ಯದ ಮೇಲೆ |
ರನ್ನೆಯರುಡುವ ರಾಗಾವಳಿ ಸಾಲೆ
ಚದುರೇರುಡುವ ಚಂದ್ರಕಾಳಿ ಶಾಲಿ
ಬಾಲೇರುಡುವ ಬಾಳಿಪಟೀ ಶಾಲಿ |
ಹುಡುಗರುಡುವ ಹುವ್ವಿನ ಶಾಲಿ
ಮಕ್ಕಳುಡುವ ಮಂಜರ ಶಾಲಿ
ಸಣ್ಣವರುಡುವ ಸಾಸಿಬಂಣ ಶಾಲಿ |
ಕನ್ನೆಯರುಡುವ ಕಂಭವತಿ ಶಾಲಿ
ತೊತ್ತುಗಳುಡುವ ಟೋಪಿನ ಶಾಲಿ |
ಒಳ್ಳೆವರುಡುವ ಉಳ್ಳಿಗಣಿ ಶಾಲಿ |
ಕೂಸುಗಳುಡುವ ಕುಲಾಯಿ ಕುಂಚಿಗಿ
ಏಸೊಂದು ನಾ ಪೇಳಲಿ |
ಅರಳೆಲಿ ಬಿಂದಲಿ ನಾಗಮುರಿ |
ಶೇಲು ಶಕಲಾತಿ ಶಲ್ಯ ಮುಂಡಾಸ
ಪಚ್ಚೇದಂಗಿ ಪರಿಮಳ ಪಾವಡ
ಉಡುವ ಧೊತ್ರ ಜೋಡು ನಾಗಮುರಿ |

ಮಲ್ಲಾ ಸರ್ಜಾ ಮಾಡಿದ ಬದಕು
ಯಲ್ಲಾ ಹೋಗಿ ಇಲ್ಲದಾಯ್ತು
ಬಲ್ಲಷ್ಟು ಹೇಳುವೆನು ಸೂರಿ||ಇಳವು||

ರಾಮಲಕ್ಷಣ್ಣಾರು ಕ್ಷೇಮದಿಂದಿರುತಿಹರು |
ತುಡುಗ ರಾವಣ ಜಾನಕಿಯ |
ಕದ್ದೊಯಿದು ವನದೊಳಗಿಟ್ಟ |
ಹನುಮ ಹೋಗಿ ಲಂಕೆಯ ಸುಟ್ಟ |
ಕಟ್ಟ್ಯಾರು ವಿಭೀಷಣಗ ಪಟ್ಟ |
ಕರದ ಶೀಕೆಯ ಕೊಟ್ಟು
ಹಿಂಡು ದೈತ್ಯರನೆಲ್ಲ ಬಂಡ ಮಾಡಿದ ಭೂಪ |
ತಾಯಿ ತಂದವ ಕುಲದೀಪ ||ಏರು||

ಹೋದಂತ ಮಕ್ಕಳು ನಿನಗಾದರೇನ ತಾಯಿ
ಯಂದು ಭೇದಿಸಿ ಹೇಳ್ಯಾರು ಜನರೆಲ್ಲ ||೩||

ಎಂಥಾ ಧೊರೆಗಳಿಗೆಂಥಾದಾಯ್ತು
ಕಂತುಹರನೆ ಕೇಳಯ್ಯ |
ಎಂತಾ ಹೊತ್ತು ತಂದ್ಯೋ ಈಶ್ವರಾ |
ನಾಡನಾಳುವ ಧೊರೆಗಳಿಗೆ
ಇಂಥಾ ಕೇಡು ಬರಬಾರದೆಂದು
ಕಿತ್ತೂರ ನಾಡೆಲ್ಲ ಮರಗಿತು ಮರಮರ |
ಮಹಾರಾಯನು ಆಳುವಂತ
ಹನ್ನೆರಡು ಕರೂಲಿಗಳು
ಹೊನ್ನು ಹೇರಿ ಹೋದವೆತ್ತು ನೂರಾ |
ಸತ್ಯಕ ಶ್ರಾವಣ ಮಾಸದಾಗ
ಎಪ್ಪತ್ತೇಳು ನೂರು ಮಂದಿ
ತೃಪ್ತಿ ಮಾಡಿಸುವರಲ್ಲಿ ಜಂಗಮರ |
ಹಸ್ತೀನಂದರೆ ಕಿವಿಲ್ಕೇಳದ
ಹಾಲು ಹಣ್ಣು ಸಕ್ಕರಿ ಉಣಿಸಿ
ದಾನ ಕೊಡುವರನ್ನ ವಸ್ತರಾ |
ಧರ್ಮ ಮುಣಗಿ ಕರ್ಮ ಹೆಚ್ಚಿದ
ವರ್ಮ ಸಾಧಿಸಿದರು ಪೇಳುವೆನು
ವರ್ಮಕ ಸಾಗಿ ಹೋದರು ಮೂವರ ||ಇಳವು||

ಪಟ್ಟಗಟ್ಯಾರು ದೇಶಾಯೀಗೆ ।
ಶಿಕೇವ ಹಾಕಿದರೆಂದು ।
ಅತ್ತಿ ಚನ್ನವ್ವನೊಯಿದು
ಹಾಕ್ಕಾರು ಹೊಂಗಲದಾಗ ।
ಸಾಕಿದಾ ಮಗಾನನ್ನುವರು ।
ಠಾಕೂರ ಸಾಹೇಬ ಬಂದು ಠಾರಾಗಿ ಮಡಿದನು ।
ಧೀರರೊಳಗೆ ಗೋಖಲೆ ತಕ್ಕೊಂಡಾನೆಂದು ॥ಏರು॥

ಆಕಾಶದಲ್ಲಿ ಪುಟ್ಟಿ ಚಂದ್ರ
ಲೇಸಾಗಿ ಬೆಳಕ ಬಿದ್ದರೆ
ತಾರೆ ಮೂಡ್ಯಾವು ಲಕ್ಷಾಂತರ ॥ಳ॥

ವೇಳೆವೇಳೆಕುತ್ತರ ಹೇಳಿ ಹೇಳಿ
ಬರದರೊ ನಾಳೆ ಹೊಂಡೆಂಬುವ ಉತ್ತರ ।
ಒಡವಿ ವಸ್ತಗಳೆಲ್ಲ ಪೊಡವಿ ಮೇಲೆ ಚಲಿಕಾಸ ।
ಬಡವಿ ಸುರಸ್ಯಾಳಂತು ಕಣ್ಣೀರ ।
ಸದಲ ಹೇರುವ ಬಂಡಿಗಳೆಲ್ಲ
ಸಾಗಿ ಮುಂದಕ ಹೋಗತಿಂದು
ಬಿಟ್ಟ ಹೊಡಿಶಾಳುಣ ದನಕರ ।
ಹತ್ತು ಎಂಟು ಕುದುರೆಗಳಿಗೆ
ಮುತ್ತಿನ ಜೀನವ ಬಿಗಿಸಿ
ಮುಂದ ಹಿಡಿದರುಣ ಮೋತದಾರ ।
ಎತ್ತು ಕುದುರೆಗಳು ತೊತ್ತುಗಳು ಹತ್ತಿಕೊಂಡು
ಹೇರಿದಾರೊ ಬೆಳ್ಳಿ ಭಂಗಾರ ।
ಗುರುವಿನ ಕರಿಸಿ ಪಾಲಕಿ ತರಿಸಿ
ತಲಿಮೇಲಪ್ತಾಗಿರಿ ಹಿಡಿಸಿ
ಹಾರಸ್ತೊಂಟಾರೊ ಛತ್ರ ಚಾಮರ ।
ಸಣ್ಣ ಮಗಳಯ್ಯ ನಾನು
ಸಾರಿ ನಾನು ಪೇಳ್ವೆನು
ತಪ್ಪ ಕೇಳೊ ಅಪ್ಪಾ ಸರದಾರ ॥ಇಳವು॥

ಹೊಂಡಹೊಂಡೆಂದಾರೆ ಮಂಡಾಟ ಹಿಡಿದಾಳು
ಗಂಡುಮಕ್ಕಳು ಹೋಗಿ ಯಳಿಯಾಕ ಹೋದರೆ ।
ಕಂಡವರ ಕಾಲ ಹಿಡಿದಾಳೊ ।
ಮಂಡಲನಾಳುವ ಪುಂಡರು ಮಡದಾರು ।

ಕೆಂಡದಂತಾ ಪ್ರಾಣ ಕೊಡಲಿಲ್ಲವೀರವ್ವ
ಗಂಡನ ನೆನಸಿ ಅಳುವಳು ||ಏರು||

ನೀರ ಒಳಗಿನ ಮೀನಗಳು
ಬೇರೆ ತಗದ ಚಲ್ಲೀದಂತೆ
ಆದವಣ್ಣ ಅವರ ಅವಸ್ಥೆ ||೫||

ಎಷ್ಟ ಮಾಡಿದರ ಯನ್ನ ಬಿಟ್ಟು ಹೋಗುದಿಲ್ಲವೆಂದು
ಮಾಡಿದಳು ಅತ್ತಿ ಚನ್ನವ್ವನ ಸ್ತುತಿ |
ಅತ್ತಿ ಮಾವನ ನೆನಸಿ ಹತ್ತಿದಾಳೊ ಡೋಲಿಯನು
ಎತ್ತಿ ನೆಗವಿ ಹೊತ್ತಾರು ಬೋಯ್ಯರು |
ರಾಯನಾಯಕ ಬರತಾನೆಂದು ರೌಡಮಾಡಿ ನಡಿರೆಂದು
ಎಡಬಲಕ ಹಚ್ಚ್ಯಾರೊ ಹಿರಿದ ಕತ್ತಿ |
ಮುಂದ ಮುನ್ನೂರ ಕುದರಿ
ಹಿಂದ ಮುನ್ನೂರು ಬಾರಿನ ಮಂದಿ
ಮಾಡುತ ಹೊಂಟ ಚೌಕಿ ಪಾರಾದ ಗಸ್ತಿ |
ದೇಶಗದಿಂದ ಧಾರವಾಡ ದಾರಿ ಹಿಡಿದ ಹೋಗಿ
ಸರದಾರ ನಿಂತು ಕೇಳಿದರೊ ಆಕಿ ವಸ್ತ |
ಕೊಟ್ಟ ಅನ್ನದ ಮೇಲೆ
ಸೊಕ್ಕು ಮಾಡಬಾರದು ನೀವು
ಮಾಡಬೇಡಿರಿ ನಮ್ಮ ಮೇಲೆ ಜಾಸ್ತಿ |
ಕೊಲ್ಲಬೇಡರೀಕಿಯನ್ನು
ಕುಸೂಗಲ್ಲ ಕಿಲ್ಲೇದಾಗ ಒಬ್ಬಳನ್ನು ಹಾಕಂದ ವಸ್ತಿ ||ಇಳವು||

ಹೊತ್ತಾರೊ ಬೋಯ್ಯರು ಕುಸೂಗಲ್ಲಿಗೊಯಿದಾರು |
ಮೆಲ್ಲಕ ಕಿಲ್ಲೇವ ಇಳವುತಲೀರವ್ವೆ |
ಬಲ್ಹಾಂಗ ದುಃಖ್ಯ ಮಾಡಿದಳು |
ಅರಸನಾ ಕೂಡೊಂಮೆ ಸರಸನಾಡಾಲಿಲ್ಲ |
ಅರಸು ಭಾಪುಸಾಹೇಬ | ವರುಷಗಳಿರಲಿಲ್ಲ |
ಅರಸಿ ವೀರವ್ವ ಅಳುವಳೊ ||ಏರು||

ನೀರ ಇಲ್ಲದ ಮಲ್ಲಿಗಿ ಗಿಡ
ಬೇರು ಒಣಗಿದಾಂಗ ಆದವಲ್ಲೊ ಅವರ ಅವಸ್ಥಿ||೬||

ಇನ್ನು ಈ ಧರಿಯೊಳು
ಮುನ್ನ ಇರಬಾರದೆಂದು
ಅನ್ನ ಉದಕವ ಬಿಟ್ಟಳು |

ಸರ್ವಾಂಗವು ಬೇನೆಯಂದು
ಶರೀರ ಒಣಗಿಸಿಕ್ಕಾರ
ಸುಟ್ಟ ಸುಂಣದ ಹರಳ ಮಾಡ್ಯಾಳು ।
ಸಂವಾದವು ಕೈಕಾಲು
ಮಂಣಪಾಲವಾಗಲೆಂದು
ಅನ್ನ ಉದಕವ ಬಿಟ್ಟಳು ।
ನಾಡೊಳಗ ನವಲಗುಂದ
ಕಾಡಸಿದ್ದನ ಬದಿಯಲೆ ಬಂದು
ನೀರ ಮಿಂದು ಮಡಿಯನುಟ್ಟಳು ॥
ಅಂಗೈಯೊಳಗೆ ಲಿಂಗವ ಧರಿಸಿ
ಜಂಗಮ ತೀರ್ಥವ ಪಡಿದು
ಲಿಂಗದ ಮೇಲೆ ಧ್ಯಾನ ಇಟ್ಟಳು ।
ಭಕ್ತಿಯಿಂದಲಿ ವೀರವ್ವನ ಕರಸಿ
ತಕ್ಕಡಿ ತುಂಬ ಭಂಗಾರ ತರಿಸಿ
ದಾನ ಧರ್ಮವ ಕೊಟ್ಟಳು ।
ಮುಕ್ಕಂಣ ಹರನೆ ಯನಗ
ಮುಕ್ತಿಕೊಡುಯನುತತಿಸ್ತುತಿಸುತ
ಧಾರವಾಡದ ದಾರಿ ಹಿಡಿದಳು ॥ಇಳುವು॥

ಶಿಕೇದ ಮಗನೊಬ್ಬ ಶಿಕ್ಕನೆಂಬುದ ಕೇಳಿ ।
ದಪ್ಪನೇ ಎದಿ ನೆಲಕ ಬಡವುತಲೀರವ್ವ ।
ಜಕ್ಕನೇ  ಜರಿಗಿಳಿದಾಳೊ ।
ಕೊಡಹೊನ್ನಿದ್ದಾರೇನು ಬಡಿವ್ಯಾಗಿರುವುದು ಲೇಸು ।
ಮಡದಿ ರಾಯರ ಕೂಡ ಮನಿಯೊಳಗೆ ಇದ್ದರೆ
ಒಡವಿವಸ್ತಗಳಿಡ ಲೇಸು॥ಏರು॥

ಧಾರವಾಡಕ ಬಂದು ಮೂರು ಆರು ದಿನ ಆಗುತಲೆ
ಮರಣಕಾಲ ಬಂದು ಪ್ರಾಣಬಿಟ್ಟಳು॥೭॥

ಸತ್ತಂತ ಶ್ರವ ನೋಡಿ ಎತ್ತಿ ಕುಂಡರಿಸಿಕ್ಕಾರ
ಮುಖ ತೊಳದು ವಿಭೂತಿ ಧರಿಸ್ಯಾರು ।
ಅತ್ತಿ ಚನ್ನವ್ವ ಉಡುವ ಮುತ್ತಿನ ಶರಗಿನ ಸೀರಿ
ಉತ್ತಮರು ನಿರಿಗಿ ಹೊಯ್ದು ಉಡಿಸ್ಯಾರು ।
ಹತ್ತು ಎಂಟು ವರಹ ಕೊಟ್ಟು ರತ್ನ ಕೆಚ್ಚಿದಂತಾ
ಸರಜಾ ನತ್ತು ಮೂಗಿನೊಳಗಿಡಿಶಾರು ।
ಬುಕ್ಕಿಟ್ಟಿ ಊದೀನಕಡ್ಡಿ ಲೆಖ್ಕವಿಲ್ಲದ ಸುಡಸೂತ

ಕಂಚಾರತಿ ಕಳಸ ಗಿಂಡಿ ತುಂಬಿಟ್ಟರು ।
ಗಂಧ ಕಸ್ತೂರಿ ಪೂಸಿ ವಸ್ತ್ರದ ಪೆಟ್ಟಿಗಿ ತರಿಸಿ
ವಿಸ್ತರಿಸಿ ಮೈಯೊಳಗೆ ಇಟ್ಟರು ।
ಕವಿಕಥಿ ಹೇಳುವಂಥ ಪುರಾಣ ಪುಸ್ತಕ ಹೇಳುವಂಥ
ಬಂದು ಜಂಗ್ಮರು ನೆರದರು ।
ರಾಜ್ಯ ರಾಜ್ಯದ ಬಣಜಿಗರೆಲ್ಲ ರೇಜಗಟ್ಟಿ ಅಲ್ಲಿಗೆ
ಮಹಾಜನರು ಸುರಿಸ್ಯಾರು ಕಂಣೀರ॥ಇಳುವು॥

ಧಾರವಾಡದ ಮಂದಿ ಭೊರೆಂದು ಅಳುವರು ।
ಪಾರಾದೊಳು ನಮಗಾ ಶಂಕರನ ಸ್ತುತಿಸೂತ ।
ಭೊರೆಂದು ದುಃಖ ಮಾಡಿದನು ।
ಅಕ್ಕತಂಗಿಯರಿಲ್ಲ ಅತ್ತಿಗಿ ನಾದಿನ್ಯಾರಿಲ್ಲ ।
ಹೊತ್ತು ವೇಳೆ ಬಂದಾಗ ಯಾರಿಲ್ಲವೆನುತಲೆ ।
ತೊತ್ತುಗಳೆಲ್ಲರು ಅಳುವರು॥ಏರು॥

ಕಿರಿದಿನೊಳಗ ಕಿತ್ತೂರು ಕಿರಿದಾದಿತೆನುತಲೆ ।
ಅರಮನಿಯೊಳಗಿನ್ನ ತಿರಿಗ್ಯಾಡುವರ್‍ಯಾರಿಲ್ಲೆಂದು
ರಾವುತ ರಾಣ್ಯಾರು ಅಳುವರು॥೮॥

***ಕವಿ :*** ಅಜ್ಞಾತ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

## ೩. ಕಿತ್ತೂರ ಚನ್ನವನ ಪದ

ಧೊರೀ ಚನ್ನವನ ಸೊಸೀ ಹೋದಳು ಶೆರೀ
ಕಿತ್ತೂರ ರಾಜ್ಯದ ಇಲ್ಲ ದೊರೆಯೇ॥ಪಲ್ಲ॥

ಸುಬೇದಾರ ಬಂದಾನು ಹೊಂಗಾಲತಳಕೆ ನಿಂತಾ ದಂಡ
ಕಂಡಿಶ್ಯಾನೊಂದ್ವಿಪರೀತ ದಂಡಿಘೇಳತಾನ
ಬಾಳೆಚ್ಚರ ಇರಂತಾ
ರಾಯಣ್ಣಾ ರಾತ್ರಿ ಬರತಾನಂತಾ ಡಂಗೂರ ಹೊಡಿಶ್ಯಾನ
ಅವನೂರ ನೋಡಿರೆಂತ
ನಾಳಿ ಹೋಗೂನು ಸೋಮಾರದ್ಹೊತ್ತ
ಚವಕಿ ನಿಂತತಿ ಸವಾನೂರ ಕುದರಿ
ಕಿತೂರ ರಾಜ್ಯಕೆ ಇಲ್ಲ ದೊರಿಯೆ॥೧॥

ಸೋಮಾರದುಂದಯಕೆ ಮಸಲತ ಮಾಡ್ಯಾರಲ್ಲ
ಪಾಲಕೀ ಮಾಲಿಗೋದರಲ್ಲ
ದುಖಾ ಮಾಡ್ಯಾಳ ಶಿವ ಸಾವ ಕೊಡಲಿಲ್ಲಾ
ಎಡಾ ಬಲ ಮನಿ ಮಕ್ಕಳಿಲ್ಲ
ಹನ್ನೆರಡ ಸಾವಿರದರ್ಬಲಾ ಮುಣಗಿತಲ್ಲ
ಶಿಲೇದಾರ ಸರದಾರ ಒಬ್ಬಲ್ಲ
ಮನಿಯ ದೇವರ ವೀರಭದ್ರ ಪರಬುನಲ್ಲ
ಆಕಿ ವೆಳ್ಯಕ ಯಾರ್‍ಯಾಕ ದಿಕ್ಕಿಲ್ಲ
ದುಃಖಾ ಮಾಡ್ಯಾಳ ಅತ್ತಿ ಮಾವ ನೆನೆಸಿ ಭಾರಿ
ಕಿತ್ತೂರ ರಾಜ್ಯಕೆ ಇಲ್ಲ ದೊರಿಯೆ॥೧॥

ಪಾಲಕಿ ಸುತ್ತಮುತ್ತ ನೋಡು ಕೆಂಪ ಕಂಡತಿ ಭಾರಿ
ಸಿಲೇದಾರ ಸರದಾರ ರಾವುತರು
ರಾವಜೀಟೈತಿ ಮುಂದ ಮುಂದ ಸುಬೇದಾರಗ
ಟೇಪೋಲ ಸಂಗಾಟದಲ ಬಾಲಾ
ಹೊಂಗಲನು ಬಿಟ್ಟು ಅವನುರನ ಹೊಂಡಿಶ್ಯಾರು
ಸಂಗೊಳ್ಳಿ ಹಾದಿ ಹಿಡಸಿದರು
ಅತ್ತಿ ರುದ್ರವ್ವಗೆ ನಿಂತ ಕಾಯಿ ವಡಸಿದರು
ಕೊದಾಪುರ ಮುಕ್ಕಾಮ ಮಾಡಿದರು
ಗರಗದ್ದಳ್ಳಕ ಅಲ್ಲಿ ಢೇರೆ ಹೊಡಿಸಿದರು
ರಾಯಂಣಾನ ಹಾದಿ ನೋಡಿದರು
ರಾಯಂಣ ಬರಲಿಲ್ಲ ಸುಭೇದಾರ ಶಿಟ್ಟು ಭಾರಿ
ಕಿತ್ತೂರ ರಾಜ್ಯಕೆ ಇಲ್ಲ ದೊರಿಯೆ॥೩॥

ಸುಬೇದಾರ ಹೇಳತಾನ ಯಾಕ ದುಃಖಾ ಮಾಡಿ ಅಳತಿ
ಅಲ್ಲಿ ಹೋದಲ್ಲಿ ಖೂಶಾಲ ಇರುವಂತೆ
ಮಾಲ ಇಳದಾಳ ಇಂದೀಗೆ ಎರವಾಯಿತು
ಪಾಲಕಿ ತಯ್ಯಾರನಾಗೇತಿ
ದುಃಖ ಮಾಡಿಕೊಂತ ಪಾಲಕಿ ತಾನು ಹತ್ತಿ
ಆಕಿ ಹಿಂದ ಮುಂದ ಬಟಂಗಿ ಆಗುತೈತಿ
ಚೌರಿ ಚಾಂಬೂರಿ ಹಾರ್‍ಯಾವು ಎಡಬಲಕೆ
ಆಕಿ ಇಡ ತೇಜಿ ಮುಂದ ನಡೂತತಿ
ಹಗಲಿ ದೀವಟಿಗೆ ಹಿಡಿಶ್ಯಾರ ಅಪತಗೀರಿ
ಕಿತ್ತೂರ ರಾಜ್ಯಕೆ ಇಲ್ಲ ದೊರಿಯೆ॥೪॥

ಬುದವಾರದುಧಿಯಾಕ ಧಾರವಾಡಕೆ ಓದರಲ್ಲಾ
ಅಕಿ ಮಜಕೂರ ಟೀಕ ಕಾಣಲಿಲ್ಲಾ
ಕುಸುಗಲ್ಲ ಶಹರಾ ಅಲ್ಲಿ ಮನಿ ಮಾಡ್ಯಾರಲ್ಲಾ
ಅಕಿ ದುಃಖ ಸಮಸವರ್‍ಯಾರಿಲ್ಲ
ಮಲರ ಪಕೀರ ಕಂಡಷ್ಟು ಹೇಳೆನಲ್ಲಾ
ಅಕಿ ಮೋಜಿನ ಸಿದ್ಧಕ್ಯಾಲ ಬಾಳಾಡಮಗಿ
ಬಸುಣ ಡಪ ತುರಾಯಿ ಹಚ್ಯಾನ ಬಾರಿ
ಕಿತ್ತೂರ ರಾಜ್ಯಕೆ ಇಲ್ಲ ಧೊರಿಯೆ॥ಜ॥

***ಕವಿ :*** ಮಲರ ಪಕೀರ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

## ೪. ಕಿತ್ತೂರು ಚನ್ನವ್ವನ ಸೊಸೆ

**ಪಲ್ಲಾ**

ಕಿತ್ತೂರ ಚನ್ನವ್ವನ ಸೊಸಿ ಹೊಂಗಲ ಬಿಟ್ಟು ಹೋಗುವಾಗ
ಮಾಡುತಿದ್ದಳಣ್ಣ ಮಹದುಖ್ಖ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದಕಾ

**೧ನೇ ನುಡಿ**

ಆರು ಆನಿ ಹದಿನಾರು ವಂಟಿ ಹನ್ನೆರಡ ಸಾವಿರ
ಕಾಲಬಲಾ ಮಾರಾಯತೋಪ ಹೋದವು ಹೇರಿ
ಹತ್ತುವಂತಾ ಮುತ್ತಿನ ಪಾಲಿಕಿ ಸುತ್ತಲ್‌ಹಿಡುವ
ಹತ್ತು ಎಂಟು ಬೆಳ್ಳಿಕಾವಿನ ಆಪ್ತಾಗೇರಿ
ಚಂದದಿಂದ ಚಕ್ಕಡಿಗಳು ವೊಂದು ವುಳಿಯದ್ಹೋದವು
ತುರಂಗರಥದ ಚವರಿ

ಶಿಟ್ಟಿನ ಶಿಪಾಯಿಗಳು ದಿಟ್ಟತನದಲ್ಲಿ
ಹತ್ತುಹುತಾಯಷ್ಟು ಇದ್ದವಲ್ಲಿ ಜರದ ಮರಿ
ಕಲ್ಲೂರ ಕಲಬಸಪ್ಪ ಕನ್ನೂರ ಮಲ್ಲಪ್ಪ
ಅವರಾದಿ ವೀರಪ್ಪ ಇದ್ದರ ಕಾರ್ಬಾರಿ
ಹಿಂತಿಂತಾ ಸರದಾರು ಕುಂತರ ಬಿದ್ದ ಹೋದಾರು
ಹಂತಾ ಬಂದಿತೊ ನಮಗ ಮಾರಿ॥ಚ್ಯೇ॥

ಪಾಂಡವರಿಗೊನದೇಸ ಬಂದಂತೆ ಆದಿತು
ಪಾಪಿ ದುಸ್ವಾಸ ದ್ರೌಪತಿ ಸೀರಿ ಶಳೆದೋಯ್ವವಾಗ
ಭೂಪತಿಗಳೈವರು ಇದ್ದೇನು ಮಾಡುವರು
ಪಾಪಿ ಕೇಳ ನಮ್ಮಂತಾ ಪಾತಕರ್ಯಾರಿಲ್ಲ
ಪನ್ನಂಗಧರನ ಸ್ತುತಿಸುತ ಈರವ್ವಾ
ಪಾರ್ವತಿ ಅರಸನ ನೆನಿಸಿದಳೊ||ಯೇರ||

ಪೂರ್ವಜನ್ಮದ ಲಿಖಿತ ಪುಣ್ಣೆ ನಮ್ಮದು ತಪ್ಪಿತೆಂದು
ಬರದಾನ್ಯಾಕ ಬ್ರಹ್ಮ ಹಿಂತಾ ಪರಿ

**೨ನೇ ನುಡಿ**

ಹೆಣ್ಣುಮಕ್ಕಳಿಡುವ ವಸ್ತ್ರಾ ಬಣ್ಣಿಸಿ ನಾ ಪೇಳ್ವೆನು
ಸಣ್ಣ ನಡುವಿನ ದಾಬ ಬಂಗಾರಾ
ಬುಗಡಿ ಬಾವಲಿ ಜಮಿಕಿವಾಲಿ ಚಳತುಂಬು
ಚೆಂದಾದಲ್ಲಿಡವ ರ್‍ಯಾಗುಟಿ ಚೆವರಿ ಹೆಳಲ ಬಂಗಾರಾ
ಸಾವಿರದ್ವೊನ್ನಿನ ಸರದಾಳಿಗಳು ಮೊಹರದ ಮುತ್ತಿನ
ಮೂಗತಿ ಮೇಲೆ ಕೆತ್ತಿಸಿದಂತಾ ವಜ್ಜರಾ
ಕಂಠಕ ದರಿಸುವ ಕರಿಡಿಗಿಸರಪಣಿ ಕಟ್ಟಣಿ
ಕರಿಮಣಿ ಪಟ್ಟಿಗಿ ಮುತ್ತ ಡೊರೆ
ಚಿಂತಾಕ್ಷರಡೆ ಹವಳಸರಾ
ಹಿರಿಪಿಲ್ಲಿಗಳು ಕಿರಿಪಿಲ್ಲಿಗಳು ಉಲ್ಲುಮಿಂಟಿಕಿ
ರುಳ್ಳಿಯಗೆಜ್ಜಿ ಕಾಲ್ಕಡಗಾ ಸರಪಳಿ ಕಾಲುಂಗರಾ
ಮಂದರಧರನ ಕರುಣ ತಪ್ಪಿ ವಂದ ವುಳಿಯದ
ಹೋದವು ಮುಂದ ಇಲ್ಲೊ ನಮಗ ಆಸರಾ||ಚ್ಯೆ||

ವಕ್ಕಲಗಿತ್ತೆರು
ಸಕಲಕ ಶಹಣೆರು
ಸತ್ಯಕ ಶರಣರಾ
ಸಾಕ್ಷಿಯ ಹೇಳುವರೇನು
ಅಕ್ಕ ನಿಲ್ಲಿಸಾ ದುಖ್ಖ ಯೆನುತ
ರಾಮ ಲಕ್ಷ್ಮಣ ಪ್ರೇಮದಿಂದಿರುವಾಗ
ಕೆಟ್ಟ ರಾವಣ ಜಾನಕಿ ವೊಯ್ದು ವನದೊಳಗಿಟ್ಟಾ
ಹನುಮಂತ ಹೋಗಿ ಲಂಕಾ ಸುಟ್ಟಾ
ವಿಭೀಷಣಗ ಕಟ್ಯಾರು ಪಟ್ಟಾ
ಗಟ್ಟಿ ಶಿಕೆವು ಹಾಕಿ ಹಿಂಡ ದೈತ್ಯರನೆಲ್ಲ

ಬಂಡು ಮಾಡಿದ ಭೂಪ
ತಾಯಿ ತಂದನೊ ಕುಲದೀಪಾ ||ಯೇರ||

ಹೋದಂತಾ ಮಗ ನಿಮಗ ಆದಾನು ಪೇಳವ್ವಾ ತಾಯಿ
ಭೇದಿಸಿ ಹೇಳುರು ಯೆಲ್ಲರು

**೩ನೇ ನುಡಿ**

ಹೊದುವಹಂತಾ ಹೊದಿಕಿಗೋಳು ಭೇದಿಸಿ ನಾ ಪೇಳ್ವೆನು
ಹೋದವು ಯೆಷ್ಟೊ ರಾಜದ ಮೇಲೆ ಹೇರಿ
ಮಕ್ಕಳ ವುಡುವ ಮಂದಿಲಸೀರಿ
ತೊತ್ತುಗಳುಡುವ ತೋಪಿನಸೀರಿ
ಉತ್ತಮರುಡುವ ವುಳ್ಳಿಗಣಿಸೀರಿ
ರಾಣಿಯವರುಡುವ ರಾಗಾವಳಿಸೀರಿ
ಬಾಲೆಯರುಡುವ ಬಾಳಿಪಟ್ಟೆಸೀರಿ
ಚೆದರೆರುಡುವ ಚಂದ್ರಕಾಳಿಸೀರಿ
ಹುಡಿಗಿಯರುಡುವ ಹೂವಿನಸೀರಿ
ಸಣ್ಣ ವರುಡುವ ಸಾಸಿಬಣ್ಣದಸೀರಿ
ಕನ್ಯೆರುಡುವ ಕಾಂಬಾವತಿಸೀರಿ
ಕೂಸಿಗೆ ಹೊಚ್ಚುವ ಕುಲಾಯಿ ಕೊಂಚಿಗಿ
ಯೇಸೊಂದು ನಾ ಪೇಳಲಿ
ಅರಳೆಲಿ ಬಿಂದಲಿ ತೊಪ್ಪಿಗೆ ನಾಗಮುರಿ
ಶೆಲ್ಯವ ಮುಂಡಸ ಶೇಲು ಶಕಲಾತಿ
ಪಚ್ಚೆದ ಅಂಗಿ ಪರಿಮಳಪಾವಡ
ಹೊದುವಂತಾ ದೋತರ ನಾಕ್ಪುರಿ
ಯೆಲ್ಲ ಹೋಗಿ ಇಲ್ಲದಾಯ್ತು ಮಲ್ಲಸರ್ಜ ಮಾಡಿದ ಬದಕು
ಬಲ್ಲಷ್ಟು ಹೇಳುವೆನದರ ಸೂರಿ||ಚ್ಯೆ||

ಅಷ್ಟು ಹೋಗಿ ನಮ್ಮ ಕಷ್ಟ ಬಿಡಲಿಲ್ಲಯ್ಯ ಪಟ್ಟನೆ
ನೆಲಕ್ಷಣಿಯ ಬಡವುತ ಈರವ್ವ ಕಟ್ಟಿ ಹಾಯುವೆನಲಗೆನುತ
ತೊತ್ತುಗಳೆಲ್ಲರು ಸುತ್ತಲೆ ಮುತ್ತಿದರು
ತಾಯಿ ನಿಮಗ ಬಂದದ್ದೆನು
ಉಮ್ಮಾಯದಿಂದಲೆ ಹೇಳೆರೀರವ್ವಗ
ಸುಮ್ಮನಿರದ ಅಳುತಿಹಳು||ಯೇರ||

ಹನ್ನೆರಡಸಾವಿರ ದಂಡು ಹರದ ಹೋತಿ ನಮ್ಮನ ಬಿಟ್ಟು
ವಡದಾಂಗ ಆದಿತು ತುಂಬಿದ ಕೆರಿ

**೪ನೇ ನುಡಿ**

ಹೆಂತಾ ದೊರಿಗಳು ಹೆಂತಾದಾಯಿತ ಕಂತುಹರನೆ ಕೇಳವರಿಗೆ
ಹೆಂತಾ ಹೊತ್ತ ತಂದ ಈಶ್ವರಾ
ನಾಡನಾಳುವ ದೊರಿಗಳಿಗ್ಹಿಂತ ಕೇಡ ಬರಬಾರದಂದು
ಕಿತ್ತೂರ ನಾಡೆಲ್ಲ ಮರಿಗಿತೊ ಮರ್ಮರಾ
ಮಾನ್ಯೇಮಾನ್ಯೆರ ಆಳುಹಂತಾ ಹನ್ನೆರಡ ಕರೂತಿ ಹಳ್ಳಿ ಹೊನ್ನು
ಯೆತ್ತುಗಳು ಹೇರಿ ಹೋದವು ಇನ್ನೂರ
ಸತ್ಯಕ ಶ್ರಾವಣಮಾಸಕ ಯೆಪ್ಪತ್ತೇಳನೂರ ಮಂದಿ
ತೃಪ್ತಿಬಡುಹಂತಾ ಜಂಗಮರ
ಹಸ್ದೇನಂದರ ಕಿವಿಯಲಿ ಕೇಳದ
ಹಣ್ಣು ಹಾಲು ಸಕ್ಕರಿ ನೀಡಿ
ದಾನಾ ಕೊಡುವರಣ್ಣಾ ವಸ್ತರಾ
ಧರ್ಮಾ ಹೋಗಿ ಕರ್ಮಾ ಹೆಚ್ಚಿ ವರ್ಮಾ ವೆತ್ತಿ
ಪೇಳುವೆನು ಮರ್ಮ ಸಾಗವದು ಮಡದರು ಮೂವರು ||ಚ್ಯೇ||

ರಾಜ್ಜೇಕ ರಾಯನಾಯಕ ಗೋಜ ಹಚ್ಚದಿದ್ದರ}
ಮೋಜಾಗಿ ದವಲತ್ತು ಸಾಗತಿತ್ತನ್ನುತಲಿ
ಮೂಜನರೆಲ್ಲ ಮರಗುವರು
ಪಟ್ಟಿಗಟ್ಟಿ ದೇಸಾಯಿಗೆ ಗಟ್ಟಿ ಶಿಕೆವ ಹಾಕಿ
ಅತ್ತಿ ಚೆನ್ನವ್ವಾನೊಯ್ದು ಹೊಂಗಲದಾಗ ಹಾಕಿದರೂ
ಸಾಕಿದ ಮಗನೆಂಬುವರು
ಟಾಕುರ್‌ಸಾಬ್ ಬಂದು ಟಾರ್‌ಆಗಿ ಮಡದನು
ದೀರರಿದರೊಳು ಹುಟ್ಟಿ ಊರು ತೊಗೊಳರೆಂದು
ಭೋರಿಡುತ ಜನರಳುತಿಹರು||ಯೇರ||

ಆಕಾಶದ ಮೇಗಿನ ಚಂದ್ರ ಲೇಸಾಗಿ ಬೆಳಕಿಲ್ಲದಿದ್ರ
ಯೇಸೊಂದಿದ್ದರೇನ ನಕ್ಷತ್ರ

**೫ನೇ ನುಡಿ**

ವ್ಯಾಳೇ ವ್ಯಾಳೇಕ ವುತ್ತರ ಹೇಳಿ ಹೇಳಿ ಬರದಾರು
ನಾಳಿ ಹೊಂಡಂಬುವ ಪತ್ತರಾ
ವಸ್ತಾ ವಡವಿ ಯಲ್ಲಾ ಉಚ್ಚಿ
ಪೊಡವಿಗೆ ವಗದಾಳೊ ಬಡವಿ
ಉದರಸ್ತಾಳೊ ಕಣ್ಣೀರಾ
ಸಂಗಡೆಲ್ಲ ಹೇರಿ ಬಂಡಿ

ಯೆತ್ತು ಸಾಗಲಿ ಮುಂದಕ ಯೆಂದು
ಬಿಚ್ಚಿ ಹೊಡೆದಾರೆಲ್ಲ ದನಕರಾ
ಗುರುವಿನ ಕರಿಶಿ ಪಾಲಿಕಿ ತರಶಿ
ಮೇಲೆ ಆಪ್ತಾಗೇರಿ ಹಿಡಸಿ
ಹಾರಸ್ತ್ ಹೊಂಟರ ಚಿತ್ತರ ಚಾಮರಾ
ಸಣ್ಣ ಮಗಳಯ್ಯಾ
ನಾನು ಸಾರಿ ನಿಮಗೆ ಪೇಳುವೆನು
ತಪ್ಪ ಕೇಳೊ ಅಪ್ಪ ಸರದಾರಾ॥ಚ್ಯೇ॥

ಹೊಂಡ ಹೊಂಡಂದರ ಮಂಡಾಟ ಹಿಡದಾಳೊ
ಬಂಡ ಮಾಡಿ ಅವರು ಯೆಳಿಯಕ ಹೋದರ
ಕಂಡವರ ಕಾಲ ಹಿಡಿದಾಳೊ
ಮಂಡಲನಾಳುವ ಪುಂಡರು ಮಡದಲ್ಲೆ
ಕೆಂಡ ಹಾದು ನಾನು ಪ್ರಾಣ ಕೊಡಲಿಲ್ಲೆಂದು
ಗಂಡನ ನೆನಿಸಿ ಅಳುತಾಳೊ
ದಿಕ್ಕಿನೊಳು ನಮ್ಮಂತ ದೆಶಿಗೆಡಿ ಯಾರಿಲ್ಲ
ನಮ್ಮ ಹೊಟ್ಟೆಲಿ ವಂದು ಪುತ್ರನ ಇದ್ದರ
ದೇಸ್ಗತಿ ಯಾಕ ಮುಣಗುವದು॥ಯೇರ॥

ನೀರ ಇಲ್ಲದ ಮಲ್ಲಿಗಿ ಬೇರ ವೊಣಗಿ ಹೋದಂತೆ
ಆತಂತ್ರವಾಯಿತು ಸಂಸಾರ

**೬ನೇ ನುಡಿ**

ಯೆಷ್ಟು ಮಾಡಿದರ ನಮ್ಮನ ಬಿಟ್ಟ ಹೋಗುದಿಲ್ಲವೆಂದು
ನಿಷ್ಟದಿಂದ ಮಾಡ್ಯಾಳ ವೀರನ ಸ್ತುತಿ
ಅತ್ತಿಮಾವನ ನೆನದು ಹತ್ತಿದಳು ಡೋಲಿಯ
ಹೊತ್ತರಣ್ಣ ಬೋವೆರು ಯೆತ್ತಿ
ಮುಂದ ಮುನ್ನೂರ ಕುದುರಿಮಂದಿ
ಹಿಂದ ಇನ್ನೂರ ಬಾರಿನಮಂದಿ
ಮಾಡುತ್ಹೊಂಟರಣ್ಣ ಪಾರಾಗಸ್ತಿ
ರಾಯನಾಯಕ ಬರತಾನೆಂದು
ರೌಡ ಮಾಡಿ ನಡಿರೆಂದು
ಯಡಬಲ ಹತ್ತೆಂಟು ಹಿರದ ಕತ್ತಿ
ದಾಸೊಕದಿಂದ ದಾರಿ ಹಿಡಿದು
ಧಾರ್ವಾಡಕ ತಾಂವು ಹೋಗಿ

ಸರದಾರ ಕೇಳಿದ ಅವರ ಸ್ತಿತಿ
ಕೊಟ್ಟ ಅನ್ನ ಬಿಟ್ಟಕೇರ
ಕೆಟ್ಟ ಬುದ್ಧಿಯನ್ನು ಇಷ್ಟು
ಮಾಡತಿದ್ದಿ ನಮ್ಮ ಮೇಗ ಜ್ಯಾಸ್ತಿ
ರಾತ್ರಿಲಿ ರಾಯನಾಯಕನ್ನಚ್ಚಿ ರೌಡ ಮಾಡಿ
ಸುತ್ತಿನ ಹಳ್ಳಿ ಅವನ ಕೈಲಿಂದ ಸೂಡಿಸ್ತಿ
ಕೊಲಬ್ಯಾಡರಿ ಕುಸುಗಲ್ಲ ಗೋಡಿಯೊಳಗ
ಈಕಿನ ವೈದು ವೊಬ್ಬಳಿಡರೆಂದನಲವಸ್ತಿ ||ಚ್ಯೇ||

ಹೊತ್ತರು ಬೋವೆರು ಕುಸುಗಲ್ಲಿಗೆ ವೈದರು
ಮೆಲ್ಲಕ ಕಿಲಿಯವ ಪೋಗುವಾಗ
ಈರವ್ವ ಬಲ್ಹಾಂಗ ದುಖ್ಖ ಮಾಡಿದಳು
ತಾಯಿಲ್ಲದ ಮಕ್ಕಳಿಗೆ ಆಯಿಲ್ಲೊ ಸಿರಿಯಿಲ್ಲ
ಕಾಯ ಇಡಬಾರದೆಂದು ಬಾಯ ಬಿಡುತೀರವ್ವಾ
ಸಾವ ಬೇಡಿದಳು ಶಿವನಲ್ಲಿ
ಅಕ್ಕ ತಾ ಈರವ್ವಾ ದುಖ್ಖವು ಮಾಡ್ಯಾಳೊ
ಬಕ್ಕನ ಬಾಯವ ಬಿಡವುತಲೀರವ್ವಾ
ಜಕ್ಕನೆ ಜೇರಿಗಿಳದಾಳೊ ||ಯೇರ||

ನೀರವಳಗಿನ ಮೀನ ತಗಿದು ಬ್ಯಾರಿ ಚೆಲ್ಲಿದ್ಹಾಂಗ
ನಮದು ಸೂರಿ ಅತಿ ನಮ್ಮ ಅವಸ್ತಿ

**೭ನೇ ನುಡಿ**

ಇನ್ನು ಈ ದರೆಯಲ್ಲಿ ಮುನ್ನ ಇರಬಾರದೆಂದು
ಅನ್ನವುದಕ ಯಲ್ಲ ಬಿಟ್ಟಳೂ
ಸಣ್ಣವಾದವು ಕೈಕಾಲು
ಮಣ್ಣಪಾಲವಾಗಲಿಯೆಂದು
ಬಣ್ಣ ವಣಗಿಸಿ ಬಿಟ್ಟಳೂ
ಸಂಗ್ರಾಣಿಬ್ಯಾನಂತ ಸರ್ವಾಂಗವೆಲ್ಲ
ವಣಗಿಸಿ ಸುಣ್ಣದ್ಹಾಂಗ ದೇಹ ಸುಟ್ಟಳೂ
ನಾಡವಳಗ ನವಲಗುಂದ ಕಾಡಶಿದ್ದನ್ಹಂತೆಲಿ ಹೋಗಿ
ನೀರ ಮಿನದು ಮಡಿಯನುಟ್ಟಳೂ
ಜಂಗಮತೀರ್ಥವ ಪಡೆದು
ಅಂಗದ ಮೇಲಿನ ಸ್ಮರಣಿ ಮೆರೆದು
ಲಿಂಗದ ಮೇಲೆ ಧ್ಯಾನ ಇಟ್ಟಳೂ

ಭಕ್ತಿಲಿ ವಿರಕ್ತರ ಕರಶಿ
ತಕ್ಕಡಿ ತುಂಬ ಭಂಗಾರ ತರಿಸಿ
ತೂಕಾ ಮಾಡಿ ದಾನ ಕೊಟ್ಟಳೂ
ಮುಕ್ತಿ ಕೊಡೊ ನಮಗ ನೀನು
ಮುಕ್ಕಣ್ಣ ಹರ ಗುರುವೆಯೆಂದು
ಧಾರ್ವಾಡಕ ಹೊಂಟ ಬಂದಳೂ||ಚ್ಯೆ||

ಚಿಕ್ಕ ಮಗ ಮಲ್ಲಸರ್ಜ ಶಿಕ್ಕನೆಂಬುದು ಕೇಳಿ
ಜಕ್ಕನ ಜೇರಿಗೆ ಇಳದಳೊ ಈರವ್ವಾ
ಮುಕ್ಕಣ್ಣ ಹರನ ನೆನದಾಳೊ
ಕೊಡ ಹೊನ್ನಿದ್ದರೇನು ಬಡಿವ್ಯಾಗಿರುವುದು ಲೇಸು
ಮಡದಿಗಿ ರಾಯರು ಮನಿವಳಗಿದ್ದರ
ವಡವಿವಸ್ತಗಳಿಡಲೇಸು
ವಡವಿವಸ್ತುಗಳೆಲ್ಲಾ ಬಿಡದೆ ದಾನವ ಕೊಟ್ಟು
ಕಿತ್ತೂರ ದವಲತ್ತು ಕಿರದಾದಿತೆಂಬುತಲಿ
ಭರದಿಂದೀರವ್ವಾ ಅಳುತಾಳೊ||ಯೇರ||

ಧಾರ್ವಾಡಕ ಬಂದು ತಾನು ಮೂರಾರ ದಿನಿದ್ದು
ಮರಣಕಾಲ ಬಂದ ಪ್ರಾಣ ಬಿಟ್ಟಳೂ

**೮ನೇ ನುಡಿ**

ಸತ್ತಂತ ಶ್ರವನೆಲ್ಲ ಯೆತ್ತಿ ಕುಂಡ್ರಿಸಿ
ಮುಖವ ದೊಳಿದು ವಿಭೂತಿ ಮೇಲೆ ಧರಿಶಾರೂ
ಅತ್ತಿ ಚನ್ನವ್ವಾ ವುಡವ ಮುತ್ತಿನ ಶರಗಿನಸೀರಿ
ವುತ್ತುಮರು ನೀರಿಗ್ಹೊದ ವುಡಶರೂ
ಕಸ್ತೂರಿಗಂಧವ ಪೂಸಿ ವಸ್ತದಪೆಟ್ಟಿಗಿ ತರಸಿ
ವಿಸ್ತರಿಸಿ ಮೈಮೇಲೆ ಇಡಶರೂ
ಹತ್ತುಯೆಂಟು ಸಾವಿರದ್ಹೊನ್ನಿನ ರತ್ನವ
ತೆತ್ತಿಸಿದ ನತ್ತು ಮತ್ತ ಮೂಗಿನೊಳಗ ಇಡಿಶರೂ
ಬುಕ್ಕಿಟ್ಟ ವೂದಿನಕಡ್ಡಿ
ಲೆಖ್ಖವಿಲ್ಲದ ಸುಡುವುತಲೆ ಕಂಚಾರ್ತಿ
ಕಲಸ್ಗಿಂಡಿ ತುಂಬಿಟ್ಟರೂ
ಪುರಾಣಪುಸ್ತಕ ವೋದುವಂಥ
ಶಾಸ್ತರಕಥಿಯ ನಡಸುವಂಥ
ನಾಡನಾಡ ಜಂಗಮರ ನೆರದಾರೂ

ಮಾಯವಾದ ಮರಣವೆಂದು
ಮಾಹನಾಡ ಜನರು ಕೂಡಿ
ನಿಂತ ಸುರುಶಾರೊ ಕಣ್ಣೀರೂ||ಚ್ಯೆ||

ಅತ್ತಿಮಾಂವರು ಇಲ್ಲ ಅತ್ತಿಗಿನಾದನೆರು ಇಲ್ಲ
ಹೊತ್ತ ಬಂದಾಗ ಮರಗು ಹೆತ್ತವ್ವ ನೀ ಇಲ್ಲೆಂದು
ತೊತ್ತುಗಳೆಲಾ ಅಳುತಿಹರೂ
ಅಣ್ಣ ಅಕ್ಕಗಳಿಲ್ಲ ತಂಗಿತಮ್ಮಗಳಿಲ್ಲ
ಅರಮನಿವಳಗ ಇನ್ನ ಅಡ್ಡಾಡವರಿಲ್ಲೆಂದು
ಅರಿಪರಿವುತ ಅಳುತಿಹರೂ
ಪುರುಷನ ಕೂಡೊಂದು ಕಾಲ ಸರಸವು ಆಡಲಿಲ್ಲಾ
ಅರಸು ಬಾಪುಸಾಬ್ ಇನ್ನೊಂದೊರಂಷವಿರಲಿಲ್ಲೆಂದು
ರಾಹುತರೆಲ್ಲಾ  ಮರುಂಗಿದರೂ||ಯೇರ||

ಉಪ್ಪ ವುಂಡ ಮಕ್ಕಳು ಯೆಲ್ಲಾ ದಪ್ಪನ ನೆಲಕ ಬಿದ್ದು
ಬಾಪುಸಾಹೆಬನ ಮಡದಿ ನೆನದಳುವರು

**೯ನೇ ನುಡಿ**

ರಾಜರಾಜೆದ ಜನರೆಲ್ಲಾ ರೇಜಗಟ್ಟಲ್ಲಿಗೆ ಬಂದು
ನೆರದಾರು ರಾಹುತರಾಣಿರೂ
ಬಲ್ಲಂಥ ಬಡಿಗೆನ ಕರಿಸಿ ಯೆಲ್ಲ ಸಾಹಿತ ಕೊಡಿಸಿ
ಮಾಡೆರು ವಿಮಾನವಿಸ್ತಾರಾ
ತರತರಕ ಕನ್ನಡಿ ನಿರತ ನೋಡಿ
ಹೊಂದಿಸಿ ಸರತ ನೋಡಿ ಹಾಕೆರ ಹೂವಿನ ಹಾರಾ
ಹತ್ತುಯೆಂಟು ಸಾವಿರದ್ವೊನ್ನಿನ ಮುತ್ತಿನ ಗೊಂಡೆಗಳು
ಸುತ್ತಲಿ ಬಿಗದರು ಶೇಲು ಜರತರಾ
ಸತ್ತಂಥ ಶ್ರವವು ತಾಂವು ಹೊತ್ತುಕೊಂಡು ನಡದರು
ಹಾರಸ್ತರ ಮೇಲೆ ಛತ್ರ ಚ್ಯಾಮರ
ಬುಟ್ಟಿಬುಟ್ಟಿಲಿ ಬುಕ್ಕಿಟ್ಟ ಕಟ್ಟವಿಲ್ಲದ
ಹಾರಸ್ತ ಹಿಡದ ಹೊಂಟರ ಮಳಿಗಿ ಬಾಜರ
ಹಲಿಗಿ ಕಾಳಿ ಕರ್ನಿ ಕರಡಿ ಸಂಬಾಳ ಸಂಪರದಾನಿ
ಬಾರಸ್ತ್ ಹೊಂಟ ಮುಂದ ಸರದಾರಾ
ದಿಕ್ಕದಿಕ್ಕಿನ ಮಂದಿ ಯೆಲ್ಲಾ
ಅಕ್ಕಾ ಈರವ್ವನ ನೋಡಿ
ದುಖ್ಖ ಮಾಡ್ಯಾರೆಷ್ಟು ಜನರು||ಚ್ಯೆ||

ಧಾರ್ವಾಡದ ಮಂದಿ ಭೋರಿಡುತಳುವಾಗ
ಪಹರದಾಗಿದ್ದ ಮಗ ಶಂಕರನ
ಸ್ತುತಿಸುತ ನೂರೊಂದು ದುಖ್ಖ ಮಾಡಿದನೂ
ಯೆತ್ತುಭಂಡಿಗಳು ಹತ್ತುವ ಕುದುರಿಗಳು
ಸತ್ತ ಶ್ರವದ ಮುಂದ ಸಾಗಿ ಹೋಗುದು ಕಂಡು
ಶೋಧಿಸಿ ದುಖ್ಖ ಮಾಡಿದನೂ
ದಾನಧರ್ಮವ ಕೊಟ್ಟು ನೇಮನಿತ್ತೆವ ತೀರ್ಶಿ
ಮುಂದ ಮುಕ್ತಿಯ ಕೊಡುವ ಬಸವನ ಸ್ತುತಿಸುತ
ಮಣ್ಣೊಳಗಿಟ್ಟ ತಿರಗಿದರೂ॥ಯೇರ॥

ಸುಂದರ ಹೆಬ್ಬಳ್ಳಿ ಬಸವ ಕಂಡಷ್ಟು
ಕವಿಯ ಹೊಂದಿಸಿ ಮಾಡಿದ ವಿಸ್ತಾರಾ

***ಕವಿ :*** ಹೆಬ್ಬಳ್ಳಿ ಬಸವ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

## ೫. ಕಿತ್ತೂರ ಚನ್ನವ್ವನ ಸೊಸಿ ಪದ

ಕಿತ್ತೂರಾ ಚಂನವ್ವನ ಸೊಸಿ
ಹೊಂಗಲ ಬಿಟ್ಟು ಹೋಗುವಾಗ
ಮಾಡುತಾಳು ಮಹಾ ದುಃಖವಾ ॥
ಮತ್ತೆ ನಂಮ ಮಲ್ಲಾಸರ್ಜ
ಸತ್ತುಹೋಗದಿದ್ದರಿಂತ ಹೊತ್ತುಬಂದು
ಹೋಗೋದ್ಯಾಕ ನಂಮ ಬದಕೂ॥ಪಲ್ಲಾ॥

ಮಲ್ಲಸರ್ಜಾ ಮಾಡಿದ ಬದಕು
ಮಾಜಾದಲೆ ಪೇಳ್ವೆನು
ಸೋಜಗಾದಾ ಬದಕೆಲ್ಲ ಸೂರೀ ।
ಆರೂ ಆನಿ ಹದನಾರೊಂಟಿ
ಹನ್ನೆರಡ ಸಾವಿರ ಕಾಲ್ಬಾಲಾ
ಮಾರಾಯಾ ತೋಪೂಗಳ್ಹೊದಾವೇರಿ ।
ಹತ್ತುವೋಲಿ ಮುತ್ತಿನ ಪಲ್ಲಕ್ಕಿ
ಸುತ್ತಾಲಿ ಹಿಡೂಸುವಂಥ
ಬೆಳ್ಳೀಕಾವಿನಪ್ತಾಗೀರೀ ।
ಚಂದಾದಿಂದ ಚಕ್ಕಡಿಗಾಳು
ಒಂದ ಉಳಿಯದ ಹೋದಾವು

ತುರಂಗ ರಥದ ಚೇವುರೀ ।
ಶಿಟ್ಟಿನ ಶಿಪಾಯಿಗಳು
ಧಿಟ್ಟತನದಾ೧ಲ್ಲ೧

[1]ತ್ತುವಂಥ ಕುದರೀ
ಇದ್ದಾವಲ್ಲಿ ಜನರ ಮಾರೀ ।
ಹಂತೀಲಿದ್ದಾ ಸರದಾರೆಲ್ಲ
ಕಾಂತಾರ ಬಿದ್ದು ಹೋದಾರು
ಎಂತಾದು ಬಂದೀತು ಬೆಂಕಿ ಮಾರೀ ।
ಕಲ್ಲೂರಾ ಕಲಬಸಪ್ಪ ಕಂನೂರಾ ಮಲ್ಲಪ್ಪ
ಅವರಾದಿ ಈರಪ್ಪ ಇದ್ದಾರು ಕಾರಬಾರೀ ।
ಅಷ್ಟು ಹೋಗಿ ಎಷ್ಟು ಆದಿತು
ಕಷ್ಟಾವು ನಮಗ ಬಂದೀತು
ಕಂತುಹರನ ನೆನದಳು ಸಾರೀ॥ಪ್ರಳಾಪ॥
ಪಾಂಡವರಿಗೊನದೇಶಾ
ಬಂದಂತೇ ಆದೀತು ।
ಪಾಪಿ ದುಶ್ಯಾಸ
ದ್ರೌಪತಿ ಶೀರಿಯಾ ಶಳಿಯಾಲು ।
ಭೂಪತಿಗಳೇನುಮಾಡುವರು ।
ನಂಮನೌ ಶರಿಯ ಬಿಡಿಸು
ಇನ್ನೊಬ್ಬರ್ಯಾರಿಲ್ಲ ।
ಸಿಕೆಯದಾ ಮೊಮಗನೊಬ್ಬ
ಸಿಗದ ಹೋದವನ ।
ಬಗಿದು ತರುವೆನಂಬುವರು ॥
ಪಾಪಿಕೇಳ್ನಂಮಂಥ ಪಾತಕರ್ಯಾರಿಲ್ಲ ।
ಪಂನಂಗಾಧಾರನ ಸ್ತುತಿಸುತಾಲೀರವ್ವಾ
ಪಾರ್ವತೀ ೧ಅರಸ೧[2] ಗ್ಹೇಳಿದಳೂ ॥
ಪೂರ್ವದೀಜನ್ಮದ ಲಿಖಿತ ಪೂರ್ಣಾ
ನಮಗ ತಪ್ಪದೆಂದು
ಬ್ರಹ್ಮ ಬರದನ್ಯಾಕ ೨'ಅರಸ'೨[3]ಬ ರಿ॥೧॥

ಹೆಂಣಮಕ್ಕಳಿಡುವ ವಸ್ತ
ಬಂಣಿಸಿ ನಾ ಪೇಳ್ವೆನು
ಸಂಣ ನಡುವಿನ ಡಾಬಾ ಭಂಗಾರಾ ।
ಬುಗಡಿ ಬಾವಲಿ ಜಮಕಿನವಾಲಿ
ಚಳತುಂಬು ಚಂದಾದಲ್ಲಿಡುವ

ರಾಗೂಟಿ ಚೆವರಿ ಹೆರಳು ಭಂಗಾರಾ ।
ಸಾವಿರ ಹೊಂನಿನ ಸರದಾಳಿಗಳು
ಮೋಹರದಾ ೩ಮು೩[4]ತ್ತಿನಾ ಮೂಗುತಿ
ಮೇಲೆ ಕೆಚ್ಚಿಸಿದ ವಜ್ಜಾರಾ ।
ಕಂಠಕ ಧರಿಸು ಕರಡಿಗಿ ಸರ್ಪಳಿ
ಕಳತಾಳ[5]ಣಿ ಕರೇಮಣಿ ದ್ವಾರೇ ಚಿಂತಾಕ
ಹರಡಿಗಿ ಹವಳಸ್ಸಾರಾ ।
ಹಿರಿಪಿಲ್ಲಿಗಳು ಕಿರಿಪಿಲ್ಲಿಗಳು
ಉಲ್ಲಮೆಂಟಿಗಿ ರುಳಿಯು
ಗೆಜ್ಜಿ ಕಾಲ್ಗಡಗಾ
ಕಾಲ ಸರ್ಪಳಿ ಕಾಲುಂಗಾರಾಗಿ
ಮಂದರಧರನಾ ಕರುಣಾ ತಪ್ಪಿ
ಒಂದ ಉಳಿಯದ ಹೋದಾವು
ಮುಂದೆ ಇಲ್ಲ ನಮಗಾಸಾರಾ॥ಪ್ರಳಾಪ॥

ವಕಾಲಾಗಿತ್ತೇರು । ಸಕಲ ಜನರೆಲ್ಲಾರು ।
ಸತ್ಯಕ ಶರಣಾರ ಸಾಕ್ಷಿ ಪೇಳುವೆನೆಂದು
ಅಕ್ಕ ನಿಲ್ಲಿಸ ದುಃಖವೆನುತಾ ॥
ರಾಮಲಕ್ಷೂಮಣನು । ಪ್ರೇಮಂದಿರುತಿಹರು ।
ಕೆಟ್ಟ ರಾವಣ ಜಾನಕೆಯ ವನದೊಳಗಿಟ್ಟು
ಹನುಮಂತಾ ಹೋಗೀ ೧ಲಂಕ೧[6]ಸುಟ್ಟ ॥
ವಿಭೀಷಣಗಾದಿತು ಪಟ್ಟ ।
ಇಂನು ಸಿಕೆಯುವ ಕೊಟ್ಟ ।
ಹಿಂಡ ದೈತ್ಯರನೆಲ್ಲ ಭಂಡ ಮಾಡಿದ ಭೂಪಾ ।
ತಾಯಿ ತಂದನು ಕುಲದೀಪಾ॥ಏರೂ॥

ಹೋದಂತ ಮಗನಿಗೆ ಆದನೇಳ ತಾಯಿಯೆನುತ
ಶೋಧಿಸಿ ಹೇಳಿದರೆಲ್ಲಾರೂ॥೨॥

ಹೊದವಂತ ಹೊದಿಕೆಯ ಭೇದವನು ಹೇಳ್ವೆನು
ಹೋದವೆಲ್ಲ ರಾಜೇದ ಮೇಲೆ ಹೇರೀ ।
ರಾಣೇರುಡುವ ರಾಗಾವಳಿ ಸೀರಿ
ಬಾಲೇರುಡುವ ಬಾಳಿಪಟ್ಟೆ ಸೀರಿ ।
ಚದುರೇರುಡುವ ಚಂದ್ರಕಾಳಿ ಸೀರೀ ।
ಸಂಣವರುಡುವ ೨ಸಾ೨[7]ಸಿ ಬಂಣದ ಸೀರಿ ।
ಹುಡಿಗೇರುಡುವ ಹುವ್ವಿನ ಶೀರಿ

ಕಂನೇರುಡುವ ಕಂಬಾವತಿ ಸೀರೀ ।
ಮಕ್ಕಳುಡುವ ಮಂಜಿನ ಸೀರಿ ।
ತೊತ್ತುಗಳುಡುವ ತೋಪಿನ ಸೀರಿ ।
ಉತ್ತುಮರುಡುವ ಉರಳೀ ಗೆರೀ ಸೀರಿ ।
ಕೂಸುಗಳ್ಹೊದುವ ಕುಲಾಯ ಕುಂಚಿಗಿ ।
ಏಸೊಂದು ನಾ ಪೇಳ್ವೆನು
ಬಿಂದಾಲಿ ಅರಳೆಲಿ ನಾಗ್ಮುರೀ ।
ಶಲ್ಲೆ ಮುಂಡಾಸು ಶಾಲು ಶಕಲಾತಿ
ಪಶ್ಚದಂಗಿ ಪರಿಮಳ ಪಾವುಡ
ವುಡವಂಥಾ ಧೋತ್ರನಾಗ್ಮುರೀ ।
ಎಲ್ಲಾ ಹೋಗಿ ಇಲ್ಲಾದಾಯ್ತು
ಮಲ್ಲಸರ್ಜಾ ಮಾಡಿದ ಬದಕು
ಬಲ್ಲಷ್ಟು ಹೇಳುವೆ ನಾದಸೂರೀ||ಪ್ರಳಾಪ||

ಅಷ್ಟು ಹೋಗೀ ನಂಮಾಗ । ಕಷ್ಟ ಬಿಡಲಿಲ್ಲೆಂದು ।
ಪಟ್ಟನೇ ಹಣಿ ನೆಲಕ ಬಡವುತಾಲೀರವ್ವಾ ।
ಕಟ್ಟಿ ಹಾಯ್ದೆನು ಅಲಾಗೆನುತ ॥
ತೊತ್ತಗಾಳೆಲ್ಲಾರು ಸುತ್ತವೇ ಮುತ್ತಿದರು ।
ಮುಂಕ್ಕಂ೧[೪]ಣ ಹರನ ದಯದಿಂದ ನಿಂನ ।
ಮಕ್ಕಳೈದಾರೇ ತಾಯಿ ಯೆನುತಾ
ತಂಮನೈದಾನೆ ತಾಯಿ ನಿನಗ ಬಂದದೆಯಂದು ।
ಉಂಮಾಯದಿಂದವರು ಹೇಳಿದಾರೀರವ್ವಗ ।
ಸುಂಮನೀರದೆ ಅಳುವಾಳು||ಏರು||

ಹಂನೆರಡಾ ಸಾವೀರಾ ದಂಡು
ಹರದೂ ಹೋಯಿತು ನಂಮನ ಬಿಟ್ಟು
ಒಡದಂತೆ ತುಂಬಿದಕೇರೀ||೩||

ಅಂಥಾ ದೊರಿಗಳಿಗಿಂತಾದಾಯಿತು
ಕಂತುಹರನೆ ಕೇಳವರಿಗೆಂತ
ಹೊತ್ತು ಬಂತು ಈಶ್ವರಾ ।
ನಾಡನಾಳ್ವ ಧೊರಿಗಳಿಗಿಂತ
ಕೇಡು ಬರಬಾರದೆಂದು
ರಾಜೇವು ಮರಿಗಿತು ಮಾರಾಮಾರಾ ।
ಮಾಂನೆರೂ ಆಳುವಂಥ
ಹಂನೆರಡು ಸಾವಿರ ಕರಡಿಗಿ ಹಳ್ಳಿ

ಹುಂನಾರದಿಂದ ಹೋದವು ಮುಂನೂರಾ ।
ಸತ್ತೆಕ್ಕೆ ಶ್ರಾವಣಮಾಸಕೆಪ್ಪತ್ತೇಳನೂರ ಮಂದಿ
ಸ್ತುತಿ ಮಾಡುವಾರು ಜಂಗ್ಮರಾ ।
ಹಸ್ತಿನಂದರ ಕಿವಿಯಲಿ ಕೇಳದೆ
ಹಂಬು ಸಕ್ಕರಿ ಉಣಸಿ
ದಾನ ಕೊಡುವರು ನಾನಾ ವಸ್ತಾರಾ ॥
ಧರ್ಮಾ ಮುಳಿಗಿ ಕರ್ಮಾ ಹೆಚ್ಚಿ
ವರ್ಮಾವಾನು ಪೇಳೆನು
ವರ್ಮಾ ಸಾಗಿ ಹೋದರ ಮೂರಾರಾ॥ಪ್ರಳಾಪ॥

ರಾಜೆಕ ರಾಯಿನಾಯಿಕಾ
೧ಇಂಥಾ೧[೨]ಗೋಜು ಹಚ್ಚದಿದ್ದರೆ
ಸಾಜಾಗಿ ದೌಲಾತ ಸಾಗಿಹೋಗುವದೆಂದು
ಮಾ ಜನಾರೆಲ್ಲಾ ಮರಗುವರೂ ॥
ಪಟ್ಟಿಗಟ್ಟಿ ದೇಸಾಯಿಗೆ ಸಿಕೆವ್ಹಾಕಿದಳೆಂದು ।
ಆಕಿ ಚಂನವ್ವ ೨[]೨[10]ನೊಯ್ದು
ಹಾಕಿದರು ಹೊಂಗಲದಾಗ ।
ಸಾಕಿದಾ ಮಗನೆಂಬುವರೂ ॥
ಟಾಕರಾ ಸಾಹೇಬ ಬಂದು
ಸ್ಥಿರವಾಗಿರಲಿಲ್ಲೆಂದು ।
ಧೀರ ರಣದೊಳು ಹೊಕ್ಕು ।
ಊರ ತಕ್ಕೊಂಡನೆಂದು
ಭೋರಿಡುತ ಜನರೆಲ್ಲ ಅಳುವಾರು॥ಏರು॥

ಆಕಾಶದ ಮೇಲೀನಾ ಚಂದ್ರ
ಲೇಸಾಗಿ ಬೆಳಕಾ ತೋರವಾನು
ಏಸಿದ್ದಾರೇನು ನಕ್ಷತ್ರಾ॥ಳ॥

ವ್ಯಾಳೆವ್ಯಾಳೆಕ್ಕ ವತ್ರ ಮಾಡಿ
ಬ್ಯಾಗದಿಂದ ಹೇಳೀದಾರು
ನಾಳೆ ಹೊರಡೆಂಬು ಉತ್ತಾರಾ ।
ಒಡವೀ ವಸ್ತಾವನೆಲ್ಲ
ಪೊಡವೀ ಮೇಲೆ ವಗದಾಳು
ಬಿಡದ ಸುರಿಸೂವಳು ಕಂಣೀರಾ ।
ಸಾಗಡೆಲ್ಲ ೧ಹೇರಿ೧[11] ಭಂಡಿಗಾಳು
ಮುಂದಕ್ಕ ಸಾಗಿ ನಡದಾವು

ಬಿಟು ಹೊಂಟರಲ್ಲೊ ದನಕಾರಾ ।
ಹತ್ತುವಂತ ಕುದರಿಗೆ
ಮುತ್ತಿನಾ ಜೀನವ ಬಿಗಿದು
ಹಿಡದಾ ನಿಂತಾನಣ್ಣಾ ಮೋತದ್ದಾರಾ ।
ಗುರುವಿನ ತರಿಸಿ
ಪಾಲ್ಲಿಕ್ಕಿಯಾ ಮ್ಯಾಲೇ ಅಪ್ತಗೀರೀ ಹಿಡಿಸಿ
ಹಾರೀಸೂತ ನಡದಳ ಚಾಮಾರಾ ।
ಸಂಣ ಮಾಗಳ್ಯೆಯ್ಯಾ ನಾನು
ಸಾರಿ ನಿನಗ ಪೇಳ್ವೆನು ತಾಪಾ
ಕೇಳೊ ಅಪ್ಪೆ ಸರದಾರಾ॥ಪ್ರಳಾಪ॥

ಹೊಂಡೆಂದೂ ನಿಂತಾರೋ ।
ಮಂಡಾಟಾ ಹಿಡಿದಾಳೋ ।
ಬಂಡಾಟಾ ಮಾಡಿ ।
ಕೈಹಿಡದೊಂಮೆಳದಾರೋ ।
ಕಂಡವರಾ ಕಾಲಾ ಹಿಡಿದಾಳೊ ॥
ಮಂಡಾಲಾನಾಳುವಂಥ ।
ಪುಂಡರೂ ಮಡದ್ವಾಂಗ ।
ಕೆಂಡವ ಹಾಯಿದಿಂನು ।
ಪ್ರಾಣವಾ ಕೊಡಲೆಂದು ।
ಗಂಡನಾ ನೆನದೂ ಅಳುವಾಳೋ॥ಏರು॥

ನೀರ ಇಲ್ಲದ ಮಲ್ಲಿಗೀ ಹುವ್ವಿನ
ಬೇರ ವಣಗೀದಂತೆ
ಆಸರಿಲ್ಲದ ಪಾರೇ ಕೊಟ್ಟರುಂಣ ಪರಂಗೇರಾ॥ಜ॥

ಎಷ್ಟು ಮಾಡೀದಾರ
ನಮ್ಮನ ಬಿಟ್ಟೂ ಹೋಗೂದಿಲ್ಲವೆಂದು
ಮಾಡೂತ ನಡದಾಳು ವೀರನ ಸ್ತುತೀ ।
ಅತ್ತೀ ಮಾವನ ನೇನಸಿ
ಹತ್ತೀದಾಳು ಡೋಲೀಯಾನು
ಹೊತ್ತಾರಂಣ ಬೋವೇರೆತ್ತೀ ।
ರಾಯಿನಾಯಿಕ ಬಂದಾನೆಂದು
ರೌಡಮಾಡಿ ನಡದಾರು ಎಡಬಲಕ
ಹಿರದ ಬಿಚ್ಚಗತ್ತೀ ।
ಹಿಂದ ಇಂನೂರ ಬಾರಿನ ಮಂದಿ

ಮುಂದ ಮುನ್ನೂರ ಕುಡತಿ ಮಂದಿ
ಮಾಡೂತ ನಡದಾರು ಪಾರಾಗಸ್ತೀ ।
ದಾಸೋಗದಿಂದ ದಾರಿ ೧ಹಿಡದು೧[12]
ಧಾರವಾಡಕ ಬಂದಮ್ಯಾಲೆ
ಸರದಾರಾ ಕೇಳೀದ ಅವರ ಸ್ಥಿತೀ
೨ಕೊಟ್ಟಂಥಾ೨[13] ಅಂನದ ಮೇಲೆ
ಬಿಟ್ಟು ಎರ್ಡನೆ ಮಾಡತೀರಿ
ನಂಮ ಮೇಲೆ ಮಾಡೊದ್ಯಾಕ ಜಾಸ್ತೀ ॥
ರಾಯಿನಾಯ್ಕನ ಹಚ್ಚಿ
ಸುತ್ತಮುತ್ತ ಹಳ್ಳಿನೆಲ್ಲ
ಫಿತೂರ ಮಾಡಿ ನೀನು ಸೂಡಸ್ತೀ ॥
ಕೊಲ್ಲಬ್ಯಾಡ್ರಿ ಇವಳುನು
ಕುಸೂಗಲ್ಲ ಕಿಲ್ಲೇದೋಳಗೊಬ್ಬಳ
ನೀಡಂದಾನು ವಸ್ತಿ॥ಪ್ರಳಾಪ॥

ಹೊತ್ತಾರೋ ಬೋವೇರು
ಕುಸುಗಲ್ಲೀಗೆ ತಂದಾರೊ ।
ಮೆಲ್ಲಾನೆ ಕಿಲ್ಲೇವಾ ಹೊಗುವಾಗ
ಈರವ್ವಾ ಬಲ್ಲಾಂಗ ದುಃಖಾ ಮಾಡಿದಳೂ ।
ತಾಯಿಲ್ಲವ ಮಕ್ಕಳಿಗೆ ಆಯಿಲ್ಲಾ ಶಿರಿಯಿಲ್ಲ ।
ಬಾಯಿಬಿಡುತಲೀರವ್ವಾ
ತಾಯಿಲ್ಲದಿಡಬಾರದೆಂದು ।
ಸಾವು ಬೇಡಿದಳು ಶಿವನೀಗೇ॥ಏರು॥

ನೀರ ವಳಗಿನ ಮೀನಾ ವೈದು
ಬೇರೆ ಹೊರಿಯಾಕೆ ಚೆಲ್ಲೀದಂತೆ
ಆದೇವೈಯ್ಯ ನಾವು ಆನಸ್ತೀ॥೬॥

ಇಂನು ಈ ಧರಿಯೋಳು
ಮುಂನ ಇರಬಾರದೆಂದು
ಅಂನ ಉದಕವಾ ಬಿಟ್ಟಾಳೋ ।
ಸಂಗ್ರಾಣಿ ಬ್ಯಾನೀ ಹಾಂಗ
ಸರ್ವಗಾ ದೇಹಾವಂನು ।
ಸುಂಣದಂತೆ ಕರಗಿಸಿಬಿಟ್ಟಾಳೋ ।
ಸಂಣವಾದ ಕೈಕಾಲು ।
ಮಂಣಪಾಲುವಾಗಲೆಂದು

ಮೈ ಬಂಣಾ ಒಣಗೀಸಿಬಿಟ್ವಾಳೋ ।
ನಾಡವೋಳು ನವಲಗುಂದ
ಕಾಡಸಿದ್ದನ ಹಂತಿಲಿ ಹೋಗಿ
ನೀರಾ ಮಿಂದು ಮಡಿಯಾನುಟ್ವಾಳೋ ।
ಜಂಗಮಾ ತೀರ್ಥವ ಪಡಿದು
ಅಂಗೈ ವಳಗ ಲಿಂಗಾ ಯಿಟ್ಟು
ಲಿಂಗದ ಮೇಲೇ ಧ್ಯಾನಾ ಇಟ್ವಾಳೋ ।
ಭಕ್ತಿಯಿಂದ ಜಂಗಾಮರಿಗೆ
ತಕ್ಕಡಿ ಭಂಗಾರ ತರಿಸಿ
ದಾನಾ ಧರ್ಮಾವಂನು ಕೊಟ್ವಾಳೋ ।
ಮುಂದ ಮುಕ್ತಿಯ ಕೋಡು
೧ಮುಕ್ಕಂಣ೧ ಶಂಕರನೆಂದು
ಧಾರವಾಡದ ದಾರಿ ಹಿಡದಾಳೋ॥ಪ್ರಳಾಪ॥

ಚಿಕ್ಕ೨ಮಽಗಾ೨ಮಲ್ಲಸರ್ಜಾ
ಸಿಕ್ಕನಂಬುದು ಕೇಳೀ ।
ಬಕ್ಕನೇ ಹಣಿ ನೆಲಕ ।
ಬಡವುತಾಲೀರವ್ವಾ
ಜಕ್ಕನೇ ಧರೀಗಿಳಿದಾಳೋ ॥
ಕೊಡ ಹೊಂನಿದ್ದಾರೇನು
ಬಡಿವ್ಯಾಗಿರವೂದೆ ಲೇಸು ।
ಮಡದಿಗೇ ರಾಯಾನೊಬ್ಬ ।
ಮನಿಯೊಳಗಿರಲೇಸು ।
ಹೀಗೆಂದೂ ದುಃಖಾ ಮಾಡಿದಳೋ॥ಏರು॥

ಧಾರವಾಡ ಬಂದೂ ಮ೧ರು೧ ದಿವಸ
ಸತ್ತು ಹೆಬ್ಬಳ್ಳೀ ಬಸವಾನ
ಪಾದಾಕ್ಕೊಂದ್ಯಾಳೋ॥೭॥

***ಕವಿ :*** ಹೆಬ್ಬಳ್ಳಿ ಬಸವ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] ಲ್ದೆ
[2] ಅಸ

[3] ಇಥ

[4] ಮ

[5] ರಾ

[6] ಲಕ, ನಾ

[7] ನಾ

[8] ಕಂ

[9] ಇಥಾ

[10] ನೌ

[11] ಹೆರಿ

[12] ಹಿದು

[13] ಕೊಟಂಥ

## ೬. ನರಗುಂದ ಪದ – ೧

ಶಖ ಇಂಗ್ರೆಜಿ ಬಹದುರ ೧ಕುಂ೧

[1]ಪಣಿ ಸರಕರ
ಆತಿ ಜಾಹಿರ ಅವರ ಕಾರ್ಬರ ಸುತ್ತಿನ ರಾಜೇಕ।
ತಂಮನಾಡಿಗಿಟ್ಟುದರ ಸುಖ
ಮಾಡಂದಿಲ್ಲ ದುಖ್ಖ ಈಗಿನ ವ್ಯಾಳೆಕ॥ಪಲ್ಲ॥
ಪಾಣೆ ಹಾಕೆರ ಸುತ್ತಿನ ವಾಡ ಹತ್ತಲಿಲ್ಲ ತಡ
ಬೆಳಗಾಂವಿ ಧಾರವಾಡ ಇರುವ ಅವರ ಜ್ಯಾಗ
ತಂಮ ದಂಡಿಗಿಟ್ಟರ ಬಂದುಬಸ್ತ
ದಿನ ಕವಾತ ಯರಡು ವ್ಯಾಳೆದಾಗ
ಮಂಮಯದೊಳಗ ಹುಕುಮ ಅತಿ ಜೋರ
ಬರದರ ವುತ್ತರ ವೊದಿಕೊಂಡ ಸರದಾರ
ನಾಡನ ಹತಿಯರ ಕಳಸಬೇಕ ಬ್ಯಾಗ
ಇಷ್ಟ ವೋದಿಕೊಂಡರ ಪಿರಂಗೆರ
ಹೊಡಶರ ಡಂಗೂರ ತಾಲುಕದ ತೆಳಗ।
ಬಾಲೆ ಬಾಕ ಕತ್ತಿ ಕಠಾರಿ ಕಂಜುರ ಕೈಚೂರಿ
ಟೋಪ ಪಿಸ್ತುಲ ಬ್ಯಾರಿ
ಬಂಡಿ ಮೇಲೆ ಹೇರಿ ಕಳವಿದರ ಆಗ।
ಹಲಗಲಿ ವೂರ ರೈತರ ಕೊಡಲಿಲ್ಲ ಹತಿಯರ
ಸುಟ್ಟರ ಗಳಿಗ್ಯಾಗ।
ಸುರಪುರ ಧೊರಿ ಮಾಡೆನ ಹಿಕಮತಿ
ಕೊಡಬಾರದಂಣ ಕತ್ತಿ ದಂಡ ಬಹಳತಿ

ಲಡಾಯ ಮಾಡು ೨ಪ್ರೀ೨[2]ತಿ ಅವನ ಮನದಾಗ ।
ಸುದ್ದಿಕೇಳಿ ಪಿರಂಗ್ಯಾ ಬಂದ
ಸುರಪುರ ಹೊಡದ ವಂದ ಕ್ಷಣದಾಗ॥ಚ್ಯಾಲ॥

ಮೇನಶಿನ ಸಾಹೆಬ ಇದ್ದನೊ ಧಿಟ್ಟಾ
ಜೆಮಖಂಡಿಗೆ ಹೊಂಟ ಅಂವ ಸರದೀಂದ
ಡೇರೆ ಹೊಡದಿಳದಾ ।
ರಾವಸಾಬನ ಕರಿಯ ಕಳಸಿ
ಮಾಡೆರ ಚವಕಶಿ ತಿಳದ ೩ನೋ೩[3]ಡೀದಾ ।
ಕಲ್ಬಣದಿಂದಾ ।
ರಾವಸಾಬಗ ಮಾಡೆರ ಬಹು೧ಪ್ರೀ೧[4]ತಿ
ಮದಗುಂಡ ಯೆಲ್ಲೆತಿ ಕೊಡರಿ ನಮ೨[5]ಗಿಂ೨ದಾ ।
ಲಗುಬಗಿದಿಂದಾ ।
ಸಾಹೆಬನ ಮಾತ ಕೇಳಿಕೊಂಡ
ಕೊಟ್ಟರ ಮದ್ದಗುಂಡ
ಸುರವಿದರ ಮುಂದ ।
ಬೆಳಗಾಂವಿಗೆ ಕಳವೀದಾ॥ಯೇರ॥

ವಳಗಿಂದೊಳಗ ಬರದ ಟಪಾಲ ।
ಕಲಾದ್ಗಿ ದಂಡೆಲ್ಲಾ ಬಂದಿತೊ ಹಲ್ಲಾ
ಜೆಮಖಂಡಿ ವೂರ ಮೇಲಾ ।
ಹೋತಿ ಟಾಕೊಟಾಕ ।
ಅಲ್ಲಿ ತಂಮ ಪಾಣೆವು ಹಾಕ್ಯಾರ
ರಾವಸಬನೋದರು ಬೆಳಗಾಂವಿಯ೩ಸ್ಥ೩[6]ಳಕ॥೧॥

ಜೆಮಖಂಡೆ ವಂದ ಆತಿ
ಈ ಹಾಡ ದೊಡ್ಡದೊಡ್ಡಗಡಾ
ಇದ್ದವು ಬಹುಚಡಾ
ಜ್ಯಾಗ ಅವಗಡ ಮುಂನೂರ ಅರವತ್ತ ।
ಹಿಂತಾವ ತೊಗೊಂಡ್ರ ಪಿರಂಗೆರ
ಇಲ್ಲ ದರಕರ ಮಾಡಿ ಕಸರತ್ತ ।
ಮೇನಶಿನ ಸಾಹೆಬ ಅಕಲ ತಗದ
ವುಳಿತ ನರಗುಂದ ಹೋಗಬೇಕಂದ
ಮನಶಿಗೆ ತಂದ ಹೊಂಟ ನಗನಗತಾ ॥
ಬಾಬಾ ಸಾಬಗ ಹಚ್ಚರ ಸಂದಾನ
ಹತಾರ ಕೊಡರಿನ್ನ ಯಲ್ಲ ದರುಬಸ್ತಾ ॥

ಮದ್ದಗುಂಡ ಟೋಪ ಬಂದುಕ।
ಕೊಡರಿ ಗಂದಕ ವುಳಿಯಬಾರದ ಸಿಲ್ಕ
ನಿಂಳಮಳ[7] ಹಂತಕ ಯಾಕ ಸಾಹಿತ।
ಈಗ ನಂಮ ಜಿವಕ
ಬಂದಾಗ ಕೊಡಬೇಕ ನೀವ ಈಗ।
ಯೆನಂತೆ ೧ಹೇ೧[8]ಳ ತುರತ।
ಬಾಬಾ ಸಾಹೇಬ ೨ಕೇ೨[9]ಳೆನ ಇಷ್ಟಮಾತ
ಇಲ್ಲ ನಿಂಮ ಹೊರ್ತ
ಮಾಡ್ತೆನ ತಾಕಿತ
ಕೆಲಸ ಹರಕತ ಮಾಡಂದಿಲ್ಲಂತ।
ಇಷ್ಟ ಹೇಳಿ ಬರದಕೊಟ್ಟರು
ಸಾಹೆಬನ ಕಳಸಿರು ಮಾಡಿಕೆರ ಬೇತ॥ಚ್ಯಾಲ॥

ಬಾಬಾಸಾಬನ ಸತಿಗೆ ಹತ್ತಿ ಸುದ್ದಿ
೩ನೀ೩[10]ವೆಲ್ಲಿ ಇಟ್ರಿ ಬುದ್ಧಿ
ಇಲ್ಲೆನ ಕಾರ್ಬಾರ ತಿಳದ ೪ನೋ೪[11]ಡ್ರಿ ಪೂರಾ।
ಮದ್ದಗುಂಡ ಯಲ್ಲ ಸಾಹಿತ ಕೊಟ್ಟ
ಇಲ್ಲೆನತಿ ಗಂಟ ಮಾಡರಿ ವಿಚಿಯಾರ।
೫ಹೋ೫[12]ದಂಗ ಸತಿಯರ।
ಹಿಂದ ಮುಂದ ಇಲ್ಲ ಮಕ್ಕಳ
ಮಾಡುನ ಜೆಗಳ
ಆದಿತ ಹೆ೬ಸ೬[13]ರ ರಾಜೆದ ೭ಮೇ೭[14]ಗ ದೂರಾ।
ಗಡದಲ್ಲಿ ಹೋಗಲಿ ನಂಮ ತೆಲಿ
ಸಿಗಬಾರ್ದ ಕೈಲಯಲ[15]ಲಿ
ಹಿಡಿರಿ ನೀವದೀರ ಬಹಳ ಹುಷಿಯಾರಾ॥ಯೇರ॥

ನಂಮನ ಕಾಯಂವ ಯಂಕಟರಮಣ
ಅವನ ದಯ ಕರಣ ೯ಅ೯[16]ತಿ ಸಂಪೂರ್ಣ
ಮಾಡಿಕೆರ ಶರಣ ಬಿದ್ದರ ಪಾದಕ್ಕ।
ದೇವರನ ಕೇಳೆರ
ಕವಲ ಕೊಟ್ಟನು ಬಲ ಹೊಡಸತರ ಡಂಕ॥೨॥

ಬಾಬಾ ಸಾಹೆಬ ಆದನು ಖುಷಿ
ನೋಡಿದನು ಸೋಸಿ
ಕಾರ್ಕುನರ ಕರಶಿ ೧೦ಹೇ೧೦[17]ಳೆನ ೧೧ತಿ೧೧[18]ಳಸಿ
ಆದ ಕುಸಿಯಾಲಾ।

ನಂಮ ದಂಡ ಮಾಡರಿ ತಯಾರಾ
ಹೊಡಸರಿ ಡಂಗರ ಸಭೇದ ಹಳ್ಳಿಗೆಲ್ಲಾ ।
ದಂಡ ಕೂಡಿತ ಮೂರ ಸಾವಿರ ।
ಅನಿ ಕುದರಿ ಸ್ವಾರಾ
ತೊಗೊಂಡ್ರ ಹತಿಯರ
ಬಂದಂಗ ಹೊಳಿಪೂರಾ ಅತಿ ಗದ್ದಲಾ ।
ಪಿರಂಗ್ಯಾನ ದಂಡ
ನದರಾಗ ಇಲ್ಲ ಯಾಂವೆಂವಗ ।
ಜೀವದ ಪರಿವಿಲ್ಲಾ ॥
ಯಲ್ಲ ಅಗಸಿಗಿಟ್ಟರ ಚವಕಿ
ಮುಂನುರ ಹಳಿಬಿ
ಇಲ್ಲ ಅಂಜಿಕಿ ಜೀವದಲಿ
ಬೆಂಕಿ ಇಟ್ಟರ ಕಾವಲಾ ।
ವಳಗಿನ ಮಂದಿಯ ವಳಗ
ಬಿಡಂದಿಲ್ಲ ಹೊರಗ
ಹಾಕೆರ ಬಾಗಿಲಾ ।
ವಳಗಿತ್ತ ಅನ್ನ ನೀರ ಜೋರ
ಕೊಟ್ಟರ ರೈತರ ವುಣಸಿ ಹಾರುರ
ಮಾಡೆರ ನಮಸ್ಕಾರಾ ಬಿದ್ದರೊ ಕಾಲಾ
ಇಲ್ಲಿಗೆ ಹರಿತರಣನ ಬಂದ ವುಳದರ
ಮುಂದ ಕೊಟ್ಟೆನ ಕವಲಾ
ಗಡ ಟೋಪ ಪೂಜಿ ಮಾಡಶಿ
ಕುರಿಯ ಕಡಶಿ
ಮಾಡಿದರ ೧ಶಾಂ೧[19]ತ
ಬೇಡಿಕೊಂಡ್ರ ನಿಂತ ।
ಯಲ್ಲ ಅಗಶಿಗೆ ಕೋಣ ಕಡದ
ಮಾಡಿ ದರದುಂದ ಚೆಲ್ಲಸೆರ ರಕ್ತಾ
ಗಡದ ಸುತಮುತ್ತ ।
ಟೋಪ ೨ಏ೨[20]ರಶಾರ ಮೇಲಕ
ನೋಡಿಕೆರ ದಿಕ್ಕ ಇದ್ದುವ ವಂಭತ್ತ ।
ಇಟ್ಟುದರ ಸರ್ತ ।
ಸುದ್ದಿ ಕೇಳಿ ಬಂದ ಗೊಲಂದಾಸ
ಶುಕ್ಕರವಾರ ದಿವ್ಸ ಹಾರಸ್ಯಾನ ಟೋಪ ಮಸ್ತ
ಲಡಾಯಕ ಬರೆಂತ॥ಯೇರ॥

ಪಿರಂಗ್ಯಾಗ ಸುದ್ದಿ ೧ಹೋ೧ತಿ
ಮತ್ತ ಬಂದರ ವೋಡುತ
ಮುಂಗಯ್ಯ ಕಡಕೊಂತ ಹಲ್ಲ ತಿನ್ನುತ।
೨ಹೋ೨ದರ ರಾಮದುರ್ಗ್ಗಕ
ನರಗುಂದಿ ಸುದ್ದಿ ಕೇಳಿ
ಗಟ್ಟಿ ಬರದ ಲಕುಟಿ
ದಂಡ ಕುಡಸುಂದಕ॥೩॥

ಅಪ್ಪ ಸಾಹೆಬಗ ತಾಕಿತ ಮಾಡಿದ।
ರಾಮದುರ್ಗ್ಗ ಬಿಟ್ಟು ಬಂದ
ಸೂರೆಬಾನಕಿಳದಾ।
ಡೇರೆ ಹೊಡಶಿದಾ ದೀವ್ಸ ಶನಿವಾರಾ।
ಮೆನಶಿನ ಸಾಬಗ ಬಂತ ವೂಮೆದ
ಮಂನಶಿನ ಕರದ। ೩ಹೇ೩[21]ಳೆನ ಯಚ್ಚರಾ॥
ನಾಳಿ ಹೋಗಬೇಕ ನರಗುಂದಕ।
ಬಾಬಾ ಸಾಹೆಬನ ಹಂತೆಕ।
ಹೇಳುನು ಟೀಕ
ದಂಡ ಯಾತಕ ಮಾಡ್ತನ ತಯಾರಾ।
ನಂಮ ಪದರಿ ನನ್ನ ದೇಸ್ಗತಿ
ಸೊಕ್ಕ ಬಂದತಿ ಇಳಸುನು ನೀರಾ॥
ಇದ್ದ ಸುದ್ದಿ ಹತ್ತಿತು ಬಾಬಾ ಸಾಬಗ।
ಮಾತಾಡತಿದ್ರ ಹೀಂಗ ಸೂರೆಬನದಾಗ।
ಕುಂತ ಳಡೇಳ[22]ರೆದಾಗ ಅಂದ ಸರದಾರಾ
ಇಷ್ಟ ಕೇಳಿ ಆದನೊ ಸಿಟ್ಟಾ
ಹಾರಸುನು ಚೆಟ್ಟಾ ನಡಿರಿ ಯಲ್ಲಾರ॥
ಅಂವ ಹೊಂಟ ರಾತೊರಾತರಿ।
೧ಐ೧[23]ವತ್ತ ಕೂದರಿ ಶಿಪಾಇ ಮಂದಿ
ಬ್ಯಾರಿ ಹಾಕೆರ ಸರವಾರಿ।
ಕತ್ತಿ ತಿವಳೆ ಜೋರಾ।
ಅಲ್ಲಿ೨ಗ್ಥೊ೨[24]ಗಿ ಮಾಡೆರ ಗಡಬಡಿ
ಯೆಲ್ಲೈದನ ಹಿಡಿರಿ ಅಂತಾರ ವಾಲಿಕರ॥ಚ್ಯಾಲ॥

ಮೆನಶಿನ ಸಾಹೆಬ ನೋಡಿದ ಗದ್ದಲ।
ವೋಡಿ೩ಹೋ೩[25]ದನಲ್ಲಾ ಗುಡಿಯ ಮರೀಗೆ
ಅಂಜಿ ಗಾಬರ್ಯಾಗಿ।
ಸಾಹೆಬನ ಮಂದಿಯ ಕಡದ

ಕುದರಿಯ ಬಡದ
ಹಾಕ್ಕಾರ ಮುತ್ತೀಗಿ ಅನಮನ ಇಲ್ಲವರ್ಗಿ ।
ಮೆನಶಿನ ಸಾಹೆಬನ ಹಿಡದರೊ ಬಂದ ।
ಹೆಡಮುರಗಿಯ ಬಿಗದ
ಧನೆನ ಇದರೀಗೆ । ನಿಂದರಸೆರ ಹೋಗಿ ।
ಮೆನಶಿನ ಸಾಹೆಬ ಅಂತನ
ಕೊಲ್ಲಬೇಡ್ರಿ ಬಿಡರಿ ಕೈಶರಿ
ಬಿದ್ದೆನ ಕಾಲೀಗೆ ಇರತೆನ ಮಗನಾಗಿ ।
ಬಾಬಾ ಸಾಹೆಬ ಮಾಡಲಿಲ್ಲ ದರಕರ
ಕೋದರೊ ಸಿರಾ ।
ಇದ ಮೊದಲೀಗಿ ರಗತ ಬಟ್ಟ ಹಣಿಗೆ॥ಯೇರ॥

ಮೇನಶಿನ ಸಾಹೆಬನ ಮಾಡೆರ ಮೂರ ತುಂಡ ।
ತೊಕೊಂಡರ ರುಂಡ । ತಿರಗಿತೊ ದಂಡ ।
ನರಗುಂದ ವೂರ ಕಂಡ ಹೊಕ್ಕರ ವಳಿಯೇಕ ।
ಪಿರಂಗ್ಯಾಗ ಸುದ್ದಿ ಳಹೋಳ[26]ತಿ ಜಲ್ದ ।
ಟೊಪ್ಪಿಗಿ ನೆಲಕ ವಗದಾ ಮಾಡತರ ದುಃಖ॥ಳ॥

ದಂಡ ತೊಗೊಂಡ ಬಂದರ ಪಿರಂಗೆರ ।
ಮುಂನೂರ ಸೋಜರ । ಸಾವಿರ ಕರಿಬಾರಾ ।
ಬಂತ ವತ್ತರ ವಳೆ ಸಿಟ್ಟೀಲಿ ।
ಸುತಮುತ್ತ ಹಾಕಿದರ ಜ್ಯಾಲಾ
ಗಡದವರ್ಗೆ ಹಾದಿಲ್ಲ ಹೋಗತರ ಮೇಲೆ ॥
ಗಡದವರು ವಗದರೊ ಗುಂಡ ।
ಪಿರಂಗೆರನ ಕಂಡ ।
ಸತ್ತಿತೊ ದಂಡ ಆದರೊ ಬಂಡಾ ।
ಬಿದ್ದರೊ ಜಕಿಮಿಲಿ ।
ಹೀಂಗ ಲಡಾಇ ಹತ್ತಿತೊ ಕಡಕ ।
ಗುಂಡ ಯೇಕ ದುಮಕಬಿಟ್ಟರ ವತ್ತರಲಿ ॥
ದಂಡ ಸತ್ತಿತಣ್ಣ ವಂದ ನೂರಾ ।
ಅಂತರ ನಿರನೀರ ಇಲ್ಲ ಖಬರ ।
ಕಯ್ಯಿನ ಹತಿಯರವುಳೆಡತರ ಚೆಲ್ಲಿ ।
ಹೀಂಗಾತಿ ಪರಂಗೆನ ಗತಿ ।
ಹೌವ್ವಹಾರೆತಿ । ಬಿದ್ದರ ಭೂಮಿ ಮೇಲೆ
ಮಸಲತ ಮಾಡಿದ ಸರ್ದರಾ ।
ಮುಂನೂರ ಸೋಜರ । ಜಾಗಕೊಂನರ ।

ತುಂಬಿಕೆರಬಾರ ಇಟ್ಟನ ಕದ್ದಿಲಿ।
ವಳಗಿಂದೊಳಗ ಪಿತುರ ಸಂದಾನಾ
ಮಾಡಿದ ಕಾರ್ಕುನ ಗಡಾದಮೇಲಿ॥ಚ್ಯಾಲ॥

ಪಿರಂಗೆರ ಹೋದ್ರ ಮೇಲಕ
ಗಡದ ಸನಿಯಕ ಹೋದರೊ ೧೬೧[27]ರಿ।
೨೫೨[28]ವತ್ತ ಕೂದರಿ।
ಗೊಲಂದಾಸ ನೋಡಿಕೆರತಾನ
ಮಾಡ್ಲಿಲ್ಲ ಅನಮಾನ
ಹಿಡದ ಮುಂಜ್ಯಾರಿ। ಹೊಡದ ತರತೂರಿ।
ಗಡದವರು ಇಳದರೊ ತೆಳಗ
ಸಿಟ್ಟ ಮನದಾಗ ಬೆಂಕಿಯಾ ಚೂರಿ
ಹಾರಿತೊ ಖಬರಿ।
ಗಡದವರ ತಿರಿವಿದರ ಬಂದ।
ಹತ್ತೆರ ೧ಬೆ೧[29]ನ್ಹಿಂದ
ಬಾಬಾ ಸಾಬ ದೊರಿ ಮಾಡೆನ ಶರಿಸೂರಿ॥ಯೇರ॥

ಗಪ್ಪಾದ ದಂಡ ಯೆದ್ದಿತಲ್ಲಾ
ಆದಿತ ಗಲಬಲ
ಗಡದವರ ಕೈಕಾಲ ಬಿಟ್ಟರೊ ಯಲ್ಲ
ಆಗಿನಾ ಕ್ಷಣಕ।
ಗಡದವರು ಹೋದರು ಮುರದ।
ಹಿಂದಕ ಸರದ ಅಗಸಿ ಬಾಗಿಲಕ॥೫॥

ದುಡ್ಡಿಗಾಸಿ ಮಾಡಿದ ಕಾರ್ಕುನ
ವುಂಡ ಅವರನ್ನ ತಿರಿಗಿಬಿದ್ದ ತಾನ
ಬರಲಿಲ್ಲ ಅಂತಃಕರಣ ಅವನ ಮನದಾಗ।
ಅಗಶಿ ಹಾಕ್ಸಿದಾನ ತಾನಿಂದ।
ದಂಡ ಬಾಳ ಬಂತ ತಗಿಯಬ್ಯಾಡ್ರೆಂವಗ।
ಇಷ್ಟ ಹೇಳಿ ಹೋದ ಗಡದ ಮೇಗ
ಮದ್ದ ತೊಶನಾಗ ಗೊಲಂದಾಸಗ
ಚೆಲ್ಲೆನ ಗಡದ ತೆಳಗ
ಮೋಸ ಮಾಡೆನಾಗ।
ಸಂಸ್ಥನಕ ಹಿಡರೊ ನೀರ।
ಹಿಂತ ಹಾರೂರ। ದುಡ್ಡಿನ ಕಾಲಾಗ।
ಪಿರಂಗ್ಯಾ ಮಾಡಿದನ ತಡಕ।

ಅಗಶಿ ಬಾಗಿಲಕ ।
ಟೋಪ ಹಚಿ ನಾಕ
ವರದ ರಂಜಕ ಶಿಟ್ಟ ಮನದಾಗ ।
ಅಗಶ್ಯಾಗ ಅತಿ ಗದ್ದಲ
ಹೊಗಿ ಕತ್ತಲ ಕಾಳಗಂವದಾಂಗ ।
ಯರ್ಡು ದಂಡ ಬಿದ್ದವು ತಳಕ
ಕಡುತರ ಹೊಕ್ಕ ತೆಪ್ಪಸೆರ ದಿಕ್ಕ
ಇಲ್ಲದಲೆ ಲೆಬ್ಬ ಬಿದ್ದವ ಅಗಶ್ಯಾಗ ।
ವೊಬ್ಬನ ಮಾರಿ ವೊಬ್ಬಗ ಕಾಣಂದಿಲ್ಲಾ
ಕೆಂದೂಳ ಹಾರಿತಲ್ಲಾ ತೆಕ್ಕಿ ಮಂಕ್ಕಿ ವಳಗ॥ಚ್ಯಾಲ॥

ದರಜಿಲ್ಲದ ಕಡುತರ ದಂಡ
ಹಾಕಿದತವರುಂಡ ಮುರುತರಗೋಗಿ
ಹೋಗತವ ಪ್ರಾಣ ।
ವದ್ದಾಡತಾವ ಅವರ ದಡಾ
ಮುರದ್ದವ ನಡ ಹೊರಬಿದ್ದವ ಕಂಣ ।
ಬಾಇ ತುಂಬ ಮಂಣ ।
ಕಂದರೀವ ಕಡುತರ ಕಾಲಾ
ಬಿದ್ದವೊ ಬಾರಲ ಚುಂಚಿ ಬಾಲೇನ
ಅಂತಾರ ಧಿನಧೀನ ।
ಹೆಣ ಆಗಿದಾವ ಚೆಪ್ಪಡಿ
ರಗತ ಸೂರೆಡಿ
ಮುಕ್ರಿದವ ನೊಣ ಸಾಂಬ ಭಗವಾನಾ ।
ಸಪ್ಪಳಾಗತಾವ ತಡಪಡ ತೋಪ
ಧಡಬಡ ಬಿಟ್ಟರ ವಂದಸ೧ವ಼೧[30]ನ ।
ಮಂಣಸೆರ೨ಸ್ಯೈ೨[31]ನ॥ಯೇರ॥

ಅಗಸ್ಯಾಗ ದಿಕ್ಕಿಲ್ಲ ಯಾರೆರ ।
ಹೆಕ್ಕರ ಸೋಜರ ಹಿಂಬಲ ಸರದರ
ಹಲ್ಲ ಕರಕರ ತಿಂನುತ ವಳಗ್ಹೊಕ್ಕಾ ।
ಬಾಬ ಸಾಹೆಬ ಗಡದ ಆಸೆ ಬಿಟ್ಟಾ
ಕಯ್ಯ ಮುಗದ ಹೊಂಟ ಅಡಿವಿ ಅರೆಣಕ॥೬॥

ಬಾಬಾ ಸಾಹೆಬ ಹೋದನು ವೋಡಿ
ಪೊಲೊಸಿ ಸಾಹೆಬನ ನೋಡಿ
ಸುತಮುತ ಹುಡಿಕ್ಯಾಡಿ

ಹೋದನ ತೊರಗಲ ಕಡಿ
ಗುಡ್ಡ ನೋಡಿ ಸೋಸಿ।
ಕುದರಿ ಹೆಜ್ಜಿ ಹಿಡದರೊ ಕುನಾ
ಹೋದರ ಬೆಂನಬೆಂನ
ಹಿಡದರ ಅಡರಾಸಿ।
ಬಾಬಾ ಸಾಹೆಬ ಕಂಣಿಗ ತಂದ ನೀರ।
ಮನದ ಈಶ್ವರ
ಸ್ವಾಮಿ ಚಿದಂಬರ ವೆಂಕಟಪತಿ
ಪೂರ ಬಿಟ್ಟ ಮಂಣಗಸಿ
೧ಏ೧[32]ನಿಲ್ಲ ದೇವರ ಹಂತಕ
ಈಗಿನ ವ್ಯಾಳೆಕ ಆದ್ನಿ ಪರದೇಸಿ।
ಸುತಮುತ್ತ ಬಿಚಗತ್ತಿ ಸೋಜರ ಪಾರಾ।
ವೋದರ ಚಮತ್ಕಾರಾ
ಯೊಳ ಮಂದಿ ಸರದಾರಾ
ಮಾಡುನು ಅಂತಾರ ಚೂರ।
ಇವನ ಕಡಿಕಡಿಸಿ
ಬಾಬಾ ಸಾಬನ ಹಾಕಿದರ ಗಲ್ಲ
ತಡಾ ಮಾಡಲಿಲ್ಲ ತೀರಿತವನಾಸಿ॥
ನರಗುಂದದಾಗ ಇಲ್ಲ ಒಂದ ಪ್ರಾಣಿ
ಹೋದನೊ ಧಣಿ ಬಿಟ್ಟರೊ ಮನಿ
ಬಡಕೊಂಡರ್ಹಣಿಹಣಿ
ತಾಯಿ ಅತ್ತಿ ೨ಸೊ೨[33]ಸಿ
ಮಗನ ನೆನಸಿ ತಾಇ ಗಳಗಳ
ಆದಳ ತಳಮಳ
ಸತ್ತರು ನೆನ ನೆನಸಿ॥ಚ್ಯಾಲ॥

೩ಜೇ೩[34]ಷ್ಟ ಅಧಿಕ ಶುದ್ಧ ಪೂರ್ಣಮಾ
ಕಾಳಾಯುಂಕ್ತಾಕ್ಷಿ ನಾಮ ಇತ್ತ ಸಂವಳತ್ಸಳ[35]ರ।
ವಾರ ಮಂಗಳಾರ।
ಶಱಕಱಸತ್ರಾಸೆ ೬ಐಂ೬ಸಿ ವರಷ
ಅತಿ ಕೈವಸ
ಜೆಂಡೆ ಜರತರ ಹಚೆರ ಪಿರಂಗೇರ।
ಬಾಳ ದಿನ ಕುಂತ ಕಡದಾಡಿ
ಬಹದೂರ ಹೋದ ವೋಡಿ
ಬಂತ ಹುಂನಾರ ತೊಗೊಂಡರ ಇವರ।
ನರಗುಂದ ಮಾಡಿದರ ಲೂಟಿ

ಬಡದರೊ ಪ್ಯಾಟಿ
ಹೊಕ್ಕರ ಸೋ೧ಜ೧ರ ಕೆಡಸಿ ಹೆಂಗಸರ ।
ಮುರಗೋಡ ವೂರ ಬಾಳ ಚಂದ
ಗಂವಿಶಿದ್ದಂದ ದಯಾ ಬರಪೂರ ।
ಮುಗಿತ ಆಇತವಾರಾ॥ಯೇರ॥

ಧೊಂಡು ಪರಸ ಹೇಳಿದರ ಪದ ।
ಡಬ್ಬಿನ ಮೇಗಿಂದಾ ನಿಶಾನಿ ಕಲ್ಲಿದಾ
ಬಾಬಾಜಿ ಅಂದ ಟೀಕ ।
ರಾಣಂಕು ಬಂಣ ಮಾಡೆರ ಪಾವಡ
ಹಾಡತರ ಜೋಡ ವ್ಯೆರಿಗೆ ಬಿತ್ತದಾಕ॥೭॥

***ಕವಿ :*** ಪರಸ ಮತ್ತು ಬಾಬಾಜಿ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] ಕು [2] ಪ್ರಿ [3] ನೊ [4] ಪ್ರಿ [5] ಗೀಂ [6] ಸ್ತ [7] ವ
[8] ಹೆ [9] ಕೆ [10] ನಿ [11] ನೊ [12] ಹೊ [13] ಸೇ [14] ಮೆ
[15] ಯ್ಯ [16] ಅ [17] ಹೆ [18] ತೀ [19] ಶಾಂ [20] ಎ [21] ಹೆ
[22] ಡೆ [23] ಅ [24] ಗ್ದೊ [25] ಹೊ [26] ಹೊ [27] ಎ [28] ಅ
[29] ಬೆಂ [30] ವೇ [31] ಶೈ, ಸೈ [32] ಎ [33] ಸೋ [34] ಜೆ [35] ತ್ಸ

## ೭. ನರಗುಂದದ ಪದ – ೨

ದೊಡ್ಡ ಶರಾ ಪಗಡಿ ಬಾಜಾರಾ ಅಯಿತಿ ಬಲದೂರ
ಕಾಣವದು ಚಂದ ಬಳವಲ ದೇಶ
ಬಲಸೂರಿ ಆಯಿತೊ ನರಗುಂದ॥ಪಲ್ಲ॥

ನಾಡೊಳಗ ಇಲ್ಲ ಅದರ ತಾಡಿ
ಎಂಕೊಬನ ಗುಡಿ ಕಲ್ಲ ಪಡಿ ಪಡಿ
ಗುಡ್ಡದ್ವಾರ್ಯಾಗ ಆ ಗುಡಿಯ ವಿಸ್ತಾರಾ
ವರ್ಣಿಸಿ ಹೇಳುವೆ ನಿಮಗೆ

ಏನಂದೊ ಅದರ ವಿಸ್ತರಾ ಗಚ್ಚ ಮಂದಿರಾ
ಗಡ್ಡಿಯ ತೇರಾ
ಚಾವಣಿಯ ಮೇಗ ಹಂಚೀನ ಲೇವಿಗಳ
ಇಳಿಸಿದ ವಿಸ್ತಾರ ಹ್ಯಾಂಗ
ಏನ ಗರಡಗಂಬದ ಮೇಲೆ ಗಡಗಿ ಕಂಡೆದ
ಮಡಗಿ ಹೊಂದಿಶ್ಯಾನ ಬಡಗಿ
ಶಾಣ್ಯಾ ಬಲ್ಹಾಂಗ ಏನ ಪದರಗಂಬ ನುಡಿ ಚದರ
ವಿಚಿತ್ರದೊಳಗೆ ಕೆತ್ತಿ ಪಟಕೆ ಹೊಂದಿಶಾರೆಲ್ಲಾ
ಕಬ್ಬಿಣದ ಕೀಲಾ ಉಕ್ಕಿನದ ತಲಾ
ಕೊಂಡಿ ಅದರಾಗ ಏನ ಗಂಟಿ ಜಾಂಗುಟಿ
ಪಾತಾಳದಕಣಮಾ ಅಂಕಣ ಮೇಗ॥ಚಾಲ॥

ಬಾಳ ಚಾತುರ್ಯದ ಗುಡಿಯೂ
ಸುತ್ತಿನ ಫವಳಿ ಕಲ್ಪಡಿಯೂ
ಜರದಮ್ಮ ದಣಿಯೂ ಸಬರಹಿಡಿಯೂ
ನಾ ಮೇಲ ತೋರಸತೀನ ನಡಿಯೂ
ನೆಲ್ಲಕ್ಕಿ ಗಚ್ಚ ತಿಳಮಡಿಯೂ
ಅಲ್ಲಿ ಸಂಣ ಬಿದಿರಿನ ಚಡಿಯೂ॥ತೋಡ॥

ಬಾಳೊತ್ತ ನಿಂತ ನೋಡಿದಿ ಅಕಲಧಿಂಗಾದಿ
ಹೀಂಗ ಪದಿ ಪದಿ
ನಡಸತಲಿ ಬಂದ ಬಳವಲದೇಶ
ಬಲಸೂರ್‍ಯಾಯಿತೊ ನರಗುಂದ॥೧॥

ಉದಿಯಕ್ಕ ಎಂಕೊಬನ ಪೂಜಿ ಆಗೊದು ಬಲು
ಸಂಜಿ ಬಾಗಲಮುಂದ ಬಜಿ ಆಗೋದು ಚಣಚಣಕೆ
ಕಂಚಿನ ಕಾಳಿಗಳ ಹಿಡಿಯುತಾರ ಈ ಕ್ಷಣಕೆ
ವಾದ್ಯಾ ಆಗುದ ಅರನ ಬದಿಯಲಿ ತಾಳಮದ್ದಲಿ
ಸಂಶ ಜಾಂಗಟಿಲಿ ಬಾರ್‍ಯಾರಿಶ್ಯಾಡುದಕ
ಏನ ವೇಣ ತಾಂಬುರಿ ಸ್ವರಾ ಸಾರಿಂಗಿ  ಟೀಕ
ಸ್ನಾನ ಮಾಡಿ ಬಂದಾರ ಬ್ರಾಮರಾ
ಉಡುವ ಧೋತರಾ ಓದಿ ಮಂತರಾ ಮಾಡಿ ಅಭಿಷೇಕ
ಏನ ತಾಲಿ ತಂಬಿಗಿ ತುಂಬಿ ಇಟ್ಟರ ಎಡಬಲಕ
ಅಕ್ಷತಿ ಹಚ್ಚುವರು ಗಂಧ ಷೋ

[?] ವೃಂದಂದ
ಕಿರಿ ಅಟವ ತಂದ ಇಟ್ಟರ ಪುಸ್ತಕ
ಏನ ಹೆಸರ ಪಚ್ಚ ಶ್ರೀ ಪೇಚ
ಹೊಳುವತವ ಜುಳಕ
ಆಗ ಬಂದಿತು ಉಪದ್ಯರ ಗಂಮಿ
ಗುಡಿಯ ದಿಮದಿಮಿ
೧ಕಾಂಚಿನಾ೧[1]ಸಮೆ ಹಚ್ಚರ ಲಾಕ ಲಾಕ
ಆ ದೀವಿಗಿ ಬೆಳಕ ಬಿದ್ದಿತು ಶೀವಸವಾಸನಕ
ಅವನ ಮಲಗುವ ಮಂಚ ಬಲ ಇಂಬ
ಲೇಪ ಅದರ ತುಂಬ ಕುತನಿ ತಲಿಗಿಂಬ
ಅವನ ಮಲಗಂದಕೆ ಬಹು ಕುಶಾಲದಿಂದ
ಸವ ನಿದ್ದಿ ಮಾಡು ಬೆಳತನಕ॥ಚಾಲ॥
ದಂಡಂವಂತ ಭಕ್ತ ಪೂಜಾರಿ
ಅವ ವಿದ್ಯೇದಲ್ಲಿ ಬೇರಿ
ಹಸಿ ಹಾಲು ಚೆನ್ನಿ ಸಕ್ಕರಿ
ತುಪ್ಪದಲ್ಲಿ ಅನ್ನ ಬುರಬೂರಿ
ಕಾಯಿ ಕಜುರಿ ವಣ ಕೊಬರಿ
ಮೇಲೆ ಪಳಾರ ಮಾಡ್ಯಾರ ಚೂರಮರಿ॥ತೋಡ॥

ಇಷ್ಟೆಲ್ಲ ತಂದ ತನ್ನ ಸತಾ ದೇಹಕೆ ಹಿತಾ
ಸ್ವಾಮಿ ಸಲಸಂದ ಬಳವಲಾ ದೇಶ
ಬಲಸೂರಿ ಆಯಿತು ನರಗುಂದ॥೨॥

ಆ ಊರಿಗೆ ಬಾಬಸಾಬ ದೊರಿ
ಪನ್ನಾಸ ಪಾಗದ ಕುದರಿ ಚೆಟಾನೀ ಮರಿ
ಬಂತ ಶೃಂಗರನಿ ಅದರ ಅಳತಿ ಅಂಬಾರಿ
ಬಂಣದ ಚವಡಲೆ ಬಿಗಸಿ
ತನ್ನ ರಂಗಮಾಲಿನಾಗ ದನಿ ದೊಡ್ಡ ಅರಮನಿ
ಪಾತ್ರದ ಚಂದ್ರೆಸಾನಿ ಅವನ ಶ್ರೀ ಅರಸಿ
ಏಕಂತ ಕೋಲಿಯೊಳು ಮಾಡುತಾರ ನಗಿಹಾಸಿ
ಏಕಂತ ಕೋಲಿ ತಾರಿಪ ರಂಗಮಂಟಪ
ಮಂಚದ ಮೇಲ ಲೇಪ
ಕುತನಿಯದು ಗಾಸೆ
ಏನ ಬಂಣದ ರಜಾಯಿ ಗಂಜಿ ಹಚ್ಚಡಾ ಹಾಸಿ
ಹೋಗಿ ಕುಂತರ ಅವರಿಬ್ಬರಾ
ತಬಕದಲಿ ಪೂರಾ

ತಂದ ೨[2]ಹಾಜಿರಾ ಪರ್ಯಾ[3] ಕೊಳಿಗೆ ಧರಿಸಿ
ತನ್ನ ಮಾನುನಿ ಕಂಡು ಹುರಿಮಾಡುತಾನೊ ಮೀಶಿ
ಭಾಳ ಮಾನುನಿ ಮಂಚದ ಮೇಗ
ಮಾಡುರಂಗ್ಯಾಂಗಾಂಗ
ಆಡಿ ಚದರಂಗ ಅವನ ಸೋಲೀಸಿ
ಬಲ ಕುಶಾಲದಿಂದ ಮಾಡುತಾರ ನಗಿಹಾಸಿ॥ಚಾಲ॥

ಅವರು ಬಂದ ಹರ್ಯಾಗಿನ ಹೊತ್ತ
ಮಾರ್ಜಾಲ ಮಲ ಮಂದಿ ಅವನ ಸುತ್ತ
ಇರಬೇಕೊ ಇಂಥ ದವಲತ್ತ
ಏನ ಸಕಲ ಗುಣಕ ಪಂಡೀತ
ಕಡಮಿಲ್ಲ ಕೇಳ ಇವನ ದಂಡ
ಏನ ಬ್ರಹ್ಮರ ಬರದ ದೇವಲಿಖಿತ॥ತೋಡ॥೨

ಅಂಬುದು ಅಬಿ ಅಬಿ ಹೊನ್ನಿನ ಢಬಿ
ಹೇಳದ ಬೇಗ ಬಂದ ಬಳವಲ ದೇಶ
ಬಹು ಸೂರಿ ಆಯಿತು ನರಗುಂದ॥೩॥

ದೊಡ್ಡ ಮರಾಯಂದು ತಂನ ಕಿಲೆ
ಗುಡ್ಡದ ಮೇಲೆ ಅಯಿತಿ
ಬಲರಲಿ ನೀರಿನ ಜವಳಾ
ಆ ಗುಡ್ಡದ ಮೇಗ ನೀರಿನ ಶಲಿ ಭಾಳಾ
ಮತ್ತೊಂದು ಮಾಡ್ಯಾರ ಮಸಲತ್ತ
ಜಕೀರದ ಗೊತ್ತ ಸರಳ ಸಾಯಿತ್ತ
ಹೊಟ್ಟಿಯ ಕೂಳ ಏನ ಹಗೆ ಅಂಬರಿ
ಕಡಶಿ ತುಂಬಿದಾರ ಜೋಳಾ
ಗಡ ತೊಗೊಂಡಿದ್ದಿಲ್ಲ ಯಾರ್ಯಾರಾ
ಹಿಂದಕೆ ಭಾದೂರಾ ಮುತ್ತಿಗಿ ಜೀರಾ
ಮೂರು ತಿಂಗಳಾ ಒಂದು ಸವಽನ
ಟೋಪು ಹೊಡಿದು ಮಾಡಿದರ ಜಗಳಾ
ಆಗ ಬಿಟ್ಟಿತು ಪಡುವಲ ಘಾಳಿ।
ಬಿತ್ತ ಜಡಿಮಳಿ
ಹಚ್ಚಿರೋ ಕಾಳಿಗುಂಡ ಜಳಜಳಾ
ಆಕಾಶಕೆ ತೋಪ ಹೊಡದ ಹಾರಿತ ಕೆಂಧೂಳಾ
ಕಾದಾಡಿ ಕಲಕಿದವ ಕಂಣ
ಬಾರೊ ಕಾಳಂಣ

ಮಾರಿ ಬಹುಸುಣ ಮಾಡಿದನು ಕಾಳಾ
ದುಃಖದಲಿ ಕಂಣತುಂಬ ನೀರ ತಂದ ಬಳಬಳಾ||ಜಾಲ||

ಅಸ್ಕರಿ ಆಯಿತೊ ಲಡಾಯಿ
ಆಗ ನಿಂತಿತೊ ಕಾಳಂಣನ ಕೈ
ಇದಕೇನು ಮಾಡುನು ಉಪಾಯಿ
ಶಿಟ್ಟೀಲೆ ರಾಮದುರ್ಗದ ಬಾಯಿ||ತೋಡ||

ಬಪ್ಪರೆ ಪುಂಡ ಭಾದೂರಾ ದೊಡ್ಡ ಸರದಾರಾ
ರಾಜ್ಯಕೆ ಜಾಹೀರಾ ಮಾಡಿದೊಂದೊಂದ ಬಳವಲದೇಶ
ಬಲಸೂರಿ ಆಯಿತು ನರಗುಂದ||ಳ||

ಹಿಂದಿನ ಕರ್ಪದಲಿ ತಗಿ ಹೇಳುವೆನು ಬಗಿ
ಹಿಂದಕೆ ಹೀಂಗಾಗಿ ಹೋದಿತ್ತಳಿಮಾತು
ಇಂಗ್ರಾಜರೀಗ ಮತ್ತೊಂದು ಮಾಡ್ಯಾರ ಮಸಲತ್ತ
ಬಾಜಿರಾಯ ಎದ್ದಾಗಿನ ಸುವ್ವ ರಾಜ್ಯವು
ಬೊಬ್ಬಾಟ ಮಾಡಿರೊ ಆಟ ಕತ್ತಿ ಕುಡರಂತ
ಬಾಳ ದಂದಲಿ ಪಾಳೆಗಾರರ ಸುತ್ತ
ಈ ಮಾತು ಕೇಳುವದು ತಡಾ
ಜಲದಿ ಭಡಭಡಾ
ಹೋದಿತಿಂದು ಗಡಾಗಡದ ಮೇಲೆ
ಕುಳಿತ ತನ ಮಂದಿಗ್ಹೇಳತಾನ
ಹುಶಾರ ಇರೊ ಸ್ವಸ್ತ
ಇಂಗ್ರಾಜರು ಶೋಧಿಸಿ ನೋಡಿ
ಆಯಿತೊ ಹಡಬಿಡಿ
ಬಂದರೊ ಓಡಿ ಊರ ಸುತ್ತಮುತ್ತ
ನಂಮ ಭೆಟ್ಟಿಗೆ ಬಾರೊ ಅದಾವೊ ಮೂರು ಮತನಾ
ಬರುವುದಿಲ್ಲ ನಿಂಮ ಭೇಟಿ
ಬರದ ಲಕ್ಕುಟಿ ಕಳುವುತಲಿ ಕುಳಿತಾ
ನೀವು ಹೇಳಿದ ಚಾಕರಿಗ್ಹಜೀರ ಇರತೇವಂತ
ಇಟ್ಯಾಕ ಬಿಡೊ ನಿನ್ನ ಕೋಪ
ಚಲ್ಲಿಸಕರೊ ಟೋಪ
ಗಂದಕ ಮದ್ದಿನ ಉಪ್ಪ
ಹೇರಿ ಕಳುಹಂತರಕವಾಲಿ ಕಂದರಿ
ಧಾರವಾಡಕೆ ಕಟ್ಟಿದಾವು ಶೇತ||ಚಾಲ||

ಅವರಿಬ್ಬರು ಅದರ ಸುರಳಿತ ಮಾತಾಡತಾರ ಏಕಂತ
ನೀ ಬಿಡೊ ಮನಸಿನ ಬುದ್ಧಿವಂತ
ಸಂವಿ ಅಡಗಿ ಊಟ ಉಂಣಂತ||ತೋಡ||

ಇಂಗ್ರಜರದಾರೊ ಮಿತ್ಯ ಎನಗೆ ಬಲ ಸತ್ಯ
ಅಗಕರತ್ಯ ಹೇಳುವೆನು ಮುಂದ
ಬಳುವಲದೇಶ ಬಲು ಸೂರಿ ಆಯಿತೊ ನರಗುಂದ||ಋ||

ಧನಿ ಕಡಿಯಿಲ್ಲ ಜರಕೊಂದ
ಅನ್ಯಯಾವಾದ ಕರಿಯ ಕಳವೀದ
ಎಲ್ಲ ನುಂಣದ
ಮಸಲತ್ತ ಹುಟ್ಟಿತೊ ಮಾಸೋಜರ ಹೊಟ್ಯಾಗ
ಆ ಊರ ಪೈಕಿ ಹಳಬರಾ ಸವಾನೂರ ಹಾರಾ
ಹಿರದ ಕತ್ತಿ ಭಾರ ಬಂತೊ
ಅಗಶ್ಯಾಗ ನಾವು ಲಡಾಯಿ ಮಾಡತೀವಿ
ಕತ್ತಿ ಕೊಡಾಕಿಲ್ಲ ನಿಮಗೆ
ಧನಿ ತಗದ ಹೇಳತಾನ ಬಾಯ
ಮುಗದಕ್ಕಾರ ಕೈ
ನಮಗ ಅಪಾಯ ತಂದಿರೊ ಈಗ
ಭಾಳ ದೈನ್ಯಾಸ ಬಿಟ್ಟು ಹೇಳತಾನ ಮಂದ್ಯಾಗ
ಆಗುವಂಥ ಕೀರ್ತಿ ಆಗಲಿ ಎದಿಮೆಲ
ಹೊಗಲಿ ನಮ್ಮ ತಲಿ
ಎದಿಯ ಮೇಗ ಮಲಿ ಅದಾವೆನೊ ನಮಗ
ಸಂಕದಾಳ ನಾಯಿಕ ಶಿಟ್ಟ ಆದನೊ ಧನಿಮೇಗ
ಏನ ಮುನ್ಯಾಸ ಮಂಕಿನ ಮೇಲೆ ದಂಡ
ಮೆಣಸಿನ ಸಾಹೆಬ ಚಂಡ
ತಂದ ಕೋಕೊಂಡ ಕಟ್ಟಿದರ
ಹೊರಗ ಭಾಳ ಬೆಂಕಿ ಬಿದ್ದಿತೋ
ಇಂಗ್ರೇಜರ ಹೊಟ್ಯಾಗ
ತೋಪ ಹೂಡಂದ ನರಗುಂದ ಮೇಲಿ
ಸಂಣ ಜಂಜಾಲಿ ಬಂದುಕ ಪಿಸ್ತುಲಿ ಕರೊಲಿ ಕೈಯಾಗ
ಏನ ಕಡಾಟ ಲಡಾಯಿ ಮಂಗಳಾರ ಮಧ್ಯಾನದಾಗ||ಚಾಲ||

ಮಳ್ಳರಸ ಕಿಲೇದಾಗಿದ್ದ ತಿಳಿಯದಲೆ ತಾನ ಹೊರಬಿದ್ದ
ಅವರ ಕೂಡ ಮಾಡಿದಾನ ಜಿದ್ದ
ಹರುಷದಲಿ ತಾನು ಹೊರಬಿದ್ದ

ಅವರ ಕೂಡ ಮಾಡಿದಾನ ಯುದ್ಧ
ಇಂಗ್ರಾಜರ ಸೋಲಿಸಿ ಗೆದ್ದ॥ತೋಡ॥

ಸೋಜರ ದಂಡ ಬಂದಿತೊ ತುರಿ ಕಡದು ಶರಿ ಸುರಿ
ಆ ಶಿಕ್ಕನೊ ಧೊರಿ ಆದ ಕೈಶೆರಿ
ಆಗಲಿಲ್ಲ ಮುಂದ ಬೆಳವಲ ದೇಶ
ಬಲು ಸೂರಿ ಆಯಿತು ನರಗುಂದ॥೬॥

ಏನ ಫಿತುರ ಮಾಡಿದಿ ಬೇಮಾನ
ಉಂಡ್ಯೊನಂನ ಬೋನ ದೊಡ್ಡ ಕಾರಕೂನ
ತಿರಗಿದ್ದಿಲ್ಲಾರು ಮುಂದ್ಯಾಂಗ ನಿನಗೆ
ಮೆಚ್ಚ್ಯಾನೋ ದೇವರಾ ನಂನ ಗಂಡನ
ಸರಪಂತಿ ಉಂಡಿ ಐಶ್ವರ್ಯ ಕಂಡಿ
ಶೇಲ ಹೊತಕೊಂಡಿ ಶರಗ ಜರತಾರಾ
ಅಂತಾದೇನು ಮಾಡಿದರೊ ನಿನಗೆ ನಂಮವರಾ
ಸ್ವಾಮಿ ನನಗೆ ತಂದಿ ವನವಾಸ
ಹತ್ತಲಿ ನಂನ ದೋಷ ನನಗೆ
ಆಸರ ಇಲ್ಲ ಯಾರ್‍ಯಾರ
ಅತ್ತಿಸೊಸಿ ತೆಕ್ಯಾದ ದುಃಖ ಮಾಡುವರು
ಎಷ್ಟ ಇತ್ತೊ ಮನಸಿನಂತ ಜಿದ್ದ ತೋಸಿದೆಲ್ಲ
ಮದ್ದ ಟೋಪ ಅರಿದ್ದ ದೂರ ಹೋಗಲಿಲ್ಲ
ನಿಂಮವನ ನೆಟ್ಟರಿಟಿಗ ಭಾಳ ಮಾಡಿದೊ ಪೇರಾ॥ಚಾಲ॥

ಕಾರಕೂನ ಬಹಳ ಶಿಟ್ಟೇಲಿ
ಗುರತಾಸಿ ಹೋದ ಮೈಮೇಲಿ
ನಿನಗ್ಯಾಕ ಹೆಂಗಸ ಮೈಮೇಲಿ
ನಿನಗ್ಯಾಕ ಹೆಂಗಸ ಬಾಲಿ
ಕಳವೇನು ಉಟ್ಟಿರೋ ಶಾಲೆ
ಈ ಕ್ಷಣಕೆ ಸೋಜರ ದಂಡ ಬರಲಿ
ಹಿಡಕೊಡತಿನ ಅವರ ಕೈಯಲಿ॥ತೋಡ॥

ಆಕಿ ಮೇಣೆದಾಗ ಕುಂಡರಸಿ
ಅಂಜಿ ಅಡರಾಸಿ ಕುದರಿ ದುಮಕಾಸಿ
ಹೊಳಿಯ ವಳಬಿದ್ದ ಬೆಳವಲದೇಶ
ಬಲು ಸೂರಿ ಆಯಿತು ನರಗುಂದ॥೭॥

ಆ ಲಡಾಯಿ ಸುದ್ದಿ ಕೇಳಂಣ
ಕತ್ತಿ ಚಣಪಣ ದಾರಿಗೊಂಟ ಹೆಣ
ಬಿದ್ದಿದವು ಎಷ್ಟ ಈಗ
ಮೂರು ಲೋಕದೊಳಗಿರಲಾಕಿಲ್ಲ
ಇಂಥ ನಷ್ಟ
ಪ್ರಾಯದವರ ಮಾರಿ ಮೇಲೆ
ದಸಿ ಕಾಣತತಿ ಬೇನಿ ವತ್ತಿ
ಮಾಕ ಮೀಶಿ ಬಂದವೊ ಈಟೀಟ
ಎನ ಭಗರಿ ಗಡ್ಡ ರಣಗೂದಲ
ಜಾಡಿಸಿ ಬಿಟ್ಟ
ಅವರ ತೊಟ್ಟರ ಚವಕಿನ ಚಂಣ
ಎದ್ದಿಶರ ಮಂಣ
ಸುತ್ತಿದರ ಸಂಣ ಕಾಸಿ ನಡಕಟ್ಟ
ಮೈಯೊಳಗ ಚಂದಕಿನ ಕಾಪದ ಅಂಗಿಯ ತೊಟ್ಟ
ತಮ ದನಿಗೆ ಮುಜರಿಯ ಹೊಡರು
ಕತ್ತಿ ಡಾಲ ಪಿಡಿದು ಕರುಲಿ ಗುಂಡ ಬಡಿದು
ಗಾಯ ಗಂಟ ಬಿದ್ದು ರಣದೊಳಗ
ಮಡದರೊ ದರಣಿಗೆ ತಲಿಯಗೊಟ್ಟು
ಕೊಂದು ಕುರಿಯ ಹಾಕಿದಾಂಗ ಪಾಲ
ರಕ್ತ ಜಲಜಾಲ
ಭೂಮಿ ಉಳಿಲಿಲ್ಲ ನೋಡೊ ಎಳಿ ನಷ್ಟ
ಎನ ಕರಳ ಪಚ್ಚ ಹೊರಬಿದ್ದವೊ ನೋಡೋ ಎಷ್ಟ||ಚಾಲ||

ಅವರ ಹೆಂಡರದು ಬಲು ಸೂರಿ
ಬಳಿ ವಡಿದು ಕರಿಮಣಿ ಹರಿದು
ಅವರಕ್ಕ ತಂಗ್ಯಾರ ಬೋರ್ಯಾಡಿ ಬಡಕೊಂತ
ಬಂದಳೋ ಭೋರಿ ಅವರವ್ವನ ಹೊಟ್ಟಿಲಿ
ಗುಮರಿ ಹೊಡಕೊಂಡು ಬಂದಳೊ ಮಾರಿ||ತೋಡ||

ಏನ ಲಡಾಯಿ ಮಾಡಿದಾರ ಶರ್ತ
ಅವರದೇನ ಗುರ್ತ ಸತ್ಯರೋ ಯರ್ಥ
ಆಗಲಿಲ್ಲ ಮುಂದ ಬೆಳವಲದೇಶ
ಬಲುಸೂರಿ ಆಯಿತು ನರಗುಂದ||ಲ||

ಅರಮನಿ ಆದಿತೋ ಲೂಟಿ
ಮಾರಾಯಿ ದೊಡ್ಡಪೇಟಿ ಜಿಂದಗನಿ ಕಟ್ಟಿ

ಹೇರ ಕಳಹು ಅಂತ
ಪಾಂಡವರ ಮನಿ ಕೌರವರು ಸುಲಿಗಿ ಮಾಡಿದಂತ
ರಾವುತರ ಕುದರಿ ಸಾಮಾನ
ಹೇಳಲಿನ್ನೇನ ಹಾಕುರು ಜರಜೀನ
ರೇಸಮೀ ತಡಿ
ಇನ್ನ ಮಾರಿ ಮೂರಕಿ ಬಂಣದ ಸರಸರ ಗೊಂಡಿ
ರೇಸಮಿ ಬದಕು ಬಲು ಸಹಾ
ಕಾಣತದ ತುಸಾ ಶಾಲಿ ಕುಪ್ಪಸಾ
ಬಾಲೆರುಡು ಮಡಿ
ಏನ ಜವಳಿ ಅಂಗಡಿ ಹೊಕ್ಕ
ಸುಲಗಿಯನು ಮಾಡಿ
ಪಟ್ಟಣಕೆ ದೊಡ್ಡ ಸಾವಕಾರಾ
ಬೆಳ್ಳಿ ಬಂಗಾರಾ
ಹೇಳಲಿನ್ನೇನ
ಮುತ್ತಿನಾ ದಂಡಿ ಬೆಳ್ಳಿಯ ತಳಗಿ
ಚೆನ್ನಾದ ಹರಿವಾಣ ಗಿಂಡಿ
ಒಕ್ಕಲಗೇರ ಮೂರ ಹೊತ್ತ
ಮಿಣಿಯ ಖಣೀ ಸುತ್ತ
ಹೂಡು ಎಂಟೆತ್ತ
ದೊಡ್ಡಹಳ್ಳಿ ಭಂಡಿ ಜೆತ್ತೀಗಿ ನಗಾ
ಹೊಲ ಬಿತ್ತುವ ಕೂರಿಗಿ ಶೆಡ್ಡಿ
ರೇವಡಿಗಾರ ಅಂಗಡಿಯ ಮೇಲೆ
ಮಾಜುಮದಲಿ ಹುರದ ಹುರಕಡ್ಲಿ
ಚುರ್ಮರಿ ಉಂಡಿ ಎನ ಸಕ್ಕರಿ ಬದುಕು
ಮುಕ್ಕ್ಯಾರ ಪಾವನ ಮಾಡಿ॥ಚಾಲ॥

ನರಗುಂದಕೆ ಬಂದಿತ ಕಾಲ
ಇಂನ್ಯಾರ ಉಳವಿಕೊಳಲಿಲ್ಲ
ಗಣನಾಥ ರೊಕ್ಕದ ಚೀಲ
ಕಳಕೊಂಡ ಹೋದ ಚೆನಿವಾಲ
ಊರ ಬಿಟ್ಟು ಹೋದರೊ ಎಲ್ಲ
ಮನಿಮಾರಿನೊಳಗೆ ಯಾರಿಲ್ಲ॥ತೋಡ॥

ಧರಿಯೋಳು ಕಬ್ಬೂರ ಶಹರಾ
ಕಲ್ಯ ದೇವರ ಮಾಡಿ ಚಮತ್ಕಾರಾ

ಲಾವಣಿ ತಂದ ಬೆಳವಲ ದೇಶ
ಬಲು ಸೂರಿ ಆಯಿತು ನರಗುಂದ॥೯॥

*** /song stress / ಬಾಳಿ ಇಂಟಿ ಗುಳೇದಗುಡ್ಡ ೨೯ನೇ ಜಾನೆವಾರಿ ೧೮೭೪ ಇ || (ಒಂದು ಸಂಕ್ಷಿಪ್ತ ಸಹಿ ಇದೆ).**

***ಕವಿ :*** ಕಲ್ಕ ದೇವರು
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] **ಕಂಚ ಚಿನಾ**

[2] **೨ ಇದರ ಬಳಿ ಧನಿತಾನ ಎಂಬ ಶಬ್ದವೂ ಮೂಲ ಹಸ್ತಪ್ರತಿಯಲ್ಲಿದೆ.**

[3] **೧ ಈ ಪದ ಹೀಗೆ ತಿದ್ದಲ್ಪಟ್ಟಿದೆ ; ಅಬೀಲಾ**

## ೮. ನರಗುಂದ ಮೇಲಿನ ಪದ

ಬಾಬಸಾಬ ಮಹಾರಾಯನ ದೌಲತ
ಬಹಳ ದಿನದ ರಾಜೂಕಿ।
ಬ್ರಾಮ್ಹರ ಧರ್ಮಾ ಸರಿತೊ ಇಲ್ಲಿಗೆ
ಮುಣಗಿತಂಣ ಅರಸೂಕಿ ॥
ಜನರೆಲ್ಲ ಮಾಡತಾರೊ ದುಖೀ॥ಪಲ್ಲ॥

ಪುಣೇದ ಪ್ರಾಂತ ಹಿಡದ ಚನ್ನಪಟ್ಟಣಕೆ
ಮೆಣಸಿನ ಸಾಹೇಬ ಒಬ್ಬ ಧೊರೆ।
ವಿಲಾಯತೀಲೆ ಹುಕುಂ ತರಿಸಿದಾ
ರಾಜರಿಗ್ಹಾಕೂದು ಶರಿ।
ಕತ್ತಿ ಕಸ್ತ ಕಟ್ಟಿಸಿದ ಹೊರೀ।
ಮೊದಲ ಬಂದ ಜಮಖಂಡಿ ಅರಸಗ
ಹಿಡಿದನಲ್ಲೊ ಕೈಶರಿ।
ಮೇಣೇವು ಪಿಂಜರದಾಗ್ಹಾಕಿ ಕಳಿಸಿದಾ
ಜಮಖಂಡ್ಯಾತೊ ಶರೆ ಸೂರಿ।
ವಾಡೇದಾಗ ಕೊಶಾನ ದನ ಕುರೀ।
ಮುನಸಿಗ್ಹೇಳತನ ಬಹಳ ಶಿಟ್ಟಲೆ
ಬಾಬಾ ಸಾಹೇಬಗ ಬರಿ।

ಪತ್ರ ಒಂದು ಬಾಬಾ ಸಾಹೇಬಗ ಬರೀ।
ಜಲ್ದಿ ಪತ್ರ ರವಾನಿ ಆಗಬೇಕು
ಷಾನ ತುರುಪಿನ ಕೂದರಿ।
ಕುದರಿ ಕರ್‍ಯಾಕ ಬಂದವು ತರತೂರೀ।
ಪತ್ರ ಓದಿ ನೋಡುವಾಗ
ಬಾಬಾಸಾಬರು ಸಂಣದ ಮಾಡ್ಯಾರೋ ಮಾರೀ।
ವೆಂಕೋಬಾನ ಹೆಸರು ತಕೊಂಡು
ರಾತ್ರಿಲೆ ಹಿಡದಾರು ಜಮಖಂಡಿ ದಾರಿ।
ಸಾಹೇಬನ ಹುಜೂರಿಗೆ ಹೋತ ಇವರ ಸ್ವಾರಿ।
ಖುರ್ಸೇ ಮೇಲೆ ಕುಂತಾನ ಹಲ್ಲ ತಿಂದ ಕರಕರಿ।
ಇಂಥಾ ಭಂಡಾಯೀ ಏನ ಮಾಡೇವು ನಾವೂ
ಯಾಕ ಹಲ್ಲ ತಿಂತಿರೀ।
ನಿಮ್ಮ ಕೈಯನ ಗುಬ್ಬಿ ಮರೀ।
ಅಪಣಿ ಕೊಟ್ಟ ನಡಿಯಂದ ನರಗುಂದಕ
ಕಿಲ್ಲೇವು ತೆರವು ಮಾಡರೀ।
ಹೊಂಡ ಒಡಸಿ ತಟ್ಟ ಬಂದಿ ಕೆಡವಿಕ್ಯಾನ
ಸುತ್ತಲ್ಯಾಗ ಬೇಕೊ ದಾರಿ।
ಇದರ ಹೊರ್‍ತ ಊರಾಗಿನ ಕೆರಿ।
ತಿರಿಗಿ ಬಂದ್ರು ನರಗುಂದಕ ಬಾಬಾಸಾಬ
ತೆಪ್ಪಿತಂಣ ಹಂಚಿಕಿ॥೧॥

ತನ ಮಂದಿ ಕರಸಿ ವೀಳ್ಯವ ಕೊಟ್ಟರೊ
ತಮ್ಮಾ ಶುಕ್ರವಾರ ದಿನಾ।
ವೆಂಕೋಬಾನ ಪಲ್ಲಕ್ಕಿ ತಗಸಿ ಕಾಸ
ತೋಪ ಹಾರ್ಸೀರು ಧಂಧನಾ।
ಸುತ್ತ ರಾಜ್ಯದ ಕೇಳಿತ ಜನಾ।
ನವಲಗುಂದ ಸುಭೇದಾರ
ಮೆಣಸಿನ ಸಾಹೇಬಗ
ಪತ್ರ ಬರದ ಮರದಿನಾ।
ನರಗುಂದರಸ ಭಂಡಾಯಿ ಮಾಡೂದು
ತಯಾರ ಮಾಡಿಸ್ಯಾನ ಸಾಮಾನ।
ಹೀಂಗ ಬರದಿದ್ದ ವರತಮಾನ।
ಮೆಣಸಿನ ಸಾಬ ರಾಮದುರ್ಗಕ ಬಂದನೊ
ನೇಮಸಿ ಆಯಿತ್ಯಾರ ದಿನಾ।
ತೋಟದಾಗ ಇಳದ ಕರೇಕಳಿಸಿದಾ
ಶಿಟ್ಟಿಲೆ ರಾವ ಸಾಬನಾ।

ಬಾಯಿ ಬಿಡತಿತ್ತೊ ಶಿಪಾಯಿ ಜನಾ।
ಅಡ್ಡಬಿದ್ದ ರಾವಸಾಬ ಸಾಹೇಬಗ
ಕರಗಲಿಲ್ಲೊ ಅವನ ಮನಾ।
ಅಣ್ಣನ ಮಾತಿನಾಗ ತಸ್ಮಾತ್ರಿಲ್ಲಾ
ಕ್ರಿಯವ ಕೊಟ್ಟರಾದಿನಾ।
ಕುಮಕಿಗೆ ತಕ್ಕೋ ನಮ ಕುದರಿನಾ
ಧೀರ ಆಗಲಿಲ್ಲೊ ಹೊಂಟ ಸಾಹೇಬ
ಇಳದಾನ ಸೂರೇಬಾನ।
ಬಸವಣ್ಣನ ಗುಡಿಯಾಗ
ವದಗಿ ಬಂತಲ್ಲೊ ಅವನ ಮರಣ।
ಬಾಬಾಸಾಬ ಅಂದ ಅರ್ಜುನ।
ಬಾಬಾಸಾಬ ಜೀವದಿಂದ ಹಿಡೀ ಅಂದ್ರ
ಕೇಳಿಲಿಲ್ಲೊ ಕೂಡಿದ ಜನಾ।
ಹಿರೇಕೊಪ್ಪದ ಶಾನಭೋಗ ಬಂದಕ್ಯಾಸ
ಕೊಯಿದ ಸಾಹೇಬನ ಕುತ್ತಿಗಿನಾ।
ರಣಕತ್ಲ ಆತೊ ಆ ದಿನಾ ಜಿ।
ರುಂಡ ಬಿತ್ತ ಚಂಡು ತಕ್ಕೊಂಡ
ರಾತ್ರಿಲೆ ಬಂದರಲ್ಲೊ ತಿರಿಗ್ವಾಕಿ ಬ್ರಾಮ್ಹರ ಧರ್ಮಾ॥೧॥

ಸೋಮಾರ್ಹೋತು ಮಂಗಳಾರುದೇಕ
ಕೂಡಿತಣ್ಣ ದರ್ಭಾರಾ।
ಅಮರಗೊಳ್ಳದ ಮೇಗ ತಂದ ಇಳಸಿಕ್ಯಾಸ
ಹೊಡಸಿದಾನ ತಂಬೂರಾ।
ಮಲಕನ್ ಸಾಹೇಬ ದಂಡಿನ ಸರದಾರಾ।
ಕಾಲ ಕೆದರಿ ಕೆಂಗಳಿಸಿ ಲಢಾಯಕೆ
ಹೊಂಟನಂಣ ರಣಧೀರಾ।
ಬಾಬಾಸಾಬ ಹೊಂಟನಂಣ ರಣಧೀರಾ।
ತಲಿ ಮೇಲೆ ಮುತ್ತಿನ ಅಪ್ತಾಗಿರಿ
ಕೈಯಾಗ ಹಿಡಿದ ಹತಿಯಾರ।
ಮುಂದ ಹುಶಾರಕಿ ಕೊಡುವ ಮಾಲದಾರ।
ದಿಬ್ಬಕ್ಹೋಗಿ ಫರೆಗಟ್ಟಿ ನಿಂತರೊ
ಬಿಗಲ್ಮಾಡಿದ ಸರದಾರ।
ಏಕದಮ್ಮ ಧುಮಕಿಶಾನ ಕುದರಿ
ಮೈಸೂರು ಶೀಮಿ ರಿಸಾಲದಾರ।
ಬಾಳ ದಂಡ ಆತು ಚಕಚೂರಾ।
ಅಮರಗೊಳ್ಳಕ್ಷರದಾರಿ ನರಗುಂದ।

ಹರಿದಾಡಿ ಹೋತೊ ನೆತ್ತರ।
ಹಾಲಭಾವಿಗೆ ತಂದ
ಟೋಪ ಹಚ್ಚಿದಾ ದಂಡ
ದುರುಬಿನ ಸರದಾರಾ।
ಮಂದಿ ಬಿಟ್ಟ ನಡೀತೊ ಮನಿಮಾರಾ।
ಬಾಬಾಸಾಬ ಬಂದ ಸದರಿಗೆ ನಿಂತರೋ
ಸುತ್ತಲಿಲ್ಲ ಯಾರ್‍ಯಾರ।
ದಗೇ ಅತಿ ಕೈವಾಸ ಆಗತೀನಿ
ಪಾರಮಾಡೊ। ಈಶ್ವರ।
ಕುದರಿ ಹಿಡದಿದ್ದ ಮೋತದಾರ।
ಯರಡು ತಾಸ ಹೊತ್ತಿತ್ತು
ಕುದರಿಮೇಗ್ಹತ್ತಿ ಮಾಡ್ಯಾರೊ ನಮಸ್ಕಾರ
ಸಂಣ್ಣ ಅಗಸಿ ತೆರಿಸಿಬಿಟ್ಟರೊ ಕುದರಿ
ದಿವಸ ಇತ್ತ ಮಂಗಳವಾರ।
ಬಿಟ್ಟ ಹೋದರೊ ನರಗುಂದ ಶಾರಾ।
ಅರಣ್ಯವಾಸ ಜಗದೀಸ ಮಾಡಲಿಕೆ
ಕೊಟ್ಟಿದ್ದಾ ಅರಸುಕೀ॥ ಬ್ರಾಮ್ಹರ ಧರ್ಮಾ ॥॥೩॥

ಬಾಬಾಸಾಬರಾ ಮಡದಿ ಪತಿವ್ರತಾ
ಸರಿಯಿಲ್ಲಿವರ ಪುಂಣ್ಯಕ।
ವಿಷಾ ಅಂಬುದು ಪರಾಭವ
ಮಾಡು ತಾಯಿಗಿಂತ ವೇಳೆ ಬರಬೇಕ।
ಹೀಂಗ ಮರಗತೈತಿ ಜನಲೋಕ।
ಅತ್ತಿ ಸೊಸಿಗೆ ಹೇಳತಾಳ
ಪ್ರಾಣ ಇನ್ನೇನಂತ ಇಡಬೇಕ।
ಕಿಲೇದಾಗಿಲ್ಲ್ಯಾ ತಕ ಇರಬೇಕ।
ದಂಡಿನ ಜಪಾಟ್ಯಾಗ ಶಿಗಬಾರದಪ್ಪಾ
ಮುಣುಗೂನು ನಡಿ ಹೊಳಿಯಾಗ।
ಮಗ ಬಿಟ್ಟ ಹೋದ ನಮ್ಮಗ।
ಮೇಣೇವ ಪಾಲಕ್ಕಾಗ ಕುಂಡರವರು ನಾವು
ನಡದ ಹ್ಯಾಂಗ ಹೋಗಬೇಕ।
ಇಂಥಾ ಅನ್ನೇವು ಏನು ಮಾಡಿದ್ದೇವ
ಠಾವಿಕಿ ವೆಂಕೋಬಾಗ।
ದುರಮರಣ ತಂದ ನಮ್ಮಗ।
ಕಲ್ಲ ತುಳದ ಮುಳ್ಳ ನಟ್ಟ
ನೆತ್ತರ ಹರೂತಾವು ಇಬ್ಬರ ಕಾಲ।

ಹೊಳಿದಾರಿ ಹಿಡದ್ಹೋಗುವಾಗ
ಬಾಯಿ ತೆರವರು ಆಕಾಶಕೆ ॥
ಹೊಳಿದಂಡಿಗ್ಹೋದರಾವಾಗ ।
ನಡಕ ನಡಾ ಸುತ್ತಿ ಅಂಗವಸ್ತ್ರದಲೆ
ಬಿಗದಾರ ಗಂಗಾದಾಗ ।
ಹರಹರ ಜಿಗದರು ಗಂಗಾದಾಗ
೧ತು೧

[1]ಳಸಿದಳಾ ಬಾಯ್ಯಾಗ್ಹಿಡದಿರ್ದಂತ
ಹೋದರು ಕೈಲಾಸಕ ।
ನೆನವಿಟ್ಟರೊ ಮರ್ತ್ಯದೊಳಗ ।
ಕೆರೂರ ಮೂಲಕರಿ ಹುಕುಂ ತರಿಸಿದಾ
ಟಪಾಲ್ಕುದರಿಮೇಗ್ಹಾಕಿ ।
ಅತ್ತಿಸೊಸಿಗೆ ನಿಂತ ದಹನ ಮಾಡಿದಾ
ದೇವರಿಡಲಿ ಅವಗ ಸುಖಿ॥೪॥
ಇಷ್ಟ ಸಂಸ್ಥಾನದ ವಳಗ
ಶ್ರೇಷ್ಠ ನಮ್ಮ ಬಾಬಾಸಾಬರ ಹಂಚಿಕೀ ।
ಎಷ್ಟ ತೆಪಸಿದರ ತೆಪ್ಪಲಿಲ್ಲ
ಬರದಿದ್ದ ಬ್ರಮ್ಹ ಲಿಖಿ ।
ಬಿಟ್ಟ ಹೋದರೊ ಚಂದರ ಮುಖಿ ।
ಕಾಲಕುಪಾಯಿ ಯಿಲ್ಲಂತ
ಕೈಯ ಮುಗದ ಹೊಂಟ ತುಳಸಿ ಮುದ್ರಿಕಿ ।
ವೈದಿಕಿ ಬ್ರಾಮ್ಹರು ಅಡ್ಡಬಿದ್ದು ಅಳುವಾಗ
ತೆಲಿಮ್ಯಾಗಿಟ್ಟರ್ಹಸ್ತಿಕಿ ।
ಮಾರಿ ನೋಡಲಿಲ್ಲ ತಿರಿಗ್ಹಾಕಿ ।
ಒಳ್ಳೆ ಲೋಡಿಗಾಂತ ಕುಂಡ್ರು
ದೀಕ್ಷಿತರಿಗೆ ಕುಂಡ್ರಾಕಿಲ್ಲೊ ಹಾಸಿಕಿ ।
ಜಾಡಿ ಹಾಸಿಕಾಸ ಮಲಗುವಾಗ
ಅಳುವರೊ ಕಣ್ಣಿರ್ಹಾಕಿ ।
ಮುಗಲ್ಹರದ ಬಿತ್ತೊ ತಾರಕಿ ।
ಅರಸಪಿಂಡ ಮುಕ್ಕುಂಡ
ಖರೇ ನಿನಗ ಸಲ್ಲದೊ ಶಿಕೇದ ಮುದ್ರಿಕಿ ॥ ಬ್ರಾಮ್ಹರ॥೫॥

ಅಪಾಸಾಬ ಬಾಬಾಸಾಹೇಬರು
ದೇವರ ಮೇಗ ಭಗತಿ ।
ಯಾವ ದೇವರ ಅಡ್ಡಾಗಲಿಲ್ಲ ಅವರಿಗೆ

ಶೆಟವಿ ಹಾಕಿದ ಮಿತಿ
ಏನ ಸರಿತೊ ದೌಲತಿನರತಿ ।
ಗುಡಿ ಮೇಲೆ ಅನಛತ್ರ ಭೋಜನಾ
ಸದಾ ಅದಲ್ಲೆ ನಡುತೈತಿ ।
ದೇವರ ಮುಂದ ಸುಗಂಧ ಪುಷ್ಪಗಳು
ಹಚ್ಚ್ಯಾವು ಅಮರ ಬತ್ತಿ ।
ಮುಂದ ಹರಿದಾಸ ಬಾವಾರ ಕಥಿ ।
ಪಾತ್ರ ಕಂಣೂದು
ಸಾರಂಗಿ ವೀಣೆ ಮೃದಂಗ ತಾಲ ನಡುತೈತಿ ।
ಸರ್ವ ವಾದ್ಯ ತಯ್ಯಾರ
ದೇವರ ಮುಂದ ಆನಿ ಜಲಾಸತೈತಿ ।
ಮುಂದ ಸಂಕ ಸನಾದಿ ಸಂತೀ
ತಳಲುಬೊತಾಟಿಮಾಯಮರತಾಬ
ನಿಶಾನಿ ಮುಂದ ನಡುತೈತಿ ।
ಯರಡು ಬಾಜಿತಿ ಚೋಪದಾರ
ಭಟ್ಟಂಗಿ ಸಾರತೈತಿ ।
ಪಾಯಾಸುದ್ದ ದೌಲತ ನಡೀತಿ ।
ಅರಸರೊಳಗ ಬಲ್‌ಸರಸಿತ್ಲೋದ
ಮುಂದಿದ್ದವರಿಗಿಲ್ಲೊ ಸುಖಿ । ಬ್ರಾಮ್ಹರ ॥೬॥

ಬಾಬಾಸಾಹೇಬ ರಾಮನೀ ಪುರೋಹಿತ
ಸವಾಲ್ ಮಾಡಿದ ಸದರೀಗೆ ।
ಸದರಿನ ಕಂಬಾ ಪೇಟೆಗ್ಹಾಕಿಸಿ
ಮಾರಿದ ಸಾವಕಾರಿಗೆ ।
ಬ್ರಾಮ್ಹಣನ ಬೇಕೆನೊ ಅವನೀಗೆ ।
ಧಣೇರ ಉಪ್ಪ ಉಂಡು
ನಿಂದೆ ಮಾಡತಾರ ತಿಳಿವಲ್ದೀ ಜನರಿಗೆ ।
ಠಳಕರಕ ನುಡಿಕಟ್ಟಿ ಹೇಳಿದನು
ಸಂಪಾಸಿನು ಇಲ್ಲಿಗೆ ।
ನೆನಸ್ತೇನು ನಮ್ಮ ವಸ್ತಾದಿಗೆ ।
ಸೈದ ಹುಶೇನಿ ಸೋನಾಜಿ
ಹೇಳತಾರ ತಾಲ ಹಿಡಿರಿ ಗತ್ತೀಗೆ ।
ರಾಜುಮಲ್ಲ ಉಮ್ಮಾಜಿಯ
ದನಿಯು ಕೇಳಿರಿ ಬೇಗಿನ ಹೊತ್ತಿಗೆ ।
ಬೆಲ ಇಲ್ಲ ಜಾತ ಮುತ್ತೀಗೆ ।
ಹಳೇಹಾಡ ಹಳವಂಡ ತಗೂತಿ

ತುಸಾ ಯಿಲ್ಲೊ ನಾಚಿಕಿ ।
ಹರದಾಸಿ ನಿನಗ ತುಸಾ ಯಿಲ್ಲೊ ನಾಚಿಕಿ ।
ಸಭೆ ರಮ್ಯ ಆಗುವಂತಾದ್ದೇಳೊ
ಬಂದಿತ ಶಹಬಾಸಿಕಿ ॥
ಜನರೆಲ್ಲ ಮಾಡತಾರೊ ದುಖೀ ॥
ಸಮಾಪ್ತಿಯು ॥॥೭॥

***ಕವಿ :*** ರಾಜು ಮಲ್ಲ ಉಮ್ಮಾಜಿ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] **ತ**

## ೯. ನರಗುಂದ ಸಂಸ್ಥಾನದ ಪದ

ಅಳಧರ ನರುಗುಂದ ಸಂಸ್ಥಾನ
ಫಿತೂರ ಮಾಡಿದಾನ ಕಾರಕುನ
ಯಂದೆಂದಿಗಿ ಹೊಗದಂಥಾ
ಹಡ ತಗೊಂಡುರ ಮಂಗಳಾರ ದಿನಾ॥ಪಲ್ಲಾ॥

ಸಮಾಚ್ಯರ ಕುಂತ್ತಿರಚನಾ
ಮುಚ್ಚೆ ಮದಲ ಹುಟ್ಟಿದ ಕದನಾ
ಮುಚ್ಚಿ ಯೀಡುದಿಲ್ಲ ಬಿಚ್ಚಿ ಹೆಳತಿನ
ತೊಳೆದ ಕಾಲ್ಲಾಗ ಹುಟ್ಟಿದ ಕದನಾ
ಕರsಮಿಕದ ತೊಟ್ಟಿವಹಿನಾ
ಕೆಟ್ಟ ಸರದಾರ ಮಾಡಿಕವನಾ
ಹಲ್ಲಿಗೆ ಹರದ ಗುಂಡ ಹಾಕಿ ವಗಿರುತ್ತಾ
ಝುಟಿ ಮುಟ್ಟಿ ಹೆಳ್ಯಾರ ವತನಾ
ದಂಡಿಗೆ ಬಿದ್ದಿತ ಅನಮಾನಾ
ಗೊತ್ತಾ ಹಚ್ಯರ ತೇಳೆದ ಖುನಾ
ಶಿಟ್ಟಿಗೆರಮದರ್ತಾಪಟಾಲಮ
ಶಿಡದ ನಿಂತು ಯೆಲ್ಲಾ ಶೆನಾ
ಚ್ಯಕರ ಮಾಡದೆವು ಯೀದಿನಾ
ಕೊಟ್ಟಾನಂಮ್ಮ ಹೊಟ್ಟಿಗೆ ಆಂನ್ನಾ
ಯಿಂನ್ನ ನಂಮ್ಮ ಕೈಲೆ ಆಗುದಿಲ್ಲುಂತ್ತಾ
ಹೋಗಿಬಿದ್ದಾರ ನಾನಾನ ಬೆಂನ್ನ

ಹಾರತ ಸಾಹೆಬನ ಅವಸಾನಾ
ಬರದ ಪತ್ತರಾ ಕಾರಕೂನಾ
ಯಿಲಾತಿದೊಳಗೆ ಯೊಳಮಂದಿ
ಗೊರನರ ಕೆಳ್ಯಾರು ವರ್ತಮಾನಾ
ಕರ ಮಂದಿ ಕರ್ನಾಟ ಚನಾ
ಆದಾರ ನಂಮ್ಮ ಮ್ಯಾಲೆ ಬೆಮಾನಾ
ಹುಕುಂ ಪರಕಾರ ಕಾರಕುನಾ
ಹೊಕ್ಕಿ ನೊಡ್ಯಾರೊ ಮನಿತಾನಾ
ಹತ್ಯಾರ ಯಿದ್ದವರು ಹಚವ ಮಾಡಾರ
ಯಿಲ್ಲದಿದ್ದರ ಕಳದಿನ ಮಾನಾ॥ಚಾಲ॥

ನಂಮು ಹಿರೆರ ಮಾಡಿದಂಥಾ
ಸಾಸರ ಹೊದಾರ ಯಲ್ಲಾ
ಚು ಕಡೆದ ಮ್ಯಾಲೆ ಹೆರ ಹ್ವಾದಾವ್ವಣಾ
ಆಂದಿ ಕೈಮಿರ ಆದೆವೆಲ್ಲಾ
ಹೆಂಣ ಮಕ್ಕಳ ಸರ ಚ್ಯಪ್ಪೀನ ಟಂಬಾಕಿ
ಯಿತ್ತಾನಂದಾ ಕೈಯಾಗ ಹಿಡದ ಕರವಲ್ಲಾ
ಹೆಚೆಂದ ಪಿಸ್ತುಲಾ ಚಕ್ರ ವಗುವಾಗ ಭಾಲೆ
ಮಾಹಿತ ಯಿಲ್ಲಧಾಂಗ ಝುಗಡತಿ ತಗೊರ
ಯಿರು ಅಂಥಾದೆಲ್ಲ ಸಾಮಾನಾ….*

[1]
…..ವ್ಯಾಡತ ಪಟೆ ಯಿತ್ತಾನಂದಾ
ಸುಳ್ಳಲ್ಲ ಸುರತಿ ಥಾಲ್ಲಾ
ಶುಣ ರಂಗಲಾಲ ತಕೊಂಡಾರ ಬಿರದಾ
ಟುಬಾಕಿ ಯಿತ್ತಾನಂದಾ ಕೈಯಾಗ ಹಿಡದ ಕರವಲ್ಲಾ
ಹೆಚೆಂದ ಪಿಸ್ತುಲಾ ಚಕ್ರವಗುವಾಗ ಭಾಲೆ
ಶರಚಿ ಭಿಲ್ಲ ಹೆಚ್ಚವಾದಾ ಬಾಕಿ
ಬಿಚ್ಯಾವ ಕತ್ತಿ ಕಟಾರ
ಶಂಣ್ಣ ಕೈಚುರ ವಟ್ಟಿಗೆ ಹನೊಂದಾ
ತಿರವ್ಯಾಡತ ಪಟೆ ಯಿತ್ತಾನಂದಾ
ಸುಳ್ಳಲ್ಲ ಸುರತಿ ಥಾಲ್ಲಾ
ಶುಣ ರಂಗಲಾಲ ತಕೊಂಡಾರ ಬಿರದಾ
ನಂಮ್ಮಾ ದುಖಾ ಹೇಳುಣ ಯಾರ ಮುಂದಾ
ಯಿರು ಹಂಥಾ ಶಿಪಾಯೆರ ನೋಡಿ
ಅಳತಾನ ಹೊಳ್ಳಿಡಿ ಕಂಣಿಗೆ ನಿರತಂದಾ

ಮಾಚ್ಚಿ ಕಾಲಿಲೆ ಹೊಕ್ಕಿತ ಚನಾ
ಮರೆದಿ ವುಳಿಲಿಲ್ಲ ಯೆನೆನಾ
ಚಲಮ ಮಾಡಿರ ಭೊಲಿ ಬಡದ ಕಂಡದರೊ
ವುಳಶಿ ಬಿಟ್ಟರೊ ಹಾಲು ಹೈನಾ॥೧॥
ಅಳಧರ ನರಗುಂದ ಸಂಸ್ಥಾನ ॥ ಯೊಡನೆ
ಹು ॥ ಶುತ್ತಾ ಮರದಿವಸಾ
ಮಾಡಬ್ಯಾಡರ ಅಲೆಸಾ
ಪಾಳೆಗಾರರಿಗೆ ಫಂದಿಗೆ ಹಚ್ಚಿ
ಹಿಡಿಬಾರದ ಅವರ ವಿಸ್ವಾಸಾ
ಮೆಣಶಿನ ಸಾಹೆಬ ಕೆಳ ಕ್ಯಾಶ್ಯಾ
ಹಡದ ಚರೆ ಮಾಡ್ಯಾನ ಮೊಸಾ
ಭೆಟಿಗೆ ಬಂದರೆ ಘಟ್ಟಿಲಹಿಡದು
ಲುಟಿ ಮಾಡಿದಾರ ಮುರತಾಸಾ
ಮುಧೋಳ ಮಾಹರಾತ ಕೆಳಿಕ್ಯಾಸಾ
ಮರುದಿನಾ ಕುತ್ತಾ ವುಪವಾಸಾ
ತಂನ್ನ ಮಡದಿಗೆ ಕರದ ಹೆಳತಾನ
ಬಂತ್ತಾ ನಮಗ ಮನದೆಸಾ
ಚಾಂಬುಟಿ ದೆಸಾಯಿ ವಳೆ ಖಾಸಾ
ಘಟ್ಟಿ ಮಾಡಿಕೊಂಡಾನ ಮನಸಾ
ಹತ್ಯಾರ ಯೆಲ್ಲಾ ವೊದ ಕೊಟ್ಟರೆ
ಬಿಡತಾನಂಬೊದು ಭರವಸಾ॥ಚಾಲ॥

ಶಿರಸಂಗಿ ದೇಸಾಯಿಂನ ಕರಶಿ
ಹತ್ಯಾರ ಕೆಳ್ಯಾರೊ ರುಮೊಶಿ
ಹುದಲಿ ಅಂಣಾ ಸಾಹೆಬನ ಬೆದ್ದರರೆ
ಹತ್ಯಾರ ಹೊರಗಳ ಹೊರಶಿ
ತೊರಗಲ್ಲ ಚಿಮಣಾ ಸಾಹೋಗ ಕರಶಿ
ಕೊಟ್ಟ ಹತ್ಯಾರ ಕಂಣಾಗಿ ನೀರ ಸುರಶಿ
ರಾಮದುರಗದ ಅಪ್ಪಾ ಸಾಹೇಬಗ ತರಶಿ
ಹತ್ಯಾರ ಕೊಟ್ಟಾರೊ ವಪ್ಪಿಶಿ
ಸುರಪುರ ನಾಯಿಕ ಅಂವ ಭಂಟಾ
ನಿತ್ತ ಮಾಡಲಿಲ್ಲ ಲಡಾಯಿ
ಸುಳ್ಳ ಬಂಡಾಯಿ ಹಳ್ಳಿಗೊಳ ಸುಟ್ಟ
ಮಲ್ಹಾಡ ನಾಡಗ ಅಂವ ಶಿಷ್ಟ
ತಳೆವಾಡಿ ಪೂಂಡ
ಸಂವತ್ತಾ ಮಾಡ್ಯಾನ ಕಸರತಾ

ಕೊಧಾಂಗ ಹಶಿಧಂಟ್ಟಾ

ಮುಂಡರಗಿ ಭಿಮರಾಯನ ಆಟಾ

ನಿತ್ತಾ ಮಾಡಲಿಲ್ಲ ಲಢಾಯಿ ಸುಳ್ಳ ಬಂಡಾಯಿ

ಹೊದಾರ ಬಿಟಕೊಟ್ಟ

ಯಿಂಗ್ರಚರಗೆ ಹೊಗಿ ಬಿತ್ತಾ ಗಂಟ

ಮುರದಿತ್ತಾ ಸೊಜರ ದಂಡಾ

ಹೆಣಾ ಹೊತಕೊಂಡ ದಿನಾಯೊಳೆಂಬ

ಹಿಡದ ಹಳ್ಳಿ ಹಳಬರನ ಕಟ್ಟಿ॥ಯಿಲ್ಲ॥

ಸಾಮೊದ ಜನಾ ಛಂದ ಮಾಡಿ

ಹಿಡಬೆಕಂದರ ಆಗಲಿಲ್ಲ ಆವರ ಸ್ವಾಧಿನಾ ॥

ಆಳಧರ ನರಗುಂದ ಸಂಸ್ಥಾನ ॥೨॥

***ಕವಿ :*** ಅಜ್ಞಾತ

***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] * **ಒಂದು ಪುಟದ ಅಡಿಯಲ್ಲಿ ಇನ್ನೊಂದು ಪುಟ ಸೇರಿ, ಅಡಿಯ ಪುಟ ಪೂರ್ತಿ ಆಗಿಲ್ಲವೆನ್ನಿಸುತ್ತದೆ.**

# ೧೦. ನರಗುಂದ ಮೇಲಿನ ಹಾಡು

ದೊಡ್ಡ ಶಾರಾ ಪಗಡಿ ಬಾಜಾರಾ ।

ಐತಿ ಬಾಳ ದೂರಾ । ಕಾಣಸ್ವೈತಿ ಚಂದಾ ॥

ಬೆಳವಲಾ ದೇಶ ಬಲು ಸೂರಿ ಆತೊ ನರಗುಂದ॥ಪಲ್ಲ॥

ನಾಡವಳಗ ಇಲ್ಲ ಇದರ ತಾಡಿ ।

ಕಲ್ಲ ಪಡಿಪಡಿ ।

ವೆಂಕೋಬಾನ ಗುಡಿ । ಗುಡ್ಡದೋರ್‍ಯಾಗ ।

ಆ ಗುಡೀ ವಿಸ್ತರಾ ವರ್ಣಿಸಿ ಪೇಳ್ವೆನು ನಿಮಗ ।

ಏನಂದರದರ ವಿಸ್ತಾರಾ ।

ಗಚ್ಚ ಮೌನಾಗಿರಾ ಗಡ್ಡಿಯಾ ತೇರ

ಚಾವಣಿಮೇಗ । ಹಂಚಿನಾ ಲ್ಯಾವಿ ನೋಡು

ಇಳವಿದ ವಿಸ್ತಾರ ಹ್ಯಾಂಗ ।

ಏನ ಗರಡಗಂಬದ ಮೇಗ ೧ಗ೧

[1]ಡಗಿ ।

ಖಂಡೇದ ಮಡಿಗಿ ಹೊಂದಿಶಾನ ಬಡಗಿ

ಶಹಣೆ ಬಲ್ಲಾಂಗ ।
ಯೇನ ಪದರಗಂಬ ನೋಡೊ
ಚದುರ ವಿಚಿತ್ರದೊಳಗ ।
ಯಡಬಲಕ ನೋಡಿದರ ಹುಡಿಕಿ ।
ಬಣ್ಣದಾ ಕಿಡಿಕಿ ॥
ಒಂದು ಬೆಟ್ಟಡಿಕಿಯಷ್ಟು ಕೊರದೀಗ ।
ಏನ ತುಳಸಿಕಟ್ಟೆ ಶೃಂಗಾರವು
ನಡುಗುಡಿಯಾಗ ।
ಕೆತ್ತಿ ಪಡಕ ಹೊಂದಿಸ್ಯಾನ ಮೇಲೆ ।
ಕಬ್ಬಿಣದ ಕೀಲ ।
ಉಕ್ಕಿನಾ ತಾಲ ಕೊಂಡಿ ಅದರಾಗ ।
ಏನ ಗಂಟಿ ಜಾಗುಟಿ
ಪಾತಾಳಂಕಣದಾಗ॥ಇಳುವು॥
ಬಹಳ ಚಾತೂರ್ಯದ ಗುಡಿಯೊ ।
ಸುತ್ತಿನಾ ಪೌಳಿ ಕಲ್ಪಡಿಯೊ ।
ಜರದ್ವಣಿಯದಮ್ಮಸಬರ್ಧಿಡಿಯೊ ।
ಆಮೇಲೆ ತೋರಸ್ತೀನ ನಡಿಯೊ ।
ನೆಲಕ್ಕಿ ಗಚ್ಚು ತಿಳಿಮಡಿಯೊ ।
ಅಲ್ಲಿ ಸಣ್ಣ ಬಿದರಿನಾ ಚಡಿಯೊ॥ಏರು॥

ಬಹಳ್ಹೊತ್ತು ನಿಂತು ನೋಡಿದೆ ।
ಅಕಲದ್ಹಾಂಗದೆ ।
ಹೀಂಗ ಪದೆಪದೇ ನೋಡೊ
ಸುತ್ತ ಬಂದಾ ॥ ಬೆಳವಲಾ॥೧॥

ಉದಿಯಕ್ಕ ವೆಂಕೋಬಾನ ಪೂಜಿ ।
ಆಗೋದು ಬಲ ಸಾಜಿ ।
ಬಾಗಿಲದೊಳು ಬಾಜಿ ಆಗತಾವ ನಾಲ್ಕು ।
ಕಂಚಿನಾ ಕಾಳಿ ನೋಡು
ಹಿಡುವತಾವು ಕ್ಷಣಕ್ಷಣಕೆ ।
ವಾದ್ಯವಾಗೂದು ಅವನ ಬದೀಲೆ ।
ಶಂಖು ಜಾಗುಟಿಲಿ । ತಾಳ ಮದ್ದಲಿ ।
ಬಾರ್ಸಿ ಹಾಡಾಕ ।
ಏನ ವೀಣ ತಾಂಬೂರಿ ಸಾರಂಗಿಯ
ಸ್ವರ ಟೀಕ ।
ಸ್ನಾನಾ ಮಾಡಿ ಬಂದರೊ ಬ್ರಾಹ್ಮರಾ ।

ಹಿಂಡು ಥರಥರಾ ।
ವೋದಿ ಮಂತರ ಮಾಡಿ ಅಭಿಷೇಕ ।
ಏನ ತಾಲಿ ತಂಬಿಗಿಯಿಟ್ಟಕೊಂಡರು
ಯಡಬಲಕ ।
ಅಕ್ಷತೀ ಹಚ್ಚಿದರು ಗಂಧ ।
ಪುಷ್ಪ ಒಂದೊಂದ ಕಿರೀಟವ ತಂದ
ಪುಸ್ತಕದ ಮೇಲೆ ।
ಏನ ಹಸರ ಪಚ್ಚ ಶಿರಪೇಚ
ಹೊಳೂತಾವ ಜುಳಕ ।
ಆಗ ಬಂದಿತೊ ಉಪಾಧ್ಯಾರಗುಮೀ ।
ಗುಡಿಯಂ ದಿಮಿದಿಮಿ ಕಂಚಿನಾ ಸಮೇ
ಉರುತ ಲಕಲಕ ।
ಆ ದೀವಿಗಿ ಬೆಳಕು ಬಿದ್ದಿತೊ ಸಿಂಹಾಸನಕ ।
ಅವರು ಮಲಗು ಮಂಚ ಬಲು ಇಂಬು ।
ತೀಪ ಅದರ ತುಂಬು ।
ಕಂತನಿ ತಲಿಗಿಂಬು । ಅವಗ ಮಲಗಾಕ ।
ಬಹಳ ಸ್ನೇಹದಿಂದ
ಸ್ವಪ್ನ ನಿದ್ರಿ ಮಾಡ್ಯಾರೊ ಬೆಳತನಕ॥ಇಳವು॥

ದೃಥ ಭಕ್ತಿವಂತ ಪೂಜಾರಿ ।
ಆವ ನೈವೇದ್ಯ ತಂದನೊ ಬ್ಯಾರಿ ।
ಹಸೆ ಹಾಲು ಚಿನ್ನಿ ಸಕ್ಕರಿ ।
ತುಪ್ಪದಾ ಆಣ ಬುರಬೂರಿ ।
ಕಾರೀಕಾ ಖಜೂರ ವಣಖೊಬ್ರಿ ।
ಮೇಲೆ ಫಳಾರ ತಂದ ಚೂರಮರಿ॥ಏರು॥

ಇಷ್ಟೆಲ್ಲ ತಂದ ತನ್ನ ಸ್ವತಾ ।
ದೇಹಕ ಹಿತಾ । ಕುಂತ ಅರ್ಪಿತಾ
ಸ್ವಾಮಿ ಸಲಿಸಂದಾ॥೨॥

ಆ ಊರಿಗೆ ಬಾಬಾಸಾಬ ಧೊರಿ ।
ಪಾಗಾದ ಪನ್ನಾಗ ಕುದರಿ ।
ಚಿಷಾನಿಯ ಮರಿ ಬಂತೊ ಶೃಂಗರಿಸಿ ।
ಅದರಳಿವಿನ ಬಂಣದ ಚೌಡಾಲು ಅಂಬಾರಿ ಬಿಗಸಿ ।
ತನ್ನ ರಂಗಮಾಲಿನಾಗ ಧಣಿ ಕೊಟ್ಟ ಅರಮನಿ
ಪಾತ್ರದ ಕೋಣಿಯೊಳು ಹೋಗಿ ಕುಂತರೊ ಪುರಮಾಸಿ ॥

ಏಕಾಂತ ಕೋಣಿ ತಾರೀಪ ।
ರಂಗಮಂಟಪ । ಮಂಚದ ಮೇಲೆ ತೀಪ ।
ಕುತನಿಯ ಗಾಸಿ ।
ಏನ ಬಂಣದ ರಾಜಿಯ
ಗಂಜಿಯ ಹಚ್ಚಡ ಹಾಸಿ ।
ಅಲ್ಲೆ ಹೋಗಿ ಕುಂತರಿಬ್ಬರು ॥
ತಬಕದಾಗ ೧ಮಾ೧[2]ರು ।
ತಂದ ಅಭೀರು ಕೊರಳಿಗೆ ಧರಸಿ ।

ತನ್ನ ಮಾನಿನಿ ಕಂಡು
ಹುರಿಯ ಮಾಡತಾನ ಮೀಸಿ ।
ಬಹಳ ಮೌಜಿಲಿ ಮಾಡುವರೋ ಹ್ಯಾಂಗ ।
ಮಂಚದ ಮೇಗ ।
ಅಡಿ ಚದುರಂಗ ಅವನ ಸೋಲೀಸಿ ।
ಬಹಳ ಕುಶಾಲದಿಂದ ಮಾಡತಾರೊ ನಗಿಹಾಸ್ಯ॥ಇಳವು॥

ಅವ ಬಂದ ಹರಿಯಾಗಿನ ಹೊತ್ತು ।
ಮಹರ್ಬಲಾ ಅವನ ಮಂದಿ ಸುತ್ತು ।
ಇರಬೇಕು ಇಂಥಾ ದೌಲತ್ತು ।
ಏನಬರದ ಬ್ರಮ್ಹ ಲಿಖಿತು॥ಏರು॥

ಧನಿ ತಾನಂಬೂದು ಹಬಿಹಬಿ ।
ಹೊನ್ನಿನಾ ಹಬಿ ।
ದೇವೇಂದ್ರನ ಸಭೆ ಇಳದ ಬೇಗಬಂದ ॥ ಬೆಳವಲ ॥೩॥

ದೊಡ್ಡ ಮಹರಾಯಂದು ಧನಿಕಿಲ್ಲೆ ।
ಗುಡ್ಡದ ಮೇಲೆ ಐತಿ ಬಹಳ ಶಲೆ ।
ನೀರಿನಾ ಜವಳಾ ।
ಆ ಗುಡ್ಡದ ಒಳಗ ನೀರಿನ ವಿಶಾಲ್ಯವು ಬಹಳ ।
ಮತ್ತೊಂದು ಮಾಡ್ಯಾನು ಮಸಲತ್ತು ।
ಜಕೇರಿಯ ಗೊತ್ತು ।
ಸಕಲ ಸಾಹಿತ್ಯ ಹೊಟ್ಟಿಯಾ ಕೂಳಾ ।
ಏನ ಹಗೇವ ಅಂಬರೀ ಕಡಿಸಿ
ತುಂಬಿದರ ಜೋಳಾ ।
ಆಗ ಬಿಟ್ಟಿತು ಪಡವಲ ಗಾಳಿ ।
ಬಂತೊ ಜಡಿ ಮಳಿ ।

ಹತ್ತಿರೇ ಖಾಳಿಗೊಂಡು ಝುಳಝುಳಾ।
ಆಕಾಶಕ ಟೋಪ ಹೊಡುವತಾರೊ ಕೆಂಧೂಳಾ।
ಕಾದಾಡಿ ಕಲಕಿದವೊ ಕಣ್ಣ।
ಬಾರೊ ಕಾಳಣ್ಣ ಮಾರಿ ಸಣ್ಣಣ್ಣ।
ಮಾಡಿದಾನೊ ಕಾಳಾ।
ದುಃ೧ಖ೧[3]ದಲಿ ಕಣ್ಣತುಂಬ
ನೀರ ಬಂದವೊ ಬಹಳ॥ಇಳವು॥

ಅಸ್ಕರೀ ಆತೊ ಲಢಾಯಿ।
ಆಗ ತಪ್ಪಿತೊ ಕಾಳಣ್ಣನ ಕೈಯಿ।
ಶಿಷ್ಟಿಲೆ ರಾಮದುರ್ಗ ಬಾಯಿ।
ಇನ್ನೇನೊ ಇದಕ ಉಪಾಯಿ॥ಏರು॥

ಬಪ್ಪರೇ ಪುಂಡ ಬಹದೂರಾ।
ದೊಡ್ಡ ಸರದಾರಾ।
ರಾಜ್ಯಕ ಜಾಹೀರ ಮಾಡಿದೊಂದೊಂದಾ ॥ಬೆಳವಲ ॥೪॥

ಹಿಂದಿನಾ ಕರ್ಪದನತಗಿ।
ಅರೇವು ಅದರ ಬಗಿ
ಹಿಂದಕ್ಕ ಹೀಂಗಾಗಿ ಹೋಗಿತ್ತೊ ಹಳೆಮಾತು।
ಇಂಗ್ರೇಜಿ ಅವರಿಗೆ
ಮತ್ತೊಂದ್ಮಾಡ್ಯಾರೊ ಮಲಸತ್ತು।
ಬಾಜಿರಾಯನ ಇದ್ದಾಗಿನ ಗುಟ್ಟಾ
ರಾಜನ ಬೊಬ್ಬಾಟ। ಮಾಡಿದಾರ ಹಟಾ।
ಕತ್ತಿ ಕೊಡರೆಂತ।
ಬಹಳ ಬಹಳ ಧಾಂದಲೆ ಪಾಳ್ಯಗಾರರ ಸುತ್ತ।
ಈ ಸುದ್ದಿ ಕೇಳುವದು ತಡಾ।
ಜಲದ ಭಡಭಡಾ ಹೋಗಿ
ತನ್ನ ಗಡದ ಮೇಲೆ ಹೋಗಿ ಕುಂತಾ।
ತನ್ನ ಮಂದಿಗ್ಹುಶಾರಿ ಹೇಳತಾನೊ ತಾ ಸ್ವಸ್ಥಾ।
ಇಂಗ್ರೇಜಿ ಶೋಧಿಸೀ ನೋಡಿ।
ಆದಿತೊ ಗಡಿಬಿಡಿ।
ಬಂದರೋಡೋಡಿ ಊರ ಸುತ್ತಮುತ್ತ।
ನಮ್ಮ ಭೆಟ್ಟಿಗೆ ಬಾರೊಂದದಾವು ಮೂರ ಮಾತಾ।
ನಾ ಬರುವದಿಲ್ಲೊ ನಿಮ್ಮ ಭೆಟ್ಟಿ।
ಮಾಡಬ್ಯಾಡ್ರೊ ಹಟ।

ಬರದ ಲಕೂಟಿ ಕಳುಹಿ ತಾ ಕುಂತ।
ನೀವು ಹೇಳಿದ ಚಾಕರಿಗ್ಹಾಜರ ಇರತೇನಂತ।
ಇಷ್ಟ್ಯಾಕೊ ಬಿಡೊ ನಿನ್ನ ಕೋಪಾ।
ಚಲ್ಲಿಶಾವೊ ಟೋಪ।
ಗಂಧಕ ಮದ್ದನುಪ್ಪ ಹೇರಿ ಕಳಸುತ।
ರಖವಾಲಿ ಕುದರಿ
ಧಾರವಾಡಕ ಕಟ್ಟಿದವು ಸೇತ॥ಇಳವು॥

ಅವರಿಬ್ಬರದು ಸುರಳೀತಾ।
ಮಾತಾಡತಾರೊ ಏಕಾಂತ।
ನೀ ಬಿಡೊ ಮನಸಿನನ್ನ ಚಿಂತಾ।
ಬುದ್ಧಿ ಹೇಳತಾರೊ ಹೀಂಗಂತಾ
ಸವಿ ಅಡಿಗಿ ಊಟ ಮಾಡೊ ಕುಂತಾ।
ನಿನ್ನ ಮಾಲಿನೊಳಗ ನೀ ಸ್ವಸ್ಥ॥ಏರು॥

ಇಂಗ್ರೇಜಿ ಆದರೊ ಮಿತ್ರ।
ನನಗ ಬಾಯಿ ಸತ್ವ। ಆಗುವ ಕರ್ತುತ್ವ।
ಪೇಳುವೆ ನಿನ್ನ ಮುಂದ ॥ ಬೆಳವಲ ॥ಜ॥

ಧನಿ ಕಡೇ ಇಲ್ಲ ಜರ ಕುಂದ।
ಅನ್ನೇವು ಯಾವದಾ।
ಹೇಳಿ ಕಳುವಿದಾನೆಲ್ಲ ನುಣ್ಣಗ।
ಮಸಲತ್ತ ಹುಟ್ಟಿತೊ
ಮಹಾ ಚದುರ ಹೊಟ್ಯಾಗ।
ಈ ಊರ ಪೈಕಿ ಹಳಬರಾ।
ಸವ್ವಾನೂರ ಬಾರಾ।
ಹಿರದ ಕತ್ತಿ ಪಾರಾ ಬಂತೊ ಅಗಸ್ಯಾಗ।
ನಾವು ಲಢಾಯಿ ಮಾಡತೇವು
ಟೋಪ ಕೊಡುವದಿಲ್ಲ ನಿಮಗ।
ಧನಿ ತೆರದ ಹೇಳತಾನ ಬಾಯಿ।
ಮುಗದನೊ ಕೈಯಿ।
ನನಗ ಅಪಾಯಿ ತಂದಿರೋ ಈಗ।
ಬಹಳ ದೈನಾಸ ಬಿಂಟ್ಟುಂ[4]ಹೇಳತಾನೊ ಮಂದ್ಯಾಗ।
ಆಗುವಂತ ಸತ್ತಕೀರ್ತ್ಯಾಗಲಿ।
ಹೋಗಲೀ ನಮ್ಮ ತೆಲಿ।
ಅದಾವೇನ ಮೊಲಿ ನಮ್ಮ ಯದಿಮೇಗ।

ಸಂಕದಾಳ ನಾಯಿಕಾ ಶಿಟ್ಟಾದನೊ ಧನಿಮೇಗ ।
ಏನು ಮುನಿದೊ ಮೋಕಿನ ಮೇಗಿನ ದಂಡಾ ।
ಮೆಣಸಿನ ಸಾಹೇಬನ ಚಂಡಾ ।
ತಂದಾರು ಕೋಕೊಂಡ ಕಟ್ಟಿದರು ಹೊರಗ ।
ಬಹಳ ಬೆಂಕಿ ಬಿದ್ದಿತೊ ಇಂಗ್ರೇಜರ ಹೊಟ್ಯಾಗ ।
ಟೋಪ ಹೂಡಂದ ನರಗುಂದ ಮೇಲಾ ।
ಸಂಣ ಜಂಜಾಲಾ ।
ಟುಬಾಕಿ ಪಿಸ್ತೋಲ ಕರೂಲಿ ಕೈಯಾಗ ।
ಏನ ಗದ್ದಿಕಡಾಟಾ ಮಂಗಳಾರ ಮಧ್ಯಾನದಾಗ॥ಇಳವು॥

ಮಳ್ಳರಸು ಕಿಲ್ಲೇದ ಮೇಗಿಂದಾ ।
ತಿಳಿಯದಲೆ ಇಳಿದು ತಾ ಬಂದಾ ।
ಮನದೊಳಗ ಹುಟ್ಟಿತೊ ಜಿದ್ದಾ ।
ಹರುಷದಲೆ ಇಳದ ಹೊರಬಿದ್ದಾ ।
ಅವರ ಕೂಡ ಮಾಡಿದನೊ ಯುದ್ಧಾ ।
ಇಂಗ್ರೇಜಿ ಸೋಲಿಸಿ ಗೆದ್ದಾ॥ಏರು॥

ಸೊಜರಾ ದಂಡ ಬಿತ್ತು ತೂರೆ ।
ಕಡದ ಶರೆಸೂರೆ ।
ಹುಡಕತಾರ ಧೊರಿ ।
ಕೈಶರೀ ಆದಾ ॥ ಬೆಳವಲಾ॥೬॥

ಆ ಲಥಾಯಿ ಸುದ್ದಿ ಕೇಳಣ್ಣಾ ।
ಕತ್ತಿ ಥಣಫಣಾ ।
ದಾರಿಗುಂಟ್ಹೆಣಾ ಬಿದ್ದಿದವೊ ಎಷ್ಟಾ ।
ಇಂತಾ ನಷ್ಟಾ ।
ಪ್ರಾಯದವರ ಮಾರಿ ಮೇಗ ದೆಸಿ ।
ಕಾಣುತೈತಿ ಬೇಸಿ ।
ವತ್ತಿ ಮಕ ಮೀಸಿ ।
ಬಂದದಾವೀಟೀಟಾ ।
ಏನ ಬಗರಿ ಗಡ್ಡ
ರಣಗೂದಲ ಜಾಡಿಸಿ ಬಿಚ್ಚಿ ।
ಅವರು ತೊಟ್ಟಾರೊ ಚಬಕಿನ ಚಂಣಾ ।
ಎದ್ದಿಸ್ಯಾರೊ ಮಣ್ಣ ।
ಸುತ್ತಿದರೊ ಸಂಣ ಕಾಸಿ ನಡಕಟ್ಟಿ ।
ಮೈ ವಳಗ ಚಂದ

ಚಿಲಕೋತಿನ ಅಂಗಿಯ ತೊಟ್ಟ।
ತಮ್ಮ ಧಣಿಯರಿಗೆ ಮುಜರಿಯಾ ಹೊಡದು।
ಕತ್ತಿಡಾಲ್ಹಿಡಿದು।
ಕರೂಲಿ ಗುಂಡ ಬಡಿದು
ಕಾಯ ಘಟ ಬಿದ್ದು।
ರಣದೊಳಗೆ ಮಡಿದ ಮಲಿಗ್ಯಾರೊ
ದಾರಿಗೆ ತಲಿಗೊಟ್ಟು।
ಕೋದ ಕುರೀ ಹಾಕಿದ್ಹಾಂಗ ಪಾಲಾ।
ರಕ್ತ ಝುಲಝುಲಾ।
ಭೂಮಿ ಉಳಿಯಲಿಲ್ಲ ಒಂದು ಯಳ್ಳಷ್ಟು।
ಏನ ಕರಳ ಪುಚ್ಚ ಹೊರಬಿದ್ದವೊ
ಹೊಟ್ಯಾಗ ನಟ್ಟು॥ಇಳವು॥

ಅವರ್ಹೆಂಡರದು ಬಹು ಸೂರಿ।
ಬಳಿ ವಡದು ಕರಿಮಣೀ ಹರಿಂದು೧[5]
ಅವರಕ್ಕತಂಗೇರು ಗೋಳ್ಯಾಡಿ।
ಬಡಕೊಂಡ ಬಾತದಾವೊ ಮಾರಿ।
ಅವರವ್ವನ ಹೊಟ್ಟ್ಯಾಗ ಕುಮರಿ।
ಗೂಡಿಸೀ ಹಾಕತಾಳ ಭೋರಿ॥ಏರು॥

ಏನ ಲಢಾಯಿ ಮಾಡಿದರೊ ಗುರ್ತಾ।
ಸತ್ತುಹೋದರು ವ್ಯರ್ಥಾ।
ಅವರದೇನ ಸ್ವಾರ್ಥಾ।
ಆಗಲಿಲ್ಲೊ ಮುಂದಾ ॥ಬೆಳವಲಾ॥೭॥

ಏನ ಫಿತುರ ಮಾಡಿದೊ ಬೇಮಾನ।
ದೊಡ್ಡ ಕಾರಕೂನ। ಉಂಡ್ಯೊ ನನ್ನ ಬೋನ।
ತಿರಿಗಿದ್ಹಾಕೂವಾ।
ಮುಂದ ಹ್ಯಾಂಗ ಗುಣಕ ಮೆಚ್ಚುವನೋ ದೇವರಾ।
ನನ್ನ ಗಂಡನ ಪಂಜಲೆ ಉಂಡಿ।
ಐಶ್ವರ್ಯವು ಕಂಡಿ।
ಶೇಲ ಹೊತ್ತಕೊಂಡಿ। ಶರಗ ಜರತಾರ।
ಅಂತಾದು ಏನ ಮಾಡಿದ್ದರಯ್ಯ ನಮ್ಮವರ।
ನನಗ ಏನು ತಂದ್ಯೊ ವನವಾಸ।
ಹತ್ತಲಿ ನನ್ನ ದೋಷಾ।
ನನ್ನ ಸರಿಯಿಲ್ಲ ನಿನಗ ಯಾರ್ಯಾರ।

ಏನ ಅತ್ತಿಯು ಸೊಸಿಯು
ತಗದ ದುಃ೨ಖ೨[6] ಮಾಡುವರಾ ।
ಎಷ್ಟಿತ್ತೊ ಮನಸಿನಾಗ ಜಿದ್ದಾ ।
ತೋಸಿದೆಲ್ಲೊ ಮದ್ದಾ ।
ಟೋಪ ಹಾರಿಹೋಗಲಿಲ್ಲೊ ದೂರದೂರಾ ।
ನಿಮ್ಮವ್ವನ ನೆಂಟ
ಬಹಳ ಮಾಡಿದೆಲ್ಲೊ ಫೇರಾ॥ಇಳುವು॥

ಕಾರಕೂನ ಬಹಳ ಶಿಟ್ಟಿಲೆ ।
ಗುರುಕಾಸಿಹೋದ ಮೈಮೇಲೆ ।
ನಿನಗ್ಯಾಕ ಹೆಂಗಸೂ ಬಾಲೆ ।
ಕಳಿಶಾನ ಉಟ್ಟಿರುವ ಶಾಲೆ ।
ಈ ಕ್ಷಣಾ ಸೊಜರು ದಂಡ ಬರಲೆ ।
ನಿನ್ನ ಹಿಡಕೊಡತೇನ ಕೈಯಲ್ಲಿ॥ಏರು॥

ಅತ್ತಿ ಮನಸಿನಾಗ ಕಸವಿಸಿ ।
ಕುದರಿ ಮೇಗ ಸೊಸಿ ।
ಹೋಗಿ ಧುಮಕಾಸ್ಗಿ
ಹೊಳಿಯೊಳು ಬಿದ್ದು ॥ಬೆಳವಲಾ॥ಲ॥

ಅರಮನೀ ಆದಿತೋ ಲೂಟಿ ।
ಮಹಾರಾಯ ದೊಡ್ಡಪ್ಯಾಟಿ ।
ಜಿಂದಗಾವಿ ಕಟ್ಟಿ ಹೇರುವದು ಕಂಡೆ ।
ಪಾಂಡವರ ಮನಿಯ ಕೌರುವರು
ಸುಲಿಗಿಯಾ ಮಾಡೆ ।
ಧನಿ ಹೊರುವ ಶೇಲ ಶಕಲಾತಿ ।
ಮುಂಡಾಸವು ಬತ್ತಿ ।
ಹಾಕಿದಾವೊ ಸುತ್ತಿ ಗೂಟಕ ಮೋಡಿ ।
ಏನ ಚಂದ ಚಂದಡಗಲಿಟ್ಟಿವೊ
ಮುರಿಗಿಯ ಮಾಡಿ ।
ರಾವುತರ ಕುದರಿ ಸಾಮಾನ ।
ಹೇಳಲಿನ್ನೇನ ।
ಹಾಕುವ ಜೀನ ರೇಸಿಮೀತಡಿ ।
ಏನ ಮಾರಿ ಮಾರಿ
ಕಬ್ಬಿಣದ ಸರಾಸರಿ ಗೊಂಡೆ ।
ಪಟ್ಟಣಕ ದೊಡ್ಡ ಸಾವಕಾರ ।

ಬೆಳ್ಳಿ ಭಂಗಾರು ಮಾಣಿಕಕ ಚೂರ ।
ಮುತ್ತಿನಾ ದಂಡಿ ।
ಏನ ಬೆಳ್ಳಿ ತಳಿಗಿ ಹರಿವಾಣದ ಚಿನ್ನದ ಗಿಂಡಿ ।
ಒಕ್ಕಲಿಗೇರ ಮುರವತ್ತು ।
ಕುಡಮಿಣಿ ಸುತ್ತು ।
ಹೂಡುವ ಎಂಟೆತ್ತು ದೊಡ್ಡಹಳಿ ಬಂಡಿ ।
ಏನ ಜತ್ತಿಗಿ ನಾಗೋಸ
ಬಿತ್ತುವ ಕೂರಿಗಿ ಶಡ್ಡಿ ।
ರೇಸಿಮೀ ಬದಕ ಬಲ ಹಸಾ ।
ಕಾಣಸ್ತಾವ ಕಾಸಾ ।
ಶೀರಿ ಕುಪ್ಪಸಾ ಬ್ರಾಹ್ಮರುಡು ಮಡಿ ।
ಏನ ಜವಳಿ ಅಂಗಡಿ ಹೊಕ್ಕ
ಸುಲಿಗಿಯಾ ಮಾಡಿ ।
ರೇವಡಿಗಾರಾ ಅಂಗಡಿಯ ಮೇಲಾ ।
ಮಾಜೂಮದ ಹಾಲಾ ।
ಗರ್ದಿ ಹುರಕಡ್ಲಿ ಚೂರ್ಮರಿ ಉಂಡಿ ।
ಏನ ಸಕ್ಕರಿ ಬದಕು ಮುಕ್ಕ್ಯಾರ ಪಾವನ ಮಾಡಿ॥ಇಳವು॥

ನರಗುಂದಕ ಬಂದಿತೋ ಕಾಲಾ ।
ಯಾರ‍್ಯಾರು ಇಳವಿಕೊಳಲಿಲ್ಲ ।
ಕೋಣತದ ರೊಕ್ಕದಾ ಚೇಲಾ ।
ಕಳಕೊಂಡ ಕುಂತಾನೊ ಚಿನಿವಾಲಾ ।
ಊರ ಬಿಟ್ಟು ಹೋದರೋ ಎಲ್ಲಾ ।
ಮನಿಮಾರಿನೊಳಗ ಯಾರಿಲ್ಲಾ॥ಏರು॥

ಧರಿಯೊಳು ಕಬ್ಬೂರ ಶಾರ ।
ಕಲ್ಲಮೇಶ್ವರಾ ।
ಮಾಡಿದ ಚಮತ್ಕಾರಾ ।
ಲಾವಣೀ ತಂದಾ ॥ ಬೆಳವಲಾ ॥೯॥
**॥ ಸಮಾಪ್ತಿಯು ॥**

*** /song stress/ಬಾಳಿ ಇಂಟಿ ಗುಳೇದಗುಡ್ಡ ೩೦ನೇ ಜಾನೆವಾರಿ ೧೮೭೪ ಇ ॥ (ಒಂದು ಸಂಕ್ಷಿಪ್ತ ಸಹಿ ಇದೆ)**

*ಕವಿ :* ಕಬ್ಬೂರ ಕಲ್ಮೇಶ್ವರಾ
***ಕೃತಿ :*** ಫ್ಲೀಟರು ಸಂಗ್ರಹಿಸಿದ ಲಾವಣಿಗಳು

[1] ಗು? ಗೂ?

[2] ಪೂ

[3] ಖ್ಕ

[4] ಟು

[5] …………..

[6] ಖ್ಕ

## ೧೧. ನರಗುಂದದ ವೀರ ರಕ್ತ ಪ್ರವಾಹ

ಬಾಬಾ ಸಾಹೇಬ ಮಹಾರಾಜರ ದೌಲತ ಬಾಳದಿಂದ ರಾಜುಕಿ
ತಮ್ಮ ಕೇಳೊ ಬಾಳದಿಂದ ರಾಜುಕಿ
ಪುಣೆ ಚೆನ್ನಪಟ್ಟಣತನಕ ಮೆನಸನ್‌ಸಾಬ ಒಬ್ಬ ದೊರಿ
ವಿಲಾಯತಲಿಂದ ಹುಕುಂ ತರಿಸಿದರೊ ರಾಜರಿಗೆ ಹಾಕುದೈತಿ ಸೆರಿ
ಕತಿ ಕಟ್ಟಿ ಹೊರಸಿದರು  ಹೋ|| ಜಿ

ಮೊದಲ ಮುಂಚೆ ಜಮಖಂಡಿ ಅರಸಗ ಹಿಡಿದಾರಣ್ಣ ಕೈ ಸೆರಿ
ತಮ್ಮ ಕೇಳೋ ಹಿಡಿದಾರಣ್ಣ ಕೈಸೆರಿ
ಮೆಣೆ ಪಿಂಜರದಾಗ ಹಾಕಿದರೊ ಜಮಕಂಡಿ ಆತೂ ಶರ್‌ಸುರಿ
ಸಿಟ್ಟಿಗೆದ್ದು ತನ್ನ ಮುನಸುಪಗ ಹೇಳತಾನೋ ಜಲ್ದಿ ಮಾಡಿ ಪತ್ರ ಬರಿ
ಬಾಬಾಸಾಹೇಬಗ ಬರೆದ ಪತ್ರರವಾನಿಯಾಗಬೇಕು ಧನ್ ಕುದರಿಯ
ಮಾರ್ಬೋಲಾ ಹೊ || ಜಿ

ಕತ್ತಲದಾಗ ಪತ್ರನೋಡಿ ಸಣ್ಣದ ಮಾಡಿದ ಮಾರಿ
ಬಾಬಾಸಾಹೇಬ ಹಿಡಿದನು ಜಮಕಂಡಿ ದಾರಿ
ಬುಧವಾರ ದಿವ್ಸ ಉದಯ ಹಾಯುವದರಾಗ ಸಾಹೇಬಗಾತು ಮುಜರಿ
ಏನು ಭರ್ತಿ ಜಮಕಂಡಿ ಕಛೇರಿ
ಕುರ್ಚೆದ ಮೇಲೆ ಕುಂತಸಾಹೇಬ ಹಲ್ಲ ತಿಂದ ಕರಿಕರಿ ಹೊ||ಜಿ

ಇವರನ್ನ ನೋಡಿ ಹಲ್ಲತಿಂದ ಕರಿ ಕರಿ
ಅಂತಾ ಅನ್ನೇವು ನಾವೇನು ಮಾಡೆವಿ ಹಲ್ಲ ಯಾಕ ತಿಂತಿರಿ
ಅಪ್ಪಣೆ ಕೊಟ್ಟು ನಡಿಯೆಂದರು ನರಗುಂದ ಕಿಲ್ಲೆ ತೆರವು ಮಾಡಿರಿ
ಹೊಂಡ ಒಡೆಯಿಸಿ ಬಂಡಿ ಕೆಡವಬೇಕು ಸುತ್ತಾಗಬೇಕು ದಾರಿ
ಇದರ ಹೊರ್ತ ಊರಾಗಿನ ಕೆರಿ ಹೋ|| ಜಿ

ಬಾಬಾಸಾಹೇಬ ನರಗುಂದಕ್ಕ ತಿರುಗಿ ಬಂದು ಪಲ್ಲಕ್ಕಿನ ತಗದಾರೊ ಯಂಕೋಬಾನ
ತೋಫ ಹಾರಿಸ್ಕಾರೊ ಧನ್ ಧನ್
ಸುದ್ದಿ ಕೇಳಿತು ಸುತ್ತಲಿನ ಜನ
ನವಲಗುಂದದ ಸುಭೇದಾರ ಮೆನಸನ್‌ಸಾಬಗ ಪತ್ರಬರೆದ ಮರುದಿನ
ನರಗುಂದ ಬಂಡಾಯ ಮಾಡಲಿಕ್ಕೆ ತಯಾರ ಮಾಡ್ಯಾನೋ ಸಾಮಾನ  ಹೊ||ಜಿ

ಇಷ್ಟು ಬರೆದಾನ ವರ್ತಮಾನ
ಮೆನಸಿನಸಾಹೇಬ ರಾಮದುರ್ಗಕ್ಕೆ ನೇಮಿಸಿ ಬಂದ ಅಯತಾರ ದಿನ
ತೋಟದಾಗ ಇಳಿದು ಕರೆಯ ಕಳುಸಿದನು ಸಿಟ್ಟಲೆ ರಾವಸಾಹೇಬರನ
ಆಗ ಬಾಯಿ ಬಿಡತಾವೋ ಸಿಪಾಯಿ ಜನ
ಇಷ್ಟು ಮಾತಿನ ಧೈರ್ಯಸಾಲದೆ ಹೊಂಟರಣ್ಣಾ ಸೂರೇಬಾನಕ  ಹೊ|| ಜಿ

ಸೂರೇಬಾನ ಬಸವಣ್ಣನ ಗುಡಿಯಾಗ ಒದಗಿ ಬಂತು ಮರಣ
ಬಾಬಾಸಾಹೇಬ ಹೊಂಟನೋ ಅರ್ಜುನಾ
ಹಿರೇಕೊಪ್ಪದ ಶಾನುಭೋಗ ಹೋಗಿ ಕೊಂದಾನೋ ಸಾಹೇಬನ ಕುತ್ತಿಗಿನಾ
ರಣ ಕತ್ತಲ ಆಯಿತೊ ಆದಿನ
ದಿಡಾ ಬಿತ್ತು ಚಂಡುತೊಗೊಂಡು ಬಂದರಣ್ಣ ತಿರಗುಹಾಕಿ  ಹೊ|| ಜಿ

ಊರಮುಂದಿನ ಅಗಸಿಗೆ ತೂಗ್ಹಾಕಿ
ಸೋಮರಾ ಹೋತು ಮಂಗಳವಾರ ದಿನ ಕೂಡಿತಣ್ಣಾ ಗಲ್‌ಬಲಾ
ಇಂಗ್ರೇಜಿ ದಂಡು ಕುಡಿತಣ್ಣಾ ಗಲ್‌ಬಲಾ
ಅಮರಗೋಳದ ಯದ್ದಿನ್ನಿಮೇಲೆ ಹೊಡಿಸಿದರು ತಂಬುನಾ
ಮಲಕರ್ಮ್‌ಸಾಂಬ ದಂಡಿನ ಸರ್ದಾರಾ  ಹೊ|| ಜಿ

ಏಕ ಧುಮಕಾಶೇನ ಕುದರಿ ಮೈಸೂರ ಸೀಮಿ ಸರ್ದಾರ
ಬಹಳ ಮಂದಿ ಆಯಿತು ಚಕ್‌ಚುರಾ
ಅಮರಗೋಳ ನರಗುಂದಕ ಹರದಾರಿ ಹರದಾಡಿತೋ ನೆತ್ತರ
ತಮ್ಮ ಕೇಳೋ ಹರದಾಡಿತೋ ನೆತ್ತರ
ಹಾಲಬಾವಿಯ ಮೇಲೆ ಹಚ್ಚಿದರೊ ದಂಡಿನ ದರ್ಬಲಾ  ಹೊ||ಜಿ

ಮಂದಿ ಬಿಟ್ಟ ಹೊಂಟಿತೋ ಮನಿಮಾರಾ
ಬಾಬಾಸಾಬ ಅಪ್ಪಾ ಸಾಹೇಬರು ದೇವರ ಮೇಲೆ ಬಾಳ ಭಕ್ತಿ
ಯಾವ ದೇವರು ಅಡ್ಡಾಗಲಿಲ್ಲ ಸೆಟವಿ ಬರೆದ ಲಿಖಿ
ಏನ ಸರಿತೊ ದೌಲತ್ತಿನ ರೀತಿ
ಬ್ರಹ್ಮರ ಧರ್ಮ ಸರಿಯಿತಿಲ್ಲಿಗೆ ಮುಳುಗಿತು ಅವರ ಅರಸುಕಿ  ಹೊ|| ಜಿ

ಜನರೆಲ್ಲ ಮಾಡತಾರ ದುಃಖ
ಬಾಬಾಸಾಬ ಯಂಕುಬಾಗ ಮಾಡ್ಯಾನೊ ನಮಸ್ಕಾರ
ಸಣ್ಣ ಅಗಸಿಲೆ ಬಿಟ್ಟಾರ ಕುದರಿ ದಿವಸ ಇತ್ತು ಮಂಗಳವಾರ
ಬಿಟ್ಟ ಹೋದಾರೋ ನರಗುಂದ ಶಹರಾ
ಅತ್ತಿ ಸೊಸೆಗೆ ಹೇಳತಾಳ ಇಲ್ಯಾತಗ ಇರಬೇಕ  ಹೊ॥ ಜಿ

ದಂಡಿನ ಜಪಾಟ್ಯಾಗ ಸಿಗಬಾರದವ್ವ
ಮುಳುಗುನ ನಡಿಯ ಗಂಗಾದಾಗ ಮಗಬಿಟ್ಟ ಹೋದ ನಮಗ
ಅತ್ತೆವ್ವಾ ಮೆಣೆ ಪಲ್ಲಕ್ಕ್ಯಾಗ ಕುಂಡ್ರೋರು
ದಾರಿ ಹ್ಯಾಂಗ ನಡಿಬೇಕ
ಅಂತಾ ಅನ್ನೇವು ನಾವೇನು ಮಾಡೇವು ಠಾವಕಿ ಇರಲಿ ಯಂಕುಬಾವ
ಮರುಮರಣ ತಂದ ನಮಗ  ಹೊ॥ ಜಿ

ದಾರಿ ಹಿಡಿದು ಅವರು ಹೋಗುದರೊಳಗ ಬಾಯಿ ತೆಗೆದರೂ ಆಕಾಶಕ
ಹೋಗಿ ನಿಂತಾರೊ ಗಂಗಾದಾಗ ಅಂಗುಸ್ತ್ರದಲ್ಲಿ
ನಡಕ ನಡಾ ಕಟ್ಟಿ ಕೊಂಡು ಜಿಗಿದಾರೊ ಗಂಗಾದಾಗ
ಹರಾ ಹರಾ ಅಂತಾ ಜಿಗಿದಾರೊ ಗಂಗಾದಾಗ
ತುಳಸಿದಳಾ ಬಾಯಲಿ ಹಿಡಿದಾರೊ ಹೊ॥ ಜಿ

ಹೋದಾರೋ ಕೈಲಾಸಕ ಇಟ್ಟಾರೊ ಮರ್ತೆದೊಳಗ
ಕೆರೂರು ಮಾಲಕರಿ ಹುಕುಂ ತರಿಸಿದನೊ
ಅತ್ತೆ ಸೊಸೆಗೆ ನಿಂತು ದಹನ ಮಾಡಿದನೊ
ದೇವರಿಡಲಿ ಅವನಿಗೆ ಸುಖಿ ಜನರೆಲ್ಲ ಮಾಡತಾರ ದುಃಖಿ
ದನಿಯರ ಉಪ್ಪುಂಡು ನಿಂದಿ ಮಾಡತಾರೊ । ಇಂಥವರಿಗೆ ಇಲ್ಲ ಸುಖಿ  ಹೊ॥ಜಿ

ಠಳಕ ಠಳಕ ನುಡಿಕಟ್ಟಿ ಹೇಳತೇವೋ ಸಂಪಾಸಿತೋ ಇಲ್ಲಿಗೆ
ಮಮ್ಮದಸಾಬ ಸಕಲಿ ಹೇಳ್ಯಾರೊ ಬೇಗಿನ ಹೊತ್ತಿಗೆ
ಬೆಲೆಯಿಲ್ಲೊ ಜಾತ ಮುತ್ತಿಗೆ
ಬ್ರಹ್ಮರ ಧರ್ಮ ಸರಿಯಿತು ಇಲ್ಲಿಗೆ ಮುಳುಗಿತೊ ಅವರ ಅರಸುಖಿ
ಜನರೆಲ್ಲ ಮಾಡತಾರೊ ದುಃಖಿ  ಹೊ॥ ಜಿ

***ರಚನೆ :*** ಶ್ರೀ ಎಂ. ಆರ್. ಸಕಲಿ
***ಕೃತಿ :*** ಕ್ರಾಂತಿವೀರ ಬಾಬಾಸಾಹೇಬ

# ೧೨. ಲಾವಣಿಯಲ್ಲಿ ನರಗುಂದ ಬಂಡಾಯ

ನೀವು ಕುಳಿತು ಕೇಳಿರಿ ಸರ್ವಜನಾ । ನರಗುಂದ ಬಂಡಾಯದ ಕಥನಾ ।
ಬಾಬಾಸಾಹೇಬ ಕೊಲ್ಲಿಸಿದ ತಾನಾ । ಆಂಗ್ಲರ ಮೆನಸನ್ ದೊರೇನಾ॥೧॥

ಸುದ್ದಿ ಕೇಳಿ ಬಂದರೋ ಕಮೀಶನರಾ । ದಂಡಿತ್ತೊ ಅತಿ ಭಯಂಕರಾ ।
ನರಗುಂದ ಸುತ್ತು ಮುತ್ತು ಪಾರಾ । ಬಾಬಾ ಸಾಹೇಬಗಿದ್ದಿಲ್ರಿ ದರಕಾರಾ॥೨॥

ಮುಂಡರಗಿ ಭೀಮ-ರಾಯನಿಗೆsss । ಸುರಪೂರ ಊರ ನಾಯಕಗ ।
ಪತ್ರ ಬರೆದ ತಾನು ಅವರಿಗೆ । ಸಹಾಯಕ್ಕೆ ಬರಬೇಕ್ರಿ ನೀವು ನನಗೆ॥೩॥

ಸರ್‌ಮಾಲಕಂ ಸಾಹೇಬರಾ । ಪತ್ರ ನೋಡಿ ಆದರೋ ತಯ್ಯಾರ ।
ಬನಿಯಾ ಬಾಪು ಹರಾಮ ಖೋರಾ । ಆಂಗ್ಲರಿಗೆ ಕೊಟ್ಟಾನೊ ಫಿತೂರಾ॥೪॥

ಮದ್ದಿನಲ್ಲಿ ರಾಡಿ ಬೆರೆಸಿದರಾ । ಯುದ್ಧದಲ್ಲಿ ಸೋಲಿಸಲು ಅವರಾ ।
ಕಾಳಗ ನಡದೀತೊ ಘನಘೋರಾ । ಮದ್ದ ಹಾರಲಿಲ್ಲ ಒಂದ ಚೂರಾ॥೫॥

ಸಹಾಯಕ್ಕ ಬರಲಿಲ್ರೀ ಯಾರ‍್ಯಾರ । ಬಾಬಾಸಾಹೇಬ ಅಂಜದಾದಾನೊ ಧೀರಾ ।
ಅರಮನೆಗೆ ನಡದಾನೊ ಸರದಾರಾ । ಸುರಿಸುತ ಬಹಳ ಕಣ್ಣೀರಾ॥೬॥

ನಮಸ್ಕಾರ ಮಾಡಿದ ತಾಯಿಗೆ । ಹೇಳತಾನೊ ತನ್ನ ಹೆಂಡತಿಗೆ ।
ಎಂಥ ಹೊತ್ತು ಬಂದಿತ್ತೋ ನನಗೆ । ನನ್ನ ಜನರು ಕೊಯ್ದರೊ ಕುತ್ತಿಗೆ॥೭॥

ಉಳಿಸಿಕೊಳ್ಳಿರಿ ನೀವು ನಿಮ್ಮ ಮಾನಾ । ಈಗ ಓಡಿ ಹೋಗುವೆ ನಾನಾ ।
ಎಂಥ ಹೊತ್ತು ತಂದೆಯೊ ವೆಂಕಟರಮಣಾ । ಆದೀತೊ ಕಡೆಯ ದರ್ಶನಾ॥೮॥

ಬಾಬಾಸಾಹೇಬ ಫರಾರಿಯಾದಾ । ಆಂಗ್ಲರಿಗೆ ಕೈವಶ ನರಗುಂದಾ ।
ಯೂನಿಯನ್ ಜಾಕಾವು ಅಂದಾ । ಕಿಲ್ಲೇದಮ್ಯಾಲೆ ಹಾರಿತೊ ಒಳೆ ಚಂದಾ॥೯॥

ಬಾಬಾಸಾಹೇಬನ ಮುಪ್ಪಿನತಾಯಿ । ಹೆಂಡತಿ ಸಾವಿತ್ರಿ ಬಾಯಿ ।
ಹಾರಿದರೋ ಮಲಪ್ರಭಾ ನದಿಯನ್ನಾ । ಅತ್ತೆ ಸೊಸೆಯು ಕೊಟ್ಟಾರೊ
ತಮ್ಮ ಪ್ರಾಣಾ ॥೧೦॥

ಮುಂಡರಗಿ ಸುರಪುರ ನಾಯಕರಾ ಇಬ್ಬರು ಬಂದಾರೊ ಸಹಾಯಕ್ಕೆ ।
ಇಬ್ಬರು ನಿಂತಾರೊ ಯುದ್ಧಕ । ಭೀಮರಾಯ ಮಡಿದಾನೊ ಆ ಕ್ಷಣಕ॥೧೧॥

ನಾಯಕ ವಿಷಾ ತಿಂದು ಸತ್ತಾ । ಇಬ್ಬರಿಗೂ ಬಂದಿತೊ ಜೀವದಸುತ್ತಾ ।
ಬನಿಯಾ ಬಾಪು ಹೋದನೋಸತ್ತಾ । ತೋಫಿನ ಬಾಯಿಗೆ ತುತ್ತಾ॥೧೨॥

ಹಾಳಾತು ಕೇಳಿರಿ ನರಗುಂದಾ । ಮೋಸಗಾರ ನೀಚ ಜನರಿಂದಾ ।
ಗುರುವರನ ಪೂರ್ಣ ದಯದಿಂದಾ । ಶಾಲೆ ಬಾಲರು ಹಾಡ್ಯಾರೊ
ಬಹಳ ಚಂದಾ ॥೧೩॥

***ರಚನೆ :*** ಶ್ರೀ ಬಿ.ಎಂ. ಕಿತ್ತೂರ
***ಕೃತಿ :*** ಕ್ರಾಂತಿವೀರ ಬಾಬಾಸಾಹೇಬ

## ೧೩. ಹಲಗಲಿಯ ಬೇಡರು

**ಪಲ್ಲಾ**

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುವ ಜನಕ
ಶಿಸ್ತಿನ ಮಂದಿ ಭಂಟರ ಹಲಗಲಿ ಮುಟ್ಟಲಿಲ್ಲ ದಡಕ

**೧ನೆ ನುಡಿ**

ವಿಲಾತಿಯಿಂದ ಹುಕುಮ ಕಳವಿದರ ಕುಂಪಣಿಸರಕಾರಾ
ಎಲ್ಲ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ

ಕತ್ತಿ ಕಟಾರಿ ಕೈ-ಚೂರಿ ಬಾಕು ಗುರ್ದಿ ಸುರಾಯಿ ಚಕ್ರಾ
ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ

ಪಟಾತ ಪಿಸ್ತುಲ ಕರುಲಿ ತೇಗಾ ಚಾಪಗೊಡ್ಲಿಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದ ಗುಂಡ ಬಿಡಬ್ಯಾಡರಿ ಚೂರಾ

ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ॥ಚ್ಯಾಲ॥

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ್ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮ ಹೀಂಗ್ ಎಂದು
ಡಣ್ಗರ ಸಾರಿದರ ಮುಂದು

ಶೂರ ಸಿಪಾಯಿ ಜನರ ತಾವು ತಿಳಿದು
ಅಳತಾರು ಕಣ್ಣಿಗೆ ನೀರ್ ತಂದು ||ಯೇರ||

ಬಹಳ ಚಿಂತಿಯ್ ಆಗಿ ದುಃಖದಿಂದ ಅವರು ಬಿದ್ದರ್-ಅಣ್ಣ ನೆಲಕ

**೨ನೇ ನುಡಿ**

ಕೇಳುತ ಹುಕುಮಾ ಕೆಳವರ ತಂದ ಕಂದ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಚ್ಚಿ ಇಟ್ಟರ ವೊಳಗ

ಸಾಲಸಮದ ಮಾಡಿ ದನ-ಕರ ಮಾರಿ ತಂದಿನ್ನಿ ಹಬ್ಬದಾಗ
ನೋಡ ನೋಡ ಹ್ಯಾಂಗೆ ಕೊಡುನ್ ಅಂತ ಹುಗಿದ್ ಇಟ್ಟರ ನೆಲದಾಗ

ಶೂರ ಚಟೆಗಾರು ಜಾಯಿತಸಾಹೇಬ ಬಂದಾರ ಆವಾಗ
ಸಂದಿಯಗೊಂದಿ ವೊಂದು ಉಳಿಯದ್ ಆಂಗ ಹೊಕ್ಕ ಹುಡಿಕೆರ ಮನಿಯಾಗ್
ತೆಪ್ಪಿತ್ ಉಪಾಯಿ ಇನ್ನ ಮಾತರ ಮಾಡೂನ್ ಅಂತರ ಹ್ಯಾಂಗ
ವೊಬ್ಬರಕ್ಒಬ್ಬರ ಚ್ಯಾಡ ಹೇಳತರ ವರ್ಮ ಸಾಧಿಸಿದ್ಹಾಂಗ|ಚ್ಯಾಲ||

ಜ್ಯಾಡಸಿ ಹೋದವೊ ಯಲ್ಲಾ
ನಾಡ್ ಒಳಗೆ ಯೇನು ಉಳಿಲಿಲ್ಲಾ

ಅಜ್ಜ ಮುತ್ತೆರ ಹಿಡುವ ಪಿಸ್ತುಲ
ಕಾಸದ್ಒದರ ಕತ್ತಿಯ ಡಾಲಾ

ಕವಚ ಬೆಳ್ಳಿಯ ಮಕಮಾಲಾ
ರತ್ನದ ಹಿಡಿಕಿವ ಹೋದವು ಯೆಲ್ಲಾ||ಯೇರ||

ಹೋದ ಹತಾರಕ ಹೊಟಿಬ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

**೩ನೇ ನುಡಿ**

ಹಲ್ಲ ಕಿತ್ತಿದಾ ಹಾಂವಿನ ಪರಿಯು ನಮಗ ಆದಿತ್ಅಲ್ಲಾ
ರಂಡಿ ಮುಸುಕ ಹಾಕಿ ತಿರಿಗಿದರ ನಮ ಮಾನ ಉಳಿಯುವದಿಲ್ಲಾ

ಮಗ್ಗಲದಾಗಿನ ಹೇಣತಿ ಕೊಟ್ ಅಂಗ ಆತಿ ಹೇಡಿ ಆದೇವ್ಅಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತ್ಅಲ್ಲಾ

ಸಾವಕಾರು ನಮ್ಮ ಜೀವ ಹೋದಿತ್ಅಂತ ಚಿಂತಿ ಮಾಡೇರ್ಅಲ್ಲಾ
ಹಗಲಿ ಮನಿ ಹೊಕ್ಕ ಹಣಾವೋದರ ಕೇಳವರ್ಯಾರ್ಇಲ್ಲಾ

ಪುಂಡ ಪಾಳೆಗಾರ ಪಚ್ಚ್ಯಾ ವಜೀರರು ಪಂತ ಹಿಡಿಯಲಿಲ್ಲಾ
ದಂಡನ್ ಆಳುವ ಧೊರಿ ದೌಲತರ್ಅಂಜಿ ಕುಳಿತರ್ಅಲ್ಲಾ||ಚ್ಯಾಲ||

ದೇವರ ತಂದ ಪಡಿಪಾಟಾ
ಚಿಂತಿ ಹತ್ತಿ ಆದರೋ ನಷ್ಟಾ

ಅಧಿಕಾರ ಉಳಿಯಲಿಲ್ಲ ಯೆಳ್ಳೆಅಷ್ಟಾ
ಕೇಡಗಾಲ ಬಂದಿತು ಕನಿಕಷ್ಟಾ

ಹೆಂಗಸ್ಆಗಿ ಶೀರಿಯ ವುಟ್ಟಾ
ಸೋಂಡ್ಒಣಗಿ ಆದೀತೋ ಬೊಬ್ಬಾಟಾ

ಅರ್ದ್ಹಾಂಗ್ಅತಿ ಸ್ತ್ರೀಯರ ಕ್ರೀಡಾದಆಟಾ
ಭಂಟರಿಗೆ ಬಂದಿತೊ ಬಿಕ್ಕಷ್ಟಾ||ಯೇರಾ||

ಪಕ್ಕಾ ಕಿತ್ತಿ ಪಕ್ಷಿ ಗತಿ ಆಗಿ ಚಿಂತಿ ಅದರ ಮನಕ

**೪ನೇ ನುಡಿ**

ಹಲಗಲಿ ಅಂಬುವ ಹಳ್ಳಿ ಮುಧೋಳರಾಜ್ಯದಾಗ ಇತ್ತು
ಪೂಜೇರಿ ಹಣಮಾ ಬಾಲ ಜಡಗ ರಾಮು ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್ಇಂದ ಬಾರದ ನಮ್ಮ ಜೀವ ಸತ್ಓಗುದು ಗೊತ್ತು

ಸುತ್ತಿನ ಹಳ್ಳಿ ಮತ್ತ ಧೊರಿಗಳಿಗೆ ತಿಳಶೆರ ಹೀಂಗ್ಅಂತು
ಮಾಡರಿ ಜಗಳಾ ಕೂಡ್ಇರತೇವು ಕುಮುಕಿ ಯಾವತ್ತು

ವೊಳಗಿಂದ್ಒಳಗ ವಚನ ಕೊಟ್ಟರೊ ಬ್ಯಾಡರ್ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು ||ಚ್ಯಾಲ||

ದುಃಖದಿಂದ ಅವರು ಅಲ್ಲಿಗ್‌ಹೋಗಿ
ಸಾಹೆಬಗ ಹೇಳಿದರ ಕೂಗಿ

ಕೇಳಿ ಸಾಹೇಬ ಯೆದ್ದ ಸಿಟ್ಟಿಗಿ
ತಿರಿಗಿ ಹೋದ ಆವಾಗ ಕಲಾದಗಿ

ಕರ್ರಿ ಕೃಷ್ಣನಾಯಕಗೌಡ ಕುಂದರಗಿ
ಕರಶ್ಯಾನ ಸಂಧಾನಕ್ಕ್‌ಆಗಿ ||ಯೇರ||

ಹಟಾ ಮಾಡಬಾರದು ನಿಮ್ಮ ಹತಾರ ಕೊಡಿರಿ ಸಾಹೇಬನ್ ಈಶಕ

**೫ನೇ ನುಡಿ**

ಹತಾರ ಕೊಡಲಿಕೆ ಹೆಂಗಸ್‌ಆಗಿ ಬಳಿಯ್‌ಇಟ್ಟಿಲ ಕೈಯಾಗ
ಯಾವ ಬಂದೀರಿ ಜೀವಹೋದರು ಕೊಡುದಿಲ್ಲ ಸುಮ್ಮನ್‌ಹೋಗರಿ ಈಗ

ಅಂತ ಮಾತ ಯೆಲ್ಲ ಬಂದ ಹೇಳಿದಾನ ಆವಾಗ ಸಾಹೆಬಗ
ಶಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ ಹುಕುಮ ಕೊಟ್ಟರ್‌ಆಗ

ಕುದರಿಯಮಂದಿ ಕೂಡಿ ಮುಟ್ಟಿತೊ ಹಲಗಲಿಸ್ಥಳದ ಮೇಗ
ವೊಳಗಿನ ಮಂದಿ ವೊಟ್ಟರಲೆ ಹೊಡದರ ಮುಂಗಾರಿ ಮಳಿ ಸುರದ್‌ಆಂಗ

ಹೊರಗಿನ ಮಂದಿ ಗುಂಡ ಹತ್ತಿಕೆರ ತಿರಿಗೆರ ಆವಾಗ
ಕಾಗದ ಬರದ ಕಳವೆರ ಬೇಗನೆ ದಂಡ ಬರಲ್‌ಎಂತ ಹೀಂಗ||ಚ್ಯಾಲ||

ದಂಡ ಬಂತ ನೋಡ ತಯಾರ್‌ಆಗಿ
ಜಲದ ಮಾಡಿ ಬಂತ ಹಲಗಲಿಗಿ

ಆರ ತಾಸ ರಾತ್ರ್ಯಾಗ ಹೋಗಿ
ಊರಿಗಿ ಹಾಕಿದಾರ ಮುತ್ತಿಗಿ

ಗುಂಡ ಹೊಡದಾರ ವಿಪರೀತ ಸೂರಿಆಗಿ
ಅಂಜಿ ವೋಡಾಕ್‌ಹತ್ತಿತ ಮುಂದ್‌ಆಗಿ

ಬೆನ್ನ ಹತ್ತಿ ನೋಡಿದಾರ ಇವರ್ ಆಗಿ
ಬಿದ್ದಾವ ಹೆಣಗೋಳು ಸೂರಿ ಆಗಿ||ಯೇರ||

ಮುತ್ತಿಗಿ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲ ಯಾತ್‌ಎತಕ

**೬ನೇ ನುಡಿ**

ಬೆನ್ನ ಹತ್ತಿ ತಿರಿತಿರಿವಿ ಕಡದರೊ ಯೇನು ಉಳಿಯದ್ಅಂಗ
ನಡವಿ ಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದ್ಹಾಂಗ

ಕವಾತ ಫೈರಾ ಸುತ್ತಗಟ್ಟಿ ತಂಬು ನುಡಿಶಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತುಲ ಬಾಕ ನಡವಿನಾಗ

ಶಿಡಿಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತ್ಅಂಗ
ನಡುಗಿತು ಬ್ಯಾಡಕಿ ಕೆನ್-ಧೂಳ ಹರಿದ್-ಅಂಗ ಕಡದಾಟವು ಹ್ಯಾಂಗ

ಕೇಡ-ಗಾಲ ಬಂದಿತ ನಡವಿ ಶಿಕ್ಕರೊ ಬಿಡಸವರ್-ಯಾರ್-ಈಗ
ಚಟಕಾರರು ಚಾಟಿ ಮಾಡುತ ನಡದರ ಗುಡದಾಗ||ಈಲವು||

ಅಗಸಿಗೆ ಬಂದು ನಿಂತಿತು
ಹೆಬಲಕ್-ಸಾಹೇಬಂದು ತಾವು ನಿಂತು
ಹೇಳತಾರ ಬುದ್ಧಿಯ ಮಾತು
ಕೊಡತೇವ ಕವಲ ಈ ಹೊತ್ತು
ಹೋಗಬ್ಯಾಡರಿ ವೆರ್ತಾ ನೀವು ಸತ್ತು||ಯೇರ||

ಯೆಂಬು ಮಾತಿಗೆ ನಂಬಿಗೆ ಸಾಲದ ಹಣಮ ಬಂದ ಮುಂದಕ

**೭ನೇ ನುಡಿ**

ಜಡಗ ಹೇಳತನ ಹೊಡಿ ಇವರನಾ ಈಗ ಘಾತಕರೊ ಯಿವರಾ
ಇಸವಸ-ಘಾತಾ ಮಾಡಿ ನೆಂಬಿಗಿಲೆ ಮಾಡತಾರು ಫೀತುರಾ

ಮಾಸ-ಮಾಡಿ ಬಲ-ದೇಶ ತಗೋತರ ಮುಂದ ನಮಗ ಗೋರಾ
ಅಂದ ಹೊಡದಾರ ವೊಂದು ಗುಂಡಿಗೆ ಆದ ಸಾಹೇಬ ಟಾರಾ

ಕಾರ್-ಸಾಹೇಬ ಬೆಂಕಿ-ಚೂರ ಆಗಿ ತಾನು ಲೂಟಿ ಮಾಡ್-ಅಂದ ವೂರ
ಹುರಪಿಲಿ ಹೊಡದರ ಮಳಿ ಆದ ಹಾಂಗ ಗುಂಡ ಸುರದವು ಬರಪೂರಾ

ಹಣಮ ಹೇಳತನ ಗುಂಡ ಹೊಡದಕೆರ ಕೆಡವುನ್-ಅಷ್ಟು ಬಾರಾ
ಮುನ್-ನೂರ ಮಂದಿ ಯನ್ನ ಮೇಗೆ ಬಿಟ್ಟ ಆಗ ನೋಡರಿ ಜೋರಾ||ಚ್ಯಾಲ||

ಭೀಮನು ಇದರಿಗೆ ನಿಂತಾ
ಐ-ನೂರ ಮಂದಿಗೆ ಮಲತಾ

ಬಾಲನು ಮಾಡಿದ ಕಸರತ್ತಾ
ಕುದರಿಯ ಕಡದನೊ ಹತ್ತಾ

ರಾಮನ ಕಡತ ವಿಪರೀತಾ
ಕಾವಲಿ ಹರಿತೊ ರಕ್ತಾ

ಸಾವಿರ ಆಳಿಗೆ ವೊಬ್ಬ ಮಲತಾ
ಕೂಗುತಾನೊ ಕಡಿ-ಕಡಿರ್-ಎಂತಾ||ಯೇರ||

ನಾಲ್ಕು ಮಂದಿ ಹೀಂಗ ಕಡದ ಸತ್ತರೊ ಭಂಟರ್-ಅನಸೆರ ಜನಕ

**೮ನೇ ನುಡಿ**

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹಣಮ ಬಿದ್ದ ನೆಲಕ
ಚೀರಿ-ಆಡುತ ಜನ ಸುತ್ತಗಟ್ಟಿತೊ ಅಂಜಿ-ಕೊಂಡ ಜೀವಕ
ಶೂರವೊಬ್ಬ ಬಹಳ ಜೋರ ಮಾಡಿದನ ಹತಾರ ತಗೊಳುದಕ
ಯೇರಿ ಬರು ಕುದರಿ ಕಾಲ ಕಡದನೊ ಸ್ವಾರ ಬಿದ್ದ ನೆಲಕ

ರಾಮಿ ಗುಂಡಿಲಿ ಜೋರ ಮಾಡಿ ಹೊಡದಳೊ ಮೂರ ಮಂದಿ ಶಿರಕ
ಆರ ಕುದರಿಯ ಕಡದ ಸಿಡದಳೊ ಬಾಲನ ಸೂರಾಯಕ||ಚ್ಯಾಲ||

ಯರ್-ಯಾರು ಇಲ್ಲದ್-ಆದೀತು
ಊರ್-ಎಲ್ಲಾ ಲೂಟಿ ಆಗಿ ಹೋತು

ಮಂದಿ ಮನಿ ಹೊಕ್ಕ ಹುಡಕಿತು
ದನ-ಕರಾ ಲಯಾ ಆದೀತು

ಸಣ್ಣ ಕೂಸಗಳು ಹೋದವು ಸತ್ತು
ಬೆಂಕಿ ಹಚ್ಚ್ಯಾರ ವೂರ ಸುಟ್ಟಿತು

ನಷ್ಟ ಆತಿ ನೋಡರಿ ಈವತ್ತು
ನಾ ಹೇಳತೇನ ಈ ಮಾತು||ಯೇರ||

ಇಷ್ಟ್-ಎಲ್ಲ ಅಳವ್-ಆಗಿ ಹೋದಿತೊ ಮುಟ್ಟಲಿಲ್ಲ ಯಾತ್-ಎತಕ

**೯ನೇ ನುಡಿ**

ಕತ್ತಿ ಕುದರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಭಂಗಾರಾ ಹರಳಿನ್-ಉಂಗರಾ ಹೊನ್ನ್-ಉಂಗರ ಗೋಲಾ

ಸರಗಿ ಸರ್ದಳಿ ಬುಗುಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣಾ ನಡವಿನ-ಡಾಬಾ ನಡಕಟ್ಟು ರುಮಾಲಾ

ಕುಬಶಾ ಶೀರಿ ಹಪ್ಪಳ ಶಾಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋಟಿ ಕುಡ-ಕಬ್ಬಿಣಾ ಮಸರು ಬೆಣ್ಣಿ ಹಾಲಾ

ಉಪ್ಪ ಯೆಣ್ಣಿ ಅರಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳ ಚರಗಿ ಮಂಗಳ-ಸೂತ್ರಾ ತಕೊಂಡ ಹೋದರ ಬಿಸು-ಕಲ್ಲಾ||ಇಳವ||

ಹಾಳ್-ಆಗಿ ಹೋದಿತೊ ಇಷ್ಟು
ವರ್ಣಿಸಿ ಹೇಳಲು ಎಷ್ಟು

ಯೆಲ್ಲ ತಗೊಂಡರೊ ಶಿಕ್ಕ್-ಅಷ್ಟು
ಸರ್ದ ನಿಂತರೊ ವೂರಿಗೆ ಕೊಳ್ಳಿಕೊಟ್ಟು

ಬೂದಿ ಮಾಡೆರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಳ್ಳಷ್ಟು

ಕಾಣಸ್ತ ಹೋದಿತೊ ಕೆಟ್ಟು
ವರ್ಣಿಸಿ ಹೇಳಿದೆನು ಇಷ್ಟು||ಯೇರ||

ಕುರ್ತಕೋಟಿ-ಕಲ್ಮೇಶನ ದಯದಿಂದ ಹೇಳುದ-ಕೇಳುದಕ

***ರಚನೆ :*** ಕುರ್ತಕೋಟಿ ಕಲ್ಮೇಶ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

## ೧೪. ಹಲಗಲಿಯ ಪದ

ಮುಧೋಳ ನಾಡ ಹಲಗಲಿ ಬಾರ ಭರತಿಲಿ
ಗದ್ಗದುರಿಸಧಾಂಗ ಹುಲಿ ಆಯಿತೊ ಗುಡ್ಡದಾಗ
ಎಷ್ಟಂತ ಕೇಡ ಹೇಳಲಿ
ಆತ ಮದಕೊಲಿ ಕೆತ್ತಿ ಕಾಲಾಗ ||ಪಲ್ಲ||

ಬಡ್ಡಿಂದ ಕೇಳರಿ ಮಜಕುರಾ
ಥಾಯಿಂದಾಕಾರಾ
ಕುಂಪಣಿ ಸರಕಾರಾ ಇದರ ಯಾರ ಇಲ್ಲ
ಶ್ರೀಮಂತ ಆದ ಹಿಮ್ಮೆಡಿ ಹೋದರೊ
ಓಡಿ ಹತ್ಯಾರ ಹಿಂಬಾಲ ಕುಂಪಣಿ
ಇರುವ ಇಲಾಖೆ ವಿಲಾತಿ
ಕವಲ ಕಟ್ಟೇತಿ ನಾಡಾಗಿನ ಕತ್ತಿ
ತೊಗೊಂಡಾರೆಲ್ಲಾ
ಮುದವಳಕೆ ಬಂದಿತೋ ವರದಿ
ಮುಂದಿನ ಗರ್ದಿ ವದಗಿತೋ ಮೂಲಾ
ಬಾಬಾಸಾಹೇಬ ಲಕುಟಿ ವಡದನು ಓದಿಕೊಂಡನು
ಉಸರ ಹಾಕ್ಯಾನ ಹೋದವ ಕೈಕಾಲಾ
ಕುಂತಿತ್ತ ಭರಕಚೇರಿ
ಶಿಪಾಯಿ ಮಾನ ಕರಿ ನೋಡ್ಯಾರ ಸುತ್ತೆಲ್ಲಾ ||ಚಾಲ||

ಬಕ್ಷೀನ ಕರದ ಕೇಳ್ಯಾನು
ಹ್ಯಾಂಗ ಮಾಡುನು ಹೇಳರಿ ಹಂಚೀಕಿ
ಹೆಳರಿ ಹಂಚೀಕಿ
ಶಿಟ್ಟಿನ ಕಾರಸಾಹೆಬ
ಒಳೇ ಜರಬ ಬರದನ ಬದಾಕಿ
ನಿಂಮ ನಾಡಾಗಿನ ಹತಾರ ಕತ್ತಿ ಕಟಾರ
ಕಳಸಂದ ತುಬಾಕಿ ತುಬಾಕಿ
ಬಕ್ಷೀ ಹೇಳಿದ ಉತ್ತರ
ಸ್ವಾಮಿ ಈಶ್ವರ ಮಾಡುವವ ಜೋಕಿ
ಮಾಡುವವ ಜೋಕಿ
ಕಾರಬಾರಿ ಹೊಡಿಸಿದ ಡಂಗುರ
ಬಡವರ ಹತ್ಯಾರ ಎಲ್ಲ ಕೂಡಾಕಿ
ಎಲ್ಲ ಕೂಡಾಕಿ||ತೋಡ||

ಶಿಪಾಯಿ ಮಂದಿ ಅಂತಾರ ಸಾಪ ಉತ್ತರ
ಕೈಯಾಗಿನ ಹತ್ತಾರ ಕೊಡೋದಿಲ್ಲೀಗ
ಎಷ್ಟಂತ ಕೇಡ ಹೇಳಲಿ
ಆತ ಮತಕೊಲಿ ಕತ್ತಿ ಕಾಲಾಗ||೧||

ಶಿಲೆದಾರ ಮಂಡಲಿ ಬಣ
ಹೊಂಟರಾಕ್ಷಣ ಮಾಡ್ಯಾರ ಹೊರಪ್ಯಾಣ

ಬಂದ ಊರ ಹೊರಗ ಹೊಂಟಾರ
ಬಿಟ್ಟು ಮನಿಮಾರಾ
ಹೋಗಿ ಕುಂತಾರಾ ಮಡ್ಡಿಯ ಮೇಗ
ಮಾರಾಜ ಅವರನ್ನು ಕರಸಿ ಕೇಳ್ಯಾನ ರಂಬಿಸಿ
ಹತಾರ ತರಸಿ ಇಟ್ಟನ ಊರಾಗ
ಇನ್ನ ಮುಂದ ಐತಿ ಬಲ ಗೋರ
ಹೆಂಡರ ಮಕ್ಕಳ ಜೋಕಿ ಮುನಿಯಾಗ
ಏನು ಆಗೋದು ಆಗಲಿ
ಸಾಕಿದ ಹುಲಿ ಐತಿ ಹಲಗಲಿ
ನಂಮ ನಾಡಾಗ ಹಳಬರ ಮಂದಿ
ತರತುರಿ ಕತ್ತಿ ಕಟಾರಿ ಇದ ಕ್ಷಣಾದಾಗ॥ಚಾಲ॥

ಬಕ್ಷೀ ಹುಕುಮ ಮಾಡಿದ
ಕಾರಕೂನ ಹೋದ ಹಲಗಲೂರೀಗ
ಹಲಗಲೂರಿಗ
ಹಳಬರನೆಲ್ಲ ಕರಿಸಿ
ಕೆಳ್ಯಾನ ರಂಬಸಿ ಉರಾನ ಮಂದೀಗೆ
ಊರಾನ ಮಂದೀಗೆ
ನಿಂಮ ಕೈಯಾಗಿನ ಹತಾರ
ಕೊಡಬೇಕು ಎಲ್ಲರ ಇಂಗ್ರ್ಯಾಜರೀಗೆ
ಇಂಗ್ರ್ಯಾಜರೀಗೆ
ಕೊಡೊದು ಅವರೀಗೆ
ಕರಾಕರಾ ತಿಂದರೊ ಹಲ್ಲಾ ಹಳಬರೆಲ್ಲರಾ
ಬಂದಾರ ಚಾವಡೀಗೆ
ಚಾವಡೀಗೆ॥ತೋಡ॥

ಜಮಾದಾರ ಶಿಟ್ಟಿಗೆ ಬಂದ
ಬಾಯಿಮೇಲೆ ಬಡದ ಕಾರಕೂನನ ಹೊಡದ
ಹೊಂಟ ಊರ ಹೊರಗ
ಎಷ್ಟಂತ ಕೇಡ ಹೇಳಲಿ
ಆತ ಮದಕೊಲಿ ಕತ್ತಿ ಕಾಲಾಗ॥೨॥

ಕಾರಕೂನ ತಿರಗಿ ಹೋದನು
ಹಲಗಲೊರ್ತಮಾನ ಹಾರು ಹೇಳ್ಯಾನು
ಟೇಕ ಕಾಣುದಿಲ್ಲ ಬೈಶಾಕ
ಬಾಯಿಗೆ ಬಡದ

ಎನ್ನ ಚಂಡ ಹಿಡದ ನೂಕಶಾರೆಲ್ಲಾ
ಮಾಚಕನೂರ ಬೀಮಂಣ
ಮಾತಿಲೆ ಜಾಣ ಮಾಡಿ ಕರಶರಣ
ಇಳಿಯವ ಹಿಡಿದಲ್ಲಾ
ಬಾಬಾಜೀ ನಿಂಬಳಕಾರ ಬರದ ಪತ್ತರ
ಯಾರೀಗ ತಿಳಿಲಿಲ್ಲಾ
ಭೀಮಪ್ಪ ಹೊಂಟನಾವಾಗ ಮೂರು ಸಂಜಿನಾಗ
ಹಲಗಲೂರಿಗೆ ಹೋಗಿ ನಿಂತಲ್ಲಾ
ಜಡಗಪ್ಪ ಕಂಡ ಕಂಣಿಲೆ
ಬಂದ ಶಿಟ್ಟಿಲೆ ಹೊಡದ ಕುದರಿ ಮೇಲ॥ಚಾಲ॥

ಹಳಬರು ಅಂತಾರ ಕಡಿ ಬಡಿ ಕುದರಿಯ
ತಡಿ ಹೊರಶಾರ ತಲಿ ಮೇಲ
ಬೀಮಪ್ಪ ಹೋದನೊ ಓಡಿ
ಬಂಗಾರದ ತಡಿ ಅವಗೆ ದೊರಿಲಿಲ್ಲಾ
ಅವಗೆ ದೊರಿಲಿಲ್ಲಾ
ಮುದವಳಕ ಹೋದ ಬೀಮಪ್ಪ
ಆದ ತಾರೀಪ ಹೇಳತಾನೆಲ್ಲಾ
ಹೇಳತಾನೆಲ್ಲಾ
ಮಾರಾಜಫತ್ತಿತೊ ಚಿಂತಿ
ಬಡೀತೋ ಭ್ರಾಂತಿ ಅನ್ನ ಉಣವಲ್ಲಾ
ಅನ್ನ ಉಣವಲ್ಲಾ॥ತೋಡ॥

ಕಾರ ಸಾಹೆಬಗ ಮುಟ್ಟಿತೋ ವರದಿ
ಹೇಳಿದಾಗ ಸುದ್ದಿ
ಮಲಕನ ಸಾಹೆಬ ಹೋಗಬೇಕೀಗ
ಎಷ್ಟಂತ ಕೇಡ ಹೇಳಲಿ
ಆತ ಮದಕೊಲಿ....ಕತ್ತಿ ಕಾಲಾಗ॥೩॥

ಮಲಕನ ಸಾಹೇಬ ಬಾದೂರಾ
ಬುದ್ದಿ ಸಮದಾರ
ಮಾಡಿ ತಯ್ಯಾರ ಕುದರಿಯ ಮಂದಿ
ಅವರ ಸರಲಿ ಹೋದ ಕಾದು ಕಾದು
ಹರಕೇರಿ ಮೊಕಾಮ ಕೂಡಿತೋ ಗರದಿಕ್ಯಾದಾರಿ
ಬಾಡಪೆದಾರ ಬಂದ ಅವಸರ
ಹಲಗಲಿ ವಿಚಾರ ಹೇಳತಾನ ಸುದ್ದಿ

ಊರ ಸುತ್ತಲಿ ಬಂದೋ ಬಸ್ತಿ
ತಿರಗತತಿ ಗಸ್ತಿ ಏಳನೂರ ಮಂದಿ
ಸಾವಿರ ಮಂದಿ ಬೇಡಿಕಿ ನಿಂತ ಚೇವಕಿ ಮಾಡಿ
ಹಂಚಿಕಿ ಲಡಾಯದ ವರದಿ
ಮದ್ದು ಗುಂಡು ಮಾಡ್ಯಾರು ತಯ್ಯಾರಾ
ಮಕ್ಕಳು ಹೆಂಡರಾ ಹಿಡಿಸಿದರ ಹಾದಿ||ಚಾಲ||

ಊರಾನ ರೈತರ ರಾಣೆರ
ಬೆಳ್ಳಿ ಬಂಗಾರಾ ಅವರ ಕೈಯಾಗ
ಅವರ ಕೈಯಾಗ
ಹಳಬರು ಉಣತರೊ ಕುಂತು
ಬಂಗಾರದ ತುತ್ತು ಲಡಾಯಿದ ಕಾಲಾಗ
ಲಡಾಯಿದ ಕಾಲಾಗ
ಹತ್ತೆಂಟ ಕಡೂತಾರ ಬೇಟಿ
ಶರೇದ ಬಟ್ಟಿ ಇಟ್ಟತಿ ಊರಾಗ
ಇಟ್ಟತಿ ಊರಾಗ
ಮೈಯಲ್ಲ ಹಳದಿಯ ಮಂಣ
ಕೆಂಪಿಯ ಚೊಂಣ ತೊಸ್ತ ತಾನಿ ನಡಿನಾಗ
ತೊಸ್ತ ತಾನಿ ನುಡಿನಾಗ
ಹಣಿ ಮೇಗ ಕೇಸರೀ ಗಂದಾ
ಹೂವು ಮಕರಂದ ತುರಾಯಿ ತಲಿಮ್ಯಾಗ
ತುರಾಯಿ ತಲಿಮ್ಯಾಗ||ತೋಡ||

ಜಾವಿಗಿ ಹಚ್ಚಿ ಲಾಲಬಂದ
ತಯಾರ ಗುಂಡ ಮದ್ದ ರಂಜಕ
ಹರದೀತು ಬೆಂಕಿ ಕೈಯಾಗ
ಎಷ್ಟಂತ ಕೇಡ ಹೇಳಲಿ
ಆತ ಮದಕೊಲಿ ಕತ್ತಿ ಕಾಲಾಗ||ಳ||

ಮಲಕನ ಸಾಹೆಬ ಕೇಳಿದ
ಬರದ ಕಾಗದ
ವಿಜಾಪುರಕೋದ ಕುದುರಿಯ ಸ್ವಾರಾ
ಕಾರ ಸಾಹೇಬ ಓದಿಕೊಂಡ ಚೀಟಿ
ಹೋದ ನಡಕಟ್ಟಿ ಆಗಿ ತಯ್ಯಾರಾ
ಹೊಂಟೀತು ಕುದರಿ ಇನ್ನೂರಾ
ಕಾನಿ ಶಿಲೆದಾರಾ ಬಿಟ್ಟ ವಿಜಾಪುರಾ

ಶಿಪಾಯಿ ರಣಸೂರಾ
ಸಂಗಾಟ ತೊಗೊಂಡ ದಲ್ಬಲಾ
ಹೊಂಟನವಸರಾದಿನ ಅಯತವಾರ
ಬೆಳತನಕ ಬಂದಿತೊ ದಂಡ
ತಯ್ಯಾರ ಮದ್ದಗುಂಡ
ಹಲಗಲಿ ಪುಂಡ ಕೇಳತಿವಿ ಹೆಸರಾ
ಅಂತಾನ ಕಾರಸಾಹೆಬ ಹೊಡೆತಿ
ರಣಗಂಬ ಕಾಯೊ ಈಶ್ವರಾ॥ಚಾಲ॥

ಹದಿನೈದ ಮಂದಿ ಬೇಡಿಕಿ
ಇತ್ತ ಚವಕಿ ಕಲಾದಗಿ ಹಾದ್ಯಾಗ
ಕಲಾದಗಿ ಹಾದ್ಯಾಗ
ಅಲ್ಲೆ ಹೋಗಿ ಹತ್ತಿತೊ ಅಣಿ
ಒಳ್ಳೆ ಕಣಪಿಣಿ ಆಯಿತೊ ಅಡವ್ಯಾಗ
ಚಿಕ್ಕಂಣವರ ಬೀಮಂಣ ಮಾಡಿ ಕರಶರಣ
ಕತ್ತಿ ಹಿರದಾಗ
ಇನ್ನೂರ ಕುದುರಿಗೆ ಒಬ್ಬ ಮಾಡಿದಾನ
ಗಾಬ ಒಂದ ಕ್ಷಣದಾಗ
ಒಂದು ಕ್ಷಣದಾಗ
ಇನ್ನೂರ ಲಳಿಗೆ ಆವಾಗ
ಅರಳ ಹುರಿಧಾಂಗ ಸುತ್ತ ಅವನ ಮೇಗ
ಸುತ್ತ ಅವನ ಮೇಗ॥ತೋಡ॥

ಬೇಟ್ಯಾಗ ಬಿದ್ದಿತೋ ಹುಲಿ
ತೊಕೊಂಡರ ತಲಿ
ಪುಂಡ ಹಲಗಲಿ ಹೆಸರ ನಾಡಾಗ
ಎಷ್ಟಂತ ಕೇಡ ಹೇಳಲಿ
ಆತ ಮದ ಕೊಲಿ ಕತ್ತಿ ಕಾಲಾಗ॥ಙ॥

ಸರದಾರ ಹೇಳತಾನಲ್ಲಾ ಲಡಾಯಿ ಮಾಡುದಿಲ್ಲಾ
ಕಾಳ ಕತ್ತಲಾ ಆಗಲೀ ಬೆಳಕ
ಹಿರಿತಾನ ಮಂದಿ ಕರಶ್ಯಾನು
ಬುದ್ದಿ ಹೇಳ್ಯಾನು ಮಾಡಬೇಡ ಸೊಕ್ಕ
ಬೇಡಿಕಿ ಜನಾ ಮಳ್ಳ ಕುಲಾ
ಆಗಿ ಕುಶಿಯಾಲಾ ಕತ್ತಿ ಕೊಡಲಿಲ್ಲಾ
ಆಗಿನ್ಯಾಳೇಕ

ಮೈಮರತು ಮಲಗಿತೊ ಮಂದಿ
ಹತ್ತಿತೊ ನಿದ್ದಿ ಹೊತ್ತು ಏರು ತನಕ
ಮಲಕನ ಸಾಹೆಬ ಬಾದೂರಾ
ಕುದುರಿ ಮುನ್ನೂರ ತೊಗೊಂಡ
ಅವಸರ ಬಂದ ಬೆಳತನಕ
ದಂಡಾಯಿತೊ ಊರ ಸುತ್ತಲಿ
ಹಚ್ಚಿಧಾಂಗ ಬೇಲಿ ಮಾಡಿದಾನು ಗಿರಕ||ಚಾಲ||

ಬೆಳಗಾಗಿ ಬಂತೊ ಹೊತ್ತೇರಿ
ಬಂದವೋ ಕುದುರಿ ಕೆರಿಯ ದಂಡ್ಯಾಗ
ಕೆರಿಯ ದಂಡ್ಯಾಗ
ಐವತ್ತ ಮಂದಿ ಹಳಬಿಕಿ ಇತ್ತ ಚವಕಿ
ಕರೆಂಣನ ಹುಡೆದಾಗ ತಯ್ಯಾರ ಆದಾರ
ನಡಕಟ್ಟಿ ನಿಂತರ ಸುತ್ತಗಟ್ಟಿ ವಗದರಾವಾಗ
ವಗದರಾವಾಗ
ಕುದುರೆವರು ವರದರೊ ಗುಂಡು
ಹಳಬರ ಬಂಡು ಏನ ಹೇಳಲೀಗ
ಏನ ಹೇಳಲೀಗ
ಮಳಿ ಸುರಿಧಾಂಗ ಆದಿತೋ ಗುಂಡ
ಕೈಕಾಲ ರುಂಡ ಹಾರಿಧಾಂಗ ಚಂಡ
ಚೆಣಿ ಪುಟಧಾಂಗ
ಎಷ್ಟಂತ ಕೇಡ ಹೇಳಲಿ
ಆತ ಮದ ಕೊಲಿ ಕತ್ತಿ ಕಾಲಾಗ||೬||

ಗುಂಡಿನ ಸಪ್ಪಳ ಕೇಳಿ ಹಿಡಿತು ಹುಲಿಗಾಳಿ
ಹೆಂಡರ ಗುಳದಾಳಿ ಹರದರಾವಾಗ
ಕಾಳುಂಗರೊಡರೊ ಬಳಿ ಉಬ್ಬಿಯ
ಹೋಳಿ ಹತ್ತಿತೊ ಊರಾಗ ಊರೆಲ್ಲ
ಓಣಿ ಹೂಡಕಿ ಶಿಕ್ಕ ಬೇಡಿಕಿ
ಇಟ್ಟ ತುಬಾಕಿ ಅಡ್ಡಬಿದ್ದರಲ್ಲಾ
ಬಾಬಾಜಿ ನಿಂಬಳಕರ ಕುಡಲಿಲ್ಲ ಹತಾರ

ಒಗದರಾವಾಗ ಅಂತಾನ
ಜಡಗ ಬಾಲಂಣ ಮಾಡಿ ಕರಶರಣ
ತೆರಿಬೇಕೊ ಕಂಣ ಹಳಬರಾ ಮೇಗ

ಏನು ಮಾಡುದೆಲ್ಲ ಮಾಡರಿ
ಕೊಲ್ಲಬೇಡರಿ ವೈದು ಆಡಿವ್ಯಗ ||ಚಾಲ||

ಊರಸುತ್ತ ಹಚ್ಚಿದಾರ ಬೆಂಕಿ
ಸುಟ್ಟಂಗ ಲಂಕಿ
ಹೋಗಿ ಹಣಮಂತ
ಊರಾಗ ಆಯಿತೊ ಗಡಿಬಿಡಿ
ದಂಡನಾ ತುಕಡಿ ಮಾಡಿದ ಶಮರಂತ
ಮಾಡಿದ ಶಮರಂತ
ಜಗಳಾದೀತೊ ಶರಸೂರಿ
ಕಡಧಾಂಗ ಕುರಿ ಹರೀತೊ ರಗತ
ಹರೀತೊ ರಗತ
ಬೇಡಿಕೆ ಮಂದಿ ಮುರದಿತು
ಮನಿಯ ಹೊಕ್ಕಿತು ಮುನಿದ ಭಗವಂತ
ಮುನಿದ ಭಗವಂತ
ಕಾರ ಸಾಹೆಬ ಬೆನ್ನ ಹತ್ಯಾನು
ಬೆಂಕಿ ಹಚ್ಯಾನು ಸತ್ತರಾವಾಗ
ಸತ್ತರಾವಾಗ||ತೋಡ||

ಊರ ಸುಟ್ಟ ಹಾರಿತೊ ಹೊಗಿ
ರಯತರ ಜಿವ ಹೋಗಿ
ಆಯಿತೊ ಸೂಲಗಿ ಮೂರ ಘಳಿಗ್ಯಾಗ
ಎಷ್ಟಂತ ಕೇಡ ಹೇಳಲಿ
ಆತ ಮದ ಕೊಲಿ ಕತ್ತಿ ಕಾಲಾಗ||೭||

ಊರೆಲ್ಲ ಬಿದ್ದವೋ ಹೆಣ
ಆದತತಿ ರಣ ಲಂಕೆ ಪಟ್ಟಣ ಹಾಳಬಿಧಾಂಗ
ಸರಕಾರ ಜರಬ ಕುಂಪಣಿ
ನೋಡತರ ಮನಿಹೊಕ್ಕ ಆವಾಗ
ಅರವತ್ತ ಮದಿ ಹಳಬಿಕಿ
ಹೊತ್ತ ತಂಬಾಕಿ ನಿಂತ
ಬೇಡಿಕಿ ಎರಡು ಅಗಶ್ಯಾಗ
ಓಡ್ಯಾಡಿ ಕಡುವ ಹುಡುಗರು
ಓಡಿ ಹೋದರು ಗುಡ್ಡದ ವಳಗೆ
ಕಾರ ಸಾಹೇಬ ಆಗಿ ವಳೆ ಶಿಟ್ಟ
ಅಂತಾನೊ ಬಂಟ ಹಳಬರಾ

ಚೆಟ್ಟ ಹಾರಿಶ್ಯಾನಾಗ
ಆಗ ತಯ್ಯಾರಾದರ ಸಂಗಟ
ಬಿದ್ದಿತೊ ಗಂಟ ಹಲಿಗಲಿಗೆ ನಮಗ||ಚಾಲ||

ಶಿಕ್ಕಷ್ಟ ಹಳಬರೆಲ್ಲರು
ಹಿಡದ ವೈದರು ಶಾರ ಮುದವಳಕ
ನಿಂತಾನ ಬುದನಿ ಬೀಮಂಣ
ಚುರಚಿ ರಾಮಂಣ ಸಾಹೆಬನಂಥ್ಯಾಕ
ಸಾಹೆಬನಂಥ್ಯಾಕ
ಅವರಿಬ್ಬರನ ಕೂಡಿಸಿ
ಕೊಟ್ಟರೋ ಪಾಶಿ ಆಗಿನಾಕ್ಷಣಕೆ
ಆಗಿನಾಕ್ಷಣಕ
ಬಾಲ ಬಸರಂಣಾ ಇಬ್ಬರಿಗೆ
ಕಟ್ಯಾರ ತೋಪಿಗೆ ಬಿದ್ದವೊ ತುಣಕ
ಬಿದ್ದವೊ ತುಣಕ||ತೋಡ||

ಒಂಬತ್ತು ಮಂದಿ ಹಳಬರಾ
ಕಂಬಕಂಬಕ ಕಟ್ಯಾರ
ಗುಂಡಿಲೊಗಶಾರ ಮುದೊಳದೂರಾಗ
ಎಷ್ಟಂತ ಕೇಡ ಹೇಳಲಿ
ಆತ ಮದ ಕೊಲಿ ಕತ್ತಿ ಕಾಲಾಗ||ಲ||

ಕಂಬಕ ನಿಂತ ಜಡಗಂ
ಲಕ್ಷಮಿ ಭರಮಂಣ
ಅಮಾತ್ಯಾ ಗೋವಿಂದಂಣ
ಹುಚ್ಚ ಬಾಯೀಲೆ ಅಂತಾನ
ಹೊಲ್ಯಾರ ದ್ಯಾಮಂಣ ಎಲ್ಲಪ ಬಾಗುಣ
ನೋಡಿರಿ ಮೇಗ ಅರ ಮಂದಿನ
ಹಲಗಲಿಗೆ ತಂದು ಹಚ್ಚೆರ ಜೇರ ಬಂದು
ಕಂಬಕ ಬಿಗಿದು ವಗದಾರ ಗುಂಡೀಲೆ
ಅಳತಾನ ಸರವಿ ಸಾಬಂಣನರಿ
ರಾಮಂಣ ನೋಡಿ ಹಲಗಲಿಗೆ ಬಂದ
ಭಂಡಿಗಂಣಿನ ನಿಂಗಪ್ಪ
ಹುಡೇದ ಕರಿಯಪ್ಪ ಗಿಡ್ಡ ಎಲ್ಲಪ್ಪ
ನೋಡಿರಿ ಸುತ್ತಾಲಿ ಅಂತಾನ

ಶಿರಗುಪ್ಪಿ ಹನುಮಪ್ಪ
ಒಗಿ ನಂಮಪ್ಪ ಜೀವ ಹೋಗಲಿ॥ಚಾಲ॥

ಉಳಕಿ ಮಂದಿಯೆಲ್ಲ ಬಿಟ್ಟರು
ಹುಕುಮ ಕೊಟ್ಟರು ಊರಾಗ ಇರಲಾಕ
ಊರಾಗ ಇರಲಾಕ
ಇಂಗ್ರಾಜ ಭಾದುರಾ ಧನಿ ಹುಕುಮ
ಕುಂಪನಿ ಸುತ್ತ ರಾಜೇಕ
ಸುತ್ತ ರಾಜೇಕ
ಅನ್ಯಾಯ ಮಾಡಲಾಕಿಲ್ಲ ಶಾಸ್ತ್ರ ಇಂಜಾಲ
ಓದಿ ಪುಸ್ತಕ ಕೃಷ್ಣ ದಂಡಿಲಿ
ಗಲಗಲಿ ಊರಾಗೈಬು
ದೇವರ ನಿತ್ಯ ಸೇವಾಕ
ನಿತ್ಯ ಸೇವಾಕ
ಹಶೆನ ಸಾಹೆಬ ನಂಮು ವಸ್ತಾದ
ಕವೇಶ್ವರ ಮರ್ದ ಇದ್ದ ಅಬದಾಕ
ಇದ್ದ ಅಬದಾಕ॥ತೋಡ॥

ಬಾಳರಾಮ ಹೇಳಿದ ರಹಿಮಾನ
ಹಲಿಗಲೊರ್ತಮಾನ
ಕೇಳತತಿ ಜನ ಕುಂತ ಸಭೆದಾಗ
ಎಷ್ಟಂತ ಕೇಡ ಹೇಳಲಿ
ಅದ ಮದ ಕೊಲಿ ಕತ್ತಿ ಕಾಲಾಗ॥೯॥

***ಕವಿ :*** ಬಾಳರಾಮ
***ಕೃತಿ :*** ಫ್ಲೀಟರು ಸಂಗ್ರಹಿಸಿದ ಲಾವಣಿಗಳು

## ೧೫. ಗಲಗಲಿ ದೇಸಾಯಿಯ ಪದ

ಗಲಗಲಿ ದೇಸಾಯಿ ನವರತ್ನ ಬಿಟ್ಟ ಹೋದ
ತನ್ನ ಸಂಸ್ಥಾನ
ಚಂದ್ರಮನಂತ ಚಲುವನ ಮೇಗ
ಶಿವ ಮುನಿದನಾಯತವಾರದಿನ ॥ಪಲ್ಲ॥

ಏನು ಹೇಳಲಿ ದುಃಖ ಬರತೈತಿ
ದೊರೆಗಳ ಮನದನ ಅಕ್ಕರತಿ

ಟೋಡ ಲೇಜಮಿ ತಾಲಿಮಖಾನೆ
ಶಿವಪೂಜೆಯ ಮೇಲೆ ಬಲ ಪ್ರೀತಿ
ಚಲ್ವಿಕೆ ಬಾಳ ದಿಂಡ ಗತಿ
ಕಾಮನಂತೆ ಸಂಣ ನಾಮ ಹಚ್ಚುವ
ಸದರಿಗೊಪ್ಪುವ ಸೂರಪತಿ
ಶಿಪಾಯಿ ಶಿಲೇದಾರ ಬಲಭರ್ತಿ
ಚಾಬುಕ ಸ್ವಾರ ಕುದರಿಯ ಹತ್ತಿ
ಅವನ ಮುಂದ ಮುಂದ ಹೊಗಳು
ಚೋಪದಾರ ಅಂತಾನ ದೊರೆಗಳ ಕೀರತಿ
ಸುತ್ತ ನಾಡಾಗಿನ ದೇಸಗತಿ
ಎಲ್ಲರ ವಳಗೆ ಅವಚಡತಿ
ಯಾರೊಬ್ಬರಂತರ ಏನ ಧೊರಿ ಇವನ
ಪೂರ್ವದ ಪುಣ್ಯ ಹೆಚ್ಚೈತಿ ||ಚಾಲ||

ಸರ್ವ ಮಾತಿಗೆಲ್ಲ ಸಂಪನ್ನ
ಅವಗ ನಡಸತಿದ್ದ ಭಗವಾನಾ
ಜೈನಾಪುರಕೆ ಹೋದಾರ ಒಂದಿನಾ
ಧೊರಿಗಳಿಗೆ ತಟ್ಟಿತೋ ವಿಗ್ನ
ಉರಿ ಬಡದ ಬಿಗೀತೊ ಬೆನ್ನ
ಬಾಯಿ ಇಸಾ ಕಯಿ ಆಯಿತೊ ಅನ್ನಾ
ಸದಾಶಿವಪ್ಪ ಕೇಳೋ ನೀನಾ
ನಂನ ಜೀವಕ್ಕೆ ಇಲ್ಲೊ ಚಯನ||ತೋಡ||

ತಿರಿಗಿ ಬಂದರೊ ಮರದಿನ
ದೊರೆಗಳಿಗಿಲ್ಲೊ ಸಮಾದಾನಾ
ಚಂದ್ರಮನಂತೆ ಚಲವನ ಮೇಲೆ
ಶಿವಾ ಮುನಿದನ ಆಯಿತವಾರದಿನ||೧||

ಒಂದಿನ ಗಲಗಲಿ ಊರಾಗ
ಕುಂತಿದ್ದ ಹೊಸಮನಿ ಸದರಾಗ
ಮೋಸ ಮಾಡಿಕಾರ ವಿಷಾ ಹಾಕಿದಾರ
ದೂದಪೇಡ ಸಕ್ಕರಿಯೊಳಗ
ಫಳಾರ ಮಾಡ್ಯಾರ ರಾತ್ರ್ಯಾಗ
ಧೊರಿ ಮಲಗಿದ ಮಂಚದ ಮೇಗ
ಕನಸ ಬಿದ್ದಿತೊಂದು ಮನಸಿಗ
ಟಾವಿಕೆ ಧೊರಿ ಕುಂತನ ಚಿಂತಿಯ ಒಳಗ

ಮರದಿನ ಮುಂಜನಿ ಹರಿಯಾಗ
ಶಿಪಾಯಿ ಬಸಪ್ಪಾ ಬಾ ಈಗ
ಹೊಟ್ಟಿ ಉಬ್ಬೆತಿದೇನಕಾರಣ
ಬೇನಿ ಇಕ್ಕೆವ ಗಂಟಲದಾಗ
ಶಿಪಾಯಿ ಬಸಪಂದ ಧೊರಿ ನಿಮಗೆ
ಕಸಾರಕಿ ಬಂದೈತಿ ಮೈಯಾಗ
ಇತ್ತವರಾಗ್ಯಾಟ ಗಂಟಲದಾಗ
ಉಗಳಿದ್ದಿರಿಏ ಹೇಸಕಿ ಮೇಗ॥ಚಾಲ॥

ಆ ದಿನಾ ಹೊದರ ಕೋಲುರಿಗೆ
ಗುಂಡಪ್ಪ ಸ್ವಾಮಿ ದೇವರಿಗೆ
ಅಲ್ಲಿ ಜಡಾ ಆಯಿತ ಧೊರಿಗಳಿಗೆ
ಎಂಟಾನ ಎಂಟ ದಿನ ಮಲಗಿ
ತಿರಿಗಿ ಬಂದಾರ ಎಡಳ್ಳಿ ಊರಿಗೆ
ತಾ ಇರುವ ಸದರ ಅರಮನಿಗೆ
ಬೇಡಿಕೊಂಡ ಮನಿಯ ದೇವರಿಗೆ
ಉಣಿಸೇನಂತ ಐಗೊಳಿಗೆ॥ತೋಡ॥

ರಾಮಪ್ಪ ಅಂತಾನಾ ಕಾರಕೂನಾ
ಮಾರಿ ಕಪ್ಪ ಹಿಡದೈತಿ ಚಿನ್ನಾ
ಚಂದ್ರಮನಂತ ಚಲವನ ಮೇಲೆ
ಶಿವಾ ಮುನಿದನಾಯತವಾರದಿನಾ॥೧॥

ದೇಸಾಯಿ ಅಂತಾನ ಸಮರ್ತಾ
ಯಾಕ ಮುನಿದ ನೀ ಭಗವಂತಾ
ಎಂತಾ ಬೇಸಿದು ಯಾರಿಗೆ ಟಾವಿಕೆ
ಮೈಯಲ್ಲ ಇಟ್ಟತಿ ಇರತಾ
ಬಾಯಿ ಸಾಬಳು ಹೇಳ್ಯಾಳು ಅಳತ
ಗೋವಿಂದಪ್ಪ ಕೇಳೊ ಮಾತಾ
ಎಲ್ಲಿದ್ದಲ್ಲಿ ವೈದ್ಯಗಾರನ
ಈ ವೇಳ್ಯಕೆ ತರಸರಿ ತುರ್ತಾ
ಗೋವಿಂದಪ್ಪಾ ತಾ ಗುಣವಂತಾ
ವೈದ್ಯಗಾರ ಕರಿಸೆನು ಮಸ್ತಾ
ವೈದ್ಯಗಾರರು ತಿಂದ ಹೋದರೊ
ರುಪಾಯಿ ಮುನ್ನೂರ ಅರವತ್ತಾ
ಅಗಸುದ್ದೆ ಮಾಡಸ್ತ ಮಾಡಸ್ತಾ

ವರಸದಿನಾ ದೊರಿ ಬೇಸತ್ತಾ
ದಿನಕ ದಿನಕ ಚಡತಾದಿತ ಬೇನಿ
ತಿಳಿಯವಲ್ಲದಿದರ ಅಂತಾ||ಚಾಲ||

ಅಬಿಷಾಕ ನಡಿಸ್ಯಾನ ದೇವರಿಗೆ
ಸಾಹಿತ್ತ ಕೊಟ್ಟ ಬ್ರಾಮರಿಗೆ
ಜಾಗಾ ಬದಲು ಮಾಡಬೇಕು ಧೊರಿಗಳಿಗೆ
ಅಂತ ಓದರ ಹಂಚಿನಾಳ ಊರಿಗೆ ಧೊರಿಗೆ
ಹೇಳ್ಯಾನ ತಂನ ಮಂದಿಗೆ
ವೈಯಬೇಡರಿ ನಂನ ಬೇಲುರಿಗೆ
ತಾ ನೋಡಿ ತಂನ ಮಡದೀಗೆ
ನೀರ ತಂದಾನ ಕಂಣೀಗೆ||ತೋಡ||

ಬಾಯಿಸಾಬಳು ನೆನಸ್ಯಾಳು ಶಿವನ
ನೀ ಕಾಯೊ ನಂನ ಮುತ್ತೇದಿತನ
ಚಂದ್ರೆಮನಂತ ಚಲುವನ ಮುಂದ
ಶಿವಾ ಮುನಿದನಾಯತವಾರದಿನಾ||೩||

ಹಂಚಿನಾಳ ಊರಾಗ ದೊರಿಯಿದ್ದ
ಜೈನಾಪುರ ದೇಸಾಯಿ ಬಂದ
ಸೊನ್ನದ ದೇಸಾಯಿ ಗುರಸಿದ್ದಪ್ಪಾ
ದೊರಿ ಮೋರಿ ನೋಡಿ ಅಳತಿದ್ದ
ದೊರಿಗೊಳ ತಂಗೆರ ದುಃಖ ಬಂದ
ಏನು ಹೇಳಲಿ ನಿಂಮ ಮುಂದ
ಅಕ್ಕತಂಗೆರ ಮಹಾದುಃಖ ಮಾಡತಾರ
ಅಳತಾರ ಧೊರಿ ಕೊರಳಿಗ ಬಿದ್ದ
ಸದಾಶಿವಪ್ಪನ ಧೊರಿ ಕರದ
ಲಗುಮಾಡಿ ಮೇಣೆವು ಬರಲಂದ
ಎಡಳ್ಳಿ ಊರಿಗೆ ತೊಗೊಂಡ ನಡೀರಿ
ಬೇನಿ ಹಗರ ಆದಿತ ನಂದಾ
ಸದಾಶಿವಪ್ಪ ಹೀಂಗ ತಿಳಿದ
ಲಗುಮಾಡಿ ಮೇಣೆವು ತರಸಿದ
ಮೇಣೆದ ವಳಗೆ ಮನಗ್ಯಾನ ದೊರಿಯೆ
ಎಡಳ್ಳಿ ಊರಿಗೆ ತಾ ಬಂದ ||ಚಾಲ||

ಅರಮನಿ ಮನಗುವ ಕೋಲಿ
ಧೊರಿ ನೋಡುತಾನ ಸುತ್ತಲಿ
ಬಾಯಿಸಾಬಳ ಕುಂತಹಂತೀಲಿ
ನೀರ ಚಲ್ಲತಾಳ ಕಂಣೀಲಿ
ಬಹು ಚಿಂತಿ ಆಗಿ ಮನದಲ್ಲಿ
ಯಾಕೆ ಶಿವಾ ಮುನದಿ ನಂನಮೇಲಿ
ಸವಸವದು ಸಿಂಪಿಯಾದಲ್ಲಿ
ದುಃಖ ಬರತತಿ ಏನು ಹೇಳಲಿ||ತೋಡ||

ಹೀಗ ಮಾಡಿದಿ ಭಗವಾನಾ
ಎದ್ದ ಮಾಡಲಿಲ್ಲ ಧನಿತನ
ಚಂದ್ರೆಮನುತ ಚಲುವನ ಮೇಲೆ
ಶಿವಾ ಮುನಿದನಾಯತವಾರ ದಿನ||ಳ||

ಹೊರಕಡಿಗ ಹತ್ತಿತು ಧೊರಿಗೊಳಿಗೆ
ಶಕ್ಕಿಯಾದಿತೊ ಮೈವಣಗಿ
ಕಿತ್ತ ಬೀಳುವ ನೆತ್ತರ ಬಾಯಿಲೆ
ಧೊರಿ ತಿಳದನ ತಂನ ಮನಸೀಗೆ
ಸಂಕ್ರಾರ ದಿನ ತಂಮ ಗುರಗೊಳಿಗೆ
ಕರಸಿಕೊಂಡ ತಂನರಮನಿಗೆ
ಎರಡ ಆಕಳಾ ಅಚ್ಚೆರ ಬಂಗಾರ
ದಾನಕೊಟ್ಟ ತಂಮೈಗೊಳಿಗೆ
ಉಪ್ಪೆಂಣಿ ಕೊಟ್ಟರ ಮಠದವರಿಗೆ
ಒಂದೊಂದು ಬಿಳಿ ಹೊಳ ಎಲ್ಲರಿಗೆ
ಅದೇ ದಿನಾ ಒಂದು ಕುದರಿ ಕೊಟ್ಟನೊ
ಪುಣೇದ ಐಗುರ ಸ್ವಾಮಿಗೆ
ಶನಿವಾರ ಮೂರು ತಾಸ ರಾತ್ರಿಗೆ
ಕರಸಿಕೊಂಡ ತಂನ ಮಡದೀಗೆ
ಜಮದರ ಖಾನಿ ಕೀಲಿಕೈ
ಹಿಡಿ ನೀ ಕೊಡಬೇಡ ಯಾರೀಗೆ||ಚಾಲ||

ಹೀಗಂತ ಹಾಕಿದಾನ ಉಸರಾ
ಮಾತಾಡತ ಹಾರಿತೊ ಖಬರಾ
ಧೊರಿ ಮಾಡತಾನು ಎತ್ತಾರಾ
ಮೇಲುಸರ ಇಕ್ಕಿತೋ ಫೇರಾ
ಬಾಯಿಸಾಬಳ ಎದಿ ವಡದಾ ನೀರಾ

ದುಃಖ ತುಂಬಿ ಬಂತೊ ಸಮದರಾ
ಅಳತಾರೊ ಅಕ್ಕ ತಂಗೇರ
ಬಿಟ್ಟ ಹೊಂಟೊ ನಂಮ ಸರದಾರಾ॥ತೋಡ॥

ಬೆಳಗು ತಾಸ ಉಳಿದೀತ ಇನ್ನಾ
ಜೀವ ಬಿಟ್ಟ ಮನಮೋಹನ್ನಾ
ಚಂದ್ರೆಮನಂತ ಚಲುವನ ಮೇಲೆ
ಶಿವಾ ಮುನಿದನಾಯತವಾರದಿನಾ॥ಅ॥

ಆಯತವಾರದಿನ ಹರಿಯಾಗ
ಸುದ್ದಿ ಹರಿತ ಸುತ್ತ ನಾಡೀಗ
ಸುದ್ದಿ ಕೇಳಿ ಎದಿಬಯಿ ಬಡಕೊಂಡು
ಬಿದ್ದಳತಾರ ಧರಣಿಯ ಮೇಗ
ಅಗಾಧ ಹದಿನಾರ ಹಳ್ಳ್ಯಾಗ
ಘೊಳಿಟ್ಟತಿ ಅರಮನಿಯಾಗ
ಕೊಂಣೂರ ಮಂಟೂರ ಚಪಲಕಟ್ಟಿ
ಅಕ್ಕತಂಗೆರ ಬಂದರಾವಾಗ
ಜೈನಾಪೂರ ಧೊರಿಯಾಗ ಸುದ್ದಿಕೇಳಿ
ಮುದವಳದಾಗ
ಬತ್ತಲಿಗುದರಿ ವತ್ತರಮಾಡಿ ಹತ್ತಿ ಬದ
ಮೂರ ಘಳಿಗ್ಯಾಗ
ಏನು ಹೇಳಲಿ ನಾ ನಿಮಗೆ
ಸರ್ವ ಸಾಹಿತ್ತ ಮಾಡ್ಯಾರಾಗ
ಡಂಕೆ ನಿಶಾನಿ ನಗಾರಿ ನೌಬತ್ತ
ಬಂದ ನಿಂತವೊ ಅಂಗಳದಾಗ॥ಚಾಲ॥

ಸರ್ವ ಶಿಂಗರ ಕುದರಿಗೆ ಮಾಡಿ
ಚಾಬಕ ಸ್ವಾರ ಬೋರ್ಯಾಡಿ
ಇಮಾಮ ಗ್ಯೆಬ ದುಃಖ ಮಾಡಿ
ಅಳತಾರೊ ಮಂಣಾಗ ಹೊರಳಾಡಿ
ಮುಂದ ಹಿಡದವೊ ಕುದರಿಯ ಜೋಡಿ
ಕುದರಿ ಅಳತಾವೊ ಮೊಕ ಬಾಡಿ
ಕುದುರಿಯ ಕಂಣನ ನೀರ ನೋಡಿ
ಅಳತೈತಿ ಜನಾ ಬೋರ್ಯಾಡಿ॥ತೋಡ॥

ಹೊರಗ ಹೊಂಟಿತೊ ಇಮಾನ
ಸುತ್ತಗಟ್ಟಿ ಅಳತತಿ ಜನ
ಚಂದ್ರಮನಂತ ಚಲುವನ ಮೇಲೆ
ಶಿವಾ ಮುನಿದನಾಯತವಾರದಿನಾ॥೬॥

ಸ್ವಾರಿ ಹೊಂಟಿತೊ ಊರ ಹೊರಗ
ಧೊರಿ ಕುಂತ ಇಮಾನ ಸದರಾಗ
ರತ್ನ ತುಂಬಿದ ಹಡಗ
ಮುಣಗಿತೊ ದುಃಖ ಎಂಬ ಸಮದರದಾಗ
ಬಾಯಿಸಾಬಳ ಹೇಳ್ಯಾಳಗ
ಕೊಟ್ಟ ನಡದಿ ಯಾರ ಕೈಯಾಗ
ದಿಕ್ಕ ಇಲ್ಲದೆ ಪರದೇಶಿ ಮಾಡಿ
ಬಿಟ್ಟ ಹೊಂಟೆ ನಡ ನೀರಾಗ
ಧೊರೆಗಳ ತಂಗೇರಾವಾಗ
ಏನು ಹೇಳಲಿ ನಾ ನಿಮಗೆ
ತವರಮನಿ ಶರಿಸೂರಿ ಆದಿತಂತ
ಬಿದ್ದಳತರ ಭೂಮೀ ಮೇಗ
ಇಳಿವ್ಯಾರ ತಂಮನ ತಡಿಯಾಗ
ಬಾಯಿಸಾಬಳ ಹೊಕ್ಕಳ ವಳಗ
ತೆಕ್ಕಿ ಹಾದ ಮಾ ದುಃಖ ಮಾಡತಾಳ
ಮುಣಗ್ಯಾಳ ಚಿಂತೀ ಮಡದಾಗ॥ಚಾಲ॥

ನಂಮ ಧೊರೀನ ಕಂಣ ತುಂಬ ನೋಡಿ
ಹ್ಯಾಂಗ ಹೋಗುನ ಮಂಣ ಮರಿಮಾಡಿ
ಭಾಳ ಮಂದಿ ಜನ ಅಲ್ಲಿ ಕೂಡಿ
ಬಾಯಿಸಾಬಳ ಸಮಾಧಾನ ಮಾಡಿ
ರೊಕ್ಕ ರುಪಾಯಿ ದಾನಾ ಮಾಡಿ
ತಿರಿಗಿ ಬಂದರ ಊರ ಕಡಿ
ವಿರಗೈಬು ಪಾದಾ ನೋಡಿ
ಹುಶೆನ ಸಾಹೆಬ ವಸ್ತಾದ ಕವಿ ಮಾಡಿ॥ತೋಡ॥

ಬಾಳಾರಾಮ ಅಂತಾನ ರಹಿಮಾನ
ಸೂರಿ ಆದಿತ ದೊಡ್ಡ ಸಂಸ್ಥಾನಾ
ಚಂದ್ರಮನಂತ ಚಲುವನ ಮೇಲೆ
ಶಿವಾ ಮುನಿದನಾಯತವಾರದಿನಾ॥೭॥

*/song stress/¨Á½ EAn UÀÄ¼ÉÃzÀUÀÄqÀØ 30£ÉÃ eÁ£ÉªÁj 1874 E || (MAzÀÄ ¸ÀAQë¥ÀÛ ¸À» EzÉ).

***ಕವಿ :*** ಹುಸೇನಸಾಬ

***ಕೃತಿ :*** ಫ್ಲೀಟರು ಸಂಗ್ರಹಿಸಿದ ಲಾವಣಿಗಳು

## ೧೬. ಬಾದಾಮೀ ಕಿಲೆ ಕೆಡವಿದ ಪದ

ಭಾದೂರ ಕಟ್ಟಿಸಿದಂಥ ಬಾದಾಮಿ ಕಿಲೇಕ
ಬಂತೊ ಪ್ರಳಯಕಾಲಾ ।
ಸುತ್ತ ರಾಜ್ಯದೊಳು ಮೇಲಾದ ಕಿಲೆಯ
ಆಯಿತೊ ನೆಲದ ಪಾಲಾ ॥ಪಲ್ಲ॥

ಕಿಲೇದ ಚಮತ್ಕಾರ ಹೇಳತೀನಿ ಕೇಳರಿ ಮಜಕೂರಾ
ಗುಡ್ಡದ ಮೇಲೆ ಗಡಾ ಕಾಣತದ ಭಾಳ ಅಪರಂಪಾರಾ
ಮುನ್ನೂರ ಅರವತ್ತು ಕಿಲೇವು ಕಟ್ಟಿಸಿದ ಭಾದೂರ ಸಾಹೇಬರಾ
ಕುಂಟ ಕುರುಡರಿಗೆ ಅನ್ನಕ್ಷೇತ್ರ ಅಲಿ ಇಟ್ಟಿದ ಕರಾರಾ
ಬಸರ್ಥಿಂಗಸರಿಗೆ ಎರಡಾಳಿನ ಕೂಲಿ ಕೊಟ್ಟನ ಮಜೂರಾ
ಒಂಬತ್ತು ವರುಷ ಕಟ್ಟಿದ ಜನ ಹನ್ನೆರಡು ಸಾವಿರಾ
ಸುತ್ತ ಅಳವಾರಿ ಕಬ್ಬಿಣ ದ್ವಾರಗಸಿ ಇದ್ದವನೂ
ಕಲ್ಲು ಗಚ್ಚಿಲೆ ಕಟ್ಟಿದ ಗೊ[]ಡಿಗೆ ಬರದಾರ ಚಿತ್ತಾರಾ ॥ಚಾಲ॥

ಬ್ರಾಮರಿಗೆ ಜಂಗಮರಿಗೆ ಭೂಮಿದಾನ ಪತ್ತಾರಾ ಪತ್ತಾರಾ
ಕಾಜಿ ಮುಲ್ಲಾ ಪಕೀರಗೆ ಊರ ಕೊಟ್ಟ ಜಾಗೀರಾ ಜಾಗೀರಾ
ಸುರ ಶಿಪಾಯಿ ಚಾಕ್ರಿ ಅವರ ಮೇಲೆ ಇತ್ತು ಬಲ ಪೇರಾ ಪೇರಾ
ವರಟಾರು ಘನ ಶೀದಾ ಲೋಕದೊಳಗೆ ಜಾಹೀರಾ ಜಾಹೀರಾ
ಭೂದಾರನ ಹುಕುಮು ನಡೆಸುತ್ತಿದ್ದ ಬಲ ದೂರಾ ದೂರಾ ॥ತೋಡ॥

ಪುಣ್ಯವಂತ ಮಾರಾಯರ ಗುರತಾ ಉಳಿಯಲಿಲ್ಲ ಜರಾ
ಕೂನದ ಕಿಲ್ಲೆವು ಕುಂಪಣಿಯವರು ಮಾಡ್ಯಾರ ಸಂವಾರಾ॥೧॥

ಕಿಲೇ ಕೆಡುವಾಗ ನಾಡಮೇಗಿನ ಜನ ಮರಗಿತೊ ಮರಮರಾ
ಶಿಪಾಯಿ ಸೂರರು ಉಪಾಯ ಏನದೆ ತಂದರ ಕಂಣಿಗೆ ನಿ[]ರಾ

ಮುತ್ತಿನಂತ ಬುರುಜು ಸುತ್ತಲೆ ಬಿದ್ದವು ಹೇಳಲೇನ ಹೆಸರಾ
ಹುಡುಗಾಟ ಆದಿತು ಕಲಿಯುಗದೊಳಗ ತಿಳಿಯ ಚಮತಕಾರಾ
ಸರಕಾರ ಬಂದು ಕೆಡವಿದ ಮೇಲೆ ಯಾರಿಲ್ಲ ಈ ಧರಾ
ಕಳಸ ಇಲ್ಲದ ತೇರಿನಗತಿ ಬಾದಾಮಿ ಶೃಂಗಾರಾ

ಚಪ್ಪನ್ನ ದೇಶಕೆ ಪ್ರಶಿದ್ಧ ಜಾಗಾ ಆಳಿಕೆ ಥೋಪಾರಾ
ಸಾದಾಸಿ ನೋಡಲು ಶಾಸ್ತ್ರಸಿದಂತ ಬಾದಾಮಿ ಕ್ಷೇತರಾ ||ಚಾಲ||

ದೇಸಾಯಿ ಅಂತಾನ ಗೋಷವಾದಿತು ಹಣೆಭಾರಾ ಹಣೆಥಾರಾ
ಯುಗತಿದಿಂದತಿ ತೊಗಂಡರು ಎಲ್ಲ ರಾಜದ ಕರಾಕರಾ
ಅಲ್ಲಿಂದ ಕಿಲೇ ಅಳಿದಾರೊ ಗುಡಿಯ ಗೋಪರಾ ಗೋಪರಾ
ದಿನ ಒಂದಕು ಹುಕುಮು ನಡಸುತಾರ ಇಲ್ಲ ಸ್ಥೀರಾ ಸ್ಥೀರಾ ||ತೋಡ||

ಕ್ಷಿತಿಯೊಳು ಬಾದಾಮಿ ಪತಿ ವಿರುಪಾಕ್ಷನ ಕರುಣದಿ ವಿಸ್ತಾರಾ
ತಿಳಿದು ಹೇಳಿದನು ಜಾಣಿಸಿ ಕೇಳಿರಿ ಬಲ್ಲಂತ ಹಿರಿಯರಾ
ಪೇಶವಾನ ಮೊಗಲಾಯಿ ಕಾಲಕೆ ಲಡಾಯಿ ಅಯಿತ ಟೀಕ
ಏಳನೂರ ಪಾಲಕಿ ಕಾಲಿಮಾಡಿದ್ದು ಟಾವಿಕಿತ್ತೊ ಜನಕ
ಹತ್ತೆಂಟಸರ್ತಿ ಲಡಾಯಿ ಹೊಡದವರು ರಾಜ್ಯಕ ಬಿದ್ದು ಬೆಳಕ
ಟೀಪುಸುಲ್ತಾನ ಭಾದೂರ ಸಾಹೇಬಗೆ ಮುತ್ತೂ ಮಾಣಿಕ
ಮದ್ದುಗುಂಡು ಜಂಜಾಲು ಟೋಪಗಳು ಇದ್ದವು ಅನೇಕ
ಶಾಣೆ ಮನುಷ್ಯನ ಜಾಣಿಸಿ ನೋಡಿರಿ ಕಂಡ್ಹಂಗ ಪ್ರತಿಲಂಕ ||ಚಾಲ||

ಕರ್ನಾಟಕ ಪ್ರಾಂತಕೆ ಆಧಾರ ಇತ್ತು ಈಗಡಾ ಈಗಾಡಾ
ಬಡುಕೊಂಡು ಹೋದರೆ ಕೇಳವರ್‍ಯಾರಿಲ್ಲ ನಾಡಾ ಕೇಳಾ ನಾಡಾ
ಎಂತ ಹೊತ್ತು ತಂದ್ಯೋ ಪರಮೇಶ್ವರ ಕಿಲೆಯಕ ಕೇಡಾ ಭಲ ಕೇಡಾ
ಕೆಡುವಾಗ ಶಿಡಲಿನಂತ ಸಪ್ಪಳಾಯಿತೊ ಧಡಧಡಾ ಧಡಧಡಾ
ಧುಳ ಮುಸಕಿ ಸೂರ್ಯಗೆ ಬಂದ್ಹಾಂಗಾಯಿತು
ನೋಡು ಮೂಡ ನೋಡ ಮೂಡಾ ||ತೋಡ||

ತಿಳಿದು ನೋಡ ಲೆಕ್ಕಾ ಓದಿದ ಮನುಷ್ಯಗೆ ಕಾಲಗ್ನಾನ ವಳದಿತು ಮನಾಕ||೧||

*** /song stress/ಬಾಳಿ ಇಂಟಿ ಗುಳೇದಗುಡ್ಡ ೨೯ನೇ ಜಾನೆವಾರಿ ೧೮೭೪ ಇ || (ಒಂದು ಸಂಕ್ಷಿಪ್ತ ಸಹಿ ಇದೆ).**

***ಕವಿ :*** ವಿರುಪಾಕ್ಷ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

# ೧೭. ಮಂಡ್ರೋಲ ಸಾಹೇಬರ ಪದ

ಮೊದಲಿಗೆ ಮಂಡ್ರೊಲ ಸಾಹೆಬ ಬಂದು ಬೇತಮಾಡೀ ।
ಠಣೆವ್ಹಾಕಲಿಬೇಕೆಂದೊಳ್ಳೇ ಕಿಲ್ಲೆವ ನೋಡೀ ॥ಪಲ್ಲ॥

ಶ್ರೀಮಂತರ ದೌಲತ ಏನು ಮೌಜಿಲಿತ್ತೂ ।
ಬಲೆ ಭಲೇ ಶಿಪಾಯಿ ಬಿಟ್ಟು ೧ಹೋದರು೧

[1]ಬ್ಯಾಸತ್ತೂ ।
ಆ ಸಾಹೆಬ ಗೋಕುಲ್ಯಾ ಲಡಾಯಿ ಮಾಡಿ ಸತ್ತೂ ।
ಇಂಗ್ರೇಜರ ದಂಡು ಬಿಡದಲೆ ಬೆನ್ಹತ್ತೂ ॥ಚಾಲು॥
ಪುಂಡ ಪಾಳಗಾರರು ಕೂಡೀ ।
ತಂಮೊಳಗ ತಾವು ಮಾತಾಡಿ ।
ಕಳಕೊಂಡರು ನೆಂಬಿದ ಗೋಡೀ ।
ಬಿಟುಕೊಟ್ಟು ಹೋದರವರೋಡಿ ॥ಏರು॥

ನೆಲೆಯಿಲ್ಲದಾಯಿತೂ ನೀವು ಕೇಳಿರೀಗ ।
ಪರಂಗೇರ ಠಾಣೆವು ಬಿದ್ದಿತು ಪುಂಣೇದಾಗ॥೧॥

ಧಾರವಾಡದ ಕಿಲ್ಲೆವ ಠಾಣೆವ ಹಾಕತಾರಾ ।
ಅಲ್ಲಿಂದ ತಕ್ಕೊಂಡಾರು ಬೆಳಗಾವಿ ಶಾಪೂರಾ ।
ಬಾದಾಮಿ ಮೇಲೆ ದಂಡು ಕೂಡಿತೆ ಬಲು ಪೂರಾ ।
ಗದಿಗಿನಾ ಸೀಮೆ ೨ಮೇಲೆ೨[2] ನವಲಗುಂದ ಜೇರಾ ॥ಚಾಲು॥

ಡೊಂಬಳದ ಕಿಲ್ಲೆವ ನೋಡಿದಾರು ।
ಸನ್ಮಾತದಿಂದ ಬೇಡಿದಾರು ।
೩ದೊಡ್ಡ೩[3] ತೋಪ ತುಂಬಿ ಹೊಡಸಿದಾರೂ ।
ಕಲ್ಲುಗೋಡಿ ಒಡು ಕೆಡಿಸಿದಾರು । ॥ಏರು॥

ಕಡದಾಡಲಿಲ್ಲ ಕರ್ನಾಟ ದೇಶದ ಮಂದೀ ।
ಜಗಳಕೆ ಜರಿದು ಕೊಟ್ಟು ೧ಹೋದರು೧ ತಾವಂಜಿ॥೨॥

ಸುತ್ತಲೀ ರಾಜೆವ ಠಾಣೆವ ಹಾಕುತಾಲೀ ।
ರೈತರಿಗೆ ರಾಜಿ ಮಾಡಿ ಬರದು ಕೊಟ್ಟರೋಲಿ ।
ಹಿಂಗ ತಿಳಿಯದ್ಹೋದಿತು ಪರಂಗೇರ ನೇಲಿs
ಏಕರಾಜ್ಯ ಮಾಡಿದಳು ಕುಪಣಿ ಹೆಂಣ ಬಾಲಿ ॥ಚಾಲು॥

ಆಕೆ ಹೇಳಿದ ವಚನಾದಿಂದ ।
ಬಾರ ನೆಡಿತು ಸಾಹೆಬರಾ ಮುಂದ ।
ತುರ್ಪಿನಾ ಫೌಜು ಹಿಂದಿಂದ ।
ಬಲಕಚೆರಿ ನೆರದತೆ ದುಂದ ॥ಏರು॥

ರೋಣದಾಸಮತ ತಾಲೂಕ ಸುದ್ದಿಯೇನು ।
ಇಂಗ್ರೇಜಿ ಮುನಶಿ ಕುಂತು ವಿಚಾರ ಮಾಡಿದಾನು॥೩॥

ಎಂತೆಂತ ಕಿಲ್ಲೆವು ಬಿದ್ದುಹೋದವಲ್ಲ ಗೋಡೀ ।
ಮೇಗಿನ ತೋಪಗಳು ಕಿತ್ತರು ಈಡ್ಯಾಡೀ ।
ತಂಮ ರಾಜ್ಯೆದ ನಡತಿ ದೇಶಕೆಲ್ಲ ಮಾಡೀ ।
ರೊಕ್ಕ ತಿಂದವರಿಗ್ಯಲ್ಲಾ ಹಾಕುತಾರ ಬೇಡೀ ॥ಚಾಲು॥

ಸರದಾರ ಸಾಹೆಬ ಸಿಟ್ಟೀಲಿ ।
ಕುಂತನು ಕುರ್ಸೆದ ಮೇಲೆ ।
ದಂಡ ಯಿಳವಿದ ಸುತ್ತಮುತ್ತಾಲಿ ।
ರೈತರಿಗೆ ಬರದು ಕೊಟ್ಟರೋಲಿ ೪[ಏರು]೪

ಧರಿಯೊಳಗ ಮೆರವ ಬ್ರಹ್ಮೇಶ ಬಟ್ಟಿಗೇರಿ ।
ಆತನ ಕರುಣವಸಕರಡಿ ಬಾಲ ಸಾರಿ॥೪॥

**ಸಮಾಪ್ತ ॥***

**೪ ಊ.ಪ. *ಪರಿಯ್ಯಾ ಬಿಂನ ವೀರಭದ್ರಯ್ಯಾ ಗಣಾಚಾರಿ ಬಾದಾಮಿ, ೫ನೇ ಫೇಬ್ರುಅರಿ ಸನ್ ೧೮೭೪ ಇಸವಿ.**

***ಕವಿ :*** ಬ್ರಹ್ಮೇಶ ಬಜ್ಜಗೇರಿ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] ಹೊದರು

[2] ಮೆಲೆ

[3] ದೆಡ್ಡ

# ೧೮. ಲಾವಣಿ*

ಜನರು ಕೇಳಿರಿ ಕೇಳಿರಿ ಕಿವಿಗೊಟ್ಟು।
ಕಥೆಯಲ್ಲದ ಕಥೆ ಕಂಡ ಮಾತು।
ಪಿರಂಗೇರ ದೌಲತ ಬಂದಿತ್ತು।
ಶಾರ ವಿಲಾತಿ ವಿಲಾತಿ ಕಳಕತ್ತೆ।
ಮುಮ್ಮಯಿ ಸುರಪುರಗಿತ್ತು।
ಬಹಳ ಶೃಂಗಾರ ಶೃಂಗಾರ ಶೃಂಗಾರವಾಗಿದತ್ತು।
ವಜ್ರ ವೈಡೂರ್ಯವ ಕೆಚ್ಚಿತ್ತು।
ಲಾಜವರ ಬಣ್ಣ ಬಣ್ಣದ ಗೋಡಿಸುತ್ತು।
ಅಳವರಿ ಮುತ್ತು ಬಿಗಿಸಿತ್ತು।
ಊರು ಬಾಜಾರ ಬಾಜಾರ ಯಾವತ್ತು।
ಬಂಗಾರದ ಸಾರಣಿ ಮಾಡಿತ್ತು॥೧॥

ಮುಮ್ಮಯಿ ಮುಮ್ಮಯಿ ದೊಡ್ಡಶಾರ
ಆ ಊರೊಳಗಾಗುವ ವ್ಯಾಪಾರ।
ಬಿಡದೆ ಹೇಳುವೆ ಹೇಳುವೆ ಶೃಂಗಾರ
ಚಿನ್ನ ಮಾರುವ ಚಿನಿವಾರ।
ಹಡಗ ವ್ಯಾಪಾರ ವ್ಯಾಪಾರ ಗುಜ್ಜರ।
ಮುತ್ತು ಮಾರುವ ಮಾಣಿಕಗಾರ
ಚಿಕ್ಕ ತಕ್ಕಡಿ ತಕ್ಕಡಿ ಅಂಗಡಿಕಾರ।
ಬಣ್ಣ ಬರಹುವ ಬರಹುವ ಚಿತ್ರಗಾರ।
ಸುಳಿವ ಮಕಮಲು ಮಕಮಲು ಜರತಾರ।
ಬುಟಿ ನೇಯೋ ಚಾತೂರ॥೨॥

ಕುಂಪಣಿ ಕುಂಪಣಿ ಸರಕಾರ।
ಬಿಡದೆ ಹೇಳುವೆ ಶೃಂಗಾರ।
ತೋಪು ಹದಿನಾರು ಹದಿನಾರು ಸಾವಿರ।
ಗಾಡಿ ರಥ ಬಾರ ಹಜಾರ।
ಆನಿ ಐನೂರು ಐನೂರು ಸಾವಿರ।
ಕೋಟಿ ಕುಣಿವ ಕುದರಿ ಸ್ವಾರಿ।
ಬಹಳ ಬಂದೂಕ ಬಂದೂಕ।
ಹತ್ಯಾರ ಲೆಕ್ಕವಿಲ್ಲದೆ ಕುವಾಡ।
ಹೇಳಲಳವಲ್ಲ ಅಳವಲ್ಲ ಪರಂಗೀರ ದೌಲತ
ಮಾಡುವ ಚಮತ್ಕಾರ ಜನರು ಕೇಳಿರಿ॥೩॥

ಪಾರಂಗಿ ಪಾರಂಗಿ ಹೊಂಟನ್ನೋಡಿ।
ಮೂರು ಲಕ್ಷ್ಯದ ದಂಡಕೂಡಿ।
ಸಾರ ಟೊಪ್ಪಿಗಿ ಟೊಪ್ಪಿಗಿಯ ಚಕ್ಕಡಿ।
ಜರದ ಮರಿಕುದರಿ ರಥಕ್ಕೆ ಹೂಡಿ।
ಕಾಲ ಬಲವೆಲ್ಲ ಬಲವೆಲ್ಲ ತಯ್ಯಾರ ಮಾಡಿ।
ಮಂಡಲ ಸಾಹೇಬ ದುರ್ದುಂಬಿ ಮಾಡಿ।
ಸಾರ ಶೃಂಗಾರ ಪಟ್ಟಣ ನೋಡಿ।
ಭರದಿ ಬಂದು ಮುತ್ತಿಗಿಯ ಮಾಡಿ।
ಠಾಣ್ಯ ತಕ್ಕೊಂಡ ತಕ್ಕೊಂಡ ಪಿತೂರಿ ಮಾಡಿ।
ವೀರಸಾಯ್ಬನ ಹಾಕ್ಯಾರ ಬೇಡಿ॥೪॥

ಅಲ್ಲಿಂದ ಅಲ್ಲಿಂದ ಶ್ರೀಮಂತರ।
ದೌಲತ ಮಾಡೋ ಪುಂಣ್ಯೆಶರ
ಠಾಣ್ಯ ಹಾಕಿದ ಯುಕ್ತಿಗಾರ।
ಮಂಡಲ ಸಾಹೇಬೆಂಬೋ ಸರದಾರ
ಮಲಸರ್ಜ ಜಾಗೀರ।
ಮಾಡಿಕೊಂಡು ಇದ್ದನು ಕಿತ್ತೂರ।
ಜಗಳದ್ವಿಸ್ತಾರ ವಿಸ್ತಾರ।
ಮುಂನೂರ ಚೆನ್ನವ್ವ ಕರಿಶ್ಯಾಳು ಹಬ್ಸೇರ।
ಹಲ್ಲು ಕಡಿವಂತ ಕಡಿವಂತ ಬಂಟರ।
ಬಾಗಿಲದೊಳು ಇಟ್ಟರು ಪಾರೆಹ॥೫॥

ಬತ್ತಲ ಬತ್ತಲ ಕುದರಿ ಹತ್ತಿ।
ಪಿರಂಗೇರೂರಿಗೆ ಮುತ್ತಿ।
ಬಾರು ಮಾಡಿದರು ಮಾಡಿದರು ಕೋವಿಯೆತ್ತಿ।
ಸಾಯಿ ತೋಟೆಗೆ ಕೊಟ್ಟರು ಒತ್ತಿ।
ಚೆನ್ನವ್ವ ಕೇಳ್ಯಾಳು ಚಿಂತಿ ಹತ್ತಿ।
ಬಂಟರಿಗೆ ಹಿರಿಯೆಂದಳು ಕತ್ತಿ।
ಹಬ್ಸೇರೆಲ್ಲಾರು ಎಲ್ಲಾರು ನಡುವ ಸುತ್ತಿ।
ಕಡಿಕಡಿಯೆಂದಳು ಬೆನ್ಹತ್ತಿ।
ನೆತ್ತರು ಹರದೀತು ಹರದೀತು ಕಂಫ್ಹತ್ತಿ।
ಟಕಾರ ಸಾಯ್ಬ ಸತ್ತನು ಗುಂಡ್ಹತ್ತಿ॥೬॥

ಸರದಾರ ಸರದಾರ ಸತ್ತ ಸುದ್ದಿ ಕಳುಹಿದರು ಇಲಾತಿಗೆ।
ಹುಕುಮ ಆದಿತು ಆದಿತು ಚೆನ್ನವ್ವಗೆ।
ಕೊಯ್ದು ಬಿಡಿರವಳ ಮೊಲಿ ಮೂಗ।

ಅಪ್ಪಣಿ ಅಪ್ಪಣಿ ಕೊಟ್ಟರು ಅವಗೆ ।
ಬಂದು ಮುತ್ತಿದರು ಮುತ್ತಿದರು ಕಿತ್ತೂರಿಗೆ ।
ಮಂದಿ ಸಿಕ್ಕೀತು ಮಂದಿ ಸಿಕ್ಕೀತು ಒಳುತಾಗೆ
ಸಾಯಿತತಿ ಹೊಯ್ದು ಬಿಟ್ಟರವಗೆ॥೭॥

ಕೇಳಿರಿ ಕೇಳಿರಿ ಕಿತ್ತೂರ ಸೂರಿ ।
ಬೆಳ್ಳಿ ಬಂಗಾರ ಹೊನ್ನು ಹೇರಿ ।
ಕೊಟ್ಟು ಕಳುಹಿದರು ಕಳುಹಿದರು ಹುಕುಮು ಮೀರಿ ।
ಸೊಸಿ ಈರವ್ವನ ದೊರಿ ಸೂರಿ ।
ದುಃಖ ಮಾಡ್ಯಾಳು ಮಾಡ್ಯಾಳು ಬಲಭೋರಿ ।
ನೆಲ ಕೆದರಿ ಮಣ್ಣ ಸೂರಿ ।
ಹಾರ ಹರುವಳು ಹರುವಳು ಗಂಡನ ಮಾರಿ ।
ಕಾಣೆನಯ್ಯಯೋ ಯೆನುತ ಧರೆಗೆ ಬಿದ್ದಾಳು ಬಾಯಾರಿ ।
ಏನು ಹೇಳಲಿ ಅಳುವ ಸೂರಿ । ಜನರು ಕೇಳಿರಿ॥೮॥

ಮೈಸೂರು ಮೈಸೂರು ನಗರದಾಗೆ ।
ನಾಕ ಎಪ್ಪತು ಕೇಳು ಬಾಲಗಾ ।
ದಂಡು ಕೂಡೀತು ಕೂಡೀತು ಹ್ಯಾಗೆ ।
ಹವಳ ಮುತ್ತುಗಳ ಬೆರಸಿದ್ಹಾಗೆ ।
ಜಗಳವಾದೀತು ಒಳುತಾಗೆ ।
ಸುದ್ದಿ ಹತ್ತಿತು ಪಿರಂಗಿಗೆ ।
ಬಹಳ ಸಿಟ್ಟಾದನು ಸಿಟ್ಟಾದನು ಮನದಾಗ ।
ಹಲ್ಲು ತಿಂದಾ ಅವರ ಮ್ಯಾಲೆ ।
ಬಂದು ಕಸಗೊಂಡ ಕಸಗೊಂಡನು
ಅವಗೆ ಕರ್ಚು ಕೋವಿಟ್ಟೆಯ ಕೈಯಾಗೆ॥೯॥

ಪವನ್ನಾಳು ಪವನ್ನಾಳು ಪವನಗಡ ।
ಭರ್ತಪುರ ಡಿಳ್ಳಿ ದಾರವಾಡ ಪುಣ್ಯ ।
ಪಟ್ಟಣ ಪಟ್ಟಣ ಜೋಡನಾಡ ।
ಸುರಪುರ ಸಿವಮಗ್ಗಿಯ ಕೂಡ ।
ಠಾಣೆ ಬಿದ್ದಾವು ಬಿದ್ದಾವು ಗಜೇಂದ್ರಗಡ ।
ದೇಶದೇಶದಲ್ಲಿ ಬಹಳ ತೋಡಾ ।
ಮಾಡಿ ಗೆದ್ದಾನು ಗೆದ್ದಾನು ಇವರ ಜೋಡ ।
ಕಾಣೆ ಕಾಳಗ ಕಾಳಗ ಕವಿತಮಾಡಿ ।
ಬಹುಜಾಣರೆಲ್ಲರು ಗಾಡಾ॥೧೦॥

## ೧೯. ಲಾವಣೀ ಪದ – ೧

ಪುಣೇ ಶಾರದಾಗ ಬಾಜಿರಾಯಂದು ಮೂರು ಲಕ್ಷ ದಂಡ ।
ಭಲಾಕೀ ಜಾಣ ಮೂರು ಲಕ್ಷ ದಂಡ ।
ಗಂಗಾಧರಶಾಸ್ತ್ರೀಗೆ ಬಡಕೊಂಡು ರಾಜ್ಯವ ಕಳಕೊಂಡ ॥ಪಲ್ಲ॥

ಭಾವೆ ಗೋಖಲೆ ಭಲೇ ಶಿಪಾಯಿ ಮಾಣಿಕದನ್ನ ಮುತ್ತು । ಭಲಾಕಿ ।
ನಾಲ್ಕು ತಿಂಗಳಾ ಕರಾರ ಮಾಡಿ ಅವರಿಗೆ ತರಿಸಿತ್ತು ।
ನಿಪ್ಪಾಣಿ ದೇಶಾಯಿ ಚಿಂತಾಮಣಿರಾವ ಸುದ್ದಿಯು ಹೋಗಿತ್ತು ।
ರಾಸ್ತ್ಯಂದ ಬಂದೀಖಾನಿ ಬಿಡಸಿ ತರಿಸಿತ್ತು ।
ನಾನಾ ಫಡಣೀ ಸಮನ ಸುಭೇದಾರನು ಸಲತ್ತಿಯಾಗಿತ್ತು । ಭಲಾಕಿ ।
ಸವಾಯಿ ಮಾಧವರಾವ ಅಂದ ಗೋಖಲ್ಯಾಗ ಜಗಳ ಯಾಹೊತ್ತು ।
ಕಾರಕೂನರ ಲೆಖ್ಖ ಹೇಳತೇನ ಮೂರು ಲಕ್ಷ ದಂಡಾ ॥ ಗಂಗಾಧರ ॥॥೧॥

ಇಂಗ್ರೇಜಿ ಬಹದರಾ ಅಂಬತಾನ ನಮ್ಮದು ಚೌಥಾಯಿ । ಕೊಡಬೇಕು ।
ಬಾಜೀರಾವ ನಿಮ್ಮ ಹಿರೇರು ಪತ್ರ ಬರೆದು ನಮ್ಮಗ ಕೊಟ್ಟಿತ್ತು ।
ಐದಕಿಲ್ಲೆತ್ರ್ಯಮ್ಬುಕಜೀಗೆ ಹಿಡದ ಕೊಡಬೇಕು ।
ಬಾಜಿರಾವ ಹಿಡದ ಕೊಡಬೇಕು ।
ಪುರಂದರಾ ಶಿಂಗೇರಿ ಧಾರವಾಡ ಸೋಡೀ ಬಿಡಬೇಕು ।
ಪೇಶವಿಯವರದು ರಾಜ್ಯವು ಹೋತು ಇನ್ನ ತಿಳಿಯಬೇಕು ।
ಬಾಜಿರಾವರು ।
ಅಂದ ಗೋಖಲ್ಯಾ ಒಮ್ಮೆ ಅವರಿಗೆ ಝುಂಗಳಾ ಕೊಡಬೇಕು ।
ಇನ್ನೂರ ತೋಪಾ ಮದ್ದಗುಂಡ ನೋಡ ಜಲ್ದಿ ತರಸಬೇಕು ।
ಬಾಜಿರಾವ ಜಲ್ದಿ ತರಸಬೇಕು ।
ಏಕಾದಶೀ ದಿನ ಗಣೇಶ ಖಿಂಡೀ ಮೇಲೆ ಝುಗಳ ಆಗಬೇಕು ।
ಪ್ರಥಮ ಲಢಾಯಿದಾಗ ದೀಕ್ಷಿತ ನಾನಾಗ ಬಡೀತಲ್ಲ ಗುಂಡಾ । ಗಂಗಾಧರ॥೨॥

ಸರದಾರ ಖಾನಾ ಪಠಾಣ ಬಿದ್ದಾ ಚೂಣೇ ಜಗಳದಾಗ ।
ಭಲಾಕಿ । ಜಾಣಾ ಚೂಣೆ ॥
ಗೋಖಲ್ಯಾ ನೋಡ ಹಲ್ಲಾ ಮಾಡಿದನ ಫರಂಗೇರ ಮೇಗ ।
ಗುಂಡಿನ ಹಿಂದ ಗುಂಡ ಹಾರತಾವ ಚಂಡ ಹಾರಿದ್ಹಾಂಗ ।
ನಾಕ ಸಾವಿರಾ ಮಂದಿಯು ಬಿತ್ತೊ ಲೆಖ್ಖವಿಲ್ಲದ್ಹಾಂಗ ಜೀ ।
ಬಾಪು ಗೋಖಲ್ಯಾ ಉದಾಸ ಆದ ತನ್ನ ಮನಸಿನಾಗ । ಭಲಾಕಿ ॥

ದಂಡಿನ ವಳಗ ಫಿತೂರ ನಡೂತತಿ ಏನ ಹೇಳಲಿ ನಿನಗ ।
ಅಚಲ ಕರಾ ಪಟವರ್ಧನ ಅವರ ಫಿತೂರ್‍ಯಾಗ । ಭಲಾಕಿ ।

ನಿಪ್ಪಾಣಿಲಿಂದ ಕಾಗದ ಬಂತೊ ಪರಂಗೇರ ವಳಗ ಜಿ ।
ಬೆಳಗ ಆದಿತೊ ಕೂಚ ಮಾಡರೀ ಒಡೀತಲ್ಲೊ ದಂಡ । ಭಲಾಕಿ ॥
ಗಾರಫೆರ ಮೇಲೆ ಹೋಗಿ ಇಳೀತೊ ಗೋಖಾಲ್ಯಾನ ದಂಡಾ॥೩॥

ಅಪ್ಪಾ ಮವನದಾರ ಮಾಮಾ ಸುಭೇದಾರ ಹೊಂಟಾರು ಹ್ಯಾಂಗ್ಯಾಂಗ ಭಲಾಕಿ ।
ಇಪ್ಪತ್ಸಾವಿರಾ ಖಾಸಾ ಕುದರೀ ಜರ ಪಟಕಾ ಮೇಗ ಜಿ ।
ಹುಲಗಾಂವಿ ಮೇಲ್ಬಂದ ಪರಂಗಿ ಝುಂಗಳಾ ಇಬ್ಬರಿಗೆ ।
ಭಲಾರೆ । ಝುಗಳಾ ಇಬ್ಬರಿಗೆ ।
ಸುಭೇದಾರ ಹೊಕ್ಕ ಕಡೀತಾನ ತುರಪ ಸವಾರದಾಗ ಜೀ ।
ಗುಂಡಿನ ಹಿಂದ ಗುಂಡ ಬಡೂತಾವ ತಾಳಾ ಬಡದ್ಹಾಂಗ ।
ಭಲಾರೇ । ತಾಳಾ ಬಡದ್ಹಾಂಗ ।
ಆರೇರ ಕುದರೀ ಮುಂದ ವೋಡತಾವ ಪುಣೇದ ಭೈಲಾಗ ಜೀ ।
ಹೊಳಿಯೆರ ಮೇಲೆ ಬಂದ ಫರಂಗಿ ಹೊಡದ ಛಬೇಲೀಗೆ ।
ಭಲಾರೇ ಹೊಡದಾ ಛೆಬೇಲೀಗೆ ।
ಹತ್ತ ಸಾವಿರಾ ಅರಬ ಗೊಸಾವಿ ಉಳ್ಳಿ ಹೋತ ಆಗ ಜಿ ।
ಬಾಜಿರಾಯನಾ ಸುದ್ದಿ ಮುಟ್ಟಿತೊ ಹೋದ ಜೇಜೂರಿಗೆ ।
ಭಲಾರೆ ಹೋದ ಜೇಜೂರೀಗೆ ।
ಎಲ್ಲಾ ಸರದಾರ ಬೆನ್ನ ಹತ್ತಿದರ ತಿರಗಲಿಲ್ಲ ಆಗ ಜಿ ।
ಬಾಪು ಗೋಖಲ್ಯಾ ಭಲೇ ಶಿಪಾಯಿ ನಿಂತನಲ್ಲ ಪುಂಡಾ ।
ಭಲರೆ ನಿಂತನಲ್ಲ ಪುಂಡಾ ॥ ಗಂಗಾಧರ ॥॥೪॥

ಕಲ್ಬಿಕದಾ ಕಡಿ ಆಟ ಹೇಳತೀನಿ ಕೇಳೀರೊ ಯಲ್ಲಾ ।
ಗೆಣ್ಯಾ ನೀಉ ಕೇಳೀರೊ ಎಲ್ಲಾ ।
ಕಾಲಗ್ನಾನ ಸಾರಿದ ಮಾತು ಸುಳ್ಳ ಆಗಲಿಲ್ಲಾ ।
ಇಂಗ್ರೇಜಿ ಬಹದರ ಬೆನ್ನಹತ್ತಿದನ ಅಗದೀ ಬಿಡಲಿಲ್ಲಾ ।
ಭಲಾರೇ ಆಗದೀ ಬಿಡಲಿಲ್ಲಾ ।
ಬಾಜೀರಾಯಾ ಮುಂದ ಓಡತಾನ ಜರಾ ತಿರಗಲಿಲ್ಲಾ ।
ಜಾಗೆಜಾಗೆದಾಗ ಲಢಾಯಿ ಕೊಟ್ಟರ ಅಷ್ಟುರಮೇಲೆ ಹಲ್ಲಾ ।
ಭಲಾರೇ ಅಷ್ಟುರಮೇಲೆ ಹಲ್ಲಾ ।
ಬಾಪು ಗೋಖಲ್ಯಾ ಮುಧೋಳದ ಅರಸಾ ಠಾರ ಅದರಲ್ಲಾ ।
ಮುಂದ ಆಗಿದ್ದು ವರ್ತಮಾನಾ ನಮಗ ಠಾವಿಕಿಲ್ಲಾ ।
ಭಲಾರೆ ನಮಗ ಠಾವಿಕಿಲ್ಲಾ ।
ಕರ್ನಾಟಕದ ನರಗುಂದ ವಳಗ ಮಲಿಂಗಶ್ಯಾಬಲ್ಲಾ ।
ಬಾಪೂರಾಮಾ ಪದಾ ಹೇಳತಾರ ಅವರಿಗೆ ಜೋಡಿಲ್ಲಾ ।
ಡಬ್ಬಿನ ಮೇಲೆ ತುರಾಯಿ ನಿಶಾನಿ ಶಿವನ ಬಿರದ ಎಲ್ಲಾ ।
ಹಟೇಲ ಸಾಹೇಬ ಕುಂತ ಹೇಳತಾನ ನಾಗೇಶರ ಗಂಡಾ ॥ ಗಂಗಾಧರ ॥॥೫॥

***ಕವಿ :*** ಮಲಿಂಗಶ್ಯಾಬಲ್ಲ - ಬಾಪೂರಾಮ

***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

## ೧೦. ಲಾವಣಿ ಪದ – ೧

ಧೀರ ಕುಂಪಣಿ ಸರದಾರ ಟಲ್ಲರ ಸಾಹೇಬಗ್ಯಾರು
ಸರಿಯೊ ಯಿ ಜಗದೊಳಗೆ ।
ಸಾರಿ ಹೇಳಿದ ಹನ್ನೆರಡು ಘಂಟೆಗೆ ಸೂರಿಮಾಡಿದ
ಭೀಮರಾಯ ಧೊರಿಗೇ
ದೇಶದೇಶದೊಳು ಯಲ್ಲಿ ಕುಂಪಣಿಯವರು
ಹುಕುಮಂ ಮಾಡಿದರೂ ॥
ದೊಡ್ಡ ದೊಡ್ಡ ಕಿಲ್ಲೇಗಳನು ಕೆಡಹಿದರು ।
ಮೀರಿದ ಧೊರೆಗಳ ಸೆರೆ ಹಾಕಿದರು ।
ತಪ್ಪಿಲಿ ಸಿಗಲು ಶಿವನ ಬಿಡದಿಹರು ।
ಧರ್ಮರಾಜ್ಯನೆಲ್ಲಾನಾಳುವರು ॥
ಹುಮಿಗಿ ದೇಶಾಯಿ ಭೀಮರಾಯರು
ತಿಳಿಯದ್ವಾಗೆಯ ಮಾಡಿದರೂ॥೧॥
ಚಂನಪಟ್ಟಣ ಹೊಂನಭರತಿ ಪುರಪುರ
ಪುಂಣ್ಯಶಾರ ಡಿಳ್ಳಿವಳಗೆ ।
ಮೀರಿದ ಧೊರಿಗಳ ಜಗಳದೊಳಗೆ ।
ಸೋತು ಧರೆಯೊಳಿಹ್ರು ಇಂದೀಗೆ ।
ದೊಡ್ಡ ಟೀಪು ಯಂದರೆ ತ್ರಿಭೂಮಿಗೇ ।
ದೊಡ್ಡ ದೊಡ್ಡ ಕಿಲ್ಲೆಗಳು ಕಟ್ಟಿಸಿದವನಿಗೇ ।
ಸೋತುಕೊಂಡರೆ ಸಾಟಿಯುಂಟೆ
ಯೀರೇಟಕ ಭೀಮರಾಯರಿಗೆ॥೨॥

ಮದ್ದುಗುಂಡು ಸೋರುಪ್ಪು ಗಂಧಕ
ಯಿದ್ದಡಗಿಸಿಕೊಂಡವರು ।
ಭಾರಿ ಶೀಕ್ಷಕಕೆ ವಳಗಾಗುವರು ।
ಕುಂಪಣಿಯವರು ಸಾರಿ ಹೇಳಿದರು ।
ದೇಶದ ಮದ್ದುಗುಂಡು ಕೊಂಡಾರು ।
ಹುಮಿಗಿ ದೇಶಾಯಿ ಬಳಿಗೆ ಬಂದಾರು ॥
ಮದ್ದುಗುಂಡು ಕಠಾಕತ್ತಿ
ನಿಮಗಿದ್ದರೆ ಕೊಡು ಯಂದಾರು॥೩॥

ಕೇಳಿ ಮಾತವ ಹೇಳಿದ ನೆಂನೊಳು
ಬಹಳ ಬೇಡ ತುಸ ನೀವು ।
ಹುಲುಬಿಸಿ ಕೊಟ್ಟರೆ ಶೀಕ್ಷಕ ನಾವು ।
ಪಾತ್ರರು ಯನಲಿಕೆ ಕೊಟ್ಟರು ಟಾವು ।
ಯಿವರಲಿ ಬಹಳ ಆಯುಧ ಯಿದ್ದಾವು ।
ಶ್ಯಾನಭೋಗ ತಿಳಿದು ಬರದ ವುತ್ತರವು ॥
ಧಾರವಾಡಕೆ ವುತ್ರ ಮುಟ್ಟಲು
ಆಗೆ ಕಂದರಿ ಬಂದಾವು॥೪॥

ಯೆಲ್ಲಿ ಹಂಮಿಗಿ ಯಲ್ಲೆ ದೇಶಾಯಿ
ಯಲ್ಲೆ ಮದ್ದುಗುಂಡು ಯೆನುತಾ ।
ಟಣ ಪೂಲಸಿ ಬಂದನು ನಗುತಾ ।
ಕರಸಿದ ಶಾನುಭೋಗನ ತುರ್ತ ।
ತೋರಿಸು ಮದ್ದುಗುಂಡು ನಮಗೆನುತಾ ।
ದೇಶಾಯಿ ॥ಬಳಿಗೆ॥ ಬಂದರು ತುರುತಾ ॥
ಮೆಲ್ಲನಿವರು ಯಂನ ಕೊಲ್ಲಬಂದರೆಂದು
ನಿಲ್ಲದೋಡಿದ ದೇಶಾಯಿ ಅಳುತಾ॥೫॥

ಬಂಣಗುಂದಿ ಮಾರಿ ಸಂಣದು ಮಾಡಿ
ಬೆಂಣಿ ಹಳ್ಳಿಗೆ ವೋಡಿ ಬಂದು ।
ಭೀಮರಾಯಗ್ಹೇಳುತಾನೆ ಶಿವಶಿವ ಯಂದು ।
ಸಾವಿನ ಕಾಲ ನಮಗೆ ಬಂತೆಂದು ।
ಆದ ವರ್ತಮಾನ ಯಿಂತೆಂದು ।
ತಿಳುಹಿದ ಕಂಣ ತುಂಬ ನೀರ ತಂದು ॥
ಯಂನ ಹಣವು ದಳ ನಿಂನದು
ಮರಣಕ್ಕಿಂನು ಭಯವು ಬೇಡೆಂದು॥೬॥

ಕಷ್ಟ ಬಂದ ಕಾಲಕ್ಕೆ ಮಾತುಗಳು
ಯಷ್ಟಾದರು ಆಡಬಹುದು ।
ಮರಣವು ಬಂದ ಕಾಲಕಿದು ಯಿರದು ।
೧ಕುಂಪಣಿಯವರು ರಮ್ಯೋಲೆ೧

[1]ಕತ್ತಿಹಿರಿದು ।
ಟೋಪು ಬಾಜಿರಾಯನ ಮುರಿದು ।
ನಂಮಿಂದೇನಾಗುವುದರಿದರಿದು ॥

ದಿಟ್ಟ ಭೀಮರಾಯ ಮುಟ್ಟಹಣಿಯರಿದು
ರುಷ್ಟಯಂದು ಮೀಸಿ ಮುರಿದೂ||೭||
ಬಿಡುಬಿಡು ದೇಶಾಯಿ ಹಿಡಿಹಿಡಿ ಕತ್ತಿಯ
ನಡಿನಡಿ ಕುದರಿಯನೇರು |
ಕರಿಯ ಖರಿಯ ಸಾಹೇಬರಿಬ್ಬಾರು |
ಹೊಂನು ತಿಂನೊ ಭಂಟರ ಕರಸಿದರು |
ಹುಮಿಗಿ ಪುರವಾಕ್ಷಣ ಹೊಕ್ಕಾರು |
ಕಿವಿಮೂಗು ಶಾನಭೋಗನೆ ಕೊಯಿಸಿದರು ||
ಬಂದ ಸವಾರರ ಕಡಿಬಡಿಯಂದು
ದುಂದು ಕರ ಮಾಡಿಬಿಟ್ಟಾರು||೮||

ಕೊರತಿಯಿಲ್ಲ ಹಣ ಭರತಿ ಚಕ್ಕಡಿ
ತಿರಗದೆಳಿಯದೆತ್ತುಗಳು |
ಬಂದು ಹೊಕ್ಕನು ಡೊಂಬಳದೋಳು |
ಸುಲಿಗಿ ಮಾಡಿ ತೆಗದ ಹಣಗಾಳು |
ಹಾರೋರಗೇರಿ ಬಡದ ಹಗಲೊಳು |
ಕೌಲುರ ಮ್ಯಾಲೆ ಯಿಳಿದ ಯಿರಳೋಳು |
ಚೋರನಾಗಿ ತಾ ದಾರಿ ಹಿಡಿದು
ಮೇಲೇರಿ ಕುಳತ ಕುಂಮಟದೋಳು||೯||

ಗಜಿಬಿಜಿ ಆದಿತು ನಿಜವಿದು ಭೀಮರಾಯ
ತಜವಿಜಿ ಮಾಡಿದನೆಂದು |
ಪ್ರಜಗಳುರಿತಿ ಭಯದಲಿ ಮನ ನೊಂದು |
ಲಿಂಗಸೂರ ಚ್ಯಾವಣಿ ಭುಗಿಲೆಂದು |
ಭೀಮರಾಯನ ಹೆಂಡರ ಯಿಬ್ಬರ ಹಿಡತಂದು |
ಕೊಪ್ಪಳ ಕಿಲ್ಲೆದೊಳಗೆ ಯಿಟ್ಟರಂದೂ ||
ಕಾಳಾಯುತ್ತಾಕ್ಷಿ ನಾಮಸಂತ್ಸರ
ಜೇಷ್ಟ ಬಹುಳ ಮುಂದೆ ತಿಥಿ ವಂದೂ||೧೦||

ಹೆಂಡರ ಶೆರಿಯನು ಕಂಡು ಬದುಕುವ
ಭಂಡನೆ ಭೀಮರಾಯ ತಾನು |
ರಾತ್ರಿಲಿ ಕುಮಟ ಬಿಟ್ಟು ಹೊಂಟಾನು |
ಬೆಳಗೊ ಜಾವದೊಳಗೆ ಬಂದಾನು |
ಕೊಪ್ಪಳ ಅಗಸಿ ಮುರದು ಹೊಕ್ಕಾನು |
ಹೆಂಡರ ಮಕ್ಕಳನೆ ಕೂಡಿದನು |

ವಳಗೆ ಶಿಕ್ಕ ಜನರನ್ನು ಜುಲುಮಿಲೆ
ಸಂಬಳ ಗೊತ್ತು ಮಾಡಿದನು॥೧೧॥

ಭೀಮರಾಯ ಕೊಪ್ಪಳವ ಹೊಕ್ಕಾನೆಂದು
ನಬರಸುಭೇದಾರ
ಲಿಂಗಸೂರ ಚ್ಯಾವಣಿಲಿಂದ ಸಾವೀರ।
ತುರಪಿನ ಮಂದಿ ತಂದ ಸರದಾರಾ।
ಕೊಪ್ಪಳ ಸುತ್ತಾ ಕುದರಿಗಳು ಪಾರಾ।
ನಾಲ್ಕು ಕಡಿಗೆ ತೋಪು ತಯ್ಯಾರಾ।
ಹೊಡಿಹೊಡಿ ಯನಲಿ ಯಿಲ್ಲದೆ
ಗುಂಡುಗಳು ಕಿಲ್ಲೆ ಮಾಡಿದ ಚೂರ್ಚೂರ॥೧೨॥

ಪುಂಡ ಭೀಮರಾಯ ಕುಂಡಿ ಚುಣ
ಜೋಡು ಗುಂಡಿನ ಕರೂಲಿ ಪಿಡಿದು।
ಭಾರ ಜರಿಗಸಿ ತೋಪು ಝುಡಿದು।
ಹೊರಗಣ ದಂಡಿಗೆ ಹೊಡದ ಹಲ್ಲು ಕಡಿದು।
ಹಶಿದ ಶಿಂಹ್ವನಂತೆ ಕೂಗ್ಹೊಡಿದು।
ಕೊಪ್ಪಳ ಮಂದಿಯಲ್ಲಿ ಭಯ ಹಿಡಿದು।
ಯತ್ತಾಣ ಪೀಡಿ ಹತ್ತಿಕೊಂಡಿತೆಂದು।
ಜನಗಳು ಮೌನವ ಹಿಡಿದು॥೧೩॥

ಧಡಾ ಯಂದಡೆ ಬಲದೊಳು ಬಿಡದೆ
ಹೊಡದ ತೋಪುಗಳು ಗುಂಡು।
ಹೊಡಿಯಲಿಕಾಯ್ತು ಅಗಸಿ ತುಂಡು ತುಂಡು।
ಹುಮಿಗಿ ದೇಶಾಯಿ ಭೀಮರಾಯ ಕಂಡು।
ಗಚೀಕೋಟಿ ಹೊಕ್ಕಾರು ಭಯಗೊಂಡು।
ಕಡಿತನಕ್ಹಾರವಿಲ್ಲ ಮದು ಗುಂಡೂ॥
ಗಡಬಡ ಗದ್ದಲ ಕೂಗಾರ್ಭಟದೊಳು
ಅಡಗಿ ನಿಂತಿತು ವಳದಂಡೂ॥೧೪॥

ಕೊಪ್ಪಳದೊಳಗೆ ಸಪ್ಪಳಡಗಿತಾಪದ ಕಂಡ ಸರದಾರಾ।
ಖರಖರ ಹಲ್ಲ ತಿಂದನು ಬಲ್ಲ ಭಾರಾ।
ಹಲ್ಲಾ ಬಿಟ್ಟ ಕೆಂಪ ಮಾರಿಯವರಾ।
ಪಡಪಡ ಗುಂಡು ಸುಡುತ ಮಲತವರಾ।
ಬೆಂನ್ಹತ್ತಿ ಕಡಿದಾನು ಮುಂನೂರಾ॥

ಗಚ್ಚಿನ ಕೋಟಿವಳಗೆ ಭೀಮರಾಯ
ಹಚೀ ಹೊಡದನು ರಣಶೂರ॥೧೫॥

ಕಾಲ ತುಳವುತ ಧೂಳ ಮುಸುಕಲು
ಕಾಳಗವಾದಿತು ಪೂರಾ ।
ಹಾಲಕೋಟಿ ಬಾವಿವಳಗೆ ಸಂಹ್ವಾರಾ ।
ಯತ್ತಿ ಕಡಿದ ಮಲತ ಬಂಟಾರಾ ।
ಕಣನೊಳು ಬಿದ್ದೇಳದೆ ಹೊರಳುವರಾ ।
ಜಗಳದ ಹೋಲ್ಕಿ ಕರ್ನ ಅರ್ಜುನರಾ ॥
ಹೇಳಬೇಕು ಹುಮಿಗಿ ದೇಶಾಯಿ
ಭೀಮರಾಯರಿಬ್ಬಾರಾ॥೧೬॥

ಹಿಂದಣ ಯುಗದೊಳು ಯಿಂದ್ರ ಜಿತನು
ರಾಮಚಂದ್ರನ ಬಲ ಹೊಡದಂತೆ ।
ಅಂಗದ ರಾಕ್ಷಸ ಭಯ ಹೊಕ್ಕಂತೆ ।
ಭೀಮರಾಯ ಜಗಳ ಯಿದರಂತೆ ।
ಗುಂಡಿನ ಶಬ್ದ ಅಳ್ಳ ಹುರದಂತೆ ।
ದೇಶಾಯಿಗಾಗೆ ಹೇಳುತಾನೆ ನಿಂತೆ ॥
ಯಿಂದಿನದೋಳೇನಾದ್ರೆ ನಂಮದು
ಮಂದಿ ಬಂದಿತೆಂಬುದಿಲ್ಲ ಚಿಂತೇ॥೧೭॥

ಕಿತ್ತು ಕತ್ತಿ ಕೈಯ್ಯತ್ತಿ ಸುತ್ತಾಮುತ್ತಾ
ಕೇಳೊ ಬಂಟಾರಾ ।
ಕಡಿಯಲಿ ಹಾರುತಿದ್ದವು ಸೀರಾ ।
ಭೀಮರಾಯ ಕೂಡಿ ಹೊಡದ ಸರದಾರಾ ।
ಹರವುತಲಿತ್ತು ಕೆಂಪು ನೆತ್ತಾರಾ ।
ಹಾರಿತು ಗುಂಡು ವಮಿಗೆ ಸಾವೀರಾ ।
ಹುಮಿಗಿ ದೇಶಾಯಿ ಭೀಮರಾಯರು
ಅದೇ ಕ್ಷಣಕೆ ಸಂಹ್ವಾರಾ॥೧೮॥

ಸತ್ತಾ ಭೀಮರಾಯ ವರ್ಥವಾಯಿತೆಂದು
ವತ್ತಿಲಿರುವ ಭಂಟಾರಾ ।
ಹೊತ್ತ ಕತ್ತಿ ತಂಬಾಕಿ ಬಿಸಟುವರಾ ॥
ಹತ್ತು ಹತ್ತು ಜನರನ್ನು ನಿಲ್ಲಿಸಿ
ಗುಂಡಿಲೆ ಹೊಡದು ಕೊಂದರು॥೧೯॥

ದಾರು ಹೇಳಿದರು ವೂರು ವಳಗೆ
ಪಿತೂರ ನಡದ ಸುದ್ದಿಯನು।
ಟೆಲ್ಲೆರ ಸಾಹೇಬನೆಲ್ಲ ಕೇಳಿದನು।
ಮೋದಿಂ ನಾಯಕ ರಾಜಿ ನಾಯಕನು।
ಅರೇರ ದರಮೋಜಿ ರಾಯಂಣನು।
ದರಿಯಾಪ್ತಿ ಮಾಡಿ ಹಾಕಿಸಿದ ಬೇಡಿಯನು॥
ಬೆಂಣಿ ಹಾಲು ವುಂಣುವ ಬಾಯಲಿ
ಮಂಣು ವಗಿಯಂದವನು॥೨೦॥

ಯಲ್ಲಿ ನೋಡಿದರಲ್ಲೆ ಮದ್ದುಗುಂಡು
ಯಿಲ್ಲದಿಲ್ಲ ಕಿಲ್ಲೆವೆಲ್ಲ।
ದೊಡ್ಡ ದೊಡ್ಡ ತೋಪುಗಳ ವಡಶಿದರಲ್ಲಾ।
ಹರಿಯಿದ್ದ ಗೋಡಿಯನೆಲ್ಲಾ।
ಕೆಡಹಿಸಿಲಯವ ಮಾಡಿಸಿ ಬಿಟ್ಟರಲ್ಲ।
ಜಗದೊಳು ಕುಂಪಣಿ ಧೊರಿಗಣಿಯಿಲ್ಲಾ॥
ಯಿದ್ದ ಮದ್ದುಗುಂಡು ನೀರೊಳಗೆ
ಹಾಕಿಸಿಬಿಟ್ಟದ್ದು ಯಷ್ಟು ಲೆಕ್ಕವಿಲ್ಲಾ॥೨೧॥

ಪೂರ್ವಜನ್ಮದೊಳು ಯೀರ್ವರೇನಾಹರು
ಪಾರ್ವತಿನಲ್ಲೆ ಬಲ್ಲರಿದನು।
ಹುಮಿಗಿ ದೇಶಾಯಿ ಭೀಮರಾಯರನು।
ಕಾಲ್ಹಿಡದು ಯಳಸಿ ತಂದರು ಶ್ರವಗಳನು।
ಗವಿಯ ಮಠದ ಬಯಲೊಳು ಹಾಕಶಿದನು।
ಸುತ್ತಾಲು ವೂರ ಜನರು ಮರುಗಿ
ಅಳುತಾರೆ ನೋಡಿ ಹೆಣಗಳನು॥೨॥

ಐಯ್ಯಯ್ಯೋ ಯಂದು ಭೀಮರಾಯನ
ಹೆಂಡರು ಹೊಡಕೊಂಡರು ಹಣಿಹಣಿಯಾ।
ಭೋರೆಂದು ಅಳುತಾ ಹರಿದು ಕರೆಮಣಿಯಾ।
ಕೊಲ್ಲುವರೇನೊ ಶಿವನ ಗುಣಮಣಿಯ।
ಯಂದಿಗೆ ಕೂಡೆವು ನಿಂನಂತ ಧಣಿಯ।
ಕಾಣುತ ಸುರಿದವು ಕಂಣೀರು ಹನಿಯಾ॥
ಕಾಣುತ ಸರದಾರ ಕಳುಹಲು ಕರುಣದಿ
ಬಂದ ಹೊಕ್ಕರ ಬೆಂಣಿಹಳ್ಳಿಯಾ॥೨೩॥

ಕಾಳಮೂಳ ಮತ್ತೇಳಲಿಲ್ಲ ಬಹಳ
ಬಾಧೆಗಳಾದವೆಂದು ।
ಹಾಸಲು ಕಲುಮು ಇದ್ದದನೊಂದು ।
ಮುಂದಿನ ಜನಕಿದು ಗೊತ್ತಿರಲೆಂದು ।
ಭೀಮರಾಯ ಮಾಡಿದಾಟ ಇಂತೆಂದು ।
ಹೇಳಿದ ಬಾವಾಸಾಹೇಬ ಯಿಂನೊಂದು ॥
ಭೀಮರಾಯ ಕೊಪ್ಪಳ ಕಿಲ್ಲೆದಲ್ಲಿ
ಯಿಂನೆರಡು ದಿವಸ ಯಿರಲೆಂದೂ॥೨೪॥

ರಂಗರಾಯನ ತಾಯಿ ಭೀಮರಾಯ ಸತ್ತ
ಸುದ್ದಿ ಕೇಳಿದಳು ।
ಹಾಹಾ ಕಂದನೆಂದು ಮರುಗಿದಳು
ಹಿಂದೆ ಚಕ್ರಭಿಂಹ್ವ ಕೋಟೆಯೊಳು ।
ಅಭಿಮಾನ್ಯ ಮಾಡಿದನು ಕೌರುವರೊಳು ।
ಆ ಪರಿ ಆಯಿತು ಕೊಪ್ಪಳದೋಳು ।
ಪುಂಡರೀಕ ವರನಯನ ಮುನಿದ
ಶ್ರೀ ಭಂಡಿರು ನನೆದಳೂ॥೨೫॥

***ಧಾಟಿ**

***ಕವಿ :*** ಪುಂಡರೀಕ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

---

[1] ೧. **ಕುಂಪಣಿಯವರ ಮ್ಯಾಲೆ (?)**

## ೨೧. ಆದಾಯ ತೆರಿಗೆ

ಏನ ಹೇಳಲಿ ಜನ್ಮದ ಗೋಳಾ
ಇಂಗ್ರಜಿ ಉಪದರ್ ಆದೀತ ಬಾಳಾ
ಬಡವರ ಅಳತಾರೊ ಗಳಗಳಾ
ಮಾಡತಾರ ಚಿಂತಿ

**೧ನೇ ನುಡಿ**

ಮದಲಿಂದ ಕೇಳರಿ ಮಜಕೂರಾ
ಬಂದಾರ ಗಾಡಿನ್-ಸಾಹೇಬ ಸರದಾರಾ

ಕುಂತಕೊಂಡ ತಗದ ಒಂದ ಹಂನ್ನಾರಾ
ದುಡ್ಡ ಎಳೋ ಈ ಗತಿ

ಗಾಡಿನ್ ಸಾಹೇಬ ಹೇಳತಾನ ತೋರಿ
ಹಸನ ಮಾಡಿಸ್ತೇನ ರಾ-ದಾರಿ
ಇದಕ ನೀವ ಏನ ಅಂತೀರಿ
ಕೆಲಸ ನಿಮದs ಅತಿ

ಪಂಚರ್ ಎಲ್ಲಾರು ಆದಾರಾ ಕಬೂಲಾ
ಮುಂದ್ ಹಿಂಗ್ ಆದೀತ ಅನ್ನುದು ತಿಳಿಲಿಲ್ಲಾ
ದುಡ್ಡಿನ ಗರ್ವಿಲಿ ತೆರದಾರ ಹಳ್ಳಾ
ಇಲ್ಲ ಕಕಲಾತಿ ॥ಚಾಲ॥

ಆಗ ಹಾಕಿದಾರ ಕೇಳ ಕಷ್ಟಪಟ್ಟಿ
ಕಠಿಣ ಬಡವರದ ತುಂಬುದು ಹೊಟ್ಟಿ
ಮಾರಿ ಕೊಟ್ವಾರೊ ನೂಲುವ ರಾಟಿ

ದುಡ್ಡಿನ್ ಆಸೆ ಹತ್ತಿತ ಸರಕಾರಕ
ಚೌಕಾಶಿ ಬಾಳಾತ ದಿನದಿನಕ
ಸಗಣಿ ಗುಟ್ಟಿ ಮಾಡ್ಯಾರ ಆ ಕ್ಷಣಕ

ಕಟಗಿ ಮಾರತಾರ ಮಾಡಿ ತೊಕ
ಪ್ಯಾಂಡಾರೆರು ಲಮಾಣೆರು ಕಟಗಿ
ಮಾರಿ ತಮ್ಮ ಮಕ್ಕಳ್ನ ಮಾಡತಿದ್ರ ಜೋಕಿ
ಈಗ ಬೇಡೂದ ಬಂದತಿs ಬಿಕ್ಕಿ
ಕೆಲಸ ಹೀಂಗ್s ಅತಿ

**೨ನೇ ನುಡಿ**

ಸರಕಾರಕ ದೊರಿತ ಮಸಲತ್ತಾ
ಕರಪಟ್ಟಿ ಹಾಕ್ಯಾರ ತುರತಾ-ತುರತಾ
ರೈತರ ದುಡ್ಡ ಎಳುವ ಹಿಕಮತ್ತಾ
ಮಾಡಿದಾರ ಹೀಂಗ

ಸರಕಾರದ ಆತ ಬಲಜೋರಿ
ಲೋಟಿಸ ಕೊಟ್ಟ ವಾಯಿದೆ ಮಾಡಾರಿ

ಕೊಡಲಿದ್ರ ಬೆಸಕ ಜೋರಿ
ನಡಸರಿ ಅಂಜಿಕಿಲದ್ಹಾಂಗೆ

ಕಲೆಕಟರ ಸಾಹೇಬ ಬಂದ ಆಗ
ಬಂದು ಇಳದಾನ ಬಂಗಲೇದಾಗ
ಜನರೆಲ್ಲ ಹೋಗಿ ಮುತ್ತಿದಾರ್ ಅವಂಗ
ಶಿವಾ ಇಳದ್ಹಾಂಗ

ವಾಯಿದೆ ಮೀರಿದರ್-ಹಚ್‌ಚರಿ ಬಡ್ಡಿ
ಮನಿ ಮಾರ ತಗೋಳ್ರಿ ಲಿಲಾವ ಮಾಡಿ
ಬಾಳ ಮಂದಿ ಕೊಟ್ಟಾರೊ ಗೋಳಿ-ಆಡಿ
ಹೆದರಿ ಮನದಾಗ॥ಚಾಲ॥

ದೈವದವರೆಲ್ಲಾ ಕೂಡಿ ಸಮಸ್ತಾ
ಅರ್ಜಿ ಕೊಟ್ಟಾರೊ ಮಾಡಿ ಮಸಲತ್ತಾ
ಚೌಕಾಶಿ ಮಾಡರಿ ದಣೇರಕುಂಟಾ
ಪಟ್ಟಿ-ಕುಡೊ ನಮಗ್-ಇಲ್ಲ ತಾಕತ್ತಾ

ಸಾಹೇಬ ಮನಸಿಗೆ ತರಲಿಲ್ಲಾ
ಈ ಮಾತ ನಮ್ಮ ಕಡೆ ಇಲ್ಲಾ
ಓಡಿಯಾಡಿ ಹೋದವ ಕೈ-ಕಾಲಾ
ಕುಳ ನೀರ ಬಿಟ್ಟ ಕುಂತರ್-ಅಲ್ಲಾ

ಸೌಕಾರ ವಸ್ತೊಡವಿ ತಗದಿಟ್ಟು
ಹರಕ ದೋತರ ಅಂಗಿಯ ತೊಟ್ಟು
ಬಂಗಲೆಕೆ ಹೋಗುವ ನಾಚಿಕಿ ಬಿಟ್ಟು
ಬಡವರಾ ಗತಿ

**೩ನೇ ನುಡಿ**

ಸಾವಕಾರ ಮಾಡ್ಯಾರ ಯದಿಗಟ್ಟಿ
ಬಿಟ್ಟೇತಂತ ನಮಗೆ ಕರಪಟ್ಟಿ
ಬಾಳಾ ಬಿಟ್ಟರ್ ಅಣ್ಣಾ ಕಟಪಟಿ
ಬಂಗಲೆಕ ಓಡಿಯಾಡಿ

ಕೂಡಿ ಕುಂತರಣ್ಣಾ ಸಾವಕಾರಾ
ಕುಂತಂಗ ಕುಂತ್ರೋ ಕೂಲಿ ತಳವಾರಾ

ತಮ್ಮ ತಮ್ಮೊಳಗ ಹಾಕತಾರ ಉಸರಾ
ತೆಳಕ ಮಾರಿ ಮಾಡಿ

ಊರೆಲ್ಲ ಪಟ್ಟಿ ಯತ್ಯಾರು
ಕಮರಿ ಪ್ಯಾಟ್ಯಾಗ ಬಂದ ಕುಂತಾರು
ಜೋರಿಲಿಂದ ಬದಕ ತರಸ್ಯಾರು
ಜಪ್ತಿ ಮಾಡಿ

ಪಟಿಗಾರ ಹೇಳ್ಯಾರ ಸುಭೆದಾರಗ
ನೀ ನಮ ಹಡದಿ ತಂದಿ ಹಾಂಗ
ಸೊಲ್ಪ ಕರಣ ಬಂದ ಹೊಟ್ಯಾಗ
ಬಿಡೊ ದಯ ಮಾಡಿ

ತುಮ ಖಾವಂದ ಥೇ ಮಾಯ ಬಾಪ್
ಹಮಾರೆ ಪಟ್ಟಿ ಕರೋ ತುಮಿ ಮಾಫ್
ಕಾಟ್‌ಲಾಯಾ ಚೋಳೆನು ಚಾಪ್
ದಿದಾ ರಡಿ-ರಡಿ॥ಚಾಲ॥

ಹಲಗಿ ಕುಂಟೀ ರೆಸಮಿ-ಪಟ್ಟಿ
ಬಾಂಡೆ-ಸಾಮಾನಾ ಜುಮಾನು-ತಾಟಿ
ಲಿಲಾವ ಮಡಸ್ಯಾರು ಕಿಮ್ಮತ ಕಟ್ಟಿ॥ಚಾಲ॥

ಬಾಳ ಕೆಟ್ಟರ್ ಅಣ್ಣಾ ಸರಕಾರಾ
ಬಡವರ ತಂದಾರ ಕಣ್ಣೀರಾ
ಹೆಂತಾ ಯಾಳೇ ತಂದಿ ಈಶ್ವರಾ
ನಮಗ್ಯಾರದಿಲ್ಲ ಆಧಾರಾ

ಲೈ ರಡ್ಯಾ ಕಹ್ ತರಿ ಸಬಿ ಬೈಟಿ
ಕಾ ಕರೆ ತರ್-ಬಿ ಚುಕ್ತ ನೈಪಟ್ಟಿ
ಚಡಾಯ್-ಲಾಯಾ ಜವಯನು-ತಾಟಿ
ಕರಿ ಕಹ್ ನ ಚಾತಿ

**೪ನೇ ನುಡಿ**

ಹರಪನಳ್ಳಿ ರಾಯಪ್ಪ ಬರಕೊಟ್ಟಾ
ಇವರಿಗಿ ಹುಟಾಜ್-ಐತಿರಿ ಯತ್ತಿಷ್ಟಾ
ಬಡವರ ಸುತ್ತ ತಂದನೊ ಕಷ್ಟಾ
ಉಳೀಲಿಲ ದರಮಾ

ಕಮರಿ ಪ್ಯಾಟಿ ಮುಸಲಾರ್-ಒಳಗಟ್ಟಿ
ಕೊಡುದಿಲ ಹೋಗಂದಾರ ಕರಪಟ್ಟಿ
ಬೇಕಾರ ತಗೋಳ್ರಿ ದಂಡಾ ಕಟ್ಟಿ
ಇದರ ನಿಮ ಹುಕುಮ

ಸುಭೆದಾರ ಸಿಟ್ಟಲಿ ಆದ ಬೆಂಕಿ
ಮನಿ-ಮನಿ ನೋಡ್ಯಾನೊ ಎಲ್ಲಾ ಹುಡಿಕಿ
ತಾಂಬರ-ಚೂರ ಕರವಾಯಿ ಸುಟಕಿ
ವೊದದ್ದ ಕೇಳ್ರಿ ನೇಮಾ॥ಚಾಲ॥

ಮುಸಲರ ಎಲ್ಲಾ ಕುಂತಾರ ಕೂಡಿ
ಮಸೂತಿ ವಳಗ ಮಸಲತಾ ಮಾಡಿ
ಕಾ ಹೈ ಧೂಂಡ್‌ಕರ್ ಲಕಾವ್-ಅರೆ ಲಕಡಿ
ಹಿಂದಕ ಸರಿದಿರಿ ಅನಮಾನ ಮಾಡಿ

ಮಸಲತ್ತ ಹಾಕಿದಾರ ಹೀಂಗ
ಬೇಸೇಕ ಹೊಡುನು ಬಂದವಂಗ
ಆದ್ರ ಬೀಡಿ ಹಾಕ್ಯಾರ ನಮಗ
ಮತ್ತೇನ ಮಾಡ್ಯಾರ ಇದ್ರ ಮ್ಯಾಗ

ಬಡೆ ಕಟ್ಟೈ ನವೆ ರೆ ದಿವಾನಾ
ಸರಕಾರ್-ಕೆ ಸಾತ್ ಮಾಸ್ತಿ ನಾ ಕರ್ನಾ
ಮಾ ಬಾಪ್ ಕ ರಕೋ ಪಾವಾ ಪಡ್ನಾ
ಕಯಿ ತೊ ಮೇರ್ ಆತಿ

**೫ನೇ ನುಡಿ**
ಎಲಪಾಟ್ ಸಾಹೇಬ ಬಂದ ಸರದಾರಾ
ಬಡವರ ಮ್ಯಾಲ ಇದ್ದ ಬಲ ಫೇರಾ
ಆಗ ಕುಂತ ಮಾಡ್ಯಾನ ವಿಚಾರಾ
ಕೇಳರಿ ಹೀಂಗ

ಆಗ ಮುಸಲರೆಲ್ಲಾರು ಕೂಡ್ಯಾರು
ಮಸಲತ ಮಾಡಿ ಅರ್ಜಿ ಕೊಟ್ಟಾರು
ಬಂಗಲೆಕ ಬಂದ ಎಲ್ಲಾರ ಕೂಡ್ಯಾರು
ಕೇಳರಿ ಆಗ

ತುಮ್ ಖಾವಂದ ಅರ್ಜಿ ಯಿ ಸುನ್ನಾ
ಹಮಾರಿ ಪಟ್ಟಿ ಮಾಪ್ ತುಂ ಕರ್ನಾ
ನಿಂತಕೊಂಡ ನೋಡಿದಾನ ಬಡವರನಾ
ಕರುಣ ಹೊಟ್ಯಾಗ

ಸಾಹೇಬ ನೋಡಿದಾನ ಸೋಸಿ
ಲಗುಮಾಡಿ ಅರ್ಜಿ ಕುಡಂತಾನ ಬರಸಿ
ಅವನ ಹೊಟ್ಯಾಗ-ಆತ ಕಸವಿಸಿ
ಬೆಂಕಿ ಬಿದ್ದಾಂಗ

ಹೆಂಗಸರುಟ್ಟಂತ ಹರಕ ಪರಕ ಸೀರಿ
ನಿಂತಕೊಂಡ ನೋಡಿದನ ಐಸ್ವರಿ
ಗರ್ಮೆ ನೈ ಕರ್‌ಕೋ ಜಾರಿ
ಅಳತಾರ ಆವಾಗ
ಆಗ ಸರದಾರಾ ಮಾಡ್ಯಾನ ವಿಚಾರಾ
ಕುಂತಿದಾರಣ್ಣಾ ದೊಡ್ಡ ಸಾವಕಾರಾ
ಬಡವರ ಮಾಡ್ಯಾರ ನಮಸ್ಕಾರಾ

ಸಾಹೇಬ ಕೇಳಿದ ಕಿವಿಗೊಟ್ಟಾ
ಇವರಿಗಿ ಹುಟಾಜ್-ಅತಿ ಹೇಳ್ರಿ ಎಷ್ಟಾ
ಹಿಟಾಳಿ ಈರಬದ್ರಪ್ಪಾ ಬರಕೊಟ್ಟಾ
ಐನೂರ ರೂಪಾಯ್ದು ಅಂದಾಜಿಟ್ಟ
ನೀವ ಹೇಳಬ್ಯಾಡ್ರಿ ಕಿರೆ-ಸುಟ್ಟಾ
ಪಂಚರ ಕಿವಿಮ್ಯಾಗ್ ಇಟ್ಟಾ

**೬ನೇ ನುಡಿ**

ಎಲ್ಲಾರ ಕೂಡಿ ಮಾಡತಾರ ಲೆಕ್ಕಾ
ತಮತಮೊಳಗ ಹಾಕತಾರ ತೂಕ
ಎಷ್ಟೂಂತ ಹೇಳಲಿ ಜನರ ದುಕ್ಕ
ಕೆಲಸ ನಡದತಿ

ಪ್ರತಮ್ ಕೂಡಿ ಮಾಕಪ್ಪ ಪುಣಿವಂತಾ
ಲೆಕ್ಕ ಹಾಕಿ ಮಾಡಿದಾ ತಾ ಕುಂತಾ
ಎಲ್ಲರ ಮನಸ ಆತ ಸನಮಂತಾ
ಕೇಳರಿ ಇನ್ನಾ

ಬಡವರ ನಿಂತಾರ ಮಾರಿ-ಮಾರಿಗಿ
ನಿಂತ ಬೇಡಿಕೊಂಡಾರೊ ದೊರಿಗಿ
ಕೊಟ್ಟಂತ ಪಟ್ಟಿ ಕೊಡಿಸಿದಾನ ತಿರಿಗಿ
ಸಾಯೇಬ ಪುಣಿವಾನಾ

ಮುಸಲರ ಅಂತಾರ ಅರೆ ಅಲ್ಲಾ
ವರ್ಸಾತ ಗೋದಿ ಅಕ್ಕಿ ಉಂಡಿಲ್ಲಾ
ನಮ್ಮ ಪಡಿಪಾಟ್ಲ ಶಿವನೆ ಬಲ್ಲಾ
ಕೊಡುನು ನಾವ್-ಏನಾ

ಪರಮಧೂತ-ನಾಮ-ಸಂವಚ್ಛರಾ
ಕರಪಟ್ಟಿ ಹಾಕಿತಣ್ಣಾ ಸರಕಾರಾ
ಬಡವರ ಮರಗಿದಾರ ಮರಮರಾ
ಸ್ವಾಮಿ ಭಗವಾನಾ

ಪರಜೋತ್ಪತ್ಯಾ-ಸಂವಚ್ಛರ ತನಕ
ಜನರ ಆದಾರೊ ಬಾಲ ಹಲಾಕ
ಬಡತನ ಬಂತಂತಾರ ಸರಕಾರಕ
ಹೋಗುನುತಾರ ಮತ್ತೊಂದು ರಾಜೆಕ
ಬಾಳ ಸರಾಪ್ಯಾರ ಪಂಚರ ಗುಣಕ
ಶೆಟ್ಟಿ ಸುಭೇದಾರ ಕಾಮ್ದಾಜನಕ

ಈ ಪದಾ ಹುಟ್ಟಿತ ಹುಬ್ಬಳ್ಯಾಗ
ಅಂಕುಸ್-ತುರಾಯ ಡಬ್ಬಿನ ಮ್ಯಾಗ
ವಸ್ತಾದ ಹನುಮಂತ್ರಾವನ ಮಗ
ಗುರು ಸಿದ್ದೇಶನ ದಯಾನ ಮ್ಯಾಗ
ಕವಿ ಗುರುಸಿದ್ಧ ದಾನ-ಚಾತುರಾ
ಮಾಡಿ ಹೇಳಿದಾನ ಅಕ್ಷರಾ
ಕುಂತ ಕೇಳಾರೆಣ್ಣಾ ಮಜಕೂರಾ
ಆದ ಪಜೀತಿ

***ಕವಿ :*** ಗುರುಸಿದ್ಧ

***ಕೃತಿ :*** ಫ್ಲೀಟರು ಸಂಗ್ರಹಿಸಿದ ಲಾವಣಿಗಳು

## ೨೨. ಇಂಗ್ರೇಜಿ ಸಂಸ್ಥಾನದ ಮೇಲಿನ ಪದ

ಇಂಗ್ರೇಜಿ ದಣಿ ಖಾವಂದ ದೊರಿ
ಯಾರು ಇಲ್ಲರಿ ಇವರ ಸರಿ ।
ಮೂಡು ಮುಣಗಾವಲಿಯೇಕ ಛೆತ್ರಪತಿ
ಅಂತ ಹೊಗಳತತಿ ಶ್ರುತಿ ಸಾರಿ॥ಪಲ್ಲ॥

ಪ್ರಥಮ ಬಂದ್ರ ಹಿಂದು ದೇಶಕ್ಕ ।
ವುದ್ಮಿ ವೆವಹಾರಾ ಮಾಡಂದಕ ।
ಯೆಲಿಸ್ವಿತ ಮಾಹಾರಾಣಿಯವರು ।
ಅಧಿಕಾರ ಆದ್ರಾ ಗಾದಿಯ ಸ್ಥಲಕ ।
ಲಂಡನವೆಂಬ ಪಟ್ಟಣಕ ।
ಸಿಕೆಹಾಕಿ ಬಿಟ್ಟಾರದಕ ।
ರತ್ನ ಜಡಿದು ದೇವೇಂದ್ರ ಸಭಿಗೆ
ಸರಿ ಆಗಿ ಕಾಣತತಿ ಈ ಜನಕ ।
ಸಿಂಹಾಸನ ಭಂಗಕ ಚೊಕ್ಕ ।
ಮುತ್ತ ಬಿಗಿದ ಮನ ಪೂರ್ಣಕ್ಕ
ರಾಣಿಯವರು ಸದಕೇರಿ ಕುಂತ್ರ
ಸುತ ಜಗಜೆಗಿಸುತ ಬೀಳುದ ಬೆಳಕ॥ಚ್ಯಾಲ॥

ಹಮೆಲ್ಟನ ಸಾಹೇಬ ಖಾವಂದ್ರು ಬಂದರಾಗಾ
ಹಿಂದು ದೇಶ ಹೊಕ್ಕರು ನಾಡಾಗ ।
ಪಾಛನ ಹುಕುಮ ಇದ್ದಿತು ಆವಾಗ ।
ಬಂದ ನಡಿಸ್ಯಾರ ವ್ಯಾಪಾರ ವೊದ್ಯೊಗ ।
ಆ ಪಾಛನ ಮಗಳಿಗೆ ಮೈಯಾಗ ।
ಸ್ವಸ್ತ ಇದ್ದಿಲ್ಲ ಆಕಿಯ ಜೀವದಾಗ॥ಯೇರ॥

ಬಂದು ಇವರು ಈ ದೇಶದೊಳಗ ಆಕಿ ।
ಗೊಂದು ಔಷಧವ ಕೊಟ್ಟಕ್ಷಸ್ತಕೆ ।
ಚಂದವಾಗಿ ಲೇಸ ಬಂದಿತಿವರಿಗೆ ।
ಮುಂದ ಪಾಛಮನದೊಳಗ ವಿಚ್ಯಾರಕ ।
ತಂದು ಧ್ಯಾನಕ ತಾ ತಿಳಿದ ಸರ್ದರಗ ।
ಅಂದ ಯೇನ ಬೇಡತಿ ಬೇಡು ನೀ ।

ಮುಂದ ಸರ್ದರಾ ಆಗ ಪಾಥೆಗ।
ಅಂದ ನಿಂಮ ನಾಡೊಳಗ ನಂಮ ಜನ।
ಬಂದ್ರ ನಂಮ ಹೆಸರ್ಯಾರು ತಗಿಯದ್ಹಾಂಗೊಂದು
ಮಾಡಿಕೊಡ್ರಿ ನಂಮ ಕಯ್ಯಲಿ।
ಚಂದದಿಂದ ಪಾಥ ತಿಳದ ನೋಡಿದ ಮನಕ।
ತಂದು ತಿಳದ ಆವಾಗ ಕೈಯೆತ್ತಿ॥ಯೇರ॥

ಸಿಕೆ ಹೊಡದ ಕೊಟ್ಟನು ಪಾಥಾ ಆ ಕ್ಷಣಕ।
ಅಲ್ಲಿಂದಾತಿ ಅಂಜದ್ಹಾಂಗ್ಯಾತ್ಯಾತಕ।
ತಂಮ ಕೈಲಿ ತೊಗೊಂಡ್ರ ಯಲ್ಲಾ ಮಾಡಿರಿಕ್ಕ।
ಮೋಕಳೀಕ। ಆತಿ ಟೀಕ।
ಯುಕ್ತಿ ಮಾಡರ್ಯಾತ್ಯಾತರದು ಇಲ್ಲೊ ಟಕ್ಕ॥ಇಳವ॥

ಅಲ್ಲಿಂದ ಕೂಡಶಕ ದಂಡ।
ಯುಕ್ತಿ ಮಾಡಿಕೊಂಡ।
ಯಲ್ಲ ಯಳಕೊಂಡ್ರ ತಂಮ ಕಯ್ಯಾಗ।
ತಿಳಬಲ್ಲ್ರ ಕಲ್ಪನದ ವಳಗ।
ವಳಗಿಂದೊಳಗ ಮಾಡೆರ ತಯ್ಯಾರ।
ಯದ್ರ ವಂದ ಬಾರಾ। ಮಾಡಿ ಹುಂನರ।
ಹೊಂಟರ ಆವಾಗ ಯೇಕದ್ರುಮಕ
ಪಾಥೆನಮ್ಮೆಗ॥ಯೇರ॥

ರಾಜಿಲಿಂದ ದೇಶ ಕೊಟ್ಟನರಿ।
ಇವರ ಯುಕ್ತಿಗ್ಯಾರಿಲ್ಲ ಸರಿ।
ಮೂಡು ಮುಣಗುವಲಿ
ಯೇಕ ಛತ್ರಪತಿ ಅಂತ
ಹೊಗಳತತಿ ಸುತಿಸಾರಿ॥೧॥

ಹೀಂಗ ದೇಶದಾಸಾದಂಗಿರೊ।
ಮಾಡಿಕೊಂತ ನಡದರ ಹಂಚಿಕಿ।
ದೇಶ ಸಾದುಣೆರ ಮಾಡಿ ತೊಗೊಂತರ
ತಂಮ ಬುದ್ಧಿ ಕಲ್ಪನ ಹಾಕಿ।
ಮಚಲಿ ಬಂಗಾಲ ದೇಶ ತಗದ್ರ ಹಾಡಿಕಿ।
ನಿಜಾಮದಿಲ್ಲಿಯೆಶಗ್ಹಚ್ಚಿದಕ್ಕಿ
ಸಾಷ್ಟಿಗಡ್ಡಿ ಕನಡ ಕರ್ನಾಟ
ಬುಂದೆಲ ಖಂಡ ದೇಶ

ತೊಗೊಂಡ್ರ ಪೀಶ್ವನ ದುಡಕಿ ।
ಕಟಕ ದಿಲ್ಲಿ ಕಾನದೇಶ ಸುಖಿ ।
ತೊಗೊಂಡ್ರ ಹೋಳಕರನ ಕಡದ ಹಾಕಿ ।
ಅಜಮೀರ ಮಾರಾಷ್ಟ್ರ ಪುಣೆ
ಅಸ್ಮ ಅರಕಾನನ ಬ್ರಂಮ್ಹ ದೇಶ
ಗೆದ್ರ ಟಾಣೆಹಾಕಿ॥ಚ್ಯಾಲ॥

ಸಿಂಧು ದೇಶ ಗೆದ್ದರೊ ಅಲ್ಲಿಂದ ।
ಅಮೀರನು ಅರಸನ ಕಡಶಿಂದ ।
ಪಂಜೆ ದೇಶಕ ಟಾಣೆವ ಹಾಕಿದಾ ।
ಸಿಕ್ಕರೆಂಬು ಅರಶಿನ ಕಿತ್ತ ವಗದಾ ।
ಪೈಗು ದೇಶಕ ಹೋದರು ಮಾಡಿ ಜಲ್ದ ।
ನಾಗಪೂರ ತೊಗೊಂಡ್ರು ನಿಜಾಮಂದ॥ಯೇರ॥

ಮತ್ತು ಅಯೊದ್ಧ್ಯಾ ನಗರಕ ಬಂದರು ।
ವತ್ರ ಮಾಡಿ ಧಮಕಾಸ್ತ ವೂರಿಗೆ ।
ನಿತ್ರ ಟಾಣೆ ಹಾಕಿ ಡೇರೆ ಹೊಡದ ಬಲು ।
ಶತ್ರು ಕೈದು ಸಂಹರಿಸಿ ಅಯೊಧ್ಧೆನ ।
ನೆತ್ರ ಧರಣಿಗ ಕೆಡವಿಬಿಟ್ಟರ ಜಗ ।
ಕರ್ತರಂತ ಅನಸುವರು ಭುವನಕ ।
ನಿತ್ತೆ ಪುಂಣೆದ ಸದಾಚ್ಯಾರವನು ।
ಅರ್ತಿಲಿಂದ ನಡಸುವರು ಕರುಣವಿಟ್ಟ ।
ಪಾರ್ಥಗಾಗಿಲ್ಲ ಇವರ್ಥಂತ ಸಮರ್ಥ ।
ನಿರ್ತದಲ್ಲಿ ಮಹ ನಿಷ್ಟವುಳ್ಳವರು ।
ಅರ್ತ ಸಂವರಿಸಿ ಬಿಚ್ಚಿಕೇರ॥ಯೇರ॥

ಹೀಂಗ ಹೇಳಿಕೊಂತ ಹೋದರ ತೀರಕಿಲ್ಲಾ ।
ಬಲ ವೀರರ ಮಾಡಿದ ಬಲ್ಮಿನೆಲ್ಲಾ ।
ಸಾಕ್ಷಾತ ದೇವರಿವರು ಮತ್ತ್ಯಾರಿಲ್ಲಾ ॥
ಧರಿಮೇಲಾ । ಬಂದರಲ್ಲಾ ।
ಯೇಕ ಛತ್ರಪತಿ ಅನಸಿಕೊಂಡ್ರ ಮೇಲ॥ಇಳವ॥ಣ

ಪುಂಣೆ ಕಂಮ ಅರಸರ ಸಂಚಿತಾ ।
ಕಳಕೊಂಡ್ರ ದವಲತ ।
ಆದ್ರ ಅನರ್ತ ಮುಟ್ಟಲಿಲ್ಲ ದಡಕ ।
ಹರಿಬೀಳಲಿಲ್ಲ ಲೌಕಿಕಕ ।

ಮಹಾರಾಣಿ ಖಾವಂದರ ಸರಿಗಿ
ಯಾರೆರ ಇಲ್ಲರಿ ।
ಪುಂಣೆದ ಜೆರಿ ಇವರ ಹಂತೇಕ ।
ಹಾಂಗಂತ ಆಳತರ ಲೋಕ॥ಯೇರ॥

ಭೂಮಿಗೆ ಅಧಿಪತಿ ಆದ್ರ ಧೊರಿ ।
ಬಂದ್ರ ಭುವನದೊಳು ರತವೇರಿ॥೧॥

ಪುಂಣೆವಾನ ಇಂಗ್ರೆಜಿ ಸರಕಾರಾ ।
ಹೀಂಗ ನಡಸತರ ಕಾರ್ಬಾರಾ ।
ದಿಲ್ಲಿ ಕಾಸಿ ಪರ್ವತ ಮಂಮಯದಾಗ
ದಂಡ ಇಟ್ಟುದರ ತರತರ ।
ಹತ್ತುಲಕ್ಷ ದಂಡ ಬರಪೂರಾ ।
ಮಂದಿ ಇದ್ದಿತೊದಲ್ಲ ಬಾರಾ ।
ತುರಪ ಘನತುರಪ ಕಾಲ
ಫೌಜ ಕರಿ ಮಂದಿ ಬ್ಯಾರಿ
ಕೆಂಪ ಸೋಜರ ।
ದಂಡಿನೊಳಗ ವೊಬ್ಬ ಸರದಾರಾ ।
ಯಡಬಲ ಕುದರಿಯ ರಾಹುತರ ।
ತೋಪು ತುಬಾಕಿ ಕರುಲಿ ಪಿಸ್ತುಲ
ಮಸ್ತ ಮಂದಿ ಹಿಡು ಹತಿಯರ॥ಚ್ಯಾಲ॥

ಹುಕಮ ಸರಕಾರಕಾ ಇದೆ ಬಂದು ಬಸ್ತಾ ।
ಯರ್ಡು ಹೊತ್ತು ನಡಸುರು ಕಾವಾತಾ ।
ಗುಂಡು ಮದ್ದು ಹಿಂಬಲ ಸಾಹಿತ ।
ರಣ ಪೈರಾಗಿ ಯೇಳುದು ತಂಬು ನುಡತಾ ।
ತಡಪಡ ಅವಾಜ ಗುಂಡಿಂದ ಇಲ್ಲ ಗಣತಾ ।
ಬರರರ ಮಳಿಯ ಬಡದ್ಹಾಂಗ ವಿಪರೀತ॥ಯೇರ॥

ಇಷ್ಟು ಸಾಹಿತ ಮಾಡಿ ತಯಾರಾಗಿ ।
ಹೊಂಟದ ಗಡಗೊಳ ಜೈಸಿಕೊಳ್ಳಲಾಕ ।
ಬಂಟ ಹೌದ ಇಂಗ್ರೆಜಿ ಧೊರಿಯು ಕೊಪ ।
ತೊಟ್ಟ ಸವರಿಸಿ ಬಿಟ್ಟ ಸಾಮನಗಡ ।
ಶ್ರಿಷ್ಟಿಲಿ ಹಲಗಲಿ ನರಗುಂದ ಪರ್ಸಗಡ ।
ಅಷ್ಟು ತೊಗೊಂಡರ ವಂದ ಬಿಡದಲೆ ।
ದ್ರುಷ್ಟಿಗಡಾ ರುದ್ರ ಭದ್ರ ಮನೋಹರ ।

ಇಷ್ಟು ತೊಗೊಂಡರ ನಂದಗಡ ಚಂದಗಡ ।
ನಿಷ್ಠಾವಂತರ್ಯಾರಿಲ್ಲ ಇವರ ಸರಿ ।
ಅಷ್ಟು ರಾಜರ ವಳಗ ಇವರ ಮಾಹ ।
ಶ್ರೇಷ್ಟರೆನಿಸಿಕೊಂಡರು ಧರ್ಮದಿಂದ ।
ಯೆಷ್ಟು ಬಲಾವುಳ್ಳ ದಂಡ ಇವರ ವಾಕ್ಕೆ॥ಯೇರ॥

ಮುಟ್ಟಿ ನಡುದು ಇವರ್‍ಥಳಿದಂತೆ ।
ಬೆಂಕಿ ಹಾಯೆಂದ್ರ ಅಗ್ನಿಯೊಳ್ಬೀಳುರಂತೆ ॥
ಬಾಳ ಬರಸ ಯಾರ್‍ಯಾರಿಗೆ ಲಣಿಯದಂತೆ ॥
ಹಿಕಮತ್ತೆ । ನಡಸುರಂತೆ ।
ಸಾರಿ ಪೇಳುವೆ ಸಭಿಯೊಳು ನಿಂತು ಮತ್ತೆ॥ಇಳವ॥

ಜಿದ್ದ ತೊಟ್ಟ ವೈರಿಗಳ ಯಲ್ಲಾ ।
ವಬ್ಬ್ರವುಳಿಲಿಲ್ಲಾ ।
ಪುಂಡೆದ ಬಲ । ಕಂಮ ಅವರಲ್ಲೆ ।
ಹಾಂಗಂತ ಇರಲಿಲ್ಲ ಲೋಕದಲೆ ।
ಇವರೇಕ ಛತ್ರಪತಿಯಾಗಿ ।
ನಿಂತರ ಧರಣಿಗಿ ।
ಅಳವ ಯೆಂದೆಂದಿಗಿ । ಇಲ್ಲ ಯೆಲ್ಲೆಲ್ಲಿ ।
ಇವರೊಚನ ಆಗಲಿ ಕಿಲಕಾಲಿ॥ಯೇರ॥

ಸತ್ತೆಕರನ ಬೇಕ ಇವರ ಸರಿ ।
ಇವರ ಹೊರ್ತ ಮತ್ತ್ಯಾರಿಲ್ಲರಿ॥೩॥

ಧರ್ಮ ಸಂಚೆರದ ಧನಿ ಇವರು ।
ಲೋಕ ಜನದ ಮೇಲೆ ಬಲ ಪೇರು ।
ಗಲ್ಲ ಟಾಪು ಚಳುವಗ ಯುಕ್ತಿಯ ಹೇಳಿ
ವುಳವಿಕೋ ಯೆಂಬುವರು ।
ಲೋಕದ ತುಂಬ ಸಾಲಿ ಹಾಕಿದರು ।
ವಿದ್ದೆ ದಾನಕ ನಿಂತಾರು ।
ಸಣದು ದೊಡ್ಡದು ಗಂಡ ಹೆಂಣಿಗೆ
ಜ್ಞಾನಬೋಧ ಬಲ ಮಾಡಿದರು ।
ಇವರ ಬಂದು ತರ್ಮ ಕಡದಾರು ।
ಮನಿ ಪಾಳೆ ಕೊಡತಿದ್ದ ಬಿಡಸಿದರು ।
ಬಹಳ ಆನಂದದಿಂದ ಇಟ್ರಿ
ತಂಮ ನಾಡನೆನಸಿಕೊಂತರೆ ಲೋಕದ ಜನರು॥ಚ್ಯಾಲ॥

ಲೈನ ದಾರಿ ಮಾಡ್ಯಾರೊ ಸುತ್ತು ಕಡಸಿ ।
ಗಿಡಗಳ ಹಚ್ಯಾರ ಯಡಬಲ ತರತರಶಿ ।
ನೆರಳ ನೋಡಿ ಜನಕ ಬಂತ ಕೂಸಿ ।
ನಿತ್ತೆ ವುಣತರ ಇವರಂನ ನೆನನೆನಸಿ ।
ವೂರುರಿಗೆಲ್ಲಾ ಕೆರಿ ಭಾಂವಿಗಳ ಕಡಸಿ ।
ಅಲ್ಲೆ ಮಟ ಮಾನೆ ಗುಡಿಯಂಗಳ ಕಟಸಿ ।
ಮೈಲಿ ತಗಸಾಕ್ಷಚ್ಚೆರ ತಿಳದ ಸೋಸಿ ।
ಸಂಣ ಸಂಣ ಹುಡಗರಿಗೆ ಮಾಡದೆ ಸ್ವಲ್ಪ ಘಾಸಿ॥ಯೇರ॥

ಪುಂಣೆ ಬಾಳ ಜೋರತ್ತ ಇವರದು ।
ಅಂನೆ ಅಂಬುದು ಸ್ವಲ್ಪ ಮಾಡುದಿಲ್ಲ ।
ಸಣದು ದೊಡದು ಸಂವನಾಗಿ ನೋಡತರ ।
ದನಿಕರ ಅಂತನ ಬೇಕ ಇವರಿಗೆ ।
ಮುನ್ನ ಮತ್ತ ಯಾರ್‍ಯಾರು ಅಳಕಿಲ್ಲವರ ।
ಸಂನಿಧಾನದೋಳಿರವು ಜನರು ।
ಕುಲಕರ್ಣಿ ಗೌಡ ಕಾರ್ಕುನರು ವಕೀಲರು ।
ಪುಂಣೆ ವುಂಣತೇವಂತರಿವರದು ।
ಇಂನು ಸಾರುವದು ಅಳತಿ ಇಲ್ಲ ಬಲು ।
ಹೊನ್ನ ದ್ರವ್ಯ ಹಾಕಿದರು ಲೋಕದಲಿ ।
ಧಂನೆವಂತ್ರ ಅನಬೇಕ ಇವರಿಗೆ॥ಯೇರ॥

ಈಂನ್ಯಾತ್ಯಾತ್ರ ವಳಗಾದ್ರು ತಗುಹಾಂಗಿಲಾ ।
ಹೀಂಗ ಲೋಕವು ಯಾರ್‍ಯಾರು ಅಳಿದ್ದಿಲ್ಲಾ ।
ಸರ್ವ ಮಾತಿಗಾದ್ರು ಯೇನು ಕಡಿಮಿ ಇಲ್ಲ ।
ಜನರೆಲ್ಲಾ । ಅಂತರಲ್ಲಾ ।
ಸುಖಿಯಾಗಿ ಅದೆವು ಇವರ ಬಲದ ಮೇಲಾ॥ಇಳವ॥

ಈ ದರ್ಬರಿರಲಿ ಬಹುದಿನಾ ।
ಇದರ ಹೊರತೆನ । ಬ್ಯಾಡೊ ಭಗವಾನಾ ।
ನಡಸಿ ಕೊಡಸೀನ ।
ಲಾಲಿಸೊ ಗುರುವೆ ವಚನವನ ।
ಪುಂಣೆ ಬಾಳ ಇವರ ಹಂತೆಕ ।
ಅಳಲಿ ಲೋಕ । ಇರಲಿ ಕಡಿತನಕಾ ।
ಹಾಕಿ ಸಲವನ್ನ । ರಕ್ಷಣೆ ಮಾಡುವಂವ ನೀನಾ॥ಯೇರ॥

ಸೂರ್ಯ ಚಂದ್ರ ಇರುತನಕನರಿ ।
ಇವರ ಮ್ಯಾಗ ಬರಬರದೊರಿ॥ಳ॥

ಇಂಗ್ರೇಜಿ ಶಾಣೆ ತಾನೆ ಬಲಾ ।
ಇವರ ಯುಕ್ತಿಗೆನ ಕಡಿಮಿಲ್ಲಾ ।
ಬಹಳ ಪ್ರಕಟವಾಗಿ ತುಮ
ಶಹಣೆತನ ತೋರ್ಸಿಬಿಟ್ಟರೊ ಜನಕೆಲ್ಲಾ ।
ತರತರದರಿಬಿ ಸಕಲತಿ ಸೇಲಾ ।
ಅಚ್ಚಿನರಿಬಿ ಮೇಲೆ ತೊಡು ಜ್ಯಾಲಾ ।
ದಿವ್ಯಾಜ್ಞಾನದ ದೀಪದ ಕಡ್ಡಿ
ಮಾಡಿಬಿಟ್ಟರ ಹೆಚ್ಚಿನ ಅಕಲಾ
ಅಗಿನಗಾಡಿಗೆ ಮೊಹಲಿಲ್ಲಾ ।
ಯೆತ್ತು ಕುದರಿ ಅದಕ ಬೇಕಿಲ್ಲಾ ।
ಕ್ಷಣದೊಳು ಹಂನೆರ್ಡ ಗಾವದ್ಹೊಗತತಿ
ಗಾಳಿಕಿಂತ ಹೆಚ್ಚಾತೆಲ್ಲಾ॥ಜ್ಯಾಲ॥

ಜೋಡ ತಂತಿ ನಡಶಾರು ಬಹುದೂರ ।
ಕ್ಷಣದೊಳು ಹೋಗಿ ಬರವುದು ವೂತ್ತರ ।
ಕಡಿಮಿ ಇಲ್ಲೊ ಇವರ ಹೂನಾರಾ ।
ಹಿಂದಕು ಮುಂದಕು ಮಾಡಿದ್ದಿಲ್ಲೊ ಯಾರಾ ।
ನೂಲ ಹುಟ್ಟಶರು ವೊಂದೊಂದು ತರತರ ।
ಹಸರುಕೆಂಪ್ಹಳದಿಬಿಳದು ಹಂಟಸವರ॥ಯೇರ॥

ಮತ್ತ ಮಾಡಿದರ ಕಬ್ಬಿಣ ಸಾಹಿತ ।
ಗೊತ್ತ ಇಲ್ಲದ ಹುಂನಾರ ತರತರ ।
ಹತ್ತುವ ಚೆಕಡಿ ಬಂಡಿಯ ಗಾಲಿಗೆ ।
ಸುತ್ತು ಕಬ್ಬಿಣದ ಪಟ್ಟಿ ಇಂಗ್ರಜಿವು ।
ಮತ್ತು ಸಳ್ಳಜಿನ ಗುಟ್ಟು ಪರಿಪರಿ ।
ಗೊತ್ತ ಇಲ್ಲದ ಕೀಲಿ ಹುಟಸುವರ ।
ನಿತ್ತೆ ರುಪಾಇ ರೊಕ್ಕಾ ಭಂಗಾರ ಹುಟ್ಟಸುದು ।
ಹತ್ತು ಲಕ್ಷ ವಂದ ಕ್ಷಣದೊಳಗಾಗುದು ।
ಬಿತ್ತಿ ಬಿಟ್ಟರೊ ತಂಮ ದೇಶದ ಮೇಲೆ ।
ಹೊತ್ತ ನೋಡುವ ತಾಸು ಗಡ್ಯಾಲ ಗಣತ ।
ಗೊತ್ತ ಮಾಡಿ ಹರವಿದರು ಲೋಕದ ಮೇಲೆ ।
ಚಿತ್ತ ಇಟ್ಟ ನೀವ ಕೇಳರೀಗ॥ಯೇರ॥

ಮತ್ತು ಹಳತೆವು ಯೇನೆನ ವುಳಿಯದ್ದಾಂಗ |
ಮಾಡಿ ಇಟ್ಟರೊ ಹೇಳಿದರ ತೀರದ್ದಾಂಗ |
ಬಾಳ ಶ್ರೇಷ್ಟವಂತರು ಅಷ್ಟು ರಾಜರೊಳಗ |
ಯಾಂವ್ಯಾಂವಗ | ತಿಳಿಯದ್ದಾಂಗ |
ಮಾಡಿ ಇಟ್ಟರು ಯೆಂದೆಂದಿಗೆ ಬಾರದ್ದಾಂಗ||ಇಳವ||

ಬ್ಯಾರೆಬ್ಯಾರೆ ಇವರ ಹುಂನರ |
ಮಾಡೆರ ತರತರ | ದಾಂವತಿಲ್ಲ ಜರ |
ಇವರ ಕೆಲಸಕ್ಕ | ಬುದ್ಧಿಂತ ಹಿರುತರ ರೊಕ್ಕಾ |
ತಿಳಿಗೊಡಂದಿಲ ಈ ಜನರಿಗೆ |
ಹೀಂಗ ಯಾರಿಗೆ | ಬಾರ್ದ ಯೆಂದಿಗೆ |
ಹಿಂತ ಕವತೂಕಾ | ಹೆಚ್ಚಿಂದ ಆತಿ ಇವರ ಬೆಳಕ||ಯೇರ||

ಅಕಲತ ಗುರು ಹೊಂಟ್ಹಾಂಗ ಜರಿ |
ಖರೆ ಮಾತ ಇದ ಸುಳ್ಳಲ್ಲರಿ||ಃ||

ನರಮನುಷರ ಇವರಿಗನಬಾರದು |
ಸಾಕ್ಷಾತ ದೇವಲೋಕದ ವರ್ಥವದು |
ಹಾಂಗ ಅಂತ ಅಗಾದ ಹುನಾರಾ
ಮಾಡತಾರ ಯಾರಿಗೆ ಬಾರದು |
ರಾಟ ಮಾಡೆರ ಹತ್ತಿ ಅರವುವದು |
ನೋಡರಿ ನೀಗಿ ತಯಾರಿಂದು |
ರಥಾ ಯೇರಿ ಕುದರಿಲ್ಲದ ನಡಸತಾರ
ಯಾರ ಮಾಡಿದ್ರ ಹಿಂದ ಹಿಂತಾದ್ದು
ಮತ್ತು ಭೂಮಿ ಸಾಗ ಆಗುವದು |
ನೇಗಲ ಮಾಡೆರ ಹೆಚ್ಚಿಂದು |
ಯೆತ್ತ ಇಲ್ಲದ ಯಳಕೊಂಡ ಹೋಗಿ ನೆಲ
ಕಿತ್ತ ಬೀಳತತಿ ಗೊತ್ತಲ್ಲದು||ಚ್ಯಾಲ||

ತೊಲಿಕೊರವುದು ಮಾಡೆರು ತಯಾರ
ವಂದ ನಿಮುಷಕ ಆಗುವ ಐಸೂರ |
ಹಿಂತಾ ಜಿನ್ನಸ ಮಾಡಿದ್ದಿಲ್ಲೊ ಯಾರಾ |
ಹಿಂದಿನವರಿಗೆ ಅನಬಾರ್ದು ಸತ್ತೆಕರ |
ದೊಷಾರದಲ್ಲೆ ಅರ್ಜುನ ರಣಸೂರಾ |
ಅಂತ ಹೆಳತಾವು ಪುರಾಣ ಶಾಸ್ತರ||ಯೇರ||

ಮುಂದ ಸಮೂದ್ರಕ ಸೇತು ಕಟ್ಟಿದ ಬಾಣ ।
ದಿಂದ ಅವನ ಸಾಮರ್ತ ಹೆಚ್ಚಲಿಲ್ಲ ।
ಹಿಂದು ರಾಮ ಕಟ್ಟಿದನು ಗುಡ್ಡಕ ಗುಡ್ಡ ಹೊಂದಿಸಿ ಸೇತುಕಟ್ಟೆ ಅಚಿಕ ದಾಟಿದನು ।
ಚಂದದಿಂದ ನೀವ ನೋಡರಿವರು ಹೆ ।
ಚ್ಚೆಂದು ಆಗ ಬೊಟಾ ಮಾಡಿ ಸಮುದ್ರದಲಿ
ಇಂದು ಪರಿಯಂತ್ರ ನಡಸುವರು ನೀರಮೇಲೆ ।
ಹಿಂದಿನವರಕಿಂತ ಹೆಚ್ಚ ಇವರ ಬಲ ।
ಯೆಂದೆಂದಿಗೆ, ಇವರ ಸರಿಯ ಅವರ ಅಲ್ಲ
ಮುಂದ ಮತ್ತ ಇಂನ್ಯಾರು ಹುಟ್ಟಾಕಿಲ್ಲಿವರು ।
ಬಂದ್ರ ಅಚಕ ರಾಮಂದ ಶ್ಯೆನ ಆಗಿ ।
ಚಂದದಿಂದ ಇವರಿದ್ರ ಪೂರ್ವದಲಿ ।
ಮುಂದ ರಾಮಾವತಾರ ಸಮಾಪ್ತವಾಗ್ವಗಿವ॥ಯೇರ॥

ರುದ್ರ ನಮಗ ಯೇನ ಕೊಡತಿರಂತ ।
ವರವ ಬೇಡೆರು ರಾಮನ ಇದರ ನಿಂತ ।
ಯಂನ ಸುತರೆಂದು ತಿಳಿದಳಾವಾಗ ಸೀತಾ ॥
ಕರುಣ ಪೂರ್ತಾ । ಇಟ್ಟ ಚಿತ್ತಾ ।
ಬಾಳೆ ಆನಂದದಿಂದ ಯೆತ್ತಿ ಇಟ್ಟರ್ಥಸ್ತಾ॥ಇಳವ॥

ವಾಕ್ಕೆ ಕೊಟ್ಟ ರಾಮ ಭೂಪತಿ ।
ಯೇಕ ಛತ್ರಪತಿ । ಆಗರೆಂತ ಪೂರ್ತಿ ।
ಹೊಂಟಿತೊ ವಚನಾ ।
ರಾಮವಾಖ್ಯ ಸುಳ್ಳಾಗುವದೇನ ।
ಹಾಂಗಂತ ಆಳತರ ಲೋಕ ।
ಸ್ವಲ್ಪ ಯಾತೆತಕ । ಹಚಿಕೊಳದಸೇಕ ।
ಆಳತರ ಭುವನ ।
ಯೆಷ್ಟ ಹೇಳಿದ್ರ ತೀರದಿವರ ವರ್ಣ॥ಯೇರ॥

ಯೆಂದೆಂದಿಗೆ ಇವರಿಗೆ ಆಳವಿಲ್ಲರಿ ।
ಬಾಳ ಇವರ ಪುಂಣೆದ ಜೋರಿ॥ಇ॥

ಇಂಥದರ ಬರ ಇರಲೇಕಪತಿ ।
ಲೋಕ ಜನರ ಹಿಂಗ ಅಂತತಿ ।
ಈಗ ವಿಕ್ಟೊರಿಯೆಂಬು
ಮಹಾರಾಣಿಯವರ ಗಾದಿ ಹೆಚ್ಚೆಂದತಿ ।
ಅವರಿಗೆ ಇರಲಿ ಬಹುಶಾಂತಿ ।

ನಡಸಿಕೊಡೊ ಗುರುನಾಥ ಪತಿ।
ಹರುಷದಿಂದ ಅವರಿದ್ರ
ಲೋಕಕ ಬಾಳ ಶಾಂತವಾಗಿರತತಿ।
ಗುರುವೆ ಕೊಡೊ ಇವರಿಗೆ ಶಾಂತಿ।
ದಯಾ ಇರಲಿ ನಿಂದ ಬಾಳೆ ಪ್ರೀತಿ।
ಇವರ ಮೇಲೆ ಬಂದ ವೈರಿಗಳ
ಹಂಮ ಮುರುಹಾಂಗ ಕೊಡ ಸಾಮರ್ತಿ॥ಚ್ಯಾಲ॥

ನಿಂನ ಕರುಣವಿರಲೊ ಗುರುರಾಯಾ।
ಬೇಡಿದ ನಡಶಿಕೊಡೊ ಮಹಾರಾಯಾ।
ರಾಣಿಯವರ ಮೇಗಿರಲೊ ನಿಂನ ದಯಾ।
ಹೀಂಗ ನಡಸೊ ಇದರಂತ ಇಟ್ಟ ಮಾಯಾ।
ಗುರುನಾಥಾ ಜೊಡಸುವೆನು ಕಯ್ಯಾ।
ಯಂನ ವಚನವು ಲಾಲಿಸಿ ಮಾಡೊ ಸೋಯಾ॥ಯೇರ॥

ಕಂತುಹರನೆ ಹೀಂಗ ನಡಿಲಿ ಇವರ ಶಕ।
ನಿತ್ತೆ ಕಾಲದಲಿ ನೆನಸು ಹಾಂಗ ಜನ।
ಅರ್ತಿಲಿಂದ ದಿಗ್ಗದೇಶನಾಳಲಿ।
ಮತ್ತು ಯಾರ ಇಂನಿವರ ಮೇಲೆ।
ವೈರೆಂತು ಬಾರದ್ಹಾಂಗ ಕರುಣವಿರಲಿ ನಿಂದ
ಚಿಂತಿಯಲ್ಲ ಮನದಂದ ಬಿಟ್ಟ ಬಹು।
ಶಾಂತದಿಂದ ಈ ಲೋಕನಾಳಲಿ ಆ।
ನಂತ ಕೋಟಿ ಕೋಟ್ಯಾಂತ್ರ ವರುಷ ದಿನ।
ಅಂತು ಪಾರವಿಲ್ಲದಲೆ ಗುರುವೆ
ನೀನಿಂತು ಯಾ ಹೊತ್ತು
ನೀ ಇವರ ಬೆಂನಮೇಲೆ।
ಹೆಂತೆಂತಾದ ಬಂದದ್ದ ಮಾರಿಯಲ್ಲ।
ಗೊಂತು ಇಲ್ಲದ ಕೇಡಾಗಿ ಹೋಗಲಿ।
ಇವರ ನಿಂತ್ರ ರಣಾಗ್ರಕ ಬಲ್ಮಿ ಕೊಡೊ।
ಹೀಂಗಂತ ಬೇಡಿಕೊಂಬುವೆನು ನಿನಗ ನಾ।
ಯೆಂತು ಪೇಳಲಿ ಗುರುವೆ ಇವರ್ಗೆ॥ಯೇರ॥

ನೀನಿಂತು ಆಸರವಾಗಿ ಬೆಂನಮೇಲೆ।
ಕೊಡೊ ಜೈಸು ಹಾಂಗ ಯೆಲ್ಲಿ ಬೇಕಾದಲ್ಲಿ।
ಯಲ್ಲಾ ಸ್ವಾದಿನ ಇರಲಿ ಈವರ ಕೈಲಿ।

ಅಗಲಿ । ಜಗದ ಕೀಲಿ ।
ಸರ್ವಲೋಕ ಇರಲಿ ಇವರ ಆಜ್ಞದಲಿ॥ಇಳವ॥

ವಿಕ್ಟೋರಿಯ ಯಂಬ ರಾಣಿ ವಚನ ।
ನಡಶಿಕೊಡ ನೀನ । ಸರ್ವ ಲೋಕವನ ।
ರಕ್ಷಣೆ ಮಾಡುವರು ।
ಲೋಕ ಜನರ ಮೇಲೆ ಬಲಪೇರು ।
ವೂರ ಬೈಲಹೊಂಗಲ ಟೀಕಣ ।
ಅಪ್ಪು ದ್ಯಾಮಣ । ಕವಿತದಲಿ ಪೂರ್ಣ ।
ಸೂರಿ ಮಾಡುವರು ।
ಬಾಳ ಸ್ವಥ ಜ್ಞಾನ ತಿಳದವರು॥ಯೇರ॥
ಪರ್ಸ ರಾಮನರಶಿಂಗ ಹೆಳತಾರರಿ ।
ಧನಿ ಇಂಗ್ರಜಿ ಕರ್ತುಕ ಸಾರಿ॥೭॥

***ಕವಿ :*** ದ್ಯಾಮಣ್ಣ
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

## ೧೪. ಸೋಮಾನಗಡದ ಪದ

ಸೋಮಾನಗಡದ ಪದಾ ಬರಿಯುವುದಕ್ಕೆ ಪ್ರಾರಂಭ ॥
ಪ್ರತಮ ಜಗಳದಾಕಾರಾ । ಕೇಳ ಚಾತೂರಾ ।
ಆಗಿ ಗಡಕರ್ಯಾರಾ । ಮಾಡ್ಯಾರ ಹೆಸರಾ ।
ಹೋಗುತನಕಾ ಪ್ರಾಣಾ ।
ಗಂಡಮೆಟ್ಟ ಜಾಗೆ ಬಾದೂರ ಗಡಾ ಸೋಮಾನಾ॥ಪಲ್ಲ॥

ಸೋಮನಗಡಾ ಜಾಗ ಬಿಕ್ಕಟ್ಟ । ಮಂದಿ ಬಹು ತೇಟ ।
ತೆಲಿಲೆ ಯೊಳೆಂಟ । ವತನದರಿಕಲ್ಲೆ ।
ಸೌರಾಜ  ಮಾರಾಜಾ ಯಿಟ್ವಾನ ಬಹು ಪ್ರೀತಿಲೆ ।
ಸೌರಾಜಾ ಕಂಣಿಲೆ ಕಂಡನಲ್ಲಾ । ಬಂತ ಮೊಗಲಾ ।
ಮೂರ ಲಕ್ಷ ಬಲಾ । ಸೋಮಾನ ಗಡಕ ಹಲ್ಲಾ ॥
ಯೇರ್ಯಾರ ದುಮಕಿಲೆ । ಐನೂರ ಟೋಪ ವಂದ ಭಾರ ।
ರಂಜಕವರದಾರ । ವಳೇ ಶಿಟ್ಟಿಲೆ ॥
ವುಚ ಮುಸಲ ಮೊಗಲ ಪಾಟಿಣಾ ।
ಮಾಡ್ಲಿಲ್ಲೊ ಅನಮನಾ ಅಂಬುತ ದಿನದಿನಾ ।
ಟೋಪ ಗರ್ದಿ ಬಾಣಾ । ಬಿಟ್ವಾರ ಹೊಂದಿಕಿಲೆ ।
ಅರವತ್ತ ಸಾವಿರ ಅರಬಿಕಿ । ಯೇರಿತ ಚಿಕಿಚಿಕಿ ।

ಹಿಡದಾರೊ ಕಿಲ್ಲೆ ।
ಚೋಳೊಬನಸುಬಗಚ್ಯಾರಕವಲಾ ।
ಭೀಮರಾವ ಕೊಟ್ಟ ಬಲ್ಲಾ । ಗಡಕರ್‍ಯಾರೆಲ್ಲಾ ।
ಟವಳಿ ಅಂಗ್ಯಾರಲ್ಲೆ ।
ಗೋಲಂದಾಸ ಟೋಪ ಹಚ್ಯಾನ ಬದಿಲೆ
ಕುಮಾರ ನಿಂತಾರ ಜೋಡಿಲೆ॥ಚಾಲ॥

ಭೀಮೋಜಿನಾಯಕಗಾತಿ ಅನಕುಲಾ ।
ತೊಗೊಂಡ ಕತ್ತಿ ಡಾಲಾ ।
ಯೋಳನೂರ ಕಾಲ ಬಲಾ
ಹಿಂದಕ ತಿರಗವರಲ್ಲಾ ॥
ಭೀಮೋಜಿ ಮಗೇರ್‍ಯಾರಚಲಾ ।
ಕೈಯಾಗ ತ್ರಿಸೂಲಾ ।
ಹಿಂದ ಮುಂದ ನೋಡಲೀಲ್ಲಾ ।
ವುಪ್ಪಿಗ್ಲಲಾಲಾ ॥
ರಾಣೋಜಿ ತೊಂಡ್ಯಾ ತಿಂದಾರ ಹಲ್ಲಾ ।
ತಡಾಪ ಮಾಡಲಿಲ್ಲಾ ।
ಅಗಶಿಬಾಗಲಾ । ತೆರದಬಿಟ್ಟಾರಲ್ಲಾ ॥
ಅರಬರ ಮಾತ ಕಿಲಬಿಲಾ ।
ಕಯಾಗ ಪಿಸ್ತುಲಾ ।
ಗಡಕರ್‍ಯಾರ ಮ್ಯಾಲಾ ।
ಬಾದ್ರಿವತ್ಯಾರಲಾ ।
ಗಡಕರ್‍ಯಾರ ಬಿದ್ದಾರ ಬಾರಲಾ ।
ತೆಲಿಗಿ ಹಚ್ಚಿ ಡಾಲಾ ।
ಲಾಗು ಆಗಲಿಲ್ಲಾ ।
ಗುಂಡ ಹೋದುವ ಮ್ಯಾಲಾ ॥
ತಾಶೀಮ ಹೊಡಂತಾರಲ್ಲಾ ।
ಗಡಕರ್‍ಯಾರ್‍ಯಾಲ್ಲಾ ।
ಕಮರಿ ಬಿದ್ದಾರಲ್ಲಾ ।
ಸುತ್ತ ಹಾಕ್ಯಾರ ಜಾಲಾ॥ಯೇರ॥

ದಂಡಿನೊಳಗ ಹೊಕ್ಕಾಂಗ ಹೆಬ್ಬುಲಿ ।
ಹೆಣಾ ವಂದರ ಮ್ಯಾಲಿ ।
ಬಿದ್ದಾವ ಜೆಕಿಮಿಲಿ ।
ನೆತ್ತರ ಕಾವಲಿ । ಹರಿತೋ ಜಾಣಾ ।
ಹಿಂಗ ದಂಡ ಕಡದಾರ ಸುತ್ತಾಡಿ ।

ಆದಿತ ಹಿಂಮೊಡಿ ।
ಸಾವಿರ ಬಿದ್ದುವ ಹೆಣಾ॥೧॥

ರಣಮಂಡಲಾತಿ ಜಗಳಾ ।
ಕುರ್‍ಯಾಗ ಹೊಕ್ಕಾಂಗ ತೊಳಾ ।
ಮಾಡ್ಯಾರ ಹಿಂಗ ಗೋಳಾ ।
ಬಿದ್ದಾವ ಹೆಣಗೊಳಾ । ಇಲ್ಲದ ಗಣತಿ ।
ಅರಬರ ಅಂತ್ತಾರ ಅರೆ ಅಲ್ಲಾ ।
ಕಚ್ಚಿದಾರ ಹುಲ್ಲಾ । ಚೆಲ್ಲಿದರ ಕತ್ತಿ ।
ಮೋರ್ಚೆದ ಆತಿ ಹಿಂಮೊಡಿ ।
ಹೋಗತಾರ ವೋಡಿ । ಡೆರೆದಾ ಕಡಿ ।
ಮೊಗಲ ಹಿಂಗ ನೋಡಿ ।
ಕರಗ ಮಾಡಿದ ಮೋತಿ ।
ಲುಟಿ ತೊಕ್ಕೊಂಡ ಗಡಕರ್‍ಯಾರೆಲಾ
ಅಗಶಿ ಹೊಕ್ಕಾರಲ್ಲಾ । ಹೊತ್ತ ಮುಣಿಗೆತಿ ॥
ಮೊಗಲ ಕಡಕೋಲಾನ ತಂನ ತೂಟಿ ।
ಇರೆಶಾಬಲಿಕೊಟ್ಟಿ ।
ಮಂದಿ ಹಿಡದ ಬಿಟ್ಟಿ ।
ಮಂಣಿನ ಹಂಡೆ ಕಟ್ಟಿ ।
ಇಟ್ಟಗಡದಳತಿ ।
ಹಿಂಗ ಮಾಡಿದಾನ ಸಂಜೊಕಾ ।
ಬೆಳಗ ಆಗು ತನಕಾ ।
ಹಚ್ಚಿ ಕ್ಯಾರಯಾತಿ ॥
ಮೊಗಲ ತಾ ಆದ ತಯಾರಾ ।
ಟೋಪ ಹದನಾರಾ ।
ಕುಂಪಿ ಮ್ಯಾಗ ಪೂರಾ ।
ಮಾಡಿದ ವಂದ ಭಾರಾ ।
ಕೊಟ್ಟ ಪರಬತ್ತಿ ।
ಗುಂಡ ಹಾರತ್ತಾವ ದಡಧಡಾ ।
ಅವಾಜ ತಡಪಡಾ ।
ಅಳ್ಳ ಹುರದ್ಹಾಂಗಾತಿ ॥
ಗನಚಕ್ರಟೋಪಿನವಾಜ ।
ಮದ್ದಗುಂಡಿನ ಮೋಜ ।
ಹೋಗಿ ಹಿಡಶಾರ ಮಂಜ ।
ಯಾರದಿಲ್ಲ ಅಜ್ಜಿ । ಅಲ್ಲಿ ನಡದತಿ ।
ಗಡಕಂವಶಾರ ಕಾಳಗತ್ತಲಾ ।

ಸುರದ್ಹಾಂಗ ಗರಗಲ್ಲಾ ।
ಗುಂಡಿಂದಿಲ್ಲ ಅಳತಿ ॥
ಗಡಕರ್ರ್ಯಾರ ಆಗ್ಯಾರ ವುಲ್ಲಾಸಾ ।
ಶನಿವಾರ ದಿವಸಾ ।
ಕುಮಾರ ಗೊಲಂದಾಸ ।
ಹುಕುಂ ತಂದ ಕಾಸಾ ।
ಬಂದ ಟೋಪಿ ನಂತಿ ।
ಹಚ್ಚಿ ನೋಡಿದ ಕೊಳಿವಿದುರದುಂಬಿ ।
ಟೋಪಿಂದ ಗರದಿ । ಹೊರಗ ನಡದತಿ॥ಚಾಲ॥

ಗೋಲಂದಾಸ ಯಿದ್ದ ಬಹಳ ಸೂರ ।
ಹಿಡದನ್ಯಾವರ ।
ಟೋಪಯಿಟ್ಟಗೂರಿ ।
ಹೊಡದ ವಂದ ಬಾರಿ ॥
ಟೋಪಿನ ಬಾಯಾಗ ಬಡಿತೊ ಗುಂಡಾ ।
ಮುರದ ಆತ ತುಂಡಾ ।
ಮೊಗಲ ನೋಡಿಕ್ಯಾರಿ ।
ಆದಾನ ಗಾಬರಿ ।
ಗೋಲಂದಾಸಗ ಬಂದಿತೊ ಶಿಟ್ಟ ।
ವಗದ ಮತ್ತೊಂದಿಟ್ಟ ।
ಹರಿತೊ ಡೇರಿ । ಮಾಡಿದ ಹೀಂಗ ಸೂರಿ ॥
ಜಗಳಾ ಆತಿ ಬಹಳ ದಿವಸಾ ।
ಹನ್ನೆರಡೊರುಷಾ । ಕುಂತಾರ ತುಂಬಿಕ್ಯಾರಿ ।
ನೋಡತ್ತಾರ ಹವ್ವಹಾರಿ ॥
ತಾಂವ ಬಂದಾಗ ಹಟ್ಟದರ ಮಾವಿನ ಗಿಡಾ ।
ಹಂಣ ತಿಂದ್ರ ಪಾಡಾ ।
ಹೋದಾರ ತಿರಿಗಿಕ್ಯಾರಿ । ರಾತರಾತುರಿ॥ಯೆರ॥

ಗಡಾ ಆಗಲಿಲ್ಲಾ ಕೈವಾಸಾ ।
ಕುಂತ್ತಾರ ಹಂನೆರಡ ವರುಷಾ ।
ಮೊಗಲವುದ್ದಾಸಾ । ಆಗಿದುರದೇಶಾ ।
ಬಹಳ ಹೈರಾಣಾ ।
ಹೀಂಗ ವಡಿ ಹೋದಾರ ಬೆಳತನಕ ।
ತಪ್ಪಿಕ್ಯಾರದಿಕ್ಕ । ಹಾರಿತ ಹಲ್ಲಣಾ॥೨॥

ಬಾಹು ಸಾಹೇಬ ಬಂದ ಶ್ರೀಮಂತ ।
ಗಡಾ ತೊಗೊ ಬೇಕಂತ ।
ಮಂದಿ ಕರಮಿಸ್ತ ।
ಪೋಣಾ ಲಕ್ಷಯಿತ್ತ ಹೋದ ಅಬ್ಬರಲಿ ।
ಗಡಕರ್‍ಯಾರ ವಗದಾರೋ ಗುಂಡಾ ।
ಮುರದ ಹೋತ ದಂಡಾ । ಬಂದ ಹಾದೀಲಿ ॥
ಕರಣಿಸ್ತಂವನಿರಾಣಿಕಾರಾ ।
ದಂಡ ತಯ್ಯಾರಾ ।
ಸಂಗಾಟ ಕೋಮಟಿಗೆರಾ ।
ಸೋಮಾನಗಡಕ್ಯಾರಾ ।
ಹಚ್ಚಿದಾನ ಗುದಲಿ ।
ಗೋಲಂದಾಸ ಗುಂಡ ವಗದಾ ಮೂರಾ ।
ವೋಡಿದ ನಿಪಾಣಿಕಾರಾ ।
ನಿಂದರಲಿಲ್ಲ ಅಲ್ಲಿ ॥
ಹಂತ ಹಿಂತಾವದಾದಿತ ಈ ಗತಿ ।
ಜಗದ ಕರಮತಿ । ಮುನಸೂಬನಸತಿ ।
ಚೋಳೋಬ ಸಾರತಿ ।
ಭೀಮರಾವಮೋ ಅಲ್ಲಿ ।
ಹಿಂಗ ಪಿರಂಗ್ಯಾ ಹಚ್ಚಿದ ಸಂಜಾನಾ ।
ಆರತಿಂಗಳ ದಿನಾ । ಕೊಲ್ಲಾಪೂರದಲ್ಲಿ ॥
ಅರಸ ಮಾರಾಜನ ಮಕ್ಕಳಿಬ್ಬರಾ ।
ಸಂಣಾವ ಹರ್‍ಯಾಮಿಕೊರಾ ।
ಅಂವಗ ಪಿರಂಗ್ಯಾರಾ ।
ಮಾತಿನ ಮಜಕೂರಾ ।
ಕೇಳ್ಯಾನ ಯಿ ಗತಿಲಿ ।
ನಾವ ಬಿಡತ್ತೇವ ನಿಂಮಾ ನಾಡಾ ।
ಕೊಡರಿ ಸೋಮಾನಗಡಾ ।
ಮಾಡಿಕ್ಯಾರ ಖಾಲಿ ॥
ಸಂಣ ಅರಸ ಸಾಹೇಬ ಹೇಳತಾನಲ್ಲಾ ।
ಮಾತಿನ ಅನಕೂಲಾ ।
ಗಡಕರ್‍ಯಾರೆಲ್ಲಾ ।
ನಮ್ಮ ಕಯಾಗಿಲ್ಲಾ ।
ಹ್ಯಾಂಗ ಮಾಡಂನ ಖಾಲಿ ।
ನೀವ ಮಾಡರಿ ನಿಂಮ ತಿಳದಾಂಗ ।
ನಿಂಮ ಕಯಾಗ । ರಾಜೆದಾ ಕೀಲಿ॥ಚಾಲ॥

ಅರಸನ ಮಾತ ಸಾಹೇಬ ಕೇಳಿದ ಸಾಪ।
ಹೊಂಟ ಗಪಚೂಪ।
ನೋಡಿಕೊಂಡ ಖರಾನಾ।
ಮಂಗಳವಾರ ದಿನಾ॥
ಅಂವ ಬಿಟ್ಟಾನ ಬೆಳಗಾಂವಿ ಸ್ತಳಾ।
ವಾರ ಮಂಗಳಾ।
ಮಂದ ಯಿತ್ತ ಹೋಣಾ। ದಣಿಶಿತೋ ಅವನಾ॥
ಬಾದ್ರಿಪದಾ ಶುದ್ಧ ಅಷ್ಟಮಿ।
ಯಿತ್ತ ಕುಮಿಕುಮಿ।
ಮಾಡಿದ ಹೊರಪ್ಯಾಣಾ। ಬಂದ ಗುಂಮಾನಾ॥
ಯಿಟ್ಟಣಿಗಿ ವೂರ ಬದಿಯಲಿ।
ಹೊಳಿ ದಾಟಿದಲ್ಲಿ।
ಆತ ಅಸ್ತಮಾನಾ। ಯಿಳಿತೋ ಶೈನಾ॥
ಸಾಹೆಬ ತಗದ ನೋಡಿದ ಚವಕಾಶಿ।
ಗಡದಾಗ ಪಡನೇಶಿ।
ತರಶಿಕೊಂಡವಂನಾ। ಪಿತೂರ ಸಂಜಾನಾ॥
ಪಡನೇಶಿಗೆ ಹೇಳತಾನ ಸಾಹೇಬ ಕಾಸ।
ರೂಪಾಯಿ ನೋಡ ಲಕ್ಷ।
ಕೊಟ್ಟ ರಾಕ್ಷಣಾ। ಪಿತೂರ ಕಾಗದನಾ॥ಯೇರ॥

ಪಡನೇಶಿ ಹಿಡದ ಪಿತುರದೇಲಿ।
ಸಾಹೇಬನ ಹಂತೆಲಿ।
ಬುದವಾರ ವುದಿಯಾಲಿ।
ಬರಿ ಅಂತ ಮ್ಯಾಲಿ। ಹಿಂಗ ಆತಿ ವಚಿನಾ।
ರೊಕ್ಕ ಕಾಶ ಮಾಡಿದ ಹಾರವ್ವ
ತೊಳದ ರಾಜ್ಯವ್ವಾ। ಆಳದ ಸಂಸ್ತಾನಾ॥೩॥

ಕಿವಡ ಸಾಹೇಬ ಮಾಡಿದ ಮಸಲೊತ್ತಾ।
ಡೆರೆದಾಗ ಕುಂತ್ತಾ।
ದಂಡಿಗಿ ತಾಕಿತ್ತಾ। ಬದ್ದರಗಡಕುತ್ತಾ।
ಅವಾಯಿಹಾಕಿದಾ।
ಹಿಂಗ ಹೋದಾನ ರಾತುರಾತರಿ।
ಕುಚೆಮಾಡಿಕ್ಯಾರಿ। ಹಲಕರಣಿಗೆ ಯಿಳದಾ॥
ಸಾಹೇಬಾ ನೋಡತ್ತಾನ ಗಡಾ ಹಣಿಹಣಿಕಿ।
ಬಂದ ಅಂಜಿಕಿ।
ಪೂರಾಣಾ ತಿರಿತಿರಿವಿಹಾಕಿ।

ನೋಡಿ ಆದ ದುಕಿ ।
ಹನಾರ ಬಂತ ಮಂದಾ ।
ಯಿಷ್ಟಾದರೇನ ಚಾತೂರಾ ।
ಇಂಗ್ರೇಜಿ ಬಹಾದೂರಾ ।
ತಿರಗಲಿಲ್ಲ ಹಿಂದಾ ॥
ಸಾಹೇಬ ದುರದುಂಬಿ ಹಚ್ಚಿ ನೋಡಿದಾ ।
ಆಕಾರ ತಳಗಿಂದಾ । ಸುಳವ ಮಂದಿದಾ ।
ಯಾರ ಯಿಲ್ಲದಾ । ತುಸ ಯಿತ್ತ ಮದ್ದಾ ।
ಮೂರ ಮಂದಿ ಕಂಡ ಕಂಣಿಲಿ ।
ನಕ್ಕ ಕಿಲಿಕಿಲಿ । ಬಂತ ವುಂಮೆದಾ ॥
ಗವರ್ನಲ್ ಸಾಹೇಬ ಆದ ತಯ್ಯಾರಾ ।
ಆಗಿ ಮಸಲೊತ್ತಕೊರಾ ।
ರಾತ್ರಿ ಬುದಂವಾರಾ ।
ಐದ ಮಂದಿ ಸೋದರಾ ।
ತೊಕ್ಕೊಂಡ ಮುಂದ ಹೋದಾ ।
ಇಂನ ಹರದಿದ್ದಿಲ್ಲ ಮೂಡಲಾ ।
ಅಗಶಿ ಬಾಗಲಾ । ದಾಟಿ ವಳಗ್ಹೋದಾ ॥
ಸೋಮಾನಗಡದವರ ಯಿದ್ದಾರ ಬೇಫೊಮ ।
ಕಾದ ಶ್ರೀರಾಮ ।
ಪಿರಂಗ್ಯಾಗ ಬಂತ ಹಂಮ ।
ಇಟ್ಟ ಅಂವ ದಂಮ ।
ಚವಿಕಿ ವಲಗ್ಹೊದಾ ।
ಚವಿಕೆವರ ಅಂತ್ತಾರ ನೀವ್ಯಾರ ।
ಲಗಾಮ ಹಿಡದಾರ ।
ಬಿಡಲಿಲ್ಲೊ ಮುಂದಾ॥ಚಾಲ॥

ಸಾಹೇಬನ ಕಯೊಗ ಇತ್ತ ನೋಡ ಸಾಂಗ ।
ವಗದ ಅವ ಹಾಂಗ ।
ಸತ್ತ ವದ್ದಾಡಿ । ಕಾಲ ಹೊಸದಾಡಿ ॥
ಮತ್ತೊಬ್ಬ ಚವಿಕ್ಯಾಂವ ಯಿದ್ದ ಕಾರ ।
ತುಂಬಿದಾನ ಬಾರ ।
ಸಾಹೇಬನ ಯದಿ ನೋಡಿ ।
ಹೊಡದ ಲಗು ಮಾಡಿ ॥
ಐದ ಮಂದಿ ಸೋದರನ ಕೊಂದ ।
ಶಿಟ್ಟಿಗೆಂವ ಬಂದ ।
ರಂಗ ಚಾವಡಿ । ಹೆಣಾ ಬಿದ್ದುವ ಕೂಡಿ ॥

ಚವಿಕ್ಯಾಗ ಆತಿ ಗಲಬಿಲಾ ।
ಗಡದಾನ ನಾಯಿಕರೆಲ್ಲಾ ।
ಬಂದಾರೋ ವೋಡಿ । ನಿಂತ್ತಾರ ಹೆಣಾ ನೋಡಿ ॥
ಕಿವಡ ಸಾಹೆಬ ಕಂಣಿಲಿಂದ ಕಂಡ ।
ಯಬ್ಬಶಾನ ಸೋದರ ದಂಡ ।
ಬೆಂಕಿ ಹಂತ್ತಾ ಕೀಡಿ । ಬಂತ ತಾರ್ತಡಿ ॥
ಗಡಕರ್ರ್ಯಾರ ಕಂಡ ತಿಂತಾರ ಹಲ್ಲಾ ।
ತೆಳಗ ಇಳದಾರಾಲ್ಲಾ ।
ನವಕೊಳ್ಳದ ಮಡ್ಡಿ । ಬಿತ್ತ ಅಲ್ಲಿ ರಗಡಿ॥ಯೆರ॥

ಜಗಳಾ ಆತಿ ಯಿದರಬದರಾ ।
ಕಾದ ಈಶ್ವರಾ । ಕಡದಾರ ಗಡಕರ್ರ್ಯಾರಾ ।
ಐನೂರ ಸೋದರನ । ಕಾಣಿಶಾರ ಮಂಣಾ ।
ಅವರಿಗೆ ಲೇಸ ಕೊಟ್ಟಿತೊ ಕತ್ತಿ ।
ತಿರಿವ್ಯಾರ ಬೆಂನ್ಹತ್ತಿ । ಇಳಶಾರ ಗುಡ್ಡನಾ॥ಳ॥

ಪಡನೇಶಿಗೆ ಸಾಧಿಸಿತ ಆಗ ।
ನೀರ ಕೊಡದಾಗ । ತೊಕ್ಕೊಡವ ಬ್ಯಾಗ ।
ಹೊಕ್ಕಾನ ಗಡದಾಗ । ಮದ್ದಯಿಟ್ಟ ತೋಶಿ ।
ಇಕಡೆ ಕೊಟ್ಟಾನ ಪಿರಂಗ್ಯಾಗ ಕೂಲಾ ।
ಬರಿ ಅಂತ ಮ್ಯಾಲಾ । ಕರದ ಶಿಲ್ಲೆ ಬೀಶಿ ॥
ಮೋರ್ಚೆ ಯೇರಿದಾನ ಇಂಗ್ರೇಜಾ ।
ಐನೂರ ಸೋದರ ಪೋಜಾ ।
ಮುಂದ ಆನಿ ಜಾಜಾ ।
ಬೆಂನಿಲೆ ನಡಿಶಿ ।
ಮದ್ದ ಗುಂಡಿಂದ ಮಾಡುತ ಗೋಳಾ ।
ಹಾರುತ ಕೆಂದುಳಾ । ಸನೇವುಳಿತಗಶಿ ॥
ಗಡಕರ್ರ್ಯಾರದ ನಡಿವಲ್ಲದ ಆಟ।
ಯಳ್ಳಕಾಳಷ್ಟ ।
ಗೋಲಂದಾಸ ಬಂಟ । ತಿದ್ದಿದಾನ ಮೀಶಿ
ಗರದ ನೋಡಿದ ಜೆಕೆರಿ ಬಾಗಲಾ ।
ಮದ್ದ ತೋಶಿಟ್ಟ ವಡಿದ ಪಡನೇಶಿ ॥
ಗೋಲಂದಾಸಾ ಮಗಾ ಅಂವ ಜಾತ ।
ಕುಮಾರ ಮಾಡಿದಾ ಕಸ್ತ ।
ಟೋಪ ಇಟ್ಟ ಸರತ । ಅಂವಾ ಬಹು ಬೇಶಿ ।
ಮದ್ದ ಹುರದ ಮಾಡಿದಾನ ಜಲ್ದ ।

ಟೋಪ ಇಟ್ಟ ತೆಗ್ಗಶಿ ॥
ಮುಂಜಾವ ನಾಯಿಕಗ ಹೇಳ್ಯಾನ ಗೋಲಂದಾಸಾ ।
ನೋಡರಿ ನಿವೊಂದ ತುಸಾ ।
ಟೋಪ ಹಾರಿಶಾನ ಕಾಸಾ ।
ಐನೂರ ಸೋದರ ಸರಸಾ ।
ಬಿದ್ದಾವ ಹೆಣಾ ಹಾಶಿ ।
ಆನಿ ಅಂಬಾರಿದ್ದಾರಿತೊ ತೆಲಿ ।
ಸತ್ತಾವ ಮೀನಲಿ । ತಡದ ಬಂತ ಆಶಿ॥ಚಾಲ॥

ಅಲ್ಲಿ ಆಡ ಹತ್ತ್ಯಾವ ರಣಾ ।
ಬಿದ್ದಾವ ಅಲ್ಲಿ ಹೆಣಾ ।
ಬೋರಪಿರಂಗಿ । ಟೆಪಿಗಿ ಸೂರ್ಯಾಗಿ ॥
ಕಿವಡ ಸಾಹೆಬ ಆಂಜಿ ಆದ ಗಾಬ ।

ಇತ್ತ ಅವಗ ಜರ್ಬ ।
ಬಿಟ್ಟಾನು ಜಾಗಿ । ಇಳದ ಬೈಲಿಗಿ ।
ಮರದಿನಾ ಮೂರು ಸಂಜಿ ವೇಳೆ ।
ಗಡಕರ್ರ್ಯಾರಾಗ್ಯಾರ ಗೋಳೆ ।
ಬಿದ್ದಾರ ಸ…..ಹೋಗಿ । ಸಾಹೇಬನ ಡೇರೆಗಿ ॥
ಮಾರಾರ ಇಪ್ಪತ್ತ ಕಡದ ಹಾಕಿ ।
ಬಂದಾರೊ ಶಿಗದ । ಅವರ ಕೈಯಿಗಿ ।
ಹೊಕ್ಕಾರ ಗಡ ಹೋಗಿ ॥
ಕಿವಡ ಸಾಹೆಬ ಮಾಡಿದಾನ ಜಲ ।
ಕಾಗದ ಅವ ಬರದ ।
ಪಟವರ ದಂಡಿಗಿ । ಬರ್ರ್ಯೋಕುವಿಂಕಿಗಿ॥ಯರ॥

ಪಿರಂಗ್ಯಾನ ಕುಮಕ ಆದಾರಲ್ಲಾ ।
ಪಡವರಧನೆರ್ರ್ಯಾಲ್ಲಾ ।
ದೇಶಾಯಿ ದೇಶಪಾಂಡೆ ಖಲ್ಲಾ ।

***ಕವಿ : .........?***
***ಕೃತಿ :*** ಪ್ಲೀಟರು ಸಂಗ್ರಹಿಸಿದ ಲಾವಣಿಗಳು

# ೨೫. ರಾಮದುರ್ಗ ದುರಂತ ಪದ

ಎಂದೆಂದೂ ಹಿಂದ ಮುಂದ ಆಗದಂಥಾದ್ದು ಆಗಿ ಹೋತು
ದೇಶದೊಳಗೆ ರಾಮದುರ್ಗ ದುರಂತ

ಜಲ್ಮ ಫಾಸಿಯಾಗಿ ಹೋದ್ರು ಆಗಲಿಲ್ಲ ಮಾಹಿತ
ನಿರಾಸೆಯಿಂದ ಪ್ರಾಣದಾನ ಕೊಟ್ರು ಸ್ವತಃ
ದೇಶಭಕ್ತರನ್ನು ಒಯ್ದು ಪಾಶೇಕ ಹಾಕಿಕೊಂದ ಕಥೆ
ಧ್ಯಾಸ ಇಟ್ಟು ಕೇಳಿರೆಪ್ಪ ಈ ಮಾತ ಕಾಲ ವಿಪರೀತ

ಬಂದದ್ದೆಲ್ಲ ಬರಲಿ ನಾವು ಹಿಂದ ಇರತೇವೆಂತ
ಹೇಳಿ ಚಂದವಾಗಿ ಬೋಧ ಮಾಡಿ ನಾನಾ ತರ
ಹಳ್ಳಿ ಮಂದಿಗೆಲ್ಲ ಹುರುಪ ಹಾಕಿ ಬೆರಕಿಯವರ
ಬಾಳ ತೊಂದರೆಗೆ ಹಾಕಿದಾರ ಮೋಸದಿಂದ ಪೂರ
ಭಲಲಲ ಶಹಬಾಶ್ ಎಂದು ಹೊಲ್ಯಾನ ಉಬ್ಬಿಸಿ ಕೊಳ್ಳಕ ಹಾಕಿ
ಮಲವಿನೊಳು ಹಾಕಿದಾರ ಬಿಲಗಾರರ ಇವರು ನೆಲೆಹೀನರ

ರಾಮದುರ್ಗ ಸಂಸ್ಥಾನ ಮೂವತ್ತೂರು ಹಳ್ಳಿಯವರು
ಸಾವಧಾನದಿಂದ ಸಣ್ಣ ದೊಡ್ಡವರ
ಶಾಂತಿಯಿಂದ ಚಳವಳಿ ನಡೆಸಿದರ ಜೋರ
ಕ್ರಾಂತಿಕಾಲ ಬಂತ ತಿಳಿಯಲಿಲ್ಲ ಹುನ್ನಾರ
ಪಂಚ ಪಿತೂರಿಗಾರರು ಕೂಡಿ ಹೊಂಚುಹಾಕಿ ಒಳಗಿಂದೊಳಗ
ಸಂಚುಮಾಡಿ ಕೆಡಸಿದಾರ ವಂಚಕರ ಆತ್ಮಘಾತಕರ
ಸತ್ಯವಂತ ಪ್ರಜಾಸಂಗ ಅತ್ಯಾಚಾರ ಮಾಡಿತ್ತೆಂದು
ಯುಕ್ತಿಯಿಂದ ಖಟ್ಲೆ ಹಾಕಿ ಸರಕಾರ
ಮುಖ್ಯ ತತ್ವ ಚಳವಳಿ ಮುರಿಸುಗೋಸ್ಕರ
ಬಂದೋಬಸ್ತ ಸಾಕ್ಷಿಗಳು ನಾನಾ ಪ್ರಕಾರ
ಮಿಲ್ಟ್ರಿ ಮತ್ತು ಪೋಲಿಸರ ಪಲ್ಟಣದ ಗುಂಪ ನೋಡಿ
ಭಯಗೊಂಡ ಎಲ್ಲ ಹಳ್ಳಿಗಳ ಜನರ ಹಾಕತಾರ ಉಸರ

**||ಚ್ಯಾಲ||**

ಊರ ಮನಿ ಬಿಟ್ಟ ಓಡಿದಾರ ವಸ್ತಿ ಮಾಡ್ಯಾರ ಪರ ಊರಿಗೆ ಹೋಗಿ
ನಜರಿಗೆ ಬಿದ್ದವರನ್ನು ಓದ ಕಟ್ಯಾರ ಚಾವಡೀಗಿ

ತಪ್ಪು ಇಲ್ಲದವರು ಕೆಲವರು ಸಂಭಾವಿತ ಜನರು ನಡುಗಿ ಘಾಬರಿ ಆಗಿ
ಹುಲಿಬಾಯೊಳು ಕುರಿಮರಿ ಸಿಕ್ಕ್ಯಾಂಗ ಆದೀತು ಹೋ

ನೂರಾರು ಮಂದೀನ್ನ ಹಿಡದ ಕೆಡವಿದಾರು ಬಡದ ಸುಳ್ಳ ಗುದಮುರಗಿ
ನ್ಯಾಯ ಅನ್ಯಾಯ ವಿಚಾರ ಇಲ್ಲ ಜೋರ ವಾರಂಟ ಎಲ್ಲಾರಿಗಿ
ಅತ್ತೆ ತಪ್ಪ ಮಾಡಿದ್ರ ಸೊಸಿ ಮ್ಯಾಲ ಕೇಳಾವ್ರ ಯಾರ ಇಲ್ಲ ರಾಜರ ಕಡಿಗಿ

ಎಷ್ಟ ತಪ್ಪ ಇದ್ದರೇನ ಗಟ್ಟಿಗ್ಹಚ್ಚವರಿಲ್ಲ ಹೋಗಿ
ನ್ಯಾಯ ಅನ್ಯಾಯ ವಿಚಾರವನ್ನು ಯಾರು ಮಾಡುವವರಿಲ್ಲ
ಏಕದಂ ಆರೋಪ ಪ್ರಜಾಸಂಗದ ಮ್ಯಾಲ
ಬಾಳ ಪಸಂದಾದೀತಂತ ಪೋಲೀಸರ ಒಗದಾರ ಜಾಲ
ಕಾಂಗ್ರೆಸ ಮುಖಂಡರನ್ನ ತಂದ ಹೊಗಿಸಿದಾರ ಜೇಲ

ದಯಾಮಯಾಮೂರ್ತಿ ರಾಜಾ ಸಾಹೇಬರಿಗೆ ಹೇಳಗಿಲ್ಲ
ಇಲ್ಲದಗಿಲ್ಲಾ ಹೇಳಿ ಕೆಡಿಸಿ ಇಟ್ಟಾರ ಇದನೆಲ್ಲ

ಒಟ್ಟಿಗೆ ಹೇಳೂದೇನ ಬಂದಿತು ವಿನಾಶದ ಕಾಲ
ವೀರ ಧೀರ ಧೈರ್ಯವುಳ್ಳ ದೇಶಭಕ್ತರ ಮ್ಯಾಲ

**||ಏರು||**

ಸ್ವಾರ್ಥ ತ್ಯಾಗ ಮಾಡಿದಂಥ ಸತ್ಯವಂತ ಕಾಂಗ್ರೆಸ್‌ದ
ಕರ್ತರಿಗೆ ಬಂತ ಅಪಮಾನದ ಹೊತ್ತ
ನಾವು ಮರತೇವಂದ್ರ ಮರೆಯದಂಥಾ ವೃತ್ತಾಂತ
ಇದು ಭರತಖಂಡದಲ್ಲಿ ಉಳದೀತ ಗುರ್ತ
ದೇಶಭಕ್ತರನ್ನು ಓದು ಪಾಶೇಕ ಹಾಕಿ ಕೊಂದ ಕಥಿ
ದ್ಯಾಸ ಇಟ್ಟ ಕೇಳಿರಪ್ಪ ಈ ಮಾತ ಕಾಲ ವಿಪರೀತ||೧||

ದಾವರರ ಕೋರ್ಟಿನೊಳು ದಾದ ಇಲದೆ ಸುಳ್ಳ ಹೇಳಿ
ಸಾಧಿಸಿಕೊಂಡಾರ ತಮ್ಮ ಅದಾವತಿ
ಸತ್ಯ ಧರ್ಮ ವ್ಯಕ್ತಿಗಳ ಜಲ್ಮ ಆತಿ ಹತಿ
ಪ್ರಜಾಸಂಗದಲ್ಲಿ ಉಳಿಯಲಿಲ್ಲ ನಿಜಶಕ್ತಿ
ಚೆನ್ನಾಗಿ ಬೆಳೆದ ಕಬ್ಬ ಗಾಣಕ ಹಚ್ಚಿದ್ಹಾಂಗ ಆತಿ
ಗೋಣ ಕೋದಾರೆಂಬುದಾಗಲಿಲ್ಲ ಮಾಹಿತಿ ಘಾತ ಆಗಿ ಹೋತಿ
ಮೆಹರಬಾನ ದಾವರರು ಶ್ಯಾರ ರಾಮದುರ್ಗಕ ಬಂದು
ಸಾರೋದ್ಧಾರ ತಕ್ಕೊಂಡಾರ ಎಲ್ಲ ಮಾಹಿತಿ
ಇಲ್ಲಿ ಘೋರ ದುರಂತದ ವಿಚಾರ ನಡೀತ
ಕಾಯ್ದೆಶೀರ ಸಾಕ್ಷಿ ಬೇಡಿದಾನ ನ್ಯಾಯಮೂರ್ತಿ
ಏಕ ಪಕ್ಷದಿಂದ ಸಾಕ್ಷಿ ಬೇಕಾದಷ್ಟು ಹೇಳಿದಾರ
ಪ್ರಜೆಗಳ ಮ್ಯಾಲ ಕೊಟ್ರ ಅಪಕೀರ್ತಿ ಹೊರಿಸ್ಯಾರ ಪೂರ್ತಿ

**||ಚ್ಯಾಲ||**

ಕಾಂಗ್ರೆಸ ಮುಖಂಡರು ನಿಂತ ಸಾಧಿಸಿ ತಮ್ಮ ಪಂಥ ಬದಲಿಸಿ ಬಣ್ಣ
ನಿಂತ ಜವಾಬ ಕೊಟ್ಟಾರ ಪೂರ್ಣ
ಪ್ರಜಾಸಂಘದಲ್ಲಿ ಇದ್ದಾವ್ರ ಬಿಟ್ಟು ಹೋದ್ರು ದೂರ ಅಡಗಿಕೊಂಡ ಜನ
ಹೇಳಿದಂತೆ ಕೇಳ್ತೇವಂತ ಬರೆದುಕೊಟ್ರ ಲೇಖಿಯನ
ಪ್ರಜಾಸಂಘದೊಳಗ ಮಂದಾದ ಮಂದಿನ್ನ ಹಿಡಿದ ಮಾಡಿದಾರ ಸಣ್ಣ
ಕೊಟ್ಟಾರ ಘೋರ ಶಿಕ್ಷೆಯನ
ಹಿಂತಾವ್ರ ಆರೋಪಿಗಳು ಅಂತಾ ಹುಕುಮಾತಿ ತುರ್ತ ಮಾಡೋದಿನ್ನೇನ
ಮಹಾರಾಜಸಾಹೇಬರು ನೋಡಲಿಲ್ಲ ತೆರೆದ ಕಣ್ಣ
ಅತ್ತಿಯವರ ಸೇಡ ಬಚ್ಚಲದಾಗ ಹೇಳತಾರ ಹೀಂಗ ಹಿರ್‍ಯಾರು ವಚನ
ಸುಳ್ಳ ಆಗಲಿಲ್ಲ ಪ್ರತ್ಯಕ್ಷ ಕಂಡೀವ್ರಿ ಇದನ

**||ಪದ||**

ಮುಖ್ಯ ಆರೋಪಿಗಳು ಹನ್ನೊಂದು ಮಂದಿಯೆಂದು ನಿಶ್ಚೈಸಿ
ಗಲ್ಲಿಗೆ ಏರಿಸುವ ಹುಕುಂ ಮಾಡ್ಯಾರು
ಹಿಂಡಲಗಿ ಜೇಲಿನ ಮುಖ್ಯ ಅಧಿಕಾರಿಗಳಿಗೆ ತಿಳಿಸಿದರು
ಆರೋಪಿಗಳ ಬಂಧು-ಬಾಂಧವಾದಿಗಳಿಗೆ ಆದ ಸುದ್ದಿ ಕಳಿಸಿದರು ಖೇದಗೊಳಿಸಿದರು
ಅಸಂಖ್ಯಾತ ಜನರು ಹಿಂಡಲಗಿಗೆ ಹೋದರು
ದರ್ಶನಾರ್ಥವಾಗಿ ಆಶಿಸಿ ನಿಂತಿದ್ದರು
ಆ ಕಾಲಕ್ಕೆ ಆರು ಮಂದಿಯಲ್ಲಿ ಮುಖ್ಯಸ್ಥನಾದ ಬಸಪ್ಪ ಎಲಿಗಾರ ಈತನು
ಬಂದ ಜನರಿಗೆ ವಂದಿಸಿ ವಿನಯದಿಂದ ಹೇಳಿದ ಸದ್‌ಬೋಧ
**||ಅಡಪದ||**ನಂದದಿಂದಲಿ ಕೇಳಿರಿ ಪ್ರಿಯ ಬಂಧುಗಳೆಲ್ಲರು
ಇದು ಪ್ರೇಮ ಪ್ರಜಾವೃಂದ ಸಮಾಜಕ್ಕೆ
ಮುಂದೆ ಆದ ಕಥೆ ವಂದಿಸಿ ಹೇಳುವೆ
ದ್ವಂದ್ವಭಾವನ ದೂರಮಾಡಿ ನೀವು
ಒಂದೆ ಮನಸ್ಸಿನಿಂದ ಹೊಂದಿ ನಡೆಯಿರಿ

ಜಾತಿ ಬೇಧವನ್ನು ಅಳಿಯಿರಿ ನಿಜ ನೀತಿಯ ತಿಳಿಯಿರಿ
ನಾಸ್ತಿಯಾಗುವ ಅಸ್ಥಿರ ದೇಹದ
ಆಸೆಯಿಲ್ಲದೆ ಶಾಂತಿಯಿಂದಲಿ
ಶಿಸ್ತಿನಿಂದ ನಾವು ಸುಸ್ಥಿರ ಮೋಕ್ಷದ
ರಸ್ತಾ ಹಿಡಿದು ಸ್ವರ್ಗಸ್ಥರಾಗುವೆವು

ಜೀವದಾನವನು ಕೊಡುವೆವು ಭೂದೇವಿಯ ಪಾದಕೆ
ಸತ್ತರೆಂದು ನೀವು ಅತ್ತರೇನು ಫಲ

ಅರ್ಥಿಯಿಂದ ದೇಶಭಕ್ತರಾಗಿರಿ
ಮಹಾತ್ಮನು ಹೇಳಿದ ಸತ್ಯ ಅಹಿಂಸಾ
ತತ್ವಪಾಲಿಸಿ ನೀವು ಚಳವಳಿ ನಡೆಸಿರಿ

**||ಏರು||**

ನಾವು ಸತ್ತ ಹೋದ ಮ್ಯಾಲ ಕೂಡಬೇಡಿರೆಪ್ಪ ಸ್ವಸ್ಥ
ನಿರುಪಾಯರಾಗಿ ಕೊಡಬೇಡಿರೆಪ್ಪ ಸ್ವಸ್ಥ
ಏಕೀಕರಣ ಮುರದ ಹೋದ್ರ ಅಗತದ ಘಾತ
ನಾವು ಹೋಗತೇವ ಇದೇ ನಮ್ಮ ಕಡೀ ಮಾತ||೧||

ಬಲಶಾಲಿ ಬಹಾದ್ದೂರ ಎಲಿಗಾರ ಬಸಪ್ಪನು
ಕಿಲಕಿಲಿ ನಗತಾನ ಗುಣವಂತ
ಸಾವುತೇನಿ ಎಂಬ ಭಯ ಇಲ್ಲ ಇದ್ದ ಶಾಂತ
ಆತ್ಮಬಲಿ ಕೊಡಲಿಕ್ಕೆ ಸಿದ್ಧನಾಗಿ ನಿಂತ
ಬಂಧು-ಬಳಗಕ್ಕೆಲ್ಲ ನಿಂತ ಚಂದವಾಗಿ ಹೇಳತಾನ
ನಂದದಿಂದ ಇರಹೋಗ್ರಿ ನಕ್ಕೊಂತ ಅಳಬ್ಯಾಡ್ರಿ ವ್ಯರ್ಥ

ನಿರ್ಮಲಾಗಿ ನಿತ್ಯದಲ್ಲಿ ಓಂ ನಮಃ ಶಿವಾಯ ಎಂದು
ನಾಮವನ್ನು ಭಕ್ತಿಯಿದ ಭಜಿಸುತ
ನೀವು ಬೇಡಿಕೊಳ್ಳಬೇಕ ಮುಕ್ತಿ ಆಗಲೆಂತ
ಒಳ್ಳೆಯ ಧೈರ್ಯದಿಂದ ಮನೆತನ ಸಾಗಿಸುತ
ಹುಚ್ಚರಾಗಬ್ಯಾಡ್ರಿ ನೀವು ಎಚ್ಚರಕಿಲೆ ಇರಬೇಕ
ನಮ್ಮ ನಿಮ್ಮ ಋಣ ತೀರಿತ ಈವತ್ತ ಹೋಗತೇನಿ ಮರತ

ಹಿರೇಮಠ ಮಹಾಲಿಂಗಯ್ಯ ಪರಮಜ್ಞಾನಿ ಪಂಡಿತ
ಮರಗಲಿಲ್ಲ ಮನಸಿನೊಳು ಬಂದ ಸ್ವತಃ
ಭೆಟ್ಟಿಗೆ ಬಂದವರಿಗೆಲ್ಲ ನಮಸ್ಕರಿಸುತ
ನಾನು ಪರಲೋಕ ಯಾತ್ರೆಗೆ ಹೋಗುವೆನಂತ
ಶಾಂತಿಯಿಂದ ಶರಣ ಮಾಡಿ ಪ್ರಾಂತ ಮಾತೆಯ ಪಾದಕ್ಕೆ
ಆತ್ಮಬಲಿ ಕೊಡತೇನಿ ಈವತ್ತು ನಾನು ನಗುನಗುತ

**||ಚ್ಯಾಲ||**

ತೀರಲಿಲ್ಲೋ ಮನಸಿನ ಇಚ್ಛಾ ಬಂದಿತೋ ಪೇಚ ತಂದ ಗುರುರಾಯ
ನಮ್ಮ ಸಂಸ್ಥಾನ ಆಳೋ ಅರಸಗ ಬರಲಿಲ್ಲ ದಯಾ

ಮುಟ್ಟಿತೋ ಭೂಮಿಯ ರಿಣಾ ಇನ್ನೊಂದು ದಿನ ತೀರಿತೋ ಕ್ರಿಯಾ
ನಿಮ್ಮನ್ನಗಲಿ ಹೋಗತೀನ ಕಾಂಗ್ರೆಸ್ಸಕ್ಕಾಗಲಿ ಜಯ

ಭೂಮಾತೆ ನಿನ್ನಯ ಸೇವಾ ಮುಗೀತೇನವ್ವ ನೀಡೇ ನನಗೆ ಅಭಯ
ನಿನ್ನ ಮಡಲಿನೊಳಗ ಮರೆಯಾಗುವೆ ಹಿಡಿಯವ್ವ ಕೈಯ

ಧರ್ಮದ ಕಟ್ಟುಗಳು ಸಡಲಿ ಬಿದ್ದಿತೋ ಕೊಡಲಿ ಶಿರದಮ್ಯಾಲ ಘಾಯ
ಘಾಯವಾಗಿ ಜಲ್ಮ ಹೋಗುತದ ಇಲ್ಲ ಉಪಾಯ

ಸುರಿಸುವಿರಿ ಯಾಕ ಕಣ್ಣೀರ ಹಾಕಬ್ಯಾಡ್ರಿ ಉಸಿರ ತಾಳಬೇಕ ಧೈರ್ಯ
ಮನಿಮಂದಿಗೆಲ್ಲ ಹೀಂಗ ಹೇಳಿದ ಮಹಾಲಿಂಗಯ್ಯ

**||ಚ್ಯಾಲ||**

ಈ ಪ್ರಕಾರ ಭಕ್ತೀಲೆ ಮಾಡತಿದ್ದ್ರ ಶಿವಭಜನ
ಶಿವನಾಮ ಭಜಿಸುತ ಪ್ರೇಮದಿ ಕೊಡುವೆವು ಪ್ರಾಣ

ಈ ಪ್ರಪಂಚವೆಂಬುದು ಮಾಯಾ ಮೋಹದ ಗಾಣ
ಮರಣಾಗೂದು ತಪ್ಪಿಲ್ಲ ತಿರುಗತೈತಿ ಹತ್ತಿ ಬೆನ್ನು

ಜನಸೇವಾದಿಂದ ನಾವು ಕೃತಾರ್ಥರಾದೆವು ಪೂರ್ಣ
ಕಾಂಗ್ರೆಸ ಭಕ್ತರಿಗೆ ವಿನಯದಿ ಮಾಡತೇವ ಶರಣ

ಇಷ್ಟೆಲ್ಲ ಆದರೂ ಕುಂದಲಿಲ್ಲ ಮುಖ ಚಿಹ್ನೆ
ಮಹಾನಂದದಿಂದಲಿ ಹೇಳತಿದ್ದ್ರ ಉದಾಹರಣ

ಮಹಾಧೈರ್ಯಶಾಲಿಗಳ ಮ್ಯಾಲೆ ಮುನಿದ ಭಗವಾನ
ನಾ ಹೇಳಲಾರೆನು ದುಃಖದ ವರ್ಣ

ಬಂಧು-ಬಾಂಧವಾದಿಗಳು ಮಾಡತಾರ ರೋದನ
ಅಸಂಖ್ಯಾತ ದೇಶಭಕ್ತರಿಗೆ ಆದೀತ ವ್ಯಸನ

**||ಏರು||**

ಯೋಗಿಯಂತೆ ಕಂಡುಬಂದ ಜೋಗಿಯವರ ಗಿರೆಪ್ಪ
ರಾಗ ಭೋಗ ಭಾಗ್ಯದಲ್ಲಿ ಇಲ್ಲ ಚಿತ್ತ
ಅನುರಾಗದಿಂದ ಜಲ್ಮ ಕೊಡಲಿಕ್ಕೆ ನಿಂತ
ಸ್ವಾರ್ಥತ್ಯಾಗ ಬುದ್ಧಿಯಿಂದ ಆತ್ಮ ಅರ್ಪಿಸುತ

ಹರಗೋಲ ಪತ್ರೆಪ್ಪ ಇವನು ಮರಗಲಿಲ್ಲ ಮನಸ್ಸಿನೊಳು
ಕೊರಗಲಿಲ್ಲ ಪ್ರಾಣವನ್ನು ನೀಡುದಕ
ದೇಹ ಸೊರಗಲಿಲ್ಲ ಸ್ವರ್ಗವಾಸಿ ಆಗುದಕ
ಮನ ತಿರಗಲಿಲ್ಲ ಇಹಲೋಕದ ವಾಸನಕ
ಬಂಧು-ಬಳಗದ ಚಿಂತೆ ಇಲ್ಲ ಸಂದಿ ಹಾದಿಗಳು ಇಲ್ಲ
ವಂದಿಸಿದ ಬಂದಿರುವ ಸಮಾಜಕ ಭಕ್ತಿಪೂರ್ವಕ
ಹತ್ತೊಂಭತ್ತನೂರ ನಾಲ್ವತ್ತನೆಯ ಇಸ್ವಿ ಮೇ ತಿಂಗಳ
೬ನೇ ತಾರೀಖ ಸೋಮವಾರ ಉದಯಕ

ಶಿಲುಬೆಗೇರಿದಾರ ಅರಮಂದಿ ಆ ಕಾಲಕ
ಜೀವದಾನ ನೀಡ್ಯಾರ ದೇಶ ಉದ್ಧಾರಕ
ಸೂರ್ಯ ಚಂದ್ರರಿಗೆ ಬಂದ ಕ್ರೂರ ಗ್ರಹಣ ಹಿಡಿದ್ಹಾಂಗ
ಘೋರ ದುಃಖ ಅತಿ ಕರ್ನಾಟಕ ಅನಿವಾರ್ಯ ಶೋಕ
ಮಾನ್ಯವಂತ ಪುರುಷರಿವರು ಧನ್ಯ ಧನ್ಯ ಲೋಕದೊಳು
ಸೃಷ್ಟಿಯಲ್ಲಿ ದೃಷ್ಟಾಂತ ಕಡೀತನಕ
ರೆಕ್ಕೆ ಮುರದ ಹೋದ ಪಕ್ಷಿ ಬಿದ್ಹಾಂಗಾಗಿ ನೆಲಕ
ಮೃತ್ಯುಲೋಕ ಬಿಟ್ಟು ಹೋದ್ರು ಸತ್ಯ ಕೈಲಾಸಕ
ಸ್ವಾರ್ಥತ್ಯಾಗ ಮಾಡಿದಂಥಾ ಭಾರತ ಭಕ್ತರೆಲ್ಲ ಹೋಗಿ
ವ್ಯರ್ಥ ಕೈದಿ ಸೋಸಿದಾರೋ ಸುಮ ಸುಮಕ ದುರಂತ ಅದದಕ

**||ಚ್ಯಾಲ||**

ಮಹಾ ಪುಣ್ಯವಂತರು ಆಪತ್ತಿಗೆ ಅಂಜದೆ
ಜಯವೆಂದು ಜಯ ಘೋಷ ಸಾರಿದರು
ಸತ್ಯವಂತರ ಪ್ರಾಣ ಹತವಾಗುವಾಗ
ಪಾರ್ಥನ ತೆರನಂತೆ ಚೀರಿದರು
ಕೀರ್ತಿಯ ಮಾಲೆಯ ಕೊರಳಿಗೆ ಧರಿಸುತ
ಮುಕ್ತಿಯ ಸೋಪಾನ ಏರಿದರು
ಜನರೆಲ್ಲ ಕಣ್ಣೀರ ಸುರಿಸಿದರು
ಮರ್ಮವು ತಿಳಿಲಿಲ್ಲ ಕರ್ಮಕ್ಕ ಸರಿಲಿಲ್ಲ
ರಾಮದುರ್ಗದ ರಾಜೇಸಾಹೇಬರು
ಪ್ರಜಾಪಾಲಕನೆಂಬ ರಾಜನೀತಿಯ ಬಿಟ್ಟು
ಅನಿವಾರ್ಯ ದೋಷಕ ಗುರಿಯಾದರು
ರೊಖ್ಖದ ಬಲದಿಂದ ಮಿಲಿಟರಿ ಪಲ್ಟಣ ತರಿಸಿ
ಜನರನ್ನು ಪರಿ ಪರಿ ಕಾಡಿದರು

ದೋಷವಿಲ್ಲದ ನಮ್ಮ ದೇಶಭಕ್ತರ ಜಲ್ಮ
ಫಾಸಿಮಾಡುತ ಪಾಶೇಕ ಹಾಕಿದರು ನಿರ್ದಯ ರಾಮದುರ್ಗ ಯಜಮಾನರು

**||ಚ್ಯಾಲ||**ಖಾಸ ಸದ್ಗುಣವ ದೇಶಭಕ್ತರ ಕೊಲೆಯ ಆದ ವಿಸ್ತಾರ
ವಿಸ್ತರಿಸಿ ಹೇಳಲು ಕಣ್ಣಾಗ ಬರತಾವ ನೀರ
ಪೃಥ್ವಿ ಮುಳುಗುವ ವರೆಗೆ ಉಳದೀತ ವೀರರ ಹೆಸರ
ನರಜನ್ಮ ಧರಸಿ ಬಂದ ಸ್ವಾರ್ಥ ಹೊಂದಿದಾರ ಪೂರ
ಭೊಲೋಕ ಬ್ಯಾಸರಾಗಿ ಸೇರ್‍ಯಾರ ಕೈಲಾಸನಗರ
ಶ್ರೇಷ್ಠವಾದ ಕೀರ್ತಿಯಿಂದ ಬಿಟ್ಟಾರೋ ನರಶರೀರ

**||ಏರು||**

ಸೃಷ್ಟಿಯೊಳು ಹುಲಕುಂದ ಗ್ರಾಮ ಜಾಹಿರ
ಪಟ್ಟದ್ದೇವರು ಶಿವಲಿಂಗಕವಿ ಮಾಡ್ಯಾರು ಕವಿಚಾತುರ||ಳ||

**ಮಾಹಿತ – ಮಾಹಿತಿ, ಧ್ಯಾಸ – ಲಕ್ಷ್ಯ, ಪಾಶೇಕ – ನೇಣು, ಮಲವಿನೊಳು – ಬಲೆಯಲಿ**

**ಪಲ್ಲಣ-ಪ್ಲಟೂನ್** (Platoon), **ನಜೂರಿಗೆ -ದೃಷ್ಟಿಗೆ, ಗುದಮುರಗಿ-ಗದ್ದಲ, ಏಕದಂ-ಒಮ್ಮೆಲೆ, ಪಸಂದ-ಹಿಡಿಸು, ಇಲ್ಲದಗಿಲ್ಲ-ಇಲ್ಲದ್ದೆಲ್ಲ**

**ದಾದ – ಲಕ್ಷಿಸು, ಗಮನಿಸು, ಅದಾವತಿ – ಹಗೆತನ, ಹಲಿ – ನಾತಿ, ಹೋತಿ – ಹೋಯ್ತು, ನಡೀತಿ – ನಡೆಯಿತು, ಜವಾ – ಉತ್ತರ, ಹುಕುಂ – ಆಜ್ಞೆ**

**ರಿಣ – ಋಣ**
***ಕವಿ:*** ಶಿವಲಿಂಗಸ್ವಾಮಿ ಹಿರೇಮಠ
***ಕೃತಿ:*** ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೬. ನಲವತ್ತೆರಡರ ಚಳುವಳಿ

ಸಣ್ಣ ಮಾತ ಅಲ್ಲ ಕೇಳರಿ ಸನ್ ಹತ್ತೊಂಭತ್ತನೂರಾ
೪೨ನೇ ಇಸ್ವಿ ಬಂತ ಒದಗಿ
ನೌಕ್ರಿ ಜನರಿಗೆ ಬಂದೀತಾಗ ಬಾಳ ಬಿಗಿ
ಇನ್ನು ಹೇಳತೇನ ಕೇಳ್ರಿ ಆದಂತಾ ಬಗಿ ||
ಮೀರಿದ ಚಳವಳಿಯಾಗಿ ಸೂರಿ ಆತ್ರಿ ನಾಡಮ್ಯಾಗ
ಕುತ್ತ ಬಂದ ಕವದೀತ ಬ್ರಿಟಿಷರಿಗಿ
ಪೋಲೀಸ ಪಾರ್ಟಿ ಬರತಿತ್ತ ನಮ್ಮ ತಿಗಡೊಳ್ಳಿಗಿ ||

ಚಿತ್ತಗೊಟ್ಟ ಕೇಳಿರಿನ್ನು ಸುತ್ತ ನಾಡಾನ ಜನಾ
ಸತ್ತಾರ ಬಲುಮಂದಿ ಗುಂಡಿಗಿ
ತುತ್ತ ಆಗಿ ಹೋದ್ರ ಫೌಜುದಾರನ ಪಿಸ್ತೂಲಿಗಿ
ಬೈಲಹೊಂಗಲದಲ್ಲಿ ಹಾರಿತ್ರೆಪ್ಪಾ ಮದ್ದಿನ ಹೊಗಿ ॥
ಜಯಭೇರಿ ನುಡಸುತ ಝೇಂಡಾ ಏರಸಾಕ ಹ್ವಾದ್ರ
ಜಡಾ ಬಂತ ದಡ್ಡಗೇಡಿ ಫೌಜದಾರಿಗಿ
ಗುಂಡ ಹೊಡದ ಬಿಟ್ಟ ಆಗ ಏಳ ಮಂದೀಗಿ ॥

ಸತ್ತಾವರ ಮನ್ಯಾನ ಮಂದಿ ದಿಕ್ಕ ತಪ್ಪಿ ಕುಂತಾರ
ದುಕ್ಕಾ ಮಾಡತಿದ್ರ ಒಳ್ಳೆ ಮರಮರಗಿ
ದುಕ್ಕ ತಡಿವಲ್ತ ಬರತಿತ್ತ ಹೆಚ್ಚಾಗಿ
ಅಳುತ ಕುಂತಾರ ಕಣ್ಣೀರ ಚೆಲ್ಲಿ ಧರಣೀಗಿ ॥
ಬೆಳಗಾಂವಿಗೆ ತಾರ ಹೋತ ತಡಾ ಇಲ್ಲದ ಪಾರ್ಟಿಬಂತ
ಬಂದೋ ಬಸ್ತಿ ಇಟ್ಟಾರಾಗ ಕಚೇರಿಗಿ
ಇಲ್ಲಿ ವಲ್ಲೇನಂದ ವರ್ಗ ಆತ ಫೌಜುದಾರಿಗಿ ॥

ಸೈಲ ಬಿಡಲಿಲ್ಲ ಜನಾ ಲೈನಹಾದಿ ಪೂಲ ಮತ್ತ
ತಾರ ಕಂಬ ಹೋದುವರಿ ಹಾಳಾಗಿ
ಭಯಾ ಬರಲಿಲ್ಲ ಆವಾಗ ಯಾರ್‍ಯಾರಿಗಿ
ಟೋಳಿ ಟೋಳಿ ಆಗಿ ತಿರಗತಿದ್ರ ಹಳ್ಳಿ ಹಳ್ಳಿಗಿ ॥
ಇಳೆಯೊಳು ವಂದಃ ಸವನ ಕಾಳಗವಿತ ಚಳವಳಿ
ಗೋಳ ಬಂತ ಬಿಳಿಮೋತಿ ಪಿರಂಗೇರಿಗಿ
ಕಂಬಾ ಕಾಯಲಿಕ್ಕ ಕಾವಲಾ ಇಟ್ರೆ ಲೈನ ಹಾದಿಗಿ ॥

**ಒಂದನೇ ಚಾಲ**

ದಪ್ತರ ಗಂಟ ಏನ ಉಳಿಲಿಲ್ಲ ಸುಟ್ಟಹೋದು ಎಲ್ಲಾ
ಸಣ್ಣದೊಡ್ಡ ಪುಸ್ತಕ ಕಾಗದಾ
ಕುಲಕರ್ಣಿ ಕೊಡತಿದ್ರಪ್ಪಾ ತಗದಾ ॥
ವಾಲಿಕಾರ ಕೈಯಾನ ಹತಿಯಾರ ಬಾಳ ತಯ್ಯಾರ
ಇದ್ದುವ ಒಂದೊಂದಾ
ತಂದ ಕೊಡತಿದ್ರ ತಾಂವಾಗಿ ಬಂದಾ ॥

**ಎರಡನೇ ಚಾಲ**

ರಾಯಫಲ್ಲ ಇದ್ದವು ಪೊಲೀಸರ ಕೈಯಾಗ
ಖಾರಾ ಒಗದ್ದಾರಿ ಅವರ ಕಣ್ಣಾಗ ॥

ರಾಯಘಲ್ಲ ಕಸಗೊಂಡ ಓಡ್ಯಾರ ಸಿಗದಂಗ
ಹಿಂಗ ನಡದಿತ್ತ ಸುತ್ತವರದ ನಾಡಾಗ ||

**||ಏರ||**

ಹಿಂದುಸ್ತಾನದ ಮಂದಿ ಕೂಡಿ ಹಿಂದ ಮುಂದ ನೋಡಲಿಲ್ಲ
ದಿಂಗ ಹಚ್ಚಿಬಿಟ್ಟಿದಾರ ಇಂಗ್ಲೀಷರಿಗಿ
ಏನ ಬಂದೀತಂತಾರ ಅವರು ಕಾಲ ಒದಗಿ
ಅಳತಿ ಹಾಕತಾರ ಹರಿವಲ್ತ ಆಗ ಅವರಿಗಿ ||
ಮೀರಿದ ಚಳವಳಿಯಾಗಿ ಸೂರಿ ಆತ್ರಿ ನಾಡಮ್ಯಾಗ
ಕುತ್ತ ಬಂದ ಕವದೀತ ಬ್ರಿಟಿಷರಿಗಿ
ಪೋಲೀಸ ಪಾರ್ಟಿ ಬರತಿತ್ತ ನಮ್ಮ ತಿಗಡೊಳ್ಳಿಗಿ |||೧||

ಏಳೆಂಟ ಊರಮಂದಿ ಕೂಡಿ ಟೋಳಿ ಆಗಿ ನಡದಾರ
ರೇಲ ಹಳಿ ತಾರ ಕಂಬ ಕೀಳೋದಕ
ಸ್ಟೇಶನ್ ತಿಜೋರಿ ಟೆಲಿಫೋನ ಒಡಿಯುದಕ
ಹಿಂಗ ಮಸಲತ್ತ ಮಾಡಿ ಹೊಂಟ್ರ ಮಲ್ಲಾಡಕ ||
ಸಣ್ಣದೊಡ್ಡ ಮಂದಿ ಕೂಡಿ ಗುಡ್ಡಾಹಿಡದ ನಡದಾರ
ತಾವರಗಟ್ಟಿ ನಾಗರಗಾಳಿ ಆಳ್ನಾವರಕ
ಎಲ್ಲಾ ಧ್ವಂಸ ಮಾಡಿ ಬಂದಾರ ಆ ಕ್ಷಣಕ ||

ಸರಕಾರಿ ಸಾಲಿ ಬಿಡಲಿಲ್ಲ ಹಾಜರಿ ಬುಕ್ಕ ಖುರ್ಚಿಮೇಜ
ಎಣ್ಣಿಗೊಜ್ಜಿ ಸುಟ್ಟಾರ ಅದಕ್ಕಿಲ್ಲ ಲೆಕ್ಕ
ಸಿಂದಿ ಸೆರೇದಂಗಡಿ ಸೇರಿವ್ಯಾಗಿ ಬಿದ್ದು ನೆಲಕ
ಇನ್ನೂ ಏನೇನ ಮಾಡೂಣಂತ ಹಾಕತಾರ ಲೆಕ್ಕ ||
ಟಪಾಲ ಮೋಟೋರ ಎಲ್ಲಾ ಲೂಟಿ ಮಾಡಿ ಕಳಿಸಿದಾರ
ಬರೇ ಗಾಡಿ ಹೋತ ಪೋಸ್ಟ್ ಆಫೀಸಕ
ಚಾವಡಿ ಬಂಗಲೆಗಳು ಸುಟ್ಟ ಬಿದ್ದುವ ನೆಲಕ ||

ತೂಕಾ ತಗದ ನಡದಾರ ತೋಲಿಗಿ ಇರಸಾಲ ಬಡಿಯೂದಕ್ಕ
ಪೋಲೀಸ ಪಾರ್ಟಿ ಇತ್ತ ಬಂದೂಬಸ್ತಿ ಮಾಡೂದಕ
ಸೋಗ ಹಾಕಿ ಹೋಗಿ ಕುಂತ್ರ ಪಾಳೆ ಕೊಡೇದಕ
ಪಾರಾ ಮಾಡಾವನ್ನ ಹಿಡದಾರ ರಿಕ್ಕ ಮುಕ್ಕ ||
ಬಂದ ಹೊಕ್ಕೀತ ಮಂದಿ ಹಿಂದ ಮುಂದ ನೋಡಲಿಲ್ಲ
ಬಂದೂಕ ಬಾನೆಟ್ ತಗೊಂಡ್ರ ತಮ್ಮ ತಾಬಾಕ
ಗುಡಗ ಹೊಡಿತಿತ್ತು ಗುಂಡಿನ ಮಳಿ ಇಲ್ಲ ಲೆಕ್ಕ ||

ಗಾಬರಿಯಾಗಿ ಹವಾಲದಾರಿ ಗಂಟ್ಲಾಬಿಡರಿ ಅಂತಾನ
ಕೋಟ ಪಾಟ್ಲೋಣ ಕಳದ ಕೊಟ್ರ ಒಂದ ಹೊಡತಕ್ಕ
ಪೋಲೀಸರು ಓಡಿಹೋಗಿ ಕುಂತಾರ ಚಾದಂಗಡಿ ಹೊಕ್ಕ
ಗದ್ಲಾ ನೋಡಿ ಬರಲಿಲ್ಲ ಅವರು ಎದ್ದುಮುಂದಕ ॥

ಕಾಡತೋಸ ಕಾಗದ ಪತ್ರ ರೂಪಾಯಿ ರೊಕ್ಕ ಲೂಟಿ ಮಾಡಿ
ತಡವಿಲ್ಲದೆ ಹೊಳ್ಳಿ ಬಂದ್ರ ತಟ ಹಳ್ಳಕ್ಕ
ರೂಪಾಯಿ ತಂದಿದ್ರ ನಾಲ್ಕುನೂರಾ ಐವತ್ತನಾಲ್ಕ ॥

ಸುತ್ತಹಳ್ಳಿ ಕುಲಕರ್ಣೇರು ಸಾಕಷ್ಟು ರೂಪಾಯಿ
ಗಪ್ಪ ಮಾಡಿ ಇಟ್ಟಕೊಂಡ್ರ ತಮ್ಮ ತಾಬಾಕ
ಕಾಗದ ಪತ್ರ ಉಳಿಯಲಿಲ್ಲ ಲೆಕ್ಕಾ ತೋರಿಸೋದಕ
ಬಂದ ಮಂದಿ ಬಡದ ಓದರಂತ ಮಾಡತಾರ ದುಕ್ಕ ॥
ಚಳವಳಿ ಮಂದಿಮ್ಯಾಗ ಚಾಡಾ ಹೇಳಿ ಉಳಕೊಂಡಾರ
ಮಿಲ್ಟ್ರಿಗಾಡಿ ಬಂದ್ವು, ಇರಸಾಲ ಒಯ್ಯಾಕ
ಹೊಳ್ಳಿ ಹೋಗಿದಾವ ಹಣಾ ಅಲ್ಲಿ ಇಲ್ಲದಕ್ಕ ॥

**ಒಂದನೇ ಚಾಲ**

ಗಂದಿಗವಾಡದಲ್ಲಿ ಮಾತಾಡತಾರ ಕುಂತ ಮಾಡ್ಯಾರ ಮಸಲತ್ತ
ಹೊಂಟ ಹೋದ್ರ ಆಗಿ ತಯ್ಯಾರಾ
ಮೂರು ಸಂಜಿಕ ಮುಟ್ಯಾರ ಅಳ್ನಾವರಾ ॥

ಬ್ಯಾಂಕಿನಲ್ಲಿ ಇರುವಂತಾ ರೊಕ್ಕ ಮುರಿದಾರ ಸಂದಕ
ನಾಲ್ವತ್ತ ಸಾವಿರಾ
ತಗೊಂಡಾರ ಮಾಡಿ ಅವಸರಾ ॥

**ಎರಡನೇ ಚಾಲ**

ಹೊಳ್ಳಿ ಹೋದಾರ ಬೈಲಹೊಂಗಲಕ
ದೊಡ್ಡ ಬ್ಯಾಂಕ ಒಡಿಬೇಕಂತ ಲೆಕ್ಕ ॥

ತಿಜೂರಿ ಕೈ ಸಿಗಲಿಲ್ಲ ವ್ಯಾಳ್ಯೇಕ
ಬಾಳ ಗೋರ ಬಿಟ್ಟಾರ ಬೆಳತನಕ ॥

ಹಣಾ ಸಿಗಲಿಲ್ಲ ಅವರಿಗೆ ಹೊಡಿಯೋದಕ
ಗಡಬಡದಿಂದ ಬಂದಾರ ಹಿಂದಕ ॥

ತಿಗಡೊಳ್ಳಿ ಸೊಸೈಟಿ ಲೂಟಿ ಆದ ಸುದ್ದಿ ಕೇಳಿ
ಡಿಎಸ್‌ಪಿ ಫೌಜುದಾರ ಹೊಂಟ್ರ ತಪಾಸಿಗಿ
ಮೋಟೋರ ಬಿಟ್ಟಿದ್ರ ಬಸರಕೊಡದ ಅಗಸಿಗಿ
ಅದನ್ನ ಹೇಳ ಬೇಕಂದ್ರ ಬರತೈತಿ ನಗಿ ॥

ಮೀರಿದ ಚಳವಳಿಯಾಗಿ ಸೂರಿ ಆತ್ರಿ ನಾಡಮ್ಯಾಗ
ಹತ್ತಿ ಬಂದ ಕವದೀತ ಬ್ರಿಟಿಷರಿಗೆ
ಪೋಲೀಸ ಪಾರ್ಟಿ ಬರತಿತ್ತ ನಮ್ಮ ತಿಗಡೊಳ್ಳಿಗಿ॥೧॥

ಲೈನ ಇಲ್ಲ ತಿಗಡೊಳ್ಳಿಗಿ ಕಾಲಹಾದಿ ಹಿಡದ ಬಂದ್ರ
ಗೌಡ್ರ ಮುನಿಯಲ್ಲಿ ಇಳಕೊಂಡ್ರ ಎಲ್ಲಾ ಜನರಾ
ಫೌಜದಾರಾ ರೊಚ್ಚಿಗೆದ್ದ ಬೈಯತಿದ್ದ ಇಲ್ಲದರಕಾರಾ
ಊಟಕ್ಕ ಕೇಳತಿದ್ದ ಬೆಣ್ಣಿ ಹಾಲ ಮಸರಾ ॥
ಗೊತ್ತ ಇಲ್ಲ ಇವರಿಗೆ ಬತ್ತದ ವಣ ಹುಲ್ಲ ಒಟ್ಟಿ
ವತ್ತರದಿಂದ ಸುಟ್ಟ ಬಿಟ್ರ ಮೋಟೋರಾ
ನೋಡಿ ದಿಕ್ಕೆಟ್ಟ ಓಡಿಹ್ವಾದ ಡ್ರಾಯವರಾ ॥

ಊಟಕ್ಕ ಕುಂತಿತ್ತ ಪೋಲೀಸ ಮಂದಿ ಬಂತ ಮೋಟೋರ ಸುಟ್ಟಸುದ್ದಿ
ಅಗದಿ ಅಳಾಪಮಾಡಿ ಹೇಳತಾನ ಡ್ರಾಯವರಾ
ತಾನಃ ತಿವಕೊಂಡಿದ್ದ ಹಾಯತಿತ್ತ ನೆತ್ತರಾ
ಎದ್ದಿ ಎದಿ ಎದಿ ಗುದ್ದಿಕೊಂಡು ಡಿಎಸ್ಪಿಯವರಾ ॥
ಊಟಾ ಮಾಡೊ ಮುಸರಿ ಕೈ ಪಾಟ್ಲೋಣಕ ತಿಕ್ಕಿಕೊಂತ
ದಿಕ್ಕೆಟ್ಟ ಓಡತಾರ ಇಲ್ಲ ಖಬರಾ
ಹ್ಯಾಟ ಬಿಟ್ಟಹ್ವಾದ್ರ ಅವಸರಾ ॥

ಒತ್ತರಲೆ ಓಡುವಾಗ ತತ್ರ್ಯಾಡಿ ಬೀಳತಿದ್ದ ಸಾಬ
ಫಾಯರ್ ಫಾಯರ್ ಅಂತಾನ ಅಂಜಿ ಆಗಿ ನೀರಾ
ಅರ್ಧಾ ತಾಸಿನೊಳಗ ಬಸರಕೊಡ ಮುಟ್ಟಿದರಾ
ಹೋಗೋದರೊಳಗ ಉಳಿದಿದ್ದಿಲ್ಲ ಮೋಟೋರಾ ॥
ಇದರಿಗೆ ಸಿಕ್ಕವರನ್ನ ಬಲ್ಲಂಗ ಬಡಿತಿದ್ದರ
ಹೆದರಿ ಓಡ್ಯಾರ ಎಷ್ಟೋ ಜನರಾ ॥

ಬೆಳಗಾಂವಿ ಕಲೆಕ್ಟರನ ಮುಂದ ನಿಂತ ಅತ್ತತ್ತ ಹೇಳತಾನ
ದೇಗಾಂವಿ ತಿಗಡೊಳ್ಳಿಯವರು ಸುಟ್ರು ನನ್ನ ಮೋಟೋರಾ
ಅವರಿಗೆ ಮದತ್ತ ಮಾಡಿದಾರ ಬಸರಕೊಡದವರಾ
ಈಗ ಬೇಡೋದಕ್ಕ ಬಂದಿದೇನ ಹೆಚ್ಚಿನ ಅಧಿಕಾರಾ ॥
ಮೂರೂ ಊರಿಗೆ ಕೂಡಿ ಮೂರ ತಾಸ ಮುದ್ದತ ಕೊಡ್ರಿ

ಗನ್ನ ಮಶಿನ್ ಹಚ್ಚಿ ಮಾಡತೇನ ಸಂಹಾರಾ
ಕೊಟ್ಟ ನೋಡ್ರಿ ಅಧಿಕಾರ ಬಂದ ಜರಾ ॥

**ಒಂದನೇ ಚಾಲ**

ಇಬ್ರೂ ಕೂಡಿ ಹ್ವಾದ್ರ ಮುಂಬೈಕ ಗೌರ್‍ನರನ ಹಂತೇಕ
ನಾವು ಮಾಡಬೇಕ ಇನ್ನೇನಾ
ಹೆಚ್ಚಾಗೇತ್ರಿ ಚಳವಳಿ ಒಂದ ಸವನಾ ॥

ಗೌರ್‍ನರ ಹೇಳ್ಯಾನ ತತ್ಕಾಲಕ ಇಸಕೊಳ್ರಿ ಅವರ ಬಂದೂಕ
ಹಿಂಸಾ ಮಾಡಬ್ಯಾಡ್ರಿ ಯಾರನ್ನಾ
ಹಿಡದ ಜೇಲಿಗ್ಹಾಕರಿ ಎಲ್ಲರನಾ ॥

**ಎರಡನೇ ಚಾಲ**

ಕಲಮ ಜಾರಿ ಆತ್ರಿ ನೂರಾ ನಾಲ್ವತ್ನಾಲ್ಕ
ಸಂಶೆ ಬಂದ್ರ ಅಡ್ಡಿಯಿಲ್ಲ ಹಿಡಿಯುದಕ ॥

**॥ಏರ॥**

ಅಧಿಕಾರ ಸಿಕ್ಕಿತಂತ ಅಡಬಡಿಸಿ ಮುಂಬಯಿಂದ
ಗಡಬಡಿಸಿ ಹೊಳ್ಳಿ ಬಂದ್ರ ಬೆಳಗಾಂವಿಗಿ
ಅಲ್ಲೆ ಕರಿಸಿಕೊಂಡ ಹೇಳತಾರ ಫೌಜುದಾರಗಿ
ಇನ್ನ ಅಂಜೋದೇನ ಗರ್ಜ ಇಲ್ಲ ಯಾರ‍್ಯಾರಿಗಿ ॥
ಮೀರಿದ ಚಳುವಳಿಯಾಗಿ ಸೂರಿ ಆತ್ರಿ ನಾಡಮ್ಯಾಗ
ಕುತ್ತ  ಬಂದ ಕವದೀತ ಬ್ರಿಟಿಷರಿಗಿ
ಪೋಲೀಸ ಪಾರ್ಟಿ ಬರತಿತ್ತ ನಮ್ಮ ತಿಗಡೊಳ್ಳಿಗಿ॥೩॥

ಏಳ ತಿಂಗಳ ಒಂದು ಸವನ ಕಾಳಗವಿತ ಚಳವಳಿ
ಬಾಳ ಜೋರಿನಿದ ಆಗಿತ್ತರಿ ಪ್ರಬಲ್ಲಾ
ಎಷ್ಟೋ ಪೋಲೀಸರು ಆಗಿ ಹೋದ್ರ ಬುಡಮೇಲಾ
ರಾಯಫಲ್ ಹೊತಗೊಂಡ ತಿರಗತಿದ್ರ ರಾತ್ರಿ ಹಗಲಾ ॥
ತುರತಕ್ಕ ಅವರಿಗಿ ಯಾರ‍್ಯಾರು ಸಿಗಲಿಲ್ಲ
ಜನರನ್ನ ಬಡಿತಿದ್ರ ಕೇಳವರು ಯಾರಿಲ್ಲಾ
ಅದಕ ಅಳತಿಲ್ಲಾ ॥

ದಡ್ಡಗೇಡಿ ಪೋಲೀಸರು ಮಡ್ಡಿಮಾಳಾ ಮೊದಲಮಾಡಿ
ದಡದಡ ತಿರಗತಾವ ಖಬರಿಲ್ಲಾ
ಗಿಡದ ಬಡ್ಡಿಮರಿಗಿ ನಿಂತ ನೋಡತಿದ್ವಿ ಇದನ್ನೆಲ್ಲಾ
ಪಾರ್ಟಿಮಂದಿ ಬಿದರ ಬೆಟ್ಟಾ ಬಿಡಲಿಲ್ಲಾ ||
ಹೊಟ್ಟಿಕಿಚ್ಚಿನಿಂದ ಹುಡಕತಾವ ಹಾಂತವರದ
ಯಾರ್‍ಯಾರು ಅವರಿಗೆ ಸಿಗಲಿಲ್ಲಾ
ಹಸದ ಹಲ್ಲ ಕಿಸದ ನಿಂತಾವ ಕೂಳಿಲ್ಲಾ ||

ಊರಕೇರಿಗೆ ಹೋದವರನ್ನ ದಾರಿಯೊಳಗ ಹಿಡಿತಂದ
ಸಂಶೆ ಬಂದ ಬಡಿತಾರ ಅನುಮಾನ ಇಲ್ಲಾ
ದಾರಿ ನೋಡತಿದ್ರ ಮುನಿಯಾಗ ಇನ್ನೂ ಬರಲಿಲ್ಲಾ
ಅವರನ್ನ ಹಿಡದಿರಬಹುದು ಅಂತಿದ್ರ ಜನರೆಲ್ಲಾ ||
ಬಂದ ಬಂದ ಮಿಲ್ಟ್ರಿಮಂದಿ ಹಿಂದಮುಂದ ನೋಡಾಕಿಲ್ಲ
ಕಂಡಾವರನ್ನ ಬಡಿತಿದ್ರ ಕುಂಡಿಮ್ಯಾಲಾ
ಹೊಡತಕ್ಕ ಮೈಯ್ಯಾಗೇನು ಕಸರ ಉಳಿಲಿಲ್ಲಾ ||

ಬಂದೂಕಿನ ಸಲುವಾಗಿ ಸಂದಿಗೊಂದಿ ಉಳೀಲಿಲ್ಲ
ಗ್ವಾಡಿ ಹೆಂಡಿ ಕಿತ್ತ ಹುಡಕತಾರ ಮನಿಯೆಲ್ಲಾ
ನೀರಿನ ಹಂಡೆಗಳ ಉಳಿಸಿದಾರ ಕೊಡ ಮೊದಲಾ
ಬತ್ತದ ಕಣಜಾ ಕಿತ್ತ ಮಾಡಿದಾರ ಬುಡಮೇಲಾ ||
ಸರಕ ಗಳಿಗಿ ಹಳಿ ಹರವಿ ಅರವಿ ಅಂಚಡಿ ಹರಿವ್ಯಾಡತಾತ
ಕಾಡತೂಸ ಅದಾವಂತ ಅಡಕಲಗಡಿಗಿ ಉಳಿಲಿಲ್ಲ
ಆಗ ಮುಂದ ನಿಂದ್ರೊ ಧೈರ್ಯ ಯಾರಿಗಿದ್ದಿಲ್ಲಾ ||

**ಒಂದನೇ ಚಾಲ**

ದುರಿಗಿ ಬ್ಯಾನಿ ಬಂದ ಹೊಕ್ಕಂಗ ಎಲ್ಲಾ ಊರೊಳಗೆ
ಬಂದ ಮಾಡತಿದ್ರೋ ಧುಮಸೇನಾ
ಖಬರ ಹಾರಿ ಓಡ್ಯಾಡತಿದ್ರ ಜನಾ ||

ಎಲ್ಲಾ ಮಂದಿಗೆ ಹೊಕ್ಕಿತರಿ ತಗಿಬಗಿ ಬಂದಿತರಿ ಬಿಗಿ
ಸಿಗವಲ್ತ ಪರಾರಿಯ ಜನಾ
ತಗೊಂಡ ಹ್ವಾದ್ರ ಅಣ್ಣತಮ್ಮರನಾ ||

**ಎರಡನೇ ಚಾಲ**

ತಿರಗತಾವ ಸುತ್ತೊರದ ಆಗಿ ಗೋಳಾ
ನಮ್ಮನ್ನ ಹುಡಿಕಿ ಸತ್ತಾವ ಪೋಲೀಸಗೋಳಾ ॥
ಹಳ್ಳಿ ಒಳಗಿನ ಸಾವಕಾರ ಶೆಟ್ಟಿಗಳಾ
ಅಂಜಿಬಿಟ್ಟಾರ ತಮ್ಮ ಮನಿಗಳಾ ॥

**॥ಏರ॥**

ಪಿರಂಗೇರ ಬೆನ್ನಹತ್ತಿ ಪಿತೂರಿ ಮಾಡೋಮಂದಿ
ಹಾಂತವರದ ತಿರಗತಿದ್ರ ಹಳ್ಳಿಹಳ್ಳಿಗಿ ।
ಒಬ್ಬ ಸಿಐಡಿ ಬಂದ ಸಿಕ್ಕಿದ್ದ ತಿಗಡೊಳ್ಳಿಗಿ
ಅವನ ಪಾಡಾಗಿ ಜಡದ ಕಳಿವ್ಯಾರ ತಿರುಗಿ ॥

ಮೀರಿದ ಚಳವಳಿಯಾಗಿ ಸೂರಿ ಆತ್ರಿ ನಾಡಮ್ಯಾಗ
ಕುತ್ತ ಬಂದ ಕವದೀತ ಬ್ರಿಟಿಷರಿಗಿ
ಪೋಲೀಸ ಪಾರ್ಟಿ ಬರತಿತ್ತ ನಮ್ಮ ತಿಗಡೊಳ್ಳಿಗಿ ॥
ದಿಕ್ಕತಪ್ಪಿ ಮಿಲ್ಟ್ರಿಮಂದಿ ಲೆಕ್ಕತಪ್ಪಿ ತಿರಗತಾರ
ತಿಂದೇವಂತಾವ ಕೂಳ ಇಲ್ಲ ಹೊಟ್ಟೆಗಿ
ಮಜ್ಜಿಗಿ ಆಗೇತಂತ ನಿಂತಗೊಂಡ ಕಾಲ್ಪೋಗಿ ॥
ಪರಾರಿ ಇದ್ದ ಮಂದಿ ಪತ್ತೆ ಹತ್ತಲಿಲ್ಲ
ಅವರ ಸಂಬಂಧಿಕರ್ನ ಹಾಕ್ಯಾರ ಜೇಲಿಗಿ
ಭಯಾ ಬಂತಾಗ ಎಲ್ಲರಿಗಿ ॥

ಬಿಕ್ಕಟ್ಟ ಬಂತ ಎಲ್ಲಾರಿಗಿ ಪುಕ್ಕಟ್ಟ ನಮ್ಮ ಮಂದಿ ಓದ್ರ
ಹಾಜರಾಗಿ ಬಿಡಸೋಣಂದ್ರ ತಾವಾಗಿ
ಹೊಂಟಹೋಗಿ ಭೆಟ್ಟಿ ಆದ್ರ ಫೌಜದಾರಿಗಿ
ಎಷ್ಟೋಮಂದಿನ ಹಿಡದಿದ್ದರ ಅಷ್ಟೊತ್ತಿಗಿ ॥
ಬಡದು ಹೊಡದು ಮಾಡಬ್ಯಾಡ್ರಿ ಖರೆ ಖರೆ ಹೇಳತೇವ
ಮಾಡಿದಂತಾ ಗುನ್ನಾ ಎಲ್ಲಾ ಇಲ್ಲಿವರಿಗಿ
ಹಿಂಗ ಆದೀತಂದ ತಿಳಿಲಿಲ್ಲ ಮೊದಲೀಗಿ ॥

ಹಿಂದ ಓದ ಬಂದೂಕ ತಂದ ಕೊಡತೇವಂತ
ಒಂದೂ ಬಿಡದ ಓದಕೊಟ್ರ ತಾವಾಗಿ
ಮುಂದ ಖಟ್ಲೆಹಾಕಿ ಕಳಿವಿದಾರ ಜೋರಿಗಿ
ಹಿಂಗ ನಡದಿತ್ತ ನಾಡತುಂಬ ಸುತ್ತೊರಗಿ ॥
ಜೇಲಿನೊಳಗ ಕಾಲಿ ಇಟ್ಟ ಊಟಾ ಹಾಕತಿದ್ರ ನಮಗ
ಗೋದಿ ರೊಟ್ಟಿ ಬೆಲ್ಲಾ ಐತಾರ ಸಂಜಿಗಿ
ಉಲ್ಲನ ಕಂಬಳಿ ಕೊಡತಿದ್ರ ಮಲಗೊ ಸಲುವಾಗಿ ॥

ಹೆಡ್ ಕ್ವಾರ್ಟರ್ ಹಿಂಡಲಗಿ ಜೇಲ ಕಿಲ್ಲಾದೊಳಗ ಕಾಲಿ ಇಲ್ಲ
ಪಾರ್ಟಿ ಕಳವಿಕೊಟ್ರ ಎರೋಡಾ ಇಸಾಪುರ ಜೇಲಿಗಿ
ನಾಶಿಕ ಕಾರವಾರ ರತ್ನಾಗಿರಿಗಿ
ಅಲ್ಲಿ ಮಂದಿ ತರತಿದ್ರ ಇಲ್ಲಿಗಿ ||

ಕಟಪಟಿ ಮಾಡಿ ಕೋರ್ಟಿನೊಳಗೆ ಖಟ್ಲೆ ನಡೆಸಿದಾರ
ಜಡಜಿ ಸಾಹೇಬರ ಎದುರಿಗಿ
ನಿರ್ದೋಷಿ ಆದ್ರೂ ಡೆಟಿನ್ಯೂ ಆತ ಎಲ್ಲಾರಿಗಿ ||

**ಒಂದನೇ ಚಾಲ**

ಮುಂಜಾನೆ ಗಂಜಿಕೊಡತಿದ್ರ ಏಳು ಘಂಟೇಕ
ಬ್ಯಾಳಿರೊಟ್ಟಿ ಊಟ ಮಧ್ಯಾಹ್ನಕ
ಕೊರತಿಲ್ಲ ಯಾವುದಕ ||
ಚಹಾ ಪುಡಿ ಸಕ್ಕರಿ ಹಾಲ ಭೈಮಂಗ ಬೆಲ್ಲ
ಎರಡೂ ವೆಳ್ಳೇಕ
ಬಾಜಿ ರೊಟ್ಟಿ ಬ್ಯಾರೆ ಸಂಜೀಕ ||

**ಎರಡನೇ ಚಾಲ**

ಔಷಧ ಕೊಡತಿದ್ರ ಇದ್ದಲ್ಲಿಗೆ ತಂದಾ
ಸೋಡಾ ಸಾಬೂನ ಒಮ್ಮೆ ಎಂಟಿ ದಿನದ್ದಾ ||

ಪತ್ರಾ ಬರಿಲಿಕ್ಕಿ ಕಾರ್ಡ ವಾರಕ್ಕೊಂದಾ
ಹಿಂದಿ ಕಲತೇವ ನಾವು ಅಂದಾ ||

**||ಏರ||**

ಸದ್ದೆ ಆದದ್ದನ್ನ ತಿದ್ದಿತಿದ್ದಿ ತಿಳದಷ್ಟ ಹೇಳತೇನ
ತಿಗಡೊಳ್ಳಿ ಬಲಭೀಮನ ಚರಣಕ್ಕೆರಗಿ
ನಾಲ್ವತ್ತ ನಾಲ್ಕರೊಳಗ ಬಿಡಗಡಿ ಆತ ಎಲ್ಲಾರಿಗಿ
ಪದಾ ಮಾಡಿದಾನ ಮರಿಕಲ್ಲ ಹೊಸದಾಗಿ ||

ಮೀರಿದ ಚಳವಳಿಯಾಗಿ ಸೂರಿ ಆತ್ರಿ ನಾಡಮ್ಯಾಗ
ಕುತ್ತ ಬಂದ ಕವದೀತ ಬ್ರಿಟಿಷರಿಗಿ
ಪೋಲೀಸ ಪಾರ್ಟಿ ಬರತಿತ್ತ ನಮ್ಮ ತಿಗಡೊಳ್ಳಿಗಿ ||

***ಕವಿ :*** ಮರಿಕಲ್ಲಕವಿ

***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೨೭. ನಲವತ್ತೆರಡರ ಕ್ರಾಂತಿ

೧

ನಾಲ್ವತ್ತೆರಡನೇ ಇಸ್ವಿ ಕಾಲ ವದಗಿ ಬಂತ।
ಪೋಲೀಸರಿಗೆ ಗೊತ್ತು । ತು । ತು ।
ಮೇಲಾಧಿಕಾರಿ ಆಜ್ಞೆ ಪಾಲಿಸಲಿಕ್ಕೆ ಹೋಗಿ ।
ಮಾಲಿ ಕೊರಳಿಗೆ ಬಿತ್ತು । ತು । ತು ॥

೨

ಸಿಪಾಯಿಗಳು ಎಲ್ಲಾ ಝಪಾಟಿಗೆ ಸಿಕ್ಕ ।
ಉಪಾಯವಿಲ್ಲದಾಯ್ತು । ತು । ತು ।
ಅಪಾಯ ಮಾಡಾಕ ಬಂದ ರಾಯಫಲ ಕೊಟ್ಟ ।
ಜಪಾ ಮಾಡುದಾಯ್ತು । ತು । ತು ॥

೩

ಕಾನಸ್ಟೇಬಲರು ಬ್ಯಾನಿಟ್ಟು ಕೊಟ್ಟ ।
ಗೋಣ ಹಾಕುದಾಯ್ತು । ತು । ತು ।
ಖೊಟ್ಟಿ ಫೌಜದಾರ ಕೊಟ್ಟ ಪಿಸ್ತೂಲ ।
ಸಿಟ್ಟ ಇಳದ ಹೋಯ್ತು । ತು । ತು ॥

೪

ಧಿಟ್ಟ ಹವಾಲದಾರ ಬೂಟ ಪಾಟ್ಲೋನ ।
ಕೋಟ ಕಳದ ನಿಂತು । ತು । ತು ।
ಪೋಷ್ಟ ಆಫೀಸರ ರನ್ನರ ಮಾಸ್ತರದು ।
ಆದೀತ ಏಪರೀತು । ತು । ತು ॥

೫

ಸ್ವರಾಜ್ಯ ಸಲುವಾಗಿ ಅರಾಜಕತಿಯಾಗಿ ।
ಗೌರ್ಮೆಂಟ ಅಂಜೀತು । ತು । ತು ॥
ಬರಾಬರೀ ಸಖ ಹುಲಕುಂದ ಭೀಮಾ ।
ಪೂರಾ ಹೇಳಿದ ಮಾತು । ತು ॥

***ಕವಿ :*** ಹುಲಕುಂದ ಭೀಮಕವಿ

***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೨೮. ಕ್ರಾಂತಿಯ ದಬ್ಬಾಳಿಕೆ

೧

ಜನತೆಯ ಮನಸಿನ ಅನುಮತಿ ಇಲ್ಲದೆ ।
ರಾಜ್ಯವಾಳುವ ಹುಚ್ಚು । ಚು । ಚು ॥
ಏನ ಆದರೇನ ನಾನೇ ಅನ್ನುವ ।
ಮಾನಗೇಡಿಗಳ್ಹೆಚ್ಚು । ಚು । ಚು ॥

೨
ದಡಪ ಶಾಹಿಯಿಂದ ನಡಿಸುವ ಅಧಿಕಾರ
ಗಿಡಕ ಬೀಳುವ ಕಚ್ಚು । ಚು । ಚು ॥
ಒಡಲ ತಾಪದ ಕೊಡಲಿಯ ಹೊಡತಕ ।
ಸಿಡದ ನುಚ್ಚ ನುಚ್ಚು । ಚು । ಚು ॥

೩
ಆಧುನಿಕ ಜಗತ್ತು ಬದಲು ಆಗುವಾಗ ।
ಸ್ವಾರ್ಥಿಗಳಿಗೆ ಪೇಚು । ಚು । ಚು ।
ಹೃದಯ ಕ್ರೋಧದ ಕ್ಷುದೆಯು ಉದಯವಾಗಿ ।
ಉದರದೊಳಗೆ ಕಿಚ್ಚು । ಚ । ಚು ॥

೪
ಇನ್ನು ಮೇಲೆ ಜನಾ ಸುಣ್ಣಾ ಹಿರಿಯಲಿಕ್ಕೆ ।
ಹಾಕ್ಯಾರ ಒಳಸಂಚು । ಚು । ಚು ।
ಬಲ್ಲಿದ ಹುಲಕಂದ ಭೀಮೇಶ ಎಲ್ಲರಿಗೆ ।
ಮೂಲಬೆಲ್ಲದಚ್ಚು । ಚು । ಚು ॥

***ಕವಿ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೧೯. ಭಾರತ ಸ್ವಾತಂತ್ರ ಸಂಗ್ರಾಮ

ಗತಿಸಿ ಹೋದ ಕಾಲದ ಇತಿಹಾಸ ನೋಡಿದರ ಪ್ರತಿಯೊಬ್ಬರಿಗೆ ।
ಆಗುವದು ಮನದಟ್ಟಾ ।

ಹಿತಶತ್ರುಗಳಂತೆ ವರ್ತನ ಮಾಡಿದಲ್ಲೆ ಬ್ರಿಟಿಸರು ಹೋದ್ರು ।
ನಮ್ಮ ದೇಶ ಬಿಟ್ಟಾ॥ಪ॥

ಹದಿನೆಂಟನೂರಾ ಐವತ್ತೇಳನೆ ಇಸ್ವಿಯು ಸ್ವಾತಂತ್ರ ಹೋರಾಟ ।
ಕ್ರಾಂತಿಯ ಕಾಲಾ ॥

ಅಂದಿನಿಂದ ಇಂದಿನವರೆಗೆ ಒಂದೇ ಸವನೆ ಮುಂದೆ ಸಾಗಿದ ।
ಪ್ರಗತಿಯ ಕಾಲಾ ॥

ಒಂದ ಸಾವಿರ ಎಂಟನೂರ ಇಪ್ಪತ್ನಾಲ್ಕರಲ್ಲಿ ಚಾಲು ಆದೀತ ।
ಬಂಡಾಯದ ಕಾಲಾ ।

ನೊಂದ ಹಿಂದಿಯರೆಲ್ಲಾ ಹೊಂದಗೂಡಿಕೊಂಡ ಅಂದಾರ ।
ಪರದಾಸ್ಯವಿದು ತರವಲ್ಲಾ ॥

ಕಿತ್ತೂರ ಸಂಸ್ಥಾನದ ದತ್ತಕದ ಸಲುವಾಗಿ ಫಿರಂಗೇರು ।
ಆಗಲಿಲ್ಲ ಅನುಕೂಲಾ ।

ಪ್ರತ್ಯಕ್ಷ ಚನ್ನಮ್ಮರಾಣಿ ಹತ್ತಿ ಕುದರಿ ಕತ್ತಿ ಹಿರದ ಸಿಸ್ತ ।
ಯುದ್ಧ ಮಾಡಿ ಆದಾಳ ಪ್ರಬಲಾ ॥

**॥ಚಾಲ॥**

ಕನ್ನಡ ನಾಡಿನ ಸಂಗೊಳ್ಳಿ ರಾಯಂಣಾ ।
ಅನ್ಯಾಯ ಸರಕಾರದ್ದು ಮಾಡಿದಪಮಾನಾ ॥

ಬೀಡಿ ಸಂಪಗಾಂವಿ ಕಚೇರಿ ಸುಟ್ಟಾನಾ ।
ಕೂಡಿದ ಫಿರಂಗ್ಯಾರ ದಂಡ ಸವರ್ಯಾನಾ ॥

ಫಿತೂರಾಗಿ ನಮ್ಮೊಳಗಿನ ಜನಾ ।
ಸ್ವತ ಹಿಡದ ಕೊಟ್ರು ಶೂರನ್ನಾ ॥

ಒತ್ತರದಿಂದ ರಾಯಣ್ಣನ ಹತಮಾಡಿ ಬಿಟ್ಟರವರು
ನಂದಗಡದೂರಲ್ಲಿ ಫಾಸಿಕೊಟ್ಟಾ
ಸುರಪುರ ವೆಂಕಟಪ್ಪ ನಾಯಕನ್ನ ಪರಿಪರಿ ಕಾಡಿದರು ।
ಪರಕೀಯ ಸರಕಾರದವರು ಅಳತಿಲ್ಲದಾ ।
ಸರಳತನ ಇಲ್ಲ…. ರೊಕ್ಕಾ ಹಿರಿಯಲಿಕ್ಕೆ ತರತರದ ಕಲ್ಪನೆ । ತಗತಗದಾ ॥
ಬೇಡರೆಲ್ಲಾ ಕೂಡಿ ಮಾತಾಡಿಕೊಂಡ ದೊಡ್ಡ ದಂಡ ಮಾಡಿಕೊಂಡ ।
ಹೂಡಿದರು ಘನಯುದ್ಧಾ ।
ಗಂಡುಗಲಿ ಮುಧೋಳ ನಾಡ ಪುಂಡರು ಇಂಗ್ಲಂಡದ ದಂಡಿನ ಮೇಲೆ ।
ಗುಂಡಿನ ಮಳೆಗರೆದಾ ॥
ಸೋತನಂತರ ಬೇತಿಲಿಂದ ಮತ್ತಷ್ಟ ಸೈನ್ಯ ತರಿಸಿ ಸಿಟನ್‌ಕರ್ ।
ಅಂಬುವ ಸಾಹೇಬ ಊರ ಸುಡಸಿದಾ ।
ಹತ್ತೊಂಬತ್ತ ಮಂದಿ ಬಂಡಾಯದ ಮುಖಂಡರು ಸುಸ್ತಿ ।
ಮಾಡದೆ ಗಲ್ಲಿಗೇರಿಸಿದಾ ॥

**॥ಚಾಲ॥**

ಮುಂಡರಗಿ ಭೀಮರಾಯನ ಇದ್ದ ಬಂಟಾ ।
ಬಂಡಾಯ ಮಾಡುವಲ್ಲಿ ಅತಿ ಶ್ರೇಷ್ಠಾ ॥
ಜಹೀಗಿರದಾರರು ದೇಸಾಯರು ಸರ್ವಸಗಟಾ ।
ಸಹಾಯ ಸಹಕಾರ ಮಾಡತಿದ್ದರಂಗವಸ್ಪಷ್ಟಾ ॥
ಹಮ್ಮಿಗಿ ಕೋಟೆಯೊಳು ಮದ್ದುಂಡು ಕೂಡಿಸಿಟ್ಟಾ ।
ಸುಮ್ಮನೆ ತಿರಗತಿದ್ದ ಎಲ್ಲ ಭಯ ಬಿಟ್ಟಾ ॥

**॥ಏರು॥**

ಪತ್ತೆ ಹಚ್ಚಿ ಸರಕಾರ ಡಂಬಳದ ಪೌಜಧಾರ ಕೋಟಿ ಬಾಗಿಲಿಗೆ ।
ಮೋಹರ ಮಾಡಿಕೊಂಡ ಹೊಂಟಾ॥೧॥

ಕೀಲಿ ಮುರದ ಭೀಮರಾಯ ಶಸ್ತ್ರಾಸ್ತ್ರ ಬೇಡರಿಗೆ ಕೊಟ್ಟ ।
ಕೊಪ್ಪಳ ಕೋಟಿ ವಶಮಾಡಿಕೊಂಡಾ ।

ಅಲ್ಲಿಂದ ಹುಜೇಸ ಎಂಬುವ ಸೈನ್ಯಾಧಿಕಾರಿಯು ಬಂದ ।
ಎಲ್ಲಾ ಕಡೆಯಿಂದ ತರಿಶಾನ ದಂಡಾ ॥

ಬಹಳ ಸೈನ್ಯ ಕೂಡಿದಲ್ಲೆ ಮಹಾಯುದ್ಧವಾಗಿ ಸಹಜ ಕೋಟಿ ।
ಹೋಯ್ತು ಕಣಗಂಡಾ ।

ಬಹದ್ದೂರ ರಣಶೂರ ಭೀಮರಾಯ ಗಂಭೀರ ವೀರ ಸ್ವರ್ಗವನು ।
ಪಡಕೊಂಡಾ ॥

ನರಗುಂದ ಬಾಬಾಸಾಹೇಬ ತಮ್ಮನಾದ ರಾಮದುರ್ಗ ಧೊರಿಗೆ ।
ಬಂಡಾಯ ಮಾಡುನಂತ ಪತ್ರ ಬರದ ಗಡಾ ।

ಅರಸ ಪತ್ರ ಓದ ತೋರಿಸಿದ ಮ್ಯಾನಸನ್ ಸಾಹೇಬಗ ।
ಅಲಿಪ್ತನಾಗಿತಾ ಉಳಕೊಂಡಾ ॥

**॥ಚಾಲ॥**

ಧಾರವಾಡಕ ಮ್ಯಾನಸನ್ ಸಾಹೇಬ ಹೊರಟಾ ।
ಸುರೇಬಾನಕ ವಸ್ತಿಯ ಕೊಟ್ಟಾ ॥

ಅರಿತ ಬಾಬಾಸಾಹೇಬ ರಾತ್ರಿ ಊರಬಿಟ್ಟಾ ।
ನೂರಾರು ಜನರು ಸಂಗತೀಲೆ ಘಟ್ಟಮುಟ್ಟಾ ॥

ಸುರೇಬಾನ ಊರಿಗೆ ಬಂದ್ರ ಭರಾಟಾ ।
ಗೋರಾ ಮ್ಯಾನಸ್‌ನ್ನಂದು ಹಾರಿಶಾರ ಹೊಟ್ಟಾ ॥

**॥ಏರು॥**

ಪ್ರೇತ ಬಿಟ್ಟ ರಂಡಾ ನರಗುಂದಗಸಿಗೆ ಕಟ್ಟಿದರೆಂದು ।
ಹುಲಕುಂದ ಭೀಮೇಶ ಹೇಳಿದ ಹಸನಕಟ್ಟಾ॥೩॥

***ಕವಿ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೦. ತುರಂಗದ ವರ್ಣನೆ

ತುರಂಗದೊಳಗ ಜರಗುವ ಮರ್ಮ ಕೇಳರಿ ನಿರ್ಮಲ ।
ಮನಸ್ಸಿನಿಂದ ನೀವೆಲ್ಲಾ ।
ವೈರಾಗ್ಯ ಬಂದ ಮೇಲೆ ಆರಾಮ ಇರತಾರ ಯಾರ್‍ಯಾರ
ಅಂಜಿಕೆ ಇರುವುದಿಲ್ಲಾ॥ಪ॥

ಜೇಲಿನೊಳಗೆ ಹೋಗಿ ಕಾಲ ಹಾಕುದರೊಳಗ ಗಾಬ ।
ಮಾಡುರ ಮೊದಲ ಪೋಲಿಸರಾ ।

ಮೇಲ್ಮಾಳಿಗೆಯ ಮೇಲೆ ಕರಕೊಂಡ್ಹೋಗಿ ಮಾಲ ಜಪ್ತಿ ।
ಮಾಡುವರು ಕಾರಕೂನರಾ ॥
ಮರಳಿ ಗುದಾಮ ಶೋದ ಅರಿವಿ ತಗಸಿ ತಮ್ಮ ಅರವಿ ।
ಕೊಡುವರು ಮಾಚಮನರಾ ।
ಎರಡ ಅಂಗಿ ಎರಡ ಚೊಣ್ಣ ಲಂಗೂಟ ಟೋಪಿಗಿ ಮ್ಯಾಲ ।
ವಂದ ಮಫಲರಾ ॥
ತಂಡಿ ಸಲುವಾಗಿ ಗರಮ ಬಂಡಿ ಎಂಬುವ ಕಂಬಳಿ ।
ಅಂಗಿ ಒಂದ ಕೊಡವುವರಾ ।
ಹಾಸಿ ಕೊಳ್ಳಲಿಕ್ಕೆ ದಪ್ಪ ತಟ್ಟಿ ಗೊಂಗಡಿ ಹೊತ್ತಕೊಳ್ಳಲಿಕ್ಕೆ ।
ರಗ್ಗ ಚಾದರಾ ॥
ಊಟಕಾಗಿ ತಾಲಿ ಪಾಟಿ ಅಂಬುವವು ಪರ್ಯಾಣದಷ್ಟ ।
ಅದರ ಆಕಾರಾ ।
ನೀರು ಕುಡಿಯುವ ಅಳಿಯು ಸೇರಿನಂಥವು ತಗಡಿನ್ನು ।
ಇರತಾವ ತಯ್ಯಾರಾ ॥

**||ಚಾಲ||**

ಏಳ ಕೀಲಿ ಒಳಗ ಓದ ಇಟ್ಟಾ ವ್ಯಾಳೆ ವ್ಯಾಳೆಕ ।
ಗಸ್ತಿಯವರದು ಕಾಟಾ ॥
ಲೆಕ್ಕಾ ಹೇಳುವರು ವಾಚಮನ್ರು ಸ್ಪಷ್ಟಾ ತಾಸಿಗೊಬ್ಬಬ್ರು ।
ಎದ್ದೆದ್ದ ನಿದ್ದಿಗೆಟ್ಟಾ ॥
ಎರಡ ಅಂತಸ್ತಿ ನಾಗ ಮಲಗುದು ಐಟಾ ಬರಾಕ ಅಂತ ।
ಅದಕ ಹೆಸರಿಟ್ಟಾ ॥

**||ಏರು||**

ಶಿಕ್ಷಾ ಆಗುದಕಿಂತ ಮೊದಲ ಅಪರಾಧಿಯ ಓದ ।
ಇಡುವುದ ಅಂಡರ್ ಟ್ರಾಯಲಾ॥೧॥

ಮುಂಜಾನೆ ಎದ್ದ ಸ್ನಾನ ಸಂಧ್ಯಾ ತಿರಿಸಿ ।
ಗಂಜಿ ಕುಡಿಯಬೇಕು ಬಿಸಿ ಬಿಸಿದಾ ।

ಹನ್ನೊಂದು ಘಂಟೇಕ ಇನ್ನೇನ ಹೇಳಲಿ ಉಣ್ಣುದಕ ।
ಬ್ಯಾಳಿ ರೊಟ್ಟಿ ಬರುವುವದಾ ॥

ಹದಿನಾಲ್ಕು ಅಂಶ ತೂಕ ಒಂದೊಂದ ರೊಟ್ಟಿ ಎರಡ ರೊಟ್ಟಿ ।
ಬ್ಯಾಳಿ ಹಾಕಿ ಕಲಿಸುವದಾ ।

ಒಂದ ಸೌಟ ಉಪ್ಪ ತಂದ ವಗದರ ಕಂಣ ಮುಚ್ಚಿಕೊಂಡ ।
ಅಷ್ಟು ನುಂಗುವದಾ ॥

ಸಂಜೆ ಐದು ಘಂಟೇಕ ಸಜ್ಜಿ ಭಕ್ರಿ ಕೂಡ ಕಾಯಿಪಲ್ಲೆ ।
ಬಾಜಿ ಅಂಬು ಹೆಸರಿನಿದಾ ।

ಎಪ್ಪತ್ತ ತರದ ತೊಪ್ಲ ಪಪ್ಪಾಳಿ ಕಾಯಿ ಎಳಿ ಎಳಿ ।
ಕಟಗಿ ಹುಳಾ ಒಂದೊಂದಾ ॥

ಹೆಸರ ಬ್ಯಾಳಿ ಕಡ್ಲಿ ಬ್ಯಾಳಿ ಚನ್ನಂಗಿ ಬ್ಯಾಳಿ ತೊಗರಿ ಬ್ಯಾಳಿ ।
ದಿವಸಕೊಂದ ಚಂದಾ ಚಂದಾ ।

ಆದಿತ್ಯವಾರ ಗೋಧಿ ರೊಟ್ಟಿ ಬೆಲ್ಲ ಕೊಟ್ರ ಮಾದಿಲಿ ।
ಮಾಡುದು ಏನಹದಾ ॥

**||ಚಾಲ||**

ವಾರದಾಗೆರಡ ಸಾರೆ ಉಳ್ಳಾಗಡ್ಡಿ ಹಲ್ಲ ಇಲ್ಲದವರಿಗೆ ।
ಅಕ್ಕಿಯ ಕಿಚಡಿ ॥
ಸೀತ ಆದರ ಡಾಕ್ಟರ ನೋಡಿ ಎಲ್ಲಾ ರೋಗಕ್ಕೆಲ್ಲಾ
ವಂದ ಔಷದ ಕುಡಿ ।
ದಿವಸಕೆರಡು ಸಾರಿ ಲೆಕ್ಕಾ ಮಾಡಿ ಕೂಡ್ರಸೂರ ಇಬ್ಬರ ।
ಜೋಡಿ ಜೋಡಿ ॥

**||ಏರು||**

ನಳದ ನೀರಿನ ಜಳಕ ಪರಸಿನ ಮ್ಯಾಲ ಪಾಯಖಾನೆಗೆಲ್ಲಾ ।
ಸಂಗಮರಿ ಕಲ್ಲಾ ||೨||
ವಾರಕ್ಕೊಮ್ಮೆ ಅರಿವಿ ನೀರಾಗ್ಹಾಕುದರ ಸರ್ವರಿಗು ಬರುವದು ।
ಸೋಡಾ ಪುಡಿ ।
ಪೂರಾ ಎಂಟ ಘಂಟೇಕ ಕ್ಷೌರದವರ ಬಂದರ ನೀರ ।
ಹಚ್ಚಿಕೊಳ್ಳುದೊಳೆ ಗಡಿಬಿಡಿ ॥

ತಿಂಗಳಿಗೊಮ್ಮೆ ಭೆಟ್ಟಿ ಸಂಗಡ ವಾಚಮನರು ರಂಗ ।
ಕಾಮದಲಿ ದಾಖಲ ಮಾಡಿ ।
ಸಿಪಾಯಿಗೋಳ ಬಂದ ಫುಕಾರ ಮಾಡಿದ ಮ್ಯಾಲ ।
ಆಫೀಸತನಕ ಬೇಗ ನಡಿ ॥

ಮಾಸ ಕೊಂದ ಪತ್ರ ಖಾಸಗೀದ ಬರದರ ಹಕ್ಕೀನ ।
ಪತ್ರ ಬಂದ ಹಿಂದಿಗಡಿ ।
ಟಪಾಲುಗಳು ಎಲ್ಲಾ ತಪಾಸ ಮಾಡಿದ ಮ್ಯಾಲ ।
ಕಳಿಸುದಕ ಸುಪ್ರಿಡೆಂಟೆ ಸಹಿ ಮಾಡಿ ॥

ಬಂದ ಪತ್ರಗಳು ತಂದ ಕೊಡುವರು ಒಂದೊಂದ ।
ಅವರ ನಂಬರ ನೋಡಿ ।
ಹದಿನೈದ ದಿವಸಕ್ಕೊಮ್ಮೆ ಬಂದ ಡಾಕ್ಟರ ತೂಕಕ ಕಟ್ಟಸತಿದ್ದ ತಕ್ಕಡಿ ॥

**॥ಚಾಲ॥**

ತೂಕ ಕಡಿಮಿ ಅದರ ಚಪಾತಿ ಎಂಟ ಔಂಸ ಹಾಲ ಅವನ ಪೂರ್ತಿ ॥
ಸೀತ ಅದರ ಪಲಂಗ ಮ್ಯಾಲ ವಸ್ತಿ ಗಾದಿ ತಲಗಿಂಬ ।
ಪರ್ಯಾಣ ಅವನ ಹಂತಿ ॥
ವಾರದಾಗೆರಡ ಸಾರೆ ಸಿವ್ಹಿಲ್ ಸರ್ಜನ ಸರತಿ ಬಂದ ತಗೊಂಡ ।
ಹೋಗಾಂವ ಎಲ್ಲಾ ಮಾಹಿತಿ ॥

**॥ಏರು॥**

ಬಾಯಿ ಮಾತಿನ ಮ್ಯಾಲ ರಿಪೋರ್ಟು ಪೋಲಿಸರದು ।
ಭೀಮೇಶಂದ ಯಾವ ಮಾತಿಗೆ ಕಡಿಮಿಲ್ಲಾ॥೩॥

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೧. ಹೈದರಾಬಾದ ರಜಾಕಾರ ಲಾವಣಿ

***(ಸುನೋ ಸುನೋ ಏ ದುನಿಯಾ ಬಾಪೂಜಿಕಾ ಅಮರಕಹಾನೀ ಎಂಬಂತೆ)***

ಕೇಳಿರಿದೋ ಈ ಕ್ರಾಂತಿಯ ಕಥೆಯಾ ಹೈದರಾಬಾದಿನ ಶರಣಾಗತಿಯಾ
ಕಾಂಗ್ರೆಸ್ಸಿನ ಕರೆ ಕಣ್ಣೀರಿನ ಮೊರೆ ಕಾಸೀಮ ರಜವೀ ನರಹತಿಯಾ॥ಪ॥

ಭಾರತದೇಶವು ಸ್ವತಂತ್ರವಾಯಿತು ಬ್ರಿಟಿಶರಾಜ್ಯದಾಳಿಕೆ ಮುಗಿದು
ಭಾರತ ಸಂಸ್ಥಾನಿಕರು ಸೇರಿದರು ಹಿಂದೀ ಒಕ್ಕೂಟವನೊಲಿದು
ಭಾರತಿ ಕಣ್ಣಲಿ ನೋಡಿ ನಲಿದಳು ಆನಂದಾಶ್ರುಗಳನು ಸುರಿದು
ಸಾರಲೇನು ಹದಗೆಟ್ಟಿತು ಹೈದರಾಬಾದವು ಕಾಂಗ್ರೆಸ್ಸನು ಜರಿದು
ಯಾರದಿಲ್ಲ ಅಧಿಕಾರವೆಂದ ನೈಜಾಮ ದೊರೆಯು ಮಾರ್ಗವ ತೊರೆದು॥೧॥

ಪ್ರಜಾರಾಜ್ಯವಾಗಲು ಬೇಕೆಂದರು ದೇಶನಿಷ್ಠ ಕಾಂಗ್ರೆಸ್ಸಿಗರು
ನಿಜಾಮ ಪ್ರಭುವಿಗೆ ನಾನಾ ಬಗೆಯಲಿ ನಮ್ರ ನಿವೇದನೆ ಮಾಡಿದರು
ಪ್ರಜಾಮತದಿ ರಾಜ್ಯವ ನಡೆಸೆಂದರು ರಾಜನೀತಿಯನು ಬಲ್ಲವರು
ಅಜೇಯರಾಗಲಿ ಸಹಕಾರದಿ ಹಿಂದು ಮುಸ್ಲಿಮ ಸಹೋದರರು
ಸಜಾತೀಯತೆಯು ನಷ್ಟವಾಗಲೆಂದರು ನಾಡಿನ ಸರ್ವಪ್ರಜರು॥೨॥

ಕೇಳದಾದ ನೈಜಾಮ ಪ್ರಭುವು ಕಾಂಗ್ರೆಸ್ಸಿನ ಕೂಗನು ಮೈಮರೆದು
ಹಾಳಾಗುವ ಆಲೋಚನೆ ಮಾಡಿದ ಮಂತ್ರಿಮಂಡಲವ ಕರೆಕರೆದು
ಏಳಗೊಡದೆ ಕಾಂಗ್ರೆಸ್ಸಿಗರನು ಸೆರೆಹಿಡಿಯಿರೆಂದ ಕತ್ತಿಯ ಹಿರಿದು
ತಾಳಗೆಟ್ಟ ಹೈದರಾಬಾದಿನೊಳು ಮೂಡಿತೊಂದು ಗ್ರಹ ಮೈದೆರೆದು
ಕಾಳಗತ್ತಲೆಯ ಕಾರಭಾರದಲಿ ಕೆಡುಹಲು ಬಂದಿತು ಮುಂದರಿದು॥೩॥

ನಿಜಾಮರಾಜ್ಯದಿ ಧೂಮಕೇತುವು ಮೂಡಿತು ಕೇಡಿನ ಸೂಚನೆಯಾ
ಮಾಡಿಸಿತಾಕ್ಷಣ ಕೊಲೆಗಡಕರ ರಜಕಾರರ ಸಂಘ ಸ್ಥಾಪನೆಯಾ
'ಇತ್ತೆಹಾದಿ' ಎಂಬ ನಾಮವಿತ್ತನಾ ಸಂಸ್ಥೆಗೆ ರಜವೀ ಸ್ವಾರ್ಥಮಯಾ
ಹಿಂದೂ ಜನರನು ಕೊಂದು ಹಾಕಿಸಿದ ಹರಿಸಿದ ರಕ್ತದ ಕಾಲುವೆಯಾ
ಕಣ್ಣೀರಲಿ ಮೈದೊಳಿದನೆಲ್ಲರ ಕಾಸೀಮ ರಾಜವೀ ಕಲ್ಲೆದೆಯಾ॥೪॥

ಹೈದರಾಬಾದಿನ ನಾಲ್ಕು ನಿಟ್ಟಿನಲಿ ನಡೆಸಿದ ನಾಡಿನೊಳನ್ಯಾಯ
ಸುಲಿಗೆ ಕೊಳ್ಳೆ ಕೊಲೆಮಾಡಿದರೆಂದು ರಜಕಾರರನಟ್ಟಿದ ಪಾಪಮಯ
ಅಕ್ಕ-ತಂಗಿಯರ ಮಾನಭಂಗಕೆ ಮಾಡಿಸಿದನು ನಿಷ್ಕರುಣಾಹೃದಯ
ನಡೆದತ್ಯಾಚಾರವ ಕೇಳಿದರೂ ಮಿಡುಕಲಿಲ್ಲ ಜಿನ್ನಾ ಹೃದಯ॥೫॥

ಸಾವಿರಾರು ಜನ ನಿರಪರಾಧಿಗಳ ಸಜೀವ ಸುಡಿಸಿದ ಚಿತ್ರಗಳು
ಗಂಡರ ಕಂಬಕೆ ಕಟ್ಟಿ ಹೆಂಡರನು ಕೆಡಿಸಿದ ಪಾಪದ ಕೃತ್ಯಗಳು
ಸಣ್ಣ ಕೂಸುಗಳ ಚೆಂಡನಾಡಿ ತೂರಾಡಿದ ರಾಕ್ಷಸನೃತ್ಯಗಳು
ಮಾನಕಂಜಿ ಭಾವಿಯ ಹಾರಿದರು ಅಸಂಖ್ಯ ಹಿಂದು ಮಾತೃಗಳು
ಪಾಪಕೃತ್ಯಗಳ ನೋಡಿ ಭಾರತಿಯು ಕಣ್ಣಲಿ ನೀರನು ಸುರಿಸಿದಳು॥೬॥

ಹತ್ತೊಂಬತ್ತನೂರಾ ನಾಲ್ವತ್ತೆಂಟನೆಯ ಜನವರಿ ತಿಂಗಳ ಕಡೆ ಮೊದಲು
ಕೊಲೆಗಾರಂಭವದಾಯಿತು ಹೈದರಾಬಾದಿನ ಹಿಂದೂ ಜನತೆಯೊಳು
ಮೂರನೂರು ಐವತ್ಮೂರು ಹಳ್ಳಿಗಳ ಸುಟ್ಟು ಸುಲಿದ ಚಿನ್ನಾಟಗಳು
ಸಿರಿವಂತರ ಮನೆ ಲೂಟಿಸಿ ಜಗ್ಗಿದ ಕೋಟ್ಯಾವಧಿ ಧನ ನಾಣ್ಯಗಳು
ಹರಿದು ಹೋಗುತಿರೆ ಸ್ವಾಮಿ ರಮಾನಂದರು ಕೇಳ್ದರು ನಾಡಿನ ಗೋಳು॥೭॥

ನೋಡಿ, ನಡೆದ ಕೊಲೆ ಹೈದರಾಬಾದಿನ ನಾಡೊಳು ಮೂಡಿದ ಉದಯರವಿ
ಗಾಢ ಕತ್ತಲೆಯ ಕಳೆಯಲು ಬಂದನು ರಮಾನಂದ ಲೋಕಾನುಭವಿ

ಹೂಡಿದ ಮಾನವ ಸ್ವಾತಂತ್ರ್ಯದ ರಥಕೆರಡು ಕುದುರೆಗಳು ಶೀಘ್ರ ಜವಿ
ಜೋಡಿಸಿ ಕಟ್ಟಿದ ಸತ್ಯಶಾಂತಿಗಳ ಗಾಂಧೀತತ್ವಾಮೃತದ ಸವಿ
ಕೇಡಿನಿಂದ ಕಡೆಗಾಗಲೆಂದು ನೈಜಾಮರಿಗರುಹಿದ ಶಾಂತಿ ಪವಿ||೮||

ದೊರೆ ನಿಜಾಮ ಕೇಳ್ ಭಾರತ ರಾಜ್ಯವು ಸ್ವತಂತ್ರವಾದುದ ನೀನರಿಯಾ
ಅರಸು ಪ್ರಜೆರ ಸ್ವಾತಂತ್ರ್ಯವ ಕಸಿವುದು ಪಾಪವೆಂಬುದನು ನೀನರಿಯಾ
ತೊರೆದು ಪ್ರಜಾಮತ ರಾಜ್ಯವಾಳಿದರೆ ಚಿರಕಾಲವು ನೀ ಬಾಳುವೆಯಾ
ಭರತರಾಜ್ಯದಲಿ ಲೀನವಾಗಿ ನೀ ಹೋದರೇನು ಹಾಳಾಗುವೆಯಾ
ಉರಿಯ ಹಚ್ಚಿ ಹಿಂದೂ ಮುಸ್ಲೀಮರು ಉರಿದ ಕಿಚ್ಚ ನೀ ನೋಡುವೆಯಾ||೯||

ಮೀರಲಾಯಕ ಅಲಿ ಮಂತ್ರಿ ನಿಜಾಮರ ಕಾರಸ್ಥಾನೀ ಮಂಡಲವು ।
ವೈರಭಾವದಿಂ ಮೀರಿ ಹಿತೋಕ್ತಿಯ ಗೈಸಿದ ತೀರ್ಥರ ಬಂಧನವು ।
ಘೋರ ತಾಪದುರಿ ಕಿಡಿಗಳನುಗುಳಿತು ಕಾರಿತು ಬೆಂಕಿ ಪ್ರಜಾಮನವು ।
ತೀರಿದ ಪುಣ್ಯ ನಿಜಾಮ ದೊರೆಗಳನು ದುರ್ಗತಿಗೊಯ್ಯುವುದೇ ನಿಜವು ।
ಊರಕೇರಿಯಲಿ ನಗರ ಬೀದಿಯಲಿ ಉದ್ಭವಿಸಿತು ಕೋಲಾಹಲವು||೧೦||

ನೀತಿವಂತ ನಿರ್ಮಲ ಮನಸಿನ ಇಂಬ್ರೋಜ ಪತ್ರ ಸಂಪಾದಕರು ।
ಖ್ಯಾತಿವಂತ ಶೋಬುಲ್ಲಾಖಾನರು ಮುಸಲೀಮ್ ಧರ್ಮಪ್ರಚಾಕರು ।
ಪಾತಕತನವಿದು ಪ್ರಜೆರ ಕೊಲ್ಲುವದು ಬೇಡವೆಂದು ನಿಜ ಸಾರಿದರು ।
ಘಾತಿಸುತವರನು ಕೊಲೆ ಮಾಡಿದಿರು ರಜವೀ ರಾಜ್ಯ ಸ್ಥಾಪಕರು||೧೧||

ಗಾಣದಾಳ ಸ್ಟೇಶನ್ನದಿ ಗಾಡಿಯ ನಿಲ್ಲಿಸಿ ಲೂಟಿಯ ಮಾಡಿದರು
ಮಾನವತಿಯರನು ಹಿಡಿದೆಳೆದೊಯ್ಯುತೆ ಮಾನಹಾನಿಯನ್ನೆಸಗಿದರು
ಕೋಣನಂಥ ರಜಕಾರರು ಕೆಲವರ ಪ್ರಾಣಗಳನ್ನೇ ಹೀರಿದರು
ಪ್ರಾಣಭಯವ ತೋರಿಸಿ ನಾರಿಯರನ್ನೊಯ್ದು ಕಣ್ಣೆ ಮರೆಮಾಚಿದರು
ಗೋಣಿಗೆ ನೇಣನು ಸುತ್ತಿ ಗಿಡಗಳಿಗೆ ಜೋತುಗಟ್ಟಿ ತೂಗಾಡಿದರು||೧೨||

ಎತ್ತಲು ಸುತ್ತಲು ಕೊಯ್ಯುವ ಕೊಲ್ಲುವ ಕೃತ್ಯಗಳನು ಕಿವಿಗೇಳಿದವು
ಎತ್ತು ಎಮ್ಮೆ ಕುರಿ ಕೋಣ ಕೋಳಿಗಳ ನೆತ್ತರದಿಂ ತೊಯ್ದಿತು ನೆಲವು
ಅತ್ತು ಕರೆದು ಕೊರಚಿಟ್ಟು ಚೀರುತಿಹ ಮುತ್ತೈದೆರ ಬಾಯಾರಿದವು
ಹೆತ್ತೆ ಏಕೆ ಹಡದಮ್ಮ ನಮ್ಮನೆಂದತ್ತು ಅತ್ತು ಕೊರಳುಬ್ಬಿದವು
ಕತ್ತು ಮುರಿದು ಕೂಸುಗಳ ಚೆಲ್ಲಿದರು ಕಾಣಲಿಲ್ಲ ತಾಯಿಗೆ ಮಗುವು||೧೩||

ಭಾರತ ಹೈದರಾಬಾದ ಒಪ್ಪಂದವ ಮುರಿದು ಗೈದ ಒಳಸಂಧಾನ ।
ಮೀರಲಾಯಕ ಅಲಿ ಮಂತ್ರಿ ನಡಿಸಿದನು ಗುಪ್ತ ಯುದ್ಧ ಕಾರಸ್ಥಾನ ।
ಹೇರಿ ವಿಮಾನದಿ ತುಂದುಕೊಟ್ಟ ಶಸ್ತ್ರಗಳನು ಸಿಡ್ನೆ ಕಾಟನ್ನಾ ।

ಮಾರಿದ ಹಣ ಐವತ್ತು ಕೋಟಿ ನೈಜಾಮರಿತ್ತು ಕಳುಹಿದರವನಾ ।
ಚೋರ ಕ್ರೂರತನ ಹೈದರಾಬಾದಿನ ಕೇಳಲಿಲ್ಲ ಪಾಕಿಸ್ತಾನ॥೧೪॥

ಕೇಳಿ ಹೈದರಾಬಾದಿನ ಕೋಲಾಹಲ ಕೆರಳಿತು ಭಾರತ ಸರಕಾರ
ಹೇಳಿ ಬುದ್ಧಿ ನೈಜಾಮ ದೊರೆಗಳಿಗೆ ಮಾಡಿತು ರಕ್ಷಣೆಯ ವಿಚಾರ
ಕೇಳಲಿಲ್ಲ ಹೈದರಾಬಾದಿನ ದೊರೆ ನಡೆಯಿತು ಮಾನವ ಸಂಹಾರ
ಮೇಳಗೂಡದಾಯಿತು ಮೌಂಟಬ್ಯಾಟನ್ನರು ನಡೆಸಿದರು ಸಹಕಾರ
ತಾಳಗೆಟ್ಟ ನಾಡಿನ ರಕ್ಷಣೆ ಮಾಡುವದೇ ಭಾರತ ನಿರ್ಧಾರ॥೧೫॥

ಹೈದರಾಬಾದನು ಹಿಂದೀ ಒಕ್ಕೂಟದಿ ಸೇರ್ಪಡಿಸಲು ತಿಳಿಸಿದರು
ಹೈದರಾಬಾದಿನ ಏಜಂಟ ಜನರಲ್ ಕೆ.ಎಮ್.ಮುನಶಿ ಎಂಬವರು
ಕೈದು ಮಾಡುತವರನ್ನು ನಿಜಾಮರು ಸುಡುವಾಲೋಚನೆ ನಡೆಸಿದರು
ಸಂಧಿಮಾಡಿಸಲು ಬಂದರು ಮೈಸೂರಿನ ಮಿರ್ಜಾ ಯಿಸ್ಮಾಯಿಲರು
ಒಂದುಗೂಡಿಸದೆ ಹಿಂದಕೆ ಸರಿದರು ದೈವಬರಹ ಮೀರುವವರಾರು॥೧೬॥

ಪಡುವಣ ಮೂಡಣ ತೆಂಕಣ ಬಡಗಣ ಗಡಿಯಲಿ ಅತ್ಯಾಚಾರಗಳು
ಸುಡುವ ಕೊಲ್ಲುವ ಗುಂಡಿಕ್ಕುವ ಜಾತ್ಯಂತರಗೊಳಿಸುವ ಖಲಕೃತ್ಯಗಳು
ಹಿಡಿದೆಳೆಯುವ ಹಿಂದೂ ಹೆಂಗಳೆಯರ ಹರಿದವು ಮಂಗಲಸೂತ್ರಗಳು
ಹೊಡೆದು ಕೆಡಹಿ ಮಾಂಸವ ತಿನಿಸುವ ರಜಕಾರರ ಕಕ್ಕಸ ಬಲುಮೆಗಳು
ನಡೆದವು ಬೀದರ ಬಿಜವಾಡ ರಾಯಚೂರ ದುದನಿ ಕೊಪ್ಪಳ ಗಡಿನಾಡಿನೊಳು॥೧೭॥

ಗಡಿಯಲಿ ಕೊಪ್ಪಳ ಇಟಗಿ ಶಾಂತಗಿರಿ ಹೆಂಗಳೆಯರು ಹೋರಾಡಿದರು
ಕುಡಗೋಲಿನ ಕೈಯಿಂದ ವೈರಿಗಳ ಸುಡುಗಾಡಿಗೆ ಎಡೆಮಾಡಿದರು
ಕಡುಗಲಿ ಕಿತ್ತೂರಿನ ಚೆನ್ನಮ್ಮನ ಕದನ ಶೌರ್ಯವನು ತೋರಿದರು
ತುಡುಗ ಪಠಾಣರು ಬರಲು ಮಾಳಿಗೆಯನೇರಿ ಕಲ್ಲು ಮಳೆ ಸುರಿಸಿದರು
ಹೆಡೆಯೆತ್ತಿದ ಸರ್ಪ ಕಾಣುತೆ ರಜಕಾರರು ಹೇಳದೆ ಓಡಿದರು॥೧೮॥

ಕನ್ನಡ ಕಡುಗಲಿ ಕೆ.ಎಸ್.ಪಾಟೀಲರು ರಕ್ಷಕದಳ ರಚಿಸಿದರು
ಮುನ್ನಡೆಯಲಿ ರಜಕಾರರೆಲ್ಲಿಯು ನಿಲ್ಲದಂತೆ ಪ್ರತಿಭಟಿಸಿರು
ಮಾನ್ಯ ಮಹೋದಯ ಶರಣಗೌಡ ಗುಲ್ಬುರ್ಗೆಯ ಶೌರ್ಯನಿಕೇತನರು
ಮಣ್ಣು ಮುಕ್ಕಿಸುತ ವೈರಿಯ ಜೀವದ ಹಂಗುದೊರೆದು ಕಾದಾಡಿದರು
ಕಣ್ಣು ಕಂಡಕಡೆಗೋಡುತಲಿದ್ದರು ಕಾಸೀಮ ರಜವೀ ಬೆನ್ನಿಗರು॥೧೯॥

ಶೂರಧೀರ ಸರದಾರ ಪಟೇಲರು ವೀರಘೋಷಣೆಯ ಮಾಡಿದರು ।
ಸೇರಿಸಿಕೊಳ್ಳಲು ಹೈದರಾಬಾದನು ಮೂರೇ ದಿನ ಸಾಕೆಂದವರು ।
ಮಾರುತ್ತರದಲಿ ಮೀರಲಾಯಕ ಅಲಿ ಗುಂಪಿನವರು ಉರಿ ಕಾರಿದರು ।

ಭಾರತ ಹೈದರಾಬಾದದ ಗೊಡವೆಗೆ ಬಾರದಿರುವದೊಳಿತೆಂದರು ।
ಮೇರೆದಪ್ಪಿದರೆ ತೋರಿಸುವರು ಕೈ ನಿಜಾಮನಾಡಿನ ರಕ್ಷಕರು॥೨೦॥

ವಿಷವ ಕಾರುತಲಿ ಕಾಸೀಮ ರಜವಿಯು ಹಸಿ ಬಿಸಿ ಹುಸಿಮಾತಾಡಿದನು ।
ಅಸಫಜಾಹಿ ಧ್ವಜ ಹಾರಿಸುವೆವು ದಿಲ್ಲಿಯ ಕಿಲ್ಲೆಯೊಳೆಂದುಸುರಿದನು ।
ಮಸೆದು ಹಲ್ಲು ಕಡಿಯುತ್ತ ಕರೆದು ರಜಕಾರರಿಗಾಜ್ಞೆಯ ನೀಡಿದನು ।
ಹೊಸೆದು ಮೀಸೆ ಹಿಂದುಗಳ ಬಿಡದೆ ಹಿಂಸಿಸುವ ಪ್ರತಿಜ್ಞೆಯ ಗೈಸಿದನು ।
ಹಸಿದ ಹುಲಿಯು ಆರ್ಭಟಿಸುವಂತೆ ಭಾರತಯುದ್ಧವನೇ ಸಾರಿದನು॥೨೧॥

ತಡೆದು ತಡೆದು ಕಡೆ ಕಡೆಗೆ ಸಹಿಸದಲೆ ಭಾರತ ಪ್ರಧಾನ ಮಂಡಲದಿ ।
ನಡೆದು ನಡೆದು ಹೈದಾರಾಬಾದಿನ ಬಗೆಗೊಳಿಸುವ ವಿಚಾರ ಮಂಡನದಿ ।
ಕಡೆಯ ಮಾತು ಜನ ವಿತ್ತಜೀವಿಗಳ ರಕ್ಷಣೆ ಮಾಡುವ ದೃಢಪಣದಿ ।
ನುಡಿದ ನೆಹರೂ ಘೋಷಣೆ ಹಿಂದೂ ಬಂಧು ಭಗನಿಯರ ರಕ್ಷಣದಿ ।
ತಡಮಾಡದೆ ಮುನ್ನಡೆಯಿತು ಭಾರತ ಸೈನ್ಯವು ನಿರ್ಗತ ಶಾಸನದಿ॥೨೨॥

ಹತ್ತೊಂಭತ್ತನೂರಾ ನಾಲ್ವತ್ತೆಂಟನೆಯ ಸೆಪ್ಟೆಂಬರ್ ಹನ್ನೆರಡರಲಿ
ಇತ್ತ ನೆಹರೂ ಘೋಷದ ಮರುದಿನ ಹದಿಮೂರರ ನಡುರಾತ್ರಿಯಲಿ
ಗೊತ್ತರಿಯದ ಸೊಲ್ಲಾಪುರದಲ್ಲಿ ಹ ಹಿಂದೀ ಸೈನ್ಯದ ಶಿಬಿರದಲಿ
ಹತ್ತಿ ವಿಮಾನದಿ ಬಂದ ಪಟೇಲರು ಸೈನ್ಯಕಿತ್ತ ಸಂದೇಶದಲಿ
ಸುತ್ತು ವೀರರಸ ಉಕ್ಕಿತು ಸೈನ್ಯದಿ ಪಶ್ಚಿಮ ದಂಡಿನ ಯಾತ್ರೆಯಲಿ॥೨೩॥

ಪೂರ್ವ ದಂಡಯಾತ್ರೆಯು ಹೊರಟಿತು ಬಿಜವಾಡದಿಂದ ಬಹು ಒತ್ತರದಿ
ಸರ್ವಸಿದ್ಧಿ ಸಂಗ್ರಾಮಸಾಧನ ಸಮೂಹದಿಂದ ಜಯದಾತುರದಿ
ಗರ್ವ ಭೇದಿಸುವ ಮದ್ದು ಗುಂಡುಗಳ ಮಳೆಗರೆಯುತ ಸಿಡಿಲಬ್ಬರದಿ
ಪೂರ್ವ ರಂಗ ನಿರ್ವೈರ ಭಾರತವ ಕಟ್ಟುವ ಕಾದುವ ದೃಢಮನದಿ
ಊರ್ವಿ ಭಾರ ರಜಕಾರ ಹಿಂಸಕರ ನಿರ್ಮೂಲನ ಗೈಯುವ ತೆರದಿ॥೨೪॥

ಮೇಜರ್ ಜನರಲ್ ಚೌದರಿ ಹಿಂದೀ ಸೇನಾಪತಿ ಪೂರ್ವೋತ್ತರದಿ ।
ತೇಜೋರಾಶಿ ಕಮಾಂಡರ ಶ್ರೀ ರಾಜೇಂದ್ರಸಿಂಹ ದಳ ಪಶ್ಚಿಮದಿ ।
ನೈಜ ಸೈನ್ಯಪತಿ ರುದ್ರ ಬ್ರಿಗೇಡರ ಜಾಳರು ಹಂಪಿಯ ದಕ್ಷಿಣದಿ ।
ಓಜಃಶಾಲಿ ಮಂಡಲ ಪತಿಗಳು ಹಿಂದೀಜನ ಸಂರಕ್ಷಣದಿ ।
ರಾಜ್ಯಘಾತುಕರ ತುಂಡರಿಸಲೀ ಮಾಡಿದರಾಜ್ಞೆಯನೊಂದೇ ಕ್ಷಣದಿ ॥೨೫॥

ಬನ್ನಿರಿ ನಲದುರ್ಗವ ನೋಡುವ ಜವ ಹಿಂದೀಬಾಂಧವ ಭಗಿನಿಯರು ।
ದಿನ್ನೆ ದಿಬ್ಬಗಳು ಸುತ್ತ ಮುತ್ತು ಕಾಣಿಸುವವು ನಿಮ್ಮಯ ಕಣ್ಣೆದುರು ।
ಬಣ್ಣಿಸಲವು ರಜಕಾರರ ಗರ್ವದ ಮುದ್ದೆಗಳೆಂಬೊಲು ಮಣ್ಣೇರು ।

ಧನ್ಯ ನಿಜಾಮರ ಸಿರಿಯ ಕೊಬ್ಬಿನಬ್ಬರವ ಸೂಚಿಸುವ ಕಡಿದೇರು।
ಮುನ್ನವೆ ನಲರಾಜನು ಕಟ್ಟಿದ ನಲದುರ್ಗವು ಸೌಂದರ್ಯದ ತವರು॥೧೭॥

ಅಂದಿನ ಸೆಪ್ಟೆಂಬರ ಹದಿಮೂರರ ಬೆಳಗು ಮೂಡುವುದರೊಳಗಾಗಿ।
ಬಂದ ಮೂರುಸಾವಿರ ನೈಜಾಮರ ಸೈನ್ಯ ತಕ್ಷಣದಿ ಹತವಾಗಿ
ಅಂದವಾಗಿ ನಲದುರ್ಗಕೋಟೆಯದು ಹಿಂದೀ ಸೈನ್ಯದ ವಶವಾಗಿ
ಮುಂದೆ ನಡೆದ ಚೌದರಿಯ ಸೈನ್ಯವದು ಮಿಂಚಿನ ವೇಗದಿ ಮುಂದಾಗಿ
ಬಂದುದು ರಾಜೇಶ್ವರ ಹುಮುನಾಬಾದ ಕೇಂದ್ರ ಝಹಿರಬಾದಿಗೆ ಸಾಗಿ॥೧೭॥

ಹತರಾದರು ನೈಜಾಮ ಸೈನಿಕರು ಸಿಡಿದ ಗುಂಡುಗಳಿಗೆದೆಯೊಡೆದು
ಮೃತರಾದರು ರಜಕಾರರು ರಣದಲಿ ಕಾಸೀಮ ರಜವಿಯ ನೆನೆನೆನೆದು
ಗತಿಗಾಣದೆ ಮನಬಂದ ಬಂದಕಡೆಗೋಡುತಲಿದ್ದರು ಸಿಡಿಸಿಡಿದು
ಪತನವಾಯ್ತು ನಲದುರ್ಗ ನಿಜಾಮರ ಅರಸುತನ ಜಗದಲಿ ಮುಗಿದು
ಗತಿಯಾವುದು ಶರಣಾಗತಿ ಎಂದೆನುತಿದ್ದರು ಸರ್ವರು ಕೈಮುಗಿದು॥೧೮॥

ಇತ್ತ ದಕ್ಷಿಣದಿ ಮುನಿರಾಬಾದದಿ ತುಂಗಭದ್ರೆಯ ದಂಡೆಯಲಿ
ಮುತ್ತಿದ ಪಠಾಣ ರಜಕಾರರ ಪಡೆ ಮೂರು ಸಾವರಿದ ಸಂಖ್ಯೆಯಲಿ
ಒತ್ತಿ ಬಂದ ಹಿಂದೀ ಸೇನಾದಳವಿತ್ತು ಮೂರುನೂರಂಕಿಯಲಿ
ಎತ್ತಲು ನಡೆಯದ ಹೈದರಾಬಾದಿನ ಪೋಲೀಸ ಕ್ರಮ ಘಟನೆಯಲಿ
ಸತ್ತರಸಂಖ್ಯರು ನೈಜಾಮ ಸೈನಿಕರು ಅಚ್ಚಗನ್ನಡರ ಕೆಚ್ಚಿನಲಿ॥೧೯॥

ಕಡೆಗಾಣದೆ ನೈಜಾಮರು ಕೊನೆಯಲಿ ಶರಣಾಗತಿಯನು ಸಾರಿದರು।
ಸಡಲಿದ ಹೈದರಾಬಾದಿನ ಶಕ್ತಿಯ ಪತನದ ವಾರ್ತೆಯ ಕೇಳಿದರು।
ತಡಮಾಡದೆ ಭಾರತ ಸೇರ್ಪಡೆಯಾಗಲು ಎಂಡ್ರಸನ್ನರನಟ್ಟಿದರು।
ಬಿಡದಾಗಲೆ ಸೋಲನ್ನೊಪ್ಪಿದ ಬಿಳಿ ನಿಶಾನೆಗಳ ಹಿಡಿದೆತ್ತಿದರು।
ನುಡಿದರು ಜಯ ಜಯ ಹಿಂದ ಎಂದು ಜಯ ದನಿಯಲಿ ಹಿಂದೀ ಸೈನಿಕರು॥೨೦॥

ಆರತಿ ಜಯ ಜಯ ಭಾರತಿ ಗಾಂಧಿ ಮಹಾತ್ಮರ ಪಡೆದ ದಯಾಧರಣಿ।
ಶೂರ ಸರದಾರ ಸುಭಾಷ ನೇಹರೂ ವೀರರತ್ನಗಳ ಗರ್ಭಖಣಿ।
ಸೇರಲಿ ಹೈದರಾಬಾದ ನಿಜಾಮರು ಭಾರತ ಒಕ್ಕೂಟದಿ ಜವದಿ
ಏರಲಿ ರಾಷ್ಟ್ರೀಯ ಧ್ವಜ ಹೈದರಬಾದಿನ ಸರ್ವಜಗಜ್ಜನದಿ।
ಆರತಿಗೈಯಲಿ ಭಾರತಮಾತೆಗೆ ಪ್ರೇಮದಿಂದ ಹಿಂದೂ ಭಗನಿ॥೨೧॥

***ಕವಿ:*** ನಲವಡಿ ಶ್ರೀಕಂಠಶಾಸ್ತ್ರಿ
***ಕೃತಿ:*** ಹೈದರಾಬಾದ ರಜಕಾರ ಲಾವಣಿ

# ಸ್ತುತಿಗಳು

# ಪ್ರಸ್ತಾವನೆ

ಜನಪದ ಸಾಹಿತ್ಯದಲ್ಲಿ ಕಾವ್ಯದ ಹರವು ಬಲು ವಿಸ್ತಾರವಾಗಿದ್ದು ವೈವಿಧ್ಯಪೂರ್ಣವಾದುದಾಗಿದೆ. 'ಲಾವಣಿ' ಜನಪದ ಸಾಹಿತ್ಯದ ಒಂದು ಪ್ರಮುಖ ಕಾವ್ಯ ಪ್ರಕಾರವಾಗಿದೆ. ಅಷ್ಟೇ ಶ್ರೀಮಂತಿಕೆಯಿಂದ ಕೂಡಿದ ಸಾಹಿತ್ಯವಾಗಿದೆ. ಲಾವಣಿಯನ್ನು ಇಂಗ್ಲೀಷಿನಲ್ಲಿ balladಗೆ ಸಂವಾದಿಯಾಗಿದೆಯೆಂದು ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಇದು ತಪ್ಪು. balladಗೆ ಕಥಾಂಶವೇ ಮುಖ್ಯ. ಲಾವಣಿಗೆ ಹಾಡುಗಾರಿಕೆಯೇ ಮುಖ್ಯ. "ಜನಪದ ಗೀತೆಯೊಂದು ಮೊದಲಿನಿಂದ ಕೊನೆಯವರೆಗೆ ಕಥೆಯನ್ನು ಹೇಳದೆ ಹೋದರೆ ಅದನ್ನು ನಾವು ಃಚಿಟಟಚಿಜ ಎಂದು ಕರೆಯುವುದಿಲ್ಲ. ಪದ್ಯವೊಂದು ಕಥೆಯನ್ನು ಹೇಳಿದರೂ ಹಾಡಲಾಗದಿದ್ದರೆ ಮತ್ತೆ ಅದನ್ನು 'ಲಾವಣಿ' ಎನ್ನಲಾಗುವುದಿಲ್ಲ. ಲಾವಣಿ ಎಂದು ಕರೆಯಬೇಕಾದರೆ ಹಾಡು ಸಾಂಪ್ರದಾಯಿಕ ಜೀವನವನ್ನು ಹೊಂದಿರಬೇಕು. ಅಂದರೆ ಅದು ಪ್ರಧಾನವಾಗಿ ಜನತೆಯ ಸ್ಮರಣೆಗಳಲ್ಲಿ ಜೀವಂತವಾಗಿರಬೇಕು ಮತ್ತು ಗಾಯಕನಿಂದ ಗಾಯಕನಿಗೆ ವಾಚಿಕವಾಗಿ ಬಂದಿರಬೇಕು."೧

[1]ಆದರೆ ಕೆಲವರು ಹಾಡಿನ ರೂಪದಲ್ಲಿರುವ ಎಲ್ಲ ಕಥಾನಕಗಳನ್ನು ಲಾವಣಿಯೆಂದು ಕರೆದಿದ್ದಾರೆ. ಇದು ಸರಿಯಲ್ಲ. ಕಥನ ಕಾವ್ಯಗಳೆಲ್ಲವೂ ಲಾವಣಿಗಳಲ್ಲ. ಲಾವಣಿಗಳು ಪ್ರಾದೇಶಿಕವಾಗಿಯೂ ಭಿನ್ನವಾಗಿವೆ. ಮೈಸೂರು ಸೀಮೆಯ ಲಾವಣಿಗಳು ಗ್ರಾಂಥಿಕವಾಗಿದ್ದು ಅವುಗಳನ್ನು ಹಾಡುವ ರೀತಿಯೂ ಬೇರೆಯಾಗಿದೆ. ಉತ್ತರ ಕರ್ನಾಟಕದ ಲಾವಣಿಗಳೇ ಬೇರೆ. ವಿಶೇಷವಾಗಿ ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಕಂಡುಬರುವ ಲಾವಣಿಗಳು ಅಥವಾ ಗೀಗೀ ಪದಗಳನ್ನು ಃಚಿಟಟಚಿಜ ನೊಂದಿಗೆ ತಳಕು ಹಾಕುವುದು ಸರಿಯಲ್ಲ. ನಾನೀಗ ಉತ್ತರ ಕರ್ನಾಟಕದಲ್ಲಿ ವಿಶಿಷ್ಯ ಕಾವ್ಯ ಪ್ರಕಾರವಾದ ಲಾವಣಿಗಳನ್ನು ಅವಲೋಕಿಸಿರುವೆ. ಈಗಾಗಲೇ ಲಾವಣಿ ಕುರಿತು ಸಾಕಷ್ಟು ಅಧ್ಯಯನ ನಡೆದಿದೆಯಾದರೂ ಪ್ರಸ್ತುತ ಸಂಗ್ರಹಕ್ಕೆ ಪೂರಕವಾಗಿ ಲಾವಣಿ ಬಗೆಗೆ ಸಂಕ್ಷಿಪ್ತವಾಗಿ ನೋಡಲಾಗಿದೆ.

**ಲಾವಣಿ ಬೆಳೆದುಬಂದ ಬಗೆ :**

ಲಾವಣಿಗೆ ಲವಣ, ಲಾವಣ್ಯ, ಲಾವಳ ಶಬ್ದಗಳೇ ಮೂಲಾಧಾರವಾಗಿವೆ. ಲವಣ ಎಂದರೆ ಉಪ್ಪು, ರುಚಿ, ಲಾವಣಿ ಸಾಹಿತ್ಯ ರುಚಿಕರವಾದುದು. ಲಾವಣ್ಯ ಎಂದರೆ ಸೌಂದರ್ಯ, ಶೃಂಗಾರ. ಹೆಣ್ಣಿನ ಲಾವಣ್ಯವನ್ನು ವರ್ಣಿಸುವ ಶೃಂಗಾರ ಸ್ವಭಾವದ ಲಾವಣಿಗಳು ಇರುತ್ತವೆ. "ಶೃಂಗಾರದಿಂದ ವ್ಯುತ್ಪತ್ತಿಗೊಂಡ ಲಾವಣಿ ಉಗಮ ಕುರಿತು ನಿಖರವಾಗಿ ಹೇಳುವ ಯಾವುದೇ ಆಧಾರಗಳು ಈವರೆಗೆ ಲಭ್ಯವಿಲ್ಲವಾದರೂ ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿ ಈ ತರಹದ ಸಾಹಿತ್ಯ ವಿಪುಲವಾಗಿ ದೊರೆಯುವುದರಿಂದ ಅದು ಅಲ್ಲಿಂದಲೇ ಉಗಮಿಸಿರಬಹುದೆಂದು ಊಹಿಸಲಾಗಿದೆ. ಇನ್ನೊಂದು ತಿಳುವಳಿಕೆಯ ಪ್ರಕಾರ ಪೇಶ್ವೆಯವರು ಯುದ್ಧ ಸಮಯದಲ್ಲಿ ಸೈನಿಕರಿಗೆ ಹುರುಪು-ಹುಮ್ಮಸ್ಸು ನೀಡುವುದಕ್ಕಾಗಿ ಹೇಳಿಸುತ್ತಿದ್ದ ಪೋವಾಡ ಲಾವಣಿಗಳು ಕನ್ನಡ ಲಾವಣಿ ರಚನೆಗೆ ಪ್ರೇರಣೆಯಾದವು."೨[2] ಎಂದು ಅಭಿಪ್ರಾಯಪಡಲಾಗಿದೆ.

ಆದರೆ ಲಾವಣಿ ಮೂಲವನ್ನು ಕನ್ನಡದಲ್ಲಿಯೇ ಕಂಡುಕೊಳ್ಳಲು ಯತ್ನಿಸಲಾಗಿದೆ. ಗುಣಚಂದ್ರನು (ಕ್ರಿ.ಶ. ೧೬೫೦) ತನ್ನ ಛಂದಸ್ಸಾರದಲ್ಲಿ 'ಲಾವಳಿ' ವ್ಯಾಖ್ಯೆಯನ್ನು ನೀಡಿದ್ದಾನೆ.

*ಲಘುಗಳ ಮಿಳಿತವ ಮಾಡಿ*

*ಕೊನೆಯಲಿ ಗುರುಗಳ ಹೂಡಿ*

*ಅರ್ಥವ ಸಾರವ ನೋಡಿ*

*ಪ್ರಾಸವ ಕೊನೆಯಲಿ ಕೂಡಿ*

*ಪಾದಮಿತಿಯ ಬೀಸಾಡಿ*

*'ಲಾವಳಿ' ಕೃತಿಗಳ ಪಾಡಿ*

ಇದರ ಪ್ರಕಾರ 'ಲಾವಳಿ' ಪದದಿಂದ 'ಲಾವಣಿ' ಹುಟ್ಟಿದೆಯೆಂದು ಭಾವಿಸಲಾಗುತ್ತಿದೆ. ಲಾವಣಿಯ ಇತಿಹಾಸವನ್ನು ಏಳನೆಯ ಶತಮಾನದಷ್ಟು ಹಿಂದಕ್ಕೆ ಒಯ್ಯಲಾಗುತ್ತದೆ. ಕಾವ್ಯಾವಲೋಕನದಲ್ಲಿ ಬರುವ ಬಾಜನಗಬ್ಬವು ಇಂದಿನ ಲಾವಣಿಯಾಗಿರಬೇಕೆಂದು ತರ್ಕಿಸಲಾಗಿದೆ. ಲಭ್ಯ ಐತಿಹಾಸಿಕ ಲಾವಣಿಗಳ ಪ್ರಕಾರ ಲೆಕ್ಕ ಹಾಕಿದರೆ ಕನ್ನಡ ಲಾವಣಿಗೆ ಮುನ್ನೂರು ವರ್ಷಗಳ ಇತಿಹಾಸವಿದೆಯೆಂದು ಹೇಳಬಹುದು.

ಲಾವಣಿಗೆ 'ಶಾವಿರಿಕಿ' ಎಂದು ಕರೆಯಲಾಗಿದೆ. ಇದು ಪರ್ಶಿಯನ್ ಮೂಲದಿಂದ ಬಂದ ಶಬ್ದವಾಗಿದೆ. 'ಶಾವಿರಿಕಿ' ಎಂದರೆ ವೀರಗೀತಗಳು. ಲಾವಣಿಗಳಲ್ಲಿ ಸಾಕಷ್ಟು ವೀರಗೀತಗಳಿರುವುದನ್ನು ಕಾಣಬಹುದು. ಆದರೆ ಶಾವಿರಿಕಿ ಅಷ್ಟಾಗಿ ಬಳಕೆಯಲ್ಲಿಲ್ಲ. ಲಾವಣಿಗಳನ್ನು ಹಾಡುವಾಗ ಚರ್ಮದಿಂದ ತಯಾರಾದ ದಪ್ಪುವಾದ್ಯ ಬಳಸುವುದರಿಂದ ಇದನ್ನು 'ದಪ್ಪಿನಪದ'ವೆಂದೂ ಕೆಲವೆಡೆ ಕರೆಯಲಾಗುತ್ತದೆ. ಲಾವಣಿಗಳನ್ನು ಹಾಡುವಾಗ ಪ್ರತಿ ಚರಣಕ್ಕೊಮ್ಮೆ 'ಗೀಯಾಗೀಯಾಗೀ' ಅಥವಾ 'ಜೀಯಾಜೀಜೀ' ಎಂಬ ಸೊಲ್ಲು ಹೇಳುವುದರಿಂದ ಇವುಗಳನ್ನು ಗೀಗೀಪದ ಅಥವಾ ಜೀಪದಗಳೆಂದೂ ಕರೆಯುವರು. ಲಾವಣಿಗಳಲ್ಲಿ ಹರದೇಶಿ-ನಾಗೇಶಿ, ಕಲ್ಗಿ-ತುರಾಯಿ, ಸವಾಲ್-ಜವಾಬ್, ತೋಡಿ-ತೋಡಿ ಎಂಬ ಸಂಪ್ರದಾಯಗಳಿವೆ. ಇವೆಲ್ಲ ಒಂದೇ ಆಗಿದ್ದು ಶಿವ-ಶಕ್ತಿ ಆರಾಧಕರ ಪಂಗಡಗಳಾಗಿವೆ. ಇವುಗಳನ್ನು ಸ್ವತಂತ್ರ ಪ್ರಕಾರಗಳೆಂದು ಪರಿಗಣಿಸಲಾಗದು. ಸಂವಾದ ರೂಪದಲ್ಲಿರುವ ಈ ಲಾವಣಿಗಳು ಜನಾಕರ್ಷಣೆಗಾಗಿ ಜನ್ಮ ತಳೆದಿದ್ದು ಮೂಲ ಉದ್ದೇಶದಲ್ಲಿಯೂ ಬದಲಾಗಿವೆ. ಲಾವಣಿ ಮತ್ತು ಗೀಗೀ ಪದಗಳಿರುವ ಸಂಬಂಧ ಮತ್ತು ವ್ಯತ್ಯಾಸಗಳನ್ನು ಕುರಿತು ಈ ಕೆಳಗಿನ ವಿದ್ವಾಂಸರ ಅಭಿಪ್ರಾಯಗಳೊಂದಿಗೆ ಪರಿಶೀಲಿಸೋಣ.

"ಜನರಂಜನೆ ಮತ್ತು ಹೆಚ್ಚಿನ ಪ್ರಚಾರಕ್ಕಾಗಿ ಲಾವಣಿಯು ಬರುಬರುತ್ತಾ ಗೀಗೀ ಸಂಪ್ರದಾಯ ಸ್ವರೂಪಕ್ಕೆ ತಿರುಗಿರಬೇಕೆನಿಸುತ್ತದೆ. ಹೀಗಾಗಿ ಇತ್ತೀಚೆಗಂತೂ ಉತ್ತರ ಕರ್ನಾಟಕದಲ್ಲಿ ಲಾವಣಿಕಾರರಿಗೂ, ಗೀಗೀಯವರಿಗೂ ಯಾವುದೇ ರೀತಿಯ ಅಂತರವೇ ಇಲ್ಲವೆನ್ನುವಷ್ಟು ಏಕರೂಪತೆಯನ್ನು ಸಾಧಿಸಿದೆ. ಹಾಡಿನ ವಸ್ತು ವಿಶೇಷದಲ್ಲಿ ಅಷ್ಟೇ. ಆದರೆ ಕಂಡು ಬರುವುದಷ್ಟೇ ಅಂತರ, ಗೀಗೀ ಹಿಮ್ಮೇಳದವರು ಪಲ್ಲವಿಗೊಮ್ಮೆ "ಗೀಯಾಗೀಯಾಗ" ಇಲ್ಲವೆ "ಜೀಜೀಜೀ" ಎಂದು ಹೇಳಿದರೆ, ಲಾವಣಿಯ ಹಿಮ್ಮೇಳದವರು ಹಾಡಿನ ಪಲ್ಲವಿಯ ಸಾಲುಗಳನ್ನೇ ಪುನರಾವೃತ್ತಿ ಮಾಡುತ್ತಾರೆ. ಸಂದರ್ಭಸಿಕ್ಕಾಗ ಗೀಗೀಯವರಂತೆ ಅವರೂ ವಿಡಂಬನಾತ್ಮಕ ಬೆರಕೆಯ ಮಾತುಗಳನ್ನು ನಡುನಡುವೆ ಸೇರಿಸಿ ಕೇಳುಗರನ್ನು ರಂಜಿಸುತ್ತಾರೆ. ಆದರೆ ಇಲ್ಲಿಯ ಎರಡೂ ಸಂಪ್ರದಾಯದವರೂ ದಪ್ಪು ವಾದ್ಯವನ್ನೇ ತಮ್ಮ ಹಾಡಿನ ಹಿನ್ನೆಲೆಯಲ್ಲಿ ಬಳಸುತ್ತಾರೆಂಬುದು ಮಹತ್ವದ್ದಾಗಿದೆ." (ಸೋಮಶೇಖರ ಇಮ್ರಾಪುರ, ಜಾನಪದ ವ್ಯಾಸಂಗ, ಪುಟ-೫೧).

"ಕಲಾಕಾರನ ಬುದ್ಧಿ ಯಾವಾಗಲೂ ಹೊಸದನ್ನು ಸುಲಭವಾದುದನ್ನು ಹುಡುಕುತ್ತಲೇ ಇರುತ್ತದೆ. ಲಾವಣಿ ಲಯಕ್ಕೆ ಒಗ್ಗುವ ವಾದ್ಯಗಳನ್ನು ಹುಡುಕುವುದರ ಜೊತೆಗೆ ಹಿಮ್ಮೇಳ ಹೊಂದಿದ್ದರೆ ಒಳಿತೆಂದು ಅವನ ಬುದ್ಧಿ ಕಂಡುಕೊಂಡಿರಬೇಕು. ಅಂದೇ ಲಾವಣಿಯ ವಿಶಿಷ್ಟವಾದ ಗೀಗೀ ಪದಗಳು ಹೊರಬಂದವು. ಮುಮ್ಮೇಳದ ಲಾವಣಿ ಹಾಡುಗಾರನಿಗೆ ಇದರಿಂದ ಶ್ರಮದ ಸೌಕರ್ಯ, ಗೇಯತೆಯ ಸೌಲಭ್ಯ ಒದಗಿಬಂದಿತು. ಹಾಡುಗಾರನ ಕೈಯಲ್ಲಿ ತಾಳ, ತುಂತುಣಿ ನುಡಿಯತೊಡಗಿದವು. ಹಾಡುಗಾರ ಒಂದೊಂದು ನುಡಿ ಹಾಡಿ ನಿಂತೊಡನೆ ಹಿಮ್ಮೇಳದವರು ಹಾಡಿನ ಪಲ್ಲವನ್ನೋ ಹಾಡುಗಾರ ಅಂದುದನ್ನೋ ಹಾಡುತ್ತಾ ಮುದ್ರಿಕೆಯಾಗಿ ಗೀಗೀ ಮೇಳದ

ವೈಶಿಷ್ಟ್ಯವಾಯಿತು ..... ಹರದೇಶಿ ನಾಗೇಶಿ ಲಾವಣಿಗಳನ್ನು ಗೀಗೀ ಮೇಳದವರು ಹೇಳಬಲ್ಲರು ..... ಒಟ್ಟಿನಲ್ಲಿ ಗೀಗೀ ಮೇಳದವರು ಎಲ್ಲ ತರಹದ ಲಾವಣಿಗಳನ್ನು ಹಾಡಬಲ್ಲರು." (ಜಾನಪದ ಸಾಹಿತ್ಯ ದರ್ಶನ-೫, ಪುಟ-೧೫೭).

"ಲಾವಣಿಗೂ ಮತ್ತು ಗೀಗೀ ಪದಗಳಿಗೂ ಇರುವ ಅಂತರ ಗೋಷ್ಠಿ ವಿಧಾನದಲ್ಲಿಯೇ ಹೊರತು ರಚನಾ ಶಿಲ್ಪದಲ್ಲಲ್ಲ. ಮೂಲತಃ ಲಾವಣಿ ಕವಿ ಒಂದು ಹಾಡನ್ನು ಒಬ್ಬನೇ ಹಾಡಬೇಕು ಅಥವಾ ಮೇಳದವರೇ ಹಾಡಬೇಕು ಎಂದು ನಿಶ್ಚಯಿಸಿ ಕಟ್ಟುವುದಿಲ್ಲ. ಒಂದು ಲಾವಣಿ ಪದ ನಿರ್ಮಾಣಗೊಂಡ ಮೇಲೆ ಅದನ್ನು ಒಬ್ಬನೇ ನಿಂತು ಹಾಡಬಹುದು ಅಥವಾ ಮೇಳಗೂಡಿಯೂ ಹಾಡಬಹುದು. ಒಬ್ಬನೇ ನಿಂತು ಹಾಡುವಾಗ 'ಬಯಲು ಲಾವಣಿ' ಎನಿಸಿಕೊಳ್ಳುತ್ತದೆ. ಮೇಳಗೂಡಿ ಹಾಡುವಾಗ ಅದೇ 'ಮೇಳ ಲಾವಣಿ'ಯಾಗುತ್ತದೆ. ಈ ಮೇಳಲಾವಣಿಗೆ 'ಗೀಗೀಪದ', 'ಶಾವಿರಕಿ ಹಾಡು', 'ಜೀಜೀಪದ' ಎಂಬ ಪರ್ಯಾಯ ನಾಮಗಳುಂಟು." (ಡಾ. ಶ್ರೀರಾಮ ಇಟ್ಟಣ್ಣನವರ ಲಾವಣಿ, ಪುಟ-೨೭).

"ಯಾವ ಬಗೆಯ ಲಾವಣಿಯೇ ಇರಲಿ; ಅದರ ಜೀವಜೀವಾಳ ಉತ್ಸಾಹ. ಓಟ ನಿಟ್ಟೋಟ. ರಾಗಲಯಕ್ಕಿಂತಲೂ ತಾಳಲಯವೇ ಅದರಲ್ಲಿ ಪ್ರಾಧಾನ್ಯ. ಏರು ಇಳುವು ವೈವಿಧ್ಯಧಾಟಿಯ ಕುರುಹು. ಲಾವಣಿಯ ಭಾಷೆ ಜನಸಾಮಾನ್ಯರಿಗೂ ತಿಳಿಯುವಂತಹದು; ಸಂಸ್ಕೃತದ ಪ್ರಾಬಲ್ಯ ಇಲ್ಲವೆ ಇಲ್ಲ. ಅಂತ್ಯ ಪ್ರಾಸ ಮಾತ್ರ ಬೇಕೇಬೇಕು. ಈ ಹೃದಯಂಗಮ ಸಾಹಿತ್ಯಕ್ಕೆ ಮನಸೋತ ಗ್ರಾಮೀಣರು ಇಂದಿಗೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ಗರತಿಗೆ ತ್ರಿಪದಿ ಒಲಿದಂತೆ ಪುರುಷರಿಗೆ ಲಾವಣಿ ಸೋತುಬಂದಿದೆ. ಅಷ್ಟು ಹೃದಯಂಗಮವಾಗಿದೆ ಕನ್ನಡ ಲಾವಣಿ ಸಾಹಿತ್ಯ." (ಡಾ. ಎಂ.ಎಸ್. ಸುಂಕಾಪುರ : ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ - ಮುನ್ನುಡಿ - ೪॥).

**ಲಾವಣಿ ಲಕ್ಷಣ :**

ಲಾವಣಿ ಜನಪದ ಸಾಹಿತ್ಯದ ಒಂದು ಕಾವ್ಯ ಪ್ರಕಾರವಾಗಿದ್ದರೂ ಗೇಯತೆಯೇ ಅದರ ಲಕ್ಷಣವಾಗಿದೆ. ರಗಳೆಯ ಹಾಗೆ ಇದು ಛಂದೋಪ್ರಕಾರವೂ ಹೌದು. ಮೂಲತಃ ನಿರೂಪಣಾತ್ಮಕ ವಾದುದು. ಹಾಗಾಗಿ ಕಥೆ, ತತ್ವ, ಆಧ್ಯಾತ್ಮ, ಅನುಭಾವ, ಶೃಂಗಾರ, ಘಟನೆ, ಮನರಂಜನೆ, ಹಾಸ್ಯ ಇನ್ನೂ ಮುಂತಾದ ವಸ್ತುಗಳನ್ನು ಒಳಗೊಂಡಿರುತ್ತದೆ. ಲಾವಣಿಗೆ ಇಂಥದೇ ವಸ್ತು ಇರಬೇಕು ಎಂಬ ಕಟ್ಟುಪಾಡುಗಳಿಲ್ಲ. ಪೌರಾಣಿಕ, ಐತಿಹಾಸಿಕ, ಚಾರಿತ್ರಿಕ, ಸಾಮಾಜಿಕ, ರಾಜಕೀಯ, ಆಧ್ಯಾತ್ಮ, ವಿಜ್ಞಾನಕ್ಕೆ ಸಂಬಂಧಿಸಿದ ವಸ್ತುಗಳನ್ನು ಲಾವಣಿಗಳು ಒಳಗೊಂಡಿವೆ. ವೈವಿಧ್ಯಮಯ ವಸ್ತುವನ್ನಾಧರಿಸಿ ಲಾವಣಿಗಳು ರಚಿತವಾಗಿರುವುದರಿಂದ ಅದರ ಹರವು ಬಲುವಿಸ್ತಾರವಾದುದಾಗಿದೆ. ಹಳ್ಳಿಗರು ಈ ಲಾವಣಿಗಳನ್ನು ರಚಿಸಿರುವರಾದರೂ ಅವುಗಳಲ್ಲಿ ಪ್ರೌಢ ಸಾಹಿತ್ಯದ ಒಳ್ಳೆಯ ಲಕ್ಷಣಗಳನ್ನು ಕಾಣಬಹುದು. ಹಾಗೆಯೇ ವಸ್ತುವಿಗೆ ಅನುಸಾರವಾಗಿ ಶೃಂಗಾರ, ವೀರ, ಕರುಣ, ಹಾಸ್ಯರಸಗಳನ್ನು ಕಾಣಬಹುದು. ಹಲವಾರು ಲಾವಣಿಗಳು ಚರಿತ್ರೆ ನಿರ್ಮಾಣದಲ್ಲಿ ಸಹಕಾರಿಯಾಗಿವೆ.

ಲಾವಣಿಗಳು ಜನಪದ ಸಾಹಿತ್ಯಕ್ಕೆ ಸೇರಿದ್ದರೂ ಅವು ವೈಯಕ್ತಿಕ ಸೃಷ್ಟಿಗಳಾಗಿವೆ. "ಲಾವಣಿಕಾರರು ಅನೇಕ ಪರಿಕರಗಳ ಮುಖಾಂತರ ಒಬ್ಬನೇ ಕಾವ್ಯ ನಿರ್ಮಿಸುತ್ತಾನೆ. ಲಾವಣಿ ನಿರ್ಮಾಣಗೊಂಡರೆ ಮುಗಿಯಲಿಲ್ಲ ಅಥವಾ ಕೇವಲ ವಾಚನ ಮಾಡಿದರೆ ಏನನ್ನೂ ಸಾಧಿಸಿದಂತಾಗಲಿಲ್ಲ. ಇದು ಕೃತಾರ್ಥವಾಗುವುದು ಒಬ್ಬನ ಬಾಯಲ್ಲಿ ಹಾಡಾಗಿ ನಿಂತಾಗ. ಲಾವಣಿಯ ಒಂದು ಪ್ರಮುಖವಾದ ಲಕ್ಷಣವೆಂದರೆ ಇದು ಹಾಡುಗಬ್ಬ. ಕಂಠದಿಂದ ಕಂಠಕ್ಕೆ ಊರಿನಿಂದ ಊರಿಗೆ ಪ್ರಸಾರವಾಗುತ್ತ ಹೋದಾಗ ಹುಟ್ಟಿದ್ದಕ್ಕೆ ಸಾರ್ಥಕ"೩[3] ಲಾವಣಿಗೂ ಜನಪದ ಸಾಹಿತ್ಯದ ಇತರ ಕಾವ್ಯ ಪ್ರಕಾರಗಳಿಗೂ ಬಹಳ ವ್ಯತ್ಯಾಸವಿದೆ.

**ಲಾವಣಿಯ ಶಿಲ್ಪ**

ಪ್ರತಿಯೊಂದು ಹಾಡಿಗೂ ತನ್ನದೇ ಆದ ಶಿಲ್ಪವಿರುತ್ತದೆ. ಲಾವಣಿಯ ಶಿಲ್ಪವು ಉಳಿದ ಹಾಡುಗಳಿಗಿಂತ ಭಿನ್ನವಾಗಿರುತ್ತದೆ. ಲಾವಣಿಯಲ್ಲಿ ಸಾಹಿತ್ಯಕ್ಕಿಂತ ಹಾಡುಗಾರಿಕೆಯೇ ಮುಖ್ಯವಾಗಿರುತ್ತದೆ. ಹಾಡುಗಾರಿಕೆ ಸಾಗಿದಂತೆಲ್ಲ ಹಾಡಿನ ಛಂದಸ್ಸು ಬದಲಾಗುತ್ತದೆ. ಹಾಡಿನ

ಏರಿಳಿತಗಳು ಕೇಳುಗರ ಮನವನ್ನು ತಟ್ಟುತ್ತವೆ. ಲಾವಣಿಯ ಶಿಲ್ಪ ಅಥವಾ ಅದರ ಮೈಕಟ್ಟಿನಲ್ಲಿ ಪಲ್ಲ, ಚೌಕ, ನುಡಿ, ಚಾಲ, ಶ್ಲೋಕ, ದುಡಕಿ, ಕೂಡುಪಲ್ಲ, ಅಗಮ ಎಂಬ ಅಂಗಾಂಗಗಳಿವೆ. ಅವು ಹಂತಹಂತವಾಗಿ ಬರುತ್ತವೆ. ಇವೆಲ್ಲವೂ ಎಲ್ಲಾ ಲಾವಣಿಗಳಲ್ಲಿ ಇರಬೇಕೆಂಬ ನಿಯಮವಿಲ್ಲ. ಅದು ರಚನೆಕಾರರನ್ನು ಹಾಡುವ ವಸ್ತುವನ್ನು ಅವಲಂಬಿಸಿರುತ್ತದೆ.

**ಪಲ್ಲ :** ಲಾವಣಿಯ ಪಲ್ಲವು ಸಾಮಾನ್ಯವಾಗಿ ಕೇಳುಗರನ್ನು ಕುರಿತಾಗಿರುತ್ತದೆ. ಸಾವಿರಾರು ಜನರು ಎದುರಿಗೆ ಹಾಡು ಕೇಳಲು ಕುಳಿತಿರುತ್ತಾರೆ. ಅವರಿಗೆ ವಿನಯದಿಂದ ವಂದಿಸಿ ಇಡೀ ಜನರ ಗಮನವನ್ನು ತನ್ನ ಕಡೆಗೆ ಕೇಂದ್ರೀಕರಿಸಿಕೊಳ್ಳುವುದು ಪಲ್ಲದ ಉದ್ದೇಶವಾಗಿರುತ್ತದೆ. ಪಲ್ಲದಲ್ಲಿಯೇ ತಾನು ಯಾವ ಹಾಡು ಹಾಡುತ್ತೇನೆಂಬ ಸೂಚನೆಯನ್ನು ನೀಡುತ್ತಾನೆ.

***ಚಿತ್ತಗೊಟ್ಟು ಕೇಳಿರಣ್ಣ ಕಿತ್ತೂರ ನಾಡಿನ ಸುದ್ದಿ***
***ಕತ್ತಿ ಹಿರದ ನಿಂತ್ತಿದಾನ ಲಡಾಯಕ***
***ಸಂಗೊಳ್ಳಿ ರಾಯಣ್ಣನಂಥ ಬಂಟ ಇದ್ದರಿರಬೇಕ***

ಪ್ರತಿ ಚೌಕನ್ನು ಮುಗಿಸಿ ಪಲ್ಲವನ್ನು ಮತ್ತೆ ಮತ್ತೆ ಹೇಳುವುದರಿಂದ ಕೇಳುಗರನ್ನು ಜಾಗೃತಗೊಳಿಸುವ ಉದ್ದೇಶ ಇದಾಗಿರುತ್ತದೆ.

**ಚೌಕ :** ಪಲ್ಲದ ತರುವಾಯ ಬರುವುದೇ ಚೌಕ. ಒಂದೊಂದು ಲಾವಣಿ ಐದರಿಂದ ಏಳೆಂಟು ಚೌಕಗಳವರೆಗೂ ಹಬ್ಬಿರುತ್ತದೆ. ಕಡಿಮೆಯೆಂದರೆ ಮೂರು ಚೌಕಗಳಿರುತ್ತವೆ. ಚೌಕಗಳಲ್ಲಿ ಕಥೆ ಅಥವಾ ವಿಷಯ ಪ್ರತಿಪಾದನೆಗಳಿರುತ್ತವೆ.

**ನುಡಿ :** ಇದು ಚೌಕಿನ ಮುಖ್ಯ ಭಾಗವಾಗಿದ್ದು ಪಲ್ಲದ ಪುನರಾವರ್ತನೆಯೂ ಆಗಿರುತ್ತದೆ.

**ಚಾಲ :** ಲಾವಣಿಗೆ ಮೆರಗು ಬರುವುದೇ ಈ ಚಾಲದಿಂದ. ಇದನ್ನು 'ಇಳವು' ಎಂದೂ ಕರೆಯುತ್ತಾರೆ. ಇದು ಚೌಕದ ತರುವಾಯ ಬರುತ್ತದೆ. ಇದರ ಚರಣಗಳು ಚಿಕ್ಕದಾಗಿದ್ದು ಪ್ರಾಸಯುಕ್ತವಾಗಿರುತ್ತವೆ. ಹಾಡಿನ ಏಕತಾನತೆಯನ್ನು ತಪ್ಪಿಸಿ ವೈವಿಧ್ಯತೆಯನ್ನುಂಟು ಮಾಡುವುದೇ ಚಾಲದ ಉದ್ದೇಶವಾಗಿರುತ್ತದೆ. ಸನ್ನಿವೇಶವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸಲು ಚಾಲವನ್ನು ಬಳಸುತ್ತಾರೆ.

**ಶ್ಲೋಕ :** ಇದು ಪದ್ಯಗಳಲ್ಲಿಯೇ ಗದ್ಯರೂಪದಲ್ಲಿ ನಿರೂಪಿಸಿದ ವಿಧಾನವಾಗಿರುತ್ತದೆ. ಇಲ್ಲಿ ಸಂವಾದ ವಿಧಾನವಿರುವುದರಿಂದ ನಿಧಾನವಾಗಿ ಬರುತ್ತದೆ. ಇಲ್ಲಿ ಕಾವ್ಯಾಂಶವಿರುವುದಿಲ್ಲ. ಸಂಸ್ಕೃತ ಶ್ಲೋಕಕ್ಕೂ ಇದಕ್ಕೂ ಸಂಬಂಧವಿಲ್ಲ.

**ದುಡಕಿ :** ಇದು ನಿಯತವಾಗಿ ಬರುವುದಿಲ್ಲ. ಹಾಡು ರಂಗೇರಿದಾಗ ದುಡಕಿ ಬರುತ್ತದೆ. ಇದರ ಹೆಸರೇ ಸೂಚಿಸುವಂತೆ ಇದು ತೀವ್ರಗತಿಯಲ್ಲಿರುತ್ತದೆ. ಪ್ರಾಸಾನುಪ್ರಾಸಗಳ ಶಬ್ದಗಳು ಪುನರಾವರ್ತನೆಯಾದಾಗ ಕೇಳುಗರು ಮೈಮರೆತು ಬಿಡುತ್ತಾರೆ.

**ಕೂಡುಪಲ್ಲ :** ಕೂಡುಪಲ್ಲವು ಚೌಕಿನ ಕೊನೆಯ ಭಾಗವಾಗಿರುತ್ತದೆ. ಚೌಕದ ಕೊನೆಯ ಚರಣಗಳು ಪಲ್ಲಕ್ಕೆ ಹೋಗಿ ಕೂಡುವುದರಿಂದ 'ಕೂಡುಪಲ್ಲ' ಎಂದು ಕರೆಯುತ್ತಾರೆ. ಚಾಲ ಇಳುವಿನಲ್ಲಿದ್ದರೆ ಕೂಡುಪಲ್ಲ 'ಏರು'ವಿನಲ್ಲಿರುತ್ತದೆ. ಆದುದರಿಂದ ಇದಕ್ಕೆ ಏರು ಎಂಬ ಹೆಸರಿದೆ. ಕೂಡುಪಲ್ಲ ಹಾಡಿನ ಮೇಳಕ್ಕೆ ವಿಶ್ರಾಂತಿಯ ಸಂದರ್ಭವೂ ಆಗಿರುತ್ತದೆ.

**ಅಗಮ :** ಇದು ಹಾಡಿಗೆ ಸಂಬಂಧವಿಲ್ಲವಾದರೂ ಹಾಡುವಾಗ ಅಥವಾ ಹಾಡು ಕಟ್ಟಿದವರ ವಿವರಣೆಯಿರುತ್ತದೆ. ಹೆಸರು, ಊರು, ಗುರು, ಮೇಳಗಾರರು, ಹಾಡಿನ ಪಾಂಡಿತ್ಯ, ಕೌಶಲ್ಯ ಇತ್ಯಾದಿಗಳನ್ನು ವಿವರಿಸಲಾಗುತ್ತದೆ. ಇದು ಲಾವಣಿಯ ಆಕರವಾಗಿರುತ್ತದೆ.

**ಲಾವಣಿ ಪ್ರಕಾರಗಳು :**

ಲಾವಣಿ ಒಂದೇ ಶರೀರವಾಗಿ ಹುಟ್ಟಿದರೂ ಸಹ ಅದು ಎರಡು ರೀತಿಯಲ್ಲಿ ಪ್ರದರ್ಶನವಾಗುತ್ತದೆ. ಒಂದು ಬಯಲು ಲಾವಣಿ. ಇನ್ನೊಂದು ಮೇಳ ಲಾವಣಿ.

**ಬಯಲು ಲಾವಣಿ :** ಬಯಲಿನಲ್ಲಿ ಜನರನ್ನು ಕೂಡಿಸಿ ಒಬ್ಬನೇ ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಕೈಯಲ್ಲಿ ಚಟಿಕೆ ಹಿಡಿದು, ಟೊಂಕಕ್ಕೆ ಸೆಲ್ಲೆ ಸುತ್ತಿ ತಾನೇ ನುಡಿಸುವ ತಾಳಕ್ಕೆ ತಕ್ಕಂತೆ ಕುಣಿಯುವ ರೀತಿಯೇ ಬಯಲು ಲಾವಣಿ ಅಥವಾ ಒಂಟಿ ಲಾವಣಿ ಎಂದು ಕರೆಯುತ್ತಾರೆ. ಇದು ದಾಸರಿಂದ ಪ್ರಭಾವಿತವಾದುದೆಂದು ಭಾವಿಸಲಾಗುತ್ತದೆ. ಇದು ತಾಸುಗಟ್ಟಲೇ ಒಬ್ಬನೇ ಹಾಡಲು ತ್ರಾಸಾದುದರಿಂದ ದಪ್ಪನ್ನು ಬಳಸಿ ಹಾಡುವ ಪದ್ಧತಿ ಬಂದಿತಂತೆ.

**ಮೇಳ ಲಾವಣಿ :** ಒಬ್ಬನೇ ಹಾಡುವ ಬದಲಾಗಿ ಕನಿಷ್ಠ ಮೂವರು ಕೂಡಿ ಮೇಳವಾಗಿ ಹಾಡುವುದರಿಂದ ಮೇಳಲಾವಣಿ ಎಂಬ ಹೆಸರು ಬಂದಿದೆ. ಇವರೆಲ್ಲ ದೈನಂದಿನ ವೇಷದಲ್ಲಿರುತ್ತಾರೆ. ಈ ಮೇಳದಲ್ಲಿ ದಪ್ಪು, ತುಂತುಣಿ, ತಾಳಗಳನ್ನು ಬಳಸಲಾಗುತ್ತದೆ. ಮುಖ್ಯ ಹಾಡುಗಾರ ದಪ್ಪು ಹಿಡಿದಿರುತ್ತಾನೆ. ಉಳಿದಿಬ್ಬರು ತುಂತುಣಿ ಮತ್ತು ತಾಳಗಳನ್ನು ಹಿಡಿದಿದ್ದು ಹಿಮ್ಮೇಳದವರಾಗಿರುತ್ತಾರೆ. ಮುಖ್ಯ ಹಾಡುಗಾರ ದಪ್ಪು ಬಡಿದು ಕೇಳುಗರನ್ನು ತನ್ನತ್ತ ಆಕರ್ಷಿಸಿಕೊಂಡು ಹಾಡಿಗೆ ಪೀಠಿಕೆ ಹಾಕುತ್ತಾನೆ. ಹಿಮ್ಮೇಳದವರು ಹಾಡುಗಾರನ ದನಿಗೆ ದನಿಗೂಡಿಸುತ್ತ ಹಾಡಿನ ಮಧ್ಯೆಮಧ್ಯೆ “ಹೇಳಪ್ಪಾ … ಮತ್ತೇನಪ್ಪಾ ….. ಮುಂದೇನಾತಪಾ …..'' ಎಂಬ ಪ್ರಶ್ನೆ ಕೇಳಿ ಹಾಡಿಗೆ ರಂಜನೆಯನ್ನುಂಟು ಮಾಡುತ್ತಾರೆ. ಪ್ರತಿನುಡಿ ಮುಗಿಯುತ್ತಲೇ “ಹರೇಗೀಯ ಗಾಗೀಯ ಗೀಗೀಗೀಗೀ …..” ಅಥವಾ “ಜೀಯಾಜೀ ಜೀಜೀ …” ಎನ್ನುವ ಸೊಲ್ಲನ್ನು ಹೊರಡಿಸುತ್ತಾರೆ. ಹಾಡಿನುದ್ದಕ್ಕೂ ಈ ಸೊಲ್ಲು ಇರುತ್ತದೆ. ಮೇಳ ಲಾವಣಿಕಾರಾಗಲಿ, ಒಂಟಿ ಲಾವಣಿಕಾರರಾಗಲಿ ಅವರು ವೃತ್ತಿಗಾಯಕರಲ್ಲ. ಅವರಿಗೆ ಅದೊಂದು ಪ್ರವೃತ್ತಿ. ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳ ಸಂದರ್ಭದಲ್ಲಿ ಒಳ್ಳೆಯ ಹಾಡುಗಾರರನ್ನು ಅಮಂತ್ರಿಸಿ ಹಾಡಿಸಿ ಖುಷಿಯಿಂದ ಸಂಭಾವನೆ ಕೊಡುವ ಪದ್ಧತಿಯಿದೆ.

ಮೇಳ ಲಾವಣಿಯ ಇನ್ನೊಂದು ವೈಶಿಷ್ಟ್ಯವೆಂದರೆ ಶೃಂಗಾರದ ಹಾಡುಗಳನ್ನು ಹೆಣ್ಣು ಹೆಚ್ಚು ಗಂಡು ಹೆಚ್ಚು ಎಂಬ ವಾದ ಮಾಡುವ ಎರಡು ಪಂಗಡಗಳಲ್ಲಿ ಸ್ಪರ್ಧೆಯನ್ನೇರ್ಪಡಿಸುವುದಾಗಿದೆ. ಇದು ಬರುಬರುತ್ತಾ ಪರಸ್ಪರ ಪಂಗಡಗಳು ಒಬ್ಬರನ್ನೊಬ್ಬರು ಟೀಕೆ ಮಾಡುವ ಮತ್ತು ಸ್ವಪ್ರತಿಷ್ಠೆ ಹೆಚ್ಚಿಸುವ ಮಟ್ಟಕ್ಕಿಳಿದು ಇದು ಸಾಲದೆಂಬಂತೆ ಹೆಣ್ಣು ಮಕ್ಕಳನ್ನು ಹಾಡಲು ವೇದಿಕೆಗೆ ಕರೆತಂದರು. ಪ್ರವೃತ್ತಿಯಾಗಿದ್ದ ಲಾವಣಿ ಹಾಡುಗಾರಿಕೆ ಮುಂದೆ ಕೆಲವರಿಗೆ ವೃತ್ತಿಯಾಯಿತು. ಹೆಣ್ಣು ಹೆಚ್ಚು, ಗಂಡು ಹೆಚ್ಚು ಎಂದು ವಾದಮಾಡುವ ಹಾಡುಗಳು ಹರದೇಶಿ-ನಾಗೇಶಿ ಎಂಬ ಹೆಸರಿನಲ್ಲಿ ಒಂದು ಸಂಪ್ರದಾಯವನ್ನೇ ಹುಟ್ಟುಹಾಕಿದವು. ಈ ಸಂಪ್ರದಾಯಕ್ಕೆ ಸವಾಲ್-ಜವಾಬ್, ತೋಡಿ-ತೋಡಿ ಎಂದೂ ಕರೆಯಲಾಗುತ್ತದೆ. ಈ ಸಂಪ್ರದಾಯದ ಹಾಡುಗಳ ಪ್ರತ್ಯೇಕ ಸಂಪುಟ ಹೊರಬರುವುದರಿಂದ ಅಂಥ ಲಾವಣಿಗಳನ್ನು ಈ ಸಂಪುಟದಲ್ಲಿ ಸೇರಿಸಿಲ್ಲ. ಈಚೆಗೆ ಹಳ್ಳಿಗಳು ಆಧುನಿಕತೆಗೆ ಒಳಗಾಗಿದ್ದು ಹಿಂದಿನ ಲಾವಣಿ ವೈಭವ ಈಗ ಕಂಡು ಬರುವುದಿಲ್ಲ.

**ಲಾವಣಿಗಳ ವರ್ಗೀಕರಣ**

ಲಾವಣಿಗಳನ್ನು ಎರಡು ರೀತಿಯಿಂದ ವರ್ಗೀಕರಿಸಲಾಗುತ್ತಿದೆ. ಒಂದು ಹಾಡುವ ಪದ್ಧತಿಯನ್ವಯವಾದರೆ, ಇನ್ನೊಂದು ವಸ್ತುವಿನ ದೃಷ್ಟಿಯಿಂದ ವರ್ಗೀಕರಿಸಲಾಗುತ್ತಿದೆ. ಹಾಡುವ ಪದ್ಧತಿಯ ಬಗೆಗೆ ಈಗಾಗಲೇ ನೋಡಲಾಗಿದೆ. ಈಗ ವಸ್ತುವನ್ನು ಆಧಾರವಾಗಿಟ್ಟುಕೊಂಡು ಲಾವಣಿಗಳ ವರ್ಗೀಕರಣಕ್ಕೆ ಕೈ ಹಾಕೋಣ. ಡಾ. ಹಾ.ಮಾ. ನಾಯಕರು ಲಾವಣಿಗಳನ್ನು ೧. ಪೌರಾಣಿಕ,

೨. ಚಾರಿತ್ರಿಕ, ೩. ವಾಸ್ತವಿಕ, ೪. ವಿಡಂಬನಾತ್ಮಕ, ೫. ಮಾಂತ್ರಿಕ ಎಂಬ ಐದು ವಿಭಾಗಗಳನ್ನು ಮಾಡಿದ್ದಾರೆ. ಈ ವರ್ಗೀಕರಣದಲ್ಲಿ ಹಲವಾರು ಕೊರತೆಗಳು ಮತ್ತು ಸಂದಿಗ್ಧತೆಗಳಿವೆ. ಕಾರಣ ಇದು ಸಮಂಜಸವಾದ ವರ್ಗೀಕರಣವಲ್ಲ.

ಡಾ. ಎಂ.ಎಸ್. ಸುಂಕಾಪುರವರು ಲಾವಣಿಗಳನ್ನು ವಸ್ತುವಿನ ದೃಷ್ಟಿಯಿಂದ ಶೃಂಗಾರ ಲಾವಣಿಗಳು, ವೀರ ಲಾವಣಿಗಳು, ಕಥಾನಕ ಲಾವಣಿಗಳು, ತತ್ವ-ನೀತಿ-ಲಾವಣಿಗಳು, ಸಂವಾದ ಲಾವಣಿಗಳು ಎಂದು ವರ್ಗೀಕರಿಸಿದ್ದಾರೆ. ಇದು ಸಹ ಪರಿಪೂರ್ಣ ವರ್ಗೀಕರಣವಾಗಲಾರದು.

ಡಾ. ಸಂಗಮೇಶ ಬಿರಾದಾರ ಅವರ ಪ್ರಕಾರ ೧. ಪೌರಾಣಿಕ, ೨. ಐತಿಹಾಸಿಕ, ೩. ಚಾರಿತ್ರಿಕ, ೪. ಸಾಮಾಜಿಕ (ಶೃಂಗಾರ ಪದ ವಿಡಂಬನೆ ನೀತಿಯುತ) ೫. ತಾತ್ವಿಕ (ಗರ್ಭಾವಳಿ, ನಿರಾಕಾರ) ಹೀಗೆ ವರ್ಗೀಕರಣ ಮಾಡಲಾಗಿದೆ. ಇದು ಸಹ ಮುಖ್ಯ ಪ್ರಕಾರದಲ್ಲಿ ಕೆಲ ಉಪಪ್ರಕಾರಗಳನ್ನು ಒಳಗೊಂಡಿದೆ. ಸ್ಪಷ್ಟವಾಗಿಲ್ಲವಾದ್ದರಿಂದ ಇದನ್ನೂ ಕೈಬಿಡಬೇಕಾಗುತ್ತದೆ.

ಡಾ. ಶ್ರೀರಾಮ ಇಟ್ಟಣ್ಣನವರ ನಿರೂಪಣಾತ್ಮಕ ಲಾವಣಿಗಳು ಮತ್ತು ಸಂವಾದಾತ್ಮಕ ಲಾವಣಿಗಳು ಎಂದು ಎರಡು ಪ್ರಮುಖ ವರ್ಗೀಕರಣ ಮಾಡಿದ್ದಾರೆ.

**ನಿರೂಪಾಣಾತ್ಮಕ ಲಾವಣಿಗಳು :**

೧.ಕಥನ ನಿರೂಪಣೆ
ಅ. ಪೌರಾಣಿಕ ಆ. ಚಾರಿತ್ರಿಕ ಇ. ಸಾಮಾಜಿಕ

೨.ರಸ ನಿರೂಪಣೆ
ಅ. ಶೃಂಗಾರ ಆ. ಹಾಸ್ಯ

೩.ತತ್ವ ನಿರೂಪಣೆ
ಅ. ಶಾಸ್ತ್ರ ಆ. ಅನುಭವ

**ಸಂವಾದಾತ್ಮಕ ಲಾವಣಿಗಳು**

೧. ಹರದೇಶಿ-ನಾಗೇಶಿ ೨. ಸವಾಲ್-ಜವಾಬ್ ೩. ತೋಡಿ-ತೋಡಿ

ಈ ಮೇಲಿನ ವಿಭಾಗ ಕ್ರಮವನ್ನು ಈ ಕೆಳಗಿನಂತೆ ರೇಖಿಸಲಾಗಿದೆ.೪[4]

| | | | | | | |
|---|---|---|---|---|---|---|
| ಲಾವಣಿಗಳು | | | | | | |
| ನಿರೂಪಣಾತ್ಮಕ | | | ಸಂವಾದಾತ್ಮಕ | | | |
| | | | ಹರದೇಶಿ-ನಾಗೇಶಿ | ಸವಾಲ್-ಜವಾಬ್ | ತೋಡಿ-ತೋಡಿ | |
| | | | ಕಥಾ ನಿರೂಪಣೆ | ರಸ ನಿರೂಪಣೆ | ತತ್ವ ನಿರೂಪಣೆ | |
| ಪೌರಾಣಿಕ | ಚಾರಿತ್ರಿಕ | ಸಾಮಾಜಿಕ | ಶೃಂಗಾರ | ಹಾಸ್ಯ | ಶಾಸ್ತ್ರ | ಅನುಭಾವ |

ಈ ವಿಭಾಗಕ್ರಮವನ್ನು ಒಪ್ಪಿಕೊಳ್ಳಬಹುದಾಗಿದೆ. ಆದರೆ ಸಮಗ್ರ ಲಾವಣಿ ಸಂಪಾದನೆ ಸಂದರ್ಭದಲ್ಲಿ ಇದು ಸ್ವಲ್ಪ ಸಂಕೀರ್ಣತೆಗೆ ಎಡೆಮಾಡಿಕೊಟ್ಟಿದೆ. ಆದುದರಿಂದ ಈ ಹಿಂದಿನ ಲಾವಣಿ ಸಂಪಾದಕರು ಮಾಡಿಕೊಂಡ ವರ್ಗೀಕರಣವನ್ನು ನಾವು

ಆಧಾರವಾಗಿಟ್ಟುಕೊಂಡು, ಅದರಂತೆ ಲಾವಣಿಗಳನ್ನು ವರ್ಗೀಕರಿಸಿದರೆ ವರ್ಗೀಕರಣದ ಪಟ್ಟಿ ದೊಡ್ಡದಾಗುತ್ತದೆ. ಈ ಸಂಪುಟ ಸಂಪಾದನೆಗೆ ನಾವು ನಮ್ಮದೇ ಆದ ವರ್ಗೀಕರಣವನ್ನು ಮಾಡಿಕೊಂಡಿದ್ದು ಅದು ಹೀಗಿದೆ :

೧.ಸ್ತುತಿಗಳು
೨.ಪೌರಾಣಿಕ
೩.ಚಾರಿತ್ರಿಕ
೪.ಪುಣ್ಯ ಪುರುಷರು
೫.ರಾಷ್ಟ್ರೀಯ
೬.ಶೃಂಗಾರ
೭.ನೀತಿ
೮.ಹಾಸ್ಯ
೯.ಸಾಮಾಜಿಕ
೧೦.ಸಂಕೀರ್ಣ

**ಸ್ತುತಿಗಳು**

ಇದರಲ್ಲಿ ಲಾವಣಿಯನ್ನು ಹಾಡುವ ಪೂರ್ವದಲ್ಲಿ ತಮ್ಮ ಇಷ್ಟ ದೇವತೆಯನ್ನು ಪ್ರಾರ್ಥಿಸುವರು. ಇದರಲ್ಲಿ ಲಾವಣಿಯನ್ನು ಹಾಡುವ ಪೂರ್ವದಲ್ಲಿ ತಮ್ಮ ಇಷ್ಟದೇವತೆಯನ್ನು ಪ್ರಾರ್ಥಿಸುವ, ಪೂಜಿಸುವ, ನೆನೆಸಿಕೊಳ್ಳುವ, ಬೇಡಿಕೊಳ್ಳುವ ಸ್ತುತಿ ರೂಪದ ಪದಗಳಿರುತ್ತವೆ.

**ಪೌರಾಣಿಕ**

ರಾಮಾಯಣ, ಮಹಾಭಾರತ, ಪುರಾಣ, ಸ್ಥಳೀಯ ಕ್ಷೇತ್ರದೇವತೆಗಳು ಕೆಲ ಆಚರಣೆಗಳು ವೃತಗಳು, ಸ್ತ್ರೀ ಶಿರೋಮಣಿಗಳ ಚರಿತ್ರೆಗಳು, ಪುರಾಣ ಪುರುಷರು ಇತ್ಯಾದಿ ಪೌರಾಣಿಕ ಸಂಗತಿಗಳಿಗೆ ಸಂಬಂಧಿಸಿದ ಲಾವಣಿಗಳು ಇದರಲ್ಲಿವೆ.

**ಚಾರಿತ್ರಿಕ**

ಜಾಗತಿಕ ಮಹಾಯುದ್ಧ, ಭಾರತ ಸ್ವತಂತ್ರ ಚಳುವಳಿ, ಕರ್ನಾಟಕ ಏಕಿಕರಣ, ದೇಶೀಯ ಸಂಸ್ಥಾನಿಕರು, ಬ್ರಿಟಿಷರ ವಿರುದ್ಧ ಹೋರಾಡಿದ ಘಟನೆಗಳು ವೀರ ಯೋಧರ ಸಾಹಸಗಳು, ಹೈದ್ರಾಬಾದ್ ರಜಾಕಾರರ ಹಾವಳಿ ಇತ್ಯಾದಿ ಚರಿತ್ರೆಗೆ ಸಂಬಂಧಿಸಿದ ಲಾವಣಿಗಳನ್ನು ಇದರಲ್ಲಿ ಸೇರಿಸಲಾಗಿದೆ.

**ಪುಣ್ಯ ಪುರುಷರು**

ಇದರಲ್ಲಿ ಏಸುವಿನಿಂದ ಹಿಡಿದು ಇಂದಿನ ನಾಡ ವಿದ್ವಾಂಸರನ್ನು ಕುರಿತು ಬರೆದ ಲಾವಣಿಗಳಿವೆ. ಬಸವಣ್ಣನವರನ್ನು ಒಳಗೊಂಡಂತೆ ಶರಣರ ಚರಿತ್ರೆಗಳಿವೆ. ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮನಂತಹ ವೀರ ನಾರಿಯರನ್ನು ಕುರಿತಾದ ಲಾವಣಿಗಳಿವೆ. ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾಸಾಹೇಬ, ಮುಂಡರಗಿ ಭೀಮರಾಯರ ಸಾಹಸ ಕಥಾನಕಗಳಿವೆ. ಮಹಾತ್ಮಗಾಂಧಿ, ಸಂತವಿನೋಬ, ಸುಭಾಸ್‌ಚಂದ್ರಬೋಸರಂತಹ ರಾಷ್ಟ್ರೀಯ ನೇತಾರರಿದ್ದಾರೆ. ನೆಹರೂ, ಶಾಸ್ತ್ರಿ, ಇಂದಿರಾ ಗಾಂಧಿಯವರಂತಹ ಸ್ವಾತಂತ್ರ್ಯೋತ್ತರ ರಾಷ್ಟ್ರನಾಯಕರಿದ್ದಾರೆ. ದಾನವೀರ ಸಿರಸಂಗಿ ಲಿಂಗರಾಜರನ್ನೊಳಗೊಂಡು ಸಾಹಿತ್ಯ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿದವರ ಹಾಡುಗಳಿವೆ. ಈ ಪುಣ್ಯ ಪುರುಷರ ವಿಭಾಗವು ಒಂದರ್ಥದಲ್ಲಿ ಚಾರಿತ್ರಿಕ ವಿಭಾಗವೇ ಆಗಿದೆ. ಆದರೆ ದೇಶದ ನಾಡಿನ

ಕೀರ್ತಿಯನ್ನು ಹೆಚ್ಚಿಸಿದ ಈ ಮಹನೀಯರು ಕೇವಲ ವ್ಯಕ್ತಿಗಳಾಗಿರದೇ ಇಂದಿಗೂ ಆದರ್ಶಪ್ರಾಯರಾಗಿದ್ದು ಪುಣ್ಯಪುರುಷರಾಗಿದ್ದಾರೆ. ಆದುದರಿಂದ ಇವರನ್ನು ಪುಣ್ಯಪುರುಷರೆಂದು ಪರಿಗಣಿಸಲಾಗಿದೆ. ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದ ಪುಣ್ಯಪುರುಷರು ಈ ವಿಭಾಗದಲ್ಲಿ ಬರುತ್ತಾರೆ.

**ರಾಷ್ಟ್ರೀಯ**

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದ ದೇಶದ ನೀತಿ, ತತ್ವ, ಸಿದ್ಧಾಂತ, ಸಂದರ್ಭ, ಧೋರಣೆಗಳನ್ನು ಒಳಗೊಂಡ ಲಾವಣಿಗಳು ಇದರಲ್ಲಿ ಸೇರ್ಪಡೆಯಾಗಿವೆ. ಈ ಲಾವಣಿಗಳು ರಾಷ್ಟ್ರೀಯ ಸಮಸ್ಯೆಗಳನ್ನು ಬಿಂಬಿಸುತ್ತವೆ.

**ಶೃಂಗಾರ**

ಮೂಲತಃ ಲಾವಣಿ ಶೃಂಗಾರ ಸಾಹಿತ್ಯವಾದುದಾಗಿದೆ. ಆದರೆ ಹರದೇಶಿ-ನಾಗೇಶಿ ಸಂಪ್ರದಾಯ ದಲ್ಲಿ ಶೃಂಗಾರವೇ ಅಧಿಕವಾಗಿದ್ದು ಆ ಕುರಿತು ಪ್ರತ್ಯೇಕ ಸಂಪುಟ ಪ್ರಕಟವಾಗಲಿರು ವುದರಿಂದ ಕೆಲ ಬಿಡಿ ಶೃಂಗಾರ ಲಾವಣಿಗಳನ್ನು ಮಾತ್ರ ಇದರಲ್ಲಿ ಸೇರಿಸಲಾಗಿದೆ.

**ನೀತಿ**

ಅಧ್ಯಾತ್ಮ ಪದಗಳನ್ನು ಒಳಗೊಂಡಂತೆ ಕೆಲ ನೀತಿಪರ ಲಾವಣಿಗಳು ಇದರಲ್ಲಿವೆ.

**ಹಾಸ್ಯ**

ಲಾವಣಿಯು ಜನಾಕರ್ಷಣೆಗಾಗಿ ಹಾಸ್ಯವನ್ನು ಅವಲಂಬಿಸಬೇಕಾಗುತ್ತದೆ. ಕೆಲ ಬೇರೆ ಲಾವಣಿಗಳಲ್ಲಿ ಸಾಂದರ್ಭಿಕವಾಗಿ ಹಾಸ್ಯ ಬಂದಿರುತ್ತದೆ. ನಮ್ಮ ಗಮನಕ್ಕೆ ಬಂದ ಮೂರು ಬಿಡಿ ಹಾಸ್ಯ ಲಾವಣಿಗಳನ್ನು ಇದರಲ್ಲಿ ಸೇರಿಸಲಾಗಿದೆ.

**ಸಾಮಾಜಿಕ**

ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಹಾಗೂ ಸಾಮಾಜಿಕ ಬದುಕನ್ನು ರೂಪಿಸುವ ಕೆಲ ಲಾವಣಿಗಳು ಇದರಲ್ಲಿವೆ.

**ಸಂಕೀರ್ಣ**

ಯಾವ ವಿಭಾಗಕ್ಕೂ ಸೇರದ ಲಾವಣಿಗಳನ್ನು ಸಂಕೀರ್ಣ ವಿಭಾಗದಲ್ಲಿ ಸೇರಿಸಲಾಗಿದೆ. ಇದರಲ್ಲಿ ಗೀಗೀ ಸ್ಪರ್ಧೆಯ ಕುರಿತಾದ ಎರಡು ಲಾವಣಿಗಳಿದ್ದು ಅವು ಗೀಗೀ ಸಾಹಿತ್ಯದ ಪರಿವರ್ತನೆ ಹಾಗೂ ವಿಕಾಸವನ್ನು ತಿಳಿಸುತ್ತವೆ.

ಈ ಮೇಲ್ಕಂಡಂತೆ ಹತ್ತು ವಿಭಾಗಗಳನ್ನು ಮಾಡಿಕೊಂಡರೂ ಒಂದಿಲ್ಲೊಂದು ಸಮಸ್ಯೆ ಎದುರಿಸಬೇಕಾಗುತ್ತದೆ. ಲಾವಣಿ ಸಾಹಿತ್ಯದಲ್ಲಿ ಯಾವ ವರ್ಗೀಕರಣವೂ ಸರ್ವಸಮ್ಮತವಾಗಲಾರದು. ಸಂಪಾದನೆ ಮತ್ತು ಅಧ್ಯಯನದ ದೃಷ್ಟಿಯಿಂದ ಈ ಮೇಲಿನಂತೆ ಲಾವಣಿಗಳನ್ನು ವರ್ಗೀಕರಿಸಿಕೊಳ್ಳಲಾಗಿದೆ.

ಈ ಸಂಪಾದನೆಯಲ್ಲಿ ಫ್ಲೀಟರು ಸಂಗ್ರಹಿಸಿದ ಲಾವಣಿಗಳನ್ನು ಒಳಗೊಂಡಂತೆ ೧೩೧ ಲಾವಣಿಗಳಿವೆ. ಕೆಲವು ಒಂದೇ ಪುಟದ ಲಾವಣಿಯಾಗಿದ್ದರೆ, ಸಂಗೊಳ್ಳಿ ರಾಯಣ್ಣ ಮತ್ತು ಸಿರಸಿಂಗಿ ಲಿಂಗರಾಜರನ್ನು ಕುರಿತಾದ ಲಾವಣಿಗಳು ಮೂವತ್ತು ಪುಟದಷ್ಟು

ದೀರ್ಘವಾಗಿವೆ. ಇನ್ನೂ ಸಾವಿರಾರು ಲಾವಣಿಗಳು ಕನ್ನಡದಲ್ಲಿವೆ. ಆದರೆ ಅಲಭ್ಯವಾಗಿವೆ. ಕನ್ನಡದಲ್ಲಿ ಈವರೆಗೆ ಸುಮಾರು ಮೂವತ್ತಕ್ಕೂ ಹೆಚ್ಚು ಲಾವಣಿ ಸಾಹಿತ್ಯ ಸಂಗ್ರಹಿತ ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ಕೆಲವು ಅಲಭ್ಯವಾಗಿವೆ. ನನಗೆ ದೊರೆತ ಕೃತಿಗಳು ಕೇವಲ ಹದಿನೈದು ಮಾತ್ರ. ಆ ಕೃತಿಗಳಲ್ಲಿ ಪ್ರಕಟವಾದ ಲಾವಣಿಗಳು ಈ ಸಂಪುಟದಲ್ಲೇ ಸಂಗ್ರಹಿತವಾಗಿವೆ. ಲಾವಣಿ ಸಾಹಿತ್ಯದ ಸಮಗ್ರ ಪ್ರಕಟಣೆಗೆ ಈ ಸಂಪುಟ ನಾಂದಿಯಾಗಿದೆ. ಈ ಕುರಿತು ಮುಂದುವರೆಯುವುದು ಅಗತ್ಯವಾಗಿದೆ. ಹಾಗಾದಲ್ಲಿ ಇನ್ನೊಂದೆರಡು ಲಾವಣಿ ಸಂಪುಟಗಳು ಹೊರಬರಬಹುದಾಗಿವೆ.

**ರಾಷ್ಟ್ರೀಯ ಚಳುವಳಿಯಲ್ಲಿ ಲಾವಣಿ ಮಾಧ್ಯಮ**

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಲಾವಣಿ ಪದಗಳು ರಾಷ್ಟ್ರೀಯ ಚಳುವಳಿಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದವು. ಕೇವಲ ಮನರಂಜನೆ ಮತ್ತು ತಾತ್ವಿಕ  ವಿಚಾರಗಳಿಗೆ ಸೀಮಿತವಾಗಿದ್ದ ಲಾವಣಿಗಳು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದವು. ಅಂದು ಪತ್ರಿಕೆಯ ನಂತರ ಲಾವಣಿಯೇ ಪ್ರಮುಖ ಮಾಧ್ಯಮವಾಗಿದ್ದಿತು. “೧೯೨೪ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಅಧಿವೇಶನ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರ ನಡುವಿನ ತಪ್ಪುಕಲ್ಪನೆಯನ್ನು ತೊಡೆದುಹಾಕಿದ ಕಾರಣ ಸಹಸ್ರಾರು ಸಂಖ್ಯೆಯಲ್ಲಿ ಬ್ರಾಹ್ಮಣೇತರರು ಕಾಂಗ್ರೆಸ್ ಸೇರಿ ರಾಷ್ಟ್ರೀಯ ಚಳುವಳಿ ಬಲಗೊಳ್ಳುವ ವಾತಾವರಣ ನಿರ್ಮಿಸಿತು. ನಗರ ಪ್ರದೇಶದ ಸುಶಿಕ್ಷಿತರಂತೂ ಬ್ರಿಟಿಷ್ ದಮನಕಾರಿ ಧೋರಣೆಗಳ ಧಿಕ್ಕಾರ ಹಾಗೂ ಸ್ವರಾಜ್ಯ ಸಂಪಾದನೆಗಾಗಿ ಶ್ರಮಿಸುತ್ತಿರುವ ಗಾಂಧೀಜಿ, ಸುಭಾಸ್‌ಚಂದ್ರಬೋಸ್ ಮುಂತಾದ ಕಾಂಗ್ರೆಸ್ ಧುರೀಣರ ಜೈಕಾರ ಮಾಡಲು ಸಾವಿರಾರು ಸಭೆಗಳನ್ನು ಏರ್ಪಡಿಸಿ ರಾಷ್ಟ್ರೀಯ ಜಾಗೃತಿಗೆ ಕಾರಣರಾದರೂ ಸಾರಿಗೆ-ಸಂಪರ್ಕದ ಅಭಾವದಿಂದಾಗಿ ತಮ್ಮ ಕಾರ್ಯಚಟುವಟಿಕೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸಲಾಗದಿದ್ದರಿಂದ ಗ್ರಾಮಾಂತರ ಜನರು ರಾಷ್ಟ್ರೀಯ ಚಳುವಳಿಯಿಂದ ದೂರ ಉಳಿದರು. ಹಾಗೆಯೇ ಅನಕ್ಷರತೆ, ಅಜ್ಞಾನ, ಕಿತ್ತು ತಿನ್ನುತ್ತಿರುವ ಬಡತನದಿಂದಾಗಿ ಗ್ರಾಮಾಂತರ ಜನತೆ ತಮ್ಮ ಹೊಟ್ಟೆ-ಬಟ್ಟೆಗೆ ಹೆಚ್ಚು ಗಮನಕೊಟ್ಟರೆ ವಿನಃ ಸ್ವರಾಜ್ಯ ಸಂಪಾದನೆಯ ಗುರಿಯೊಂದಿಗೆ ಆರಂಭಗೊಂಡ ರಾಷ್ಟ್ರೀಯ ಚಳುವಳಿಯ ಹಿಂದುಳಿವಿಕೆಗೆ ಹಾಗೂ ಅವರು ಅನುಭವಿಸುತ್ತಿರುವ ಕಷ್ಟ-ಕಾರ್ಪಣ್ಯಗಳಿಗೆ ಪರಕೀಯ ಆಳ್ವಿಕೆಯೇ ಕಾರಣವಾಗಿದ್ದು ಅದರ ಮೂಲೋತ್ಪಾಟನೆಗಾಗಿ ಉದ್ದೇಶಿಸಲಾಗಿರುವ ರಾಷ್ಟ್ರೀಯ ಚಳುವಳಿಯೆಡೆಗೆ ಗ್ರಾಮಾಂತರ ಜನತೆಯನ್ನು ಆಕರ್ಷಿಸಲು ಹಲವಾರು ತಂತ್ರಗಳನ್ನು ರೂಪಿಸಿದರೂ ‘ಲಾವಣಿ’ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರು.’ಞ[5] ರಾಷ್ಟ್ರೀಯ ಆಂದೋಲನದಲ್ಲಿ ಜನಪದ ಕಾವ್ಯ ಪ್ರಕಾರವೊಂದು ಜನಮನ್ನಣೆ ಪಡೆದು ಜನತಾ ಮಾಧ್ಯಮವಾದುದು ಮಹತ್ವದ ಸಂಗತಿಯಾಗಿದೆ. ಈ ಕುರಿತು ಪ್ರತ್ಯೇಕ ಅಧ್ಯಯನವೇ ಬೇಕಾಗುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ಜನಪದ ಕಲಾ ಮೇಳಗಳ ಉತ್ಸವ ಹಾಗೂ ಸ್ಪರ್ಧೆಯನ್ನೇರ್ಪಡಿಸುವ ಪರಂಪರೆಯೊಂದು ಆರಂಭವಾಯಿತು. ಆಧುನೀಕರಣದಲ್ಲಿ ಆ ಕಲೆಗಳು ಉಳಿದು ಬರಬೇಕೆಂಬುದೇ ಅದರ ಉದ್ದೇಶ. ಅದರಂತೆ ಲಾವಣಿ ಸ್ಪರ್ಧೆಗಳು ನಡೆದವು. ಆದರೆ ಈ ಸ್ಪರ್ಧೆ ಎರಡು ತಂಡಗಳ ನಡುವೆ ನಡೆಯುವಂಥ ಸವಾಲ್-ಜವಾಬ್ ಸಂಪ್ರದಾಯವಲ್ಲ. ಇಂಥ ಒಂದು ಸ್ಪರ್ಧೆಯ ಬಗೆಗೆ ಒಂದು ಲಾವಣಿ ಪದ್ಯವನ್ನೇ ಸಾಲೋಟಗಿ ಶರಣಪ್ಪನವರು ರಚಿಸಿದ್ದಾರೆ. ಅವರ ದೃಷ್ಟಿಯಲ್ಲೂ ಗೀಗೀ-ಲಾವಣಿಗಳು ಬೇರೆಬೇರೆಯಲ್ಲ. ಅವೆರಡು ಒಂದೇ ಎಂದು ಸ್ಪಷ್ಟಪಡಿಸಿದ್ದಾರೆ.

*ಪರರಾಳಿಕೆಯಲಿ ಮರೆಯಾದ ಪೂರ್ವಸಂಸ್ಕೃತಿ*
*ಹೊರತೆಗೆದು ತೋರಿಸುವ ಕರ್ನಾಟಕ ಸಾಹಿತಿ*
*ಸರಳ ಶೈಲಿಯಲಿ ಸರ್ವರಿಗೆ ತಿಳಿಸುವ ಕೃತಿ । ಗೀಗೀ ಲಾವಣಿ*
*ಗೀಗೀ ಲಾವಣಿ ಪುನರುತ್ಥಾನ ಸಮಿತಿಯ*
*ಮಾನ್ಯ ಸದಸ್ಯರ ಕರೆಗೆ । ಓಗೊಟ್ಟು ಬಂದ ಸರ್ವರಿಗೆ ॥ ೧ ॥*

ರಾಜ್ಯಮಟ್ಟದಲ್ಲಿ ಗೀಗೀ-ಲಾವಣಿ ಪುನರುತ್ಥಾನ ಸಮಿತಿ ಹುಟ್ಟಿಕೊಂಡು ಅಂಥ ಪ್ರಯತ್ನ ನಡೆದಿದ್ದು ಸ್ತುತ್ಯ. ಮುಂದೆ ಸಹ ಅಂಥಕಾರ್ಯ ನಡೆದರೆ ಈ ಕಲೆ ಉಳಿದು-ಬೆಳೆದು ಬರುವಲ್ಲಿ ಸಾಧ್ಯವಾದೀತೆಂಬುದು ನಮ್ಮ ಅಭಿಪ್ರಾಯ. ಸರಕಾರ-ಅಕಾಡೆಮಿ-ಸಂಘ-ಸಂಸ್ಥೆಗಳು ಇದರತ್ತ ಗಮನ ಹರಿಸುವುದು ಸೂಕ್ತ.

ಲಾವಣಿ ಕಟ್ಟಿದವರಿಗೆ ಮತ್ತು ಹಾಡುಗಾರರಿಗೆ ಯಾವುದೇ ಭೇದವಿಲ್ಲ. ಇದು ಬ್ರಾಹ್ಮಣೇತರ ಸಾಹಿತ್ಯವೆಂದು ಕರೆಯುತ್ತಾರೆ. ಸಂಗೀತದಲ್ಲಿರುವಂತೆ ಇಲ್ಲೂ ಗುರುಪರಂಪರೆಯಿದೆ. ಜೊತೆಗಾರ ಹಾಡುಗಾರರಿದ್ದಾರೆ. 'ಜನಪದ ಕಲಾವಿದರ ಸೂಚಿ' ಕೃತಿಯಲ್ಲಿ ೫೩ ಹಾಡುಗಾರರ ಮಾಹಿತಿ ಲಭ್ಯವಿದೆ. ಅವರೆಲ್ಲಾ ಉತ್ತರಕರ್ನಾಟಕಕ್ಕೆ ಸೇರಿದ ಕಲಾವಿದರಾಗಿದ್ದಾರೆ. ಲಾವಣಿ ರಚನೆಕಾರರು ಕೊನೆಯಲ್ಲಿ ತಮ್ಮ ಹೆಸರು ಅಥವಾ ಅಂಕಿತವನ್ನು ಹೇಳಿಕೊಂಡಿದ್ದಾರೆ. ಇನ್ನೂ ಕೆಲ ರಚನೆಗಳಲ್ಲಿ ರಚನೆಕಾರನ ಹೆಸರಿರುವುದಿಲ್ಲ. ಮುಸಲ್ಮಾನರು, ಹಿಂದುಳಿದ ಹೆಣ್ಣು ಮಕ್ಕಳು ಸೇರಿದಂತೆ ಎಲ್ಲಾ ಜಾತಿಯವರಿದ್ದಾರೆ. ಲಾವಣಿ ಪ್ರಕಾರ ಕೋಮುಸೌಹಾರ್ದತೆಗೆ ಹಾಗೂ ರಾಷ್ಟ್ರಪ್ರೇಮಕ್ಕೆ ಸಾಕಷ್ಟು ಕೊಡುಗೆ ನೀಡಿದೆಯೆಂದು ಹೇಳಬಹುದಾಗಿದೆ.

**ಲಾವಣಿಗಳ ಸಂಪಾದನೆ**

ಲಾವಣಿಗಳ ಸಂಪಾದನೆಗೆ ನೂರು ವರ್ಷಗಳ ಮಿಕ್ಕಿದ ಇತಿಹಾಸವಿದೆ. ಇವುಗಳ ಸಂಪಾದನೆಗೆ ಪಾಶ್ಚಾತ್ಯ ವಿದ್ವಾಂಸರೇ ನಾಂದಿ ಹಾಡಿದ್ದಾರೆ. ಮೂಲತಃ ಇಂಗ್ಲೆಂಡಿನವರಾದ ಜಾನ್ ಫೆಯ್ತುಫುಲ್ ಫ್ಲೀಟರು ೧೮೬೭ರಲ್ಲಿ ಮುಂಬೈ ಪ್ರಾಂತ್ಯಕ್ಕೆ ಅಸಿಸ್ಟಂಟ್ ಕಲೆಕ್ಟರ್‌ರಾಗಿ ಬಂದು ಸೇವೆಗೆ ಸೇರಿದರು. ಹಲವಾರು ಹುದ್ದೆಗಳನ್ನು ಅಲಂಕರಿಸಿದರು. ಅವರು ಸಾಹಿತ್ಯ, ಶಾಸನ, ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಆಸಕ್ತಿಗಳನ್ನು ಬೆಳೆಸಿಕೊಂಡಿದ್ದರು. ಜಾನಪದಕ್ಕೆ ಸಂಬಂಧಿಸಿದಂತೆ ಜನಪದ ಗೀತೆಗಳನ್ನು, ಲಾವಣಿಗಳನ್ನು ಫ್ಲೀಟರು ಸಂಗ್ರಹಿಸಿ ಅವುಗಳನ್ನು ಇಂಡಿಯನ್ ಎಂಟಿಕ್ವರಿಯಲ್ಲಿ ಪ್ರಕಟಿಸಿದರು. ವಿದೇಶಿ ವಿದ್ವಾಂಸರ ಈ ಕಾರ್ಯವನ್ನು ನಮ್ಮ ದೇಶಿ ವಿದ್ವಾಂಸರು ಲಾವಣಿ ಮತ್ತು ಜಾನಪದ ಗೀತೆಗಳ ಬಗೆಗಿರುವ ಗೊಂದಲದ ಬಗೆಗೆ ಅಪಸ್ವರವೆತ್ತಿದ್ದಾರೆ. ಅವರ ಕಾಲದ ಸಂದರ್ಭವೇ ಹಾಗಿತ್ತು. ಆದರೆ "ಅವರ ಸಂಗ್ರಹ ಬಾಹುಳ್ಯಕ್ಕಿಂತ, ಸಂಗ್ರಹಣೆಯಲ್ಲಿ ಅವರು ತೋರಿರುವ ಒಪ್ಪ ಓರಣ ಹಾಗೂ ಶಾಸ್ತ್ರೀಯ ದೃಷ್ಟಿಗಳು ಇಂದಿಗೂ ನಮಗೆ ಮೇಲ್ಪಂಕ್ತಿಯಾಗಿವೆ." ಎಂದು ಫ್ಲೀಟರ ಲಾವಣಿಗಳನ್ನು ಸಂಗ್ರಹಿಸಿದ ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಫ್ಲೀಟರ ಸಂಗ್ರಹದ ಬಗೆಗೆ ಹೆಚ್ಚಿಗೆ ಚರ್ಚಿಸುವ ಅಗತ್ಯವಿಲ್ಲ. ಅವರ ಅಂದಿನ ಕಾರ್ಯ ನಮ್ಮ ಚರಿತ್ರೆಯ ಪುಟಗಳಿಗೆ, ಜಾನಪದ ಅಧ್ಯಯನಕ್ಕೆ ಸಾಕ್ಷಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ. ಮೊದಲಿಗೆ ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳನ್ನು ಪ್ರಕಟಿಸಿದರು. ಆದಾದ ಮೇಲೆ ಶ್ರೀ ಕ್ಯಾತನಹಳ್ಳಿಯವರು ಫ್ಲೀಟರ ಅಪ್ರಕಟಿತ ಲಾವಣಿಗಳನ್ನು ಸಮಗ್ರವಾಗಿ ಪ್ರಕಟಿಸಿದ್ದು ಅದರಲ್ಲಿ ಕೋಲುಪದ, ಜೋಗುಳಪದ, ಪೋವಾಡಗಳು, ದಂಡಕಗಳು ಸೇರಿವೆ. ಆದರೆ ಅವರ ಕೃತಿಯಿಂದ ನಾವು ಲಾವಣಿಗಳಷ್ಟನ್ನೇ ಆಯ್ಕೆ ಮಾಡಿಕೊಂಡಿದ್ದೇವೆ.

೧೯೩೩ರ ಸುಮಾರಿಗೆ ಹಲಸಂಗಿ ಗೆಳೆಯರಾದ ಸಿಂಪಿ ಲಿಂಗಣ್ಣ ಮತ್ತು ಧೂಲಾಸಾಹೇಬರು ಸೇರಿ 'ಜೀವನ ಸಂಗೀತ'ವೆಂಬ ಕೃತಿಯನ್ನು ಪ್ರಕಟಿಸಿದ್ದು ಅದು ಪ್ರಸಿದ್ಧ ಲಾವಣಿಗಳ ಸಂಗ್ರಹವಾಗಿದೆ. ಅವರೇ ಹೇಳಿರುವಂತೆ ಅದರಲ್ಲಿ ಪ್ರಸಿದ್ಧರಾದ ಏಳು ಮಂದಿ ಲಾವಣಿಕಾರರ ಮಿಗಿಲಾದ ಹನ್ನೆರಡು ಲಾವಣಿಗಳಿವೆ. ಅವುಗಳನ್ನು ಈ ಸಂಪುಟದಲ್ಲಿ ಬಳಸಿಕೊಳ್ಳಲಾಗಿದೆ.

ಜಾನಪದ ಸಾಹಿತ್ಯದ ಬಗೆಗೆ ಜಾಗೃತಿ ಮೂಡಿದಂತೆ ಜಾನಪದದ ಉಳಿದ ಪ್ರಕಾರಗಳೊಂದಿಗೆ ಲಾವಣಿ ಪ್ರಕಾರವನ್ನು ಸಂಗ್ರಹಿಸುವ ಕಾರ್ಯ ಪ್ರಾರಂಭವಾಯಿತು. ೧೯೭೦-೭೦ರ ದಶಕದಲ್ಲಿ ಸಂಗ್ರಹಕಾರ್ಯ ವೈಯಕ್ತಿಕ ಮಟ್ಟದಲ್ಲಿ ವ್ಯಾಪಕವಾಗಿ ನಡೆಯಿತು. ಸಂಗ್ರಹಿಸಿದ ಸಾಹಿತ್ಯ ಲಾವಣಿ ಯಾವುದು? ಡೊಳ್ಳಿನ ಪದ ಯಾವುದು? ಹೋಳಿಹಾಡು ಯಾವುದು? ಎಂಬುದು ಲೆಕ್ಕಕ್ಕೆ ಬಾರದಾಯಿತು. ಮುಂದೆ ಸಂಗ್ರಹಿಸಿದ ಸಾಹಿತ್ಯದ ವೈಜ್ಞಾನಿಕ ಅಧ್ಯಯನ ಪ್ರಾರಂಭವಾಯಿತು. ಕ್ಷೇತ್ರಕಾರ್ಯಗಳ ಮೂಲಕ ಆಯಾ ಹಾಡುಗಳ ರೀತಿ-ಲಕ್ಷಣಗಳನ್ನು ಗಮನಿಸಿ ವರ್ಗೀಕರಿಸಿ ಕಾರ್ಯ ನಡೆಯಿತು. ವಿಚಾರಗೋಷ್ಠಿಗಳು, ಸಮ್ಮೇಳನಗಳು ನಡೆದವು. ಇದೀಗ ಆಯಾ ಸಾಹಿತ್ಯ ಕುರಿತು ಒಂದಿಷ್ಟು ಶಿಸ್ತಿನ ಕಾರ್ಯ ನಡೆದಿದೆ. ಆ ಹಿನ್ನೆಲೆಯಲ್ಲಿ ಸಂಗ್ರಹವಾದ ಲಾವಣಿ ಕೃತಿಗಳು ಸಾಕಷ್ಟಿವೆ. ಆದರೆ ಬಹಳಷ್ಟು ಅಲಭ್ಯವಿದೆ.

ಲಾವಣಿಕಾರರಾದ ಹುಲಕುಂದ ಭೀಮಕವಿ, ಬಾಳಗೋಪಾಳ, ಮರಿಮಲ್ಲಕವಿ, ಶರಣಪ್ಪ ವಾಲಿಯವರ ಕೃತಿಗಳು ಹೊರಬಂದಿವೆ. ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾಸಾಹೇಬ, ಕಿತ್ತೂರು ಸಂಸ್ಥಾನ ಕುರಿತು ಕೆಲ ಕೃತಿಗಳು ಬಂದಿವೆ. ಉಳಿದಂತೆ ಬಿಡಿ ಹಾಗೂ ಸಂಕೀರ್ಣ ಲಾವಣಿಗಳ ಸಂಗ್ರಹಗಳಿವೆ.

ಲಾವಣಿಗಳನ್ನು ಕುರಿತು ವಿವಿಧ ನೆಲೆಗಟ್ಟಿನಲ್ಲಿ ಅಧ್ಯಯನವೂ ನಡೆದಿದೆ. ಈ ದಿಸೆಯಲ್ಲಿ ಡಾ. ಶ್ರೀರಾಮ ಇಟ್ಟಣ್ಣನವರ 'ಲಾವಣಿ', ಡಾ. ಶಿವಾನಂದ ಗುಬ್ಬಣ್ಣನವರ 'ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ', ಡಾ. ಶ್ರೀಕಂಠ ಕೂಡಿಗೆಯವರ 'ಲಾವಣಿ ಸಾಹಿತ್ಯ' ಮುಂತಾದವು ಮಹತ್ವದ ಕೃತಿಗಳಾಗಿವೆ. ಬೀಬೀ ಇಂಗಳಗಿ ಭಾಗದ ಲಾವಣಿಗಳು, ತೇರದಾಳ ಭಾಗದ ಲಾವಣಿಗಳು ಹೀಗೆ ಕೆಲ ಊರಿನ ಲಾವಣಿ ಪರಂಪರೆ ಪರಿಚಯಿಸುವ ಕೃತಿಗಳು ಬಂದಿವೆ. ಆದರೂ ಲಾವಣಿಗಳನ್ನು ಕುರಿತಾದ ಅಧ್ಯಯನ ನಿಂತಂತಾಗಿದೆ. ಕಾರಣ ಲಾವಣಿ ಗೋಷ್ಠಿಗಳೇ ಕಡಿಮೆಯಾಗಿವೆ. ಅದಕ್ಕೆ ಕಾರಣಗಳು ಹಲವಾರು.

ಈ ಸಂಪುಟದಲ್ಲಿ ಪ್ರಕಟಿತ ಹಾಗೂ ಉಪಲಬ್ಧ ಕೃತಿಗಳಲ್ಲಿ ಬಂದಿರುವ ಲಾವಣಿಗಳನ್ನು ಬಳಸಿಕೊಳ್ಳಲಾಗಿದೆ. ಅನುಪಲಬ್ಧ ಕೃತಿಗಳು ಲಭ್ಯವಾದರೆ ಇನ್ನೊಂದು ಸಂಪುಟವನ್ನು ತರಬಹುದು. ಇಲ್ಲಿ ಆಯ್ಕೆಮಾಡಿಕೊಂಡ ಲಾವಣಿ ರಚನೆಕಾರನ ಹೆಸರನ್ನು ಮತ್ತು ಆ ಲಾವಣಿ ಪ್ರಕಟವಾದ ಕೃತಿಯನ್ನು ಆಯಾ ಲಾವಣಿಯ ಅಡಿಯಲ್ಲಿ ಕೊಡಲಾಗಿದೆ. ಇದರಿಂದ ಓದುಗರಿಗೆ ಅನುಕೂಲವಾಗುವುದು. ಈ ಲಾವಣಿಗಳು ಪ್ರಾದೇಶಿಕವಾಗಿರುವುದರಿಂದ ಕೊನೆಯಲ್ಲಿ ಅಕಾರಾದಿಯಲ್ಲಿ ಶಬ್ದಾರ್ಥಕೋಶವನ್ನು ನೀಡಲಾಗಿದೆ. ನಾವು ಸಂಪಾದನೆಗೆ ಬಳಸಿಕೊಂಡ ಕೃತಿಗಳ ಪಟ್ಟಿಯನ್ನು ಕೊನೆಯಲ್ಲಿ ಕೃತಜ್ಞತೆಯೊಂದಿಗೆ ಸ್ಮರಿಸಿ ಕೊಡಲಾಗಿದೆ. ಎಲ್ಲಾ ಲಾವಣಿ ಸಂಗ್ರಾಹಕ-ಸಂಪಾದಕ, ಪ್ರಕಾಶಕ ಇವರಿಗೆ ನನ್ನ ವಂದನೆಗಳು.

ಈ ಸಂಪಾದನೆಯಲ್ಲಿ ಸಮಗ್ರ ಲಾವಣಿಗಳು ಸೇರಿವೆಯೆಂದು ಹೇಳಿಕೊಳ್ಳಲು ಧೈರ್ಯವಿಲ್ಲ. ಕೆಲವೊಂದು ಕೃತಿಗಳು ಲಭ್ಯವಿಲ್ಲ. ನನಗೆ ಲಭ್ಯವಾದ ಲಾವಣಿ ಕೃತಿಗಳನ್ನು ಮಾತ್ರ ಈ ಸಂಪಾದನೆಯಲ್ಲಿ ಬಳಸಿಕೊಂಡಿದ್ದೇನೆ. ಈ ಸಂಪಾದನೆ ಅಂತಿಮವಾದುದಲ್ಲ. ಲಾವಣಿ ಮತ್ತು ಗೀಗೀ ಪದಗಳ ಬಗೆಗಿರುವ ನನ್ನ ಗೊಂದಲವನ್ನು ಬಗೆಹರಿಸಿ ಈ ಸಂಪುಟ ಸಂಪಾದನೆಗೆ ಚಾಲನೆ ನೀಡಿದ ಹಿರಿಯ ಜಾನಪದ ವಿದ್ವಾಂಸರ ಸಮಗ್ರ ಜನಪದ ಸಾಹಿತ್ಯ ಪ್ರಕಟಣಾ ಸಮಿತಿ ಅಧ್ಯಕ್ಷರಿಗೂ, ಸದಸ್ಯರಿಗೂ, ಡಾ. ಎಂ.ಎಸ್. ಲಠ್ಠೆಯವರಿಗೂ ನನ್ನ ಧನ್ಯವಾದಗಳು. ಈ ಗ್ರಂಥದ ಕರಡು ಪ್ರತಿ ತಿದ್ದುವಲ್ಲಿ ನೆರವಾದ ಡಾ. ಗವಿಸಿದ್ಧಪ್ಪ ಪಾಟೀಲ, ಶ್ರೀ ಸಿದ್ಧಲಿಂಗಪ್ಪ ಪಾಟೀಲ, ಶ್ರೀ ಮಲ್ಲೇಶಪ್ಪ ಸಿದ್ರಾಂಪೂರ ಇವರನ್ನು ಕೃತಜ್ಞತೆಯಿಂದ ನೆನೆಯುವೆ. ಸಂಪಾದನಾ ಕಾರ್ಯವನ್ನು ವಹಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ನನ್ನ ಕೃತಜ್ಞತೆಗಳು.

ಕನ್ನಡ ಪ್ರಾಧ್ಯಾಪಕರು
**ಡಾ. ಮೃತ್ಯುಂಜಯ ಹೊರಕೇರಿ**
ಸ್ನಾತಕೋತ್ತರ ಕೇಂದ್ರ,
ರಾಯಚೂರು.

---

[1] ೧. **ಜನಪದ ಸಾಹಿತ್ಯ ರೂಪಗಳು-ಡಾ. ರಾಗೌ, ಪು-೧೯.**

[2] ೨. **ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ - ಡಾ. ಶಿವಾನಂದ ಗುಬ್ಬಣ್ಣವರ,** ಪು-೧೧.

[3] ೩. **ಲಾವಣಿ-ಡಾ. ಶ್ರೀರಾಮ ಇಟ್ಟಣ್ಣನವರ, ಪು-೧೩.**

[4] **೪ ಲಾವಣಿ – ಡಾ. ಶ್ರೀರಾಮ ಇಟ್ಟಣ್ಣನವರ ಪು – ೫೫**

[5] **೫. ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ : ಡಾ. ಶಿವಾನಂದ ಗುಬ್ಬಣ್ಣವರ, ಪುಟ. ೪೩.**

# ಶುಭ ಸಂದೇಶ

**ಬಿ.ಎಸ್. ಯಡಿಯೂರಪ್ಪ**

ವಿಧಾನ ಸೌಧ

ಮುಖ್ಯಮಂತ್ರಿ

ಬೆಂಗಳೂರು - ೫೬೦ ೦೦೧

ದಿನಾಂಕ : ೧೬-೦೬-೨೦೦೯

**ಶುಭ ಸಂದೇಶ**

ಸಾವಿರಾರು ವರ್ಷಗಳ ಇತಿಹಾಸವಿರುವ, ಎಲ್ಲ ವಿದ್ಯೆಗಳ ತೊಟ್ಟಿಲಾಗಿರುವ, ಕನ್ನಡ ಸಂಸ್ಕೃತಿಯ ಖಜಾನೆಯಾಗಿರುವ ಜಾನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **"ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**"ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯವರು ಹೊರತರುತ್ತಿರುವುದು ಸಂತಸದ ಸಂಗತಿ.

**"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್"** ಎಂಬ ವ್ಯಾಖ್ಯಾನ ನಮ್ಮ ಜಾನಪದ ಸಾಹಿತ್ಯದ ಸಾರವಾಗಿದೆ. ಕನ್ನಡ ನೆಲ-ಜಲ-ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು, ನಿಜಕ್ಕೂ ನಾಡಿನ ಸಾಹಿತ್ಯಕ ಹಾಗೂ ಜಾನಪದ ಲೋಕಕ್ಕೆ ಒಂದು ಕೊಡುಗೆಯಾಗಲಿವೆ.

ಈ ಯೋಜನೆಗೆ ಶ್ರಮಿಸಿರುವ ಎಲ್ಲರಿಗೂ ಅಭಿನಂದನೆಗಳು. "ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ" ಯೋಜನೆಗೆ ಶುಭ ಹಾರೈಕೆಗಳು.

**(ಬಿ.ಎಸ್. ಯಡಿಯೂರಪ್ಪ)**

# ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ - ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ - ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಪೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

**ಮಾತಿನ ಸರಣಿ : ಮುತ್ತಿನ ಬೆಲೆ**

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

‘………ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ?

‘ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

‘ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ’. **(ಕರ್ನಾಟಕ ಜನಪದ ಸಾಹಿತ್ಯ ೧೯೩೭)**

**ಬೆಟಗೇರಿ ಕೃಷ್ಣಶರ್ಮ**

‘ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ’. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ಗೀಮಠ**

‘ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ ‘ವಿಶ್ವಕೋಶ’ವೇ ಆಗಬಹುದೆಂದು ಹೇಳಬಹುದು’. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

‘ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ’. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ.ಪರಮಶಿವಯ್ಯ**

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕೆ. ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ - ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: ‘ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: “ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ ‘ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ - ಜೀಶಂಪ; ಮುನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ - ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ - ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ - ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೮೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಃಕಾಲೀನ ಜ್ಞಾನ - ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಯಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ - ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು

ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ-

ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**
**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ

ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ

ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ

ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ - ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

## ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪೊದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೂಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಬಿ.ವಿ. ವಿವೇಕ ರೈ, ಡಾ. ತೀ.ನಂ. ಶಂಕರನಾರಾಯಣ, ಡಾ|| ಸಿದ್ಧಲಿಂಗಯ್ಯ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು ಮತ್ತು ಡಾ. ಎಂ.ಎಸ್. ಲಠ್ಠೆ (ದಿವಂಗತ) ಹಾಗೂ ಶ್ರೀ ಕೆರೆಮನೆ ಶಂಭು ಹೆಗಡೆ (ದಿವಂಗತ) ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.
ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳೂ ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಬಿ.ಆರ್. ಜಯರಾಮರಾಜೇ ಅರಸ್ ಅವರಿಗೆ, ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ ಡಾ. ಜಿ.ಎಸ್. ಭಟ್ ಅವರ ಸಲಹೆ-ಸಹಕಾರ ಅಮೂಲ್ಯವಾದುವುದು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ ಮತ್ತು ರಿಜಿಸ್ಟ್ರಾರ್ ಡಾ. ಎಸ್. ಪ್ರಸಾದಸ್ವಾಮಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಮನು ಬಳಿಗಾರ್)**
ನಿರ್ದೇಶಕರು

## ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದ ಅಧ್ಯಯನವೆಂದರೆ ನಮ್ಮ ಸಂಸ್ಕೃತಿಯ ವಿಶ್ಲೇಷಣೆಯೇ ಆಗಿದೆ. ಜನವಾಣಿಯ ಬಹುಮುಖತೆಯ ದಾಖಲು ಕ್ರಮ ಎಷ್ಟು ಮಹತ್ವದ್ದೋ, ಅಷ್ಟೇ ಶ್ರಮದ್ದು ಕೂಡ. ಶಿಷ್ಟ ಸಾಹಿತ್ಯದ ಏಕತಾನತೆಗೆ ದನಿ ಮತ್ತು ಸಂವೇದನೆ ಜೋಡಿಸಿದ್ದು ಜಾನಪದ ಸಾಹಿತ್ಯ. ಹಾಗಾಗಿಯೇ **'ಜನವಾಣಿ ಬೇರು; ಕವಿವಾಣಿ ಹೂ'** ಎಂಬ ಮಾತಿದೆ.

ಇಷ್ಟು ಮಹತ್ವವುಳ್ಳ ಈ ಸಾಹಿತ್ಯದ ಸಂಗ್ರಹ, ದಾಖಲು, ಪ್ರಕಟಣೆಗೆ ಅಗತ್ಯವಾದ ಜನರ ಸಹಕಾರದಂತೆಯೇ ಪ್ರಭುತ್ವದ ಆಸರೆ ಬೇಕು. ಆ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಸಂಪುಟದ ಪ್ರಕಟಣೆಯಂತಹ ಮಹತ್ವದ ಕಾರ್ಯ ಕೈಗೊಂಡಿದೆ. ಈ ಯೋಜನೆ ಅಡಿಯಲ್ಲಿ ೯೦ ಸಂಪುಟ ಹೊರತರಲು ತೀರ್ಮಾನಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಈ ಗುರುತರ ಜವಾಬ್ದಾರಿಯ ಮುಖ್ಯ ಪಾಲನ್ನು ಹೊತ್ತು ಈ ಕಾರ್ಯವನ್ನು ನಿರ್ವಹಿಸಿದೆ. ಸಮೃದ್ಧ ಜಾನಪದ ಸಾಹಿತ್ಯದ ಪರಂಪರೆ-ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂಪುಟಗಳು ರೂಪುಗೊಳ್ಳುವಂತೆ ನೋಡಿಕೊಳ್ಳಲಾಗಿದೆ.

ನಾಡಿನ ಉದ್ದಾಮ ಜಾನಪದ ತಜ್ಞರು ಈ ಸಂಪುಟಗಳನ್ನು ಸಿದ್ಧಗೊಳಿಸಿದ್ದಾರೆ. ಸಂಪಾದಕರು ಅತ್ಯಂತ ಶ್ರಮವಹಿಸಿ ಈ ಸಂಪುಟಗಳನ್ನು ರೂಪುಗೊಳಿಸಿರುತ್ತಾರೆ. ಹೀಗೆ ಈ ಬೃಹತ್ ಯೋಜನೆಗೆ ಸಹಕರಿಸಿದ, ಕೈ ಜೋಡಿಸಿದ ಎಲ್ಲ ಮಹನೀಯರನ್ನೂ ನೆನೆಯುವುದು ಸಂತಸದ ಸಂಗತಿಯಾಗಿದೆ.

ಈ ಕಾರ್ಯದಲ್ಲಿ ತೊಡಗಿಕೊಂಡ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಮತ್ತು ಸಂಪಾದಕ ಮಂಡಳಿ ಸದಸ್ಯರಿಗೆ ವಿಶೇಷ ವಂದನೆಗಳು.

ತಮ್ಮ ವಿದ್ವತ್ ನುಡಿಗಳೊಂದಿಗೆ ಕೃತಿಯ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮರಾಜೇ ಅರಸು, ನಿರ್ದೇಶಕರಾದ ಶ್ರೀ ಮನು ಬಳಿಗಾರ್, ಸಂಚಾಲಕರಾದ ಶ್ರೀ ಕಾ.ತ. ಚಿಕ್ಕಣ್ಣ, ಶ್ರೀ ಎಚ್. ಶಂಕರಪ್ಪನವರು ಈ ಯೋಜನೆಯ ನಿರ್ವಹಣೆಯಲ್ಲಿ ಅಪಾರ ಸಹಕಾರ ತೋರಿದ್ದಾರೆ, ಅವರಿಗೆ ಹಾಗೂ ಈ ಮಹತ್ವದ ಯೋಜನೆಯನ್ನು ತಮ್ಮದೆಂದು ಭಾವಿಸಿ, ನಿರ್ವಹಿಸಿದ ಕರ್ನಾಟಕ ಜಾನಪದ ಅಕಾಡೆಮಿಯ ಸಿಬ್ಬಂದಿಗೆ ವಂದನೆಗಳು.

**(ಗೊ.ರು. ಚನ್ನಬಸಪ್ಪ)**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

## ಸ್ತುತಿಗಳು

## ೧. ಶ್ರೀ ಗಜಾನನ ಸ್ತೋತ್ರ

ಗೌರಿ ಕಂದ ಗಣಪಣ್ಣ ।
ಅರವತ್ನಾಲ್ಕು ವಿದ್ಯೆ ನಿಪುಣ ।

ಸುರಳಿ ಸೊಂಡಿ ಕಿರೀಟ ಧಾರಣ ।

ತೋರ ಎನ್ನ ಮೇಲೆ ಕರುಣ ।

ಸ್ಮರಿಸುವೆ ಅನುದಿನಾ ।

ಬಾರೋ ಗಜವದನ ।

ಬಾರೋ ಗಜವದನ । ಬಾರೊ ಗಜವದನ ॥೧॥

ಮರಿಯದೆ ಪನ್ನೀರನ್ನ ।

ಕರಿಕಿ ಪತ್ರಿ ಮರಗದವನ ।

ಸುರ ಹೊನ್ನಿ ಪುಷ್ಪಗಳನ ।

ಏರಿಸಿ ಕರ ಮುಗಿಯುವೆನ ।

ಆರತಿ ಬೆಳಗುವೆನ ।

ಬಾರೋ ಗಜವದನ । ಬಾರೋ ಗಜವದನ ॥೨॥

ಸಿರಾ ಪೂರಿ ಬೆಸನ ।

ಹೆರ ತುಪ್ಪ ಕರಿಗಡಬ ಅನ್ನ ।

ಕ್ಷೀರ ಮಸರ ಕಲಿಸಿ ಪೂರ್ಣ ।

ಸಾರ ಶಂಡಗಿ ಚೂರ್ಣ ।

ತೋರಿಸುವೆನು ಬಾರಾ ।

ಬಾರೋ ಗಜವದನ । ಬಾರೋ ಗಜವದನ । ।೩॥

ಕಾರ್ಯಕ್ರಮದೊಳು ನಿನ್ನ ।

ಶಿರಬಾಗಿ ಬೇಡುವೆನ ।

ವರವ ಕೊಟ್ಟ ಮುನ್ನ ।

ಪೊರೆಯಯ್ಯ ಕಂದನ್ನ ।

ದೂರ ಮಾಡೋ ವಿಘ್ನಾ ।

ಬಾರೋ ಗಜವದನ । ಬಾರೋ ಗಜವದನ ॥೪॥

ಧರೆಯೊಳು ವಾಹೀನ

ಪುರ ಹುಲಕುಂದ ಜಾಣ

ವರಕವಿ ಭೀಮಣ್ಣ

ಗುರು ಹೇಳಿದ ಇದನ

ಅರುವ ಆಯ್ತು ಪೂರ್ಣ

ಬಾರೋ ಗಜವದನ । ಬಾರೊ ಗಜವದನ ॥೫॥

**ರಚನೆ :** ಹುಲಕುಂದ ಭೀಮಕವಿ

**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧. ಶ್ರೀ ಗಜಾನನ ಸ್ತೋತ್ರ

ಶ್ರೀ ಗಣಪತಿ ಗಣನಾಥ - ಯಾರೂ ಇಲ್ಲ ನಿಮ್ಮ ಹೊರತ ।
ವಿದ್ಯಾದೊಳಗ ಸಮರ್ಥ - ಬುದ್ಧಿಕೊಡಾವ ವಿಪರೀತ ।
ಏನ ಹೇಳಲಿ ಡೌಲಾ ॥
ವಜ್ರ ಕಿರೀಟ ತಲಿಯ ಮ್ಯಾಲಾ ॥೧॥

ಸರಳಸೊಂಡಿ ಸುರಳಿ ಸುತ್ತಿ ಹೆಚ್ಚಿನಾವ ಗಣಪತಿ ।
ಕೊಡಬೇಕೆನಗ ಮತಿ - ಮಾಡತೀವ ನಿಮ್ಮ ಸ್ತುತಿ ।
ನೇಮ ತಪ್ಪುದಿಲ್ಲಾ ॥
ನಿಮ್ಮ ಕೀರ್ತಿಗೆ ಅಳವಿಲ್ಲಾ ॥೨॥

ಕರ್ಪುರೂದ ದುಂದಕಾರ - ದಿನ್ನ ಅಯ್ದು ಪ್ರಃಕಾರ ।
ಬೇಕ ನಿಮಗ ಪನಿವಾರ - ಕೊರಳಾಗ ಹೂವಿನ ಹಾರ । ಹರುಷದಿಂದ ಬರತಾರ ।
ಏನ ಹೇಳಲಿ ಡೌಲಾ ॥
ಕೂಡಿದುಬ್ಬ ಕೆಂಪ ನಾಮ ನಸಲಾ ॥೩॥

ವೀರ - ತಾತು ಇಬ್ರು ಜೋಡಿ - ನಾಗೇಶಿ ನಿನ್ನ ತೋಡಿ ।
ಹೇಳಿದಾರ ಗನ್ನಮಾಡಿ - ಬರಬೇಕ ತೋಡಿಗಿ ತೋಡಿ । ಜನಕ ತಿಳಿವಂಗ ನುಡಿ ।
ಮಾಡಬ್ಯಾಡ್ರಿ ಗದ್ದಲಾ ।
ತರಿಬಿ ಕೇಳ್ಯಾನ ಮಾಸ್ತರ ಮಲ್ಲಾ ॥೪॥

**ರಚನೆ :** ಮಾಸ್ತರ ಮಲ್ಲಾ
**ಕೃತಿ :** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ೨. ಗಣಪತಿ ಸ್ತುತಿ-೧

ಗಣಪತಿ ನಿಮ್ಮ ಸ್ತುತಿ ಮಾಡುವೆನು ಸಭಾದೊಳು
ಮತಿಕೊಡು ವಿದ್ಯದ ಜಯ ಪೂರ್ಣಾ ।
ಜನ ನನನ ನನನ ಜಂಕರಿ ನುಡಿಸುತ
ತಾಳದೊಳಗ ಮಾಡುವೆ ಸ್ಮರಣಾ ॥

ಬೇಕಾದಂತಾ ಚಂಕು ಚಾಳ ಚಂಕು ಚಾಳ ಗಜಮುಖ
ಸರಿಯಾಗಿ ಬಂದ ನಿಂತ ಸಭಾದೊಳಗ ।
ಇಲಿಯ ಮ್ಯಾಗ ಹತ್ತಿಬಂದ ಸುತ್ತಮುತ್ತ ಯಾರಿಲ್ಲ
ಹೊತ್ತಿಗಿ ಹಿಡದ ಬಲಗೈಯ್ಯಾಗ ।

ನೀತಿವಂತರ ಮನಿಗಿ ಹೋಗಿ ಊಟಾ ಮಾಡಿ ಬರುವಾಗ
ತತ್ತರಿಸ್ಯಾಡಿ ಬಿದ್ದ ನಡು ದಾರಿಯೊಳಗೆ ।
ಪಡಡಡಡಡಡಡ ಹೊಟ್ಟಿ ಒಡದ
ಪಾಯಸ ಹೊಂಟಿತ ಕೆರಿ ಒಡದಾಂಗ ॥

**ಚಾಲ**

ಬಾಳ ಬಳದ ತುಂಬ ತಾನ ಅದೃಷ್ಟಾ
ಸರಪ ಹಿಡದ ಹಾಕತಾನ ಕಟ್ಟಾ ॥
ಚಂದ್ರ ನೋಡಿ ನಕ್ಕ ಕೊಕ್ಕಟಾ
ಗಣಪತಿಗೆ ಬಂತ ಬಹು ಸಿಟ್ಟಾ ॥
ತಿಗಡೊಳ್ಳಿ ಊರ ಕವಿ ಮೆಟ್ಟಾ
ಮಾರುತಿ ತಿಳಿಸಿದ ಮರಿಕಲ್ಲಗ ಗುಟ್ಟಾ ॥

**ಏರ**

ಚಕ್ರ ವಡದ ಚವತಿ ದಿವಸ ಅರ್ದಾಹೋತ ಸ್ರಾಪದಿಂದ
ಚಂದ್ರನ ಮಾರಿ ನೋಡಬ್ಯಾಡ್ರಿ ಚವತಿ ದಿನಾ ।
ಜನ ನನನ ನನನ ಜಂಕರಿ ನುಡಿಸುತ
ತಾಳದೊಳಗೆ ಮಾಡುವೆ ಸ್ಮರಣಾ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲ ಕವಿಯ ಗೀಗೀ ಪದಗಳು

## ೪. ಗಣಪತಿ ಸ್ತುತಿ-೨

ಪಾರ್ವತಿಯ ಕಂದ ಕೈಲಾಸದಿಂದ ಬಂದ ಇಳದಿಂದ
ವಿಭೂತಿ ಗಂಧ ಪುಷ್ಪ ಚಂದ ಚಂದ ವಾಸ ಮಕರಂದ
ಪೂಜಿಸುವೆ ನಾನಾ ಪೂಜಿಸುವೆ ನಾನಾ ।
ದೂರ ಮಾಡೊ ಬಂದಂತ ವಿಘ್ನ ಸ್ವಾಮಿ ಭಗವಾನಾ
ಗಣ್ಣಗಜವದನಾ ಗಣ್ಣಗಜವದನಾ ॥

ಆರು ಶಾಸ್ತ್ರ ಪುರಾಣ ಹದಿನೆಂಟ ವೇದಗಳಗುಟ್ಟ
ಸತ್ಯ ಸರ್ವ ನೀ ಶ್ರೇಷ್ಠ ಬಾಲಲೀಲಾಟ ತಿಳದಿ ಮುಕ್ಕಟ್ಟ
ಹಸ್ತ ನಮಗಿಟ್ಟ ಮಾಡೊ ಪಾಲನಾ ಮಾಡೊ ಪಾಲನಾ ।
ಎಡಬಿಡದೆ ಮಾಡುವೆನೊ ಭಜನಾ ಇಲಿಯು ನಿನ್ನ ವಾಹನ
ಗಣ್ಣಗಜವದನಾ ಗಣ್ಣಗಜವದನಾ ॥

ಮೂರು ಲೋಕದಲ್ಲಿ ನಿಮ್ಮ ಶೃತಿ ಸಾರತ್ಯೆತಿ ಕೀರ್ತಿ
ಸಭಾದಲ್ಲಿ ಭರತಿ ನಾಮಗಣಪತಿ ಅಕ್ಕಂಡ ಮೂರ್ತಿ
ಮರಿಯಲಾರೆ ನಿನ್ನ ಮರಿಯಲಾರೆ ನಿನ್ನಾ ।
ಜಂಕರಿಯನಾದ ಜನನನನ ನುಡಿಸಿ ವಂದಸವನ
ಗಣ್ಣಗಜವದನಾ ಗಣ್ಣಗಜವದನಾ ॥

ಜೋಮಾಲಿ ಹಾರ ಕೊಳಳಲ್ಲಿ ಶಂಖ ಕೈಯಲ್ಲಿ ವಜ್ರ ಬೆರಳಲ್ಲಿ
ನಂದಿ ಬದಿಯಲ್ಲಿ ಕಿರೀಟ ತಲಿಮ್ಯಾಲಿ
ಹೊಳಿಯುತಾವ ರತನ ಹೊಳಿಯತಾವ ರತನಾ ।
ಮರಿಕಲ್ಲ ಮಾಡಿದ ಕವನ ತಿಗಡೊಳ್ಳಿ ಆತನ ಸ್ಥಾನ
ಗಣ್ಣಗಜವದನಾ ಗಣ್ಣಗಜವದನಾ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಗೀಗೀ ಪದಗಳು

## ೫. ಗಣಪತಿ ಸ್ತವನ

ಗಜಾನನ ಗಣಪತಿ
ಮಾಡತೇನ ನಿನ್ನ ಸ್ತುತಿ
ಪಹಿಲೆ ಪ್ರಥಮ ನಾನಾ - ನನ್ನ
ಮಾನಾ ಅಪಮಾನಾ - ಎಲ್ಲಾ
ನಿಮ್ಮ ಸ್ವಾಧೀನಾ

ಕರಕಿಪತ್ರಿ ಕನಗಲದ್ದೂವ
ತಂದ ಇಟ್ಟೇನ ನಿಮ್ಮ ಮುಂದ
ಪೂಜಾದ ಸಾಮಾನಾ - ಎಲ್ಲಾ
ಮತಿಕೊಟ್ಟ ಕಾಯಬೇಕೋ
ನಿನ್ನ ಬಾಲಕನಾ

ಬಾಗೇವಾಡಿ ಗ್ರಾಮಚಂದ
ಕವಿ ಹುಟ್ತಾವ ಕಲ್ಪನದಿಂದ
ದೇಶಕ ವಾಹೀನಾ -
ಬಾಳಗೋಪಾಳನ ಅಕ್ಷರಾ
ಬಹಳ ಹಸನ ಹಸನಾ

**ರಚನೆ :** ಬಾಳಗೋಪಾಳ
**ಕೃತಿ :** ಬಾಳಗೋಪಾಳನ ಲಾವಣಿಗಳು

## ೬. ಸ್ಮರಣೆ ಮಾಡುವೆನು ದೇವ

ಸ್ಮರಣೆ ಮಾಡುವೆನು ದೇವ ।
ಕರುಣಿಸಯ್ಯಾ ಮಹಾದೇವ ।
ಮರಣ ರಹಿತ ಮೃತ್ಯುಂಜಯಾ ।
ಧರಣಿ ಪಾಲಕ ನೀನಾ ।
ಶರಣರಿಗೆ ಒಲದಿಯೋ ಭಗವಾನಾ ॥೧॥

ನಂದಿ ವಾಹನ ನಾಗಭರಣ ।
ಇಂದು ಧರ ನಿಮ್ಮ ಚರಣ ।
ಹೊಂದಿಕ್ಕೊಂಡ ಮಾರ್ಕಂಡೇಯನ ।
ಬಂದ ಕಾಯ್ದಿ ಅಭಿಮಾನ ।
ಮೃತ್ಯು ದೇವಿನ್ನೋಡಿಸಿದಿ ಒಂದೇ ಸವನಾ॥೨॥

ಪಶುಪತಿ ಶಶಿಧರ । ವಿಷಕಂಠ ಶಂಕರ ।
ದೋಷ ನಾಶ ಪರಿಹಾರ ।
ಈಶ ಪಾಲಿಸೋ ನೀನಾ ।
ಕೂಸ ನಾನು ಪೋಷಿಸೋ ಅನುದಿನಾ ॥೩॥

ಕುಂತದೈವ ಕಲಲ । ಮಾಡಬಾರ್ದ ಗದ್ದಲ ।
ದಯಾ ಅವರ ಮ್ಯಾಲ । ಇರಬೇಕ ಪರಿಪೂರ್ಣ ।
ಹುಲಕುಂದ ರಾಮೇಶ ಕಾಯೋ ನೀನಾ ॥೪॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೭. ಸಾಂಬ ಶಿವ

ಸಾಂಬ ಶಿವ ಮಾಡುವೆನು ಧ್ಯಾನಾ
ಸರ್ವರಿಗೆ ಮುಕ್ತಿ ಕೊಡಾಂವಾ ನೀನಾ ॥

ಪಿಂಡ ಬ್ರಹ್ಮಾಂಡಗಳ ಉತ್ಪನ್ನಾ
ಜನನ ಮರಣ ನಿಮ್ಮ ಸ್ವಾಧೀನಾ ॥

ಸಭಾದೊಳು ಕಾಯಿರಿ ನನ್ನ ಮಾನಾ
ಅಜ್ಞಾನಿ ಮ್ಯಾಲ ಇರಲಿ ಅಂತಃಕರಣಾ

ಭಕ್ತಿಯಿಂದ ಬೇಡಿಕೊಳ್ಳುವೆ ನಾನಾ
ಸದ್ಯದೊಳು ಆಗಬೇಕ ಪ್ರಸನ್ನಾ ॥

ತಿಗಡೊಳ್ಳಿ ಊರ ನಮ್ಮ ಸ್ಥಾನಾ
ಬಲಭೀಮ ಆದಾನೊ ಪ್ರಸನ್ನಾ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಗೀಗೀ ಪದಗಳು

## ೮. ಮಹಾ ತಾಯಿ ಜಗನ್ಮಾತೆ

ಜಯ ಜಯ ಭುವನೇಶ್ವರಿ । ರೈತರ ಐಶ್ವರಿ ।
ಸ್ವಯಂ ಓಂಕಾರ ರೂಪ ಧಾರಿಣಿ ।
ಅಂಡ ಪಿಂಡ ಉದ್ಭಿಜ ಉತ್ಪನ್ನಿ ॥ ಪ ॥

ವಿಘ್ನೇಶ್ವರ ಮಾತೆ ಶೀಘ್ರ ಅಗ್ನಿ ದೇವತೆ ।
ದುರ್ಗಾಂಬೆ ಭಾರ್ಗವಿ ಸ್ವರ್ಗ ನಿಸರ್ಗದ ಖ್ಯಾತೆ ।
ವರ್ಗ ವರ್ಗದ ಜೀವಿಗೆ ಮಾರ್ಗ ದರ್ಶಕ ಮಮತೆ ।
ನಿರಾಕಾರಿ ॥ ನಿ ॥ ನಿರೀಶ್ವರಿ ನೀನೆ । ಧರಣಿ ಕಾರಣಿ ॥೧॥

ಯಕ್ಷಣಿ ದಾಕ್ಷಾಯಣಿ
ರಾಕ್ಷಸರನ ಆ ಕ್ಷಣದಿ ಮಾಡಿದಿ ಮರ್ಧಿನಿ ।
ವಿದ್ಯಾರಣ್ಯ ಗೊಲಿದ ಭವಾನಿ ॥
ಮಾಯಾ ಶಕ್ತಿ - ಕಾಯಾ ಶಕ್ತಿ ।
ಕ್ರಿಯಾ ಶಕ್ತಿ ಸಂಪೂರ್ಣೆ ।
ಜೀವಶಕ್ತಿ ಭಾವಶಕ್ತಿ ಶಿವಶಕ್ತಿ ಪರಿಪೂರ್ಣೆ ।
ಇಚ್ಛಾಶಕ್ತಿ ವಾಚಾಶಕ್ತಿ ಸರ್ವ ಶಕ್ತಿಯ ಜನನಿ ।
ಜಗನ್ಮಾತೆ । ಜ । ಪಾರ್ವತಿಯ ನಾಮ ಧರಿಸಿದ ಸನ್ಮಾನಿ॥೨॥

ಬಾಲ ಯವ್ವನ ವೃದ್ಧ ಇವು ಮೂರುಕೆಲ್ಲಾ ।
ಅಧಿಕಾರಿಯಾದಂಥ ಶರಣಿ ।
ನಾ ನಂಬಿ ಮಾಡುವೆ ನಿನ್ನ ಸ್ಮರಣಿ ॥
ಸ್ವತಂತ್ರ ಸ್ವರಾಜ್ಯದ ಮಂತ್ರ ಅರುಹಿದ ದೇವಿ ।
ಬಂಕೀಮ ಚಂದನ ಅಂತರಂಗದ ಭಾವಿ ।
ಹುಲಕುಂದ ಭೀರ್ಮೇಶ ನಿನ್ನಿಂದ ಅನಿಸಿದ ಕವಿ ।
ಜಗದೇವಿ । ಜ । ಈ ಯುಗದೊಳು ಝುಗಝುಗಿಸುವ ಉನ್ಮನಿ ॥೩॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೯. ಮರೆಯಲಾರದ ತಾಯಿ

ಭಾರತ ಮಾತೆ ನೀನು ।
ತೋರೆ ಕರುಣವನ್ನು ।
ಬಾರಿ ಬಾರಿಗೆ ನಾನು ।
ಸ್ಮರಣೆ ಮಾಡುವೆನು ।
ಪರಿ ಪಾಲಿಸ ಜನನಿ ।
ಮರಯದೆ ಪೊರೆಯ ನರನ ವಾಣಿ ॥೧॥

ಮೇರು ಪರ್ವತವನ್ನು ।
ಕಿರೀಟ ಮಾಡಿದೆ ನೀನು ।
ಕ್ಷೀರ ಸಮುದ್ರವನ್ನು ।
ಸೀರಿ ಉಟ್ಟೆವ್ವ ನೀನು ।
ಮೂರು ಲೋಕದ ಜ್ಞಾನಿ ।
ಪಾರ ಮಾಡ ಸರ್ವರ ಸಂಪನ್ನಿ ॥೨॥

ದುಷ್ಟರಿಗೆ ಶಿಷ್ಟರಿಗೆ ।
ಭ್ರಷ್ಟರಿಗೆ ಶ್ರೇಷ್ಟರಿಗೆ ।
ಒಟ್ಟ ಕನಿಷ್ಟರಿಗೆ ।
ಕಷ್ಟ ಸೋಸವರಿಗೆ ।
ಹೊಟ್ಟೆ ಗ್ಹಾಕುವ ಜನನಿ ।
ಪಕ್ಷಪಾತ ಮಾಡದಂಥ ಕಾತ್ಯಾಯನಿ ॥೩॥

ಕವಿಗಳ ಭವಿಗಳ ।
ಶ್ರವಗಳ ಜೀವಿಗಳ ।

ಅವನಿ ಪಾಲಕರ ।
ಅವತಾರಿಗಳ ।
ಸಲುಹುವಂಥ ಸರ್ವಾಣಿ ।
ಮರೆಯಲಾರೆ ತಾಯಿ ನಿನ್ನ ಭಜನಿ ॥೪॥

ಅಂದವಾದ ಹುಲಕುಂದ
ಚಂದ ಭೀಮೇಶನ ಪದ
ಮಂದಿಗೆಲ್ಲಾ ಆನಂದ
ಹೊಂದಿಶ್ಯಾನ ಒಂದೊಂದ
ಪ್ರಾಸ ಬಂಗಾರ ಖಣಿ
ದೇಶದೊಳು ಆತ ಬಹಳವಾಹಿನಿ ॥೫॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೦. ಶ್ರೀ ಗುರುವೆ ಪರಮ ಪ್ರಖ್ಯಾತ ಜಗದ್ವಿಖ್ಯಾತ

ಶ್ರೀ ಗುರುವೆ ಪರಮ ಪ್ರಖ್ಯಾತ ಜಗದ್ವಿಖ್ಯಾತ ।
ನಿಗಮಾಗಮಾತೀತ ಪೊಗಳುವೆ ನಾನ ।
ರಂಗ ಭೂಮಿಗಿಳಿಯ ಬೇಕ ನೀನಾ ॥ಪ॥

ಬಗೆ ಬಗೆಯ ರಾಗದಲಿ ಪ್ರಗತಿಯಾಗಬೇಕ ಗಾನ ।
ಬಿಗಿ ಬಿಗಿದು ಶೃತಿನಾದ ಬ್ರಹ್ಮನಾಗಬೇಕ ತಾನ ।
ಭುಗಿ ಭುಗಿಲ್ ಎಂಬ ಅಗ್ನಿಗೆ ಡಪ್ಪ ಕಾಸಿ ಚಣನ ।
"ಕಂಠತ್ರಾಣ" ಕಂಠ ತ್ರಾಣ ತಾಳದಲ್ಲಿ ನಿನ್ನಿದಿರಲಿ ವಾಸಸ್ಥಾನ ।
ರಂಗ ಭೂಮಿಗಿಳಿಯ ಬೇಕ ನೀನಾ ॥೧॥

ಶಿವ ಯೋಗ ತಿಳಿಸಿ ಭವ ರೋಗ ಅಳಿಸುವ ಕಾವಿ ಧಾರಿ ಯ ರಮಣಾ ।
ಜವದಲ್ಲಿ ಪೂಜಿಪೆ ತವ ಚರಣಾ ॥
ಕವಿವರ್ಯಗೆ ಅವನಿಯ ಸವಿಯನುಣಿಸಿ ಸಂಪೂರ್ಣ ।
ನವಯುಗದ ಭವಿಷ್ಯದ ಶ್ರವಣ ಕೊಟ್ಟ ಪರಿಪೂರ್ಣ ।
ಕಿವಿಯಲ್ಲಿ ಬೋಧಿಸಿದ ಜೀವದೇವ ಆತ್ಮ ವರಣ ।
"ಬ್ರಹ್ಮಜ್ಞಾನ" ಬ್ರಹ್ಮಜ್ಞಾನ ಸ್ಥಿರಗೊಳ್ಳಲಿ ಕಾಪಾಡಯ್ಯ ಕಂದನ್ನ ।
ರಂಗ ಭೂಮಿಗಿಳಿಯ ಬೇಕ ನೀನಾ ॥೨॥

ಕತ್ತಲೆಲ್ಲ ಹೋಗಿ ಸುತ್ತಲೆ ಜ್ಯೋತಿ ಬಿತ್ತ ಮತ್ಯಾತರ ಅನುಮಾನ ।
ಉತ್ತಮ ಸತ್ಯದ ಕಿರಣ ॥

ಮೃತ್ಯುವಿನ ಅಂಜಿಕಿಲ್ಲ ನಿತ್ಯದಿ ಮಂತ್ರದ ಪಠಣ ।
ಕೃತಿ ಕೃತ್ಯನಾಗುವೆನು ಸ್ತೋತ್ರ ಮಾಡಿ ತವ ಚರಣ ।
ಪ್ರತಿಯೊಂದು ಕೃತಿಯಲಿ ಅತಿ ಹಿತದಿಂದ ಪೊರೆಯನ್ನ ।
"ಹುಲಕುಂದ" ಹುಲಕುಂದ ಭೀಮ ಕವಿ ಸ್ಮರಿಸೆಂದ ಗುರುವಿನ ಚರಣ ।
ರಂಗ ಭೂಮಿಗಿಳಿಯಬೇಕ ನೀನಾ ॥೩॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೧. ಜಿನೇಶ್ವರ ಧ್ಯಾನ

ಧ್ಯಾನವ ಮಾಡಿರೊ ಜಿನೇಶ್ವರ
ಧ್ಯಾನವ ಮಾಡಿರೋ ॥

ಮಾನವ ಜನರಿಗೆ ಮತಿಕೊಡುವ ಮಹಾತ್ಮನ್ನ
ಸ್ತುತಿ ಮಾಡಿ ಯುಕ್ತಿಲಿಂದ ಗತಿ ಎಂಬೊ ಮುಕ್ತಿಪಡಿರೋ ॥

ಪರಮ ಪಾವನ ಮೂರ್ತಿ ಧರಣಿಯೊಳು ಅವರ ಕೀರ್ತಿ
ಅರಹಂತ ದೇವರನ್ನ ಮರಿಯದೆ ಭಜಿಸಿರೊ ॥

ಮನಸಿನ ಮಡಿಉಟ್ಟು ಶಿಸ್ತಿಲಿಂದಲಿ ಬಂದು
ಮನಮುಟ್ಟಿ ಪೂಜಿಸಿ ಗಡನೆ ಗತಿ ಪಡೆಯಿರೋ ॥

ತಿಗಡೊಳ್ಳಿ ಊರಲ್ಲಿ ಹೊಸದಾದ ಬಸ್ತಿಯಲ್ಲಿ
ವಾಸ ಮಾಡಿದ ಪಾಸಮೂರ್ತಿ ಮರಿಕಲ್ಲ ಮಾಡಿದ ಸ್ತುತಿ ॥

ಜೈನರಾಗಿ ಜೈನರು ಹುಟ್ಟಿಬಂದ ಣಮೋಕಾರ ಮಂತ್ರ ಒಂದ
ಅನಬೇಕ ಬಸ್ತಿಗಿ ಬಂದ ಮನಾ ತೊಳದ ಮಾಡಬೇಕ ಜಳಕ ॥
ಸಂದೇಹವಿಲ್ಲದ ದೊರಕುವದು ಮೋಕ್ಷ ॥

ಪುಣ್ಯ ಪಡಿಯುವುದಕ್ಕೆ ಹುಣವಿ ನೋಂಪಿ ಬೆಳಗಬೇಕ
ಸಿದ್ಧಶಾಸ್ತ್ರ ಓದಬೇಕ ಅಹಿಂಸಾದಿಂದ ಸಾಗಬೇಕ ॥
ಸತ್ಯಾಸತ್ಯೆ ತಿಳದ ನಡಿಯಬೇಕ ॥

ತೀರ್ಥಕ್ಷೇತ್ರ ನೋಡಬೇಕ ದಾನಧರ್ಮ ಮಾಡಬೇಕ
ಪುಣ್ಯೇದ ಗಂಟ ಕಟ್ಟಬೇಕ ಮಾಡಿ ಇಟ್ಟಾಂಗ ಸ್ವಾಕ ॥
ದೊರಕೀತ ಮುಂದೀನ ಜನ್ಮಕ್ಕ ॥

ಬೈಲಹೊಂಗಲ ತಾಲೂಕ ತಿಗಡೊಳ್ಳಿ ಊರಚೊಕ್ಕ
ಎಲ್ಲಾರು ಬರಬೇಕ ಜಿನೇಶ್ವರನ ದರ್ಶನಕ ॥
ಮರಿಕಲ್ಲ ಸಖಿ ಹೇಳಿದ ಖಡಕ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿ ಗೀಗೀ ಪದಗಳು

## ೧೨. ಮಲಪ್ರಭಾ ಸ್ತುತಿ

ಮಲಪ್ರಭಾ ಅಂತ ಹೆಸರ ತಾಳಿದ ಅವತಾರ
ಇತಿಹಾಸ ಜಾಹೀರ ಜಿಲ್ಲಾ ಬೆಳಗಾಂವ ಶ್ಯಾರ
ಖಾನಾಪೂರ ತಾಲೂಕ ಹದ್ದಾ ॥
ಕುಳಕುಂಬಿಯಲಿ ಹುಟ್ಟಿ ಬಂದೆವ್ವಾ ಎದ್ದಾ ॥

ನೀ ಹುಟ್ಟಿದ ಸ್ಥಳ ಮಲ್ಲಾಡ ಸಾಗಿದೆವ್ವಾ ದವಡದೌಡ
ಎಷ್ಟೋ ಜೀವ ತಗೊಂಡ ವಾಹೀಣಿ ಪಡಿಕೊಂಡ
ಸೇರ್‍ಯಾಳ ಬೆಳವಲ ಹದ್ದಾ ॥
ನಿನ್ನಲ್ಲಿ ಇಲ್ಲವ್ವಾ ಭಿನ್ನ ಭೇದಾ ॥

ದೊಡ್ಡದೊಡ್ಡಗುಡ್ಡಗಳ ಅಡ್ಡಬಂದ್ರು ಬಳಬಳ
ಬಿಚ್ಚತಾವ ಎಂಥಾ ನಿವಳ ಭೂಮೆಲ್ಲಾ ಜಳಜಳ
ರಭಸದಿಂದ ದಾಟತಾಳ ಸಿಟ್ಟಿಗೆದ್ದಾ ॥
ತರಬೊ ಧೈರ್ಯ ಯಾರಿಗಿಲ್ಲಾ ಬಂದಾ ॥

ಕೂಗಿಕೋತ ನಡದಿ ಹೀಂಗ ಕೃಷ್ಣಾ ಎಂಬೋ ನದಿವಳಗ
ಹೋಗಿ ಕೂಡಿದಿಬೇಗ ಜಾತ್ರಿ ಆಗತೈತಿ ಈಗ
ಇತಿಹಾಸ ಪ್ರಸಿದ್ಧಾ ॥
ಹೆಸರಾಂತ ಕೂಡಲ ಸಂಗಂದಾ ॥

ತಿಗಡೊಳ್ಳಿ ಊರ ನಿವಳ ಹೊಸ ಹೊಸಾ ಪದಗಳ
ಮಾಡತೇವ ವಿರಳಾ ವಿರಳಾ ಹಾಡತೇವ ಜಳಜಳಾ
ಮಾರುತಿ ದಯದಿಂದಾ ॥
ಮರಿಕಲ್ಲಣ್ಣ ತಿಳಸತಾನ ಮುಂದ ಮುಂದಾ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿ ಗೀಗೀ ಪದಗಳು

# ೧೩. ಆಧ್ಯಾತ್ಮದ ಪದ

ಜಗದ್ವ್ಯಾಪಿ ಜಗದ್ಗುರು ಜಗದ್ರಕ್ಷಕಾ
ಸಾಂಬನಿಂದ ಆತ ಜಗದ ಉತ್ಪತ್ತಿ
ಸರ್ವ ಜೀವರಾಶಿಗಳಿಗೆ ಪರಮಾತ್ಮಗತಿ
ಸದಾ ನೆನಿಯಬೇಕ ಶಿವನಾಮ ಸ್ತುತಿ ॥
ಗುರುವಿನ ಧ್ಯಾನಾ ಮರಿಬ್ಯಾಡೊ ಮಾನವಾ
ಗುರುವಿನಿಂದ ಆಗೋದು ಮುಕ್ತಿ
ಹೀಂಗ ಹೇಳತೈತಿ ಶಾಸ್ತ್ರದ ರೀತಿ ॥

ಎಂಭತ್ತ ನಾಲ್ಕ ಲಕ್ಷ ಯೋನಿ ತಿರಗಿ ಬಂದಿ
ಆಗ ಜ್ಞಾನ ಇದ್ದಿದ್ದಿಲ್ಲ ನಿನ್ನಹಂತಿ
ಈಗ ಮತ್ತ ಮಾನವ ಜನ್ಮ ಬಂದೈತಿ ಹಿಂದಿಂದ ಮರತಿ
ತಿಳದನೋಡೊ ಸ್ಥಿರವಲ್ಲ ಮಂದಮತಿ ॥
ಸಾಧು ಸಂತರು ಸಾರಿ ಸಾರಿ ಹೇಳತಾರ
ಹುಟ್ಟೋದು ಸಾಯೋದು ನಡದೈತಿ
ಎಂದ ಬಿಟ್ಟsತಿ ॥

ಆಸೇಕ ಬಿದ್ದ ಸುಳ್ಳ ಗಾಸಿ ಆಗಬ್ಯಾಡ
ಸಂಸಾರಂಬೋದು ಮೂರದಿನದ ಸಂತಿ
ಮಂದಿ ಬಳಗೆಲ್ಲಾ ನನ್ನವರಂತಿ
ಮೆಚ್ಚಿಕೊಂಡ ನೀ ಕುಂತಿ ॥
ಯಮನ ದೂತರು ಬಂದು ಎಳದ ಒಯ್ಯುವಾಗ
ಯಾರೂ ಇಲ್ಲ ನಿನ್ನ ಸಂಗಾತಿ
ಯಮನ ಮುಂದ ಕೊಡಬೇಕ ಜಡತಿ ॥

ಅರುವಿನ ಜನ್ಮ ಇದು ಅರಿತಾಂವ ಬ್ರಹ್ಮಾ
ಅರಿಯದವಗ ಇಲ್ಲ ಸದ್ಗತಿ

ನಾನೇ ನಾನೇ ಅನ್ನೋದು ನರಕದ ಪ್ರಾಪ್ತಿ
ನಂದು ತಂದು ಅಂತ ಸುಳ್ಳ ಹೆಣಿಗ್ಯಾಡತಿ ॥
ಬಾಳ ಹೇಳೋದೇನ ಗೋಳತಿ ತಮ್ಮಾ
ತಿಳದ ನೋಡಿ ನಡಿಬೇಕ ಪೂರ್ತಿ
ಆಗೋದ ಶಾಂತಿ ॥

**ಒಂದನೇ ಚಾಲ**

ದುಡದುಡದ ಗಳಿಸಿ ಜಿಂದಗಾನಿ ದೊಡ್ಡ ಹೊಲಾಮನಿ
ಅಂತೀಯೋ ನಂದಾ
ಎಲ್ಲಾ ಬಿಟ್ಟು ನಡದ್ಯೋ ಇಲ್ಲಿಂದಾ ||

ಇದರೊಳಗೆ ಕಳದಿ ಆಯುಷ್ಯ ಆದಿ ಬಲುಗಾಸಿ
ನೋಡಿಕೋ ತಿಳದಾ
ಸುಖ ಆಗಲಿಲ್ಲೊ ಎಂದೆಂದಾ

ಹಗಲಿರುಳು ಇಲ್ಲ ಮನಶ್ಯಾಂತಿ ಬಿಡದ ಬಯಲ ಭ್ರಾಂತಿ
ತುಂಬೇತಿ ಅಭಿಮಾನ ಮದಾ
ನಿಂದಾ ಆಡತೀಯೋ ಮಂದೀದಾ

ಸ್ವರ್ಗ ಮರ್ತ್ಯ ಪಾತಾಳ ಇರೋದು ತನ್ನ ಮನದೊಳು
ನಡದಕೋ ನೀ ತಿಳದಾ
ಇದರಿಂದ ಶಾಂತಿ ದೊರಕುವದಾ ||

**ಎರಡನೇ ಚಾಲ**

ಮರಿಯ ಬ್ಯಾಡೊ ಗುರುವಿನ ಚರಣಾ
ಇದರಿಂದ ಮುಕ್ತಿಯ ಸೋಪಾನಾ ||

ಆದದ್ದೆಲ್ಲಾ ಆತೊ ಇಲ್ಲಿತನಾ
ಸಾಕ ಮಾಡೊ ಭವ ಬಂಧನಾ ||

ನಾಡೊಳು ತಿಗಡೊಳ್ಳಿ ಠಿಕಾಣಾ
ಮಾರುತಿ ಒಲದ ಮರಿಕಲ್ಲಗ ಪೂರ್ಣಾ ||
...ಮಾಡಿ ಹಾಡತೇವ ಹಸನಾ
ನಾಡೊಳು ಆದೀತ ವಾಹೀನಾ ||

ಬ್ರಹ್ಮಾನಂದ ಆನಂದ ಸ್ವರೂಪ ನೀನೆ
ತಿಳದ ನೋಡ ಮಂದಮತಿ
ನಿತ್ಯಾನಂದ ರೂಪ ನಿನ್ನೊಳಗೈತಿ
ಹಂತಿ ಎತ್ತಿನ್ಹಾಂಗ ಸುಳ್ಳ ಸುತ್ತ್ಯಾಡತಿ ||
ಗುರುವಿನ ದ್ಯಾಸಾ ಮರಿಬ್ಯಾಡೊ ಮಾನವಾ
ಗುರುವಿನಿಂದ ಆಗೋದು ಮುಕ್ತಿ
ಹೀಂಗ ಹೇಳತೈತಿ ಶಾಸ್ತ್ರದ ರೀತಿ

**ರಚನೆ :** ಮರಿಕಲ್ಲಕವಿ

**ಕೃತಿ :** ಮರಿಕಲ್ಲಕವಿ ಗೀಗೀ ಪದಗಳು

## ೧೪. ಪ್ರಾರ್ಥನೆ

ಗುರುವೆ ನಿಮ್ಮ ಪಾದಕೆ ಬೆರಸಿ
ಪೂಜಿ ಮಾಡುವೆ ಸಾಹಿತ ತರಸಿ
ತೀರ್ಥ ಸೀತಾಳದಿಂದ ಪಾದ ತೊಳಸಿ
ಅಬಿರ ಕಸ್ತೂರಿ ಅಂಗಕ ಧರಸಿ
ಜಾಜಿ ಪುಷ್ಪ ಮಲ್ಲಿಗೆ ಏರಸಿ ॥

ಹರುಷದಿಂದ ಲೋಬಾನ ಸುಡಸಿ
ವಾದ್ಯವಾಲಗ ಸಂಬಾಳ ಬಾರಸಿ
ಕಾಯಿ ಕಪ್ಪುರ ನೈವೇದ್ಯ ತೋರಸಿ
ಶಿರಬಾಗಿ ನಿಂತನಾ ಕೈ ಜೋಡಸಿ
ಎನ್ನ ಮ್ಯಾಗ ಆಗೀರಿ ಖುಷಿ ॥

ಮಂಗಳಾರತಿ ಬೆಳಗುವೆ ಹರುಷಿ
ಗುರುವೆ ನಿಮ್ಮ ನಾಮವ ಸ್ಮರಿಸಿ
ಬಾಜಿ ಬಜಂತರಿ ಕಾಳಿ ಹಿಡಿಸಿ
ರುದ್ರವೀಣಾ ತಂಬುರಿ ಮಿಡಿಸಿ
ಮಡಲಿ ಗತ್ತ ಗಾಯನ ನುಡಿಸಿ ॥

ಭುವನದೊಳಗೆ ಬಂದೆನು ಜನಿಸಿ
ಹರಿಯ ಪಾದಸೇವಕ ಅನಿಸಿ
ನಿಮ್ಮ ಪಾದ ಮ್ಯಾಲ ನನ್ನ ಆಶಿ
ನಿಜಾತೋರಿಸೊ ಗುರು ಪರಿಹರಿಸಿ
ಖಾಜಾ ವರವ ಬೇಡಿದ ಒಲಸಿ
ಗುರುವೆ ನಿಮ್ಮ ಪಾದಕ ಬೆರಸಿ
ಪೂಜಿ ಮಾಡುವೆ ಸಾಹಿತ ತರಸಿ ॥

**ರಚನೆ :** ಖಾಜಾಭಾಯಿ

**ಕೃತಿ :** ಜೀವನ ಸಂಗೀತ

## ೧೫. ಕವಿ ಪ್ರಾರ್ಥನೆ

ಮತಿಹೀನ ನಾ ನಿಮ್ಮ ಸ್ತುತಿ ಮಾಡತೇನ
ಪಾರ್ವತಿ ಪುತ್ರಗ ನಮ್ಮ ಶರಣಾ
ಒಂದಿಷ್ಟು ಪದಗಳ ಚಂದವಾಗಿ ಹೇಳತೇನ
ಲಾಲಸಬೇಕ ಬಡವನ ಶರಣಾ
ಕುಂತ ದೈವೆಲ್ಲಾ ಸ್ವಾದ ತಕ್ಕೊಳ್ಳಿರಿ
ಶಾಂತವಾಗಿರಿ ಅಮೃತಪಾನಾ
ಮಾಡಬ್ಯಾಡರಿ ನೀವು ಗದ್ದಲಾ
ಜ್ಞಾನಿಗಳು ಕೇಳಬೇಕ್ರಿ ನಂದು ಇಷ್ಟ ವಚನಾ
ಬುದ್ಧಿವಂತರು ನೀವು ತಿದ್ದಿಕೊಳ್ಳಿರೀಗಾ
ನಮಗ ಇಲ್ಲ ಅನಬ್ಯಾಡರಿ ಅಷ್ಟು ಜ್ಞಾನಾ
ಡೊಂಕ ಕಬ್ಬಿನ ಸವಿಯ ತಕ್ಕೊಳ್ಳಿರಿ
ಬಡಿಯಬ್ಯಾಡ್ರಿ ಹುಲ್ಲಿನ ಸಮಾನಾ
ಮಂದಮತಿ ನಾನಾ ನಿಮ್ಮ ಸ್ತುತಿಮಾಡತೇನಿ
ಪಂಡಿತರೆಲ್ಲಾ ಹಿಡಿಯಬೇಕ್ರಿ ಖೂನಾ
ಒರಿಗಿ ಹಚ್ಚಿ ನಿರ್ಣಯ ಮಾಡಿರಿ
ಹಿಟ್ಟ ಬೂದಿ ಮಾಡಬಾರದ್ರಿ ಸಮನಾ
ಹಾಡಿನ ಒಗಳ ಬಂದ ಶಬ್ದ ಹೋದರ
ನಮ್ಮ ಮ್ಯಾಲ ಇರಬೇಕ ಕರುಣಾ ॥೧॥

ಕೈ ಮುಗದ ದೈವಕ ಹೇಳತೇನ
ಬುದ್ಧಿವಂತರು ನೋಡಿರಿ ಸೋಸಿ
ಇನ್ನ ಮ್ಯಾಲ ತ್ರಿಕಾಲದಲ್ಲಿ ನಿಲ್ಲುವೆನು
ನನ್ನ ಗುರುವಿನ ಸ್ಮರಿಸಿ ಸ್ಮರಿಸಿ
ಹರನಕಿಂತ ಗುರು ಹೆಚ್ಚಿನಾವ ಅನಿಸ್ಯಾನ
ಭವ-ಭಯ ಬಿಡಿಸ್ಯಾನೋ ಪಾಸಿ
ಪಾಸಿ ಒಳಗ ಯಾಂವ ಇರಹೋಗತಾನ
ಆಂವಗ ಅನಬೇಕ ಯೋಗ ಋಷಿ
ಹಾಡಿನ ಒಳಗ ಒಂದ ಶಬ್ದ ಹೋದರ
ನಮ್ಮ ಮ್ಯಾಲ ಇರಬೇಕ ಕರುಣಾ ॥೨॥

ಸ್ವಚ್ಛ ಇಂಚಲಕ ಮೆಚ್ಚಿ ನಿಂತಿದಾನ
ಬಂಕನಾಥ ಹಳ್ಳಕ ತೀರ್ಥಾ
ತ್ರಿಮೂರ್ತಿ ಅವತಾರಾ ಅವಂದಾ
ವಿಷ್ಣು ಬ್ರಹ್ಮ ಮಹೇಶ್ವರಾ ಎಲ್ಲಾ
ಹಗಲಿ ರಾತ್ರಿ ಅಕ್ಷಯದೀಪಾ
ಸದಾಕಾಲ ಉರಿಯುದು ಕಪ್ರಾ

ತ್ರಿಕಾಲದಲ್ಲಿ ಪೂಜೆ ಆಗತೈತ್ರಿ
ಬಿಲ್ವ ಪತ್ರಿ ಅಂವಗ ಶಂಕರಾ
ಎಂಬತ್ತ ಏಳಕೋಟಿ ಸಭಾದಾಗ
ಬಂದ ನಿಂತಿದಾನ ಹರಿಹರಾ
ಅಣ್ಣಾರಾವಜಿ ವಸ್ತಾದನ ಜ್ಞಾನಾ
ಚರಣ (ಕಮಲ)ದಲ್ಲಿ ಗುರು-ಬ್ರಹ್ಮಹರಾ
ಬಾಳಗೋಪಾಳ ನಿಂತ ಹಾಡತಾನಾ
ನಮ್ಮ ಮ್ಯಾಲ ಇರಬೇಕ ಕರುಣಾ ॥೩॥

**ರಚನೆ :** ಬಾಳಗೋಪಾಳ
**ಕೃತಿ :** ಬಾಳಗೋಪಾಳನ ಲಾವಣಿಗಳು

## ೧೭. ಶರಣು ಶರಣು ಶರಣಾರ್ಥಿ

ಧರಣಿ ದೇವಿಗೆ ಪರಮ ಗುರುಗಳಿಗೆ ನಿರುತದಿ ಮಾಡುವೆ ಶರಣಾರ್ಥಿ ।
ವರವಿ ಪುರುಷರಾದ ಶರಣ ಧುರಿಣರಿಗೆ ಚರಣಕೆರಗಿ ನನ್ನ ಶರಣಾರ್ಥಿ॥ಪ॥

ಪರ ಊರಿಂದ ಬಂದ ಹಿರಿಯ ಕಿರಿಯರಿಗೆ ಮರೆಯದೆ ಇರುವದು ಶರಣಾರ್ಥಿ
ಅರಿಯದವರಿಗೆ ಹರೆಯದವರಿಗೆ ಸರಳದಿಂದ ಈ ಶರಣಾರ್ಥಿ ॥
ಬರೆಯ ಬಲ್ಲವರಿಗೆ ನಿರಿಕ್ಷರಿಗಳಿಗೆ ಪರಿ ಪರಿಯಿಂದ ನನ್ನ ಶರಣಾರ್ಥಿ ॥

ಸಿರಿವಂತರಿಗೆ ಗರೀಬ ಜನರಿಗೆ ಸರಿಯಾಗಿ ಮಾಡುವ ಶರಣಾರ್ಥಿ ।
ಸರ್ವರಿಗೆಲ್ಲ ನರ ಜನ್ಮ ಕೊಟ್ಟಂತೆ ಗುರು ತಾಯಿಗಳಿಗೆ ಶರಣಾರ್ಥಿ ।
ಪರಭಾರ ಕೂತ ಪದ ನಿರೀಕ್ಷಣೆ ಮಾಡುವ ಕರುಣಾಳುಗಳಿಗೆ ಶರಣಾರ್ಥಿ ॥

**ಚಾಲ**

ಪುರಾಣ ಹೇಳ ಕೇಳವರಿಗೆ ಶರಣಾರ್ಥಿ ।
ಹರಟೆ ಮಾತಿನ ಮಲ್ಲರಿಗೆ ಶರಣಾರ್ಥಿ ॥
ಸರಿಬಾರದೊಳವರಿಗೆ ಶರಣಾರ್ಥಿ ।
ಬರಿ ಬಾಯಿ ಮಾಡುವರಿಗೆ ಶರಣಾರ್ಥಿ ॥

**ಏರು**

ಸರಳ ಹೃದಯದಿಂದ ಕರುಣಿಸಿ ಕೇಳಿ ಹರುಷಗೊಂಬವರಿಗೆ ಶರಣಾರ್ಥಿ॥೧॥

ಹಿಂದುಸ್ಥಾನವನು ಚಂದಾಗಿ ನಡೆಸಿದಂಥ ಮುಂದಾಳು ನೆಹರುಗೆ ಶರಣಾರ್ಥಿ ।
ಗಾಂಧಿ ತತ್ವಕ್ಕೆ ಹೊಂದಿಕೊಂಡಂಥ ಬಂಧು ಭಗಿನಿಯರಿಗೆ ಶರಣಾರ್ಥಿ ।
ಸುಂದರ ಭಾರತದ ಆಂದೋಲನದಲ್ಲಿ ಮರಣ ಹೊಂದಿದ ಮಹಾತ್ಮರಿಗೆ ಶರಣಾರ್ಥಿ ॥

ಮಂದಿಯ ಹಿತಕಾಗಿ ತಂದ ತ್ಯಾಗಮಾಡಿ ಮುಂದೆ ಸಾಗವನಿಗೆ ಶರಣಾರ್ಥಿ ।
ಬೋಧದಿಂದ ಜನರ ಹಾದಿಗೆ ತರುವಂಥ ವೇದಾಂತಿಗೊಮ್ಮೆ ಶರಣಾರ್ಥಿ ।
ಕ್ರೋಧ ಕಾಮ ಮೋಹ ಮದ ಮತ್ಸರ ಬಿಟ್ಟ ಸದಾಚಾರಿಗಳಿಗೆ ಶರಣಾರ್ಥಿ ।

**ಚಾಲ**

ನಿದ್ದಿ ಬಡಕರಿಗೆ ಶರಣಾರ್ಥಿ ।
ಎದ್ದಕೊಂಡ ಕೇಳವರಿಗೆ ಶರಣಾರ್ಥಿ ।
ಗದ್ದಲ ಎಬಿಸುವವರಿಗೆ ಶರಣಾರ್ಥಿ ।
ಸದ್ದಾಗಿ ಕೇಳವರಿಗೆ ಶರಣಾರ್ಥಿ ॥

**ಏರು**

ವರಕವಿ ಹುಲಕುಂದ ಗುರು ಭೀಮೇಶನಿಗೆ ಶರಣು ಶರಣು ಶಿವ ಶರಣಾರ್ಥಿ॥೨॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೮. ಮಂಗಲ

ಶ್ರೀನಾಥಕಾಂತ ಗಣನಾಥ । ಜಾತ ಬಹುಶಾಂತ । ತಾತವೇದಾಂತ ।
ಮಾತೃ ಪ್ರತೀತ । ಗೋತ್ರ ಏಕಾಂತ । ಚಿತ್ತ ಏಕದಂತ ।
ಶ್ವೇತ ವರ್ಣ । ಸುತ್ತ ಸುಳಿಯುತ । ಸತ್ಯ ಅನಂತ ।
ನಿತ್ಯ ಭಜಿಸುವೆನಾ ॥೧॥

ಬಂದೇನು ಶರಣ । ತವಚರಣ । ವರ್ಣಸುವರ್ಣ ।
ಕಿರಣ ಪರಿಪೂರ್ಣ । ಕೃಷ್ಣಾದ್ವೈಪಾಯನ । ಸ್ಥಾನ ಪುರಾಣ ।
ಕರುಣ ನೀ ಜಾಣ । ಗುಣ ನಿರ್ಗುಣ । ಹಾರತಾವ ಬಾಣ ।
ಗನ್ನ ಗಜವದನ ॥೨॥

ವಿಧಿ ಸ್ತವನ ಮಾಡುತ ಶುದ್ಧ । ಎದ್ದ ತಾ ಬಂದ ।
ಹಿಡದ ನಿಮ್ಮ ಪಾದ । ತತ್‌ಕ್ಷಣದಿಂದ । ನುಡಿಯತಾವ ವೇದ ।

ಚತುರ್ಮುಖದಿಂದ । ಅಂದನಾ ಕಂದ । ನಿಮ್ಮ ಬೋಧದಿಂದ ।
ಮಾಡುತ ಗಾಯನಾ ॥೩॥

ಸರ್ವತ್ರ ಮಾಡತಾರ ಸ್ತೋತ್ರ । ನೇತ್ರ ಪರಿಪಾತ್ರ ।
ಪಿತ್ರ ಗುರುಸ್ತೋತ್ರ । ಚಿತ್ರ ನಿಮ್ಮ ಕ್ಷೇತ್ರ । ರಾತ್ರದಿನ ಮಂತ್ರ ।
ತಂತ್ರ ಶರಶಾಸ್ತ್ರ । ಮಾತ್ರ ಚರಿತ್ರ ।
ಮಿತ್ರ ಇಲಿವಾಹನಾ ॥೪॥

ಬಿಳ್ಳೂರವಾಸ ಬಹುಖಾಸ । ಠಾಸ ವಿಶ್ವಾಸ । ಯಾತ್ರ ಮಾಘಮಾಸ ।
ನಾಥನ ಕಳಸ । ನುಡಿಯತಾವ ತಾಸ । ಸರಸ ನಿವಾಸ ।
ವಾಸ ಸುವಾಸ । ದಾಸ ನಿಮ್ಮ ಕೂಸ । ಪಂಥ ಹರದಾಸ ।
ಹೌಸ ದೃಢ ಮನಸ । ಧ್ಯಾಸ ಅಭ್ಯಾಸ ।
ಗುರುವಿನ ಪುತ್ರ ಅಂದ ವಾಮನ ॥೫॥

**ರಚನೆ :** ವಾಮನ
**ಕೃತಿ :** ಚಾಪ ಹಾಕತೀವಿ ಡಪ್ಪಿನ ಮ್ಯಾಲ

## ಸಂಪುಟ ಸಂಪಾದನೆಯ ಆಕರ ಕೃತಿಗಳು


೧.ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಸಂ : ಕ್ಯಾತನಹಳ್ಳಿ ರಾಮಣ್ಣ
ಪ್ರ : ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೨.ಜೀವನ ಸಂಗೀತ, ಸಂ : ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾ
ಪ್ರ : ಸಮಾಜ ಪುಸ್ತಕಾಲಯ, ಧಾರವಾಡ
೩.ಸರ್ವೋದಯ ಗ್ರಾಮೀಣ ಜನಪದ ಗೀತೆಗಳು : ಹುಲಕುಂದ ಭೀಮಕವಿ
ಪ್ರ : ಕರ್ನಾಟಕ ಸರ್ವೋದಯ ಸಾಹಿತ್ಯ ಮಂದಿರ, ಬೆಂಗಳೂರು.
೪.ಕವಿ ಬಾಳಗೋಪಾಲನ ಲಾವಣಿಗಳು, ಸಂ : ನಿಂಗಣ್ಣ ಸಣ್ಣಕ್ಕಿ
ಪ್ರ : ಸಮಾಜ ಪುಸ್ತಕಾಲಯ ಧಾರವಾಡ
೫.ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ, ಸಂ : ನಿಂಗಣ್ಣ ಸಣ್ಣಕ್ಕಿ
ಪ್ರ : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಜಯೋತ್ಸವ ಸಮಿತಿ, ಬೆಳಗಾವಿ.
೬.ಲಿಂಗರಾಜ ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು, ಸಂ : ಲಕ್ಕ್ ಅ.ಶಿರಹಟ್ಟಿ
ಪ್ರ : ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ
೭.ಚಾಪ ಹಾಕತೀವಿ ಡಪ್ಪಿನ ಮ್ಯಾಲ : ಡಾ.ಸಂಗಮೇಶ ಬಿರಾದಾರ
ಪ್ರ : ಗೆಳೆಯರ ಬಳಗ, ತುಂಗಳ ತಾ. ಜಮಖಂಡಿ
೮.ಜಾನಪದ ಝೇಂಕಾರ, ಸಂ : ಎ.ಜಿ. ನೀಲಗಾರ

ಪ್ರ : ಜಾಗೃತ ಭಾರತ, ಧಾರವಾಡ
೯.ಕ್ರಾಂತಿವೀರ ಬಾಬಾಸಾಹೇಬ ಸಂ : ಎ.ಎಸ್. ಹೂಗಾರ
ಪ್ರ : ಬಾಬಾಸಾಹೇಬ ಗ್ರಂಥ ಪ್ರಕಾಶನ, ನರಗುಂದ
೧೦.ರಾಷ್ಟ್ರ ಗೀತಾವಳಿ : ನಲವಡಿ ಶ್ರೀಕಂಠಶಾಸ್ತ್ರಿ
ಪ್ರ : ಪಿ.ಸಿ. ಶಾಬಾದಿಮಠ ಬುಕ್ ಡಿಪೋ, ಗದಗ
೧೧.ಹೈದ್ರಾಬಾದ್ ರಜಾಕಾರ ಲಾವಣಿ : ನಲವಡಿ ಶ್ರೀಕಂಠಶಾಸ್ತ್ರಿ
ಪ್ರ : ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨.ಧರ್ಮದ್ರೋಹ : ನಲವಡಿ ಶ್ರೀಕಂಠಶಾಸ್ತ್ರಿ
ಪ್ರ : ಪಿ.ಸಿ. ಶಾಬಾದಿಮಠ ಬುಕ್ ಡಿಪೋ, ಗದಗ
೧೩.ಮರಿಕಲ್ಲ ಕವಿಯ ಗೀಗೀ ಪದಗಳು, ಸಂ : ಡಾ. ಬಸವರಾಜ ಮಲಶೆಟ್ಟಿ
ಪ್ರ : ಬಸವೇಶ್ವರ ಪ್ರಕಾಶನ, ತಿಗಡೊಳ್ಳಿ, ಜಿ. ಬೆಳಗಾವಿ
೧೪.ಶರಣ ಸ್ಮೃತಿ, ಸಂ : ಡಾ. ಎಂ.ಎನ್.ವಾಲಿ
ಪ್ರ : ಭುವನೇಶ್ವರಿ ಪ್ರಕಾಶನ, ಬಿಜಾಪುರ
೧೫.ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ : ಡಾ.ಶಿವಾನಂದ ಗುಬ್ಬಣ್ಣವರ
ಪ್ರ : ಅಕ್ಷಯ ಪ್ರಕಾಶನ, ಧಾರವಾಡ
೧೬.ಜಾನಪದ ವ್ಯಾಸಂಗ : ಸೋಮಶೇಖರ ಇಮ್ರಾಪುರ
೧೭.ಜಾನಪದ ಸಾಹಿತ್ಯ ದರ್ಶನ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೮.ಲಾವಣಿ - ಡಾ. ಶ್ರೀರಾಮ ಇಟ್ಟಣ್ಣವರ
೧೯.'ಲಾವಣಿ ಸಾಹಿತ್ಯ' - ಡಾ. ಶ್ರೀಕಂಠ ಕೂಡಿಗೆ.

**ಅ**

ಅಂದಿನ : ಆ ದಿವಸ
ಅಕರಕ : ಅಂತಿಮ
ಅಕರಾತಿ : ಅತ್ಯಾನಂದ
ಅಗಟಿನಿಲ್ಲು : ಆತುಕೊಂಡು ನಿಲ್ಲು
ಅಗ್ಗ : ಕಡಿಮೆ
ಅಡಗಾಸಿ : ಸಿಕ್ಕಿಸಿಕೊಂಡು
ಅಡ್ರಾಸಿ : ಗಡಬಡಿಸಿ
ಅದರ : ತುಟಿ
ಅದ್ದನ : ಒಂದು ಅಳತೆಯ ಮಾಪ
ಅನು : ಯೋಗ್ಯ
ಅಬಟ : ಕೆಟ್ಟ
ಅಬಸುಬ : ಅಪಶಕುನ, ಅಶುಭ
ಅಮಚಿಕೊಳ್ಳು : ಅಪ್ಪಿಕೊಳ್ಳು
ಅಯತಾರ : ಆದಿತ್ಯವಾರ
ಅಕಲ : ಉಪಾಯ, ಬುದ್ಧಿ
ಅಕರತಿ : ಪ್ರೀತಿಯಿಂದ
ಅಕ್ರಾಂತ : ಆಕ್ರಂದನ
ಅಗದಿ : ಬಹಳ
ಅರ್ಜಿ : ವಿನಂತಿ
ಅಡರಾಸಿ : ಆತುರದಿಂದ
ಅಣಿಮೆ : ಸೂಕ್ಷ್ಮತ್ವ
ಅದಾವತಿ : ಹಗೆತನ
ಅನಗಾಲ : ಯಾವಾಗಲೂ
ಅನ್ನೇವು : ಅನ್ಯಾಯ
ಅಬರು : ಮರ್ಯಾದೆ
ಅರ್ಬುದ : ಒಂದು ರೋಗ
ಅಮಲ : ಅಧಿಕಾರ, ದರ್ಪ
ಅರಬಿ : ಬಟ್ಟೆ

ಅರಸುಕಿ : ಅರಸೊತ್ತಿಗೆ

ಅರಾಯುಷ್ಯ : ಅಲ್ಪಾಯುಷಿ

ಅರುವ : ಅರಿವು

ಅಲ್ಲದ್ದು : ಬೇಡವಾದದ್ದು

ಅವಳಿ : ಜೋಡಿ

ಅಷ್ಟೂರ ಮಾತು : ಕರೆಮಾತು

ಅಳಿ : ಒಂದು ಅಳತೆಯ ಮಾಪು

ಅಳಿಗಾಲ : ವಿನಾಶ

ಅಳಿಸ್ಯಾರೋ : ಇಲ್ಲದಂತೆ ಮಾಡಿದರು

**ಆ**

ಆಗಸೂದ : ಆಗುವಂತೆ ಮಾಡು

ಆಯವಾದ : ಅನುಕೂಲವಾದ

ಆರಾಸ : ಆರಾಮ, ವೈಭವ

ಆರ್ಯಾಣ : ಅರಣ್ಯ

ಆಲೋಚ್ನೆ : ಆಲೋಚನೆ

ಆಶಿ : ಆಸೆ

**ಇ**

ಇಂಬಾಗಿ : ಆರಾಮವಾಗಿ, ದೂರದಲ್ಲಿ

ಇಕಾಯಿ : ಸಹಕಾರ ತತ್ವ-ಗ್ರಾಮೋದ್ಯೋಗ

ಇಜಾರದವರ : ಚೊಣ್ಣದವರ

ಇನಾಮು : ಬಹುಮಾನ

ಇರಸೇದವ : ದ್ವೇಷದವ

ಇಸಮಿ : ವ್ಯಕ್ತಿ

ಇಳಿವ್ಯಾರ : ಇಳುಹಿದ್ದಾರೆ

**ಉ**

ಉಪರಾಟಿ : ತಿರುವು, ಮರುವು

ಉಮೇದ್ವಾರ : ಉಲ್ಲಾಸ, ಹುರುಪು

ಉಲವ : ಮಾತಿನ ಧ್ವನಿ

**ಊ**

ಊಟಾಬೈಟ : ಸಾಮು, ಬಸ್ಕಿ

**ಎ**

ಎಣಿ : ಸಮ

ಎತ್ತಾರ : ಹೇಗೇಗೊ

ಎರವು : ಅಗಲಿಕೆ, ದೊರೆ

**ಏ**

ಏಕಂದರ : ಒಂದಾಗಿ

ಏಕ್‌ದಂ : ಒಮ್ಮೆಲೆ

ಏಟು : ಎಷ್ಟು

ಏದಸವರು : ಒದಗಿಸುವವರು

**ಒ**

ಒಟ್ಟಮುಕ್ತಾರ : ಪೂರ್ಣ ಅಧಿಕಾರ

ಒಣಪು : ವಯ್ಯಾರ

ಒತ್ತಿ : ಗಿರವಿ

**ಓ**

ಓದ : ಒಯ್ದಾ

**ಕ**

ಕಂಗಾಲ : ಅನ್ನಾನ್ನಗತಿಕ

ಕಂಚನಾಭ : ವಿಷ್ಣು

ಕಂಚುಕ : ಕುಪ್ಪಸ

ಕುಂಚ : ಗೊಂಚಲು

ಕಟಿಪಿಟಿ : ಪ್ರಯತ್ನ

ಕಂಡಾಪಟ್ಟಿ : ಬಹಳಷ್ಟು

ಕಡಕ್ : ಜೋರು

ಕಡಿ : ಕಡೆಗೆ, ಕೊನೆಯ

ಕಡಿದಾಂಗ : ಕಡಿಯದಂತೆ

ಕಡ್ಡ : ಒಂದು ಜಾತಿಯ ಹುಲ್ಲು

ಕಡ್ನಾ : ಕೈಗಡ

ಕದ್ದಲೆ : ಕಳ್ಳತನದಿಂದ

ಕಣಾಕಟ್ಟು : ವೃತ್ತಾಕಾರದಲ್ಲಿ ಸುತ್ತುವರೆ

ಕುಂತು : ಈಶ್ವರ

ಕಂತ್ಯಾಕ : ಕಂತೆ, ಹಾಳು ಹರಟೆ

ಕರ್ಣಿ : ಲೆಕ್ಕಣಿಕೆ

ಕಪ್ಪಸು : ಜೀರ್ಣಿಸು

ಕಬರ್ದಾರಿ : ಸುದ್ದಿತಪ್ಪಿ

ಕಬುಲ : ಒಪ್ಪಿಗೆ

ಕರ್ಬಲ : ರಣರಂಗ, ಯುದ್ಧಸ್ಥಳ

ಕಮ್ಮ : ಕಡಿಮೆ

ಕರ್ಮ : ಪಾಪ

ಕರವೊಗ : ಕರಕೊಂಡು ಹೋಗ

ಕರೆ : ಸತ್ಯ, ಖರೆ

ಕಲಂ : ಕಾನೂನು

ಕವೆಸುರ : ಕವಿಶೂರ

ಕಸಕ : ಹೊಲಸು, ದೋಷ

ಕಸಗೊಂತ : ಕಸಿದುಕೊಳ್ಳುತ್ತಾ

ಕಸಬಿ : ಸೂಳೆ

ಕಳವ್ಯಾರೊ : ಕಳುಹಿದ್ದಾರೆ

ಕಳಾಲಾ : ಹಸುಗೂಸು

ಕಳಿ : ಆಯಕಟ್ಟು

ಕಾಟ : ಉಪಟಳ

ಕಾಪಿನ : ಸಂರಕ್ಷಣೆಯ

ಕಾಲಮಡಿ : ಮೂತ್ರ ವಿಸರ್ಜನೆ

ಕಾವಾಡಿ : ತಕ್ಕಡಿಯಂತಿರುವ ವಾಹಕ ಸಾಧನ

ಕಾಸ : ಮುದ್ದಾಮು, ಉದ್ದೇಶ ಪೂರ್ವಕ

ಕಾಳಗವಿ : ಕತ್ತಲು ಆವರಿಸು

ಕ್ವಾಟಿ : ಕೋಟೆ

ಕೀಟಕ್ : ಕೀಟಲೆ

ಕೀಲಾ : ರಹಸ್ಯ

ಕುಂಪನಿ : ಕಂಪನಿ

ಕುಡ್ರಿ : ಕೊಡಿರಿ

ಕುಣಸ್ಯಾರ : ಕೂಡ್ರಿಸಿದ್ದಾರೆ

ಕುಣಸಿ : ಕೂಡ್ರಿಸಿ

ಕುತ್ತ : ಆಪತ್ತು

ಕುಬ್ಬಿ : ಭರಪೂರ

ಕುಮಕ : ಗರ್ವ, ಸಹಾಯ

ಕುಲುಪ : ಕೀಲಿ

ಕುಶಿಯಾಲ : ಸಂತೋಷ

ಕುಸಿ : ಸಂತೋಷ

ಕೂದ : ಕೇಡು, ತೊಂದರೆ

ಕೂನ : ಗುರುತು

ಕೂರ್ಮ : ಆಮೆ

ಕೂಳ : ಆಹಾರ

ಕೃಷ್ಣಾಜನ : ಚಿಗರಿ ಚರ್ಮ

ಕೆಟ್ಟಕ್ಯಾರಿ : ಕೆಟ್ಟುಹೋಗಿ

ಕೆನಾಲ್ : ಕಾಲುವೆ

ಕೇಶವ : ಆಕಾಶ

ಕೈದು : ಆಯುಧ

ಕೈಲಾರ : ಬಹಳ ?

ಕೊರಡ : ಪೋಲಿಸರ ಚಾವಟಿ

ಕೊರವಿ : ಶಕುನ ಹೇಳುವವಳು

ಕೋಲಿ : ಕೋಣೆ

ಕೌತುಕ : ಆಶ್ಚರ್ಯ

**ಖ**

ಖಂಗ : ಖಡ್ಗ, ಸೈನಿಕ

ಖಬರ : ಎಚ್ಚರ

ಖಲಿ : ಹೊಲಸು

ಖಾತ್ರಿ : ಸತ್ಯ, ನಿಶ್ಚಿತ

ಖಾಲಿ : ಪೊಳ್ಳು, ಸುಳ್ಳು

ಖ್ಯಾಲ : ಗಮನ

ಖಾವಂದ : ಒಡೆಯ

ಖಿನ್ನ : ನೊಂದುಕೊಂಡ, ಬಳಲಿದ

ಖೂನ : ಗುರುತು, ಪರಿಚಯ

ಖೂಳ : ಮೂರ್ಖ

ಖೋಡಿ : ಕೆಟ್ಟ

**ಗ**

ಗಚ್ಚಿ : ಗಟ್ಟಿ

ಗಜ್ : ಹೊಡೆತ

ಗರ್ಜ : ಅವಶ್ಯಕತೆ

ಗಡದಿಂದ : ಬೇಗನೆ

ಗಣ್ಣ : ಗಣ (ಮರಾಠಿ ಗಣ)

ಗಣಪತಿ ಸ್ತುತಿ

ಗದಗಲಿಸು : ಕೋಲಾಹಲಮಾಡು

ಗದ್ನಿ : ಗುಡುಗು, ಗುಟುರು

ಗಮಜು : ಸೊಕ್ಕು

ಗಲಬಲಾ : ಗದ್ದಲ

ಗವದೀತ : ಕವಿದಿತು

ಗವಿ : ವ್ಯಾಪಿಸು

ಗಳಿಗೆ : ದಾನ್ಯ ಸಂಗ್ರಹದ ಬುಟ್ಟಿ

ಗಾದಿ : ಸಿಂಹಾಸನ

ಗಾಬ : ಗಾಬರಿ

ಗಾಬರಿ : ವಿಸ್ಮಯ

ಗಾಳಿಮಟ್ಟ : ಟೊಳ್ಳು

ಗಾವನ : ಹಳ್ಳಿಯವ

ಗಾಲಮೇಲ : ಉಲ್ಟಾಪಲ್ಟಾ

ಗಿಂಡಿ : ನೀರಿನ ಸಣ್ಣ ತಂಬಿಗೆ

ಗುಂಡಗರಗಿ : ಲಿಂಗದಕಾಯಿ

ಗಿಡಮೂಲಿಕಿ : ಔಷಧ

ಗಿಣ್ಣ : ವನಸ್ಪತಿ ತುಪ್ಪ

ಗುಂಗ : ಭ್ರಮೆ

ಗುದಮರಿಗೆ : ಗುದ್ದಾಡು

ಗುಂಬೆ : ಭ್ರಮರ ನಿನಾದ

ಗುಮ್ಮ : ಆಳ

ಗುರ್ತಾ : ಗುರುತು

ಗುಲಾಮಿ : ಚತುರ

ಗುಲ್ಲಿ : ಸಪ್ಪಳ, ಪೊಳ್ಳು

ಗುಳದಾಳಿ : ಮಂಗಳ ಸೂತ್ರ

ಗೆಣ್ಯಾ : ಗೆಳೆಯ

ಗೋಮ : ಕಲಂಕ

ಗೋರ : ಕಷ್ಟ, ಕಠಿಣ ಪ್ರಯತ್ನ

**ಘ**

ಘನ್ನ : ಗನ್ನ, ಸಖಿ

ಘಡಾಸು : ಸಂಭವಿಸು

ಘಾತ : ಆಪತ್ತು

ಘೋಳಸ್ಯಾಡು : ಹೊಯ್ದಾಡಿಸು, ತೊಂದರೆ ಕೊಡು

**ಚ**

ಚಕ್ಕರಾ : ಚಕ್ರ

ಚಟಕ್ : ಲಟಿಕೆ

ಚಮತ್ : ಅವಸರ

ಚರಿ : ಸಣ್ಣಹಗ್ಗ

ಚಾಕರಿ : ಸೇವೆ

ಚಾಲೂವು : ಆರಂಭ

ಚೆಂತಾಲ : ತಕ್ಕಡಿ

ಚೀಟ : ಪೊಟ್ಟಣ

ಚುಂಗಾಣಿ : ಮೂದಲಿನ

ಚೇಳಿನಾಗ : ಚೇಳಿನೊಳಗೆ

ಚೈನ : ಉಲ್ಲಾಸ

ಚೈನೀ : ವಿಲಾಸ, ದುಂದುವೆಚ್ಚ

ಚೌಕಾಶಿ : ವಿಚಾರಣೆ

ಚೌಕಿ : ಕೂಟ

ಚೌತಾಯಿ : ಕರ, ತೆರಿಗೆ

ಚೌರ್‍ಯಾಅಂಸಿ : ಎಂಬತ್ತನಾಲ್ಕು

**ಛ**

ಛಪ್ಪನ್ನ : ಅಯ್ವತ್ತಾರು

**ಜ**

ಜಕಮ : ಗಾಯ

ಜಂಗ : ಮೊಳಕಾಲು, ತುಕ್ಕು

ಜಗ್ಗಿ : ಸಾಕಷ್ಟು

ಜಟಾಪಟಿ : ಅವಸರ, ಗದ್ದಲ

ಜಡಜಿ : ಜಡ್ಜ್, ನ್ಯಾಯಧೀಶ

ಜಡದು : ಹೊಡೆದು

ಜಡಾ : ಆತಂಕ, ತೊಂದರೆ

ಜಪಟ್ಯಾಗ : ಗದ್ದಲದಾಗ

ಜಬರ : ಚೋರು

ಜರಾ : ಸ್ವಲ್ಪ

ಜಲದಿ : ಬೇಗನೆ

ಜಲ್ಮ : ಜನ್ಮ

ಜಲ್ಲ : ಅಂಜಿಕೆ

ಜವಾ : ಉತ್ತರ

ಜಾತ : ಮೇಲ್ಮಟ್ಟದ, ಉತ್ತಮ

ಜಾಣೋಸಿ : ನಿಶ್ಚಯ ಮಾಡಿಕೊಂಡು

ಜಾಹೀರ : ಪ್ರಚಾರ

ಜಿಂದಗಾಣಿ : ಸಂಪತ್ತು

ಜಿರ್ಕ್ಯೋತ : ಕುಣಿಯುತ್ತ

ಜುಲುಮಿ : ಒತ್ತಾಯ

ಜೇರ : ಜಡ್ಡು, ಸಾಯುವಂತಾಗು

ಜೋರ : ಬಲ

**ಝ**

ಝುರಿ : ಸುಳುವು

ಝೇಂಡಾ : ಧ್ವಜ

**ಟ**

ಟಿಕಾಣಿ : ಸ್ಥಳ

ಟೀಕ : ಒಳ್ಳೆಯದು

ಟೋಳಿ : ಗುಂಪು. ತಂಡ

**ಠ**

ಠರಾವ : ನಿರ್ಣಯ

ಠಳಕ : ಸ್ವಲ್ಪ, ತುಸು

ಠಾವಕಿ : ವಿನಂತಿ

**ಡ**

ಡಂಕ್ : ನಗಾರಿ, ಡೊಳ್ಳು

ಡಾಕ : ಒಂದು ವಿವಿಧ ಪೇಚು

ಡಾಗ : ಕಲೆ

ಡೋಲಿ : ಪಲ್ಲಕ್ಕಿ

ಡೌಲ : ಆಡಂಬರ

**ಢ**

ಢಾಲ : ಗುರಾಣಿ

ಢಿಗಾರಿ : ರಾಶಿ

**ತ**

ತಂಡಿ : ಚಳಿ

ತಗಿಬಿಗಿ : ತಳಮಳ

ತಟ್ಟ : ಬಾರಿಸು

ತಪ್ತ : ಸಿಟ್ಟು

ತರ್ಪ : ಸುತ್ತು

ತಬಕ : ಭಾಗ, ಪಾತ್ರೆ

ತಯ್ಯಾರ : ಸಿದ್ಧ

ತರಬು : ನಿಲ್ಲಿಸು, ತಡೆ

ತರಳ : ಮಗ

ತರಿ : ಕೊಲ್ಲು

ತಲವಾರ : ಖಡ್ಗ

ತವಕ : ಉತ್ಸುಕತೆ, ತೀವ್ರ

ತ್ವರ : ಬೇಗ

ತಾಬಾ : ಆಧೀನ, ಹತ್ತಿರ

ತಾಬಡತೋಬಡ : ಅತ್ಯಂತ ಅವಸರ

ತಾರೀಪ : ವೈಭವ, ಹೊಗಳು

ತ್ಯಾಕ್ಕಿ : ಎರಡು ಕೈಗಳಿಂದ ಅಪ್ಪಿಕೊಳ್ಳು

ತ್ವಾಳಾಗಿ : ತೊಲಗಿ

ತಾಲಿಪಟ್ : ದಪ್ಪರೊಟ್ಟಿ

ತಿಂಬುತಾರ : ತಿನ್ನುತ್ತಾರೆ

ತಿತಿಮತಿ : ಹಬ್ಬಹುಣ್ಣಿವಿ

ತಿಳೀದ : ತಿಳಿಯಲಾರದೆ

ತ್ರಿಷಷ್ಟಿ : ಅರವತ್ತು ಮೂರು

ತುರಂಗ : ಜೈಲು

ತುರುತ : ಬೇಗ, ಅವಸರ

ತೆತ್ತೀಸ : ಮೂವತ್ತು ಮೂರು

ತೊಡಿಗಿ : ತೊಡೆಗೆ

ತೋಡ : ಸಮಾನ

ತೊರುದು : ಬಿಡುವುದು

**ಥ**

ಥೇಟಾಗಿ : ನೇರವಾಗಿ

ಥೇರಿ : ತೆರೆ

**ದ**

ದಂಗವರದ : ಗಾಬರಿಯಾದ

ದಪ್ತರ : ಖಾತೆ, ಪುಸ್ತಕ

ದರ್ಭಿಲೆ : ಹುಲ್ಲಿನಿಂದ

ದರಕಾರ : ಹೆದರಿಕೆ, ಸಂಕೋಚ, ಲಕ್ಷ್ಯ

ದರಬಿಲ್ಲಾ : ಅಂಜಿಕೆಯಿಲ್ಲಾ

ದವಡಸಿ : ಅವಸರಿಸಿ

ದಸಿಯಿಂದ : ದೆಶೆಯಿಂದ

ದಾಡಿ : ತ್ರಾಸು, ತೊಂದರೆ

ದಾರು : ಯಾರು

ದಿಂಗ : ದಿಗ್‌ಭ್ರಮೆ

ದಿಗಡ : ಬೇಗನೆ

ದೀಡನೂರ : ಒಂದುವರೆನೂರ

ದುಂಬಾಲ : ಬೆನ್ನುಬೀಳು

ದುಷ್ಕಾಕಶ : ಬರಗಾಲ

ದೈವಾನ : ಹಣೆಬರಹ

ದ್ರೋಣಾಕಾಂಡಸನ : ದಂಡಕಾರಣ್ಯ ?

ದಡ : ದರ್ಪ

ದರ್ಬಲ : ದರಬಾರು

ದಮ್ಮ : ಧರ್ಮ, ತಾಳ್ಮೆ

ದರಜ : ಹೆದರಿಕೆ

ದರವೊಂದು : ಪ್ರತಿಯೊಂದು

ದರ್ವಾಜ : ಬಾಗಿಲು

ದಾಖಲ : ಮೂಡಿಸು, ಬರೆ

ದಾದ : ಲಕ್ಷಿಸು

ದ್ವಾಪಾರ : ಮೂರನೆ ಯುಗ

ದಿಂಗವರದ : ಭ್ರಷ್ಟನಾಗಿ

ದಿಲಗೀರ : ಉದಾಸೀನ

ದುಂದ : ಭರಾಟೆ, ಅಬ್ಬರ

ದುರದೇಶಾ : ಕೆಟ್ಟಸ್ಥಿತಿ

ದೂತಿ : ಕುಂಟಲಗಿತ್ತಿ

ದೋಮ್ಯಾ : ದೋಮಾರಿ ಸೊಳ್ಳೆ

ದೌಲಕ : ಐಶ್ವರ್ಯ

**ಧ**

ಧರುಪ : ದರ್ಪ

ಧ್ಯಾಸ : ಲಕ್ಷ್ಯ

ಧಾರಣೆ : ಬೆಲೆ

ಧುಸೇನ : ಹಾಹಾಕಾರ

**ನ**

ನಂಜಿನ : ವಿಷ, ದ್ವೇಷದ

ನಕರಿ : ತಾರೀಪ

ನಜರ : ಕಣ್ಣಿಡು

ನಲ್ಲಾಡು : ಪ್ರೀತಿಯಿಂದ ಮಾತನಾಡು

ನಸಲಾ : ಕುಂಕುಮ

ನಾಕ : ಸ್ವರ್ಗ

ನ್ಯಾಳ್ಳ : ನರಳು, ಬಡಬಡಿಸು

ನಿಕಾಲ್ : ಖಾಲಿ

ನಿಷ್ಪತಗಿ : ದಿಕ್ಕಿಲ್ಲದೆ

ನಿವಳ : ಚೆನ್ನಾಗಿ

ನಂಬೂಗಿ : ವಿಶ್ವಾಸ

ನಗ್ಗೇಡ : ನಗೆಗೇಡು, ಅಪಹಾಸ್ಯ

ನಡೀನ : ಟೊಂಕದ

ನವಲಗ್ಯಾಂವಿ : ನಸುಕಾವಿ ಬಣ್ಣದ

ನಸೀಬ : ದೈವ

ನಾಸ : ನಾಶ

ನಿಕರ : ನಿಗದಿ, ಗಟ್ಟಿ

ನಿಗರಿ : ನಿಮಿರಿ, ಸೆಟೆದು

ನಿರತ : ನೇರ, ಗುರಿಯೊಡಿ

ನಿರ್ವಯಿಲ್ಲಾ : ಅನಿವಾರ್ಯ

ನಿಷಾದ : ಬೇಡ

ನೆಗವಿ : ಎತ್ತಿ

ನೊರಲಿ : ಬುರಂಗು

ನುಗ್ಗಮಾಡು : ಹಾಳುಮಾಡು

ನೇಟಾ : ನೆಟ್ಟಗೆ

**ಪ**

ಪಂಟ : ಮೋಸ, ಹರಟೆ

ಪಂಜಿ : ದೋತರ

ಪಡಪೋಟ : ತೊಂದರೆ

ಪಡಿ : ಒಂದು ಅಳತೆ, ರತ್ನದ ಒಂದು ತೂಕ

ಪರ್ಣಶಾಲೆ : ಗುಡಿಸಲು, ಎಲೆವನ

ಪಣತೊಡು : ಪ್ರತಿಜ್ಞೆ ಮಾಡು

ಪಣಾ : ಪಂಥ, ಪ್ರತಿಜ್ಞೆ

ಪತಿಹತಿಯಾರ : ಗಂಡನ ಖಡ್ಗ

ಪರಂಗೇರ : ಬ್ರಿಟಿಷರು

ಪದರ : ಪರದೆ

ಪರಾರಿ : ತಲೆಮರಿಸಿಕೊಳ್ಳು

ಪರ್ಯಾಣ : ಅಗಲವಾದ ತಟ್ಟೆ

ಪಸಂದ : ಹಿಡಿಸು

ಪಹಿಲೆ : ಮೊದಲಿಗೆ

ಪಳಂಕಾರ : ನಿಂದಾತ್ಮಕ ವ್ಯಕ್ತಿ

ಪಾಟ್ಲೋಣ : ಚಣ್ಣ, ನಿಕ್ಕರ್

ಪಾಡ : ಗತಿ, ಒಳ್ಳೆಯದು

ಪಾಣೇಕ : ನೇಣ

ಪಾರಾ : ಪಹರೆ, ಕಾವಲು

ಪಾರೆ : ಕಾವಲು

ಪ್ಯಾಟಿ : ಪೇಟೆ

ಪಾಳೇ : ಕಂದಾಯ, ಭೂತೆರಿಗೆ

ಪಿಂಜರದಾಗ : ಪಂಜರದಲ್ಲಿ

ಪೀಕ : ಬೆಳೆ

ಪುಂಡ : ವೀರಾಗ್ರಣಿ

ಪುಕಾರು : ಸುದ್ದಿ

ಪುಕ್ಕರು : ಅಂಜುಬುರುಕರು

ಪುತ್ರವಗೆ : ಪುತ್ರನಿಗೆ, ಮಗನಿಗೆ

ಪುರೋಸಂ : ಸಾಕಾಗುವುದು

ಪೇನಸೇನ : ಪಿಂಚಣಿ

ಪ್ರೇತ : ಹೆಣ, ಶವ

ಪೋರ : ಹುಡುಗ

ಪೋರಿ : ಹುಡುಗಿ

ಪೋಲಿಮಿ : ಒಳ್ಳೆಯದು

ಪ್ರಬಲ್ಲ : ಪ್ರಖ್ಯಾತ

**ಫ**

ಫಣಿ : ಶಿವ

ಫರ್ಮಾನ : ಆಜ್ಞೆ

ಫರಕ : ಅಂತರ

ಫರಾಳ : ತಿಂಡಿ

ಫಸಾಸಿ : ತಪ್ಪಿಸಿಕೊಂಡು

ಫಳಿಗಟ್ಟಿ : ಸಾಲುಗಟ್ಟಿ

ಫಾಯ್ದೆ : ಲಾಭ

ಫಾಸಿ : ಗಲ್ಲು

ಫಿರ್ಯಾದೆ : ದೂರು

ಫೇರಾ : ಸುಳ್ಳು

**ಬ**

ಬಂದಿನ್ಯಾಗ : ಬಂಧನದಲ್ಲಿ

ಬಗಟಿ : ಕೆದರಿ

ಬಗಳಿ : ತೊಂದರೆ

ಬಗಿ : ರೀತಿ, ಉಪಾಯ

ಬಗಿಹರಿ : ತೀರ್ಮಾನಗೊಳ್ಳು

ಬಡಿವಾರ : ಜಂಬ

ಬಡೇಜನ : ದೊಡ್ಡಸ್ತಿಕೆ

ಬತಗೆಡು : ಭ್ರಷ್ಟನಾಗು

ಬದಿಲೆ : ಹತ್ತಿರ

ಬರಿಷ್ಟ : ಅಲರ್ಜಿ ಪದಾರ್ಥಗಳು

ಬಲಿಮಿ : ಜೋರು

ಬವರ : ಯುದ್ಧ

ಬಸವಂತಿ : ಗರ್ಭಿಣಿ

ಬಳಿಗಿ : ಬಲಿರಾಜನ ಬಳಿ

ಬಾಗಿಣ : ಬಾಗಿನ, ಆಮಂತ್ರಣ
ಬಾಜಿ : ಪಲ್ಲೆ
ಬಾಜೂಟಾಂಗ : ಕುಸ್ತಿಯ ಒಂದು ಪೇಚು
ಬಾಡಿಕ್ಯಾರಿ : ಬಾಡಿಹೋಗು
ಬಾಡುಗಳ್ಳರು : ಅನೀತಿವಂತರು
ಬಾದ : ನಿರುಪಯುಕ್ತ
ಬಾತಮಿ : ಸುದ್ದಿ
ಬಾಯಿಬಡಿ : ಅಳು, ಬಯ್ಯು
ಬಾರಿಗಿ : ಕಸಪೊರಕೆ
ಬಾರಾ : ಹನ್ನೆರಡು
ಬಾಹು : ಭುಜ
ಬಾಳ : ಕೂಸು, ಕಂದ
ಬಾಳಾ : ಬಹಳ
ಬ್ಯಾಸರಕಿ : ಬೇಸರ
ಬಿಡುದು : ಬಿಡುವುದು
ಬಿರಾಡ : ಹಪ್ತೆ, ಕಂದಾಯ
ಬಿಸಾಟ : ತುಚ್ಛ
ಬಿಲ್ವರ : ಬಿಲವಾರ ಬಳಿ
ಬೀರದ : ಬಿರುದು, ಪರಿಚಯ
ಬುರುಜು : ಕೋಟೆಯ ಕೊತ್ತಳ
ಬೆಂಕಿಕಾರಿ : ಸಿಟ್ಟಿಗೇರಿ
ಬೆಂಡಲ : ಬೆರಕಿ, ಜಾಣ
ಬೆಂಡ್ಲ : ಹಾದರಗಿತ್ತಿ
ಬೆರತಾಳು : ಕೂಡಿಕೊಂಡಿಹಳು
ಬೇಗು : ಸಾಯಂಕಾಲ
ಬೇಚ್ಯಾಳಿಸ : ನಲವತ್ತೆರಡು
ಬೇಟಾ : ಉಪಾಯ
ಬೇತ : ಭೂತ, ಪಿಶಾಚಿ
ಬೇತು : ವಿಚಾರ
ಬೇನಿ : ರೋಗ
ಬೇಬಾಣ : ದಿಕ್ಕು ತೋಚದಂತಾಗು
ಬೇಶಕ್ಕ : ತಕರಾರವಿಲ್ಲದೆ, ಸ್ಪಷ್ಟ
ಬೋಧ : ಶಾಸ್ತ್ರ, ಶಕುನ, ಭವಿಷ್ಯ

**ಭ**

ಭಂಡಿಸು : ಮೋಸಗೊಳಿಸು
ಭರತಿ : ಭರ್ತಿ
ಭಾಲೆ : ಭರ್ಚಿ, ಈಟಿ
ಭಾಳ : ಬಹಳ
ಭ್ರಾಂತಿ : ಮೋಹ
ಭುಲಾಸಿ : ಕೈವಶ

**ಮ**

ಮಂಜಾನ : ಪೊದೆ
ಮಜಕೂರ : ಸುದ್ದಿ, ವಿಷಯ, ವಿವರ
ಮಡಾ : ಸಣ್ಣಕೊಳ
ಮದತ್ತ : ಸಹಾಯ
ಮದ್ದ : ಔಷಧ
ಮದಿ : ಒಂದು ಜಾತಿಯ ಹುಲ್ಲು
ಮರ್ದುಮುಕಿ : ಗಂಡಸುತನ, ಶೂರತನ
ಮನಗಂಡ : ಬಹಳಷ್ಟು
ಮಫಲಾರ : ತಲೆಗೆ ಸುತ್ತುವ ವಸ್ತ್ರ
ಮರಿ : ಮರೆ
ಮರಿಗೆ : ಮರೆಯಲ್ಲಿ
ಮಲು : ಕತ್ತರಿ, ತಿರುವು
ಮಸ್ತ : ಚೆನ್ನಾಗಿ
ಮಳಲು : ದುಃಖಿಸು
ಮಾಸದಂಗ : ಅಳಿಸಿ ಹೋಗದಂತೆ
ಮಾಪ : ಕ್ಷಮಾ
ಮಾರ್ಬೋಲಾ : ಮಾರ್ಬಲ, ಎದುರಿಸುವ ಸೈನ್ಯ
ಮಾರಿ : ಮುಖ
ಮಾಲ : ಅರಮನೆ
ಮ್ಯಾಲಿನ : ಮೇಲಿನ
ಮುಚ್ಚೆ : ಮೂರ್ಛೆ
ಮುಜರಿ : ನಮಸ್ಕಾರ
ಮುರಕ : ಬಡಿವಾರ
ಮುಸಲ : ಮುಸ್ಲಿಂ
ಮೂಲ : ವಿಘ್ನ, ಕಂಟಕ
ಮೆಚ್ಚಮದ್ದ : ವಶೀಕರಣ ಔಷಧ
ಮೆಯ್ಯು : ತಿನ್ನು
ಮೈಮೆಯ : ಮಹಿಮೆ

ಮೊಟ್ವ : ಗರಿ

**ಯ**

ಯಾಹೊತ್ತ : ಯಾವಾಗಲೂ

**ರ**

ರಂಡಿ : ಗಂಡ ಸತ್ತ ಹೆಂಗಸು

ರಂಮೋಶಿ : ರಮಿಸು

ರಣ : ಯುದ್ಧ

ರವಾನಿ : ಕಳಿಸು, ತೀವ್ರ

ರಾಕ್ಷಿ : ರಾಕ್ಷಸ

ರಿಕ್ಕ : ಬಿಗು

ರಿಕ್ಕಮುಕ್ಕ : ಭದ್ರವಾಗಿ

ರಿಪು : ವೈರಿ

ರೂಕಾ : ರೂಪ

ರೊಳ್ಳಿಗಂವಿ : ನಿಶ್ಯಕ್ತನಾಗು

**ಲ**

ಲಂಪಟ : ಕಿಡಗೇಡಿ

ಲಕ್ಕಾಟಿ : ಒಮ್ಮೆಲೆ

ಲಗುಮಾಡಿ : ಅವಸರ ಮಾಡಿ

ಲಗ್ಗ : ಬೇಗನೆ

ಲಢಾಯಿ : ಯುದ್ಧ

ಲಯ : ನಾಶ

ಲಾತ್ತಿ : ಹೊಡೆದ

ಲಾಲಸಬೇಕ : ಆಲಿಸಬೇಕು, ಕೇಳಬೇಕು

**ವ**

ವಗತನ : ದಾಂಪತ್ಯದ ಸಂಬಂಧ

ವಟ್ಟ : ಪರಟ, ಕಠಿಣ

ವಡವಲಿಕೆ : ಸೌದೆ, ಕಟ್ಟಿಗೆ ತುಂಡು

ವಡ್ಯಾಣ : ನಡಪಟ್ಟಿ

ವದಹರವವರು : ಒದಗಿಸುವವರು

ವನದೇಶ : ವನವಾಸ, ತೊಂದರೆ

ವರ್ಮ : ವೈರತ್ವ, ಪ್ರಸಿದ್ಧಿ

ವಾರ್ತಿ : ವಾರ್ತೆ

ವಾರಣ : ಆನೆ

ವಾಯಿ : ಬಾವಿ

ವ್ಯಾಧ : ಬೇಡ

ವ್ಯಾಪ : ನಕಾಶ, Pಟಚಿಟಿ

ವ್ಯಾಳೆದಾಗ : ವೇಳೆಯಲ್ಲಿ

ವಿಚಿಯಾರ : ಆಲೋಚನೆ

**ಶ**

ಶಮನಾ : ಚುಂಗು

ಶಮರಂತ : ಸಮರ್ಥ

ಶರ : ಬಾಣ

ಶರತ : ಪ್ರತಿಜ್ಞೆ, ಜಿದ್ದು

ಶರ್‌ಸುರಿ : ಪೂರ್ಣಲೂಟಿ

ಶಾರ : ನಗರ, ಪಟ್ಟಣ

ಶಾಲಿ : ಭತ್ತ, ನೆಲ್ಲು

ಶೇತ್ಕಿ : ರೈತಾಪಿ

**ಸ**

ಸಂದು : ದಂಡು

ಸಕಲಿ : ಜೀಪದ

ಸಗತಿ : ಶಕ್ತಿ

ಸಜ : ಸಹಜ

ಸದರು : ಓಲಗ, ಸಭೆ

ಸತ್ತರ : ತೀರಿದರೆ

ಸನ್ಮಂತ : ಸಮಾಧಾನ

ಸನೀಕ : ಸಮೀಪ

ಸನೆ : ಸಮೀಪ

ಸಪನಿದ್ದೆ : ಸ್ವಪ್ನ ನಿದ್ದೆ, ಕನಸಿನ ನಿದ್ದೆ

ಸಮರ : ಯುದ್ಧ

ಸರಳಾ : ಬಾಣ

ಸರಾಪ : ಶಾಪ

ಸಲವಕ್ಕಿ : ಸಲಹುವವಳು

ಸಲ್ಲ : ಸದ್ದ, ಧ್ವನಿ

ಸಲ್ಲಾ : ಸಲಹೆ

ಸವಜಗಳ : ಸಮ ಯುದ್ಧ

ಸವನಾ : ಸಮನಾಗಿ

ಸವಾರಿ : ಕುಸ್ತಿಯ ಒಂದು ಪೇಚು

ಸವ್ವಾಯಿ : ಒಂದೂಕಾಲು ?

ಸವಿಕಂಡ : ಅನುಭವ ಪಡೆದ

ಸ್ವನ : ಧ್ವನಿ

ಸ್ಥಬ್ದಾಗಿ : ಶಾಂತರಾಗಿ

ಸಾಗು : ಪೂರೈಸು, ನಡೆ

ಸಾಪ : ಸಪಾಟು, ಶಾಪ, ನಿಶ್ಚಯ

ಸಾಬ : ಸಾಹೇಬ, ಅಧಿಕಾರಿ

ಸಾರು : ಹೇಳು

ಸಾಮಿ : ಯೋಗ್ಯತೆ, ಅನುಕೂಲ

ಸಾಸ : ಸಾಹಸ, ಯೋಚನೆ

ಸಾಕ್ಷಾಂತ : ಸಾಕ್ಷಾತ್

ಸ್ವಾರನಾಗಿ : ಸವಾರನಾಗಿ ಕುದುರೆಯನ್ನು ಹತ್ತಿ

ಸ್ವಾರಿ : ದೊಡ್ಡ ಗಡಗಿ

ಸ್ಯಾರಿಮುಕ್ಕ : ಅರ್ಧಬೊಗಸೆ

ಸಿಲ್ಕು : ಉಳಿದದ್ದು

ಸೀಟು : ಹೀರು, ಹಿಂಡು

ಸೀಮ್ಯಾಗ : ಸೀಮೆಯಲ್ಲಿ

ಸುದ್ಧ : ಸಹಿತ

ಸುರವ : ಆರಂಭ

ಸುರವ್ವೆ : ಸರಾಯಿ

ಸುಸುರು : ಸಾಧನ

ಸುಳ್ಳುಬುರುಕಿ : ಸುಳ್ಳುಹೇಳುವವಳು

ಸೂರೆಮಾಡ್ಯಿರೊ : ಲೂಟಿ ಮಾಡಿದರು,
ಹಾಳು ಮಾಡಿದರು

ಸೇಟವಿ : ವಿಧಿ

ಸೆಣಸಾಟ : ಹೋರಾಟ

ಸೆರಿ : ಬೇಡಿ, ಜೇಲು

ಸೆಳಿಮಂಟ : ತೂಗುವ ಮಂಚ

ಸೇವಚೇದ : ಕೊನೆಯ

ಸೈಲು : ಸಡಿಲು

ಸೊನ್ನಿಲೆ : ಸನ್ನೆಮಾಡಿ

ಸೊಲ್ಲು : ಮಾತು

ಸೋಕ : ವಿಚಾರ

ಸೋಳಾ : ಹದಿನಾರು

**ಹ**

ಹಂಕಾರ : ಅಹಂಕಾರ

ಹಂಗ : ಉಪಕಾರ

ಹಂತೇಕ : ಹತ್ತಿರ

ಹಂಬಲ : ಆಸೆ

ಹಂತೇಲಿ : ಹತ್ತಿರ

ಹಕನಕ : ಸುಮ್ಮಸುಮ್ಮನೆ

ಹಕ್ಕೀಕಾಲಾಗ : ಹಕ್ಕಿಯ ಸಲುವಾಗಿ

ಹಚಿಗುಡು : ಕಳುಹಿಸು

ಹಟಕ್ : ಹಟಕ್ಕೆ

ಹದ್ದ : ಮೇರೆ, ಗಡಿ

ಹತಾರ : ಶಸ್ತ್ರ, ಆಯುಧ

ಹತ್ತಂಗಡಿ : ಅಂಟಿಕೊಳ್ಳುವುದು

ಹತ್ರ : ಹತ್ತಿರ

ಹತಿಯಾರ : ಖಡ್ಗ

ಹರಿ : ಪ್ರಾಯ

ಹರಿದ್ಯಾರವರ : ಮುತ್ತೈದೆಯರ

ಹಬಶರ್ನಾ : ಕಪ್ಪುಜನರು

ಹಮ್ಮುಚಾರ : ಚೌರಸ

ಹಲಬು : ಚಿಂತಿಸು, ದುಃಖಿಸು

ಹಲಾಕು : ಕಾಟ, ತೊಂದರೆ

ಹಲ್ಲಣ : ಪ್ರಾಯ

ಹಲ್ಲಾ : ಮುತ್ತಿಗೆ, ಲಗ್ಗೆ, ದಾಳಿಮಾಡು

ಹವಣಿಸು : ಆಸೆಪಡು

ಹಸಗೇಡಿ : ಅನೀತಿವಂತ

ಹಕ್ಯಾಡಿಕೊಂಡು : ಜಗಳಾಡುತ್ತಾ

ಹಾತವರದ : ತಡಮಾಡದೆ

ಹಾತೋರಿ : ಅಪೇಕ್ಷಿಸು

ಹಾತ್ವಾರಿ : ಹೌಹಾರಿ

ಹಾಲ್ವಾಕ : ಹಾಲು ಹಾಕುವ

ಹ್ವಾಂಡ : ಒರಟು

ಹ್ವಾರೆ : ಉದ್ಯೋಗ

ಹಿಂದಿಗಡೆ : ಹಿಂದಿನಿಂದ

ಹಿಂಬಾಲ : ಜೊತೆಯಲ್ಲಿ

ಹುಂಡೆ : ಭಾರೀ ಸಂಪತ್ತು

ಹುರಿ : ಹಗ್ಗದ ಒಂದು ಎಳೆ

ಹೇಮ : ಚಿನ್ನ

ಹೈರಾಣ : ಬಳಲು

ಹೊಂಡಿಸು : ಹೊರಡಿಸು

ಹೋತ್ರಿ : ಪಂಚಾಂಗ

ಹೊರಕಡಿಗಿ : ಬಯಲು ಕಡೆಗೆ

ಹೌನ : ಹಂಬಲ

ಹಿರಸ : ಬಿರಸು

ಹುಕುಮು : ಪರವಾನಿಗೆ

ಹೆಣೋಲ : ಹೆಳಲು

ಹೇವ : ಲಜ್ಜೆ

ಹೊಂಕಳ : ಹೊಕ್ಕಳ

ಹೊಕ್ಕ : ನುಸುಳಿದ

ಹೊಯ್ಕ : ತಂತ್ರ, ಮುರುಕ

ಹೊಳವ : ಹೊರಪು, ಮಳೆಗಾಲದ ಬಿಸಿಲು